ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು

(ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ನೀಲಮ್ಮ ಕೆ.

ಮಾರ್ಗದರ್ಶಕರು
ಡಾ.ಬಿ.ಆರ್.ಮಂಜುನಾಥ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ವಿಭಾಗ
ವೀರಶೈವ ಮಹಾವಿದ್ಯಾಲಯ, ಬಳ್ಳಾರಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ವೀರಶೈವ ಮಹಾವಿದ್ಯಾಲಯ ಮಾನ್ಯತಾ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬಳ್ಳಾರಿ ೫೮೩ ೧೦೧
೨೦೧೯

ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು

(ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ನೀಲಮ್ಮ ಕೆ.

ಮಾರ್ಗದರ್ಶಕರು

ಡಾ.ಬಿ.ಆರ್.ಮಂಜುನಾಥ

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಕನ್ನಡ ವಿಭಾಗ

ವೀರಶೈವ ಮಹಾವಿದ್ಯಾಲಯ, ಬಳ್ಳಾರಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ವೀರಶೈವ ಮಹಾವಿದ್ಯಾಲಯ ಮಾನ್ಯತಾ ಕೇಂದ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬಳ್ಳಾರಿ ೫೮೩ ೧೦೧

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು ಎಂಬ ಈ ಶೀರ್ಷಿಕೆಯ ಮಹಾಪ್ರಬಂಧವನ್ನು ನೀಲಮ್ಮ ಕೆ. ಅವರು ನನ್ನ ಮಾರ್ಗದರ್ಶನ ದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಾದರಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ.ಬಿ.ಆರ್.ಮಂಜುನಾಥ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ವಿಭಾಗ
ವೀರಶೈವ ಮಹಾವಿದ್ಯಾಲಯ
ಬಳ್ಳಾರಿ

ಸ್ಥಳ: ಬಳ್ಳಾರಿ
ದಿನಾಂಕ:

ಸಂಶೋಧಕರ ಪ್ರಮಾಣ ಪತ್ರ

ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ** ಪ್ರಾಧ್ಯಾಪಕರಾದ **ಡಾ.ಬಿ.ಆರ್.ಮಂಜುನಾಥ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

K. Neelamma

ನೀಲಮ್ಮ ಕೆ.

ಸಂಶೋಧನ ವಿದ್ಯಾರ್ಥಿನಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ:

ದಿನಾಂಕ:

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯದ ಸ್ವರೂಪ

ಅಧ್ಯಾಯ: ಒಂದು

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಕಳೆದ ಶತಮಾನ ಅಂದರೆ ೨೦ನೇ ಶತಮಾನ ಕನ್ನಡ ಸಾಹಿತ್ಯ ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಪ್ರಮುಖವಾದುದು. ಸಾಹಿತ್ಯದಲ್ಲಿ ಹಲವಾರು ರೂಪಗಳು ಮತ್ತು ಪ್ರಕಾರಗಳು ಕಾಣಿಸಿಕೊಂಡಿದ್ದಲ್ಲದೆ ಕನ್ನಡ ಸಂಸ್ಕೃತಿಯಲ್ಲಿಯೂ ಅನೇಕ ಹೊಸ ಬಗೆಯ ಅಧ್ಯಯನಗಳು ಮತ್ತು ಚರ್ಚೆಗಳು ಆರಂಭವಾದವು. ಕರ್ನಾಟಕ ಮತ್ತು ಕನ್ನಡತನದ ಅಸ್ಮಿತೆಯ ಪ್ರಶ್ನೆಗಳು ಮುನ್ನೆಲೆಗೆ ಬಂದವು. ಶಿಷ್ಟ ಸಾಹಿತ್ಯದ ಪ್ರಕಟಣೆ ಮತ್ತು ಪ್ರಸಾರಗಳ ಜೊತೆ ಜೊತೆಗೆ ಅದಕ್ಕೆ ಪರ್ಯಾಯವಾಗಿ ಜಾನಪದ ಮತ್ತು ಮೌಖಿಕ ಸಾಹಿತ್ಯಕ್ಕೂ ವಿಶೇಷ ಮಹತ್ವವನ್ನು ನೀಡಬೇಕಾದ ಅಗತ್ಯವನ್ನು ಅಂದಿನ ವಿದ್ವಾಂಸರು ಮನಗಂಡಿದ್ದರು. ಅನೇಕ ಸಂಶೋಧಕರು ಹಾಗೂ ಅಧ್ಯಯನಕಾರರು ಈ ಕ್ಷೇತ್ರದಲ್ಲಿ ಅಪಾರವಾದ ಕೆಲಸಗಳನ್ನು ಮಾಡಿದ್ದಾರೆ. ಡಾ.ಜೀ.ಶಂ. ಪರಮಶಿವಯ್ಯ, ಡಾ.ಎಲ್.ಆರ್.ಹೆಗಡೆ, ಸಿಂಪಿ ಲಿಂಗಣ್ಣ ಮೊದಲಾದ ಹಲವು ಜಾನಪದ ವಿದ್ವಾಂಸರ ಕೊಡುಗೆಯನ್ನು ಗಮನಿಸಬಹುದು.

ಜಾನಪದ ಅಧ್ಯಯನ ಹಾಗೂ ಬುಡಕಟ್ಟು ಅಧ್ಯಯನಗಳು ನಮ್ಮ ವಿವಿಧ ಸಂಸ್ಕೃತಿಗಳ ಒಳ ಚಲನೆಯನ್ನು ಅರಿಯಲು ಸಹಾಯಕವಾಗುತ್ತದೆ. ಸಮಾಜದ ಸ್ಥಾನ ಹಾಗೂ ವಿನ್ಯಾಸದ ನೆಲೆಗಳನ್ನು ತಿಳಿಯಲು ನೆರವಾಗುತ್ತದೆ. ವಿವಿಧ ಹಿನ್ನೆಲೆಯ ಬಹುಜನ ಸಮುದಾಯಗಳ ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಅರಿಯಲು ಅವರನ್ನು ಸಾಧ್ಯವಾದಷ್ಟು ಸುಧಾರಿಸಲು ಸಾಧ್ಯವಾಗುತ್ತದೆ. ಗ್ರಾಮೀಣರು ತಳಸಮುದಾಯಗಳ ಜನರು, ಶೋಷಿತರು ಹಾಗೂ ಬುಡಕಟ್ಟುಗಳ ಜೀವನ ವಿಧಾನ, ಧರ್ಮ ರೀತಿ ರಿವಾಜುಗಳು, ಕಲೆ, ಮೂಲಪ್ರಜ್ಞೆ ಇವೆಲ್ಲವೂ ಹೊರಜಗತ್ತಿಗೆ ತಿಳಿಯಲು ಸಾಧ್ಯವಾಗುತ್ತದೆ. ಇವುಗಳೆಲ್ಲವೂ ಇನ್ನೂ ಹಿಂದುಳಿದಿರುವುದರಿಂದ ಇಂತಹ

ಬುಡಕಟ್ಟು ಸಮುದಾಯಗಳ ಜನರನ್ನು ಅಂಚಿನ ಸಮುದಾಯ(Sabalturn Soceity) ಎಂದು ಇವರನ್ನು ಕುರಿತ ಅಧ್ಯಯನಗಳನ್ನು ಅಂಚಿನ ಸಮುದಾಯಗಳ ಅಧ್ಯಯನ ಎಂದು ಕರೆಯಲಾಗುತ್ತದೆ.

ವಿಶ್ವದ ಹಲವಾರು ದೇಶಗಳಲ್ಲಿ ಮತ್ತು ಭಾರತದಲ್ಲಿ ಅನೇಕ ಬುಡಕಟ್ಟುಗಳು ಹಾಗೂ ತಳಸಮುದಾಯಗಳು ಇನ್ನೂ ಜೀವಂತವಾಗಿವೆ. ಇವು ಅಪಾರವಾದ ಪೌರಾಣಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಮಹತ್ವವನ್ನು ಹೊಂದಿವೆ. ಇವುಗಳಲ್ಲಿ ಕಂಡುಬರುವ ಸಾಂಸ್ಕೃತಿಕ ವಿವರಗಳು ಬಹುತೇಕವಾಗಿ ಇನ್ನೂ ದಾಖಲಾಗದೆ ಉಳಿದಿವೆ. ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ಸೋಲಿಗರು, ಕಾಡುಗೊಲ್ಲರು, ಪಿಂಜಾರರು, ದೊಂಬರು, ದುರಗ–ಮುರುಗಿಯರು, ಲಂಬಾಣಿಗಳು, ಹಕ್ಕಿಪಿಕ್ಕಿಗಳು, ಮಾಷ್ಮಿಕರು, ಯರವರು, ಹಾಲಕ್ಕಿ ಒಕ್ಕಲಿಗರು, ಸಿಂಧಮಾದಿಗರು ಹೀಗೆ ಅನೇಕ ಬುಡಕಟ್ಟು ಸಮುದಾಯಗಳು ನೆಲೆಸಿವೆ. ಇವುಗಳೊಂದಿಗೆ ಹಾಲುಮತ ಸಂಸ್ಕೃತಿಯೂ ಒಂದು. ಇತ್ತೀಚೆಗೆ ಇಂತಹ ಹಲವಾರು ಸಂಸ್ಕೃತಿ ಜನಾಂಗದ ಸಮುದಾಯಗಳ ಬಗೆಗೆ ಒಂದು ಸಂಸ್ಕೃತಿ ಅಥವಾ ಸಮುದಾಯವು ತನ್ನ ಮೂಲದ ಬಗೆಗೆ ಹಲವಾರು ಪುರಾಣಗಳನ್ನು, ಪುಣ್ಯ ಕಥೆಗಳನ್ನು ಹೊಂದಿರುತ್ತವೆ. ಇವು ಆಯಾ ಬುಡಕಟ್ಟಿನ ಧರ್ಮ ಮತ್ತು ನಂಬಿಕೆಗಳ ಆಧಾರದ ಮೇಲೆ ರೂಪಿತವಾಗಿರುತ್ತವೆ. ಹಾಗೆ ನೋಡಿದರೆ ಪುರಾಣಗಳ ಹಿನ್ನೆಲೆಯನ್ನು ಹೊಂದಿಲ್ಲದ ಯಾವುದೇ ಧರ್ಮವನ್ನಾಗಲಿ, ಜಾತಿ ಮತಗಳನ್ನಾಗಲಿ ಕಾಣಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಇವು ವ್ಯಾಪಕವಾಗಿವೆ. ಬೌದ್ಧಧರ್ಮವನ್ನು ಈ ಹೇಳಿಕೆಯಿಂದ ಹೊರಗಿಡ ಬಹುದಾಗಿದೆ. ಏಕೆಂದರೆ ಬೌದ್ಧಧರ್ಮವು ಮಾತ್ರ ಏಕವ್ಯಕ್ತಿಯ ಮತ್ತು ಅನುಭವ ಪ್ರಮಾಣದ ಧರ್ಮವಾಗಿದೆ.

ಕರ್ನಾಟಕದ ಒಂದು ಪ್ರಮುಖ ಬುಡಕಟ್ಟು ಸಮಾಜವಾದ ಹಾಲುಮತ ಸಂಸ್ಕೃತಿಯ ಪುರಾಣಗಳಲ್ಲಿ ಬರುವ ಪವಾಡಗಳ ಕಥೆಯನ್ನು ಪ್ರಸ್ತುತ ಸಂಶೋಧನೆಗಾಗಿ ಆಯ್ಕೆ ಮಾಡಿ ಕೊಳ್ಳಲಾಗಿದೆ. ಪವಾಡ ಕಥೆಗಳ ರಚನೆಯ ಉದ್ದೇಶ, ಹಿನ್ನೆಲೆ ಅವುಗಳ ವಿನ್ಯಾಸ ಮತ್ತು ಸ್ವರೂಪ ಆಧುನಿಕ ಕಾಲಘಟ್ಟದಲ್ಲಿ ಇವುಗಳ ಮಹತ್ವ ಮೊದಲಾದ ವಿಚಾರಗಳನ್ನು ಇಟ್ಟುಕೊಂಡು ಹಾಲುಮತ ಪುರಾಣಗಳನ್ನು ಅಲ್ಲಿನ ಪವಾಡ ಕಥೆಗಳನ್ನು ಅಧ್ಯಯನ ಮಾಡುವ ಉದ್ದೇಶವಿದೆ.

ಪವಾಡ ಕಥೆಗಳಲ್ಲಿ ಬರುವ ಬುಡಕಟ್ಟಿನ ವಿವಿಧ ನಾಯಕರ ಕುರಿತಂತೆ ವಿವರಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಲಾಗುತ್ತದೆ. ಇಂತಹ ಕಥೆಗಳಲ್ಲಿ ಕಂಡುಬರುವ ಸಮುದಾಯಗಳ ಜನರ ನಂಬಿಕೆಗಳು ಅವರ ಧರ್ಮಶ್ರದ್ಧೆ, ಜಾತಿಪ್ರಜ್ಞೆ, ಆಚರಣೆ, ಆಚಾರ–ವಿಚಾರಗಳು, ಕುಟುಂಬ ಕಲ್ಪನೆ, ಮೂಲ ಪ್ರಜ್ಞೆ, ಸ್ತ್ರೀಪರವಾದ ನಿಲುವು ಮೊದಲಾದ ವಿಷಯಗಳ ಬಗೆಗೆ

ಹೊಸ ಬೆಳಕನ್ನು ನೀಡುವ ಆಶಯವನ್ನು ಪ್ರಸ್ತುತ ಸಂಶೋಧನೆಯಲ್ಲಿ ಹೊಂದಲಾಗಿದೆ. ಇದಕ್ಕೆ ಪೂರಕವಾಗಿ ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಸಂಶೋಧನಾ ಗ್ರಂಥಗಳನ್ನು ಸಾಂದರ್ಭಿಕವಾಗಿ ಗಮನಿಸಲಾಗಿದೆ.

ಪ್ರಪಂಚದಲ್ಲಿ ಭಾರತವು ಆಧ್ಯಾತ್ಮಿಕವಾದ ನೆಲೆವೀಡಾಗಿದೆ. ಭಾರತ ದೇಶದಲ್ಲಿ ಹಲವು ಧರ್ಮಗಳ ಸಮ್ಮಿಲನವಾಗಿದೆ. ಆ ಧರ್ಮಗಳಲ್ಲಿ ಹಾಲುಮತ ಧರ್ಮವು ಒಂದಾಗಿದೆ. ಈ ಧರ್ಮ ತನ್ನದೇ ಆದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಾ ಬಂದಿದೆ. ಹಾಲುಮತ ಸಮುದಾಯದ ಚರಿತ್ರೆಯನ್ನು ತಿಳಿಯುವ ಗುರುಪರಂಪರೆ, ಹಾಲುಮತದ ಪಂಗಡಗಳು, ಹಾಲುಮತ ಸಮಾಜದ ಇತಿಹಾಸ, ಹಾಲುಮತದಲ್ಲಿ ನಡೆಯುವ ಆಚರಣೆ-ಸಂಪ್ರದಾಯಗಳ ವಿಶಿಷ್ಟತೆ, ಹಾಲುಮತ ಪುರಾಣಗಳಲ್ಲಿನ ಪವಾಡ ಕಥೆಗಳು, ಪವಾಡ ಕಥೆಗಳಲ್ಲಿನ ತಾತ್ವಿಕ ಹಿನ್ನೆಲೆಗಳು, ಜನಸಾಮಾನ್ಯರಲ್ಲಿ ಯಾವ ಪ್ರತಿಫಲವನ್ನು ನೀಡಿವೆ ಎಂಬುದರ ಜೊತೆ ಬೆಳೆದುಕೊಂಡು ಬಂದಿದೆ. ಮೂಲವಾಗಿ ಹಾಲುಮತದವರು ಪಶುಪಾಲನೆಯಲ್ಲಿ ತಮ್ಮ ಜೀವನವನ್ನು ತ್ಯಜಿಸಿ, ಒಂದಡೆ ಪಶುಗಳನ್ನು ಸಾಕುತ್ತ, ತಮ್ಮದೆ ಆದ ಸಂಸ್ಕೃತಿಯನ್ನು, ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಪ್ರಾಚೀನ ಪರಂಪರೆಯನ್ನು ಹೊಂದಿರುವ ಸಮುದಾಯವಾಗಿದೆ. 'ಹಾಲುಮತ ದರ್ಶನ' ಎಂಬ ಡಾ. ಶಂಭಾಜೋಷಿಯವರ ಕೃತಿಯು ಹಾಲುಮತದವರ ಕುರಿತ ಅಧ್ಯಯನವೇ ಆಗಿದೆ. ಹಾಲುಮತದವರ ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಇವರ ಇತಿಹಾಸ ಸಮಾಜದಲ್ಲಿ ಬೆಳೆದು ಬಂದ ರೀತಿ, ಇವರ ಐತಿಹಾಸಿಕ ಹಿನ್ನೆಲೆ ಕುರಿತ ಪುರಾಣಗಳು ರಚನೆಯಾಗಿವೆ.

ಭಾರತದಾದ್ಯಂತ ಕಂಡುಬರುವ ಸಮುದಾಯಗಳಲ್ಲಿ ಬಿನ್ನ ಮತ್ತು ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ ಹಾಲುಮತವು, ತನ್ನದೇ ಆದ ಆಚಾರ-ವಿಚಾರ, ಉಡುಗೆ-ತೊಡುಗೆ, ಭಾಷೆ, ನಂಬಿಕೆ, ದೇವತಾರಾಧನೆಯಲ್ಲಿ ಬಹುರೂಪತೆಯನ್ನು ಪಡೆದುಕೊಂಡಿದೆ. ಈ ಸಮುದಾಯಗಳಲ್ಲಿ ಅನೇಕ ಪುರಾಣಗಳು ರಚನೆಗೊಂಡಿವೆ. ಈ ಪುರಾಣಗಳ ಅಧ್ಯಯನ ನಮ್ಮ ಸಮಾಜದಲ್ಲಿ ಈಗೀಗ ಮಹತ್ವವನ್ನು ಪಡೆದುಕೊಳ್ಳುತ್ತಿವೆ. ತಗರ ಪವಾಡ, ಹಾಲುಮತೋತ್ತೇಜಕ ಪುರಾಣ, ಪಂಡಿತ ಚನ್ನಬಸವಕವಿ ದಾವಣಗೆರೆ ಹಾಲುಮತದ ಪುರಾಣವು, ಜನಪದ ಹಾಲುಮತ ಮಹಾಕಾವ್ಯ, ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಹಾಲುಮತಪುರಾಣ, ಶ್ರೀ ಅಡಿವೆಪ್ಪ ಮಾಳಪ್ಪ ಸೋಮುತ್ತೆ ಒಡೆಯರ್ ಹಾಲುಮತಪುರಾಣ, ಹಾಲ್ಮತದ ಶ್ರೀ ಸಿದ್ದಬೀರೇಶ್ವರ್ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣಗಳು, ಹಾಲುಮತದ ಆಚರಣೆ, ಸಂಪ್ರದಾಯ, ಮಹಾಪುರುಷರ ಜೀವನ ಚರಿತ್ರೆ, ಅವರು ಮಾಡಿದ ಪವಾಡ ಕಥೆಗಳನ್ನು ಚಿತ್ರಿಸುತ್ತವೆ.

ಹಾಲುಮತದ ಪುರಾಣಗಳಲ್ಲಿ ಬರುವ ಸಾಂಸ್ಕೃತಿಕ, ಚಾರಿತ್ರಿಕ ವ್ಯಕ್ತಿಗಳಾದ ರೇವಣ್ಣಸಿದ್ಧೇಶ್ವರ, ಬೀರೇಶ್ವರ, ಮಾಳಿಂಗರಾಯ, ಅಮೋಘಸಿದ್ಧ, ಶಾಂತಮುತ್ತಯ್ಯ ಇನ್ನೂ ಮುಂತಾದವರ ಜೀವನ ಕ್ರಮ, ಇವರಲ್ಲಿರುವ ಸಂಪ್ರದಾಯಗಳು, ಆಚರಣೆಗಳು, ಧರ್ಮದ ಉನ್ನತಿಗಾಗಿ ಮಾಡಿದ ಪವಾಡಗಳ ಕಥೆಗಳನ್ನು ನಾವು ಅಧ್ಯಯನ ಮಾಡುತ್ತೇವೆ.

ಹಾಲುಮತದ ಮಹಾಪುರುಷರಾಗಿ ಮೆರೆದ ಪವಾಡಪುರುಷರು ಜಾತಿ, ಮತ, ಧರ್ಮಗಳ ಎಲ್ಲೆಯನ್ನು ಬಿಟ್ಟು ಹಣ, ಅಧಿಕಾರ, ಅಹಂಕಾರ, ತಂದೆ–ತಾಯಿಯರ ಬಂಧನ ತೊರೆದು ಅಲೌಕಿಕ ಶಕ್ತಿಯ ಮುಂದೆ ಇವೆಲ್ಲ ಸಮವಾಗುವುದಿಲ್ಲವೆಂದು ತಿಳಿದು ಕಾಯಕವೇ ಕೈಲಾಸವೆಂಬಂತೆ ತಮ್ಮ ಸಾಧನೆಗಳನ್ನು ಮಾಡಿ, ತಮ್ಮನ್ನು ನಂಬಿದ್ದ ಭಕ್ತರನ್ನು ಉದ್ಧರಿಸುತ್ತಾ, ಆತ್ಮಸ್ಥೈರ್ಯ ತುಂಬುವ ಮಾತುಗಳಾಡುತ್ತಾ, ಜನಸಾಮಾನ್ಯರ ಜೊತೆ–ಜೊತೆಗೆ, ಸಮಾಜದ ಉನ್ನತಿಗಾಗಿ ತಮ್ಮನ್ನು ತೊಡಗಿಸಿಕೊಂಡರು.

ಪವಾಡಗಳು ನಮ್ಮ ಭಾರತೀಯ ಪರಂಪರೆಯ ನಂಬಿಕೆಯ ಮೇಲೆ ನಿಂತಿವೆ. ಜಗತ್ತಿನ ಪ್ರತಿಯೊಂದು ಧರ್ಮದಲ್ಲೂ ಅದರ ಛಾಪನ್ನು ಮೈಗೂಡಿಸಿಕೊಂಡಿವೆ. ಜನರ ನಂಬಿಕೆಗೆ ಪಾತ್ರವಾಗಿ, ಧಾರ್ಮಿಕತೆಯ ಭಾಗವಾಗಿಯೇ ಬೆಳೆದು ಬಂದಿದೆ, ಈಗಲೂ ಬೆಳೆಯುತ್ತಿದೆ. ನಮ್ಮ ಧಾರ್ಮಿಕ ಪುರುಷರ ಜೀವನ ಚರಿತ್ರೆಗಳು ಪುರಾಣಗಳಲ್ಲಿ ಬೆರೆತು ಹೋಗಿವೆ. ಇದಕ್ಕೆ ಹಾಲುಮತದ ಪವಾಡಪುರುಷರು ಹೊರತಾಗಿಲ್ಲ. ಐತಿಹಾಸಿಕ ಧಾರ್ಮಿಕ ವ್ಯಕ್ತಿಗಳಾದ ಮಹಾಪುರುಷರೇ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಇದರಿಂದಾಗಿ ಹಾಲುಮತ ಪುರಾಣಗಳಲ್ಲಿ ಪವಾಡ ಪುರುಷರ ಚರಿತ್ರೆಯು ಸಿಗುವುದು. ಆದರೆ ಕೆಲವೊಮ್ಮೆ ಅವರ ವ್ಯಕ್ತಿತ್ವ, ಜೀವನಕ್ರಮ, ಅವರ ಚರಿತ್ರೆಯ ಮೌಲ್ಯಗಳು ಸತ್ಯವೋ? ಕಲ್ಪನೆಯೋ? ಎಂಬಂತೆ ಚಿತ್ರಿತವಾಗಿರುತ್ತವೆ.

೧.೨. ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು “ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು” ಎಂಬ ಮಹಾಪ್ರಬಂಧದಲ್ಲಿ ಹಾಲುಮತ ಪವಾಡ ಕಥೆಗಳ ಅಧ್ಯಯನವಾಗಿದ್ದು, ಹಲವು ಉದ್ದೇಶಗಳನ್ನು ಹೊಂದಿದೆ. ಪ್ರತಿಯೊಂದು ಜನಾಂಗಕ್ಕೂ ವಿಭಿನ್ನ ಸಂಸ್ಕೃತಿ ಇರುವಂತೆ ಹಾಲುಮತ ಸಮುದಾಯಕ್ಕೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿ, ಜೊತೆಗೆ ಹಾಲುಮತದ ಪುರಾಣಗಳು ಇವೆ. ಹಾಗೆಯೇ ಈ ಹಾಲುಮತ ಸಮುದಾಯದ ಸಾಂಸ್ಕೃತಿಕ ನಾಯಕರ ಹುಟ್ಟು ಹಾಗೂ ಅವರ ಬದುಕಿನ ಕ್ರಮಗಳು ಅವರು ಸಾಧಿಸಿದ ಪವಾಡ ಸಾದೃಷ್ಯವಾದ ಸಾಧನೆಗಳ ಕುರಿತು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ. ಪುರಾಣ, ಪುರಾಣಗಳ ಪರಿಕಲ್ಪನೆ, ಪವಾಡ,

ಪವಾಡದ ಅರ್ಥ, ಪವಾಡಗಳ ಆಶಯ ಹಾಗೂ ಹಾಲುಮತ ಪುರಾಣಗಳ ವೈಶಿಷ್ಟ್ಯ ಹಾಗೂ ಅಲ್ಲಿನ ಸಾಂಸ್ಕೃತಿಕ ನಾಯಕರು ಮಾಡಿದ ಪವಾಡಗಳ ಕುರಿತು ತಿಳಿಯುವುದು ಪ್ರಸ್ತುತ "ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು" ಎಂಬ ಅಧ್ಯಯನದ ವಿಷಯ ವಸ್ತುವನ್ನು ಒಳಗೊಂಡದ್ದಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

"ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು" ಎಂಬ ವಿಷಯದ ಅಧ್ಯಯನಕ್ಕಾಗಿ ಹಾಲುಮತ ಸಮುದಾಯಗಳಲ್ಲಿ ಬರುವ ಪ್ರಮುಖ ಸಾಂಸ್ಕೃತಿಕನಾಯಕರ ಹಿನ್ನೆಲೆಯನ್ನು ಹಾಗೂ ಅವರು ತೋರಿದ ಪವಾಡ ಸಾದೃಶ್ಯ ಸಾಧನೆಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಒಳಗು ಮಾಡಿದ ಸಾಂಸ್ಕೃತಿಕ ಸಂದರ್ಭಗಳು ಹಾಗೂ ಪವಾಡ ಕಥೆಗಳೆಂದರೆ ತಗರನ ಪವಾಡ, ಬೀರಪ್ಪನ ಪವಾಡ, ಮಾಳಿಂಗರಾಯನ ಪವಾಡ, ಅಮೋಘಸಿದ್ಧರ ಪವಾಡ, ರೇವಣಸಿದ್ದರ ಪವಾಡ.

೧.೪. ಅಧ್ಯಯದ ಸ್ವರೂಪ

ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳು ಒಂದು ಅಧ್ಯಯನ ಎಂಬ ವಿಷಯವು ಒಟ್ಟು ೮ ಅಧ್ಯಾಯಗಳನ್ನು ಒಳಗೊಂಡಿದೆ.

ಒಂದನೆಯ ಅಧ್ಯಾಯ : ಮಹಾಪ್ರಬಂಧದ ತಾತ್ವಿಕ ಅಂಶಗಳನ್ನು ವಿವರಿಸುತ್ತದೆ. ಇದು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯ: ಇದುವರೆಗಿನ ಅಧ್ಯಯನಗಳ ಸಮೀಕ್ಷೆಯಾಗಿದ್ದು, ಇದರಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಕೃತಿಗಳು, ಲೇಖನಗಳು, ಎಂ.ಫಿಲ್. ಮತ್ತು ಪಿಎಚ್.ಡಿ. ಮಹಾಪ್ರಬಂಧಗಳನ್ನು ಪರಾಮರ್ಶಿಸಲಾಗಿದೆ.

ಮೂರನೆಯ ಅಧ್ಯಾಯ : ಸಾಂಸ್ಕೃತಿಕ ಅಧ್ಯಯನಗಳ ಪುರಾಣಗಳ ಪರಿಕಲ್ಪನೆಯ ಚರ್ಚೆಯಾಗಿದ್ದು, ವೈದಿಕ ಧರ್ಮದಲ್ಲಿ ಪುರಾಣಗಳು ಪ್ರಾಚೀನ ಗ್ರಂಥಗಳಾಗಿ ಹೊರಹೊಮ್ಮಿವೆ. ಈ ಗ್ರಂಥಗಳಿಂದ ನಮ್ಮ ಸಂಸ್ಕೃತಿ, ನಮ್ಮ ಇತಿಹಾಸ, ನಮ್ಮ ಪರಂಪರೆಯನ್ನು ಅರ್ಥೈಸಿಕೊಳ್ಳುತ್ತೇವೆ. ಪುರಾಣಗಳು ವೇದಗಳನ್ನು ಅವುಗಳಲ್ಲಿರುವ ತಾತ್ವಿಕತೆಯನ್ನು ತಿಳಿಯಲು ಸಹಾಯಕವಾಗಿದೆ. ಈ ಎಲ್ಲ ಮೌಲ್ಯಗಳನ್ನು ಹೊಂದಿರುವ ಪುರಾಣಗಳು ಬೆಳೆದುಬಂದ ರೀತಿಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯ : ಹಾಲುಮತ ಸಂಸ್ಕೃತಿಯ ಪುರಾಣಗಳ ಅಧ್ಯಯನವಾಗಿದ್ದು, ಇದರಲ್ಲಿ ಹಾಲುಮತ ಹುಟ್ಟು ಮತ್ತು ಅದರ ಪ್ರಾಚೀನತೆ, ಹಾಲುಮತ ದೈವಗಳ ಪರಿಕಲ್ಪನೆ ಹಾಗೂ ಹಾಲುಮತ ಸಂಸ್ಕೃತಿಯ ಸಾಮಾಜಿಕತೆಯ ಬಗ್ಗೆ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯ : ಹಾಲುಮತ ಪುರಾಣಗಳ ವಸ್ತು ವೈಶಿಷ್ಟ್ಯತೆಗಳು ಎಂಬ ಅಧ್ಯಯನದಲ್ಲಿ ಹಾಲುಮತ ಪುರಾಣಗಳ ಒಟ್ಟು ಸ್ವರೂಪವನ್ನು ಚರ್ಚಿಸಲಾಗಿದೆ.

ಆರನಯ ಅಧ್ಯಾಯ : ಪವಾಡ ಕಥೆಗಳ ವರ್ಗೀಕರಣ ಮತ್ತು ಕಥೆಗಳ ಸ್ವರೂಪ ಎಂಬ ಅಧ್ಯಯನದಲ್ಲಿ ಹಾಲುಮತ ಸಾಂಸ್ಕೃತಿಕ ನಾಯಕರ ಪವಾಡ ಕಥೆಗಳು ಮತ್ತು ಪ್ರಥಮವಾಗಿ ಪವಾಡಗಳ ಪರಿಕಲ್ಪನೆ ಅರ್ಥ, ಸ್ವರೂಪ, ಪವಾಡಗಳ ವರ್ಗಿಕರಣದೊಂದಿಗೆ ಉದಾಹರಣೆ ಜೊತೆಗೆ ವಿವರಿಸಲಾಗಿದೆ. ಹಾಲುಮತದಲ್ಲಿ ಬರುವ ಸಾಂಸ್ಕೃತಿಕ ನಾಯಕರಾದ ಶಾಂತಮುತ್ತಯ್ಯ, ಬೀರಪ್ಪ, ಮಾಳಿಂಗರಾಯ, ರೇವಣ್ಣಸಿದ್ಧ, ಅಮೋಘಸಿದ್ದರ ಸಂಕ್ಷಿಪ್ತ ಜೀವನದೊಂದಿಗೆ ಪವಾಡ ಕಥೆಗಳ ವರ್ಗಿಕರಣ ಮತ್ತು ಪುರಾಣಗಳಲ್ಲಿ ಬರುವ ಕಥೆಗಳ ಸ್ವರೂಪವನ್ನು ವಿವರವಾಗಿ ಬರೆಯಲಾಗಿದೆ. ಧಾರ್ಮಿಕ ಮಹಾಪುರುಷರ ಜನನ ಕುರಿತು ಪವಾಡ ಕಥೆಗಳು(೬), ದುಷ್ಟ ಜನರ ಸಂಹರಿಸಿದ ಪವಾಡ ಕಥೆಗಳು(೫), ವ್ಯಕ್ತಿ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ಪವಾಡ ಕಥೆಗಳು(೩೭), ಇತರೆ ಪವಾಡ ಕಥೆಗಳು(೧೬) ಈ ರೀತಿಯಾಗಿ ವಿಂಗಡಿಸಿದ ಕಥೆಗಳ ಸ್ವರೂಪವಿದೆ. ಮಹತ್ವ ಪವಾಡ ಕಥೆಗಳ ಬಗ್ಗೆ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯ : ಪವಾಡ ಕಥೆಗಳ ವಿವಿಧ ನೆಲೆಗಳು ಎಂಬ ಅಧ್ಯಯನದಲ್ಲಿ ಸಾಂಸ್ಕೃತಿಕ ವೀರರ ಚರಿತ್ರೆಗಳು ಜನಪದರ ಮೇಲೆ ಮತ್ತು ಕಾವ್ಯಗಳ ಮೇಲೆ ಯಾವ ರೀತಿ ಪ್ರಭಾವ ಬೀರಿವೆ. ಈ ಪ್ರಭಾವಗಳಿಂದಾಗಿ ಮಹಾಪುರುಷರ ಸುತ್ತ ಬೆಳೆದುಕೊಂಡು ಬಂದ ಪವಾಡ ಕಥೆಗಳು ನಿರ್ದಿಷ್ಟ ವ್ಯಕ್ತಿಯಂತಿರುವ ಪವಾಡ ಪುರುಷರು ಚಾರಿತ್ರಿಕವಾಗಿ, ಧಾರ್ಮಿಕವಾಗಿ, ಜನಪದೀಯವಾಗಿ ಸಮಾಜದ ಮೇಲೆ ಪ್ರಭಾವ ಬೀರಿ, ಪ್ರಬಲವಾಗಿ ಬೆಳೆದು ದೈವೀ ಪುರುಷರಾದ ಬಗ್ಗೆ ವಿವರಿಸಲಾಗಿದೆ.

ಎಂಟನೆಯ ಅಧ್ಯಾಯ : ಅಧ್ಯಯನದ ಫಲಿತಗಳಾಗಿದ್ದು, ಅಧ್ಯಯನದಲ್ಲಿ ಕಂಡುಕೊಂಡ ಒಟ್ಟು ಸಾರಾಂಶವನ್ನು ಚರ್ಚಿಸಲಾಗಿದೆ.

ಅಧ್ಯಾಯ: ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯಯನವು ಪುರಾಣಕ್ಕೆ ಸಂಬಂಧಪಟ್ಟಿರುವುದರಿಂದ ಸಾಮಾಜಿಕವಾಗಿ, ಧಾರ್ಮಿಕವಾಗಿ, ವಿವಿಧ ಆಚರಣೆಗಳ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಆದ್ದರಿಂದ ಇಲ್ಲಿ ಇದಕ್ಕೆ ಸಂಬಂಧಿಸಿದ ಪುರಾಣಗಳನ್ನು(ಕಾವ್ಯಗಳನ್ನು) ಪರಿಶೀಲಿಸಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಬೇಕಾದದು ಮತ್ತು ಆ ವಿಷಯಗಳನ್ನು ವಿಮರ್ಶೆ ಮಾಡುವುದು ಸಂಶೋಧಕರ ಕರ್ತವ್ಯವಾಗಿದೆ. ನಮ್ಮ ಹಿಂದೂ ಧರ್ಮದಲ್ಲಿ ಅನೇಕ ಪುರಾಣಗಳು ರಚನೆಗೊಂಡಿವೆ. ಅವುಗಳ ಅವಲೋಕನ ಮಾಡುವುದು ಮುಖ್ಯವಾಗಿರುತ್ತದೆ. ಪುರಾಣಗಳಲ್ಲಿ ಬಂದಂತಹ ಪವಾಡ ಕಥೆಗಳ ಅವಲೋಕನ ಅತಿ ಮುಖ್ಯವಾದದು. ಈ ಹಿಂದೆ ನಡೆದಿರುವ ಕೆಲವು ಸಂಶೋಧನೆಗಳಲ್ಲಿ ಉಳಿದಿರುವ ಅಂಶಗಳನ್ನು ಹಾಗೂ ಬಿಟ್ಟು ಹೋಗಿರುವ ವಿಷಯಗಳನ್ನು ಸೇರಿಸಿ ಪರಿಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಸಂಶೋಧಕರ ಮಾರ್ಗವು ಸುಲಭವಾಗಿ ಸಾಗಬೇಕಾದರೆ ಶಾಸ್ತ್ರೀಯ ಉಪಕರಣಗಳು ವಿವಿಧ ತಂತ್ರಗಳ ಅಳವಡಿಕೆಯ ಬಳಕೆಯಿಂದಾಗಿ ಸಂಶೋಧನೆಯ ಮಾರ್ಗವು ಉನ್ನತ ಮಟ್ಟಕ್ಕೇರುತ್ತದೆ.

ಸಂಶೋಧಕರಿಗೆ ಅಗತ್ಯವಾಗಿರುವ ಬೌದ್ಧಿಕ ಪ್ರಾಯೋಗಿಕ ಹಾದಿಗೆ ಸಾಹಿತ್ಯ ವಿಮರ್ಶೆಯು ಸುಲಭವಾಗಿವೆ. ಸಂಶೋಧನೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ಹಾಗೂ ಕ್ರಮಬದ್ಧವಾಗಿ ವಿಷಯಗಳ ಜೋಡಣೆಗೆ ವಿಮರ್ಶೆ ಅಗತ್ಯ. ವಿಮರ್ಶೆ ಇಲ್ಲದಿದ್ದರೆ ಅಂತಹ ಅಧ್ಯಯನಗಳು ಪರಿಪೂರ್ಣವೆನಿಸುವುದಿಲ್ಲ. ಸಂಶೋಧಕರ ಮರುಸೃಷ್ಟಿಗೆ ಹಾಗೂ ಹೊಸ ಪಠ್ಯಕ್ಕೆ ಸಂಶೋಧನೆಗಳು ತುಂಬಾ ಪ್ರಸ್ತುತವೆನ್ನಿಸುತ್ತವೆ. ಅಂತಹ ವಿಷಯಗಳು ವಿಷಯ ವಿಶ್ಲೇಷಣೆ ಮಾಡಲು ಒತ್ತು ನೀಡುತ್ತವೆ. ಅದೇ ರೀತಿಯಾಗಿ ಮೂರು ವರ್ಷದಲ್ಲಿ ನಡೆದ ಸಂಶೋಧನೆಗೆ ಸಂಬಂಧಪಟ್ಟ ಸಮಾವೇಶಗಳು ಸಾಹಿತ್ಯ ಸಂಘಟನೆಗಳು ಸಹಾಯವಾಗುತ್ತವೆ.

ಸಾಹಿತ್ಯ ಸಮೀಕ್ಷೆ ಮಾಡುವುದರಿಂದ ಸಂಬಂಧಿಸಿದ ಪುರಾಣಕಾರರು ರಚಿಸಿದ ಹಲವು ಪುರಾಣಗಳಲ್ಲಿ ಪವಾಡ ಕಥೆಗಳನ್ನು ವಿಶ್ಲೇಷಿಸಿದ ಅಧ್ಯಯನಗಳಿಂದ ಮಾಹಿತಿಗಳನ್ನು ಸಂಗ್ರಹಿಸುವುದರಿಂದ ಅಧ್ಯಯನಕ್ಕೆ ಸಹಕಾರಿಯಾಗುತ್ತವೆ. ಇಂತಹ ವಿಷಯಗಳಿಂದ ಸಾಧ್ಯವಾದಷ್ಟು ಮಟ್ಟಿಗೆ ಸಂಶೋಧನೆಯಲ್ಲಿ ಶ್ರೀಮಂತಿಕೆಯನ್ನು ಕಾಣುತ್ತೇವೆ. ಪ್ರಸ್ತುತ ಸಂದರ್ಭಗಳಲ್ಲಿ ಸಂಪನ್ಮೂಲಗಳಿಲ್ಲದೆ, ಸಂಶೋಧನೆಗಳು ಅಪೂರ್ಣವಾಗುತ್ತವೆ. ಇಂತಹ ಸಂದರ್ಭದಲ್ಲಿ ಸಂಪನ್ಮೂಲಗಳ ಪರಿಶೀಲನೆ ಅಧ್ಯಯನಗಳಿಗೆ ಪೂರಕವಾಗಿದೆ. ಪುರಾಣಗಳಿಗೆ ಸಂಬಂಧಿಸಿದ ಪಿಎಚ್.ಡಿ ಮಹಾಪ್ರಬಂಧಗಳು, ಎಂ.ಫಿಲ್ ಪ್ರಬಂಧಗಳು ಹಾಗೂ ಇತರೆ ಕೃತಿಗಳು ಮತ್ತು ಲೇಖನಗಳನ್ನು ಇಲ್ಲಿ ವಿಮರ್ಶಿಸಲಾಗಿದೆ.

೨.೧. ಕೃತಿಗಳು

೧. ರೇವಣ್ಣಸಿದ್ದ : ಹಿನ್ನೆಲೆ–ಮುನ್ನೆಲೆ

"ನಾಡೋಜ ಡಾ.ಎಂ.ಚಿದಾನಂದ ಮೂರ್ತಿ" ಅವರು ರಚಿಸಿರುವ "ರೇವಣ್ಣಸಿದ್ದ ಹಿನ್ನೆಲೆ–ಮುನ್ನೆಲೆ" ಎಂಬ ಕಿರುಕೃತಿಯು ರೇವಣ್ಣಸಿದ್ದನ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಒಳಗೊಂಡಿದೆ. ರೇವಣ್ಣಸಿದ್ದನು ಕನ್ನಡ ಜಾನಪದರಲ್ಲಿ ಒಬ್ಬರಾಗಿದ್ದಾರೆ. ಈ ಕಿರು ಕೃತಿಯಲ್ಲಿ ಇಪ್ಪತ್ತೆರಡು ಲೇಖನಗಳಿವೆ. ಹನ್ನೆರಡನೆಯ ಶತಮಾನದಲ್ಲಿ ರೇವಣಸಿದ್ದನನ್ನು ಅವತಾರ ಪುರುಷನಂತೆ ಬಿಂಬಿಸಲಾಗಿದೆ, ಐತಿಹಾಸಿಕ ವ್ಯಕ್ತಿಯಾಗಿಯೂ ಈ ಕಿರುಕೃತಿಯಲ್ಲಿ ಬಿಂಬಿಸಲಾಗಿದೆ. ಚನ್ನಬಸವನ ರೇವಣ್ಣ ಸಿದ್ದೇಶ್ವರನ ಚರಿತ್ರೆ (ರೇವಣ್ಣ ಸಾಂಗತ್ಯ) ಎಂಬ ಲೇಖನದಲ್ಲಿ ರೇವಣ್ಣನು ಭೂಮಿಯಲ್ಲಿ ಹುಟ್ಟಿ ಬಂದ ಕಥೆಯ ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ರೇವಣ್ಣನು ರಾಮಾಯಣದ ಕಾಲದಲ್ಲಿ ಜೀವಿಸಿದ್ದ ವಿಭೀಷಣನ ೬೦೦೦ ಲಿಂಗಗಳು ನಾಶವಾದಾಗ, ಅದೇ ಕಾಲದಲ್ಲಿ ಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸಲು ರೇವಣ್ಣನನ್ನು ಕರೆಸಿದ ಸಂಗತಿಗಳೆಲ್ಲವನ್ನು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ರೇವಣ್ಣನೆಂಬ ಹೆಸರು ಹೇಗೆ ಪ್ರಸಿದ್ಧಿಯನ್ನು ಪಡೆದುಕೊಂಡಿದೆ ಎಂಬುದರ ವಿಶ್ಲೇಷಣೆಯ ವಿವರವು ಇದರ ಜೊತೆಗೆ ಮಹಾಮಹಿಮ ರೇವಣ್ಣರ ಲೇಖನದಲ್ಲಿ ರೇವಣ್ಣನ ಪವಾಡಗಳನ್ನು ಓದುತ್ತೇವೆ. ಉತ್ತರ ಕರ್ನಾಟಕದಲ್ಲಿ ಬೀರಪ್ಪ, ರೇವಣ್ಣಸಿದ್ದರ ಪರಂಪರೆಯನ್ನು, ರೇವಣ್ಣಸಿದ್ದನ ವೃತ್ತಾಂತ, ಹಾಯ್ ಲಿಂಗಮ್ಮನ ವೃತ್ತಾಂತ, ಗಂಗೀಮಾಳಮ್ಮನ ವೃತ್ತಾಂತ, ಸಿದ್ಧರಾಮನ ವೃತ್ತಾಂತಗಳ ಸಂಕ್ಷಿಪ್ತ ವಿಷಯವನ್ನು ತಿಳಿಯುತ್ತೇವೆ. ಒಟ್ಟಿನಲ್ಲಿ ರೇವಣ್ಣನ ಜೀವನದ ಸಂಕ್ಷಿಪ್ತ ನೋಟ ಹೇಗೆ ಬೇರೆ–ಬೇರೆ ರೀತಿಯಲ್ಲಿ ವ್ಯಕ್ತವಾಗಿದೆ ಎಂಬುದು ಈ ಕಿರು ಕೃತಿಯಲ್ಲಿ ಚಿತ್ರಿತವಾಗಿದೆ. ರೇವಣ್ಣಸಿದ್ದನ ಪವಾಡಗಳು, ಅವನ ಜೀವನ ಚರಿತ್ರೆಯ ವಿಷಯಗಳು

ಅಧ್ಯಯನಕ್ಕೆ ಪೂರಕವಾಗಿರುವ ಕಾರಣ ನಾನು ಈ ಕಿರುಕೃತಿಯನ್ನು ಪೂರಕವಾಗಿ ತೆಗೆದುಕೊಂಡಿದ್ದೇನೆ.

೨. ಹಾಲುಮತದ ಚರಿತ್ರೆ: ಯಲ್ಲನಗೌಡ ಫ ಅತ್ತಿಕೊಳ್ಳ

ಈ ಕಿರು ಕೃತಿಯನ್ನು "ಡಾ.ಅನ್ನಪೂರ್ಣ ಗೋಸ್ಬಾಳ" ರವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಹಾಲುಮತದ ವಿಷಯಗಳನ್ನು ಒಳಗೊಂಡ ಸಂಕ್ಷಿಪ್ತ ಕೃತಿಯಾಗಿದೆ. ಹಾಲುಮತದ ಉತ್ಪತ್ತಿ, ಸಿದ್ಧರಾಮನ ಜೀವನ, ಪದ್ಮಗೊಂಡನ ಭಕ್ತಿಯ ಪ್ರಪಂಚ, ಹಾಲುಮತದ ಚಾರಿತ್ರಿಕಾಂಶ ಗಳನ್ನು ನಾವು ಈ ಕೃತಿಯಲ್ಲಿ ಕಾಣುತ್ತೇವೆ. ಹಾಲುಮತಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಅಂದರೆ ಹಾಲುಮತದ ಗುರುವಿನ ಪರಂಪರೆ, ಹಾಲುಮತದ ದೇವತೆ, ಹಾಲುಮತದವರ ಆಚಾರ–ವಿಚಾರದ ವಿಶ್ಲೇಷಣೆ ಇದೆ. ಹಾಲುಮತದ ದೈವೀಪುರುಷರ ಸಣ್ಣ–ಸಣ್ಣ ಪವಾಡಗಳ ಸಂಕ್ಷಿಪ್ತ ವಿವರವಿದೆ. ಪದುಮಣ್ಣನ ಜೀವನ ಶೈಲಿಯ ವಿವರವು ವಿಶ್ಲೇಷಣಾತ್ಮಕವಾಗಿದೆ. ಇದು ನನ್ನ ವಿಷಯದಲ್ಲಿ ಬರುವ ಹಾಲುಮತದ ಗುರು, ದೇವತೆ, ಪದುಮಣ್ಣನ ಜೀವನದಲ್ಲಿ ಬರುವ ಪವಾಡಗಳು ಪೂರಕವಾಗಿರುವುದರಿಂದ ಅಧ್ಯಯನದ ಪೂರಕ ಕೃತಿಯಾಗಿ ಅಭ್ಯಸಿಸಿದ್ದೇನೆ.

೩. ಬೀರೇಶ್ವರನ ಚರಿತ್ರೆ

ಡಾ. ಎಫ್.ಟಿ. ಹಳ್ಳಿಕೇರಿ ಅವರು ಸಂಪಾದಿಸಿದ 'ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರ ಬೀರೇಶ್ವರನ ಚರಿತ್ರೆ'ಯು ಸಂಪೂರ್ಣ ಬೀರೇಶ್ವರನ ಜೀವನವನ್ನು ಪ್ರತಿಬಿಂಬಿಸುವಂತಿದೆ. ಬಿಲ್ಲಾಸುರನನ್ನು ಸಂಹರಿಸಲು, ಬೀರೇಶ್ವರನ ಜನನವಾಗಿ, ಅವನನ್ನು ಸಂಹರಿಸಿದ ಪವಾಡ ಕಥೆ, ಕುರುಬರ ಕುರಿಗಳ ಉತ್ಪತ್ತಿ, ಬೀರೇಶ್ವರನ ಜನನವೇ ಒಂದು ಪವಾಡ, ಪವಾಡಗಳಿಂದಲೇ ಅವನ ಜೀವನದ ಬೆಳವಣಿಗೆ, ಬೀರೇಶನ ಶಿಷ್ಯನಾಗಿ ಮಾಳಿಂಗರಾಯ ದೊರೆತದ್ದು, ಶಿಷ್ಯನ ಪರೀಕ್ಷೆಗಾಗಿ ನಡೆಸಿದ ಕೆಲವು ಸಂಗತಿಗಳು ಹೀಗೆ ಇನ್ನೂ ಅನೇಕ ಭಕ್ತಿ ವಿಷಯಗಳ ವಿವರವಿದೆ. ಒಟ್ಟಿನಲ್ಲಿ ಬೀರೇಶ್ವರನ ಜನನದಿಂದ ನಡೆಯುವ ಎಲ್ಲಾ ಸಂಗತಿಗಳ ವಿವರಗಳ ಸವಿನೋಟವಿದೆ. ಹಾಲುಮತದ ಪವಾಡ ಪುರುಷನಾಗಿ ಮೆರೆದ ಬೀರೇಶ್ವರನ ಪವಾಡ ಕಥೆಗಳು ನನ್ನ ಅಧ್ಯಯನಕ್ಕೆ ಪೂರಕವಾಗಿರುವುದರಿಂದ, ಈ ಕೃತಿಯನ್ನು ನನ್ನ ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ.

೪. ಹಾಲುಮತಸ್ಥರು

ಬಿ.ಪ.ನಾಯ್ಕ ರವರು ರಚಿಸಿದ 'ಹಾಲುಮತಸ್ಥರು' ಕೃತಿಯಲ್ಲಿ ಕುರುಬ(ಹಾಲುಮತ) ಎನ್ನುವ ಶಬ್ಧದ ಉತ್ಪತ್ತಿಯಿಂದ ಹಿಡಿದು, ಕುರಿಗಳ ಹುಟ್ಟು ಅವುಗಳ ಅಭಿವೃದ್ಧಿ, ಕುರಿಗಳನ್ನು ಕಾಯಲು ದೇವಾನುದೇವತೆಗಳು ಬಂದ ಕಥೆ. ಹಾಲುಮತದ ಬೆಡಗುಗಳು, ಆಯಾ ಬೆಡಗುಗಳಲ್ಲಿನ

ಸಂಪ್ರದಾಯಗಳು, ಆಚರಣೆ–ವಿಚಾರಗಳು, ಸಾಮಾಜಿಕವಾಗಿ ಹಾಲುಮತ ಧಾರ್ಮಿಕತೆಯನ್ನು ಪಡೆದುಕೊಂಡ ಹಿನ್ನೆಲೆ–ಮುನ್ನೆಲೆ. ಹಾಲುಮತದಲ್ಲಿ ಪವಿತ್ರವಾದ ಕರಿಯ ಕಂತೆಯ ಮಹತ್ವ, ಇವರು ಹಲವಾರು ಹಬ್ಬಗಳಲ್ಲಿ ಆಚರಿಸುವ ವಿಧಿ–ವಿಧಾನಗಳು, ಮಗುವಿನ ಜಾತಕ ಕರ್ಮ, ಸೀಮಂತ, ನಾಮಕರಣ, ಅನ್ನಪ್ರಾಸನ, ತೊಟ್ಟಿಲು–ಬಟ್ಟಲು ಮುಂತಾದವುಗಳ ಆಚರಣೆಗಳ ವಿವರವಿದೆ. ಒಟ್ಟಿನಲ್ಲಿ ಮಗುವಿನ ಜನನದಿಂದ ಮರಣದವರೆಗಿನ ಆಚರಣೆಗಳ ಸವಿವರವಿದೆ.

ಕುರುಬ ಜನಾಂಗದ ಆರಾಧ್ಯ ದೇವರುಗಳಾದ ಬೀರೇಶ, ಚಿಂಚಲಿ ಮಾಯಮ್ಮ, ಹುಲಿಜಂತಿ, ಮಾಳಿಂಗರಾಯ ರೇವಣ್ಣಸಿದ್ದೇಶ್ವರ ಅವತಾರಗಳು, ಅವರ ಪವಾಡಗಳನ್ನು ಸಂಕ್ಷಿಪ್ತವಾಗಿ ಅಭ್ಯಸಿಸಬಹುದು. ಕುರುಬರ ಕಸುಬಿನ ವಿವರ, ಕುರುಬರೇ ಆಗಿರುವ ಕೆಲವು ಕವಿಗಳ ಅಭಿಪ್ರಾಯದೊಂದಿಗೆ ಮುಕ್ತಾಯವಾಗುತ್ತದೆ. ಈ ಮೇಲಿನ ಆಚರಣೆಗಳು, ಸಂಪ್ರದಾಯಗಳು, ವಿಧಿ–ವಿಧಾನಗಳು, ಕುರುಬ ಜನಾಂಗದ ಆರಾಧ್ಯ ದೇವರುಗಳಾದ ಬೀರೇಶ, ಮಾಳಿಂಗರಾಯ, ರೇವಣ್ಣಸಿದ್ದರು ನನ್ನ ಅಧ್ಯಯನದಲ್ಲಿ ಬರುವುದರಿಂದ ಇದನ್ನೇ ನನ್ನ ಅಧ್ಯಯನದ ಕೃತಿಯಾಗಿಟ್ಟುಕೊಂಡಿದ್ದೇನೆ.

೫. ಶ್ರೀ ಸುಕ್ಷೇತ್ರ ಹುಲಜಂತಿ ಮಠದವರಿಂದ ಹಾಲುಮತ ಚರಿತ್ರೆಗಳ ವಿಮರ್ಶೆ

ಪ್ರಸ್ತುತ ಕೃತಿಯಲ್ಲಿ ೫೪ ಅಧ್ಯಾಯಗಳಿವೆ ಒಂದೊಂದು ಅಧ್ಯಾಯವು ಸಹ ಹಾಲುಮತದ ಮಹತ್ವವನ್ನು ಎತ್ತಿಹಿಡಿಯುವ ವಿಷಯಾಂಶಗಳನ್ನು ಒಳಗೊಂಡಿವೆ. ನನ್ನ ಪ್ರಬಂಧಕ್ಕೆ ಹಾಲುಮತ ಗುರು–ಸರೂರ ಶಾಂತಮುತ್ತಯ್ಯ, ಹಾಲುಮತದ ಉಂಡಾಡು ಪದ್ಮಗೊಂಡ, ಹಾಲುಮತದ ಶ್ರೀ ಸಿದ್ದ ಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣ, ಸಂಪೂರ್ಣ ಹಾಲುಮತ ಪುರಾಣ ಭಾಗ–೧, ಹಾಲುಮತದ ಚರಿತ್ರೆ, ತೇಜೋತ್ತೋತಕ ಹಾಲುಮತ ಪುರಾಣ, ಹಾಲುಮತದ ಮುದ್ದುಲಿಂಗೇಶ್ವರ ಪುರಾಣ, ಜನಪದ ಹಾಲುಮತ ಮಹಾಕಾವ್ಯ, ಹಾಲ್ಮತೋತ್ತೇಜಕ ಪುರಾಣ, ಬೀರದೇವರ ಅವತಾರಗಳು, ಹಾಲುಮತ ಪುರಾಣದಲ್ಲಿ ಮಾಳಿಂಗರಾಯ, ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾ ಪುರಾಣ ಎಂಬ ಅಧ್ಯಾಯಗಳೆಲ್ಲವೂ ನನ್ನ ವಿಷಯಕ್ಕೆ ಪೂರಕವಾಗಿವೆ. ಒಂದೊಂದು ಅಧ್ಯಾಯಗಳಲ್ಲೂ ಹಾಲುಮತದಲ್ಲಿನ ಪ್ರಸಿದ್ಧ ವ್ಯಕ್ತಿಗಳ ವ್ಯಕ್ತಿತ್ವವನ್ನು ನಿರೂಪಿಸುವ ಕ್ರಮವಿದೆ. ಹಾಲುಮತದಲ್ಲಿ ಬರುವ ಮಾಳಿಂಗರಾಯನ ವ್ಯಕ್ತಿತ್ವದ ವ್ಯತ್ಯಾಸವನ್ನು ಕಂಡುಕೊಳ್ಳುತ್ತೇವೆ. ಹಾಲುಮತದ ಸಾಮಾಜಿಕ ಜೀವನ ಹಾಗೂ ಸಂಸ್ಕೃತಿಗಳನ್ನು ಅರಿಯಲು ಸಹಾಯಕವಾಗಿದೆ.

ಶ್ರೀ ಅಡಿವೆಪ್ಪ ಮಹಾರಾಯರು ರಚಿಸಿರುವ ಹಾಲುಮತ ಚರಿತ್ರೆಗಳ ವಿಮರ್ಶೆ ೪೯ ಹಾಲುಮತ ಪುರಾಣ, ಕುರುಬರ ಚರಿತ್ರೆಗಳಿಗೆ ಸಂಬಂಧಿಸಿದ ಪುರಾಣ, ಕೃತಿಗಳನ್ನು ಅವಲೋಕಿಸಿ ಬರೆದ ಕೃತಿಯಾಗಿದೆ. ಇದರಲ್ಲಿ ಹಾಲುಮತದಲ್ಲಿ ಪ್ರಸಿದ್ಧಿ ಪಡೆದ ಮಾಳಿಂಗರಾಯನ ವಿಷಯವನ್ನೇ

ಅತ್ಯಧಿಕವಾಗಿ ಪ್ರಸ್ತಾಪಿಸಲಾಗಿದೆ. ಹಾಲುಮತಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು, ಪುರಾಣಗಳು ರಚನೆಯಾಗಿವೆ. ಅವುಗಳೆಲ್ಲದರಲ್ಲಿ ಹಾಲುಮತಕ್ಕೆ ಸಂಬಂಧಿಸಿದ ಮಹಾಪುರುಷರ ಜೀವನ ಕ್ರಮವನ್ನೆಲ್ಲವನ್ನು ಕಾಣುತ್ತೇವೆ. ಇಲ್ಲಿ ಎಲ್ಲರ ವಿಷಯವು ಸಂಕ್ಷಿಪ್ತವಾಗಿ ಬಂದು ಹೋಗಿ, ಮಾಳಿಂಗರಾಯನ ಮಾಹಿತಿಯನ್ನು ಮಾತ್ರ ವಿಸ್ತಾರವಾಗಿ ವಿಮರ್ಶಿಸಲಾಗಿದೆ.

೬. ಬೀರದೇವರು-ಹಾಲುಮತ ಧಾರ್ಮಿಕ ಸಾಮ್ರಾಜ್ಯದ ಚಕ್ರವರ್ತಿ ಕುಲದೈವ

ಡಾ. ಲಿಂಗದಹಳ್ಳಿ ಹಾಲಪ್ಪರವರು ಬರೆದ ಈ ಕೃತಿಯಲ್ಲಿ ಒಟ್ಟು ೯ ಅಧ್ಯಾಯಗಳಿವೆ. ಬೀರದೇವ ಸ್ವತಂತ್ರ ವ್ಯಕ್ತಿತ್ವವುಳ್ಳವನು ಅವನನ್ನು ಒಂದೊಂದು ಪ್ರದೇಶದಲ್ಲಿ ಒಂದೊಂದು ನಾಮಗಳಿಂದ ಕರೆಯುತ್ತಾರೆ. ಬೀರದೇವರು ಪೌರಾಣಿಕ ಹಿನ್ನೆಲೆಯಿಂದ ಬಂದವರು ಎಂಬ ವಿಷಯವನ್ನು ಪ್ರಸ್ತಾಪಿಸುವುದರ ಜೊತೆಗೆ ಕುರುಬರ ಸಾಂಸ್ಕೃತಿಕ ದೇವನಾಗಿ ಬಂದ ಬೀರದೇವ ಕಥೆಯ ಸ್ವರೂಪವನ್ನು ಬರೆಯಲಾಗಿದೆ. ಬೀರದೇವರು ಕೇವಲ ಸಾಂಸ್ಕೃತಿಕ ವೀರರಾಗದೆ, ಹಾಲುಮತ ಸಾಮ್ರಾಜ್ಯದ ಚಕ್ರವರ್ತಿ ಎಂಬಂತೆ ಬೀರದೇವನನ್ನು ಕೃತಿಯಲ್ಲಿ ಬಿಂಬಿಸಲಾಗಿದೆ. ಶಾಸನಗಳಲ್ಲಿ ಬೀರದೇವನನ್ನು ಪ್ರಸ್ತಾಪಿಸಿದ ವಿಷಯಗಳ ವೀರರ ಜೊತೆ ಜೊತೆಗೆ ಅವರ ಚಾರಿತ್ರಿಕ ನೆಲೆಗಳ ಸವಿವರ ಕಾಣುತ್ತೇವೆ. ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕ, ಗಡಿ ಭಾಗಗಳಲ್ಲಿರುವ ಬೀರದೇವರ ನೆಲೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಯಾವ ಯಾವ ನೆಲೆಯಲ್ಲಿ ಬೀರದೇವರ ಆಚರಣೆಗಳು, ಸಂಪ್ರದಾಯ, ಜಾತ್ರೆ-ಹರಿದಿನಗಳು, ಬೀರದೇವರ ಸೇವೆಗಳ ಕುರಿತ ಚರ್ಚೆ ಇದೆ. ಜೊತೆಗೆ ಬೀರದೇವರ ಪವಾಡಗಳ ಸಂಕ್ಷಿಪ್ತ ವಿವರವಿದೆ. ಬೀರದೇವರ ಜಾತ್ರೆಯಲ್ಲಿ ಕೈಗೊಳ್ಳುವ ಪ್ರತಿಯೊಂದು ಕಾರ್ಯಗಳ ಸವಿವರಗಳನ್ನು ಚಾಚೂ ತಪ್ಪದೆ ಈ ಕೃತಿಯಲ್ಲಿ ಚಿತ್ರಿಸಲಾಗಿದೆ. ಈ ಕೃತಿಯು ಬೀರದೇವರ ಜೀವನದಿಂದ ದೈವತ್ವಕ್ಕೆ ಹೋದ ಅವನ ದಾರಿಯ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಕೊಡಲಾಗಿದೆ .ಅದರೊಂದಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೀರದೇವರ ಜಾತ್ರೆಯ ವಿಧಿ ವಿಧಾನಗಳನ್ನು ಯಾವ ರೀತಿಯಾಗಿ ವೈಭವದಿಂದ ಕಾಣುತ್ತೇವೆ. ಅಧ್ಯಾಯ-೨ರ ಪೌರಾಣಿಕ ನೆಲೆ, ಚಾರಿತ್ರಿಕ ನೆಲೆಯಲ್ಲಿ ಬರುವ ಕೆಲವು ಕಥೆಗಳ ಸ್ವರೂಪಗಳು ನನ್ನ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ಈ ಕೃತಿಯನ್ನು ಅಧ್ಯಯನದಿಂದ ವಸ್ತುವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

೭. ಹಾಲಹರವಿ

ಡಾ. ಶ್ರೀರಾಮ ಇಟ್ಟಣ್ಣವರ ರವರು ಬರೆದ ಪ್ರಸ್ತುತ ಹಾಲಹರವಿ ಎಂಬ ಕೃತಿಯು ೧೦ ಲೇಖನಗಳನ್ನು ಒಳಗೊಂಡಿದೆ. ಇದರಲ್ಲಿ ಬರುವ ೧. ಬೀರಪ್ಪನ ಜನನ, ತಂದೆ-ತಾಯಿ ಮತ್ತು ಇತರೆ ವಿಷಯಗಳು ೨. ಬೀರದೇವರು ಎಂಬೆರಡು ಲೇಖನಗಳು ನನ್ನ ಅಧ್ಯಯನಕ್ಕೆ

ಪೂರಕ ವಿಷಯಗಳಾಗಿ ಬಂದಿವೆ. ಹಾಲುಮತ ಪುರಾಣಗಳಲ್ಲಿ ಬೀರದೇವರ ಜನನ ಅವನ ಕೆಲವು ಜೀವನಾಂಶಗಳ ಬಗೆಗಿನ ವಿಷಯಗಳ ವಿಶ್ಲೇಷಣೆಯನ್ನು ವಿವರಿಸಲಾಗಿದೆ. ಹಾಲ್ಮತೋತ್ತೇಜಕ ಪುರಾಣ, ಜನಪದ ಹಾಲುಮತ ಮಹಾಕಾವ್ಯಗಳಲ್ಲಿ ಬೀರದೇವನ ಜನನದ ಹಿನ್ನೆಲೆ, ತಂದೆ-ತಾಯಿಯರ ವಿವರ, ಅವನ ಮುಂದಿನ ಜೀವನದ ಬಗೆಗಿನ ಸಂಕ್ಷಿಪ್ತ ವಿವರ ಲೇಖನದಲ್ಲಿದೆ.

ಹಾಗೆಯೇ 'ಬೀರದೇವರು' ಎಂಬ ೨ನೇ ಲೇಖನದಲ್ಲಿ ಬೀರದೇವನ ಜನನದ ಕಥೆಯು ಹಲವು ಪುರಾಣಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದರ ವಿಶ್ಲೇಷಣೆ ಇದೆ. ಜನನದ ನಂತರ ಅವನ ಬೆಳವಣಿಗೆಯ ವೈಖರಿಯ ವಿಶಿಷ್ಟತೆಯನ್ನು ಕಾಣುತ್ತೇವೆ. ಬೀರದೇವನ ಪುರಾಣವು ಕಾವ್ಯಗಳಲ್ಲಿ ಹೇಗೆ ವ್ಯಕ್ತವಾಗಿದೆ. ಹಾಗೂ ಇವನೊಬ್ಬ ಪೌರಾಣಿಕ ವ್ಯಕ್ತಿಯಾಗಿದ್ದರಿಂದ ಅವನ ಬಗೆಗಿರುವ ಪವಾಡಗಳು ಹೇಗೆ ಹೆಣೆದುಕೊಂಡಿವೆ, ಹಾಲುಮತದ ನಾಯಕನಾಗಿ (ಕುಲದೈವವಾಗಿ) ಜನಸಾಮಾನ್ಯರಿಗೆ ದೈವೀ ಮನುಷ್ಯನಾದ ಕಥೆಯ ವಿಶ್ಲೇಷಣೆ ಇದೆ. ಬೀರದೇವನಿಗೆ ಇರುವ ಇತರೆ ನಾಮಗಳು ಹುಟ್ಟಿದ ಸ್ವಾರಸ್ಯದ ವಿವರವಿದೆ. ಹೀಗೆ ಇನ್ನು ಹಲವು ವಿಷಯಾಂಶಗಳನ್ನು ಕಾಣುತ್ತೇವೆ. ಈ ಎಲ್ಲಾ ವಿಷಯಗಳು ನನ್ನ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ನಾನು ಈ ಲೇಖನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

೮. ಕುರುಬರ ಕುಲಗುರು-ರೇವಣ್ಣ ಸಿದ್ಧ

ಚಂದ್ರಕಾಂತ ಬಿಜ್ಜರಗಿರವರು ಬರೆದ ಈ ಕೃತಿಯು ೧೭ ಅಧ್ಯಯನಗಳನ್ನು ಒಳಗೊಂಡಿದೆ. ರೇವಣ್ಣಸಿದ್ದನು ಒಬ್ಬ ಧಾರ್ಮಿಕ ಪುರುಷ, ಅತಿಮಾನುಷ ವ್ಯಕ್ತಿ, ಅಲೌಕಿಕ ವ್ಯಕ್ತಿ, ಅಗಾಧ ಪವಾಡಗಳನ್ನು ಮಾಡಿ ಮೆರೆದ ವ್ಯಕ್ತಿಯಾಗಿ ಸೃಷ್ಟಿಸಿದ ಕಥೆಗಳು ಬಾಯಿಯಿಂದ-ಬಾಯಿಗೆ ಹರಡಿರುವ ಸತ್ಯತೆಗಳು ಮರೆಯಾಗಿರುವ ಸಂಗತಿಗಳ ವಿವರವಿದೆ. ಕಲ್ಪನೆಯಿಂದ ಸೃಷ್ಟಿಯಾದ ಕಥೆಗಳ ಹಿಂದೆ ಇರುವ ಸುಳ್ಳನ್ನು ಬಿಡಿಸಿದ ಕೃತಿಯಾಗಿದೆ. ಒಟ್ಟಿನಲ್ಲಿ ರೇವಣ್ಣಸಿದ್ದನ ಜೀವನ ಕ್ರಮ ಅವನು ಬೆಳೆದ ರೀತಿ, ಅವನ ಪರಂಪರೆಯ ಬಗ್ಗೆ ವಿಮರ್ಶಾತ್ಮಕವಾದ ರೀತಿಯಲ್ಲಿ ವ್ಯಕ್ತವಾಗಿದೆ. ಹಾಲುಮತದ ಕುಲದೇವರಾಗಿ ನಡೆದ ಕಥೆಯ ಸ್ವರೂಪವು ನನ್ನ ಅಧ್ಯಯನಕ್ಕೆ ಪೂರಕವಾಗಿರುವ ಕಾರಣ, ನಾನು ಇದನ್ನು ಬಳಸಿಕೊಂಡಿದ್ದೇನೆ.

೯. ಹಾಲುಮತ ಚರಿತ್ರೆಗಳ ವಿಮರ್ಶೆ

ಕವಿ ಶ್ರೀ ಅಡಿವೆಪ್ಪ ಮಹಾರಾಯರು ವಿಮರ್ಶಿಸಿದ ವಿಮರ್ಶಾ ಕೃತಿಯು ಇದಾಗಿದೆ. ಶ್ರೀ ಕ್ಷೇತ್ರ ಹುಲಜಂತಿ ಶ್ರೀ ಮಹಾಲಿಂಗರಾಯರು ಕುರುಬರ ಆರಾಧ್ಯರಾಗಿದ್ದಾರೆ. ಅವರ ಬಗ್ಗೆ ಈವರೆಗೂ ಬಂದ ಕೃತಿಗಳ ವಿಮರ್ಶೆಯನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಬೀರದೇವರು

ಕಾಲ ಕಳೆದು ಹೋದಂತೆ, ಕಾಲಾಂತರದಲ್ಲಿ ಬೀರದೇವರು-ವೀರಭದ್ರ ದೇವರಾಗಿ ರೂಪಾಂತರ ಹೊಂದಿದ ಕಥೆಗಳನ್ನು ವಿಶ್ಲೇಷಿಸಲಾಗಿದೆ. ಹಾಲುಮತದಲ್ಲಿ ಆದ ಸಾಂಸ್ಕೃತಿಕ ಬದಲಾವಣೆಗಳನ್ನು ಹಿಡಿದುಕೊಂಡು ವಿಮರ್ಶಕರು ಇಲ್ಲಿ ಹೀಗೆ ಚರ್ಚಿಸಿದ್ದಾರೆ. ಮಹಾಲಿಂಗರಾಯರು ಮತ್ತು ಅಮೋಘಸಿದ್ದರ ಮೇಲೆ ಇರುವ ಸಮಸ್ಯೆಗಳನ್ನು ಇಲ್ಲಿ ವಿಮರ್ಶಾತ್ಮಕವಾಗಿ ಚರ್ಚಿಸಿ, ಅವುಗಳಿಗೆ ಉತ್ತರ ನೀಡುವ ಹಾಗೆ ಪ್ರಸ್ತುತ ಕೃತಿಯು ರಚನೆಗೊಂಡಿದೆ. ಈ ಕೃತಿಯಲ್ಲಿ ಒಟ್ಟು ೪೯ ಕೃತಿಗಳನ್ನು ವಿಮರ್ಶಿಸಿದ್ದಾರೆ. ಪ್ರತಿಯೊಂದು ಕೃತಿಯಲ್ಲಿರುವ ಸಮಸ್ಯೆಗಳಿಗೆ ಪರಿಹಾರವಾಗುವ ರೀತಿಯಲ್ಲಿ ಉತ್ತರವನ್ನು ನೀಡಿದ್ದಾರೆ. ಭಾರತೀಯ ಪರಂಪರೆಯಲ್ಲಿ ಒಂದಾದ ನಾಥ ಸಂಪ್ರದಾಯದ ಉಗಮದ ಕುರಿತು ವಿದ್ವಾಂಸರ ಅಭಿಪ್ರಾಯಗಳ ನೋಟವಿದೆ. ಇದರ ಜೊತೆಗೆ ಈ ಕೃತಿಯಲ್ಲಿ ಅಡಿವೆಪ್ಪ ಮಹಾರಾಯರ ಚರಿತ್ರೆ, ರೇವಣ್ಣಸಿದ್ದನ ಚರಿತ್ರೆ, ಇನ್ನು ಹಾಲುಮತಕ್ಕೆ ಸಂಬಂಧಪಟ್ಟ ನಾಯಕರ(ದೈವೀ ಪುರುಷ) ಕಥೆಗಳನ್ನು (ಚರಿತ್ರೆಯನ್ನು) ವಿಮರ್ಶೆ ಮಾಡಲಾಗಿದೆ. ಈ ಕೃತಿಯಲ್ಲಿ ಬರುವ ಹಾಲುಮತಕ್ಕೆ ಸಂಬಂಧಿಸಿದ ಪವಾಡ ಪುರುಷರ ಚರಿತ್ರೆಯು ನನ್ನ ಅಧ್ಯಯನದಲ್ಲಿ ಬರುವುದರಿಂದ, ಈ ಕೃತಿಯನ್ನು ನನ್ನ ವಿಷಯದ ವಸ್ತುವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

೧೦. ಗೊರವರ ಕೆಂಚ ಮಲ್ಲಯ್ಯ ಹಾಡಿರುವ ಮೈಲಾರ ಮಾಳಮ್ಮ ಮತ್ತು ನೀಲವೇಣಿ

ಡಾ. ಚಕ್ಕೆರೆ ಶಿವಶಂಕರ್ ರವರು ಸಂಪಾದಿಸಿದ ಈ ಕೃತಿಯಲ್ಲಿ ಬರುವ ಕೆಂಚಮಲ್ಲಯ್ಯ ರವರು ದಕ್ಷಿಣ ಕರ್ನಾಟಕದ ಪ್ರಸಿದ್ಧ ವೃತ್ತಿಗಾಯಕನಾಗಿ ಮೈಲಾರ ಮಾಳಮ್ಮ ಮತ್ತು ನೀಲವೇಣಿರವರ ಹಾಡನ್ನು ಹಾಡಿದ್ದಾರೆ. ಮೈಲಾರನು ಭೂಲೋಕದಲ್ಲಿ ಅವತರಿಸಿದ ಹಿನ್ನೆಲೆ ಅವರ ಹುಟ್ಟಿಗೆ ಇರುವ ಉದ್ದೇಶ, ಭೂಮಿಯಲ್ಲಿರುವ ರಾಕ್ಷಸರನ್ನು(ದುಷ್ಟರನ್ನು) ಸಂಹರಿಸಿದ ರೀತಿ ಈ ಕೃತಿಯಲ್ಲಿ ಹಾಡಿನ ಧಾಟಿಯಲ್ಲಿ ರಚನೆಯಾಗಿದೆ. ಮೈಲಾರನ ಪವಾಡಗಳು, ನನ್ನ ಅಧ್ಯಯನ ವಿಷಯ ಪವಾಡ ಕಥೆಗಳಾಗಿರುವುದರಿಂದ ಈ ಕೃತಿಯನ್ನು ಪೂರಕವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

೨.೨. ಲೇಖನಗಳು

ಡಾ.ಎಫ್.ಟಿ. ಹಳ್ಳಿಕೇರಿ ಅವರು ಸಂಪಾದಿಸಿದ ಹಾಲುಮತ ಅಧ್ಯಯನ-೧ ಎಂಬ ಪುಸ್ತಕದಲ್ಲಿ ಹಾಲುಮತ ಪುರಾಣಕ್ಕೆ ಸಂಬಂಧಿಸಿದ ಬಿಡಿ-ಬಿಡಿ ಲೇಖನಗಳನ್ನು ವಿಶ್ಲೇಷಣಾತ್ಮಕ ವಾಗಿರುವ ಲೇಖನಗಳ ಸಂಗ್ರಹವಿದೆ. ಪ್ರಸ್ತುತ ಈ ಪುಸ್ತಕದಲ್ಲಿ ಪ್ರಕಟವಾಗಿರುವ ಭಾಗ-೧ರಲ್ಲಿ ಏಳು ಲೇಖನಗಳ ಸಂಗ್ರಹವಿದೆ.

೧. ಸಿ.ಕೆ. ಪರಶುರಾಮಯ್ಯರವರು ಬರೆದ ಹಾಲುಮತ ಕಾವ್ಯ ಪುರಾಣಗಳು, 'ತಗರ ಪವಾಡ' ಎಂಬ ಲೇಖನವು ಹಾಲುಮತದಲ್ಲಿ ತಗರು (ಟಗರು) ಯಾವ ರೀತಿಯಾಗಿ ಮಹತ್ವವನ್ನು ಪಡೆದುಕೊಂಡಿತು. ಶಾಂತಮುತ್ತಯ್ಯನವರು ತಗರ ಪವಾಡವನ್ನು ಮಾಡಿದ ಕಥಾಸ್ವರೂಪವನ್ನು ಹಾಗೂ ಕೃತಿಯ ವೈಶಿಷ್ಟ್ಯತೆಯನ್ನು ವಿವರವಾಗಿ ಉತ್ತಮವಾದ ರೀತಿಯಲ್ಲಿ ಬರೆಯಲಾಗಿದೆ. ಕೊನೆಯಲ್ಲಿ ಶಾಂತಮುತ್ತಯ್ಯ ಹಾಲುಮತದ ಗುರುವಾಗಿ ಪ್ರಥಮ ಸ್ಥಾನವನ್ನು ಪಡೆದುಕೊಂಡ ಮಾಹಿತಿಯನ್ನು ಸವಿವರವಾಗಿ ಈ ಲೇಖನದಲ್ಲಿ ಇಡಿಯಾಗಿ ಬಿಚ್ಚಿಟ್ಟಿದೆ.

೨. ಎನ್.ಬಿ. ವಿರೂಪಾಕ್ಷಿಯವರ 'ಜನಪದ ಹಾಲುಮತ ಕಾವ್ಯ' ಎಂಬ ಲೇಖನವು ಜನಪದದ ರೀತಿಯಾಗಿ ಹಾಲುಮತ ವ್ಯಕ್ತವಾಗಿರುವ ಕಥಾಸ್ವರೂಪ, ಮೌಖಿಕ ಪರಂಪರೆಯಲ್ಲಿ ಹಾಲುಮತ ಸಂಪ್ರದಾಯದಂತೆ ಆರಾಧ್ಯ ದೈವನಾದ ಬೀರಪ್ಪನ ವೃತ್ತಾಂತವನ್ನು ನಿರೂಪಿಸಿದ ಲೇಖನವಾಗಿದೆ.

೩. ಕೆ.ರವೀಂದ್ರನಾಥ ರವರ 'ಸಿದ್ಧಮಂಕ ಚರಿತೆ' ಲೇಖನವು ಹಾಲುಮತ ಪುರಾಣಗಳಲ್ಲಿ ಒಂದಾದ ಸಿದ್ಧಮಂಕ ಚರಿತೆ. ಬೇರೆ ಪುರಾಣಗಳಿಗಿಂತ, ಚಾರಿತ್ರಿಕವಾಗಿ ಭಿನ್ನವಾದ ಸಂಗತಿಗಳು, ಹಾಲುಮತದಲ್ಲಿಯೇ ಭಿನ್ನ ಸಂಪ್ರದಾಯಗಳ, ಸಂಗತಿಗಳ ಮಾಹಿತಿ, ಕಥಾಸ್ವರೂಪಗಳ ವಿಶ್ಲೇಷಣೆ ಇದೆ.

೪. ಬಿ.ಹುಲಿಗೆಮ್ಮ ರವರ "ರಸ್ತಾಪುರ ಭೀಮಕವಿಯ ಹಾಲುಮತ್ತೋತ್ತೇಜಕ ಪುರಾಣ" ಎಂಬ ಲೇಖನದಲ್ಲಿ ಈ ಪುರಾಣದಲ್ಲಿ ಬಂದಂತಹ ಶಾಂತಮುತ್ತಯ್ಯ, ರೇವಣ್ಣಸಿದ್ಧ, ಶಿವಪದ್ಮ, ಮಾಳಿಂಗರಾಯ ಇನ್ನು ಮುಂತಾದವರ ವಿವರಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಬರೆಯಲಾಗಿದೆ.

೫. ಡಾ. ಕೆ.ಎಂ. ಮೈತ್ರಿರವರ 'ಮಾಳಿಂಗರಾಯನ ಕಾವ್ಯ' ಹಾಲುಮತದಲ್ಲಿನ ವೀರರಲ್ಲಿ ಮಾಳಿಂಗರಾಯನು ತನ್ನದೆ ಆದ ವ್ಯಕ್ತಿತ್ವದಿಂದ, ಗುರುಭಕ್ತಿಯಿಂದ ಮೆರೆದ ಮಾಳಿಂಗರಾಯನ ಕಾರ್ಯದಲ್ಲಿನ ಮಾಳಿಂಗರಾಯನ ಜೀವನದ ಕಥೆಗಳ ಸ್ವರೂಪವನ್ನು ನಿರೂಪಿಸುವ ಲೇಖನವಾಗಿದೆ.

೬. ಅನ್ನಪೂರ್ಣ ಗೋಸ್ಬಾಳರವರ 'ಚೆನ್ನಬಸವ ರಚಿತ ಹಾಲುಮತ ಪುರಾಣ' ಲೇಖನದಲ್ಲಿ ಕಾವ್ಯದ ಕವಿಯ ಸಂಕ್ಷಿಪ್ತ ಪರಿಚಯದೊಂದಿಗೆ, ಕೃತಿಯ ಕಥಾಸ್ವರೂಪದೊಂದಿಗೆ ಹಾಲುಮತದ ಪ್ರಾಚೀನ ಪರಂಪರೆಯಲ್ಲಿ ಆರಾಧ್ಯ ದೈವಗಳ ಬಗ್ಗೆ, ಹಾಲುಮತದವರ ಆಚಾರ-ವಿಚಾರಗಳ ಬಗ್ಗೆ ವಿವರವಿರುವ ಕೃತಿಯ ಸಂಕ್ಷಿಪ್ತ ಮಾಹಿತಿಯ ಸಂಗ್ರಹವಿದೆ.

೭. ಡಾ. ಬಿ.ಜಿ. ಬಿರಾದಾರರವರ 'ಮರುಳಸಿದ್ದೇಶ್ವರ ಚರಿತೆ' ಎಂಬ ಲೇಖನದಲ್ಲಿ ಹಾಲುಮತದ ವೀರನಾಯಕನಾದ ಮರುಳಸಿದ್ದನೆಂಬುವನ ಕಥೆಯ ಸಾರಾಂಶವಿದೆ. ಸರವೂರಿನ ತೂಗೂಡ್ಡದಲಿ ಭಯಂಕರವಾಗಿ ತಪಸ್ಸನ್ನು ಮಾಡಿ ಕುರುಬರನ್ನು ಕಲ್ಯಾಣದಿಂದ ಹೊರ ಹಾಕಲಾಗಿತ್ತು. ಅವರನ್ನು ಮತ್ತೆ ಒಳ ಪ್ರವೇಶಿಸುವಂತೆ ಮಾಡಿದ ಪವಾಡ ಕಥೆಯ ವಿಶ್ಲೇಷಣೆಯ ಸಂಗ್ರಹವಿದೆ.

೮. ಡಾ. ಎಂ.ಎಂ. ಕಲಬುರ್ಗಿರವರ ಮಾರ್ಗ ಸಂಪುಟ-೫ರಲ್ಲಿ ಪ್ರಕಟವಾದ ಹಲವು ಲೇಖನಗಳಲ್ಲಿ ನನ್ನ ಅಧ್ಯಯನಕ್ಕೆ ಸಂಬಂಧಿಸಿದ ಎರಡು ಲೇಖನಗಳಿವೆ. ಹಾಲುಮತದ ಪುರಾಣಗಳಲ್ಲಿ ಒಂದಾದ ಪುರಾಣಗಳಾಗಿವೆ.

೯. ೨೦೦೪ರಲ್ಲಿನ "ಸಿದ್ಧಮಂಕ ಚರಿತೆ" ಎಂಬ ಲೇಖನದಲ್ಲಿ ಸಿದ್ದಮಂಕ ಚರಿತೆಯಲ್ಲಿನ ಪ್ರತಿಯೊಂದು ಅಂಶವನ್ನು ವಿವರಣಾತ್ಮಕವಾಗಿ ಬಿಚ್ಚಿಡಲಾಗಿದೆ. ಲಿಂಗಾಯತ ಮತ್ತು ಕುರುಬ ಜನಾಂಗಗಳ ನಡುವೆ ನಡೆದ ಸಂಗತಿಗಳ ಕೃತಿಯಾಗಿ ಬಿಂಬಿತವಾದ ಕಥೆಯ ಸ್ವರೂಪವನ್ನು ನಿರೂಪಿಸಿದ ಲೇಖನವಾಗಿದೆ.

೧೦. ೨೦೦೪ರ ತಗರ ಪವಾಡವು ಮಾರ್ಗ-೫ರಲ್ಲಿ ಪ್ರಕಟವಾದ ಹಾಲುಮತಕ್ಕೆ ಸಂಬಂಧಿಸಿದ ಮತ್ತೊಂದು ಲೇಖನವಾಗಿದೆ. ಚರಿತ್ರೆಯ ಅಂಶಗಳನ್ನೊಳಗೊಂಡ ಕೃತಿಯಾಗಿದೆ. ಕಲ್ಯಾಣದಲ್ಲಿನ ಹಾಲುಮತದ ಸಮಸ್ಯೆಗಳು, ಚಾರಿತ್ರಿಕ ಸಮಸ್ಯೆಯಾದ ಸಮಸ್ಯೆಗೆ ಶಾಂತಮುತ್ತಯ್ಯನಿಂದ ಪರಿಹಾರ ದೊರೆತ ಕಥಾ ಸ್ವರೂಪ ಉಲ್ಲೇಖವಿದೆ.

೧೧. ಡಾ. ಎಂ.ಎಂ. ಪಡಶೆಟ್ಟಿಯವರು ಬರೆದ ಸಂಶೋಧನ ಲೇಖನವಾಗಿದೆ. 'ಹಾಲಕೆನೆ' ಎಂಬ ಸಂಸ್ಕೃತ ಅಧ್ಯಯನ ಕೃತಿಯಲ್ಲಿ ಇದು ಪ್ರಕಟಗೊಂಡಿದೆ. ಪ್ರಸ್ತುತ ಲೇಖನದಲ್ಲಿ ಹಾಲುಮತದ ವೀರಪುರುಷನಾದ ಅಮೋಘಸಿದ್ಧನ ಪುರಾಣ ಕಥೆಗಳ ಸ್ವರೂಪ, ಅಚಾರ-ವಿಚಾರಗಳು, ಹಾಲುಮತದ ಮೇಲೆ ಲಿಂಗಾಯತರ ಪ್ರಭಾವದ ವಿವರಣೆ ಇದೆ. ಸಿದ್ಧ ಪರಂಪರೆಯಿಂದ, ಪ್ರಸ್ತುತ ನಂಬಿಕೆ- ಆಚರಣೆಗಳ ಬಗ್ಗೆ ವಿಶ್ಲೇಷಿಸಿದ್ದಾರೆ.

೧೨. ಸಿದ್ಧಮಂಕ ಚರಿತೆ ಎಂಬ ಲೇಖನದಲ್ಲಿ ಸಿದ್ಧಮಂಕ ಚರಿತೆಯ ಕೃತಿಯಲ್ಲಿ ಬರುವ ಕಥೆಗಳನ್ನು ವಿಶ್ಲೇಷಿಸಿದ್ದಾರೆ. ಮದ್ದಯ್ಯ-ಸುಗ್ಗವ್ವೆಯರ ಅರವತ್ತು ವರ್ಷದಲ್ಲಿ ಹುಟ್ಟಿದ ಮಗುವಾದ ಸಿದ್ದಮಂಕ ಜೀವನದ ಚರಿತೆಯ ಒಂದು ಸಂಕ್ಷಿಪ್ತ ನೋಟದ ವಿವರವಿದೆ.

೧೩. ರೇವಣ್ಣ ಸಿದ್ದಯ್ಯ ದೇವರ (ಶಾಂತಮುತ್ತಯ್ಯ ಚರಿತ್ರೆ) ಮಹಾತ್ಮೆ (ಒಂದು ಅಪ್ರಕಟಿತ ಕಿರುಕೃತಿ). ಈ ಕಿರುಕೃತಿಯಲ್ಲಿ ರೇವಣ್ಣಸಿದ್ಧನ ಮಹಾತ್ಮೆಯನ್ನು ಹೇಳುವುದೇ ಉದ್ದೇಶವಾಗಿದೆ.

ಕೃತಿಯ ಆರಂಭ ಭಾಗದಲ್ಲಿ ಮರುಳಸಿದ್ಧ, ರೇವಣ್ಣಸಿದ್ಧ ಮತ್ತು ಏಕೋರಾಮಯ್ಯನವರ ವಿವರಗಳಿವೆ. ಜೊತೆಗೆ ರೇವಣ್ಣಸಿದ್ದರು ಕೊಲ್ಲಾಪುರದ ಸಿದ್ಧರನ್ನು ಕುರಿಗಳನ್ನಾಗಿ ಮಾಡಿದ ಪವಾಡ ಕಥೆಗಳು, ಸತ್ತ ಕುರಿಗೆ ಪ್ರಾಣ ನೀಡಿದ ಪವಾಡ ಕಥೆ, ಶಾಂತಮುತ್ತಯ್ಯನ ಊರಾದ ಸರೂರಿನ ಪ್ರಸ್ತಾಪವು ಬರುತ್ತದೆ.

೧೪. ಜನಪದ ಹಾಲುಮತ ಮಹಾಕಾವ್ಯ ಪರಂಪರೆ ಮತ್ತು ಪ್ರಭಾವ ಎಂಬ ಲೇಖನದಲ್ಲಿ ಹಾಲುಮತ ಹುಟ್ಟುವುದಕ್ಕೆ ಐತಿಹ್ಯ ಕಥೆಗಳಿವೆ. ಮೌಖಿಕ ಮತ್ತು ಲಿಖಿತ ರೂಪದಲ್ಲಿ ಹಾಲುಮತ ಪುರಾಣಗಳು ಸಮುದಾಯದ ಸಂಸ್ಕೃತಿ, ಆ ಸಮುದಾಯದ ಇತಿಹಾಸ ಗುರು ಪರಂಪರೆಯು ಯಾವ ರೀತಿ ವ್ಯಕ್ತವಾಗಿದೆ ಎಂಬುದರ ವಿವರವಿದೆ. ಜನಪದ ಹಾಲುಮತ ಮಹಾಕಾವ್ಯವನ್ನು ಆಧಾರಿಸಿ, ಇನ್ನಿತರ ಹಾಲುಮತ ಪುರಾಣಗಳು ರಚನೆಗೊಂಡಿವೆ. ಈ ಕೃತಿಯಲ್ಲಿ ಹಾಲುಮತಕ್ಕೆ ಸಂಬಂಧಿಸಿದ ಕಥೆಗಳು, ಹಲವು ಘಟನೆಗಳು, ವಿವರಗಳು, ಉದಾಹರಣೆಗಳಾಗಿವೆ. ಜನಪದ ಹಾಲುಮತ ಪುರಾಣವು, ಹಲವು ಪುರಾಣಗಳ ಮೇಲೆ ಯಾವ ರೀತಿ ಪ್ರಭಾವ ಬೀರಿದೆ ಎಂಬುದರ ಸಂಕ್ಷಿಪ್ತ ವಿವರವಿದೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಕುರುಬರ ಕುಲದೈವವಾದ ಬೀರಪ್ಪನ ಜೀವನವನ್ನು ತಿಳಿಸುವ ಕಾವ್ಯವಾಗಿದೆ. ಬಂಕಾಪುರದ ಬಸವಣ್ಣೆ ನೀಲಪ್ಪ ಹಳವಳ್ಳಿಯ ಹಾಲುಮತ ಪುರಾಣ, ರಸ್ತಾಪುರ ಭೀಮಕವಿಯ ಹಾಲುಮತ್ತೋತ್ತೇಜಕ ಪುರಾಣ, ಚನ್ನಬಸವ ಕವಿಯ ಹಾಲುಮತ ಪುರಾಣ, ಇತ್ತೀಚೆಗೆ ಪ್ರಕಟವಾದ ತಗರ ಪವಾಡ ಮತ್ತು ಸಿದ್ಧಮಂಕ ಚರಿತೆಗಳಲ್ಲಿ ಹಾಲುಮತದ ವೀರ ಅತಿಮಾನುಷ ವ್ಯಕ್ತಿಗಳಾದ ಬೀರಪ್ಪ, ಶಾಂತಮುತ್ತಯ್ಯ, ಮಾಳಿಂಗರಾಯ, ರೇವಣ್ಣಸಿದ್ಧರ ಸಂಗತಿಗಳು ಬಂದಿರುವ ವಿಷಯಗಳ ವಿವರಗಳಿವೆ.

೧೫. ರೇವಣ್ಣಸಿದ್ಧ, ಡಾ.ಎಂ.ಎಂ. ಕಲಬುರ್ಗಿಯವರ ಪ್ರಬಂಧಗಳ ಸಂಕಲನದಲ್ಲಿ ರೇವಣ್ಣಸಿದ್ಧನ ಜೀವಿತಾವಧಿಯನ್ನು ಚಾರಿತ್ರಿಕ ಅಂಶಗಳನ್ನು, ರಾಜಕೀಯ ಅಂಶಗಳನ್ನು ಜೊತೆಗೆ ರೇವಣ್ಣಸಿದ್ಧನಿಗೆ ಸಂಬಂಧಿಸಿದ ಕೆಲವು ಶಾಸನಗಳ ಕುರಿತು ವಿವರವಿದೆ. ಡಾ.ಕೆ. ರವೀಂದ್ರನಾಥ ಅವರ 'ತಗರ ಪವಾಡ'ವೆಂಬ ಲೇಖನವು ತಗರ ಪವಾಡದ ಕೃತಿಯ ಸಂಪೂರ್ಣ ಮಾಹಿತಿಯನ್ನು ನೀಡುವುದಲ್ಲದೆ, ಆ ಕಾಲದಲ್ಲಿನ ಸಾಮಾಜಿಕ ಸಮಸ್ಯೆಗಳು ಹೇಗೆ ತಲೆದೋರಿದವು, ಅವುಗಳ ಪರಿಹಾರಕ್ಕಾಗಿ ಬಂದ ಶಾಂತಮುತ್ತಯ್ಯ, ಕುರುಬರ ಹಿರಿ ಗುರು ಹೇಗೆ ಆದ ಎಂಬುದನ್ನು ವಿವರವಾಗಿ ವಿಶ್ಲೇಷಣಾತ್ಮಕವಾಗಿ ಸಂಧಿ ೮ರಲ್ಲಿ

ಬಂದಿದೆ. ಹಾಗೂ ಚಾರಿತ್ರಿಕವಾಗಿ ಈ ಕೃತಿಯು ಹೇಗೆ ಮಹತ್ವವನ್ನು ಪಡೆದುಕೊಂಡಿದೆ ಎಂಬುದನ್ನು ಚಾರಿತ್ರಕಾಂಶವಾಗಿ ಚರ್ಚಿಸಲಾಗಿದೆ.

೧೬. ಡಾ.ಚಂದ್ರಪ್ಪ ಸೊಬಟಿ ಅವರ 'ಮಾಳಿಂಗರಾಯ' ಎಂಬ ಲೇಖನದಲ್ಲಿ ಹಾಲುಮತ ಸಾಂಸ್ಕೃತಿಕ ಕಥನ ಎಂಬ ಪುಸ್ತಕದಲ್ಲಿ ಏಳು ಲೇಖನಗಳ ಸಂಗ್ರಹವಿದೆ. ಅದರಲ್ಲೊಂದು ಲೇಖನ ಮಾಳಿಂಗರಾಯ. ಚಾರಿತ್ರಿಕ ವ್ಯಕ್ತಿಯಾಗಿರುವ ಹಾಲುಮತ ಪುರಾಣದ ನಾಯಕರಲ್ಲಿ ಮಾಳಿಂಗರಾಯ. ಮಾಳಿಂಗರಾಯನಿಗೆ ಸಂಬಂಧಿಸಿದ ವಿಷಯಗಳ ತಾತ್ವಿಕತೆಗಳನ್ನು, ಚಾರಿತ್ರಿಕ ಕಥನಗಳನ್ನು, ವಿಮರ್ಶಾತ್ಮಕವಾಗಿ ಕಾಣುತ್ತೇವೆ. ಮಾಳಿಂಗರಾಯನ ಸಂಪ್ರದಾಯ, ಆಚಾರ, ವಿಚಾರಗಳನ್ನು, ಪೂಜಾ ವಿಧಾನಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

೧೭. ಡಾ. ಎಫ್.ಟಿ. ಹಳ್ಳಿಕೇರಿ ಅವರ 'ಕುರುಬರ ಗುರು ಶಾಂತಮುತ್ತಯ್ಯ' ಎಂಬ ಲೇಖನದಲ್ಲಿ ಶಾಂತಮುತ್ತಯ್ಯನ ಜೀವನವನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಊರಿನ ಹೊರಗೆ ಹಾಕಲ್ಪಟ್ಟ ಕುರುಬರನ್ನು, ಮರಳಿ ಕಲ್ಯಾಣಕ್ಕೆ ಬರುವಂತೆ ಮಾಡಿದ ಕಥೆಯ ಸ್ವಾರಸ್ಯವನ್ನು ಚರ್ಚಿಸಲಾಗಿದೆ.

೧೮. ಡಾ.ಎಫ್.ಟಿ. ಹಳ್ಳಿಕೇರಿ ಅವರ 'ತಗರ ಪವಾಡ: ಶಾಂತಮುತ್ತಯ್ಯ ಚರಿತ್ರೆ' ಲೇಖನಗಳ ಸಂಗ್ರಹದಲ್ಲಿ 'ತಗರ ಪವಾಡ; ಶಾಂತಮುತ್ತಯ್ಯ ಚರಿತ್ರೆಯಲ್ಲಿ ಹೇಳುವ ಕೃತಿ'. ಈ ಲೇಖನದಲ್ಲಿ ತಗರ ಪವಾಡ ಕೃತಿಯಲ್ಲಿ ಬರುವ ೮ ಸಂಧಿಗಳನ್ನು ವಿವರವಾಗಿ ವಿವರಿಸಲಾಗಿದೆ. ಧಾರ್ಮಿಕವಾಗಿ, ಸಾಮಾಜಿಕವಾಗಿ ಶಾಂತಮುತ್ತಯ್ಯನ ಮಹತ್ವವನ್ನು ಲೇಖನದಲ್ಲಿ ವಿವರಿಸಲಾಗಿದೆ. ಸಿದ್ಧಮಂಕ ಚರಿತ್ರೆ ಎಂಬ ಲೇಖನದಲ್ಲಿ ಸಿದ್ಧಮಂಕ ಜೀವನದ ವಿಸ್ತಾರವನ್ನು ಕಾಣುತ್ತೇವೆ. ಚಾರಿತ್ರಿಕವಾಗಿ ಸಿದ್ಧಮಂಕನು ಬೆಳೆದ ಪರಿಯನ್ನು ವಿವರಿಸಲಾಗಿದೆ. ೧೨ನೇ ಶತಮಾನದ ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಸುವ ಲೇಖನವಾಗಿದೆ. ಶರಣರು ಸಿದ್ಧಮಂಕನ ಜೀವನದಲ್ಲಿ ಎಂತಹ ಪಾತ್ರವನ್ನು ವಹಿಸಿದ್ದಾರೆ ಎಂಬುದರ ಚರ್ಚೆಯ ವಿವರವಿದೆ.

೨.೩. ಪಿಎಚ್.ಡಿ ಮಹಾಪ್ರಬಂಧಗಳು

ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಡಾ.ಕೆ.ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಹುಲಿಗೆಮ್ಮ ಬಿ. ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಹಾಲುಮತ ಪುರಾಣಗಳು; ಸಾಂಸ್ಕೃತಿಕ ಅಧ್ಯಯನ' ಪ್ರಬಂಧವು ೬ ಅಧ್ಯಾಯಗಳನ್ನು ಒಳಗೊಂಡಿದೆ. ಜೈನ, ವೀರಶೈವ, ವೈದಿಕ, ಹಾಲುಮತ ಪುರಾಣಗಳ ಬಗ್ಗೆ ಚರ್ಚಿಸಲಾಗಿದೆ. ಇಂತಹ ಪುರಾಣಗಳು ಆಯಾ

ಸಮುದಾಯಕ್ಕೆ, ಧರ್ಮಕ್ಕೆ ಯಾವ ರೀತಿಯಾಗಿ ಸಂಬಂಧಿಸಿವೆ ಎಂಬುದನ್ನು ಉದಾಹರಿಸಲಾಗಿದೆ. ಹಾಲುಮತ ಪುರಾಣಗಳ ರಚನೆಗೆ ಕಾರಣವೇನು? ಹಾಲುಮತ ಪುರಾಣಗಳನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕ ಚರಿತ್ರೆಗಳನ್ನು ನಿರೂಪಿಸಲಾಗಿದೆ. ಹಾಲುಮತ ಪುರಾಣಗಳಲ್ಲಿನ ಸಾಂಸ್ಕೃತಿಕತೆಯೇ ಅಧ್ಯಯನ ವಸ್ತುವನ್ನಾಗಿಸಿಕೊಂಡಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡು ಗಡಿ ಪ್ರದೇಶಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಸರೂರು, ಬಂಕಾಪುರ, ಹುಲಜಂತಿ ಪ್ರದೇಶಗಳಿಗೆ ಭೇಟಿ ನೀಡಿ ಕ್ಷೇತ್ರ ಕಾರ್ಯವನ್ನೊಳಗೊಂಡಂತೆ, ಛಾಯಾಚಿತ್ರಗಳನ್ನು, ಮಾಹಿತಿಗಳನ್ನು ಸಂಗ್ರಹಿಸಿ ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಪ್ರಮುಖವಾಗಿ ಹಾಲುಮತ ಸಮುದಾಯದ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಹಾಲುಮತ ಪ್ರಾಚೀನತೆಯನ್ನು ಪುರಾಣಗಳ ಮೂಲಕ ಸೈದ್ಧಾಂತಿಕವಾಗಿ ನಿರೂಪಿಸಿದ್ದಾರೆ.

ಇವರ ಅಧ್ಯಯನವು ಹಾಲುಮತ ಪುರಾಣಗಳಲ್ಲಿ ಬರುವ ಪವಾಡ ಕಥೆಗಳ ಸ್ವರೂಪವನ್ನು ತಿಳಿಯಲು ಪೂರಕ ಆಕರವಾಗಿದೆ. ಹಾಲುಮತ ಪುರಾಣಗಳ ಸಾಂಸ್ಕೃತಿಕತೆಗೆ ಸಂಬಂಧಿಸಿದ ಅವರ ಅಧ್ಯಯನಕ್ಕಿಂತಲೂ, ಪ್ರಸ್ತುತ ನನ್ನ ಅಧ್ಯಯನವು ಅಧ್ಯಯನದ ಚೌಕಟನ್ನು ವಿಸ್ತೃತಗೊಳಿಸಿಕೊಳ್ಳಬೇಕು. ಹಾಗೆಯೇ ಅದರ ಇತಿಮಿತಿಗಳೇನು? ಎಂಬುದನ್ನು ಅರಿಯುವುದಕ್ಕೆ ಇದು ಮಾರ್ಗಸೂಚಿಯಾಗಿದೆ.

ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಎನ್.ತಮ್ಮಣ್ಣಗೌಡ ಅವರ ಮಾರ್ಗದರ್ಶನದಲ್ಲಿ ಸಿ.ನೀಲಕಂಠೇಗೌಡ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ "ಜನಪದ ಹಾಲುಮತ ಮಹಾಕಾವ್ಯದ ವಿಶ್ಲೇಷಣೆ" ಪ್ರಬಂಧವು ೬ ಅಧ್ಯಾಯಗಳನ್ನು ಒಳಗೊಂಡಿದೆ. ಹಾಲುಮತ ಪುರಾಣದ ಕಥಾವಸ್ತು ಮತ್ತು ಕಥೆಗಳ ಸ್ವರೂಪವನ್ನು ಹಾಗೂ ಅಲ್ಲಿಯ ಪುರಾಣಗಳ ಸೃಷ್ಟಿ, ಅಲ್ಲಿಯ ಸಂಸ್ಕೃತಿ, ಪವಾಡಗಳ ಸಂಗತಿಗಳನ್ನು ಚರ್ಚಿಸಲಾಗಿದೆ. ಈ ಪ್ರಬಂಧದಲ್ಲಿ ಹಾಲುಮತ ಹುಟ್ಟಿಗೆ ಕಾರಣ, ಕಾರಣೀಕವಾದ ಕಥೆ, ಹಾಲುಮತದ ಮೂಲ ಪುರುಷ ಶಾಂತಮುತ್ತಯ್ಯನ ವಿವರ, ನಾಯಕನಾದ ಬೀರಪ್ಪನ ವಿವರ, ಹಾಲುಮತದ ಸಾಂಸ್ಕೃತಿಕ ಜನರ ಜೀವನ, ಮದುವೆ ಶಾಸ್ತ್ರ–ಸಂಪ್ರದಾಯ ಹಬ್ಬ ಹರಿದಿನಗಳ ವಿಶ್ಲೇಷಣೆ ಮಾಡಲಾಗಿದೆ. ಒಟ್ಟಿನಲ್ಲಿ ಹೇಳಬೇಕಾದರೆ ಹಾಲುಮತದ ಹುಟ್ಟು ಅದರ ಬೆಳವಣಿಗೆ, ಹಾಲುಮತದಲ್ಲಿ ಹುಟ್ಟಿದ ಅವಧೂತರ ಪವಾಡ ಕಥೆಗಳನ್ನು ವಿಶ್ಲೇಷಿಸುವುದನ್ನು ಕಾಣುತ್ತೇವೆ.

ಇವರ ಅಧ್ಯಯನದಲ್ಲಿ ಜನಪದ ಹಾಲುಮತ ಪುರಾಣಗಳಲ್ಲಿ ಬರುವ ಕಥೆಗಳ ಸ್ವರೂಪ ವನ್ನು ಮಹಾಪುರಾಣವನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿ ಬರುವ ಪವಾಡ ಕಥೆಗಳು

ಡಾ. ಬಿ.ಆರ್.ಮಂಜುನಾಥ ಅವರ ಮಾರ್ಗದರ್ಶನದಲ್ಲಿ ಶ್ರೀಕಾಂತ ಅಮಲಪ್ಪರವರು ದ್ರಾವಿಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧವಾಗಿದೆ. ೪ ಅಧ್ಯಾಯಗಳಿವೆ, ಈ ಪ್ರಬಂಧದಲ್ಲಿ ಹಾಲುಮತಕ್ಕೆ ಸಂಬಂಧಿಸಿದ ಕ್ಷೇತ್ರಗಳು ಹೇಗೆ ಹುಟ್ಟಿದವು, ಅವುಗಳ ಮಹತ್ವವೇನು?, ಆ ಪ್ರದೇಶದ ಐತಿಹಾಸಿಕ ಕಥೆ ಏನು? ಎಂಬುದರ ಸ್ಥೂಲವಾದ ಉತ್ತರ ಹುಡುಕುವುದೇ ಈ ಪ್ರಬಂಧದ ಉದ್ದೇಶವಾಗಿದೆ. ಸಾಂಸ್ಕೃತಿಕ ಮಹಾಪುರುಷರ ಪ್ರದೇಶಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಈ ಕಾರ್ಯಕ್ಕೆ ಜನಪದ ಹಾಲುಮತ ಮಹಾಕಾವ್ಯದಲ್ಲಿನ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು, ಅವುಗಳ ವಿಶೇಷತೆಗಳ ಕುರಿತು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಈ ಪ್ರಬಂಧದಲ್ಲಿ ಬರುವ ಕೆಲವು ಐತಿಹಾಸಿಕ ಸ್ಥಳಗಳ, ಐತಿಹಾಸಿಕ ಕಥೆಗಳು ನನ್ನ ಅಧ್ಯಯನಕ್ಕೆ ಪೂರಕವಾಗಿರುವ ಕಾರಣ ನಾನು ಇದನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ. ಅಧ್ಯಯನಕ್ಕೆ ಪೂರಕವಾದ ಆಕರವಾಗಿವೆ. ಈ ಅಧ್ಯಯನಕ್ಕಿಂತಲೂ ನನ್ನ ಅಧ್ಯಯನದ ಚೌಕಟ್ಟು ವಿಸ್ತಾರವಾದುದು.

ಪ್ರೊ.ಡಿ. ಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ನಾಗರಾಜ ಹೊಸೂರಕರ್ ರವರು "ಮೈಲಾರಲಿಂಗನ ಆಚರಣೆ-ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಪ್ರಬಂಧವನ್ನು ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಹಾಲುಮತದಲ್ಲಿ ಪ್ರಸಿದ್ಧ ವ್ಯಕ್ತಿಯಾದ ಮೈಲಾರನನ್ನು ಪ್ರಮುಖವಾಗಿಟ್ಟುಕೊಂಡು, ಮೈಲಾರದಲ್ಲಿನ ಭಕ್ತರ ಭಕ್ತಿ, ಅಲ್ಲಿಯ ವಿಧಿ-ವಿಧಾನಗಳ ಬಗ್ಗೆ ವಿವರವಿದೆ. ಮೈಲಾರಕ್ಕೆ ಸಂಬಂಧಿಸಿದ ಇತಿಹಾಸ ಪುರಾಣಗಳ ಬಗ್ಗೆ ಚರ್ಚೆ ಇವೆ. ಮೈಲಾರನ ಹಿನ್ನೆಲೆ, ಪ್ರಾಚೀನತೆಯ ಬಗ್ಗೆ, ನಂಬಿಕೆಯ, ಪರಂಪರೆಯ ಬಗ್ಗೆ, ಜನರಲ್ಲಿ ಮೂಡಿದ ದೈವಾಂಶದ ವಿವರಗಳಿವೆ. ಮೈಲಾರಲಿಂಗನ ಬಳಿ ನಡೆಯುವ ಆಚರಣೆಗಳು, ಕೆಲವು ಪವಾಡಗಳ ವಿಶ್ಲೇಷಣೆಯನ್ನು ಕಾಣುತ್ತೇವೆ. ಪವಾಡಗಳನ್ನು ವಿಶ್ಲೇಷಿಸುವ ಕ್ರಮ ನನ್ನ ಅಧ್ಯಯನಕ್ಕೆ ಪೂರಕ ಆಕರವಾಗಿರುವ ಕಾರಣ ಇದನ್ನು ಮಾರ್ಗಸೂಚಿಯಾಗಿಸಿದ್ದೇನೆ.

ಡಾ. ಎಫ್.ಟಿ. ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ರಾಜಶ್ರೀ ಪಾಟೀಲರವರು "ಸರೂರು ಶಾಂತಮುತ್ತಯ್ಯ-ಒಂದು ಅಧ್ಯಯನ" ಎಂಬ ಪ್ರಬಂಧವನ್ನು ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಸರೂರು ಶಾಂತಮುತ್ತಯ್ಯನೆಂದೆ ಪ್ರಸಿದ್ಧಿಯಾದ ವ್ಯಕ್ತಿ ೧೨ನೇ ಶತಮಾನದಲ್ಲಿ ನಡೆದ ತಗರ ಪವಾಡದ ಮುಖ್ಯ ವ್ಯಕ್ತಿಯಾಗಿ, ಹಾಲುಮತದ ಮೂಲಪುರುಷನಾಗಿ, ಹಾಲುಮತ ದವರಿಗೆ ದಾರಿ ದೀಪವಾಗಿ, ಕಷ್ಟದಲ್ಲಿನ ಹಾಲುಮತದವರ ಪಾಲಿಗೆ ದೈವೀ ಪುರುಷನಾಗಿ ಬಂದ ಶಾಂತಮುತ್ತಯ್ಯನ ಪವಾಡಗಳು ಜೀವನ ಕ್ರಮದ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

ಚನ್ನಪ್ಪ ಕಟ್ಟಿ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧವಾದ "ಅಮೋಘ ಸಿದ್ಧ ಪರಂಪರೆ"ಯಲ್ಲಿ ಒಟ್ಟು ೬ ಅಧ್ಯಾಯಗಳಿವೆ. ಈ ಮಹಾಪ್ರಬಂಧದಲ್ಲಿ

೧೨ನೇ ಶತಮಾನದಲ್ಲಿ ನಡೆದ ಕುರುಬರ ಪರಂಪರೆಯ ಕುರಿತು ವಿಶ್ಲೇಷಣೆ ಇದೆ. ಅಮೋಘ ಸಿದ್ಧನ ಚರಿತ್ರೆಯನ್ನು ಅವನ ಪವಾಡಗಳನ್ನು ಬೆಳಕಿಗೆ ತರುವ ಮುಖ್ಯ ಉದ್ದೇಶ ಈ ಪ್ರಬಂಧದಲ್ಲಿ ಅಡಗಿವೆ. ಹಾಲುಮತದಲ್ಲಿ ಬರುವ ಅಮೋಘಸಿದ್ಧನ ದೇಶಿಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕಾರ್ಯವಾಗಿದೆ. ಅಮೋಘ ಸಿದ್ಧನನ್ನು ಕೈಲಾಸದಲ್ಲಿರುವ ಒಬ್ಬ ಗಂಧರ್ವನೇ ಎಂದು ಭಾವಿಸಿ ಯಾವುದೋ ಕಾರಣದಿಂದ ಭೂಲೋಕದಲ್ಲಿ ಹುಟ್ಟಿ, ಸಜ್ಜನರ ಉದ್ಧಾರಕ್ಕಾಗಿ ಮಾಡಿದ ಪ್ರತಿಯೊಂದು ಕಾರ್ಯಗಳನ್ನು ಕಥೆಗಳ ರೂಪದಲ್ಲಿ ನಮಗೆ ನೀಡಿದ ಮಹಾಪ್ರಬಂಧವಾಗಿದೆ. ಅಮೋಘಸಿದ್ಧ ಪರಂಪರೆಯ ಅವನು ಕೈಗೊಂಡ ಪವಾಡಗಳ ಕಥೆಗಳು ನನ್ನ ಅಧ್ಯಯನ ವಿಷಯದಲ್ಲಿ ಬರುವುದರಿಂದ, ನಾನು ಈ ಮಹಾಪ್ರಬಂಧವನ್ನು ನನ್ನ ಪೂರಕ(ವಸ್ತುವಾಗಿ)ಅಧ್ಯಯನವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

ಡಾ. ಜೆ.ಎಂ. ಹೆಗಡೆ ಅವರ ಮಾರ್ಗದರ್ಶನದಲ್ಲಿ ಶ್ರೀ ಎಂ.ಡಿ. ನಾಯ್ಕರವರು 'ಕನ್ನಡ ಜನಪದ ಮಹಾಕಾವ್ಯಗಳು ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ಮಹಾಪ್ರಬಂಧ ರಚಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಒಟ್ಟು ೦೮ ಅಧ್ಯಾಯಗಳಿವೆ. ಮಲೆಮಾದೇಶ್ವರ ಮಹಾಕಾವ್ಯ, ಮಂಟೇಸ್ವಾಮಿ ಮಹಾಕಾವ್ಯ, ಜುಂಜಪ್ಪ ಮಹಾಕಾವ್ಯ, ಮೈಲಾರಲಿಂಗನ ಕಾವ್ಯ, ಕೃಷ್ಣಗೊಲ್ಲರ ಮಹಾಕಾವ್ಯಗಳನ್ನು ಈ ಪ್ರಬಂಧದಲ್ಲಿ ಆಯ್ಕೆ ಮಾಡಿಕೊಂಡು ಅವುಗಳ ಕಥೆಗಳನ್ನು ಚಾರಿತ್ರಿಕವಾಗಿ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಎಲ್ಲಾ ಜನಾಂಗೀಯ ಸಂಸ್ಕೃತಿಯನ್ನು ತಿಳಿಯಲು ಸಾಂಸ್ಕೃತಿಕ ಹಿನ್ನೆಲೆಯ ಅಧ್ಯಯನವನ್ನು ಈ ಮಹಾಪ್ರಬಂಧದಲ್ಲಿ ಕಾಣುತ್ತೇವೆ. ಎಲ್ಲಾ ಮಹಾಕಾವ್ಯಗಳ ಅಧ್ಯಯನ, ವಿಶ್ಲೇಷಣೆಯ ವಿವರವಿದೆ. ನನ್ನ ಅಧ್ಯಯನಕ್ಕೆ (ಮೈಲಾರಲಿಂಗನ) ಹಾಲುಮತ ಮಹಾಕಾವ್ಯದಲ್ಲಿ ಬರುವ ಕೆಲವು ಕಥೆಗಳ ಸ್ವರೂಪವು ಪೂರಕವಾಗಿರುವ ಕಾರಣ ಈ ಮಹಾಪ್ರಬಂಧವನ್ನು ಅಧ್ಯಯನಕ್ಕೆ ಪೂರಕ ವಸ್ತುವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

ಡಾ. ಎಫ್.ಟಿ.ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಅನ್ನಪೂರ್ಣ ಗೋಸ್ಬಾಳರವರು "ಹಾಲುಮತ ಅಧ್ಯಯನದ ಆಕರಗಳು ಸ್ವರೂಪ ಮತ್ತು ವಿಶ್ಲೇಷಣೆ" ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಒಟ್ಟು ೭ ಅಧ್ಯಾಯಗಳಿವೆ. ಇಲ್ಲಿಯ ಉದ್ದೇಶ ಹಾಲುಮತ ಧರ್ಮವು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಬೆಳೆದು ನಿಂತ ಧರ್ಮವಾಗಿದೆ. ಇದರ ಇತಿಹಾಸವು ಮೌಖಿಕವಾಗಿ ಮತ್ತು ಲಿಖಿತವಾಗಿ ರಚನೆಗೊಳ್ಳುತ್ತಾ ಹೋಗಿದೆ. ಇಂತಹ ಆಕರಗಳ ಸ್ವರೂಪ ಮತ್ತು ವಿಶ್ಲೇಷಣೆಯನ್ನು ನಿರೂಪಿಸುವುದಾಗಿದೆ. ಈ ಮಹಾಪ್ರಬಂಧದಲ್ಲಿ ಬಂದ ಹಾಲುಮತ ಪುರಾಣಗಳ ಮಾಹಿತಿ ನನ್ನ ಅಧ್ಯಯನಕ್ಕೆ ಪೂರಕವಾಗಿದೆ. ಆದ್ದರಿಂದ ನಾನು ಇದನ್ನು ಆಯ್ದುಕೊಂಡಿದ್ದೇನೆ.

೨.೪. ಎಂ.ಫಿಲ್ ಪ್ರಬಂಧಗಳು

ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರದಿಂದ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ ಎಂ.ಫಿಲ್ ನಿಬಂಧನವಾಗಿದೆ. ಪ್ರಸ್ತುತ ನಿಬಂಧವು ಐದು ಅಧ್ಯಾಯಗಳನ್ನೊಳಗೊಂಡಿದೆ. ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪದ ವಿವೇಚನೆ ಇದೆ, ಎರಡನೆಯ ಅಧ್ಯಾಯದಲ್ಲಿ ಹಾಲುಮತದ ಪರಿಕಲ್ಪನೆಗಳಲ್ಲಿ ಬರುವ ಪುರುಷ ದೈವಗಳಾದ ಹಾಲಸಿದ್ದೇಶ್ವರ, ರಾಯಭಾಗದ ಶ್ರೀ ಬೀರೇಶ್ವರ, ಆಲಕೂರಿನ ಶ್ರೀ ಕರಿಸಿದ್ದೇಶ್ವರ, ಅಮೋಘ ಸಿದ್ದೇಶ್ವರರ ಅಧ್ಯಯನ ಮಾಡಲಾಗಿದೆ. ಹಾಲುಮತದಲ್ಲಿ ಇವರುಗಳ ತುಲನೆ ಮಾಡಿ, ಭಿನ್ನತೆಯನ್ನು ಗುರುತಿಸಲಾಗಿದೆ. ಪ್ರಸ್ತುತ ನಿಬಂಧವು ಜಾನಪದದ ಅಧ್ಯಯನವೇ ಆಗಿದೆ. ಕುರಿಗಳ ಮಹತ್ವ, ಅವುಗಳಿಂದಾಗುವ ಪ್ರಯೋಜನಗಳ ಸಂಗತಿಯೂ, ಜೊತೆಗೆ ರಾಯಭಾಗ ತಾಲೂಕಿನಲ್ಲಿ ಬರುವ ಹಾಲುಮತದವರ ನಂಬಿಕೆ, ಆಚರಣೆಗಳು, ಭಂಡಾರದ ಮಹತ್ವವನ್ನು ಕುರಿತ ವಿಶ್ಲೇಷಣೆಯನ್ನು ಕಾಣುತ್ತೇವೆ. ಪ್ರತಿಯೊಬ್ಬ ಪುರುಷ ದೇವರುಗಳನ್ನು ಹಾಲುಮತದಲ್ಲಿ ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಯಾವ ರೀತಿ ಕಂಡುಕೊಂಡಿದ್ದಾರೆ ಎಂಬ ವಿಷಯದ ಪ್ರಸ್ತಾಪವಿದೆ. ನನ್ನ ಅಧ್ಯಯನದಲ್ಲಿ ಬರುವ ಪವಾಡ ಕಥೆಗಳ ವಿಶ್ಲೇಷಣೆಗೆ ಪೂರಕವಾಗಿರುವ ಕಾರಣ ಈ ಮಹಾಪ್ರಬಂಧವನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ.

ಡಾ.ಎಫ್.ಟಿ.ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಹಂಪಿ ವಿಶ್ವವಿದ್ಯಾಲಯಕ್ಕೆ ವಿಜಯಶ್ರೀ ಇಟ್ಟಣ್ಣವರ ಸಲ್ಲಿಸಿದ ಸಂಪ್ರಬಂಧವಾಗಿದೆ. ಹಾಲುಮತಕ್ಕೆ ಅತೀ ಮುಖ್ಯವಾದ ವಸ್ತುವೆಂದರೆ ಕಂಬಳಿ. ಕಂಬಳಿಯನ್ನು ಹಾಲುಮತ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ಪ್ರಸ್ತುತ ನಿಬಂಧದಲ್ಲಿ ಹಲವು ಹಾಲುಮತ ಪುರಾಣಗಳಲ್ಲಿ ಕಂಬಳಿಯ ಮಹತ್ವವನ್ನು ಹಾಗೂ ಅದು ಸೃಷ್ಟಿಯಾದ ಕಥೆಯ ಸ್ವರೂಪವನ್ನು ಕಾಣುತ್ತೇವೆ. ಈ ಕಥೆಗಳ ಸ್ವರೂಪ, ವಿಶ್ಲೇಷಣೆ ನನ್ನ ವಿಷಯಕ್ಕೆ ಪೂರಕವಾಗಿರುವ ಕಾರಣ ಈ ಸಂಪ್ರಬಂಧವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

ಡಾ. ಬಿ.ಆರ್.ಮಂಜುನಾಥ ರವರ ಮಾರ್ಗದರ್ಶನದಲ್ಲಿ ಶ್ರೀಕಾಂತ ಅಮಲಪ್ಪ ರವರು ದ್ರಾವಿಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧವಾಗಿದೆ. ೪ ಅಧ್ಯಾಯಗಳಿವೆ, ಈ ಪ್ರಬಂಧದಲ್ಲಿ ಹಾಲುಮತಕ್ಕೆ ಸಂಬಂಧಿಸಿದ ಕ್ಷೇತ್ರಗಳು ಹೇಗೆ ಹುಟ್ಟಿದವು, ಅವುಗಳ ಮಹತ್ವವೇನು?, ಆ ಪ್ರದೇಶದ ಐತಿಹಾಸಿಕ ಕಥೆ ಏನು? ಎಂಬುದರ ಸ್ಥೂಲವಾದ ಉತ್ತರ ಹುಡುಕುವುದೇ ಈ

ಪ್ರಬಂಧದ ಉದ್ದೇಶವಾಗಿದೆ. ಸಾಂಸ್ಕೃತಿಕ ಮಹಾಪುರುಷರ ಪ್ರದೇಶಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಈ ಕಾರ್ಯಕ್ಕೆ ಜನಪದ ಹಾಲುಮತ ಮಹಾಕಾವ್ಯದಲ್ಲಿನ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು, ಅವುಗಳ ವಿಶೇಷತೆಗಳ ಕುರಿತು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಈ ಪ್ರಬಂಧದಲ್ಲಿ ಬರುವ ಕೆಲವು ಐತಿಹಾಸಿಕ ಸ್ಥಳಗಳ, ಐತಿಹಾಸಿಕ ಕಥೆಗಳು ನನ್ನ ಅಧ್ಯಯನಕ್ಕೆ ಪೂರಕವಾಗಿರುವ ಕಾರಣ ನಾನು ಇದನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ.

ಅಧ್ಯಾಯ: ಮೂರು

ಸಾಂಸ್ಕೃತಿಕ ಪುರಾಣಗಳ ಪರಿಕಲ್ಪನೆ

೩.೧ ಪೌರಾಣಿಕ

೩.೨. ಧಾರ್ಮಿಕ

೩.೩. ಸಾಮಾಜಿಕ

ಅಧ್ಯಾಯ: ಮೂರು

ಸಾಂಸ್ಕೃತಿಕ ಪುರಾಣಗಳ ಪರಿಕಲ್ಪನೆ

ಪುರಾಣಗಳು ಯಾವುದೇ ಸಂಸ್ಕೃತಿ ಧರ್ಮದಲ್ಲಿ ಅದಕ್ಕೆ ಸಂಬಂಧಿತ ದಂತಕಥೆಗಳ ಸಮೂಹಗಳಾಗಿವೆ. ಇವುಗಳು ಆಡು ಭಾಷೆಯ ರೂಪದಲ್ಲಿ, ಲಿಖಿತ ರೂಪದಲ್ಲಿ ಸಾಂಪ್ರದಾಯಿಕವಾಗಿ ತಲೆಮಾರುಗಳಿಂದ ತಲೆಮಾರುಗಳಿಗೆ ವರ್ಗಾಯಿಸಲ್ಪಡುತ್ತವೆ. ಅನೇಕ ಬಾರಿ ಇವುಗಳು ಸಂಸ್ಕೃತಿಯ–ಧರ್ಮದ ನಾಯಕ ದೇವತೆಗಳ ಅತಿಮಾನುಷ ಕಾರ್ಯಗಳನ್ನು ವರ್ಣಿಸುತ್ತವೆ.

ಪುರಾಣಗಳು ಪುರಾತನ ಹಿಂದೂ ಧರ್ಮದ ಒಂದು ಸಾಹಿತ್ಯ ಪ್ರಕಾರಗಳಾಗಿವೆ. ಇವು ವೇದಗಳಲ್ಲಿ ವರ್ಣಿಸಲಾದ ರಹಸ್ಯ, ಅರ್ಥಗಳನ್ನು ವಿವರವಾಗಿ ಬೋಧಿಸುವ ಗ್ರಂಥಗಳಾಗಿವೆ. ಪುರಾಣಗಳಲ್ಲಿ ಮಹಾಪುರಾಣವೆಂದು, ಪುರಾಣವೆಂದು ಎರಡು ಭೇದಗಳಿವೆ. ಪುರಾಣಗಳನ್ನು ಅನೇಕ ಮಂದಿ ಋಷಿಗಳು ಬೇರೆ ಬೇರೆ ಕಾಲದಲ್ಲಿ ರಚಿಸಿದರು.

ಪುರಾಣಗಳು ನಮ್ಮ ವೈದಿಕ ಧರ್ಮದ ಪ್ರಾಚೀನ ಗ್ರಂಥಗಳು. ಇವು ನಮ್ಮ ಇತಿಹಾಸ ಮತ್ತು ಭೌಗೋಳಿಕ ದಾಖಲೆಗಳಾಗಿವೆ. ಇವು ಒಂದು ದೊಡ್ಡ ವಿಶ್ವಕೋಶದಂತಿವೆ. ಇವು ಧಾರ್ಮಿಕ ಗ್ರಂಥಗಳಾಗಿಯೂ, ಮಾರ್ಗದರ್ಶನ ಮಾಡುತ್ತವೆ. ವೇದಕ್ಕಿರುವ ಅತ್ಯುನ್ನತ ಸ್ಥಾನ ಇವುಗಳಿಲ್ಲವಾದರೂ ವೇದಗಳ ಕ್ಲಿಷ್ಟ ಭಾಗವನ್ನು ತಿಳಿಯಲು ಪುರಾಣಗಳು ಸಹಕಾರಿಯಾಗಿವೆ. ವೇದಗಳಲ್ಲಿ ಪ್ರತಿಪಾದಿಸಲಾಗದ ರಹಸ್ಯಾರ್ಥಗಳನ್ನು ವಿವರಿಸಲೆಂದೇ ಪುರಾಣಗಳು ಬಂದವು. ಇವುಗಳನ್ನು ಬೇರೆ ಬೇರೆ ಋಷಿಗಳು ವಿಭಿನ್ನ ಕಾಲದಲ್ಲಿ ರಚಿಸಿದರು. ಇವುಗಳ ರಚನಕಾರರಲ್ಲಿ ವ್ಯಾಸರೇ ಮೊದಲಿನವರಾಗಿದ್ದಾರೆ.

ಪುರಾಣವು ಪುರಾದಿಂದ ಬಂದದ್ದು, ಪುರಾ ಎಂದರೆ ಹಳೆಯದು–ಪುರಾಣಗಳಲ್ಲಿ ಸ್ವರ್ಗ, ಪ್ರತಿಸ್ವರ್ಗ, ಮದ್ವಂತರಗಳ ವರ್ಣನೆಗಳ ವಿವರಣೆ ಇರಲೇಬೇಕು. Myth ಎನ್ನುವುದು ಗ್ರೀಕ್‌ನ Mythos ನಿಂದ ಬಂದಿದೆ. Mythos ಎಂದರೆ ಕತೆ, ನೀತಿಕತೆ, ಮಾತು ಎಂದರ್ಥ.

ಪುರಾಣಗಳು ಎಲ್ಲ ರೀತಿಯ ಜನಾಂಗಗಳಲ್ಲೂ ಉಂಟು. ಪುರಾಣ ಕಥೆಗಳು ಅತ್ಯಂತ ಸರಳವಾಗಿರುತ್ತವೆ. ಇವು ನೇರವಾಗಿ ಪ್ರಾಕೃತಿಕ ಶಕ್ತಿಗಳಿಗೆ ಸಂಬಂಧಿಸಿದವಾಗಿರುತ್ತವೆ. ಇವು ಜನರ ನಂಬಿಕೆ, ಶ್ರದ್ಧೆ, ಮೌಲ್ಯ ವ್ಯವಸ್ಥೆಗಳನ್ನು, ಆದರ್ಶಗಳನ್ನು ರೂಪಿಸುವ ಗುಣ ಹೊಂದಿದೆ. ಒಂದು ಸಮುದಾಯದ ಕಥೆಗಳಾಗಿವೆ. ಪುರಾಣಗಳು ಒಂದು ವರ್ಗದ ಹುಟ್ಟು, ವ್ಯಕ್ತಿಗಳ ಉಗಮವನ್ನು ಹೇಳುವ ಉದ್ದೇಶ ಹೊಂದಿವೆ.

ಭಾರತ ಸಾಹಿತ್ಯದಲ್ಲಿ ಪುರಾಣಗಳಿಗೆ ಅಗ್ರಸ್ಥಾನವಿದೆ. ಭಾರತೀಯ ಸಂಸ್ಕೃತಿಯನ್ನು ತಲೆ ಎತ್ತುವಂತೆ ಮಾಡುವ ಪುರಾಣಗಳು, ಹಿಂದೂ ಧರ್ಮಕ್ಕೆ ಪುರಾಣಗಳು ಪುರಾಣವಾಗಿವೆ.

Myth : a story presented as having accursed in previous age explaining the cosmological and supernatural traditions of the people, their God, Herms, cultural, traits, religious beliefs etc.[1]

ಪುರಾಣಗಳಿಂದ ಬರುವ ಪ್ರತಿಯೊಂದು ವಿಷಯವು ಸತ್ಯತೆಯಿಂದ ಕೂಡಿರುತ್ತದೆ ಎಂಬುದು ನಮ್ಮೆಲ್ಲರ ನಂಬಿಕೆ. ಪುರಾಣವು ಯಾವತ್ತೂ ಸತ್ಯಾಸತ್ಯತೆಯ ಬಗ್ಗೆ ಸಮರ್ಥಿಸಲು ಒಳಗಾಗುವುದಿಲ್ಲ. ಪುರಾಣಗಳಲ್ಲಿ ಬರುವ ಎಲ್ಲ ವಿಷಯಗಳನ್ನು ವೈಜ್ಞಾನಿಕವಾಗಿ, ತಾತ್ವಿಕವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಂದ ಮಾತ್ರಕ್ಕೆ ಪುರಾಣಗಳಲ್ಲಿ ಬರುವ ಕಥೆಗಳೆಲ್ಲ ಸುಳ್ಳಾಗಲಾರವು. ಕೆಲವು ಕಥೆಗಳು ಕಲ್ಪಿತವಾಗಿರುತ್ತವೆ. ಕಲ್ಪಿತವಾಗಿರುವ ಕಥೆಗಳು ಯಾವ ಕಾರಣಕ್ಕೂ ಜನರನ್ನು ತಪ್ಪು ದಾರಿಗೆ ಎಳೆಯಲಿಲ್ಲ. ಆದರೆ ಪುರಾಣಕಾರರು ಜನ ಒಳಿತಿಗಾಗಿ ಆ ಮಾರ್ಪಾಟನ್ನು ಮಾಡಿರುತ್ತಾರೆ.

ಪುರಾಣಗಳನ್ನು ನಾವು ವೇದಗಳ ಕಾಲದಿಂದಲೂ ಅನುಸುತ್ತಿರುವುದನ್ನು ಕಾಣುತ್ತೇವೆ. ವೇದ–ಉಪನಿಷತ್ತುಗಳ ಕಾಲದಲ್ಲಿ ಹುಟ್ಟಿದ ಇದು ಜನರ ಜೀವನ ಬದಲಾದಂತೆ, ಧಾರ್ಮಿಕವಾಗಿ ಆಚರಣೆಗಳು ಬದಲಾದಂತೆ, ಪುರಾಣಗಳ ಕಥೆಗಳೂ ಬದಲಾದವು. ಕಾಲದಿಂದ ಕಾಲಕ್ಕೆ ಇದರ ಪರಿ ಭಿನ್ನ ರೂಪ ಪಡೆಯುತ್ತ ಹೋಯಿತು.

ಪುರಾಣಗಳ ಹುಟ್ಟಿನ ಕುರಿತು ಹ್ಯೂರಸನ್ ಎಂಬುವವರು "All Myths were of historical origin and the god's were men who had performed great exploits or conferred benefits upon their follows"[2]ಎಂದು ಪುರಾಣದ ಇತಿಹಾಸ ಕುರಿತು ಹೇಳಲಾಗಿದೆ. ಪುರಾಣಗಳು ಧರ್ಮತೆಯನ್ನು ಎತ್ತಿ ಹಿಡಿಯುವ, ಮಾನವನ ಬುದ್ಧಿವಂತಿಕೆಯು ಸೃಜನತೆಯಿಂದ ಬೆಳೆಯಲು ಸಹಕಾರಿಯಾಗಿದೆ. ಧರ್ಮದ ಸಂಸ್ಕೃತಿಯನ್ನು ಒಂದು ಒಳ್ಳೆ

ಹಂತಕ್ಕೆ ಕರೆದೊಯ್ಯುವ ಕಾರ್ಯವನ್ನು ಪುರಾಣಗಳು ಮಾಡುತ್ತವೆ. ಪುರಾಣಗಳಲ್ಲಿ ಜನರ ಬದುಕಿನ ಚಟುವಟಿಕೆಗಳು, ಅವರ ನೋವು, ದುಃಖ–ದುಮ್ಮಾನಗಳನ್ನು ಪರಿಹರಿಸಿದ ವ್ಯಕ್ತಿಯ ಚಿತ್ರಣಗಳು ಬಿಂಬಿತವಾಗಿರುವುದು ಕಂಡು ಬರುತ್ತವೆ. ಪುರಾಣಗಳ ಮುಖ್ಯ ಉದ್ದೇಶ ಈ ಜಗತ್ತಿನ ಸೃಷ್ಟಿಯನ್ನು ಧರ್ಮಗಳನ್ನು, ಸಂಸ್ಕೃತಿ, ಸಂಪ್ರದಾಯಗಳನ್ನು ಕಾಪಾಡುವುದಾಗಿದೆ.

ಪುರಾಣಗಳನ್ನು ಓದಲುಬಹುದು, ರಾಗಬದ್ಧವಾಗಿ ಹಾಡಬಹುದು, ಪುರಾಣಕಾರರು ಹಬ್ಬ ಹರಿದಿನಗಳಲ್ಲಿ ಜನರ ಸಮ್ಮುಖದಲ್ಲಿ ರಾಗವಾಗಿ ಎಲ್ಲರಿಗೆ ಅರ್ಥವಾಗುವಂತೆ ಕ್ರಮಬದ್ಧವಾಗಿ ಹಾಡುತ್ತಾರೆ ಅಥವಾ ಓದುತ್ತಾರೆ. ಹಾಗೆಯೇ ಪುರಾಣಗಳನ್ನು ಕೇಳಿದರೆ ಸಕಾಲದಲ್ಲಿ ಮಳೆ, ಬೆಳೆಯಾಗುತ್ತದೆ ಎಂಬ ಭಾವನೆ ಭಾರತೀಯರಲ್ಲಿ ಹಾಸುಹೊಕ್ಕಾಗಿದೆ. ಮಹಾಭಾರತ, ರಾಮಾಯಣ ಕಾಲದಿಂದಲೂ ಪುರಾಣಗಳ ಬಗ್ಗೆ ಉಲ್ಲೇಖವಿದೆ. ಅಂದಿನಿಂದ ಇಂದಿವರೆಗೂ ಪುರಾಣಗಳು ಜನಸಾಮಾನ್ಯರ ಮನಸ್ಸಿನಲ್ಲಿ, ದೈವತ್ವದ ಭಾವನೆಯೊಂದಿಗೆ ಹಚ್ಚ–ಹಸಿರಿನಿಂದ ಕೂಡಿವೆ.

"ಪುರಾಣಗಳಿಗೆ ಒಂದು ವಿಶೇಷ ಗುಣವಿದೆ. ಯಾವುದೇ ಪುರಾಣ ತಾನು ಹೇಳುತ್ತಿರುವುದು ಸತ್ಯ ಎಂದು ಸಮರ್ಥಿಸುವ ಪ್ರಯತ್ನ ಮಾಡುವುದಿಲ್ಲ. ತಾನು ಹೇಳುತ್ತಿರುವುದು ನಂಬುವಂತಿರಬೇಕು ಎಂದು ತಾರ್ಕಿಕವಾಗಿ, ವೈಚಾರಿಕವಾಗಿ ಒಪ್ಪಿಸಲು ಪ್ರಯತ್ನಿಸುವುದಿಲ್ಲ. ಪುರಾಣವು ಹೇಳುವ ಘಟನೆ ಎಷ್ಟೇ ಅದ್ಭುತವಾಗಿರಲಿ, ನಮಗೆ ಗೊತ್ತಿರುವ ಪ್ರಕೃತಿಯ ನಿಯಮಗಳಿಗೆ ವಿರೋಧವಾಗಲಿ, ಪುರಾಣಗಳು ಸುಮ್ಮನೆ ಹೇಳುತ್ತವೆ. ಪುರಾಣಕ್ಕೆ ಅದರದೇ ಆದ ಅಧಿಕಾರ, ಹೀಗೆ ಸಮರ್ಥಿಸಿಕೊಳ್ಳದೆ ತಾವೇ ಸತ್ಯ ಎಂಬಂತೆ ಇರುವುದರಿಂದ ಪ್ರಾಪ್ತವಾಗುತ್ತದೆ"[೩] ಪುರಾಣಗಳನ್ನು ಆಧರಿಸಿ, ಅವುಗಳನ್ನು ವಿಂಗಡಿಸಲಾಗಿದೆ.

೧. ಪುರಾಣಗಳು ಕಾಲ ಮತ್ತು ಋತು ಪರಿವರ್ತನೆ.

೨. ಪ್ರಕೃತಿಯ ವಸ್ತುಗಳು

೩. ಅಸಹಜ ಅಥವಾ ಅಸಾಮಾನ್ಯ ಕ್ರಿಯೆಗಳನ್ನು ವಿವರಿಸುವ ಪ್ರಯತ್ನ

೪. ವಸ್ತು, ವ್ಯಕ್ತಿ, ದೇವರುಗಳು, ಪ್ರಾಣಿಗಳ ಹುಟ್ಟು.

೫. ಅತಿಮಾನುಷದ ಪ್ರಭಾವದಿಂದ ವ್ಯಕ್ತಿ ಪ್ರಾಣಿಯಾಗಿ ಮತ್ತೆ ಮಾನವನಾಗಿ ಪರಿವರ್ತನೆ ಹೊಂದುವುದು.

೬. ಕುಟುಂಬಗಳ ಸಾಮಾಜಿಕ ಸ್ಥಿತಿಗಳಲ್ಲಿ ಅಥವಾ ವಿಶ್ವದ ಸೃಷ್ಟಿಯಲ್ಲಿ ಬದಲಾವಣೆ ತಂದ ದೈವಿಕ ನಾಯಕರ ಕಥೆ.

೭. ಅತಿಮಾನುಷ ನಂಬಿಕೆಯ ಪರಿಣಾಮವಾಗಿ ಹುಟ್ಟಿಕೊಂಡ ಸಾಮಾಜಿಕ ಸಂಸ್ಥೆಗಳು ಮತ್ತು ಅವುಗಳ ವಿವರಣೆ, ನಿಯಮಗಳು.

೮. ದೈವತ್ವ ಆರೋಪಿತ ಸಂಶೋಧನೆ ಉದಾಹರಣೆಗೆ ಬೆಂಕಿ ಕುರಿತು ಇರುವ ಕಥೆ.

೯. ರಾಕ್ಷಸರ ಕಥೆ.

೧೦. ಸಾವಿನ ನಂತರದ ಬದುಕನ್ನು ಕುರಿತ ಕಥೆ.

ಧಾರ್ಮಿಕ ನಂಬಿಕೆಯು ವಿವರಣೆಗಳನ್ನೊಳಗೊಂಡ ಚರಿತ್ರೆಯ ಅಂಶವನ್ನು ತೀರ ಸ್ಪಷ್ಟವಾಗಿ ಹೇಳಿರುವುದೇ ಪುರಾಣ" ಎಂದು ಓ.ಎಲ್.ನಾಗಭೂಷಣ ಸ್ವಾಮಿಯವರು ಹೇಳುತ್ತಾರೆ.

ಪುರಾಣಗಳು ಅತ್ಯಂತ ರೋಚಕವಾದ ಹಾಗೂ ಅದ್ಭುತವಾದ ಸಂಗತಿಗಳನ್ನು ಒಳಗೊಂಡಿವೆ. ಭೂಮಿಯನ್ನು ಅಷ್ಟದಿಗ್ಗಜರು-ಆದಿಶೇಷ-ಅಟ್ಲಾಸ್ ಹೊತ್ತಿರುವ ಕಲ್ಪನೆಯೇ ಅತ್ಯಂತ Romantic ಆದದ್ದು. ದೇವರು ಸೃಷ್ಟಿಸಿದ ಈತನ್ ತೋಟದಲ್ಲಿ ತಿನ್ನಬಾರದ ಹಣ್ಣು ತಿಂದದು, ಮನುಷ್ಯ ಸೃಷ್ಟಿಗೆ ಕಾರಣವಾದ ಕಲ್ಪನೆ. ಮೊದಲ ಮನುಷ್ಯನ ದೇಹ ಜೇಡಿ ಮಣ್ಣಿನಿಂದಾಯಿತು. ಹೆಂಗಸು ಅವನ ಮೂಳೆಯಿಂದ ಸೃಷ್ಟಿಯಾದಳು ಎನ್ನುವುದು. ಜಗತ್ ಪ್ರಳಯವಾಗಿ ಬರಿಯ ಎಲ್ಲೆಡೆ ತುಂಬಿದಾಗ ಆಲದೆಲೆಯ ಮೇಲೆ ದೇವರು ತೇಲಿ ಬಂದ ಎನ್ನುವುದು ಒಂದು ಪವಾಡದಂತೆ ಕಂಡುಬರುತ್ತದೆ ಎನ್ನುವ ವಿಚಾರಗಳು ಆಯಾ ಧರ್ಮದಲ್ಲಿ ಮಾನವ ಸೃಷ್ಟಿಯ ಬಗ್ಗೆ ಕಥೆಗಳಿವೆ. ಎಂದು ಓ.ಎಲ್. ನಾಗಭೂಷಣ ಸ್ವಾಮಿ ವರ್ಗೀಕರಿಸುತ್ತಾರೆ.

ಮಾನವನಲ್ಲಿ ಪ್ರಾಚೀನ ಕಾಲದಿಂದಲೂ ಪುರಾಣವೆಂಬ ಒಂದು ಪರಿಭಾವನೆ ಇದೆ. ಇದೊಂದು ಮಾನಸಿಕ ಪ್ರತಿಕ್ರಿಯೆಯಂತಿದೆ. ಎಲ್ಲ ಧರ್ಮಗಳಲ್ಲಿ ಇರುವಂತಥದ್ದು, ಆಶ್ಚರ್ಯಕರವಾದ ಸಂಗತಿಗಳೊಂದಿಗೆ ಭಯ-ಭಕ್ತಿಯಿಂದ ನಂಬುವ ಒಂದು ಪ್ರಕ್ರಿಯೆಯಾಗಿದೆ. ಪುರಾಣಗಳನ್ನು ಮಾನವ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಪುರಾಣಗಳು ಮೊದಲು ಮೌಖಿಕ ರೂಪವಾಗಿ ಜನಪದರಲ್ಲಿ ಬಾಯಿಂದ ಬಾಯಿಗೆ ಹರಡುತಿತ್ತು. ಜನರು ತಮ್ಮ ಜೀವನದ ಐತಿಹ್ಯಗಳನ್ನು, ಅನುಭವಗಳನ್ನು ಪುರಾಣಗಳಲ್ಲಿ ಅಭಿವ್ಯಕ್ತಿಸುತ್ತಿದ್ದರು. ಮಾನವನ ಪ್ರತಿಯೊಂದು ಜ್ಞಾನವು ಪುರಾಣಗಳಲ್ಲಿರುವುದನ್ನು ಕಾಣುತ್ತೇವೆ. ಸಾಂಸ್ಕೃತಿಕ ವೀರರ ಸಾಹಸ, ಪವಾಡಗಳು, ಜನಸಾಮಾನ್ಯರಿಗೆ ಮಾಡಿದ ಕಾರ್ಯಗಳನ್ನು ಪುರಾಣಗಳಲ್ಲಿ, ಪುರಾಣಕಾರರು ತಮ್ಮ ಅಭಿಪ್ರಾಯದೊಂದಿಗೆ, ಅನೇಕ ಹೊಸ ಸಂಗತಿಗಳನ್ನು ಸೇರಿಸುತ್ತಾ ಮೌಖಿಕವಾಗಿದ್ದ ಪುರಾಣಗಳನ್ನು ಬುದ್ಧಿವಂತರು ಸಂಗ್ರಹಿಸಿ ಪುರಾಣ ರೂಪದಲ್ಲಿ ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

೩.೧. ಪೌರಾಣಿಕ

ನಮ್ಮ ಭಾರತೀಯ ಸಂಸ್ಕೃತಿಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ವಿವಿಧ ಧರ್ಮಗಳಲ್ಲಿ ಅಧರ್ಮಗಳು ಅಧಿಕವಾದಾಗ ಧರ್ಮ ಯುದ್ಧಗಳೆ ನಡೆದು ಹೋದವು. ಇಂತಹ ಯುದ್ಧಗಳಿಂದಾಗಿ ಬೇಸತ್ತ ಜನರು ಕಾಣದ ಶಕ್ತಿಯೊಂದಕ್ಕೆ ಮೊರೆ ಹೋದರು. ಆ ಶಕ್ತಿಯೇ ಪರಮಾತ್ಮನ ಸ್ವರೂಪ ಪಡೆಯಿತು. ಆ ಪರಮಾತ್ಮನೆ ಅಧರ್ಮದ ವಿರುದ್ಧ ಹೋರಾಡುವ ವ್ಯಕ್ತಿಯಲ್ಲಿ ಅವತಾರಿ ಪುರುಷನಾಗಿ ಹುಟ್ಟಿ, ಅಧರ್ಮವನ್ನು ಹೋಗಲಾಡಿಸಿದ ಕೀರ್ತಿ ಅ ವ್ಯಕ್ತಿಗಳದ್ದು.. ಅವತಾರ ಪುರುಷರು, ಧರ್ಮಕ್ಕೆ ಮಾಡಿದ ಒಳ್ಳೆಯ ಕಾರ್ಯಗಳು, ಸಮಾಜದ ಸೇವೆ ಪುರಾಣಗಳಲ್ಲಿ ಕಥೆಗಳಾಗಿ ಹುಟ್ಟಿ, ಪವಾಡ ಕಥೆಗಳಾಗಿ ಮಾರ್ಪಟ್ಟು, ಇಂದು ಅನೇಕ ಉಪಕಥೆಗಳಾಗಿ ಸೃಷ್ಟಿಯಾಗಿವೆ. ದೇವರನ್ನು ನಂಬಿದವರು, ಧರ್ಮದಲ್ಲಿ ನಂಬಿಕೆಯುಳ್ಳವರು, ತಮ್ಮದೇ ಆದ ಒಳ ಮನಸ್ಸಿನಿಂದ ಧರ್ಮದ ವಿಸ್ತಾರತೆಯ ಕನಸು ಕಂಡವರೇ ಪವಾಡ ಪುರುಷರು. ಭಾರತೀಯ ಧರ್ಮಗಳು ಹಿಂದಿನಿಂದಲೂ ಧರ್ಮ ಗ್ರಂಥಗಳಾದ ರಾಮಾಯಣ, ಮಹಾಭಾರತ ಕಥೆಗಳನ್ನು ಕೇಳುತ್ತಾ ಬೆಳೆದವರು ನಾವು. ಪ್ರಾಚೀನ ಸಂಸ್ಕೃತಿಯ ಹಾಗೂ ಹಿರಿಯರು ಕಟ್ಟಿ ಕೊಟ್ಟ, ಪ್ರತಿಯೊಂದು ಹೆಜ್ಜೆಯ ಹಾದಿಯಲ್ಲಿ ಸಾಗಿದ ನಾವು ಶೋಷಣೆಗೆ ಒಳಪಟ್ಟಾಗ, ನಮ್ಮನ್ನು ಕಾಪಾಡಿದ ಬುದ್ಧ, ಮಹಾವೀರ, ಬಸವಣ್ಣ, ಗಾಂಧಿ, ವೀವೇಕಾನಂದ, ಅಂಬೇಡ್ಕರ್‌ರವರನ್ನು ಸಹ ನಾವು ಪವಾಡ ಪುರುಷರಂತೆ ಸಮೀಕರಿಸಿ, ಅವರ ಪ್ರತಿಯೊಂದು ಕಾರ್ಯವನ್ನು ಪವಾಡದಂತೆ ಕಾಣುತ್ತೇವೆ. ನಮ್ಮೆಲ್ಲ ಧರ್ಮವು ಹೇಳುವುದು ಒಂದೇ, ಅದುವೇ ಸಮಾಜದಲ್ಲಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವುದು. ಅದನ್ನೇ ನಮ್ಮ ಪವಾಡ ಪುರುಷರು ಮಾಡಿರುವುದು. ಅವರು ಪವಾಡ ಮಾಡಬೇಕೆಂಬ ಉದ್ದೇಶದಿಂದ ಯಾವುದೇ ಕೆಲಸವನ್ನು ಮಾಡಿರುವುದಿಲ್ಲ. ಕೇವಲ ಜನಸಾಮಾನ್ಯರಿಗೆ ಅದು ಉಪಯೋಗವಾದರೆ ಸಾಕು, ಧರ್ಮದ ಏಳಿಗೆಯ ಉದ್ದೇಶವನ್ನು ಇಟ್ಟುಕೊಂಡು, ಅವರು ಧರ್ಮದಲ್ಲಿ ಕೆಲವು ಬೋಧನೆಗಳನ್ನು ಬೋಧಿಸುತ್ತಾರೆ. ಹಾಗೆಯೇ ಜನಸಾಮಾನ್ಯರ ಕಷ್ಟಗಳನ್ನು ನಿಸ್ವಾರ್ಥದಿಂದ ಮಾಡುತ್ತಾರೆ.

ಇಂತಹ ಮಹಾಪುರುಷರು ಹಾಲುಮತದಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಬಾಳಿದ್ದಾರೆ. ಮಹಾಪುರುಷರು ತಾವು ಅನುಭವಿಸಿದ ಕಷ್ಟ–ನೋವು, ದುಃಖ–ದುಮ್ಮಾನ, ದಬ್ಬಾಳಿಕೆ, ಧರ್ಮದಲ್ಲಿನ ರೀತಿ–ನೀತಿಗಳ ವಿರುದ್ಧ ಖಂಡನೆ. ಇವುಗಳನ್ನೆಲ್ಲ ಅನುಭವಿಸಿದ ಮಹಾಪುರುಷರ ಕಾರ್ಯಗಳೇ ನಮ್ಮ ಪುರಾಣಗಳ ವಸ್ತುಗಳಾಗಿವೆ. ಇಂತಹ ಪುರುಷರು ತಮ್ಮದೇ ಆದ ಧರ್ಮದ ಸಂಸ್ಕೃತಿಯನ್ನು ಸಾರುವ ಮುಖ್ಯ ಕೇಂದ್ರ ಬಿಂದುವಾಗಿ ಬರಮಾಡಿದ್ದಾರೆ. ಮಹಾಪುರುಷರು ಮಾಡಿದ ಕೆಲಸ–ಕಾರ್ಯಗಳನ್ನೆಲ್ಲ ಪುರಾಣಕಾರರು ಅಂದರೆ ಕವಿ(ಕೃತಿಯ ಕರ್ತೃ) ತಮ್ಮ ಆಲೋಚನಾ

ಶಕ್ತಿಯಿಂದ, ಆ ಕಾರ್ಯಕ್ಕೊಂದು ಕಥೆಯನ್ನು ಕಟ್ಟಿದ್ದಾರೆ. ತನ್ನ ಸೃಜನತೆಯಿಂದ ಸಾಮಾನ್ಯ ವ್ಯಕ್ತಿ ಪವಾಡ ಪುರುಷನಾಗಿ ಸಮಾಜದಲ್ಲಿ ಭಿನ್ನವಾಗಿ ಕಾಣಬರುತ್ತಾನೆ. ನಮ್ಮ ಭಾರತೀಯ ಪ್ರತಿಯೊಂದು ಧರ್ಮದಲ್ಲೂ ಇಂತಹ ಮಹಾಪುರುಷರ ಪುರಾಣಗಳು ಕವಿಗಳ ಸೃಜನತೆಯಿಂದ ಹುಟ್ಟಿಕೊಂಡಿರುವ ಉದಾಹರಣೆಗಳು ಸಾಕಷ್ಟಿವೆ. ಹಾಗೆಯೇ ಹಾಲುಮತದಲ್ಲೂ ಇಂತಹ ಪುರಾಣಗಳು ಸೃಷ್ಟಿಯಾಗಿವೆ.

ವೈದಿಕ, ಜೈನ, ವೀರಶೈವ ಧರ್ಮಗಳಲ್ಲಿ ಸೃಷ್ಟಿಯಾಗಿರುವ ಪುರಾಣಗಳು ಅಧಿಕ. ಆದರೆ ಹಾಲುಮತ ಧರ್ಮದಲ್ಲಿ ಪುರಾಣಗಳ ರಚನೆ ಕಡಿಮೆ. ಹಿಂದಿನ ಕಾಲದಲ್ಲಿ ಮಠಗಳು ಸಾಕಷ್ಟು ಸಂಖ್ಯೆಯಲ್ಲಿರುವ ಸಮಯದಲ್ಲಿ ವೈದಿಕ, ಜೈನ, ವೀರಶೈವ ಪುರಾಣಗಳೇ ಮಠಗಳಲ್ಲಿ ಪ್ರಮುಖವಾಗಿ ಕಂಗೊಳಿಸುತ್ತಿದ್ದವು. ಜನಸಾಮಾನ್ಯರೆಲ್ಲರೂ ಇವುಗಳನ್ನೆ ತಮ್ಮವೆಂದು ಪೂಜಿಸುತ್ತಿದ್ದರು. ಕಾಲಕ್ರಮೇಣ ಹಾಲುಮತ ಸಮುದಾಯದಲ್ಲೂ ಪುರಾಣಕಾರರು ಹುಟ್ಟಿ ಸಮಾಜದಲ್ಲಿ ಹಾಲುಮತದ ಲಕ್ಷಣಗಳನ್ನು ಹೊರತಂದು ಅದಕ್ಕೊಂದು ಚಿತ್ರಣವನ್ನು ಹೊರತಂದರು.

ವೀರಶೈವ ಸಮುದಾಯದಲ್ಲಿ ಗುರು–ಲಿಂಗ–ಜಂಗಮಕ್ಕೆ ಪ್ರಾಶಸ್ತ್ಯ ನೀಡಿದರೆ, ಹಾಲುಮತದಲ್ಲಿ ಗುರು–ಶಿಷ್ಯರ ಸಂಬಂಧಕ್ಕೆ ಪ್ರಾಶಸ್ತ್ಯ ನೀಡಿದ್ದಾರೆ. ಗುರು–ಶಿಷ್ಯರಿಗೆ ಸಂಬಂಧಿಸಿದ ಹಲವು ಪವಾಡ ಕಥೆಗಳನ್ನು ನಾವು ಕಾಣುತ್ತೇವೆ.

ಹಾಲುಮತದ ಹಲವು ಪುರಾಣಗಳು, ಪೌರಾಣಿಕವಾಗಿಯೇ ಸೃಷ್ಟಿಯಾಗಿವೆ. ಹಾಲುಮತದ ಹುಟ್ಟಿನಿಂದಲೇ ಪೌರಾಣಿಕ ಕಥೆ ಪ್ರಾರಂಭವಾಗುತ್ತದೆ. ಶಿವ–ಪಾರ್ವತಿಯರು ಕೈಲಾಸದಿಂದ, ಭೂಲೋಕಕ್ಕೆ ಬಂದು, ಮುದ್ದವ್ವ–ಮುದ್ದಾಯಿಯರ ಸೃಷ್ಟಿಸಿದ ಕಥೆಯಿಂದ ಹಿಡಿದು ಅವರ ಸಂತತಿಯ ವೃದ್ಧಿ, ಬೀರಪ್ಪನ ವೃತ್ತಾಂತ, ಮಾಳಿಂಗರಾಯನ ವೃತ್ತಾಂತ, ಅಮೋಘಸಿದ್ಧನ ವೃತ್ತಾಂತ, ಹೀಗೆ ಹಲವರ ಕಥೆಗಳು ಪೌರಾಣಿಕ ನೆಲೆಯಲ್ಲಿಯೇ ಸೃಷ್ಟಿಯಾಗಿ ಬೆಳೆಯುತ್ತಾ ಒಂದು ಹಂತಕ್ಕೆ ಬಂದು ಚಾರಿತ್ರಿಕವಾಗಿ, ನೆಲೆ ನಿಂತಿದೆ. ಒಟ್ಟಿನಲ್ಲಿ ಹಾಲುಮತ ಧರ್ಮವು ಪೌರಾಣಿಕದಲ್ಲಿಯೇ ಹುಟ್ಟಿದೆ ಎಂದರೆ ತಪ್ಪಾಗಲಾರದು.

೩.೨. ಧಾರ್ಮಿಕ

"ಸಮಾಜದ ಜನರ ನಡತೆಯನ್ನು ನಿಯಂತ್ರಿಸುವ ನೈತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಸಂರಕ್ಷಿಸಿ ಪವಿತ್ರವನ್ನಾಗಿಸುವುದು ಧರ್ಮ."[೫] ಜನಸಾಮಾನ್ಯರಲ್ಲಿ ಧಯೆ, ಧರ್ಮ, ಸಹಾನುಭೂತಿ, ಸಹಕಾರ ಮನೋಭಾವನೆಗಳು ಧರ್ಮದಿಂದಲೇ ಸಾಧ್ಯ ಎಂಬ ವಿಚಾರವನ್ನು ಇಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಯಾವುದೇ ಧರ್ಮವು ನಂಬಿಕೆ

ಮತ್ತು ಆದರ್ಶಮಯವಾಗಿರುವ ಧರ್ಮಗಳಾಗಿರುತ್ತವೆ. ಧರ್ಮಗಳಲ್ಲಿ ವಿಭಿನ್ನ ಸಂಪ್ರದಾಯಗಳ ವಿಭಿನ್ನ ಆಚರಣೆಗಳ ವಿಭಿನ್ನ ಕಾರ್ಯಗಳನ್ನೊಗೊಂಡಿರುವುದನ್ನು ನಾವು ಕಾಣುತ್ತೇವೆ. ಧರ್ಮವು ಮನುಷ್ಯನಲ್ಲಿ ಭಕ್ತಿಭಾವ, ಲೌಕಿಕ, ಅಲೌಕಿಕ ಜೀವನದ ವ್ಯತ್ಯಾಸದ ಜೊತೆಗೆ, ನಂಬಿಕೆಯ ಮೇಲೆ ಬದ್ಧ ಜೀವನವನ್ನು ಕಟ್ಟಿ ಕೊಡುತ್ತದೆ.

ಮಾನವರ ನಂಬಿಕೆಯಲ್ಲಿರುವ ಹುಟ್ಟು–ಸಾವು, ಸ್ವರ್ಗ–ನರಕ, ದೈವ–ಭೂತಗಳ ಕಲ್ಪನೆಗಳಿಗೂ ಮೀರಿ ಧರ್ಮವು ಕಾರ್ಯನಿರ್ವಹಿಸುತ್ತದೆ. ವಿಭಿನ್ನ ಧರ್ಮಗಳಲ್ಲಿರುವ ನಾಡಿನಲ್ಲಿ ಬಹು ಸಂಸ್ಕೃತಿಯನ್ನು ಬಿಂಬಿಸುವ, ಸಂಸ್ಕೃತಿಯನ್ನು ಸಮಾಜಕ್ಕೆ ಕೊಡುಗೆಯಾಗಿ ಧರ್ಮವು ನಮಗೆ ನೀಡಿದೆ. ಸಮಾಜದ ಭಾಗವಾಗಿರುವ ಜನತೆಯು ಒಂದು ಸಮುದಾಯದಲ್ಲಿ ಒಟ್ಟುಗೂಡಿ, ಸಹ ಜೀವನದ ಕಲ್ಪನೆಯನ್ನು, ಸಮುದಾಯದಲ್ಲಿ ಇರುವ ವೈಶಿಷ್ಟತೆಯನ್ನು ನಾವು ಕಾಣುತ್ತೇವೆ.

ಅಲೆಮಾರಿ ಜೀವನ ನಡೆಸಿದ ಆದಿವಾಸಿಗಳು ಪ್ರಕೃತಿಯ ವಿಕೋಪಗಳಿಂದಾಗಿ ಕಾಣದ ಶಕ್ತಿಗೆ ಮಾರು ಹೋದರು. ಆ ಶಕ್ತಿಯೇ ದೇವರಾಗಿ, ಮುಂದೆ ಅದೊಂದು ಭಕ್ತಿಯ ಸ್ವರೂಪ ತಾಳಿ, ಪ್ರತಿಯೊಬ್ಬರಲ್ಲೂ ಧಾರ್ಮಿಕತೆ ಹುಟ್ಟಲು ಪ್ರೇರಣೆಯಾಯಿತು. ಆಗ ಜ್ಞಾನಿಯಾದ ಮಾನವ ತನ್ನ ಹುಟ್ಟಿಗೂ–ವಿಕಾಸಕ್ಕೂ ಆಗೋಚರವಾಗಿರುವ ಶಕ್ತಿಯೇ ಕಾರಣವೆಂದು ನಂಬಿದರು. ಈ ಶಕ್ತಿಯೇ ಪ್ರಕೃತಿಯಲ್ಲಿನ ಸರ್ವ ಜೀವಗಳ ಹುಟ್ಟಿಗೆ ಕಾರಣನು. ಹಿಂದೂ ಧರ್ಮದಲ್ಲಿ ಹುಟ್ಟು, ಜೀವನ, ಸಾವು ಈ ಮೂರಕ್ಕೂ ಒಬ್ಬೊಬ್ಬ ದೇವರನ್ನು ಹೆಸರಿಸುತ್ತೇವೆ. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಭಾವನೆಯು ಭಾರತೀಯ ಸಂಪ್ರದಾಯದಲ್ಲಿ ಈಗಲೂ ನಂಬುವ ವಿಷಯವಾಗಿದೆ. ಹೀಗೆ ದೇವರ ಶಕ್ತಿಯಲ್ಲೂ ಕಲ್ಪನೆಯ ಮೂಲಕವೋ, ನಿಜ ನೈಜತೆಯಿಂದಲೂ ಆನೇಕ ದೇವರುಗಳ ಮೇಲೆ ನಂಬಿಕೆ ಇಟ್ಟು ತಮ್ಮ ಜೀವನದಲ್ಲಿ ಬಂದ, ಕಷ್ಟ–ಕಾರ್ಪಣ್ಯಗಳ ಮುಕ್ತಿಗೆ ಅವರಲ್ಲಿಗೆ ಹೋಗಿ ಮೊರೆಯಿಡುವ ಸಂಗತಿ ಸರ್ವೆಸಾಮಾನ್ಯವಾಗಿದೆ. ಇದಕ್ಕೆಲ್ಲಾ ಮೂಲ ಕಾರಣ ಧರ್ಮ, ಧರ್ಮದಲ್ಲಿರುವ ದೇವರು. ಹೀಗೆ ಆದಿ ಮಾನವನ ಭಯದಿಂದಾಗಿ ಹುಟ್ಟಿದ ದೇವರ ಕಲ್ಪನೆ, ಮುಂದುವರೆಯುತ್ತಾ ಸಮಾಜದಲ್ಲಿ ತನ್ನದೆ ಆದ ಪರಿಕಲ್ಪನೆಯನ್ನು ಪಡೆದುಕೊಂಡಿದೆ.

೩.೩. ಸಾಮಾಜಿಕ

ಪುರಾಣಗಳು ಸಾಮಾಜಿಕ ಜೀವನಕ್ಕೆ ಕನ್ನಡಿಯಾಗಿವೆ. ನಮ್ಮ ಭಾರತೀಯ ಸಂಸ್ಕೃತಿಯು ಜನಪದರ ಬೀಡು. ಅವರ ಕಷ್ಟ–ಕಾರ್ಪಣ್ಯಗಳೇ, ಅವರ ಅನುಭವಗಳೇ ನಮಗೆ ಗಾದೆಗಳ ರೂಪದಲ್ಲಿ, ಒಗಟಿನ ರೂಪದಲ್ಲಿ, ಹೊರ ಹೊಮ್ಮಿವೆ. ಅವರು ಶ್ರಮ ಜೀವಿಗಳಾಗಿ ಅವರ ಶ್ರಮವನ್ನು ಹಾಡಿನ ಮೂಲಕ ವ್ಯಕ್ತಪಡಿಸಿ, ಅಲ್ಲೊಂದು ಮೌಖಿಕ ಸಾಹಿತ್ಯ ಸೃಷ್ಟಿಸಿದರು. ಈ

ಸಾಹಿತ್ಯ ಒಬ್ಬರ ಬಾಯಿಂದ ಬಾಯಿಗೆ ಹೋಗಿ, ಪ್ರಸಿದ್ಧಿ ಪಡೆಯಿತು. ಜನಸಾಮಾನ್ಯರು ತಮಗೆ ಬಂದ ಕಷ್ಟಗಳನ್ನು ಪರಿಹರಿಸಿದ ವ್ಯಕ್ತಿಯನ್ನೇ ಅವತಾರಿ ಪುರುಷನೆಂದು ಭಾವಿಸಿ, ದೇವರಂತೆ ಪೂಜಿಸತೊಡಗಿದರು. ಜನರು ತಮ್ಮ ಭಕ್ತಿಯಿಂದ ಅವರ ಬಗ್ಗೆ, ಅವರ ಜೀವನದ ಬಗ್ಗೆ, ಅವರ ಪವಾಡಗಳ ಬಗ್ಗೆ ಹಾಡತೊಡಗಿದರು. ಹೀಗೆ ಪುರಾಣವು ಮೌಖಿಕವಾಗಿ ಸೃಷ್ಟಿಯಾಗಿ ಮುಂದೆ ಅದು ಪುರಾಣಕಾರರ ಕೈ ಸೇರಿ ಪುರಾಣವಾಗಿ ಸಮಾಜದಲ್ಲಿ ಅದರದೇ ಆದ ಮಹತ್ವವನ್ನು ಪಡೆದುಕೊಂಡಿತು.

ಭಾರತದ ಹಲವು ಧರ್ಮಗಳಲ್ಲಿ ಪುರಾಣಗಳು ರಚನೆಯಾಗಿವೆ. ಮೌಖಿಕವಾಗಿ ರಚನೆಗೊಂಡಂತಹ ಪುರಾಣಗಳನ್ನು ಜನರು ತಮ್ಮ ಧರ್ಮದ ಉಳಿವಿಗಾಗಿ, ಲಿಖಿತ ರೂಪಕ್ಕೆ ತಂದರು. ಹೀಗೆ ಜನರು ಅಳಿಯುವಂತಹ ಧರ್ಮವನ್ನು ಉಳಿಸಿ ಬೆಳೆಸಿದರು. ಕೆಲವು ಬೌದ್ಧಿಕ ವ್ಯಕ್ತಿಗಳು ಸಮಾಜದಲ್ಲಿ ನಮ್ಮ ಧರ್ಮ ನೆಲೆಗೊಳ್ಳಬೇಕೆಂದರೆ ಅದಕ್ಕೆ ನಮ್ಮದೇ ಆದ ಸಂಸ್ಕೃತಿ, ರೀತಿ–ನೀತಿಗಳಿರಬೇಕು. ಜೊತೆಗೆ ಮಹಾಪುರುಷರ ಜೀವನದ ಕಥೆಗಳಿರಬೇಕೆಂದು ಪುರಾಣಗಳ ಸೃಷ್ಟಿಗೆ ಕಾರಣರಾದರು. ಪುರಾಣಕಾರರು ಮಹಾಪುರುಷರ ಜೀವನ ಶೈಲಿಯಲ್ಲಿ ಕೆಲವು ಭಿನ್ನತೆಗಳನ್ನು ಮಾಡಿ, ರಚಿಸಿದರು, ಆದರೆ ಅವು ಯಾವುದೂ ಸಮಾಜಕ್ಕೆ ಧಕ್ಕೆ ತಂದು ಕೊಟ್ಟಿಲ್ಲ. ಪುರಾಣಗಳಲ್ಲಿ ಬರುವ ಕಥೆಗಳಲ್ಲಿ ಕೇವಲ ಮನುಷ್ಯನ ಪಾತ್ರವಲ್ಲದೆ ಪ್ರಾಣಿ, ಪಕ್ಷಿಗಳ, ಪಂಚಭೂತಗಳ ಪಾತ್ರಗಳೂ ಪ್ರಮುಖವಾಗಿರುತ್ತದೆ.

ಸಮಾಜದಲ್ಲಿ ಪ್ರಮುಖವಾಗಿ ಸಂಸ್ಕೃತ ಭಾಷೆಯು ಪ್ರಾಶಸ್ತ್ಯವನ್ನು ಪಡೆದುಕೊಂಡಿತು. ಆ ಭಾಷೆಯ ಗ್ರಂಥಗಳೇ ಸಮಾಜದಲ್ಲಿ ಸಾಂಸ್ಕೃತಿಕವಾಗಿ ಅಗ್ರಗಣ್ಯ ಸ್ಥಾನದಲ್ಲಿತ್ತು. ಪುರಾಣಗಳಿಂದ ಹಿಡಿದು, ಅನ್ಯ ಗ್ರಂಥಗಳವರೆಗೆ ಸಂಸ್ಕೃತ ಭಾಷೆಯ ಸಂಪ್ರದಾಯವನ್ನೇ ಜನರು ನಂಬಿ. ಆ ನಂಬಿಕೆಯೊಳಗೆ ಬದುಕುತ್ತಿದ್ದರು. ಆದರೆ ಕಾಲ ಬದಲಾದಂತೆ ಸಮಾಜದಲ್ಲಿ ಆನೇಕ ಬದಲಾವಣೆಯನ್ನು ನಾವು ಧಾರ್ಮಿಕವಾಗಿ ತಂದುಕೊಂಡೆವು. ಸಮಾಜದ ನಾನಾ ಧರ್ಮಗಳಲ್ಲೂ ಪುರಾಣಗಳು ರಚನೆಯಾಗಲು, ಸಮಾಜದಲ್ಲಾಗುವ ಅನೀತಿಗಳಿಂದಾಗಿ ಅನಿವಾರ್ಯವಾದವು.

ಸಮಾಜದಲ್ಲಿ ಜನರು ತಮ್ಮ–ತಮ್ಮ ಅನುಕೂಲಕ್ಕೆ ತಕ್ಕಂತೆ ದೇವರ ಸ್ವರೂಪಗಳನ್ನು ಕಲ್ಪಿಸಿಕೊಳ್ಳಲು ಪ್ರಾರಂಭಿಸಿದರು. ಪುರಾಣಗಳಲ್ಲಿ ಬರುವ ಪ್ರತಿಯೊಬ್ಬ ಮಹಾಪುರುಷರು ಜನರ ಕಲ್ಪನೆಯಂತೆ ಸೃಷ್ಟಿಯಾದ ವ್ಯಕ್ತಿಗಳಾಗಿದ್ದಾರೆ. ಹಾಲುಮತದಲ್ಲೂ ಕೆಲವು ಕಲ್ಪನೆಗಳು ನಿಜವೆಂಬಂತೆ ಕಲ್ಪಿತವಾಗಿವೆ. ಹಾಲುಮತದ ಸೃಷ್ಟಿಯ ಸಂದರ್ಭದಲ್ಲಿ ಶಿವ–ಪಾರ್ವತಿಯೇ ಭೂಲೋಕಕ್ಕೆ ಬಂದು, ಶಿವ–ಪಾರ್ವತಿಯರು ಮೋಹಕ್ಕೊಳಗಾಗಿ ಪಾರ್ವತಿಯ ಎದೆ ಉಬ್ಬಿ, ಹಾಲು ಭೂಮಿಗೆ ಚೆಲ್ಲಿ, ಆ ಚೆಲ್ಲಿದ ಹಾಲಿನಿಂದ, ಎರಡು ಗೊಂಬೆಗಳನ್ನು ಮಾಡಿ, ಒಂದು

ಗಂಡು, ಒಂದು ಹೆಣ್ಣಾಗಿ ಮಾಡಿ ಗೊಂಬೆಗಳಿಗೆ ಜೀವ ತುಂಬಿ ಜೀವಗಳಿಸಿದ ಆ ಜೀವಗಳಿಗೆ ಹಾಲುಮತದವರೆಂದು ಹೆಸರಿಸಿದ ಕಥೆ ಕಾಲ್ಪನಿಕವಾಗಿಯೇ ಸೃಷ್ಟಿಯಾಗಿದೆ ಎಂಬುದು ನಮ್ಮ ಕಣ್ಣಮುಂದೆ ಕಾಣುತ್ತದೆ. ಈ ರೀತಿಯ ಹಲವು ಕಥೆಗಳನ್ನು ಹಾಲುಮತ ಪುರಾಣಗಳಲ್ಲಿ ಗಮನಿಸುತ್ತೇವೆ.

"ಈ ಭಾರತೀಯರಲ್ಲಿ ರೂಢವಾಗಿ ಬಂದಿರುವ ವರ್ಣಾಶ್ರಮಗಳಲ್ಲಿ ಪಾಕೃತ ವರ್ಣಾಶ್ರಮವೆಂದು, ಅಪ್ರಾಕೃತ ವರ್ಣಾಶ್ರಮವೆಂದು ಎರಡು ವಿಧ ಒಂದು ಬ್ರಹ್ಮನಿಂದಲೂ, ಮತ್ತೊಂದು ಶಿವನಿಂದಲೂ ಪ್ರತಿಪಾದಿಸಲ್ಪಟ್ಟಿವೆ. ಬ್ರಹ್ಮನಿಂದ ಹೇಳಲ್ಪಪಟ್ಟುದೇ ಪ್ರಾಕೃತ ವರ್ಣಾಶ್ರಮವೆನಿಸಲ್ಪಡುವುದು. ಪ್ರಾಕೃತ ವರ್ಣಾಶ್ರಮಿಗಳಿಗೆ ಉಪನಯನ ಪೂರ್ವಕವಾದ ತಂತ್ರಮಯ ಯಜ್ಞೋಪವೀತ ಧಾರಣ, ದೇವಯಜ್ಞ, ಋಷಿಯ ಜ್ಞಾನ, ಪಂಚಯಜ್ಞಗಳು, ವೈಷ್ಣವ ದೇವ ಪೂಜೆ, ಸಂಪಿಂಡೀಕರಣ ಗರ್ಭದಾನಾದಿ ಕರ್ಮಗಳು ಮುಂತಾದ ಪ್ರಾಕೃತ ಕರ್ಮಗಳು ಅನುಷ್ಠೀಯಗಳು, ಅಪ್ರಾಕೃತ ವರ್ಣಾಶ್ರಮಿಗಳಿಗೆ ಶಿವದೀಕ್ಷಾ ಪೂರ್ವಕ ಶಿವಲಿಂಗರೂಪ, ಯಜ್ಞೋಪಧಾರಣ, ತಪಸ್ಸು, ಗರ್ಭದಾನಾದಿ ಕರ್ಮಗಳು, ಅನುಷ್ಠೀಯಗಳಾಗಿವೆ"[?] ನಮ್ಮೆಲ್ಲರ ಪುರಾಣಗಳು ಏಕರೂಪತೆಯನ್ನು ಪಡೆದುಕೊಂಡಿರುವಂತಹವುಗಳು. ಸಮಾಜದ ಕೆಲ ಜನಸಮೂಹಗಳಿಂದ ಹಲವು ಧರ್ಮಗಳು ಸೃಷ್ಟಿಯಾಗಿ, ಹಲವು ಪುರಾಣಗಳು ರಚನೆಯಾಗಿವೆ. ಸಮಾಜದಲ್ಲಿ ಪ್ರತಿಯೊಬ್ಬರ ಸಂಪ್ರದಾಯದಲ್ಲೂ ಭಿನ್ನತೆಯನ್ನು ಕಾಣುತ್ತಿದ್ದೇವೆ. ಇದಕ್ಕೆಲ್ಲ ಪ್ರಮುಖವಾದ ಕಾರಣವೇನೆಂಬುದು ಖಚಿತತೆಯಿಂದ ನಮಗೆ ತಿಳಿಯದ ಸಂಗತಿಗಳಾಗಿವೆ. ನಮ್ಮ ಸಮಾಜದಲ್ಲಿ ಜಾತಿಗಳು ಹುಟ್ಟಿ, ಜಾತಿ–ಜಾತಿಯ ನಡುವೆ, ಮೇಲು–ಕೀಳುಗಳೆಂಬ ಭಾವನೆ ಹುಟ್ಟಿ, ನಮ್ಮ–ನಮ್ಮಲ್ಲಿಯೇ ಏಕತೆಯ ಸಂಸ್ಕೃತಿಯು ನಾಶವಾಗಿರುವುದು ನಮ್ಮ ಕಣ್ಣ ಮುಂದೆ ನಡೆಯುತ್ತಿದೆ.

ನಮ್ಮ ಭಾರತೀಯ ಪರಂಪರೆಯು ದ್ರಾವಿಡ ಕಾಲದಿಂದಲೂ ಸೃಷ್ಟಿಯಾಗಿದೆ. ದ್ರಾವಿಡ ಜನಾಂಗದಲ್ಲಿ ಶಿವ, ವಿಷ್ಣು ದೇವತೆಗಳನ್ನು ಸಮವಾಗಿ ಪೂಜಿಸುತ್ತಿದ್ದರು. ಬರು ಬರುತ್ತಾ 'ದ್ರಾವಿಡರ ಅವನತಿಗೆ ಲಯಕರ್ತ, ಕೊಳಕ, ಬೂದಿ ಬುಡಕದಡ್ಡ ಮುಂತಾಗಿಯೂ ಗುಣ ವಿಶೇಷಗಳನ್ನು ಆರೋಪಿಸಲು ಕಥೆಗಳನ್ನು ಕಟ್ಟಿರುವುದು. ಹಿಂದೂ ಸಾಂಸ್ಕೃತಿಕ ಇತಿಹಾಸದಿಂದ ಕಂಡುಕೊಳ್ಳಬಹುದು. ಈ ಹಿನ್ನೆಲೆಯಲ್ಲಿಯೇ ಅನೇಕ ಶೂರರು, ಶಿವ ಸ್ವರೂಪರಾಗಿಯೂ ಮತ್ತು ಅವನ ಸೇವಕ (ರಾಕ್ಷಸ)ರಾಗಿ ಪಟ್ಟಿ ಪಡೆಯಲು ಕಾರಣವಾಗಿದೆ. ಇದು ಜಗತ್ತಿನ ಅಸ್ತಿತ್ವಕ್ಕೆ ಕಾರಣವಾಗುತ್ತಾ ಸಮುದಾಯಗಳ ಅಸ್ತಿತ್ವವನ್ನು ಮಾಡತೊಡಗಿತ್ತು. ಪುರೋಹಿತರಾದ ಬ್ರಾಹ್ಮಣರು, ರಾಜಮಾನ್ಯರಾದ ಕ್ಷತ್ರಿಯರು, ಸಾಮಾನ್ಯರಾದ ವ್ಯವಸಾಯಗಾರರು, ವರ್ತಕರು, ಗುಲಾಮರಾದ, ಶೂದ್ರರೂ ಶ್ರೇಣೀಕೃತಿ ಜಾತಿ ಪದ್ಧತಿಯಿಂದ ಮತ್ತಷ್ಟು ಅಧೋಗತಿ ಹೊಂದಿದರು. ಆದ್ದರಿಂದ ಇವರು ಅಶುದ್ಧರಲ್ಲಿ ಮತ್ತು ಸಾಮಾಜಿಕ ಸ್ಥಾನಮಾನದ ಮಟ್ಟದಲ್ಲಿ ಜೀವಿಸುತ್ತಾರೆ.

ಪುನರ್ಜನ್ಮದ ಹಿನ್ನೆಲೆಯಲ್ಲೂ ಪುರಾಣಗಳು ಸೃಷ್ಟಿಯಾಗಿರುವುದನ್ನು ಕಾಣುತ್ತೇವೆ. ಸಾಮಾಜದಲ್ಲಿ ಜನರ ನಂಬಿಕೆಯೇ ಧರ್ಮದ ರೀತಿ–ನೀತಿಗಳಾಗಿವೆ. ಜನರು ದೇವರನ್ನು ಕಲ್ಪಿಸಿಕೊಂಡು, ಭಕ್ತಿಯಿಂದ ಅವರನ್ನು ಪೂಜಿಸಿ, ನಂಬಿಕೆಯ ಮೇಲೆಯೇ ಕಲ್ಪಿತವಾಗಿ ಕಥೆಗಳನ್ನು ಸೃಷ್ಟಿಸಿಕೊಂಡಿದ್ದಾರೆ. ನಡೆದ ಸಣ್ಣ ಘಟನೆಯನ್ನು ಪುರಾಣಕಾರರು ತಮ್ಮ ಧರ್ಮವನ್ನು ಸಮಾಜದಲ್ಲಿ ಉನ್ನತ ಮಟ್ಟಕ್ಕೇರಿಸುವ ಸಲುವಾಗಿ ಕಥೆಗಳನ್ನು ಕಲ್ಪಿತವಾಗಿ ಜನರಿಗೆ ನೀಡಿದ ಸಂಗತಿಯೂ ನಿಜ.

ಕೊನೆಟಿಪ್ಪಣಿಗಳು

೧. std Dictonary of Folk, Mythology Legend

೨. ಗೋಪಾಲಕೃಷ್ಣಯ್ಯ ಕೆ.ಎಲ್., **ಪುರಾಣ,** ಪು.೬

೩. ಬೋರಲಿಂಗಯ್ಯ ಹಿ.ಚಿ., **ವಿಸ್ಮೃತಿ ಮತ್ತು ಸಂಸ್ಕೃತಿ,** ಪು.೪೪

೪. ನಾಗಭೂಷಣಸ್ವಾಮಿ ಓ.ಎಲ್., **ವಿಮರ್ಶೆ ಪರಿಭಾಷೆ,** ಪು.೧೪೭

೫. ಯಳನಾಡು ಅಂಜನಪ್ಪ, **ಧರ್ಮ ಮತ್ತು ಮುಕ್ತ ವಿಚಾರ,** ಪು.೧೫

೬. ಅದೇ, ಪು.೧೫

ಅಧ್ಯಾಯ: ನಾಲ್ಕು

ಹಾಲುಮತ ಸಂಸ್ಕೃತಿಯ ಪುರಾಣಗಳ ಅಧ್ಯಯನ

೪.೧ ಹಾಲುಮತ ಸಂಸ್ಕೃತಿಯ ಹುಟ್ಟು ಮತ್ತು ಪ್ರಾಚೀನತೆ

೪.೨. ಹಾಲುಮತ ದೈವಗಳ ಪರಿಕಲ್ಪನೆ

೪.೩. ಹಾಲುಮತ ಸಂಸ್ಕೃತಿಯ ಸಾಮಾಜಿಕತೆ

ಅಧ್ಯಾಯ: ನಾಲ್ಕು

ಹಾಲುಮತ ಸಂಸ್ಕೃತಿಯ ಪುರಾಣಗಳ ಅಧ್ಯಯನ

೪.೧. ಹಾಲುಮತ ಸಂಸ್ಕೃತಿಯ ಹುಟ್ಟು ಮತ್ತು ಪ್ರಾಚೀನತೆ

ಪ್ರಪಂಚದಲ್ಲಿರುವ ನಾವೆಲ್ಲರಿಗೂ ದೇವರ ಕಲ್ಪನೆ ಯಾವುದೋ ರೀತಿಯಲ್ಲಿ ಅಡಗಿದೆ. ನಮ್ಮ ಸೃಷ್ಟಿ ಭೂಲೋಕದ ಸೃಷ್ಟಿ, ಭೂಲೋಕದಲ್ಲಿರುವ ಪ್ರತಿಯೊಂದು ಜೀವರಾಶಿಯ ಸೃಷ್ಟಿಗಳಿಗೆ ಸೃಷ್ಟಿಕರ್ತ ದೇವರು ಎಂಬ ನಂಬಿಕೆ ಪ್ರತಿಯೊಬ್ಬರದು. ನಾವೆಲ್ಲರೂ ಗೊಂಬೆಗಳು ಸೂತ್ರಧಾರ ದೇವರೆಂದು ನಾವೆಲ್ಲರೂ ನಂಬಿದದ್ದೇವೆ. ಸೃಷ್ಟಿಯಲ್ಲಿ ಆಗುವ ಅಗೋಚರ ಘಟನೆಗಳು, ಸಿಡಿಲು, ಗುಡುಗು, ಮಿಂಚು, ಭೂಕಂಪಗಳಿಗೆ ಕಾರಣ ದೇವರೇ, ದೇವರ ಕಲ್ಪನೆ ಹಿಂದಿನಿಂದಲೂ, ಈಗಿನವರೆಗೂ ನಂಬಿಕೆಯ ಮೇಲೆಯೇ ನಾವೆಲ್ಲ ಜೀವಿಸುತ್ತಿದ್ದೇವೆ. ಅದೇ ನಂಬಿಕೆಯನ್ನು ಉಳಿಸಿಕೊಂಡು ಬಂದಿದ್ದೇವೆ.

–ಜೊತೆಗೆ 'ದೇವನೊಬ್ಬ ನಾಮ ಹಲವು' ಎಂಬ ನಂಬಿಕೆಯಿಂದ ಮಾನವ ಜೀವಿಸುತ್ತಿದ್ದಾನೆ. ಜನಪದರಿಂದ ಹಿಡಿದು, ಆಧುನಿಕತೆಯವರೆಗೂ ದೇವರಿಗೆ ಹಲವು ನಾಮಗಳನ್ನು ನೀಡಿ ಪೂಜಿಸುತ್ತಿದ್ದೇವೆ. ಹಿಂದೂ ಧರ್ಮದಲ್ಲಿ ೩೩ ಕೋಟಿ ದೇವತೆಗಳು ಇದ್ದಾರೆ ಎಂದು ನಂಬುತ್ತೇವೆ. ಪುರಾಣಗಳಲ್ಲಿ ನಾವು ಅವರುಗಳ ಬಗ್ಗೆ ತಿಳಿಯುತ್ತೇವೆ. ಒಬ್ಬೊಬ್ಬ ದೇವರಿಗೆ ಒಂದೊಂದು ನಾಮವ ನೀಡಿ, ಅವರಿಗೆ ಒಂದು ಅಸ್ತಿತ್ವವನ್ನು ನೀಡಿ, ಅವರಿಗೊಂದು ಪವಾಡ ಕಥೆ ಸೃಷ್ಟಿಸಿ, ಪೂಜಿಸುತ್ತಿದ್ದೇವೆ. ಜಗತ್ತಿನಲ್ಲಿರುವ ಸಣ್ಣ ಸೂಕ್ಷ್ಮಾಣು ಜೀವಿಗಳಿಂದ ಹಿಡಿದು, ಅವುಗಳ ರಕ್ಷಕ ದೇವರೆಂದು ದೇವರ ಕಲ್ಪನೆಯೊಂದಿಗೆ ನಾವು ಜೀವಿಸುತ್ತಿದ್ದೇವೆ. ಇದು ಎಷ್ಟೋ ವರ್ಷಗಳ ಹಿಂದಿನ ಪ್ರಚಲಿತವಾಗಿರುವ ಸಂಗತಿಯಾಗಿದೆ. ನಮ್ಮ ಮಾನವರಲ್ಲಿ ಅಂಧಶ್ರದ್ಧೆಯಿಂದ ಹುಟ್ಟಿ, ವಿಕಾಸ ಹೊಂದಿ, ಎಲ್ಲ ಧರ್ಮದವರು ನಂಬುವ ನಂಬಿಕೆಗಳಾಗಿವೆ.

ಮಾನವ-ಮಾನವ ಸೃಷ್ಟಿಸಿದ ಧರ್ಮಗಳಲ್ಲಿ ಜಾತಿ-ವಿಜಾತಿಗಳೆಂಬ ವಿಭಾಗ ಸೃಷ್ಟಿಸಿ, ಧರ್ಮ-ಧರ್ಮವೆಂದು ಕಿತ್ತಾಡಿ ಸಾಯುತ್ತಿದ್ದೇವೆ. ಮಾನವ ಸಮಾಜದಲ್ಲಿ ನನ್ನ ಧರ್ಮ ಹಿರಿದು, ನನ್ನದು ಕೀಳೆರಿಮೆಯಿಂದ ಕೂಡಿದ್ದೂ ಎಂದು ತಮ್ಮಲ್ಲಿಯೇ ಹೋರಾಡಿಕೊಳ್ಳುತ್ತಾರೆ. ತಾರತಮ್ಯತೆಯಿಂದ ಮಾನವ ಜೀವಿಸುತ್ತಿದ್ದಾನೆ.

ಆಧುನಿಕತೆ ಇಲ್ಲದ ಕುಟುಂಬ ಜೀವನ ಮನುಷ್ಯತ್ವವನ್ನು, ಪ್ರಜ್ಞೆಯನ್ನು ಮೂಡಿಸುವುದು ಕ್ರಮವಾಗಿತ್ತು. ಪ್ರಾಚೀನ ಕಾಲದಲ್ಲಿ ಕಾರ್ಯಗಳ ಅನುಗುಣವಾಗಿ ಉದ್ಯೋಗವನ್ನು ವರ್ಗೀಕರಿಸಿಕೊಂಡು, ಸಮಾಜದಲ್ಲಿ ಜೀವಿಸುತ್ತಿದ್ದರು. ಅವರವರಿಗೆ ಬ್ರಾಹ್ಮಣ, ಕ್ಷತ್ರಿಯ, ಶೂದ್ರ, ಕುರುಬ, ಬೆಸ್ತ, ಬೇಡ ಹೀಗೆ ನಾನಾ ರೀತಿಯ ಧರ್ಮಗಳು ಸಮಾಜದಲ್ಲಿ ಹುಟ್ಟಿಕೊಂಡವು. ಸಮಾಜದಲ್ಲಿ ಕುರಿಗಳನ್ನು ಕಾಯುತ್ತ ಒಂದು ದೊಡ್ಡ ಸಮುದಾಯವಾಗಿ ಬೆಳೆದುನಿಂತ ಧರ್ಮವೇ ಹಾಲುಮತ ಧರ್ಮ.

೪.೨.೧. ಹಾಲುಮತದ ಪ್ರಾಚೀನತೆ

ಹಾಲುಮತದವರೆಂದೇ ಪ್ರಸಿದ್ಧಿಯಾಗಿರುವ ಕುರುಬರು ಇವರ ವೃತ್ತಿಯಿಂದಾಗಿ, ಈ ನಾಮ ವಿಶೇಷಣೆ ಬಂದಿದೆಯೋ? ಎಂಬ ಪ್ರಶ್ನೆ ನಮ್ಮಲ್ಲಿ ಉಂಟು ಮಾಡುತ್ತದೆ. ಕುರುಬರು ಕುರಿಗಳನ್ನು ಕಾಯುತ್ತಾ ಪರ್ವತಗಳಲ್ಲಿ, ಬೆಟ್ಟ, ಗುಡ್ಡಗಳಲ್ಲಿ ಅಲೆದಾಡುವುದು ಅವರಿಗೆ ಅನಿವಾರ್ಯವಾಯಿತು. ಅವರು ಕಾಡಿನಲ್ಲಿ, ಗುಡ್ಡ-ಬೆಟ್ಟಗಳಲ್ಲಿ ಅಲೆದಾಡುವುದರಿಂದ, ಅವರ ಆಚಾರ-ವಿಚಾರ, ಸಂಸ್ಕೃತಿ, ವೇಷ-ಭೂಷಣಗಳೆಲ್ಲ ಭಿನ್ನವಾಗಿದ್ದವು. ಮಳೆ, ಬಿಸಿಲು, ಚಳಿಗೆ ಮೈ ಹೊಂದಿಕೊಳ್ಳಲು ಅವರು ಒರಟಾದ ಉಡುಪುಗಳನ್ನು ಧರಿಸುತ್ತಿದ್ದರು. ಇವರು ಯಾವತ್ತೂ ವೈಭವದ ಜೀವನವನ್ನು ನಡೆಸಿದವರು ಅಲ್ಲ. ಮುಗ್ಧತೆಯಿಂದ ಕುರಿಗಳ ಪೋಷಣೆಯಲ್ಲಿಯೇ ಕಾಲ ಕಳೆಯುತ್ತಿದ್ದರು. ಇವರದೇ ಆದ ಪರಂಪರೆಯಲ್ಲಿ ಬೆಳೆಯುತ್ತಾ ಬಂದು ಕುರುಬಗೌಡರಾಗಿ ಪ್ರಸಿದ್ಧರಾದರು. ಈ ಜನಾಂಗದವರಿಗೆ ಕುರಿಯೇ ಲಕ್ಷ್ಮಿ, ಅನ್ನ ನೀಡುವ ಮುಗ್ಧ ಪ್ರಾಣಿಯೆಂದು ಭಾವಿಸಿ ಭಕ್ತಿ-ಶ್ರದ್ಧೆಯಿಂದ ತಮ್ಮ ಕಾಯಕವನ್ನು ಚಾಚೂ ತಪ್ಪದೇ ಮಾಡುತ್ತಾರೆ. ಕುರುಬರನ್ನು ಸಮಾಜದಲ್ಲಿ ಅತಿ ಗೌರವದಿಂದ ಕಾಣುತ್ತಾರೆ. ಯಾವುದೇ ಒಂದು ಶುಭಕಾರ್ಯದಲ್ಲೂ, ಶುಭ ಕೆಲಸವನ್ನು ಆರಂಭಗೊಳಿಸುವಾಗಲೂ, ದಿನ ನಿತ್ಯದ ವ್ಯಾಪಾರದಲ್ಲೂ ಇವರ ಕೈಯಿಂದಲೇ ಮೊದಲು ವ್ಯಾಪಾರ ಮಾಡಿಸುತ್ತಿದ್ದಾರೆ. ಲಾಭ ಬರುತ್ತದೆ ಎಂಬ ನಂಬಿಕೆ ಹಿಂದಿನಿಂದಲೂ, ಈಗಿನವರೆಗೂ ನಡೆದುಕೊಂಡು ಬಂದಿದೆ. ಕುರುಬರನ್ನು ಒಂದೊಂದು ಪ್ರಾಂತ್ಯದಲ್ಲೂ ಒಂದೊಂದು ಹೆಸರಿನಿಂದ ಕರೆಯುತ್ತಾರೆ ಎಂಬ ವಿವರ ಈ ಕೆಳಗಿನಂತಿದೆ.

- "ಈ ಜನಾಂಗ ವೇದ ಕಾಲದಲ್ಲಿಯೇ ಒಳ್ಳೆ ಹೆಸರನ್ನು ಹೊಂದಿದ್ದಾಗಿತ್ತೆಂದು, ಅದು ಕ್ರಿ.ಪೂ ೧೨೦೦-೨೦೦೦ ವರ್ಷಗಳ ಪ್ರಾಚೀನವಾಗಿತ್ತೆಂದು ಸಂಶೋಧಕರಾದ ಶಂ.ಭಾ. ಜೋಷಿಯವರ ತಮ್ಮ ಹಾಲುಮತ ದರ್ಶನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ"[೧]
- "ಸುಮಾರು ಎರಡನೆಯ ಶತಮಾನದ ಕವಿಯೊಬ್ಬ ಯಾದವ ಸ್ತ್ರೀಯರನ್ನು 'ಅಂಡರ್ ಮಹಿಳಾದ' ಎಂದು ಕರೆದಿರುವುದರಿಂದ ಗೋವಳರಾದ ಯಾದವರು ಕೂಡ ಅಂಥ ಕುರುಬ ಪಂಗಡಕ್ಕೆ ಸೇರಿದವರೆಂದು ಡಾ.ಕೃಷ್ಣಸ್ವಾಮಿರವರು ತಿಳಿಸಿದ್ದಾರೆ"[೨]
- ಇಲಿಯಟ್‌ರ ಅಭಿಪ್ರಾಯದಂತೆ "ಈ ಜನಾಂಗದ ಪ್ರಾಚೀನತೆಯನ್ನು ಕ್ರಿ.ಪೂ.೪೦೦೦-೫೦೦೦ ವರ್ಷದಷ್ಟು ನಿರ್ಣಯಿಸುತ್ತಾನೆ ಕೌರವ-ಪಾಂಡವರಾಗಿ ಈ ಜನವೇ ವಿಭಾಗಿ ಸಲ್ಪಟ್ಟವರೆಂದು, ಕೆಲ ಪಂಡಿತರ ಅಭಿಪ್ರಾಯದಂತೆ, ಕೌರವರೇ ಕಾಲಕ್ರಮೇಣ ಕೌರವ-ಕುರುಬ-ಕುರುಬ ಎಂದು ಪರಿವನೆಯಾಗಿರಬಹುದು. ಸಂಸ್ಕೃತ ಸಾಹಿತ್ಯದಲ್ಲಿ ಕುರುದೇವ ಎನ್ನುವ ಪದ ದೊರೆಯುತ್ತಿದ್ದು, ಆ ಪ್ರದೇಶ ಕುರುವಂಶವರಾದ ಕೌರವರಿಂದ ಆಳಲ್ಪಡುತ್ತಿದ್ದು, ಅವರೆ ಕುರುಬರೆಂದು ಹೇಳುವವರೂ ಇದ್ದಾರೆ. ಕುರು ಎನ್ನುವುದು 'ಪ' ಎನ್ನುವ ಪದದೊಂದಿಗೆ ಸೇರಿ **ಕುರುಪ, ಎಂದರೆ** ದ್ರಾವಿಡ ಭಾಷೆಯಲ್ಲಿ ಒಡೆಯ-ಪಾಲಕ ಎನ್ನುವ ಪದವನ್ನು ಮುಟ್ಟುತ್ತಿದೆ. ಕುರಿಯನ್ನು ಪಾಲನೆ ಮಾಡುವ ಕುರುಪ ಶಬ್ಧದೊಂದಿಗೆ ಕುರುಬ ಶಬ್ಧ ನಿಷ್ಪತ್ತಿಯಾಗಿದೆ ಎನ್ನುವ ಭಾಷಾ ಶಬ್ಧ ನಿರ್ಣಯವೂ ಆಗುತ್ತಿದೆ"[೩]

ಹೀಗೆ ಕೆಲ ವಿದ್ವಾಂಸರು ಕುರುಬರ ಪ್ರಾಚೀನತೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೪.೧.೨. ಹಾಲುಮತದ ಪ್ರಾಚೀನತೆಯ ಹುಟ್ಟು

ಒಂದಾನೊಂದು ದಿನ ಕೈಲಾಸ ಪರ್ವತದಲ್ಲಿ, ಭೃಂಗಿ ನಂದೀಶ್ವರರ ಸಮ್ಮುಖದಲ್ಲಿ ಶಿವ-ಪಾರ್ವತಿಯರು ವಿಶ್ರಾಂತಿಯಿಂದ ಕುಳಿತುಕೊಂಡಿರಲು ಪಾರ್ವತಿಯು ಕೈಲಾಸನಾಥನೇ ನಾನು ನಿಮ್ಮಲ್ಲಿ ಬಿನ್ನಹವನ್ನು ಮಾಡುವೆ ಎಂದಾಗ ಶಿವ ಆಗಲಿ ಪಾರ್ವತಿ ಏನು ಹೇಳೆಂದಾಗ, ಪಾರ್ವತಿಯು

"ಅಂದು ನಾವು ಭೂಲೋಕದಲ್ಲಿ ಸಂಚರಿಸುವಾಗ...
ಪರಶಿವನಿಗೆ ತಕ್ಷಣ ನೆನಪಾಯಿತು ಆ ಘಟನೆ...
ಅದು..."[೪]

ಹಿಂದೆ ಒಂದು ದಿನ ಭೂಲೋಕಕ್ಕೆ ಹೋಗಿ, ಪ್ರಕೃತಿಯ ಸೌಂದರ್ಯದ ಜೊತೆ-ಜೊತೆಗೆ ಸರೋವರದ ತಂಪಾದ ಗಾಳಿಯಲ್ಲಿ ತೇಲುತ್ತಾ, ವಿಶ್ರಾಂತಿ ಪಡೆಯುತ್ತಿರಲು, ಶಿವನ ಚೇಷ್ಟೆಯಿಂದ, ಪಾರ್ವತಿಯ ಕುಚದ್ವಯಗಳಿಂದ(ಮೊಲೆ) ಹಾಲು ಉಕ್ಕಿ ಭೂಮಿಯು ನೆನೆಯಲು, ಪಾರ್ವತಿಯು ತನ್ನೆರಡು ಕೈಗಳಿಂದ, ಮುಟ್ಟಿ ತುಂಬ ನೆನೆದ ಹಾಲಿನಿಂದ ಕೂಡಿದ ಮಣ್ಣನ್ನು ತೆಗೆದುಕೊಂಡು, ಎರಡು ಗೊಂಬೆಗಳನ್ನು ಮಾಡಿದಳು. ಬಲಗೈಯಲ್ಲಿರುವುದು ಗಂಡು ಗೊಂಬೆ, ಎಡಗೈಯಲ್ಲಿರುವುದು ಹೆಣ್ಣು ಗೊಂಬೆಯನ್ನಾಗಿ ಮಾಡಿದಳು. ಶಿವನಿಗೆ ಇಷ್ಟವಾಗಿ ಆ ಎರಡು ಗೊಂಬೆಗಳಿಗೆ ಜೀವ ನೀಡಿದಳು. ಪಾರ್ವತಿ ನಿನ್ನ ಎರಡು ಕಂದಗಳಿಗೆ ನಾಮಕರಣ ಮಾಡು ಎಂದಾಗ, ಪಾರ್ವತಿಯು ಮಕ್ಕಳಿಬ್ಬರನ್ನು ಎತ್ತಿ ಮುದ್ದಾಡಿ, ಮಕ್ಕಳೇ ಜಗತ್ತನ್ನೇ ನಿರ್ವಹಿಸುವ ಶಿವನೇ ನಿಮ್ಮ ತಂದೆ, ಅವಳ ಪತ್ನಿಯಾದ ಪಾರ್ವತಿ ದೇವಿಯು ನಿಮ್ಮ ತಾಯಿ ಎಂದು ಮುದ್ದಾಡಿ, ನನ್ನ ಕ್ಷೀರಧಾರೆಯಿಂದ ಹುಟ್ಟಿದ ಮುದ್ದು ಕಂದಗಳಿರಾ, ನೀವು ಹಾಲುಮತದವರಾಗಿ ಪ್ರಸಿದ್ಧಿಯಾಗಿ ಬದುಕಿ, ಹಾಲು ಕೆಡಬಹುದು, ಆದರೆ ಹಾಲುಮತ ಕೆಡದು ಎನ್ನುವ ಧರ್ಮ ಚಾರಿತ್ರ ಬೆಳಗಲಿ"[೨] ಎಂದು ಆ ಮಕ್ಕಳಿಗೆ ಮುದ್ದುಗೊಂಡ, ಮುದ್ದಾಯಿ ಎಂದು ನಾಮಕರಣ ಮಾಡಿದರು. ಮುಂದೆ ಆ ಮಕ್ಕಳ ಜವಾಬ್ದಾರಿಯ ಚಿಂತೆಯ ಮಾಡಿ, ಕೊನೆಗೆ ಮುದ್ದಗೊಂಡ, ಮುದ್ದಾಯಿಯರ ಪಾಲನೆಯನ್ನು ಕೌರವ ಋಷಿಗೆ ಒಪ್ಪಿಸಿ, ಮಕ್ಕಳಿಗೆ ಆಶೀರ್ವದಿಸಿ, ಕೈಲಾಸಕ್ಕೆ ತೆರಳಿದ ವಿಷಯವನ್ನು ಶಿವನು ನೆನೆದು ಪಾರ್ವತಿಗೆ ತಿಳಿಸಿದನು. ಆಗ ಪಾರ್ವತಿಯು ನೋಡಿ, ನನ್ನ ಅಂಶದಿಂದ ಹುಟ್ಟಿದ, ಆ ಮಕ್ಕಳಿಂದ ಹೊಸದೊಂದು ವಂಶ ಬೆಳೆಯಬೇಕಾಗಿದೆ, ಅವರನ್ನು ಸೃಷ್ಟಿಸಿರುವುದೇ ಕರ್ತವ್ಯವಲ್ಲ. ಈಗ ಅ ಮಕ್ಕಳು ಬೆಳೆದು ದೊಡ್ಡವರಾಗಿರುತ್ತಾರೆ. ಅಲ್ಲಿಗೆ ಹೋಗೋಣವೆಂದಳು. ಅವರಿಂದ ಭೂಲೋಕದಲ್ಲಿ ಅನೇಕ ಕಾರ್ಯಗಳು ನೆರವೇರುವುದು ಇದೆ. ಒಳ್ಳೆಯ ಶುಭ ಮುಹೂರ್ತದಲ್ಲಿ ಕೌರುಬ ಋಷಿಗಳ ಆಶ್ರಮಕ್ಕೆ ಹೋಗಿ ಅವರನ್ನು ವಿಚಾರಿಸೋಣವೆಂದು ನಿರ್ಧರಿಸಿ, ಶುಭ ಮುಹೂರ್ತದ ದಿನ ಶಿವ-ಪಾರ್ವತಿಯರು ಅಲ್ಲಿಗೆ ತೆರಳಿ ಮುದ್ದುಗೊಂಡ, ಮುದ್ದಾಯಿಯರ ವಿವಾಹ ಮಾಡಿಸಿ, ನಿಮ್ಮಿಂದ ಹಾಲುಮತದ ವಂಶ ಬೆಳೆಯಲಿ ಎಂದು ಹಾರೈಸಿ, ಭೂಲೋಕದ ಜಾಗೃತಪುರಕ್ಕೆ ಕಳುಹಿಸಿದರು.

ಜಾಗೃತಪುರದಲ್ಲಿ ಬೇರೊದು ದಂಪತಿಗಳು ಸುಖದಿಂದ ಜೀವಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಕೈಲಾಸದಲ್ಲೊಂದು ಘಟನೆ ನಡೆಯಿತು. ಕೈಲಾಸದ ಒಡ್ಡೋಲಗದಲ್ಲಿ ಎಲ್ಲರು ಇರಲು ಕುರೂಪಿ ಋಷಿಯೊಬ್ಬರನ್ನು ಕಂಡು ಗಂಧರ್ವರಿಬ್ಬರು, ಋಷಿಯನ್ನು ನೋಡಿ, ಅಪಹಾಸ್ಯ ಮಾಡಲು ಕುಪಿತನಾದ ಋಷಿಯು ಅವರಿಗೆ ಭೂಲೋಕದಲ್ಲಿ ಮಾನವರಾಗಿ ಹುಟ್ಟಿ ಜೀವಿಸಿ ಎಂದು ಶಾಪ ನೀಡಿದರು. ಗಂದರ್ವರಿಬ್ಬರು ತಮ್ಮ ತಪ್ಪಿನ ಅರಿವಾಗಿ, ಋಷಿಯ

ಬಳಿ ಕ್ಷಮೆಯಾಚಿಸಿ, ನಿಶಾಪವನ್ನು ಸೂಚಿಸಿ ಎಂದಾಗ ಋಷಿಯು ಅದು ನನ್ನಿಂದ ಸಾಧ್ಯವಾಗದು. ಶಿವನ ಬಳಿ ಹೋಗಿ ಕೇಳಿ ಎಂದರು, ಆಗ ಗಂದರ್ವರಿಬ್ಬರು ಶಿವನಲ್ಲಿಗೆ ಹೋದಾಗ, ಶಿವನು ಹೇಳುವನು ಭೂಲೋಕದಲ್ಲಿ ಜಾಗೃತಪುರವೆಂಬ ನಗರದಲ್ಲಿ ನನ್ನ-ಪಾರ್ವತಿಯ ಅಂಶದಿಂದ ಜನಿಸಿದ ಮುದ್ದುಗೊಂಡ-ಮುದ್ದಾಯಿ ಎಂಬ ದಂಪತಿಗಳಿದ್ದಾರೆ. ಮುದ್ದುಗೊಂಡನಿಗೆ ಒಬ್ಬ ತಂಗಿ, ಚುಂಚಲೆಯು ಇದ್ದಾಳೆ. ನಿಮ್ಮಿಬ್ಬರಲ್ಲಿ ಒಬ್ಬರು ಮುದ್ದುಗೊಂಡ, ಮುದ್ದಾಯಿಯರ ಉದರದಲ್ಲಿ ಹುಟ್ಟಿ, ಇನ್ನೊಬ್ಬರು ಚುಂಚಲೆಯ ಗರ್ಭದಲ್ಲಿ ಹುಟ್ಟಿ ಯೌವ್ವನಕ್ಕೆ ಬಂದಾಗ, ನೀವಿಬ್ಬರೂ ವಿವಾಹವಾಗಿ, ನಿಮ್ಮಿಬ್ಬರ ಉದರದಲ್ಲಿ ಪುಂಡಗೊಂಡ, ಆಯಗೊಂಡ, ಪಾಯಗೊಂಡ, ಮರಗೊಂಡರು ಜನಿಸಿ, ಕೊನೆಯ ಮಗನಾಗಿ ಶಿವಪದ್ಮನೆಂಬ ಮಗನು ರೇವಣ್ಣಸಿದ್ದನ ಆಶೀರ್ವಾದದೊಂದಿಗೆ ಜನಿಸುವನು. ಇವನಿಗೆ ಐದು ವರ್ಷನಿರುವಾಗಿನಿಂದ ಶಿವನ ಭಕ್ತಿಯಲ್ಲಿಯೇ ನಿರತನಾಗಿ ಕಾಲ ಕಳೆಯುತ್ತಿದನು. ಹೀಗೆಯೇ ಬೆಳೆಯುತ್ತಾ ಯೌವನಾವಸ್ಥೆಗೆ ಬಂದಾಗ ಅವನ ಇಚ್ಛೆಯಂತೆ ಜಂಕಾದೇವಿಯ ಜೊತೆ ವಿವಾಹ ಮಾಡಿಸುವರು. ಸದಾ ನನ್ನನ್ನು ಜಪಿಸುವ ಶಿವಪದ್ಮನು ರೇವಣ್ಣಸಿದ್ದನ ಕೃಪೆಯಿಂದ, ಕುಲದ ಉದ್ಧಾರಕ್ಕಾಗಿ ದುಡಿಯಲು ನಿರತನಾದಾಗ, ನಿಮ್ಮಿಬ್ಬರ ಶಾಪ-ನಿಶಾಪವಾಗಿ, ನೀವು ಕೈಲಾಸಕ್ಕೆ ಬರಬಹುದು ಎಂದು ಶಿವ ಗಂಧರ್ವರಿಬ್ಬರಲ್ಲಿ ನುಡಿವನು. ಆಗ ಗಂಧರ್ವರಿಬ್ಬರು ಶಿವನ ಆಜ್ಞೆಯಂತೆ ಭೂಲೋಕದಲ್ಲಿ ಜನಿಸಿದರು. ಕಾಲಾಂತರದಿಂದ ಇವರಿಗೆ ಶಿವನ ಕೃಪೆಯಿಂದ ವಿವಾಹವಾಗಿ ನಾಲ್ಕು ಮಕ್ಕಳ ನಂತರ, ಕೊನೆಯವನಾಗಿ ಶಿವಪದ್ಮನು ಜನಿಸುವನು. ಇವರ ನಾಲ್ಕು ಮಕ್ಕಳು ತಮ್ಮ-ತಮ್ಮ ಕೆಲಸಗಳಲ್ಲಿ ಯಾವಾಗಲೂ ನಿರತರಾಗಿರುತ್ತಿದರು. ಆದರೆ ಶಿವಪದ್ಮನು ಮಾತ್ರ ಯಾವಾಗಲೂ ಕೆಲಸವಿಲ್ಲದೆ ಕಾಲಹರಣ ಮಾಡುತ್ತಾ ಕಾಲ ಕಳೆಯುತ್ತಿರಲು, ಒಂದು ದಿನ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತಾಯಿ ಚುಂಚಲೆಯ ಮಾತಿನಂತೆ 'ಮಗು, ಶಿವಪದ್ಮ ನಿನ್ನಣ್ಣಂದಿರು ಇಲ್ಲದ ಪ್ರಯುಕ್ತ ನಿನಗೆ ಭೂಮಿ ಉಳುವ ಕಾರ್ಯ ಬಂದಿದೆ. ಆ ಮೂಲೆಯಲ್ಲಿರುವ ಹುತ್ತದ ತಂಟೆಗೆ ಹೋಗದೇ ನಿನ್ನ ಕೆಲಸ ಮಾಡಿಕೊಂಡು ಬಾ' ಎಂದು ಮನೆಗೆ ಹೋಗುತ್ತಾಳೆ."[೬] ಹೊಲಕ್ಕೆ ಹೋದ ಶಿವಪದ್ಮನು ನೇಗಿಲು ಹಾಕಿ, ಭೂಮಿ ಉಳುವಾಗ, ತಾಯಿ ಮಾತು ನೆನಪಾಗದೇ ನೇಗಿಲನ್ನು ಹುತ್ತಕ್ಕೆ ತಾಗಿಸಿದಾಗ, ಹುತ್ತದಿಂದ ಒಂದು ಪವಾಡವೇ ಆಗಿ ಹೋಯಿತು. ಹುತ್ತಿನಿಂದ ಬ್ಯಾ ಬ್ಯಾ ಎಂದು ಇರುವೆಯಂತೆ ನಾನಾ ವರ್ಣದ ಕುರಿಗಳ ಹಿಂಡೆ ಅರಚುತ್ತಾ ಬಂದವು. ಇವುಗಳನ್ನು ನೋಡಿದ ಶಿವಪದ್ಮನಿಗೆ ದಿಕ್ಕು ತೋಚದಂತಾಗಿ, ನಾನು ತಾಯಿಯ ಮಾತು ಮರೆಯಬಾರದಿತ್ತು ಎಂದು ಚಿಂತಿಸುತ್ತಿರಲು, ಅಲ್ಲಿಗೆ ಗುರು ರೇವಣ್ಣಸಿದ್ದರು ಆಗಮಿಸಿದರು. ಆಗ ಅವರು ಶಿವ ಸಂಕಲ್ಪ, ಇದಕ್ಕಾಗಿ ಚಿಂತಿಸಬೇಡ

ಶಿವಪದ್ಮ. "ಇಂದಿನಿಂದ ಇವುಗಳ ಪಾಲನೆಯ ಭಾರವೇ ನಿನ್ನ ಪರಮ ಕಾರ್ಯ. ಏನೂ ಅರಿಯದ ಸಭ್ಯ ಪ್ರಾಣಿ ಈ ಕುರಿ ಇದರಿಂದ ಮಾನವ ಲೋಕಕ್ಕೆ ಅನೇಕ ಹಿತವು ಉಂಟು. ಹುಲ್ಲು ತಿಂದು ಹಾಲು ಕೊಡುವ, ತಾನು ಚಳಿ–ಮಳೆ ಬಿಸಿಲನ್ನು ಸಹಿಸಿಕೊಂಡು ಅನ್ಯರಿಗೆ ತನ್ನ ತುಪ್ಪಳವನ್ನು ನೀಡಿ ಅಂಗರಕ್ಷಕವಾಗುವ ಪುಣ್ಯದ ಕೆಲಸ ಇದನ್ನು ನೀನು ಚೆನ್ನಾಗಿ ಮಾಡಿ ಹಾಲುಮತಸ್ಥರ ಕಾಮಧೇನುವಾಗಿ ಉದ್ಭವಿಸಿ ಬಂದ ಈ ಕುರಿಗಳನ್ನು ಪಾಲಿಸಿ, ಲೋಕದ ಹಿತಕ್ಕೆ ಕಾರಣನಾಗು. ನೀನು ಈ ಮುಗ್ಧ ಪ್ರಾಣಿಯಂತೆ ಮುಗ್ಧನಾಗಿಯೇ ಕುರುಬ ಎಂದರೆ ದಡ್ಡ ಎನ್ನುವ ಹೆಸರಾದರೂ ಮುಗ್ಧ ಎನ್ನುವ ವಿಶೇಷಣಕ್ಕೆ ಕಾರಣನಾಗು. ಶಾಂತಿ, ಸಮಾಧಾನ, ಪ್ರಾಮಾಣಿಕ, ಅಹಿಂಸಾ ಮೂರ್ತಿಯಾಗಿ ನಿನ್ನ ಹೆಸರು ಉಳಿಯಲಿ ಎಂದು ಆಶೀರ್ವದಿಸಿದರು."[೭]

ಒಂದು ಚಿಕ್ಕ ಹುತ್ತದಿಂದ ನಾನಾ ವರ್ಣದ ಕುರಿಗಳ ಬರುವಿಕೆಯನ್ನು ಕಂಡ ಶಿವಪದ್ಮನು ಗುರುಗಳಲ್ಲಿ ಆ ಕುರಿಗಳೆಲ್ಲ ಹುತ್ತದಲ್ಲಿ ಅಡಗಿದ ಕಥೆಯನ್ನು ಕೇಳಿದಾಗ ಗುರುಗಳು ಶಿವಪದ್ಮನಿಗೆ ಹೀಗೆ ತಿಳಿಹೇಳಿದರು. ಒಂದು ದಿನ ಕೈಲಾಸದಲ್ಲಿ ದೇವಾನು ದೇವತೆಗಳು ಸಭೆ ಸೇರಿದರು. ಇಂತಹ ಸಮಯದಲ್ಲಿ ಸುರನೊಬ್ಬ ಗಡಿಬಿಡಿಯಿಂದ ಬಂದು ಶಿವನಿಗೆ ಭಕ್ತಿ–ಭಾವದಿಂದ ನಮಸ್ಕರಿಸಿ, ಹಿಂದೆ ಸರಿಯುವಾಗ, ಅರಿಯದೇ ಋಷಿಯೊಬ್ಬನ ಕಾಲನ್ನು ತುಳಿದಾಗ ಋಷಿಯು ಕೋಪಗೊಂಡು, ನೀನು ಭೂಲೋಕದಲ್ಲಿ ಮಾನವನಾಗಿ ಜನಿಸು ಎಂದು ಶಾಪ ನೀಡುವನು, ಅವನು ಭಯಭೀತನಾಗಿ ಶಿವನ ಬಳಿ ಹೋಗಿ ಶಾಪಕ್ಕೆ ನಿಶ್ಯಾಪವನ್ನು ಬೇಡಲು, ಶಿವನು ನೀನು ಭೂಲೋಕದಲ್ಲಿ ಜಾವಾಲ ಋಷಿಯಾಗಿ ಜನಿಸಿ, ಘೋರ ತಪಸ್ಸನ್ನು ಮಾಡುತ್ತಿರುವಾಗಲೇ ಗಂಗಾಧರನೆಂಬ ಅರಸನ ಕಾರಣದಿಂದಾಗಿ ನಿನ್ನ ಶಾಪ ನಿಶ್ಯಾಪವಾಗುವುದು ಎಂದು ಶಿವ ಹೇಳುವನು. ಶಿವನ ಮಾತಿನಂತೆ ಸುರನು ಭೂಲೋಕದಲ್ಲಿ ಜಾವಾಲ ಋಷಿಯಾಗಿ ಜನಿಸಿ, ಉಗ್ರ ತಪಸ್ಸನು ಮಾಡುತ್ತಿರುತ್ತಾನೆ. ಅದೇ ಸಮಯಕ್ಕೆ ಅಲ್ಲಿನ ಅರಸನಾದ ಗಂಗಾಧರನಿಗೆ ಗಂಡು ಮಗು ಜನಿಸುವುದು. ಅವರು ಸಂತೋಷದಿಂದಿರಲು, ಶಿವನು ಮೃತ್ಯುದೇವತೆಗೆ ಆಜ್ಞೆಯ ನೀಡಿ, ಮಗುವಿನ ರುಂಡವನ್ನು ಕತ್ತರಿಸಿ, ಋಷಿಯ ಮುಂದಿಡಲು ಹೇಳುವನು. ತಪಸ್ಸಿನಲ್ಲಿರುವ ಋಷಿಗೆ ಇದರ ಪರಿವೆ ಇಲ್ಲದೆ ಕುಳಿತಿರುವರು. ಅರಮನೆಯ ರಾಣಿಯು ನಿದ್ರೆಯಿಂದ ಎದ್ದು ನೋಡಿದರೆ, ಮಗು ಇಲ್ಲದನ್ನು ಕಂಡು, ಎಲ್ಲ ಕಡೆ ಹುಡುಕಾಡುವರು. ರುಂಡವು ಋಷಿಯ ಮುಂದೆ ಇರುವುದನ್ನು ಕಂಡು, ಶಾಪಾಜ್ಞೆಯಂತೆ ನಿನ್ನ ರುಂಡವನ್ನು ಕತ್ತರಿಸಿ, ರಾಜನ ಬಳಿ ಒಯ್ಯುವಾಗ ಋಷಿಗೆ ಶಾಪದಿಂದ ಮುಕ್ತಿ ದೊರೆಯುತ್ತದೆ. ಇದೆಲ್ಲ ನಡೆದಾಗ ಋಷಿಯ ರಕ್ತದ ಕಣಗಳಿಂದ ಕುರಿಗಳು ಉದ್ಭವವಾದವು.

ಆಗ ಗಂಗಾಧರ ಅರಸನಿಗೆ ಗಾಬರಿಯಾಗಿ, ಇದೆಲ್ಲಾ ಲೋಕಪಾಲಕನಾದ ಶಿವನ ಮಹಿಮೆಯಾಗಿದೆ. ನನ್ನಿಂದ ಈ ತಪ್ಪಿಗೆ ಮೂಕ ಮುಗ್ಧ ಜೀವಿಗಳ ಬಲಿಕೊಡುವುದು ಬೇಡ ಎಂದು, ರಾಜರು ತನ್ನ ರಾಹುತರನ್ನು ಕುರಿ ಕಾಯಲು ನೇಮಿಸುವನು. ಕುರಿಗಳು ಚಂಚಲ ಸ್ವಭಾವದವುಗಳಾದರಿಂದ, ಕಾಡು-ಮೇಡು ಎನ್ನದೆ ಅವು ತಿರುಗಲು ರಾಹುತರಿಗೆ ಬೇಸರವಾಗಿ ಸೋತು ಹೋಗಿ, ರಾಜರ ಬಳಿ ಬಂದು ಇನ್ನು ಮುಂದೆ ಇಂತಹ ಕಾರ್ಯ ನಮ್ಮಿಂದ ಆಗದು ಎಂದರು. ಕೊನೆಗೆ ರಾಜನೇ ಕುರಿಗಳನ್ನು ಕಾಯಲು ಹೋಗಿ ಬೇಸರವಾಗಿ ಶಿವಪಾರ್ವತಿಯರಲ್ಲಿ ಮೊರೆ ಹೋದರು. ಆಗ ಅವರು ಪ್ರತ್ಯಕ್ಷವಾಗಿ ಬ್ರಹ್ಮನಿಗೆ, ವಿಷ್ಣುವಿಗೆ ಕುರಿ ಕಾಯಲು ಆಜ್ಞೆಯ ಮಾಡುವರು. ಇವರಿಬ್ಬರಿಗೂ ಕುರಿಗಳನ್ನು ಕಾಯ್ದು ಬೇಸತ್ತು ಶಿವನಲ್ಲಿಗೆ ಬಂದು, ಪರಮಾತ್ಮನೆ ಕುರಿಗಳನ್ನು ಕಾಯುವುದು ನಮ್ಮಿಂದ ಆಗದ ಕೆಲಸವೆಂದು ಹೇಳಿ ಅವರು ತಮ್ಮ-ತಮ್ಮ ನೆಲೆಗಳಿಗೆ ಹೊರಟು ಹೋದರು. ಆಗ ಶಿವನಿಗೆ ದಾರಿ ತೋಚದೆ ತಾನೇ ಕುರಿಗಳನ್ನು ಕಾಯಲು ಹೋಗಿ ಸುಸ್ತಾಗೆ, ಬೇಸರವಾಗಿ ಕುಳಿತಿರಲು, ಅಲ್ಲಿಗೆ ಪಾರ್ವತಿಯು ಬಂದು ನಾನು ಈ ಕುರಿಗಳನ್ನು ಕಾಯುವೆ ಎಂದು ಹೇಳಿ, ಕುರಿ ಕಾಯಲು ಹೋಗೆ ಕೊನೆಗೆ ಸಾಕಾಗಿ ಕುರಿಗಳನ್ನೆಲ್ಲಾ ಹುತ್ತದಲ್ಲಿ ಹಾಕಿ, ಬಚ್ಚಿಟ್ಟು ಹುತ್ತದ ಮೇಲೊಂದು ಮೂಗುತಿಯನ್ನು ಇಟ್ಟು, ಕೈಲಾಸಕ್ಕೆ ತೆರಳಿದಳು ಎಂದು ನಡೆದ ಸಂಗತಿಯನ್ನು ರೇವಣ್ಣಸಿದ್ದನು, ಶಿವಪದ್ಮನಿಗೆ ಹುತ್ತದಲ್ಲಿ ಕುರಿಗಳು ಬಂದುದರ ಕಥೆಯನ್ನು ವಿವರವಾಗಿ ತಿಳಿಸಿ, ಇನ್ನು ಮುಂದೆ ಇವುಗಳ ಜವಾಬ್ದಾರಿ ನಿನ್ನದು ಎಂದು ಹೇಳಿದನು.

ಶಿವಪದ್ಮನು ತ್ರಿಕಾಲ ಜ್ಞಾನಿಗಳಾದ ತ್ರಿಮೂರ್ತಿಗಳು ಕಾದ ಕುರಿಗಳನ್ನು ಕಾಯುವುದು ನನ್ನ ಪುಣ್ಯವೆಂದು ಕುರಿಗಳನ್ನು ಇನ್ನೇನು ಕಾಡಿಗೆ ಹೊಡೆದುಕೊಂಡು ಹೋಗಬೇಕೆನ್ನುವಷ್ಟರಲ್ಲಿ ಅಲ್ಲಿಗೆ ಅವನ ಹೆಂಡತಿಯಾದ ಜಿಂಕಾದೇವಿಯು ಬಂದು, ನಾನು ನಿಮ್ಮನ್ನು ಅನುಸರಿಸುತ್ತೇನೆಂದು ದುಂಬಾಲು ಹಿಡಿಯುವಳು. ಆಗ ಶಿವಪದ್ಮನು "ಬೇಡ ಜಿಂಕಾ, ನಾನು ಕೈಗೊಂಡ ವೃತ್ತಿ ಕಷ್ಟಕರವಾದದ್ದು, ಮನೆಯೆ, ಮಠವೇ? ಊರೇ ಉದ್ಯಾನವೇ ನೆಲವೇ ಹಾಸಿಗೆ ಅಗತ್ಯವೇ ಹೊದಿಕೆಯಾಗಿ ಚಳಿ-ಮಳೆ, ಗಾಳಿ-ಬಿಸಿಲೆನ್ನದೆ ಕಾಡು ಮೇಡಿನಲ್ಲಿ ಸುತ್ತುವ ತಾಪತ್ರಯವೇಕೆ? ನೀನು ಮನೆಯಲ್ಲಿ ಅತ್ತೆ ಮಾವಂದಿರೊಟ್ಟಿಗೆ ಸುಖವಾಗಿರು"[೮] ಎಂದು ಹೇಳಿದರು. ಜಿಂಕಾದೇವಿಯು ಕೇಳಿದೆ ನಾನು ನಿಮ್ಮ ಅರ್ಧಾಂಗಿ, ನಿಮ್ಮ ಕಷ್ಟ-ಸುಖದಲ್ಲಿ ಭಾಗಿಯಾಗಿರಬೇಕಾದುದು, ನನ್ನ ಕರ್ತವ್ಯವೆಂದು, ಹೇಳಿ ಇಬ್ಬರು ಸೇರಿ ಕುರಿಗಳನ್ನು ಕಾಯುತ್ತ ಕೊನೆಗೆ ಬಂಕಾಪುರಕ್ಕೆ ಬಂದರು.

ಕೈಲಾಸದಲ್ಲಾದ ಒಂದು ಘಟನೆಯನ್ನು ಇಲ್ಲಿ ನೋಡುತ್ತೇವೆ. ಶಿವನ ಸಭೆಯಲ್ಲಿ ಋಷಿಗಳು, ಭೃಂಗಿ ನಂದಿ ನಾರದರೆಲ್ಲರು ಸೇರಿರಲು, ಋಷಿಯನ್ನು ಕಂಡು ಮೂವರು ಗಂಧರ್ವರು ಚಪ್ಪಾಳೆ ತಟ್ಟಿ ಅಪಹಾಸ್ಯ ಮಾಡುವರು. ಇದರಿಂದ ಕ್ರೋದಗೊಂಡ ಮುನಿಯು ಭೂಲೋಕದಲ್ಲಿ ನರಜನ್ಮ ಪಡೆಯಿರಿ ಎಂದು ಶಾಪ ನೀಡುವನು. ಆಗ ಗಂಧರ್ವರಿಗೆ ತಮ್ಮ ತಪ್ಪಿನ ಅರಿವಾಗಿ, ಋಷಿಗಳು ದಯಮಾಡಿ ನಮ್ಮನ್ನು ಕ್ಷಮಿಸಿ ಶಾಪದಿಂದ ಮೋಕ್ಷ ನೀಡಿರೆಂದು ಬೇಡಲು, ನೀವು ಶಿವನ ಬಳಿ ಹೋಗಿ ಎಂದಾಗ, ಭಯಭೀತರಾದ ಅವರು ನಿಮ್ಮ ಶಾಪ ವಿಮೋಚನೆಯಾಗುವುದು. ಅಲ್ಲಿಯವರೆಗೆ ನೀವು ಶಾಪವನ್ನು ಅನುಭವಿಸಲೇಬೇಕೆಂದು ಹೇಳಿದರು. ಆಗ ಮೂವರು ಮುನಿಯ ಶಾಪದಂತೆ ರಕ್ಕಸಿ, ಕಾಗೆ, ಕಾಂಚಾಲ ಮರವಾಗಿ ಭೂಲೋಕದಲ್ಲಿ ಜನಿಸಿದರು.

ರಾಕ್ಷಸಿ ರೂಪ ಪಡೆದ ಗಂಧರ್ವದ ಕಾಟ ಅಧಿಕವಾಯಿತು. ಹಿಂಸೆಯಿಂದ ಸಿಕ್ಕ–ಸಿಕ್ಕವರೆಲ್ಲರನ್ನು ಕೊಂದು ತಿನ್ನಲಾರಂಭಿಸಿತ್ತು. ಊರೆಲ್ಲ ಗಾಬರಿಯಿಂದ ಯಾರು ಸಾಯುತ್ತೇವೆಯೋ ಇವತ್ತು ಎಂದು ಗಾಬರಿಯ ಜೀವನ ಸಾಗಿಸುತ್ತಿದ್ದರು. ಆಗ ಊರಿನವರೆಲ್ಲರು ಸೇರಿ ಸರದಿಯಂತೆ ನಿಮಗೆ ಆಹಾರವಾಗಿ ಬರುತ್ತೇವೆಂದು ಹೇಳಿ, ಸರದಿಯಂತೆ ಪ್ರತಿನಿತ್ಯ ಒಬ್ಬೊಬ್ಬರ ಮನೆಯಿಂದ ಒಬ್ಬೊಬ್ಬರು ಹೋಗುತ್ತಿದ್ದರು ಎಲ್ಲರ ಮನೆಯ ಸರದಿ ಮುಗಿದು, ಜಾಗ್ರತಪುರದ ಅರಮನೆಗೆ ಬಂದಾಗ, ಸುಂದರಿ ರಾಜಕುಮಾರಿಯಾದ ಏಕಮಾತ್ರ ಪುತ್ರಿಯು ಹೋದಳು. ರಕ್ಕಸಿಯು ರಾಜಕುಮಾರಿಯ ಸುಂದರತೆಗೆ ಮಾರು ಹೋಗಿ, ಅವಳನ್ನು ಕೊಲ್ಲದೆ, ಮಗಳಂತೆ ಸಾಕುತ್ತಿದ್ದಳು. ನೀನು ಯಾವುದೇ ಭಯವಿಲ್ಲದೆ ಈ ಕಾಡಿನಲ್ಲಿ ಸುಖವಾಗಿರು ಎಂದು ಅವಳಿಗೆ ಯಾವುದಕ್ಕೂ ಕೊರತೆಯಾಗದಂತೆ ಸಾಕಿದಳು. ಹನ್ನೆರಡು ವರ್ಷಗಳಾದವು. ಇಲ್ಲಿ ದಂಪತಿಗಳಿಬ್ಬರು ಕುರಿಗಳನ್ನು ಕಾಯುತ್ತಾ ಅಲೆಮಾರಿಗಳಾಗಿ ಜೀವಿಸುತ್ತಿದರು. ಒಂದು ದಿನ ಇವರನ್ನು ಅರಸುತ್ತಾ ಗುರು ರೇವಣ್ಣರು ಬಂದರು, ಇವರ ಆಗಮನದಿಂದ ಸಂತೋಷಗೊಂಡ ದಂಪತಿಗಳಿಬ್ಬರು ನಮಸ್ಕರಿಸಿ, ಅವರ ಅತಿಥ್ಯಕ್ಕೆ ಮುಂದಾದರು. ಗುರುಗಳ ಅತಿಥ್ಯಕ್ಕೆ ಅವರ ಊಟಕ್ಕೆ ತಯಾರು ಮಾಡಲು ಬೆಂಕಿಯು ಬೇಕಿತ್ತು, ಬೆಂಕಿಯನ್ನು ಹುಡುಕುತ್ತಾ, ಶಿವಪದ್ಮನು ಬಹುದೂರದ ಬೆಟ್ಟಕ್ಕೆ ಬಂದು, ನೋಡಿದರೆ ಅಲ್ಲೊಂದು ಗುಹೆ ಅಲ್ಲಿಂದ ಹೊಗೆ ಬರುವುದನ್ನು ಕಂಡು, ಯಾರಿದ್ದೀರಿ ಎಂದು ಮಾತನಾಡಿಸಲು, ಒಳಗಿನಿಂದ ಚುಮಲೆಯು ಹೊರಬಂದಳು. ಏನಾಗಬೇಕಿತ್ತು ಎಂದು ಕೇಳಲು ಅವಳ ಮನದಲ್ಲಿ ಇವನೊಬ್ಬ ವೀರಪುರುಷನಿರಬೇಕು. ಇಂತಹ ಘೋರಾರಣ್ಯವನ್ನು ದಾಟಿ ಬಂದಿರುವುದು ಎಂದು ರಕ್ಕಸಿಯ ನೆನಪಾಗಿ, ಅವಳು ಏನು ಬೇಕು?, ನಿಮ್ಮ ಹೆಸರೇನು? ಬೇಗನೆ ಇಲ್ಲಿಂದ ಹೊರಡಿ? ಎಂದು ಅವನ ಮೇಲಿನ ಕಾಳಜಿಯಿಂದ ಹೇಳುತ್ತಿರಲು.

"ನಾನು ಒಬ್ಬ ಕುರಿಗಾಹಿ ನನ್ನ ಹೆಸರು ಶಿವಪದ್ಮ ಇದೀಗ ನನ್ನನ್ನು ಹುಡುಕಿಕೊಂಡು ನನ್ನ ಆದಿಗುರುಗಳು ಈವರಿಗೆ ಬರುವರಾಗಿದ್ದಾರೆ, ಆಯಾಸಗೊಂಡು ಹಸಿದು ಬಂದ ಅವರಿಗೆ ಊಟ ತಯಾರಿಸಲು ನನಗೆ ಬೆಂಕಿಯ ಅವಶ್ಯಕತೆಯಿದೆ. ಈ ಅರಣ್ಯ ಪ್ರದೇಶದಲ್ಲಿ ನನಗೆ ಬೆಂಕಿ ದೊರಕೀತೆ, ಎನ್ನುವ ಆಸೆಯಿಂದ ಅಲೆಯುತ್ತ ಇಲ್ಲಿಗೆ ಬಂದವನಾಗಿದ್ದೇನೆ. ತಮ್ಮ ಗೃಹದಿಂದ ಹೊರಟ ಹೊಗೆ ದೂರದಿಂದ ಕಾಣಿಸಿಕೊಂಡು ಬಂದಿರುವೆ? ಸಹಾಯ ಮಾಡುವಿರಾ"' ಎಂದು ಕೇಳಿದನು.

ಇದಕ್ಕೆ ಒಪ್ಪಿ ಚುಂಚಲೆಯು ಬೆಂಕಿಯನ್ನು ಕೊಡಲು ಸಿದ್ಧಳಾಗಿ, ಏನೋ ಯೋಚಿಸಿ ಹೇಳುವಳು, ನನ್ನದೊಂದು ಕೋರಿಕೆ ಇದೆ. ತಮ್ಮ ಗುರುಗಳಿಗೆ ಭೋಜನ ಮಾಡಿಸಿ, ಸಮಯ ದೊರಕಿಸಿ ತಾವು ಮರಳಿ ಬರುವಂತವರಾಗಿ ಇದೊಂದು ನನ್ನ ಆಸೆ, ನನ್ನ ಹೆಸರು ಚುಮಲೆ ನಾನೊಬ್ಬಳು ಬಂಧಿತ ರಾಜಕುಮಾರಿ ಈಗ ಇಷ್ಟು ಸಾಕು ಮರಳಿ ಬಂದಾಗ ನನ್ನ ವಿಚಾರವನ್ನು ಸಾದರಪಡಿಸುವೆ. ತಮ್ಮಿಂದ ನನ್ನ ಬಹುದಿನದ ಬಂದ ಮೋಕ್ಷವನ್ನು ನಾನು ಬಯಸುತ್ತಿದ್ದು, ತಾವೊಬ್ಬ ದಿವ್ಯಪುರುಷರಾಗಿ ನನಗೆ ಕಾಣಿಸಿಕೊಂಡಿದ್ದೀರಿ. ಎಂದು ಬೆಂಕಿ ನೀಡಿದಳು. ಶಿವಪದ್ಮನು ಮರಳಿ ಬಂದು ಗುರುಗಳಿಗೆ ಅತಿಥ್ಯವನ್ನು ನೀಡಿದರು. ಸಂತೃಪ್ತರಾದ ಗುರುಗಳು ಸಕಲವನ್ನು ತಿಳಿದ ಅವರು ಶಿವಪದ್ಮನಿಗೆ ಮುಂದಿನ ಕಾರ್ಯಗಳಿಗೆ ಅಣಿಯಾಗು ಎಂದು ಹಾರೈಸಿ ಭಸ್ಮವನ್ನು ನೀಡಿ ಹೊರಟರು. ಆಗ ಶಿವಪದ್ಮನು ಕುರಿಗಳ ಭಾರವನ್ನು ಜಿಂಕಾದೇವಿಗೆ ಒಪ್ಪಿಸಿ, ಭಸ್ಮವನ್ನು ಭದ್ರವಾಗಿಟ್ಟುಕೊಂಡು, ಚುಂಚಲೆಯ ರಕ್ಷಣೆಗಾಗಿ ಹೊರಟನು. ಹೊರಡುವಾಗ ಸ್ವಲ್ಪ ಪ್ರಸಾದವನ್ನು ತೆಗೆದುಕೊಂಡು ಶಿವಪದ್ಮನು ಚುಂಚಲೆಯ ಬಳಿ ಬಂದು, ತಾನು ತಂದ ಪ್ರಸಾದವನ್ನು ನೀಡಿದನು. ಅದನ್ನು ಸ್ವೀಕರಿಸಿದ ಚುಂಚಲೆಯು ಸಂತೋಷಗೊಂಡಳು. ಸಂತೋಷದಲ್ಲಿ ಮೈಮರೆತು ಚುಂಚಲೆಯು ಶಿವಪದ್ಮನನ್ನು ಅಪ್ಪಿಕೊಂಡು ಮುದ್ದಾಡಿದಳು. ನೀವು ದಯಮಾಡಿ ನನ್ನನ್ನು ಬಿಟ್ಟು ಎಲ್ಲಿಗೂ ಹೋಗಬೇಡಿ, ಇಂದಿನಿಂದ ನಿಮ್ಮನ್ನು ಬಿಟ್ಟು ಇರಲು ಸಾಧ್ಯವಿಲ್ಲ ಎಂದು ನಾವಿಬ್ಬರು ವಿವಾಹವಾಗೋಣ ಎಂದಳು. ಇದನ್ನು ಕೇಳಿಸಿಕೊಂಡ ಶಿವಪದ್ಮನು ಅದು ಹೇಗೆ ಸಾಧ್ಯ? ನೀನೊಬ್ಬಳು ರಕ್ಕಸಿಯ ಮಗಳು ಮಾನವ-ದಾನವರ ವಿವಾಹ ಅಸಾಧ್ಯದ ಮಾತು. ಆಗ ಚುಂಚಲೆಯು "ನಾನು ಹೀನಕುಲದವಳೆಂದು ಹೀಯಾಳಿಸಬೇಡಿ, ಪುರದರಸ ಗಂಗಾಧರರ ಮಗಳು, ರಾಜಕುಮಾರಿಯಾಗಿದ್ದರೂ ರಕ್ಕಸಿಯ ಪೋಷಣೆಯ ಶಿಶು! ಇಲ್ಲಿ ಕುಲದ ತರ-ತಮದ ಮಾತು ಬೇಡ! ಹಿಂದೆ ವಶಿಷ್ಟರು ಆರುಂಧತಿಯನ್ನು, ಭೀಮನು ಹಿಡಂಬೆಯನ್ನು ಮದುವೆಯಾದ ಉದಾಹರಣೆ ಇವೆ. ಆ ಮದುವೆಯಿಂದಾಗಿ ಅವರ ದಾಂಪತ್ಯದ ಸಮರಸಕ್ಕೆ ವ್ಯಥೆಯು ಬಂದಿದೆಯೇ? ನಾನು ರಾಜಪುತ್ರಿಯೆಂದು ತಮಗೆ

ನಂಬುಗೆ ಬಾರದಿದ್ದರೂ, ರಕ್ಕಸಿಯ ಮಗಳು ಎನ್ನುವ ವಿಶ್ವಾಸವೇ ತಮಗಾಗಿದ್ದರೂ ಕೆಸರಿನಲ್ಲಿ ಕಮಲ ಕಸ್ತೂರಿ, ಮೃಗನಾಭಿಯಿಂದ ಕಸ್ತೂರಿ. ಮಣ್ಣಿನಿಂದ ವಜ್ರ, ವೈಡೂರ್ಯಗಳು ಹುಟ್ಟಿ ಸೃಷ್ಟಿಯಲ್ಲಿ ಅಮೂಲ್ಯ ವಸ್ತುಗಳಾಗಿ ಇರುವುದು ತಮಗರಿಯದೆ? ಮನಸಾ ಒಪ್ಪಿ ಆಶ್ರಯ ಬಯಸುವ ನನ್ನನ್ನು ಧಿಕ್ಕರಿಸುವುದು ತಮಗೆ ನ್ಯಾಯವೇ? ಅಸಹಾಯಕ ಈ ಬಂಧಿತ ಕನ್ಯೆಗೆ ಮೋಕ್ಷವಿಲ್ಲವೇ?"[೧೦] ಎಂದು ಗೋಳಾಡುತ್ತಿರಲು ರಕ್ಕಸಿಯು ಬರುವ ಸೂಚನೆಯಾಯಿತು.

ಚುಂಚಲೆಯು ಹೆದರಿ ನೀವು ಇಲ್ಲಿಂದ ಹೊರಡಿ ಎನ್ನಲು, ಹೆದರಬೇಡ ಚುಂಚಲೆ, ಈ ಭಸ್ಮವನ್ನು ನನ್ನ ಮೇಲೆ ಹಾಕು ನಾನು ಸಣ್ಣ ಹುಳುವಾಗುವೆ, ಮತ್ತೆ ನನ್ನ ಮೇಲೆ ಹಾಕಿದಾಗ, ನಿಜರೂಪವಾಗುವೆ ಎಂದು ಹೇಳಿದನು. ಅವನು ಹಲ್ಲಿಯಾದನು. ಇವಳು ಹೋಗಿ ಬಾಗಿಲು ತೆರೆದಾಗ, ಅನುಮಾನದಿಂದ ಪ್ರಶ್ನೆಗಳನ್ನು ಕೇಳಲು, ಚುಂಚಲೆಯು ನನ್ನನ್ನು ಅನುಮಾನದಿಂದ ಕಾಣುವಿರಾ ಎಂದು ಬೇಸರಗೊಳ್ಳಲು, ರಕ್ಕಸಿಯು ಸಮಾಧಾನ ಪಡಿಸುವಳು. ಆಗ ಚುಂಚಲೆಯು ರಕ್ಕಸಿಯ ಸಾವಿಗೆ ಗುಟ್ಟು ತಿಳಿಯಲು, ಅಮ್ಮ ನೀನು ಇಲ್ಲದ ಸಮಯದಲ್ಲಿ ಇಲ್ಲಿಗೆ ಯಾರಾದರು ಬಂದು ನನಗೇನಾದರು ಮಾಡಿದರೆ ಎಂದಾಗ "ಸರಿ ಧರಣಿಯಲ್ಲಿ ನನ್ನನ್ನು ಕೊಲ್ಲಲು ಯಾರಿಂದಲೂ ಆಗದು. ಅದರ ಗುಟ್ಟು ನಿನಗೆ ತಿಳಿದಿರಲಿ"[೧೧] ನಮ್ಮ ಮುಂದಿನ ಕಾಂಚಾಲ ಮರದಲ್ಲಿ ಕಾಗೆಯೊಂದಿದೆ. ಕಾಗೆಯನ್ನು ಕೊಂದರೆ ಆ ಮರವೂ ನೆಲಕ್ಕುರುಳುವುದು. ಆಗ ನಾನು ಎಲ್ಲಿದ್ದರೂ ತತ್ತರಿಸುತ್ತ ಬಂದು ನೆಲದಲ್ಲಿ ಉರುಳುವೆ ಎಂದು ತನ್ನ ಸಾವಿನ ರಹಸ್ಯ ಹೇಳುವಳು.

ರಾತ್ರಿ ಕಳೆದು ಮುಂಜಾನೆಯಾಗುತ್ತಿದ್ದಂತೆ ರಕ್ಕಸಿಯು ಆಹಾರ ಅರಸುತ್ತ ತೆರಳಿತ್ತು, ಇಲ್ಲಿ ಚುಂಚಲೆಯು ಹಲ್ಲಿಯಾದ ಶಿವಪದ್ಮನನ್ನೇ ನಿಜರೂಪ ತರಿಸಿದಳು. ರಕ್ಕಸಿಯ ಮರಣದ ರಹಸ್ಯ ತಿಳಿಸಿದಳು. ಆಗ ಶಿವಪದ್ಮನು ಉಪಾಯದಿಂದ ಕಾಗೆಯನ್ನು ಕೊಂದನು. ಆಗ ಕಾಂಚಾಲ ಮರ ಉರುಳಿತು. ಎಲ್ಲೋ ದೂರದಲ್ಲಿಂದ ರಕ್ಕಸಿಯು ಓಡುತ್ತಾ ಬಂದು ನೆಲಕ್ಕೆ ಉರುಳಿ ಬಿದ್ದಳು. ನೆಲಕ್ಕೆ ಬಿದ್ದ ರಕ್ಕಸಿ ಮಣ್ಯಾತ್ಮ ನಿನ್ನಿಂದಾಗಿ ನಾವು ಶಾಪ ವಿಮುಕ್ತರಾದೆವು ಎಂದು ಮೂವರು ಗಂಧರ್ವರು ಕೈಲಾಸಕ್ಕೆ ತೆರಳಿದರು. ಇದರ ದೇಹದಿಂದ ೩೨ ಬಿರುದಾವಳಿಗಳನ್ನು ಶಿವಪದ್ಮನು ತಯಾರಿಸಿದನು.

ಇನ್ನು ಶಿವಪದ್ಮನು ಚುಂಚಲೆಯನ್ನು ಕುರಿತು, ನಿನ್ನನ್ನು ಬಂಧನದಿಂದ ಮುಕ್ತಿ ಮಾಡಿರುವೆ, ನೀನು ತೆರಳು ಎಂದರು. ಆಗ ಚುಂಚಲೆಯು ಹೋಗದೆ ನೀ ಎಲ್ಲಿರುವೆಯೋ ಅಲ್ಲಿಯೇ ನಾನಿರುವೆ ಎಂದು ಹೇಳಿದಾಗ, ಜಿಂಕಾದೇವಿಯ ಬಳಿ ಕರೆತಂದು, ಜೀವಿಸುತ್ತಿದರು. ಜಿಂಕಾದೇವಿ

ಮತ್ತು ಚುಂಚಲೆಯರ ಸಂತತಿಯು ಹತ್ತಿ ಕಂಕಣದವರು ಮತ್ತು ಉಣ್ಣೆ ಕಂಕಣದವರಾಗಿ ಮೆರೆದರು. ಹೀಗೆ ಕುರುಬರ ಪ್ರಾಚೀನತೆಯನ್ನು ನಾವು ಕಾಣುತ್ತೇವೆ.

೪.೧.೩. ಹಾಲುಮತದ ದೈವಗಳ ಪರಿಕಲ್ಪನೆ

ಭಾರತವು ಗ್ರಾಮಗಳ ಬೀಡು, ಗ್ರಾಮಗಳಿಲ್ಲದೆ ನಾಡಿಲ್ಲ. ಗ್ರಾಮಗಳಲ್ಲಿ ಜನಪದರ ಧಾರ್ಮಿಕ ಬದುಕೆ ಮುಖ್ಯ. ಗ್ರಾಮದಲ್ಲಿ ಜನರು ಪ್ರಕೃತಿಯಲ್ಲಿನ ವೈಚಿತ್ರ್ಯಗಳನ್ನು ಕಂಡು ಅಂದರೆ ಸೂರ್ಯನ ಹುಟ್ಟು, ಹುತ್ತಗಳ ಹುಟ್ಟು, ಜಲ, ಗಾಳಿ, ಬೆಂಕಿ, ಭೂಕಂಪ, ಇವುಗಳಿಂದ ಭಯಭೀತರಾದ ಜನರು ಅವುಗಳನ್ನೇ ಅಂದರೆ ಪಂಚಭೂತಗಳನ್ನು ಆರಾಧಿಸುತ್ತಾ ಬಂದರು. ಕಾಲಕಳೆದಂತೆ ಅವುಗಳು ಗ್ರಾಮ ದೇವತೆಗಳಾಗಿ ರೂಪು ಪಡೆದುಕೊಂಡವು.

ಅನೇಕ ಗ್ರಾಮಗಳಲ್ಲಿ ಭೂಮಿಯ ಪೂಜೆಯನ್ನು ಮಾಡುವ ಉದಾಹರಣೆಗಳಿವೆ. ಕಾರಣ ಅದು ನಮಗೆ ಫಲ ನೀಡುವ ಜೀವಧಾರೆಯಾಗಿದೆ. ಹಿಂದಿನ ಬುಡಕಟ್ಟು ವಾಸಿಗಳಾದ ಕೆಲವರು ಆತ್ಮಗಳನ್ನು ಪೂಜಿಸುತ್ತಿದ್ದರು. ಅವರೇ ಬರು-ಬರುತ್ತಾ ದೇವತೆಗಳಾಗಿ ರೂಪುತಾಳಿರುವ ಐತಿಹಾಸಿಕ ಕಥೆಗಳನ್ನು ನಾವು ಕಾಣುತ್ತೇವೆ. ಹೀಗೆ ಗ್ರಾಮ ದೇವತೆಗಳು ಹುಟ್ಟಿ ಕೊಂಡಿರಬಹುದು. ಗ್ರಾಮ ದೇವತೆಗಳ ಹುಟ್ಟು ಐತಿಹಾಸಿಕವಾಗಿಯು, ಪುರಾಣಗಳಲ್ಲಿಯೂ ಹಾಗೆಯೇ ಕೆಲವು ಕಡೆ ಮಾನವರಾಗಿ ಬದುಕಿದ್ದು, ಸಮುದಾಯಗಳ ಅಭಿವೃದ್ಧಿಗೆ ಹೋರಾಡಿದ ಮಹಾಪುರುಷರು, ಸಾಂಸ್ಕೃತಿಯಕರು. ಮರಣದ ನಂತರ ದೈವೀಸ್ವರೂಪವನ್ನು ಪಡೆದಿರುವುದು ಉಂಟು.

ಪ್ರಾಚೀನ ಮಾನವರು ಸಂಘ ಜೀವಿಗಳಾಗಿ ಸಮಾಜದಲ್ಲಿ ಬದುಕಲು ಪ್ರಾರಂಭಿಸಿದರು. ಮನುಷ್ಯ ಸಂಬಂಧಗಳು ಬೆಳೆಯತೊಡಗಿದವು. ಬೆಳೆಯುತ್ತಾ-ಬೆಳೆಯುತ್ತಾ ತನ್ನ ಜೊತೆಗೆ ಸಂಸ್ಕೃತಿ, ಸಂಪ್ರದಾಯ, ಸಂಸ್ಕಾರಗಳನ್ನು ಬೆಳೆಸಿಕೊಂಡು ಬಂದರು. ಮಾನವ ತನ್ನ ಮತ್ತು ಕುಟುಂಬದವರ ರಕ್ಷಣೆಗಾಗಿ ಅಲೆಮಾರಿಯಾಗದೆ ತಾನು ನೆಲೆಸಿದ ಭೂಮಿಯನ್ನೇ ಪ್ರಕೃತಿಯನ್ನೇ ದೇವರಾಗಿ ಪೂಜಿಸತೊಡಗಿದ. ತನ್ನ ಮನದಲ್ಲಿರುವ ಭಾವನೆಗಳನ್ನು ತಾನು ಕಲ್ಪಿಸಿಕೊಂಡಂತೆ, ದೇವರಿಗೆ ರೂಪ ನೀಡುತ್ತಾ, ಹೆಸರಿಸುತ್ತಾ ಆರಾಧಿಸುತ್ತಾ, ಮಾನಸಿಕ ನೆಮ್ಮದಿಯನ್ನು ಪಡೆಯುವ ಮಾರ್ಗ ಕಂಡುಕೊಂಡರು. ಮಾನವ ಸಮಾಜ ಜೀವಿಯಾಗಿ ಬೆಳೆದಂತೆ ಅವನ ಭಕ್ತಿ, ಅವನ ಕಲ್ಪನಾ ಶಕ್ತಿಗೆ ಅನುಗುಣವಾಗಿ ಬಹುಬಗೆಯ ದೇವರುಗಳ ಅಸ್ತಿತ್ವರೂಪುಗೊಂಡ ಪರಿಣಾಮ ವಾಗಿ ದೇವರುಗಳ ಸಂಖ್ಯೆಯು ಅಧಿಕವಾಗಿ ಗ್ರಾಮಕ್ಕೊಂದು ಗ್ರಾಮದೇವತೆ ಹುಟ್ಟಿಕೊಂಡಿರುವ ಸಾಧ್ಯತೆಗಳಿವೆ.

ಸ್ತ್ರೀ ದೇವತೆಗೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅಗ್ರ ಸ್ಥಾನವನ್ನು ನೀಡಿದ್ದೇವೆ. ಗ್ರಾಮ ದೇವತೆಗಳ ಹುಟ್ಟಿನ ಹಿನ್ನಲೆಯು ಇದೆ. ವೀರ ಮಹಿಳೆಯರು ತಮ್ಮ ಪತಿಯ ಸಾವಿನ

ನಂತರ, ಸಹಗಮನ ಕೈಗೊಂಡಿದ್ದು ಬೇರೆ ಬೇರೆ ಕಾರಣಗಳಿಂದ ತಮ್ಮನ್ನು ತಾವೇ ಬಲಿಕೊಟ್ಟು ಜನಸಾಮಾನ್ಯರಿಗೆ ದೇವರಾಗಿರುವ ಸಂಗತಿಗಳಿವೆ. ಇಂತಹ ಐತಿಹಾಸಿಕ ಕಥೆಗಳಿಂದ ಗ್ರಾಮ ದೇವತೆಗಳು ಹುಟ್ಟಿರಬೇಕು. ಪವಾಡ ಪುರುಷರಿಂದಲೂ ದೇವತೆಗಳ ಉದಯವಾಗಿವೆ. ಜನಸಾಮಾನ್ಯರು ತಮ್ಮ ಕಷ್ಟಗಳನ್ನು ನಿವಾರಿಸಿದ ವ್ಯಕ್ತಿಗಳನ್ನೇ ದೇವರಾಗಿ ಪೂಜಿಸುತ್ತಿದ್ದಾರೆ.

ನಮ್ಮ ನಾಡಿನಲ್ಲಿ ಗ್ರಾಮ ದೇವತೆಗಳು ಅಧಿಕ. ಎಲ್ಲ ದೇವತೆಗಳ ಮೂಲ ಪಾರ್ವತಿ ದೇವಿ. ಅವಳು ಶಕ್ತಿ ದೇವತೆಗಳ ಪ್ರತೀಕವಾಗಿದ್ದಾಳೆ. ಗ್ರಾಮ ದೇವತೆಗಳ ಬಗ್ಗೆ ನಾವು ತಿಳಿದುಕೊಂಡಾಗ ಅವರ ಮೂಲ ತಮ್ಮ ಗ್ರಾಮ ದೇವತೆ ಆಗಿರುವುದಾಗಿದೆ. ಅವರು ಅನುಭವಿಸಿದ ನೋವು ಕಷ್ಟಗಳಿಂದಾಗಿ ಹೊರ ಬಂದು ಹೋರಾಡಿದ ಫಲವಾಗಿ ಅವಳು ಗ್ರಾಮದೇವತೆಯಾಗಿ ಪೂಜಿಸಿಕೊಳ್ಳುತ್ತಿದ್ದಾಳೆ. ಅವಳಿಗೊಂದು ದೇವರ ಸ್ವರೂಪ ನೀಡಿ, ಗ್ರಾಮದವರು ಪೂಜಿಸುತ್ತಾರೆ. "ಭಾರತದ ಹಿಂದೂ ಸಮಾಜದಲ್ಲಿ ಗ್ರಾಮದೇವತೆಗಳೇ ಜನರ ಧನ್ವಂತರಿಯಾಗಿ ಕಾರ್ಯ ಮಾಡಿವೆ. ಅವಳು ಸಿಟ್ಟಾದರೆ ಕಷ್ಟ, ಸಂಕಟ ರೋಗ-ರುಜಿನಗಳಿಗೆ ಕಾರಣವಾಗುತ್ತಾಳೆ. ಅವುಗಳ ನಿವಾರಕಳು ಅವಳೇ ಎಂಬ ನಂಬಿಕೆ ನಮ್ಮ ಹಳ್ಳಿಗರಲ್ಲಿವೆ. ಅವಳ ಆರಾಧನೆಯ ಫಲವಾಗಿ ನಡೆಯುವ ಹಬ್ಬ ಜಾತ್ರೆಗಳು ವಿಶಿಷ್ಟವಾದ ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿವೆ. ಇಂತಹ ಹಬ್ಬ ಜಾತ್ರೆಗಳು ಕೇವಲ ಮೋಜಿನ ಆಟಗಳಾಗದೆ, ಧಾರ್ಮಿಕ ಹಿನ್ನೆಲೆಯಲ್ಲಿ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವ ಪಡೆದುಕೊಂಡಿವೆ. ಆದುದರಿಂದಲೇ ನಮಗೆ ಗ್ರಾಮದೇವತೆ ಮುಖ್ಯವಾಗುತ್ತಾರೆ."[೨] ಪ್ರದೇಶಗಳಿಗೆ ತಕ್ಕಂತೆ ಗ್ರಾಮ ದೇವತೆಗಳು ಹೆಸರುಗಳು ಮಾತ್ರ ಬದಲಾಗುವ ಸಾಧ್ಯತೆಗಳಿವೆ. ಕೆಲವರು ನಮ್ಮ ಗ್ರಾಮ ದೇವತೆಗೆ ಇರುವ ಹೆಸರುಗಳನ್ನು ತಮ್ಮ ಮಕ್ಕಳಿಗಿಡುತ್ತಾರೆ.

ಸ್ತ್ರೀದೇವತೆ : ಗ್ರಾಮಗಳಲ್ಲಿ ಪ್ರಮುಖವಾಗಿ ಸ್ತ್ರೀ ದೇವತೆಗೆ ಆಗ್ರ ಸ್ಥಾನವಿರುವುದು. ನಾವು ಯಾವ ಗ್ರಾಮಕ್ಕೆ ಹೋದರೂ ಆ ಗ್ರಾಮಕ್ಕೊಂದು ಗ್ರಾಮ ದೇವತೆಯು ಇದ್ದೇ ಇರುತ್ತಾಳೆ. ಅದು ನಮ್ಮ ಹಿಂದೂ ಸಂಪ್ರದಾಯದಲ್ಲಿ ಬೆರೆತು ಹೋಗಿದೆ. ನಮ್ಮ ಗ್ರಾಮದವರು ತಮಗೆ ಏನೇ ಕಷ್ಟ ಬಂದರೂ, ಅವಳಿಗೆ ಕೋಳಿಯನ್ನು ಬಿಡುತ್ತೇವೆ, ಗೂಳಿಯನ್ನು ಬಿಡುತ್ತೇವೆ, ಕುರಿಯನ್ನು ಬಿಡುತ್ತೇವೆ ಎಂದು ಹರಕೆ ಹೊತ್ತುಕೊಳ್ಳುತ್ತಾರೆ. ಇಂತಹ ಸಂಸ್ಕೃತಿ ಹಳ್ಳಿ-ಹಳ್ಳಿಯಲ್ಲೂ ನಾವು ಕಾಣುತ್ತೇವೆ. ಪ್ರತಿ ವರುಷವು ಗ್ರಾಮದವರು ಗ್ರಾಮದೇವತೆಯ ಪೂಜೆಯನ್ನು ಆಡಂಬರವಾಗಿ ಮಾಡುತ್ತಾರೆ. ಊರ ಹಬ್ಬವೆಂದೆ ಹೇಳಿ ಸಂಭ್ರಮದಿಂದ ಮಾಡುತ್ತಾರೆ. ಗ್ರಾಮದೇವತೆಯನ್ನು ನಾವು ಪ್ರಸನ್ನಗೊಳಿಸಬೇಕೆಂದು ಕುರಿ, ಗೂಳಿಯನ್ನು ಅರ್ಪಣೆ ಮಾಡುತ್ತಾರೆ.

ರಕ್ತದ ಅಭಿಷೇಕ ಮಾಡಿಸುತ್ತಾರೆ. ಎಲ್ಲಾ ಧರ್ಮದಲ್ಲೂ ಸ್ತ್ರೀ ದೇವತೆ ಇರುವಂತೆ, ಹಾಲುಮತದಲ್ಲೂ ಅನೇಕ ಸ್ತ್ರೀ ದೇವತೆಗಳನ್ನು ನಾವು ಕಾಣುತ್ತೇವೆ. ಇವಳು ಪಾರ್ವತಿಯ ಸ್ವರೂಪಿಯಾದರೂ ಹೆಸರುಗಳು ಮಾತ್ರ ಬೇರೆ ಬೇರೆಯಾಗಿವೆ.

ಮಾಯವ್ವದೇವಿ : ಹಾಲುಮತದ ದೇವತೆಗಳಲ್ಲಿ ಮಾಯಕ್ಕಳು ಅಗ್ರಳು. ಹಾಲುಮತದ ಬೀರೇಶ್ವರನ ಅಕ್ಕಳಾಗಿ, ತಾಯಿಯಾಗಿ ಪೋಷಿಸಿದ ಮಹಿಳೆ. ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಹಾಲುಮತದವರಿಂದ ಪೂಜಿಸಲ್ಪಡುವ ಸ್ತ್ರೀದೇವತೆ ಇವಳು. ಇವಳ ದೇವಾಲಯ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಚಿಂಚಲಿಯಲ್ಲಿದೆ. ಚಿಂಚಲಿಯಲ್ಲಿ ಇವಳು ಬಂದು ನೆಲೆಸಿದಳು ಎಂಬುದಕ್ಕೆ ಐತಿಹ್ಯ ಕಥೆಗಳಿವೆ. ಅವುಗಳನ್ನು ಮುಂದೆ ನೋಡುತ್ತೇವೆ. ಮಾಯಕ್ಕಳ ಹುಟ್ಟು, ಅವಳ ಜೀವನಕ್ರಮವನ್ನು ನೋಡುವುದಾದರೇ, ನಮ್ಮ ಹಾಲುಮತ ಪುರಾಣಗಳಲ್ಲಿ ಹೀಗೆ ಕಂಡು ಬಂದಿದೆ. ದೇವೇಂದ್ರರಾಯ ಮತ್ತು ಸುಭದ್ರರ ಏಳನೇ ಹೆಣ್ಣು ಮಗುವಾಗಿ ಜನಿಸಿದಳು. ಇವಳು ಸ್ವರ್ಗದ ದೇವತೆ. ಆದರೆ ಇವಳ ಜಾತಕ ಸರಿಯಿಲ್ಲವೆಂದು ತಿಳಿದು ತಂದೆ–ತಾಯಿಯರು ಬಂಗಾರದ ಪೆಟ್ಟಿಯಲ್ಲಿ ಹಾಕಿ, ಭೂಲೋಕಕ್ಕೆ ಬಂದು ತೆಪ್ಪದಲ್ಲಿ ಪೆಟ್ಟಿಗೆಯನ್ನಿಟ್ಟು ನದಿಯಲ್ಲಿ ಬಿಡುತ್ತಾರೆ. ಅದು ತೇಲಿ–ತೇಲಿ ಇನ್ನೊಂದು ದಡವನ್ನು ಸೇರುತ್ತದೆ. ಇದನ್ನು ಕಂಡ ತಂದೆ–ತಾಯಿಗಳು ದುಃಖದಿಂದಲೇ ಸ್ವರ್ಗಕ್ಕೆ ತೆರಳುತ್ತಾರೆ. ಈ ನದಿಯ ದಂಡೆಯ ಬಳಿ ತಪಸ್ಸಿಗೆ ಕುಳಿತಿದ್ದ ಋಷಿ ಈ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗಿ, ತೆರೆದು ನೋಡಿದರೆ ಚಂದ್ರನಂತೆ ಬೆಳಗುತ್ತಿರುವ ಮಗುವನ್ನು ಕಾಣುತ್ತಾನೆ. ಏನು ಮಾಡುವುದೆಂದು ಯೋಚಿಸುತ್ತಿರಲು ಅಲ್ಲಿಯೇ ಕುರಿ ಕಾಯುತ್ತ ಬಂದ ದಿಬ್ಬರಾಯನನ್ನು ಕರೆದು, ತೋರಿಸುತ್ತಾನೆ. ಆಗ ದಿಬ್ಬರಾಯ ಮಗುವಿನ ತೇಜಸ್ಸನ್ನು ಕಂಡು, ನಾನು ಮಗುವನ್ನು ಕರೆದೊಯ್ದು, ಸಾಕುತ್ತೇನೆ ಎಂದಾಗ, ಋಷಿಯು ಬಂಗಾರದ ಪೆಟ್ಟಿಗೆಯನ್ನು ತೆಗೆದುಕೊಂಡು, ಮಗುವನ್ನು ದಿಬ್ಬರಾಯನಿಗೆ ಕೊಡುತ್ತಾನೆ. ಈಗಾಗಲೇ ದಿಬ್ಬರಾಯನಿಗೆ ಏಳು ಹೆಣ್ಣು ಮಕ್ಕಳಿದ್ದರು. ಅಂಜದೆ, ಹೆದರದೇ, ಮಗುವನ್ನು ತಮ್ಮ ಮನೆಗೆ ಕರೆದೊಯ್ದನು. ಶಾಂಭವಿಯು(ದಿಬ್ಬರಾಯನ ಹೆಂಡತಿ) ಮಗುವನ್ನು ಕಂಡು, ಸಂತೋಷದಿಂದ ತನ್ನ ಮಗುವಿನಂತೆ ಹಾರೈಸುತ್ತಾಳೆ. ದಿಬ್ಬರಾಯನ ಮನೆಯಲ್ಲಿ ಕೆಲವು ಬದಲಾವಣೆಗಳಾಗುತ್ತವೆ. ಅದಕ್ಕೆಲ್ಲ ಮಗುವೇ ಕಾರಣವೆಂದು ಭಾವಿಸುತ್ತಾರೆ. ಇವಳಿಗೆ 'ಮಾಯವ್ವ ಅಥವಾ "ಮಾಯಕ್ಕ" ಎಂದು ನಾಮಕರಣ ಮಾಡುತ್ತಾರೆ.

ಮಾಯವ್ವನ ಆಗಮನದೊಂದಿಗೆ ದಿಬ್ಬರಾಯನ ಮನೆಯ ಲಕ್ಷಣವೇ ಬದಲಾಗುತ್ತದೆ, ಎಷ್ಟೋ ವರ್ಷಗಳಿಂದ ಮರಿಗಳನ್ನು ಹಾಕದ ಕುರಿಗಳು ಮರಿ ಹಾಕಿ, ಏಳು ಹಿಂಡು ಕುರಿಗಳು ಜಾಸ್ತಿಯಾಗುತ್ತವೆ. ದಿಬ್ಬರಾಯರು ಶ್ರೀಮಂತರಾಗುತ್ತಾರೆ. ಮಾಯವ್ವಳು ದಿಬ್ಬರಾಯನ ಮಕ್ಕಳೊಂದಿಗೆ

ಸುಖವಾಗಿ ಬೆಳೆದು ಯೌವನಕ್ಕೆ ಬರುತ್ತಾಳೆ. ಒಂದು ದಿನ ಮಾಯವ್ವ ಇದಕ್ಕಿಂದ್ದಂತೆ ಅಪ್ಪ ನಾನು ಇಂದು ಕುರಿಗಳನ್ನು ಕಾಯುವುದಕ್ಕೆ ಹೋಗುತ್ತೇನೆಂದು ಹಠ ಹಿಡಿದಳು, ಎಷ್ಟೇ ಬೇಡವೆಂದರೂ ಕೇಳದೆ ಅವಳೇ ಕುರಿಗಳನ್ನು ಹೊಡೆದುಕೊಂಡು ಹೋದಳು. ಕೈಲ್ಲೊಂದು ಕೋಲು ಹಿಡಿದು, ಕುರಿಗಳನ್ನು ಬೈ, ಬೈ ಎಂದು ಹೊಡೆದುಕೊಂಡು ಕುದಲಿನ ವನಕ್ಕೆ ಬಂದಳು. ಇವಳು ಕುರಿ ಕಾಯುತ್ತ ಮೈಮರೆತಿರಲು ಸ್ವರ್ಗದಿಂದ ಆರು ಹೆಣ್ಣು ಮಕ್ಕಳು (ದೇವರಾಯ ಮತ್ತು ಸುಭದ್ರರ ಮಕ್ಕಳು)ಯಾರನ್ನೋ ಅರಸುತ್ತಾ ಬಂದರು. ಅವರಿಗೆ ಅಲ್ಲಿ ಒಂದು ಅಚ್ಚರಿ ಕಂಡಿತು. ಅದೇನೆಂದರೆ ಮಾಯವ್ವಳು ನಡೆದ ದಾರಿಯಲ್ಲಿ ಅವಳ ಕಾಲ ಗುರುತಿನ ಹೆಜ್ಜೆಯಲ್ಲಿ ಒಂದು ಕುಂಕುಮ, ಇನ್ನೊಂದು ಭಂಡಾರದ ಹೆಜ್ಜೆಗಳಾಗಿದ್ದವು. ಹೆಜ್ಜೆಯ ಗುರುತುಗಳ ನೋಡುತ್ತಲೆ, ಮಾಯವ್ವ ಇರುವ ಸ್ಥಳಕ್ಕೆ ಬಂದು ನೋಡಿದರು. ಅವಳ ತೇಜಸ್ಸು ಉಳ್ಳ ಮುಖವನ್ನು ಕಂಡು, ಅವರ ದಿವ್ಯದೃಷ್ಟಿಯಿಂದ ನೋಡಿ ಇವಳೇ ನಮ್ಮ ತಂಗಿ ಎಂದು ಅರಿತು ತಮ್ಮಿಂದ ದೂರವಾದ ಕಥೆಯನ್ನು ತಿಳಿಸಿದರು. ಇವರು ದೇವೇಂದ್ರರಾಯನ ಆರು ಹೆಣ್ಣು ಮಕ್ಕಳಾಗಿದ್ದರು. ನಮಗೆ ತಂಗಿ ಇರುವಳೆಂದು ದಿನಲೂ ಅವಳನ್ನು ಹುಡುಕುತ್ತಾ ಬರುತ್ತಿದ್ದರು. ಆದರೆ ಇವತ್ತು ಅವಳ ದರ್ಶನವಾಯಿತು.

ಆರು ಜನ ಹೆಣ್ಣು ಮಕ್ಕಳು ನಡೆದ ಸಂಗತಿಗಳನ್ನೆಲ್ಲಾ ವಿವರವಾಗಿ ಮಾಯವ್ವನಿಗೆ ತಿಳಿಸಿದರು. ಅವಳಿಗೆ ವಿಷಯವೆಲ್ಲ ತಿಳಿದು ದುಃಖಿತಳಾದಳು. ಈ ಹೆಣ್ಣು ಮಕ್ಕಳೆಲ್ಲ ಸಂಜೆಯಾಯಿ ತೆಂದು ಸ್ವರ್ಗಕ್ಕೆ ಹೋಗುವ ಸಮಯವಾಯಿತೆಂದು ಎಲ್ಲರು ತೆರಳಿದರು. ಆದರೆ ಅಕ್ಕವ್ವ ಮಾತ್ರ ಅವರ, ಜೊತೆ ಹೋಗದೆ ಮಾಯವ್ವಳ ಬಳಿ ಬಂದಳು.

ಸಂಜೆಗೆ ಕುರಿಗಳನ್ನು ಹೊಡೆದುಕೊಂಡು ಮಾಯವ್ವ, ಅಕ್ಕವ್ವ (ಲಕ್ಷ್ಮವ್ವ) ನ ಜೊತೆ ಮನೆಗೆ ತೆರಳಿ, ಅವಳ ಹುಟ್ಟಿನ ರಹಸ್ಯವನ್ನು ಕೇಳಿದಳು. ದಿಬ್ಬರಾಯನಿಗೆ ಏನೂ ತೋಚದಂತಾಗಿ, ನಿಜ ಸಂಗತಿಯನ್ನು ತಿಳಿಸಿದನು. ಮಾಯವ್ವ ಇಂದಿನಿಂದ ನಾನು ಅಕ್ಕವ್ವನ ಜೊತೆ ಬಾಳುತ್ತೇನೆ ಎಂದಾಗ ದುಃಖದಲ್ಲಿಯೇ ದಿಬ್ಬರಾಯನ ಕುಟುಂಬ ಒಪ್ಪಿ, ಕುರಿಗಳನ್ನು ಅವಳಿಗೆ ಒಪ್ಪಿಸಿ, ಚಂದನಗಿರಿಯಲ್ಲಿ ವಾಸವಾಗುವಂತೆ ದಿಬ್ಬರಾಯನು ಸೂಚಿಸಿದನು. ಅವರ ತಂದೆಯಂತೆ ಮಾಯವ್ವ-ಅಕ್ಕವ್ವರು ಹೋಗಿ ಚಂದನಗಿರಿಯಲ್ಲಿ ವಾಸವಾದರು.

ಒಂದು ದಿನ ಕಾಡಿನಲ್ಲಿ ಇವರಿಬ್ಬರು ಕುರಿಗಳನ್ನು ಕಾಯುತ್ತಿರಬೇಕಾದರೆ, ಬಿಸಿಲಿನ ಬೇಗೆ ತಾಳಲಾರದೆ ಕಂಚಿನಾಲದ ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದರು. ಇದಕ್ಕಿಂದಂತೆಯೇ ಮಗುವಿನ ಅಳುವೊಂದು ಜೋರಾಗಿ ಕೇಳಲಾರಂಭಿಸಿತು. ಎದ್ದು ನೋಡಿದರೆ ಮರದ ಮೇಲೊಂದು ಬಂಗಾರದ ತೊಟ್ಟಿಲು, ಅದರಲ್ಲಿ ಮಗುವೊಂದು ಅಳುತ್ತಿತ್ತು. ಅಕ್ಕವ್ವ ಮತ್ತು ಮಾಯವ್ವರು

ನನಗೆ ಈ ಮಗು ನನಗೆ ಎಂದು ಯಾರು ಹತ್ತಬೇಕು ಮರವನ್ನು ಎಂದು ಜಗಳವಾದರೆ ಸಾಗದು ಎಂದು ಅಕ್ಕವ್ವ ನಾನೇ ಹತ್ತುತ್ತೇನೆ ಎಂದು ಹೇಳಿ, ಮರ ಹತ್ತಲು ಸಿದ್ಧಳಾದಳು. ಆದರೆ ಮರ ಹತ್ತುವಾಗ ಮರಕ್ಕೆ ಇದ್ದ ಇರುವೆಗಳು ಹತ್ತಲು ಬಿಡಲಿಲ್ಲ. ಅದಕ್ಕೆ ಮಾಯವ್ವಳು ನಾನೇ ಪ್ರಯತ್ನಿಸುತ್ತೇನೆಂದು ಅವಳು ಇರುವೆಗಳಿಗೆ ಹಿಟ್ಟನ್ನು ಹಾಕಿದಳು. ಅವುಗಳು ಅದನ್ನು ತಿಂದು, ಬಾಯಿ ಕಟ್ಟಿ ಸತ್ತವು, ಗಿಡ ಹತ್ತಿದಳು ತೊಟ್ಟಿಲ ಬಳಿ ಹೋದಾಗ ಗಿಳಿಗಳು ಅವಳನ್ನು ತಡೆದು, ಈ ಮಗು ನಮಗೆ ಇರಲಿ ಎಂದು ವಾದ ಮಾಡಿದವು. ಆಗ ಮಾಯವ್ವಳು ಗಿಳಿಗಳಿಗೆ ಮಗುವಿನ ತೊಟ್ಟಿಲಲ್ಲಿ, ಆಡುವ ವೇಗಿಣಿಗಳಾಗುವ ಭಾಗ್ಯ ಕೊಡುತ್ತಾಳೆ. ಇವುಗಳ ಸರದಿ ಮುಗಿಯುತ್ತ ಈಗ ನಾಗಪ್ಪ ಒಪ್ಪಿಗೆ ಕೊಟ್ಟರೆ ನಿನ್ನ ರೂಪವನ್ನು ಬಾಗಿಲ ಮೇಲೆ ಹೊಸ್ತಿಲ ಮೇಲೆ ಬರೆಸುತ್ತೇನೆಂದು ಹೇಳಿ ದಾರಿ ಮಾಡಿಸಿಕೊಡು ಕೂಸನ್ನು ಕೆಳಗೆ ತರುತ್ತಾಳೆ. ಮಗುವು ಕೈಗೆ ಬಂದಾಗ ಅಕ್ಕವ್ವ ಮತ್ತು ಮಾಯವ್ವರು ನನಗೆ ನನಗೆ ಎಂದು ವಾದ ಮಾಡುತ್ತಿರಲು, ಅಲ್ಲಿಗೆ ಎರಳಿಗುಂಪಿ ರಾಯಣ್ಣ ಬಂದು, ಜಗಳವೇಕೆ ಮಗುವನ್ನು ಕೆಳಗೆ ಹಾಕಿ ಮಗುವನ್ನು ಮೂರು ಸುತ್ತ ಸುತ್ತುವವರಾಗಿ ಯಾರ ಎದೆ ಉಕ್ಕಿ ಬರುವುದು, ಅವರೇ ಈ ಮಗುವಿಗೆ ತಾಯಿಯಾಗಿರುತ್ತಾಳೆ ಎಂದನು. ರಾಯಣ್ಣ ಹೇಳಿದಂತೆ ಅಕ್ಕವ್ವ ಮಾಡಿದಳು, ಆದರೆ ಅವಳ ಎದೆಗಳು ಚುಮ್ಮಲಿಲ್ಲ, ಮಾಯವ್ವಳು ಹೀಗೆ ಮಾಡಲು ಅವಳ ಎಡ ಬಲ ಎದೆಗಳು ಬಾಣಂತಿಯರಂತೆ ಚಿಮ್ಮಿದವು. ಅವತ್ತಿನಿಂದ ಮಾಯವ್ವ ಆ ಕಂದನಿಗೆ ಅಕ್ಕಳಾಗಿ, ತಾಯಿಯಾಗಿ ಸಾಕುತ್ತಿರುತ್ತಾಳೆ.

ಮಗುವನ್ನು ಮನೆಗೆ ಕರೆತಂದು, ಮಗುವಿಗೆ ಬೀರಣ್ಣ ಎಂದು ನಾಮಕರಣ ಮಾಡಿದರು, ಬೀರಣ್ಣನ ಬಾಲ್ಯವನ್ನು ತಾಯಿಯಂತೆ ಮಾಯವ್ವ ಅನುಭವಿಸುತ್ತಿದ್ದಳು. ಎಲ್ಲ ಮಗುವಿನಂತೆ ತುಂಟಾಟವನ್ನು ಆಡುತ್ತಾ ಬೆಳೆಯಲಾರಂಬಿಸಿದನು. ಅವಳು ತಾಯಿಯಂತೆ ಬೀರಪ್ಪನಿಗೆ ನಿದ್ರೆ ಬಂದಾಗ ತನ್ನ ಸೆರಗಿನಲ್ಲಿ ಮಲಗಿಸಿಕೊಳ್ಳುತ್ತಿದ್ದಳು. ಅವಳಿಗೆ ನಿದ್ರೆ ಹತ್ತಿದರೆ ಸಾಕು, ಬೀರಪ್ಪನು ಎದ್ದು ಹೋಗಿ ಆಟವಾಡಿ, ಅವಳು ಏಳುವಷ್ಟರಲ್ಲಿ ಬಂದು ಮಲಗುತ್ತಿದ್ದನು. ಇದನ್ನು ತಿಳಿದ ಮಾಯವ್ವ ಅವನಿಗೆ ಸರ್ವ ವಿದ್ಯೆಗಳನ್ನು ಕಲಿಸುತ್ತಿದ್ದಳು. ವ್ಯಾಯಾಮದ ಶಾಲೆಗೆ ಕಳುಹಿಸುತ್ತಿದ್ದಳು. ಅವನು ಬರುವಷ್ಟರಲ್ಲಿ ತಂಬಿಗೆ ಹಾಲು ಕರೆದು ಕುಡಿಯಲು ಹೇಳುವಳು.

ಬೀರಪ್ಪನು ಮಕ್ಕಳೊಂದಿಗೆ ಆಟವಾಡುವಾಗ ಮಕ್ಕಳೊಂದಿಗೆ ಜಗಳವಾಡಿ ನನಗೆ ಚಿಣಿದಂಡ ಬೇಕೆಂದು ಹಠ ಹಿಡಿದಾಗ ಮಾಯವ್ವ ಮುತ್ತಿನ ಚಿಣಿದಂಡ ಮಾಡಿಸಿಕೊಡುವಳು. ಹೀಗೆ ಅವಳು ಚೆಂಡು ಲಗ್ಗಿಗಳನ್ನು ಮಾಡಿಸಿ ಕೊಟ್ಟಳು. ಇನ್ನೊಂದು ದಿನ ನನಗೆ ಬಿಲ್ಲು-ಬಾಣಗಳು ಬೇಕೆನ್ನಲು, ಮಾಯವ್ವ ತಮ್ಮನ ಪ್ರೀತಿಯಿಂದ ಶಿವನಲ್ಲಿರುವ ರಾಮಧನುಷನು ತಂದು

ಕೊಟ್ಟಳು. ಸಂತೋಷಗೊಂಡ ಬೀರಪ್ಪನು ಬಿಲ್ಲು-ಬಾಣಗಳನ್ನು ತೆಗೆದುಕೊಂಡು, ಊರ ಹೊರಗೆ ಹೋಗಿ ಆಟವಾಡುತ್ತಿದ್ದನು. ಅಲ್ಲಿಗೆ ನೀರಿಗಾಗಿ ಬಂದ ಹೆಣ್ಣು ಮಕ್ಕಳ ಗಡಿಗೆಗೆ(ಬಿಂದಿಗೆ) ಬಾಣ ಬಿಟ್ಟಾಗ, ಅವು ಕೆಳಗೆ ಬಿದ್ದು ಒಡೆದು ಹೋದವು. ಇದರಿಂದ ಕೋಪಗೊಂಡ ಹೆಣ್ಣು ಮಕ್ಕಳು ಬೀರಪ್ಪನಿಗೆ ತಂದೆ-ತಾಯಿ ಇಲ್ಲದನೇ ಎಂದು ಗದರಿದರಿಂದ, ಅವನಿಗೆ ಬೇಸರವಾಗಿ ಮನೆಗೆ ಬಂದು ಅಕ್ಕ ನನ್ನ ತಂದೆ-ತಾಯಿಯರು ಯಾರು? ಹೇಳು ಎಂದು ಹಠ ಹಿಡಿದನು. ನೀನು ಹೇಳಿದರೆ ಮಾತ್ರ ಊಟ-ನಿದ್ರೆ ಮಾಡುವೆ, ಇಲ್ಲವಾದರೆ ನಾನು ಏನನ್ನೂ ಮುಟ್ಟುವುದಿಲ್ಲ ಎಂದು ಹಠ ಮಾಡುತ್ತಿರಲು, ಮಾಯವ್ವ ಬೀರಪ್ಪನು ಅವರಿಗೆ ಸಿಕ್ಕ ಸಂಗತಿಯನ್ನು ತಿಳಿಸಿದಳು. ಇದೇ ದುಃಖದಲ್ಲಿರಲು ಮಾಯವ್ವ ನನ್ನ ತಮ್ಮನು ಈಗ ಯೌವನಕ್ಕೆ ಬಂದಿರುವನು, ಅವನಿಗೆ ಮದುವೆ ಮಾಡಿಸಬೇಕೆಂದು ನಿರ್ಧರಿಸಿದಳು. ಮಾಯವ್ವಳು ತಮ್ಮನಿಗಾಗಿ ರಾಯಣ್ಣನ ಮಗಳನ್ನು ಗೊತ್ತು ಮಾಡಿದರೆ, ಬೀರಪ್ಪನು ಅದಕ್ಕೆ ಒಪ್ಪದೆ, ನೀನು ನನ್ನ ತಂದೆ-ತಾಯಿಗಾದ ಸಮಸ್ಯೆಯನ್ನು ತಿಳಿಸಿರುವೆ, ಅದಕ್ಕೆ ನಾನು ನನ್ನ ಸೋದರಮಾವನಾದ ನಾರಾಯಣ್ಣನ ಮಗಳಾದ ಕನ್ನಿಕಾಮವ್ವನನ್ನು ಮದುವೆಯಾಗುತ್ತೇನೆ. ಇವಳನ್ನು ಬಿಟ್ಟರೆ ಜಗತ್ತಿನ ಎಲ್ಲ ಹೆಣ್ಣು ಮಕ್ಕಳು ನಿನ್ನಂತೆಯೇ ಸಹೋದರಿಯರು ಎಂದು ಹೇಳಿದನು. ಇದಕ್ಕೆ ಒಪ್ಪಿದ ಮಾಯವ್ವಳು, ಬೀರಪ್ಪನ ತಂದೆ-ತಾಯಿಯರ ಗುರುತು ಹೇಳಿ ಕನ್ನಿಕಾಮವ್ವಳನ್ನೇ ವಿವಾಹವಾಗುವಂತೆ ಸೂಚಿಸಿದಳು. ಎಲ್ಲವನ್ನು ಎದುರಿಸಿ ಬೀರಪ್ಪನು ಕನ್ನಿಕಾಮವ್ವಳನ್ನು ವಿವಾಹವಾಗಿ ಮಾಯವ್ವನ ಬಳಿ ಬಂದಾಗ, ಅವರಿಗೆ ಅವಳು ಅಶೀರ್ವದಿಸಿ ದಿಬ್ಬರಾಯನು ತನಗೆ ಕೊಟ್ಟ ಕುರಿಗಳನ್ನು ತಮ್ಮನಿಗಾಗಿ ನೀಡಿ, ಹಾರೈಸಿದಳು. ಆದರೆ ಬೀರಪ್ಪ ಅವುಗಳನ್ನು ತನ್ನ ಗೆಳೆಯನಾದ ಬಪ್ಪಣ್ಣನಿಗೆ ನೀಡಿ ಕುರಿ ಕಾಯಲು ಬಿಡುವನು. ಮಾಯವ್ವಳು ಒಬ್ಬಂಟಿಯಾಗಿ ಚಿಂಚಲದಲ್ಲಿ ನೆಲೆಗೊಳ್ಳುವಳು.

ಬೀರಪ್ಪನು ತಮ್ಮ ಊರ ಹಬ್ಬಕ್ಕೆ ಅಕ್ಕನನ್ನು ಕರೆದುಕೊಂಡು ಬರಲು, ಬಪ್ಪಣ್ಣನನ್ನು ಕಳುಹಿಸುವನು. ಕಳುಹಿಸುವಾಗ ಜೋಳದ ರೊಟ್ಟಿ, ಖಾರ ಹಚ್ಚಿ ಕೊಡುವರು. ಬಪ್ಪಣ್ಣನು ಮಾಯವ್ವಳ ಬಳಿ ಬಂದಾಗ ಸಂತೋಷದಿಂದ ಅವನನ್ನು ಬರ ಮಾಡಿಕೊಂಡಳು. ಅವನು ತಂದ ಬುತ್ತಿಯನ್ನು ತೆರೆದು ನೋಡಿ ದುಃಖದಿಂದ, ತಮ್ಮನ ಮನೆಯಲ್ಲಿ ಅಕ್ಕಿ ಇರಲಿಲ್ಲವೆ ಎಂದು ದುಃಖಿಸಿದಳು. ಆಗ ವಿಧ-ವಿಧವಾಗಿ ಅಡುಗೆ ಮಾಡಿ ಬಪ್ಪಣ್ಣನಿಗೆ ಬುತ್ತಿಯ ಕಟ್ಟಿ, ನಾನು ನನ್ನ ಮನೆಯಲ್ಲಿಯೇ ಹಬ್ಬವನ್ನು ಮಾಡುವೆ ಎಂದು ಹೇಳಿ ಕಳುಹಿಸಿದಳು.

ಬೀರಪ್ಪನು ಅಕ್ಕನ ಮಾತನ್ನು ಕೇಳಿ, ಅವನಿಗೆ ಅಕ್ಕನನ್ನು ಕರೆತರುತ್ತೇನೆಂದು ಹೇಳಿ, ಬರುತ್ತಾನೆ. ಅಕ್ಕನಿಗೆ ಬೀರಪ್ಪನನ್ನು ನೋಡಿ ಎಲ್ಲಿಲ್ಲದ ಆನಂದವಾಯಿತು. ಅವನನ್ನು ಒಳಗೆ ಕರೆದು ಕುಳಿತುಕೊಳ್ಳಲು ಮಣೆ ಹಾಕಿದಳು. ಬೀರಪ್ಪ ನನಗೆ ಕೂಡಲು, ನಾಗರ ಗದ್ದುಗೆ

ಬೇಕೆಂದನು. ಆಗ ಅಕ್ಕ ಹುತ್ತಿನ ಬಳಿ ಹೋಗಿ ನಾಗಪ್ಪನನ್ನು ಬೇಡಲು, ಮನೆಗೆ ಬಂದ ನಾಗರ ಸುರಳಿ ಸುತ್ತಿ ಹೆಡೆಯನ್ನು ಎತ್ತಿತ್ತು. ಆಗ ಬೀರಪ್ಪನು ಅದರ ಮೇಲೆ ಕುಳಿತುಕೊಂಡನು. ಬೀರಪ್ಪ ಹೊರಡು ನೀನು ಸ್ನಾನ ಮಾಡಲು ಬಂದಾಗ ನನಗೆ ಕಪ್ಪೆ-ಮೀನು ಮುಟ್ಟದ ನೀರು ಬೇಕೆನ್ನಲು, ಮಾಯವ್ವ ಗಂಗೆಯ ಬಳಿ ಭಕ್ತಿಯಿಂದ ಬೇಡಲು, ಗಂಗೆಯು ಬಂದು ಬಿಂದಿಗೆ ತುಂಬಿಸುವಳು. ಊಟಕ್ಕೆ ಕಾಮಧೇನುವಿನ ಹಾಲು ಬೇಕೆನ್ನಲು ಹಸುವಿನ ಬಳಿ ಹೋಗಿ ಪಡೆದಳು. ಆಗ ಬೀರಪ್ಪನು, ಸಂತೃಪ್ತನಾಗಿ ಅಕ್ಕ ನಾನು ನಿನ್ನನು ಕಾಡಲು ಬಂದಿಲ್ಲ. ನಿನ್ನನು ಕರೆದೊಯ್ಯಲು ಬಂದಿದ್ದೇನೆಂದು ಹೇಳಿದನು. ಆಗ ಮಾಯವ್ವಳು ತಮ್ಮನ ಮನೆಗೆ ಹೋಗಿ ಸೀರೆ ಇಷ್ಟವಿಲ್ಲವೆಂದು ಹೇಳಿದಾಗ ತಮ್ಮ ಅಕ್ಕನ ಕರೆದುಕೊಂಡು ಹೋಗಿ, ತನಗೆ ಇಷ್ಟವಾದ ಸೀರೆಯನ್ನು ಕೊಡಿಸುವನು. ಹಬ್ಬವೆಲ್ಲ ಮುಗಿಸಿ ನಂತರ ಮತ್ತೆ ಚಿಂಚಲಿಗೆ ಮಾಯವ್ವ ತೆರಳುವಳು.

ಮಾಯವ್ವನ ಪವಾಡಗಳು: ಬೀರಪ್ಪನು ಚಿಕ್ಕವನಿದ್ದಾಗ ಒಂದು ದಿನ ಮಾಯವ್ವಳು ಕಾರಹುಣ್ಣಿಮೆಯ ದಿನ ಗೆಳತಿಯರೊಂದಿಗೆ ಹಳ್ಳಕ್ಕೆ ಬಂದು ಉಸುಕಿನಲ್ಲಿ ಆಡುತ್ತಿದ್ದರು. ಅಲ್ಲಿ ಇನ್ನೊಂದು ಸಂಪ್ರದಾಯವಿದೆ, ಮಂಟಪದಲ್ಲಿ ಹಾಲು ಉಕ್ಕಿಸುವ ಸಂಪ್ರದಾಯವಿದೆ. ಹಾಲು ಯಾವ ಕಡೆ ಉಕ್ಕುವುದೋ ಆ ಕಡೆ ಸುಖದಿಂದ ಇರುತ್ತಾರೆ. ಅಂದರೆ ಆ ವರ್ಷ ಮಳೆ, ಬೆಳೆ ಚೆನ್ನಾಗಿರುತ್ತದೆ ಎಂಬ ಭಾವನೆ. ಇನ್ನೊಂದು ಕಡೆ ಬರಗಾಲ ಇದನ್ನು ಆಡುತ್ತಿರಬೇಕಾದರೆ, ಮಾಯವ್ವಳಿಗೆ ಬೀರಪ್ಪನ ಹಸಿವು ಗೊತ್ತಾಗಿ, ಅಲ್ಲಿಯೇ ಕುರಿಗಳನ್ನು ಕಾಯುವವರ ಬಳಿ ಹೋಗಿ ಹಾಲು ಕೇಳಿದಳು. ಆದರೆ ಅವರು ಕೊಡಲು ನಿರಾಕರಿಸಿದರು. ಆಗ ಅವರೊಂದಿಗೆ ಮನಸ್ತಾಪವಾಗಿ ನಿಮ್ಮ ಹಾಲೆಲ್ಲ ಹರಿದು ಹಳ್ಳವಾಗಲಿ, ನಿಮ್ಮ ಕುರಿಗಳೆಲ್ಲ ಕಲ್ಲುಗಳಾಗಲಿ ಎಂದು ಶಾಪವಿತ್ತಳು, ಹಾಗೆಯೇ ಅವಳ ಶಾಪದಂತೆ, ಈಗಲೂ ಅಲ್ಲಿರುವ ಕಲ್ಲುಗಳು ಕುರಿಗಳ ಹಾಗೆಯೇ ಇರುತ್ತವೆ. ಈ ದಿನ ಆ ಊರನ್ನು ಹಾಲುಹಳ್ಳವೆಂದೇ ಕರೆಯುತ್ತಾರೆ. ಈ ಹಳ್ಳದ ವೈಶಿಷ್ಟವೆಂದರೆ ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತದೆ. ಚಿಂಚಲಿಯಲ್ಲಿ ನೆಲೆಗೊಂಡ ಇವಳು ಸಹ ಪಶ್ಚಿಮಕ್ಕೆ ಮುಖ ಮಾಡಿರುವುದೇ ವಿಶೇಷ.

ಚಿಂಚಲಿಯ ಗ್ರಾಮದೇವತೆಯೇ ಮಾಯವ್ವ ಇವಳ ಜಾತ್ರೆಯನ್ನು ಪ್ರತಿವರ್ಷ ಫೆಬ್ರವರಿಯಲ್ಲಿ ಬರುವ ಭರತ ಹುಣ್ಣಿಮೆಯಂದು ಆಚರಿಸುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿರುವ ಚಿಂಚಲಿ ಜಾತ್ರೆಯನ್ನು ನೋಡಲು ಸಾವಿರಾರು ಜನ ಸೇರಿರುತ್ತಾರೆ. ಈಕೆಯ ಪೂಜೆ ಮಾಡುವರು ಕುರುಬರು ಮತ್ತು ಲಿಂಗಾಯತರು.

ದೈತ್ಯರನ್ನು ಸಂಹರಿಸಿದ ಕಥೆ : ಮಾಯವ್ವಳು ಜನರಿಗೆ ಕಿರುಕುಳ ನೀಡುತ್ತಿದ್ದ ಕೀಲ-ಕೀಟರೆಂಬ ದೈತ್ಯರನ್ನು ಸಂಹರಿಸಿದಳು. ಕೀಲ-ಕೀಟರೆಂಬವರು ಗ್ರಾಮದಲ್ಲಿ ಪ್ರತಿಯೊಬ್ಬರಿಗೂ ಕಿರುಕುಳ ನೀಡುತ್ತಿದ್ದರು. ಇವರ ಕಿರುಕುಳ ತಾಳಲಾರದೆ, ಶಿವನಲ್ಲಿ ಮೊರೆ ಹೋಗುತ್ತಾರೆ. ಆಗ ವಿಷ್ಣುವನ್ನು ಶಿವ ಕರೆದು, ವಿಷ್ಣುವಿಗೆ ಭೂಲೋಕಕ್ಕೆ ನೀನು ಹೋಗಿ ಮಾಯವ್ವನ ರೂಪ ತಾಳಿ, ರಾಕ್ಷಸರನ್ನು ಸಂಹಾರ ಮಾಡು ಎಂದು ಆಜ್ಞಾಪಿಸಿದನು. ಗ್ರಾಮದವರು ಶಿವನ ಆಜ್ಞೆಯಂತೆ, ವಿಷ್ಣುವು ಅರ್ಧ ಗಂಡು, ಅರ್ಧ ಹೆಣ್ಣಾಗಿ ದೈತ್ಯರನ್ನು ಸಂಹಾರ ಮಾಡುತ್ತಾಳೆ. ಇವರನ್ನು ಸಂಹಾರ ಮಾಡುವಾಗ, ಬಿಳಿ ಕುದುರೆಯ ಮೇಲೆ ಹತ್ತಿ ಕಾರಹುಣ್ಣಿಮೆಯಲ್ಲಿ ದೈತ್ಯರನ್ನು ಓಡಾಡಿಸಿ, ಅವರನ್ನು ಸಂಹಾರ ಮಾಡುತ್ತಾಳೆ. ಇವರನ್ನು ಸಂಹಾರ ಮಾಡಲು ೧೧ ದಿನಗಳನ್ನೆ ತೆಗೆದು ಕೊಂಡಳು. ಅದಕ್ಕೆ ಈಗಲೂ ಆ ಕ್ಷೇತ್ರದಲ್ಲಿ ಕಾರ ಹುಣ್ಣಿಮೆಯ ೧೧ ದಿನಗಳು ಮಾಯವ್ವ ಅಲ್ಲಿಯೇ ಇರುತ್ತಾಳೆ ಎಂಬುದು ಜನರ ನಂಬಿಕೆ. ಹಾಲುಮತದಲ್ಲಿ ಹೀಗೆ ಮಾಯವ್ವಳು ಬೀರಪ್ಪನ ಅಕ್ಕನಾಗಿ, ತಾಯಿಯಾಗಿ, ದುಷ್ಟರ ಸಂಹಾರಿಯಾಗಿ, ಗ್ರಾಮದೇವತೆಯಾಗಿ ನೆಲೆ ಗೊಂಡಿದ್ದಾಳೆ.

ಹಾಲುಮತದ ಲಕ್ಕವ್ವ : ಮಾಯವ್ವಳಂತೆ ಇವಳು ಹಾಲುಮತದ ದೈವಿ ಸ್ವರೂಪಿ ಲಕ್ಕವ್ವ ಲಕ್ಕವ್ವ ಎಂದರೆ ಮಾಯವ್ವನ ಅಕ್ಕ ಎಂದೇ ಕೆಲವು ಪುರಾಣಗಳಲ್ಲಿ ಹೇಳುತ್ತಾರೆ. ದೇವೇಂದ್ರರಾಯನ ಏಳು ಮಕ್ಕಳಲ್ಲಿ ಅಕ್ಕವ್ವಳು ಒಬ್ಬಳೆಂದು, ಮಾಯವ್ವನನ್ನು ಹರಸುತ್ತ ಬಂದಾಗ, ಎಲ್ಲ ತಂಗಿಯರು ಹೋದರು, ಮಾಯವ್ವಳನ ಜೊತೆಗೆ ಇರುವಳು ಈ ಅಕ್ಕವ್ವ. ಆದರೆ ಇನ್ನೊಂದು ಕಥೆ ಹೀಗೆ ಬಂದಿದೆ. ಕೈಲಾಸದಿಂದ ಶಿವ-ಪಾರ್ವತಿಯರು ಒಂದು ದಿನ ವಿಶ್ರಾಂತಿಗಾಗಿ ಹೇವಲಿ ಹಳ್ಳದ ದಡಕ್ಕೆ ಬಂದು ತಂಪಾದ ಗಾಳಿಯಲ್ಲಿ ವಟ ವೃಕ್ಷದ ಕೆಳಗೆ ವಿಶ್ರಾಂತಿ ಪಡೆದು, ಕುಚೇಷ್ಟೆಗಳಿಂದ ಸಂತೋಷ ಭರಿತರಾಗಿ, ಹೋಗುವಾಗ ಈ ಗಿಡದ ಕೆಳಗೆ ಯಾರು ಬರುವರೋ ಅವರು ಗರ್ಭಧರಿಸಲಿ ಎಂದು ವರ ನೀಡುವರು. ಕೆಲ ದಿನಗಳ ನಂತರ ಸುರಕನ್ಯೆಯರು ಭೂಲೋಕಕ್ಕೆ ಬಂದು, ವಟ ವೃಕ್ಷದ ಕೆಳಗೆ ವಿಶ್ರಾಂತಿಯ ಪಡೆದರು. ಇದ್ದಕ್ಕಿದ್ದಂತೆ ಅವರು ಗರ್ಭಧರಿಸಿ, ಚಿಂತೆಗೆ ಒಳಗಾದರು. ಆಗ ಈ ಸುರ ಕನ್ಯೆಯರು ತಮ್ಮ ಗರ್ಭಗಳನ್ನು ವಿಸರ್ಜಿಸಿಕೊಂಡರು. ಅವರ ಶಕ್ತಿಗಳಿಂದಾಗಿ ಎಲ್ಲ ಐದು ಹೆಣ್ಣು ಮಕ್ಕಳಾದವು. ಆ ಮಕ್ಕಳನ್ನು ನದಿಯ ತೆಪ್ಪದಲ್ಲಿ ಹಾಕಿ ತೇಲಿ ಬಿಟ್ಟರು. ನದಿಯ ದಡದಲ್ಲಿ ಕುರಿಕಾಯುವವನಾದ ಚಾಮರಾಯನು ಮಕ್ಕಳನ್ನು ನೋಡಿ, ಆನಂದದಿಂದ ಎತ್ತಿಕೊಂಡು ಮನೆಗೆ ತೆರಳಿ ಅವನ ಹೆಂಡತಿಗೆ ನೀಡಿದನು. ಮಕ್ಕಳಿಲ್ಲದ ಅವರು ಐದು ಹೆಣ್ಣು ಮಕ್ಕಳನ್ನು ಸಾಕಿದರು. ಅವರ ಹೆಸರುಗಳು ಲಕ್ಕಮ್ಮ, ಮಾಯಮ್ಮ, ಮಹಾಕಾಳಮ್ಮ, ಮಂಕಮ್ಮ, ಅಕ್ಕಮ್ಮಳೆಂದು ಹೀಗೆ ಇವರು ಬೆಳೆದು ದೊಡ್ಡವರಾದರು. ಇವರಲ್ಲಿಯ

ಲಕ್ಕಮ್ಮ ಗ್ರಾಮದೇವತೆಯಾಗುವಳು. ಸರ್ವರ ಆರಾಧ್ಯ ದೈವವಾಗಿ ಜೀವಿಸುವಳು. ಇವಳ ಜಾತ್ರೆಯು ಪ್ರತಿ ವರ್ಷ ಎರಡು ಬಾರಿ ನಡೆಯುತ್ತದೆ. ಅಕ್ಷಯ ತೃತೀಯ, ನವರಾತ್ರಿಯಂದು ವಿಜೃಂಭಣೆಯಿಂದ ಜಾತ್ರೆ ನೆರವೇರುತ್ತದೆ. ಹಾಲುಮತದಲ್ಲಿ ಸಾಕಷ್ಟು ಸ್ತ್ರೀ ದೇವತೆಗಳು ಆರಾಧಿಸಿಕೊಳ್ಳುತ್ತಿದ್ದಾರೆ. ಆದರೆ ಪುರಾಣಗಳಲ್ಲಿ ವ್ಯಕ್ತವಾಗಿರುವ ಮಾಯವ್ವ ಮತ್ತು ಲಕ್ಕವ್ವ (ಅಕ್ಕವ್ವ) ಪ್ರಸ್ತಾಪವನ್ನು ಮಾತ್ರ ನಾನು ಇಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ.

೪.೨. ಹಾಲುಮತ ಸಾಂಸ್ಕೃತಿಕ ನಾಯಕರು

ಹಾಲುಮತ ಸಮುದಾಯದಲ್ಲಿ ಸಾಂಸ್ಕೃತಿಕ ವೀರನಾಯಕರ ಜೀವನ ಮಹತ್ವ ಪೂರ್ಣವಾದದು. ಶಾಂತಮುತ್ತಯ್ಯನಿಂದ ಹಿಡಿದು ಅಮೋಘಸಿದ್ದನವರೆಗೂ ಈ ಸಮುದಾಯದಲ್ಲಿ ನಾಯಕರು ತಮ್ಮದೇ ಆದ ರೀತಿಯಲ್ಲಿ ಜನರ ಭಕ್ತಿಗೆ ಪಾತ್ರರಾಗಿದ್ದಾರೆ. ಸಾಂಸ್ಕೃತಿಕ ನಾಯಕರ ಕಥೆಗಳು ಜೀವಂತವಾಗಿ ಜನರ ಗಮನ ಸೆಳೆದಿವೆ. ಇವರ ಪ್ರತಿಫಲವಾಗಿ ಸಮುದಾಯವು ಸಮಾಜದಲ್ಲಿ ಅಗ್ರವಾಗಿ ಮೇಲೇರಿದೆ ಎಂದರೆ ತಪ್ಪಾಗಲಾರದು. ಇವರ ಆಚಾರ-ವಿಚಾರಗಳು ಜನರ ಒಳಮನಸ್ಸಿನ ಮೇಲೆ ಪರಿಣಾಮ ಬೀರಿ ಅವರಲ್ಲಿಯೂ ಒಂದು ಒಳ್ಳೆಯ ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ. ವೀರರ ಬಗ್ಗೆ ಬರುವ ವಿಭಿನ್ನ ಬಗೆಯ ಕಥೆಗಳು ಜೀವಂತವಾಗಿರುವುದಕ್ಕೆ ಪುರಾಣಗಳು ಸಾಕ್ಷಿಯಾಗಿವೆ. ಹಾಲುಮತದಲ್ಲಿ ಅನೇಕ ಸಾಂಸ್ಕೃತಿಕ ವೀರರು ಹಲವು ಪವಾಡಗಳನ್ನು ಮಾಡಿ, ಜನಸಾಗರದ ಮನದ ಮೇಲೆ ದೈವತ್ವದ ಪರಿಕಲ್ಪನೆಯನ್ನು ಮೂಡಿಸಿದ್ದಾರೆ. ಹಾಲುಮತದ ಸಾಂಸ್ಕೃತಿಕ ವೀರರಲ್ಲಿ ಕೆಲವರನ್ನು ಮಾತ್ರ ಇಲ್ಲಿ ಆಯ್ದುಕೊಳ್ಳಲಾಗಿದೆ.

೪.೨.೧. ಶಾಂತಮುತ್ತಯ್ಯ

'ತಗರ ಪವಾಡ' ಶಾಂತಮುತ್ತಯ್ಯನ ಜೀವನ ಚರಿತ್ರೆಯನ್ನು ತಿಳಿಸುವ ಕೃತಿಯಾಗಿದೆ. ಈ ಕೃತಿಯ ಮುಖಾಂತರ ಶಾಂತಮುತ್ತಯ್ಯನ ವೃತ್ತಾಂತವನ್ನು ತಿಳಿಯುತ್ತೇವೆ. ಇವರ ಕಾಲದ ಬಗ್ಗೆ ವಿವೇಚಿಸಿದಾಗ ಇವರು ಕಲ್ಯಾಣದ ಶರಣರ ಮತ್ತು ಬಿಜ್ಜಳ, ಬಸವಣ್ಣನವರ ಸಮ್ಮುಖದಲ್ಲಿ ಸತ್ತಿರುವ ತಗರನ್ನು ಬದುಕಿಸಿದ ಪವಾಡವನು ಮಾಡಲಾಗಿದೆ. ಈ ಕಾರಣದಿಂದ ಶಾಂತಮುತ್ತಯ್ಯ ಜೀವಿಸಿದ್ದು ೧೨ನೇ ಶತಮಾನ ಎಂದು ಹೇಳುತ್ತೇವೆ. ಇವರ ಕಾಲಮಾನ ಬಗ್ಗೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳಕಟ್ಟೆ ಶಾಸನದಲ್ಲಿ ಈ ರೀತಿ ವ್ಯಕ್ತವಾಗಿದೆ.

> "ಶ್ರೀ ಗಣಾಧಿಪತಿಯುಂ ನಮಃ ಸರಾಯರಾರೇವಣಾ
> ಸಿದ್ದೇಶವಾರನಾಶಿಯ ಶಾಂತಮುತ್ತೆಯನು ಇರುವಾ

ಕೂದಲು ನವಬಕುವಾಡದ ಶಿಮೆಯಬೆಳಾಗಳ
ವಿಜಾಣರಯನ ನೈದುನ....ಳಾರಯನ ಮಗನು
ಗೋಮರಯನ ನವವಕು ಬಡವ ಕಲದಲು."[೧೪]

ಈ ಶಾಸನವು ಬಿಜ್ಜಳ ಕಾಲದಲ್ಲಿ ರೇವಣ್ಣಸಿದ್ದ ಮತ್ತು ಶಾಂತಮುತ್ತಯ್ಯರು ಬದುಕಿದ್ದರು ಎಂಬ ವಿಚಾರವನ್ನು ಸ್ಪಷ್ಟಪಡಿಸುತ್ತದೆ.

೧೨ನೇ ಶತಮಾನದಲ್ಲಿ ಜೀವಿಸಿದ್ದ ಇವರು ಹುಟ್ಟಿದ ಹಿನ್ನೆಲೆಯನ್ನು ಗಮನಿಸಿದಾಗ, ಕೊಲ್ಲಾಪುರದಲ್ಲಿ ಮಾಯೆಯೆಂಬ ವೇಶ್ಯೆಯು ಜೀವಿಸುತ್ತಿದ್ದಳು. ನವಕೋಟಿಸಿದ್ದರು ಇವಳ ರೂಪುರೇಶೆಗೆ ಮನಸೋತು ಅವಳ ಬಳಿ ಹೋದಾಗ, ಅವಳು ಇವರನ್ನು ದಾಸರನ್ನಾಗಿ ಮಾಡಿಕೊಂಡು ದುಡಿಸಿಕೊಳ್ಳುತ್ತಿದ್ದಳು. ಈ ವಿಷಯ ನಾರದನಿಗೆ ತಿಳಿದು, ಶಿವನಲ್ಲಿಗೆ ತಿಳಿಸುತ್ತಾನೆ. ಆಗ ಶಿವ ವಿಟನ ವೇಷವನ್ನು ತೊಟ್ಟು, ವೇಶ್ಯೆಯ ಮನೆಗೆ ಬಂದು, ಅವಳು ನೀಡಿದ ವಿಷ ಕುಡಿದು, ಅವಳಿಗೆ ಬುದ್ದಿಯ ಕಲಿಸಿ, ನವಕೋಟಿಸಿದ್ದರನ್ನು ಕುರಿಗಳನ್ನಾಗಿ ಮಾಡುತ್ತಾನೆ. ಈ ಕುರಿಗಳನ್ನು ತೊಗರ್ಸಿ ಗ್ರಾಮಕ್ಕೆ ಹೊಡೆದುಕೊಂಡು ಬಂದು ಆದಿಗೊಂಡನ ಹೊಲದಲ್ಲಿನ ಹುತ್ತದಲ್ಲಿ ಹೊಗಿಸಿ ಕೈಲಾಸಕ್ಕೆ ತೆರಳುತ್ತಾನೆ. ಆದಿಗೊಂಡನ ೭ ಮಕ್ಕಳಲ್ಲಿನ ಕೊನೆಯವನಾದ ಪದ್ಮಗೊಂಡನಿಂದ ಹುತ್ತವು ಹೊಡೆದು ಹೋಗಿ ಕುರಿಗಳು ಹೊರ ಬಂದವು. ಪದ್ಮಗೊಂಡ ಅನಿವಾರ್ಯವಾಗಿ ಕುರಿಗಳನ್ನು ಬೀರಪ್ಪನ ಸಹಕಾರದೊಂದಿಗೆ ಕಾಯಲು ಅಲೆಮಾರಿಯಾಗಿ ಹೋಗುತ್ತಾನೆ. ದಾರಿಯಲ್ಲಿ ಕುರಿಗಳನ್ನು ತಿನ್ನಲು ಬಂದ ಬಕಾಸುರನನ್ನು ಬೀರಪ್ಪ ಸಂಹರಿಸುತ್ತಾನೆ. ಬಕಾಸುರನ ಮಗಳು ಅನಾಥೆಯಾದೆ ಎಂದು ದುಃಖಿಸುತ್ತಿರಲು, ಬೀರಪ್ಪನ ಮೇರೆಗೆ ಪದ್ಮಗೊಂಡ ಸಿರಿವಂತೆಯನ್ನು ಮದುವೆಯಾದನು. ಆದರೆ ಈ ಮೊದಲು ಲಿಂಗಮ್ಮ ಎಂಬುವಳೊಂದಿಗೆ ವಿವಾಹವಾಗಿರುತ್ತದೆ. ಇವರಿಗೆ ಹುಟ್ಟಿದ ಮಗನೆ ಶಾಂತಮುತ್ತಯ್ಯ. ಪದ್ಮಗೊಂಡನು ಸಿರಿವಂತೆಯನ್ನು ವಿವಾಹವಾಗಿ ಅಡವಿಯಲ್ಲಿ ದೂರ-ದೂರ ಸಂಚರಿಸುತ್ತಾ ವೃದ್ಯಾಪದಲ್ಲಿ ಅವರ ಗ್ರಾಮವಾದ ತೋಗರ್ಸಿಗೆ ಬಂದಾಗ ಮಲ್ಲಮ್ಮ ಕರೆತಂದು ಮನೆಯಲ್ಲಿ ಇರಿಸಿಕೊಳ್ಳುತ್ತಾಳೆ. ಒಂದು ದಿನ ಪದ್ಮಗೊಂಡ-ಸಿರಿವಂತೆಯ ಜೊತೆ ಊಟ ಮಾಡುವುದನ್ನು ಕಂಡ ಶಾಂತಮುತ್ತಯ್ಯ, ನಮ್ಮ ತಂದೆ ರಾಕ್ಷಸಿಯಾದ ಇವಳ ಊಟಮಾಡುವುದು ಸರಿವಲ್ಲವೆಂದು ತಂದೆಯ ಕುರಿ ಹಿಂಡಿಯ ಸಮಭಾಗವನ್ನು ಪಡೆದು ಹೆಂಡತಿ ದೇವಮ್ಮನೊಂದಿಗೆ ಬೇರೆಯಾಗಿ ಹೋಗುತ್ತಾನೆ. ಈ ವಿವರಣೆಗಳನ್ನು ಗಮನಿಸಿದಾಗ ಶಾಂತಮುತ್ತಯ್ಯನ ತಂದೆ ಪದುಮಣ್ಣ ಮತ್ತು ತಾಯಿ ಲಿಂಗಮ್ಮ ಎಂಬ ವಿಷಯ ಸೃಷ್ಟವಾಗಿ ತಿಳಿಯುತ್ತದೆ.

ಶಾಂತಮುತ್ತಯ್ಯನ ಕೌಟುಂಬಿಕ ಜೀವನದ ನಂತರ ಅವರು ಲಿಂಗದೀಕ್ಷೆಯನ್ನು ಪಡೆದು ಕೊಳ್ಳುತ್ತಾನೆ. ಲಿಂಗದೀಕ್ಷೆಯನ್ನು ಪಡೆದುಕೊಳ್ಳುವ ಹಿನ್ನೆಲೆಯಲ್ಲಿ ರೇವಣ್ಣಸಿದ್ಧರ ಕೃಪೆಯು ಇತ್ತು. ಶಾಂತಮುತ್ತಯ್ಯನು ಅಡವಿಯಲ್ಲಿ ಕುರಿಗಳನ್ನು ಮೇಯಿಸುತ್ತಿರುವಾಗ ಗುರು ರೇವಣ್ಣಸಿದ್ಧರು ಶಾಂತಮುತ್ತಯ್ಯನಿಗೆ ದರ್ಶನ ನೀಡಿ, ಲಿಂಗದೀಕ್ಷೆಯನ್ನು ಕೊಟ್ಟು ಕುರುಬ ಕುಲಕ್ಕೆ ಗುರುಗಳನ್ನಾಗಿ ಮಾಡಿ, ಆಶೀರ್ವದಿಸಿ ಹೋದರು. ಈ ವಿಷಯವು 'ರಸ್ತಾಪುರ ಭೀಮಕವಿಯ' ಹಾಲ್ಮತೋತ್ತಜಕ ಪುರಾಣದಲ್ಲಿ ಈ ರೀತಿ ವ್ಯಕ್ತವಾಗಿದೆ.

"ತುರುಗಳ ಪಾಲಿಸುತ್ತುಲ್ಲಾಸದಿಂದ ಸಂ
ಚರಿಸಿ ಕಲ್ಲಿನ ಕೆರೆಯ ಭಾಗದಲ್ಲಿ ನಿಲಯಮಂ
ವಿರಚಿಸುತ ಪ್ರೇಮದಿಂ ಚರರಿಂಗೆ ಪನ್ನೆರಡು ಕಂಬಿ ಪಾಲ್ಗೊಟ್ಟು ಸತತ
ಹರುಷದಿಂದರಲಲ್ಲಿಗಭಸುತ ಸಿದ್ಧೇಂದ್ರ
ನಿರದೆ ಬಂದಮೃತಮಂ ನೀಡೆಂದು ಸಮ್ಮೋಹ
ವರಸಿ ನಿಲ್ಲಲ್ಲು ಶಾಂತಮುತ್ತಯ್ಯ ಕಂಡು ಪದಪದ್ಮ ಕಂಬಿವಂದಿಸಿದನು."[೨೫]

ಶಾಂತಮುತ್ತಯ್ಯನು ಪ್ರತಿದಿನವೂ ಹನ್ನೆರಡು ಕಂಬಿ ಹಿಂಡಿ, ದಾನವನ್ನು ಮಾಡುತ್ತಿರುತ್ತಾನೆ. ಒಂದು ದಿನ ರೇವಣ್ಣಸಿದ್ಧನು ಬಂದು ಹಾಲನ್ನು ಕೇಳುತ್ತಾನೆ. ಶಾಂತಮುತ್ತಯ್ಯ ಅವರಿಗೆ ಹಾಲನ್ನು ನೀಡಿ ಅವರ ಪಾದಗಳಿಗೆ ವಂದಿಸುತ್ತಾನೆ. ಆಗ ರೇವಣ್ಣಸಿದ್ಧನು ನೀನಂದ ಮಾತುಗಳು ಸಿದ್ಧಿಸಲಿ ಎಂದು ಹಾರೈಸುತ್ತಾನೆ. ಜೊತೆಗೆ ಶಿವನ ಲೀಲೆಗಳನ್ನು ಭಕ್ತಿಯಿಂದಲೇ ಬೋಧಿಸುತ್ತಾನೆ. ಇದರಿಂದ ಪ್ರೇರಿತನಾಗಿ ಶಾಂತಮುತ್ತಯ್ಯನು ಗುರುಗಳ ಬಳಿ ಲಿಂಗದೀಕ್ಷೆ ಪಡೆದುಕೊಳ್ಳಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಮುತ್ತಯ್ಯನ ಆಶೆಯಂತೆ ರೇವಣ್ಣಸಿದ್ದರು ಲಿಂಗದೀಕ್ಷೆಯನ್ನು ದಯಪಾಲಿಸುತ್ತಾನೆ. ಜೊತೆಗೆ ನೀನು ಕುರುಬ ಕುಲಕ್ಕೆ ಒಡೆಯನಾಗಿರು ಎಂದು ಆಜ್ಞೆಯ ನೀಡುತ್ತಾನೆ ಎಂಬ ವಿಚಾರಗಳನ್ನು ಹಾಲುಮತಪುರಾಣಗಳಲ್ಲಿ ಕಾಣುತ್ತೇವೆ. ಈ ವಿಚಾರಗಳ ಜೊತೆ ಜೊತೆಗೆ ಸರೂರು ಶಾಂತಮುತ್ತಯ್ಯನಾದ ಸರೂರು ಕ್ಷೇತ್ರದ ಪ್ರಸಿದ್ಧಿಯ ವಿವರ ಕಾಣುತ್ತೇವೆ.

ಒಂದು ದಿನ ಕೋಪಗೊಂಡ ರೇವಣ್ಣರು ಶಾಂತಯ್ಯನಲ್ಲಿಗೆ ಬಂದಾಗ ಮುತ್ತಯ್ಯ ಮತ್ತು ದೇವಮ್ಮರು ಭಕ್ತಿ-ಭಾವದಿಂದ ಅವರನ್ನು ಸತ್ಕರಿಸಿದಾಗ ಆನಂದಗೊಂಡರು. ಜಂಗಮ ವೇಷದಲ್ಲಿ ಬಂದ ಶಿವನನ್ನು ಭಕ್ತಿಯಿಂದ ಪೂಜಿಸಿದರಿಂದ, ನಿಜ ರೂಪ ತೋರಿಸಿ ವರ ಬೇಡು ಎನ್ನಲು, ಮುತ್ತಯ್ಯ ನನಗೆ ದೀಕ್ಷೆಯನ್ನು ನೀಡಬೇಕೆಂದು ಬೇಡುವನು. ಇವನ ಇಚ್ಛೆಯಂತೆ ದೀಕ್ಷೆಯನ್ನು ನೀಡುವಾಗ ಕೈಲಾಸದಿಂದ ಕರಿಮಲ್ಲಿಗೆಯ ಸರ ಸುರಿದುದರಿಂದ ಆ ಜಾಗ ಸರವೂರು ನಾಮದಿಂದ ಪ್ರಸಿದ್ಧಿಯಾಗಿ, ಸರೂರು ಶಾಂತಮುತ್ತಯ್ಯನೆಂದೆ ಖ್ಯಾತಿಗೊಂಡಿದೆ.

ತಗರ ಪವಾಡದಲ್ಲಿ ಶಾಂತಮುತ್ತಯ್ಯ ಪವಾಡವನ್ನು ಜೊತೆಗೆ ಕುರುಬರ ಸಂರಕ್ಷಕನಾಗಿ ಬರುವ ವ್ಯಕ್ತಿಯಾಗಿ ಕಾಣುತ್ತಾನೆ. "ರೇವಣ್ಣಸಿದ್ದರು ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆ ನೀಡಿರುವುದರ ಜೊತೆಗೆ ಕಲ್ಯಾಣ ಪಟ್ಟಣದಲ್ಲಿ ಕುರುಬರು ಹಾಲುಕಂಬಿಯ ಮೇಲೆ ಸತ್ತ ಕುರಿಯನ್ನು ಹೊತ್ತು ಮಾರಿದ ಪ್ರಮಾದಕ್ಕೆ ೧೨ ವರ್ಷ ಪಟ್ಟಣದಿಂದ ಬಹಿಷ್ಕಾರಕ್ಕೆ ಒಳಗಾಗಿರುವ ಕುರುಬರನ್ನು ಶಾಂತಮುತ್ತಯ್ಯನು ಬಿಜ್ಜಳ ಬಸವಾದಿ ಶರಣರ ಸಮುಖದಲ್ಲಿ ಸತ್ತಿರುವ ಕಿನ್ನರಯ್ಯನ ತಗರವನ್ನು ಬದುಕಿಸಿ ತಗೆ ಪವಾಡವನ್ನು ಮೆರೆದು ಹೊರ ಹಾಕಲ್ಪಟ್ಟಿರುವ ಕುರುಬರನ್ನು ಮತ್ತೆ ಕಲ್ಲಾಣ ಪಟ್ಟಣದ ಒಳಗೆ ಬರುವಂತೆ ಮಾಡಿ, ಬಸವಣ್ಣನವರಿಂದ ಕುರುಬ ಕುಲದ ಗುರುತನದ ಕುರುಹಾಗಿ ಮೂರೇಣಿನ ಕಂಥೆಯನ್ನು ಪಡೆದುಕೊಂಡ ಐತಿಹಾಸಿಕ ಸಂಗತಿಯನ್ನು ದಾಖಲಿಸುತ್ತದೆ. ಹೀಗೆ ಪವಾಡ ಮೇರೆದ ಶಾಂತಮುತ್ತಯ್ಯನಿಗೆ ಸಂಬಂಧಿಸಿದಂತೆ ಸಿರಿವಾಳ(೧೧೭೦-೧೧೭೮), ಕೊಲ್ಲೂರು(೧೧೭೫), ಹೋತಗಲ್ಲ(೧೧೭೫), ಹಿರೇಬೇವಿನೂರು(೧೧೯೦), ತುರುವೇಕೆರೆ (೧೪೮೦)ಹೀಗೆ ಒಟ್ಟು ಆರು ಶಾಸನಗಳು ದೊರೆಯುತ್ತವೆ. ಈ ಶಾಸನಗಳಲ್ಲಿ ಶಾಂತಿಮಯ್ಯ, ಶಾಂತಮಯಮುತ್ತಯ್ಯ, ಶಾಂತಯ್ಯ ಎಂದು ಕರೆಯಲ್ಪಟರುವುದು ಕಂಡುಬರುತ್ತದೆ. ಅಲ್ಲದೆ ಇವನನ್ನು ಶಿವಯೋಗಿಯೆಂದು ತತ್‌ಕ್ಷಣದಲ್ಲಿಯೇ ಭಕ್ತಿಯನ್ನು ಗಳಿಸಿದವನೆಂದು, ಅಣಿಮಾಧೃಷ್ಟ ಗುಣ ಸಂಪನ್ನನೆಂದು, ಷಡಂಗ ಯೋಗಸಂಗತನೆಂದು ಕರೆದಿರುವುದನ್ನು ನೋಡಿದರೆ ಈತನೊಬ್ಬ ಮಹಾಪುರುಷನೆಂಬುದರಲ್ಲಿ ಸಂಶಯವಿಲ್ಲವೆನಿಸುತ್ತದೆ."[೧೬] ಇದರಿಂದಾಗಿ ಶಾಂತಮುತ್ತಯ್ಯನವರು ಕುರುಬ ಜನಾಂಗದ ಉತ್ತಮ ನಾಯಕನು ಎಂದು ಒಪ್ಪಿಕೊಳ್ಳಲು ಯಾವುದೇ ಪ್ರಶ್ನೆಗಳಿರುವುದಿಲ್ಲ.

ಹೀಗೆ ಕುರುಬ ಕುಲದಲ್ಲಿ ಹುಟ್ಟಿದ ಶಾಂತಮುತ್ತಯ್ಯ ತನ್ನ ನಿಷ್ಠೆ, ಭಕ್ತಿ-ಭಾವದಿಂದ ಶಿವನ ಕೃಪೆಗೆ ಪಾತ್ರನಾದನು. ತನ್ನ ಕುಲದವರಿಗೆ ಆದ ಅನ್ಯಾಯದಿಂದ ನ್ಯಾಯವನ್ನು ಶರಣ ರಿಂದ ಕೊಡಿಸುತ್ತಾನೆ. ಹಾಗಾಗಿ ಈತನನ್ನು ಕುರುಬ ಜನಾಂಗದ ಗುರುವೆಂದು, ಕುಲದ ಸಂರಕ್ಷಕನೆಂದು ಈಗಲೂ ಭಕ್ತಿಯಿಂದಲೇ ಅವರನ್ನು ಪೂಜಿಸುತ್ತಾರೆ. ಲಿಂಗಾಯತ ಸಂಸ್ಕೃತಿಗೆ, ಹಾಲುಮತ ಸಂಸ್ಕೃತಿಯನ್ನು ಸಂಸ್ಕೃತಿಕರಣಗೊಳಿಸಿದ ಕೀರ್ತಿ ಇವರದು. ಹಾಗಾಗಿ ಇವರನ್ನು ಹಾಲುಮತ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುವ ಗುರುಪರಂಪರೆಯಲ್ಲಿ ವಿಶಿಷ್ಟವಾಗಿ ಕಂಡುಬರುತ್ತಾರೆ.

೪.೨.೨. ಬೀರೇಶ್ವರ

ಹಾಲುಮತ ಸಮುದಾಯದಲ್ಲಿ ಬೀರಲಿಂಗ, ಬೀರಪ್ಪ, ಬೀರಲಿಂಗೇಶ್ವರ, ಬೀರದೇವರು, ಲಿಂಗ ಬೀರಣ್ಣ ಎಂದು ಕರೆಯಲ್ಪಡುವ ಬೀರೇಶನು ಹಾಲುಮತ ಪುರಾಣಗಳಲ್ಲಿ ಬರುವ ಸಾಂಸ್ಕೃತಿಕ ವೀರನಾಗಿದ್ದಾನೆ. ಬೀರೇಶನು ಒಬ್ಬ ಸಾಮಾನ್ಯ ಮನುಷ್ಯನಾಗಿ, ದೈವತ್ವದ ನೆಲೆಗೆ ಹೋಗಿರುವುದನ್ನು ನಾವು ಪುರಾಣಗಳಲ್ಲಿ ಕಾಣುತ್ತೇವೆ. ಬೀರೇಶನ ಹೆಸರು ಹಳೆ ಗ್ರಂಥಗಳಿಂದಲೂ

ಬಂದಿದೆ. ಆದ್ದರಿಂದ ಹಾಲುಮತದ ಪ್ರಾಚೀನ ದೇವರಾಗಿ, ಚಾರಿತ್ರಿಕ ವ್ಯಕ್ತಿಯಾಗಿ, ಪವಾಡ ಪುರುಷನಾಗಿ ಭಕ್ತರ ಮನದಲ್ಲಿ ನೆಲೆಗೊಂಡಿದ್ದಾನೆ.

> "ಪಂಡಿತರುಂ ವಿವಿಧಕಳಾ। ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
> ಕಂಡರ್ ಕೇಳ್ವೊಡೆ, ಗೊರವರ। ಡ (ದು) ಒಡಂಚಿಯೇ
> ಬೀದಿವರೆಯೇ ಬೀರನಕತೆಯೇ"[೧೭]

ಎಂದು ಮಧುರ ಕವಿಯ ಬೀರನ ಕಥೆಯಲ್ಲಿ ವ್ಯಕ್ತವಾಗಿದೆ. ಬೀರಪ್ಪನ ಕಥೆಯು ಕೇಳಲು ಯೋಗ್ಯವಲ್ಲದ್ದು ಎಂಬುದರ ಪ್ರಸ್ತಾಪವಿದೆ. ಏನೇ ಆದರೂ ಹಾಲುಮತದ ದೈವನಾಗಿ ಬೀರೇಶನು ಬಾಳಿದ್ದಾನೆ. ಬೀರೇಶನ ಜೀವನವೇ ಒಂದು ರೋಚಕವಾದ ಕಥೆಯಾಗಿದೆ. ಅನೇಕ ಹಾಲುಮತ ಪುರಾಣಗಳಲ್ಲಿ ಇವನ ಜನ್ಮ ವೃತ್ತಾಂತವನ್ನು ಹೀಗೆ ಕಾಣುತ್ತೇವೆ.

ಪುಷ್ಪದತ್ತನೆಂಬ ಓರ್ವ ಶಿವ ಭಕ್ತನು ಪ್ರತಿನಿತ್ಯದಂತೆ, ಪುಷ್ಪವನ್ನು ಶಿವಲಿಂಗಕ್ಕೆ ಅರ್ಪಿಸುವಾಗ, ಪುಷ್ಪವು ಕೆಳಗೆ ಬೀಳುತ್ತದೆ. ಅದನ್ನೇ ಅವನು ತೆಗೆದು ಲಿಂಗಕ್ಕೆ ಅರ್ಪಿಸುತ್ತಾನೆ. ಶಿವನು ಪ್ರತ್ಯಕ್ಷನಾಗಿ, ನೀನು ಮಾಡಿದ್ದು ಅಪರಾಧವೆಂದು ಹೇಳಿ, ಇದರಿಂದ ಮುಕ್ತಿ ಪಡೆಯಬೇಕೆಂದರೆ ಕಾಶಿಗೆ ಹೋಗಿ ಕಾಶಿಯಿಂದ ಗಂಗಾಜಲವನ್ನು ತಂದು, ಅಭಿಷೇಕ ಮಾಡಿದಾಗ, ನಿನ್ನ ಪಾಪ ನಿವಾರಿಸುವುದು ಎಂದನು. ನಾನು ಕಾಶಿಗೆ ಹೋದರೆ ಶಿವಲಿಂಗದ ಪೂಜೆ ಯಾರು ಮಾಡು ತ್ತಾರೆಂದು ಯೋಚಿಸುತ್ತಿದ್ದನು. ಆಗ ಅಲ್ಲಿಯ ಚಂದ್ರಗಿರಿಯ ಅರಸನ ಮಗನಾದ ಭರಮದೇವನನ್ನು ಕೇಳಲು, ನಿನ್ನ ತಂಗಿಯನ್ನು ಕೊಟ್ಟು ವಿವಾಹ ಮಾಡಿದ್ದಾರೆ ನಾನು ಈ ಕಾರ್ಯವನ್ನು ಮಾಡುವೆ ಎಂದು ಒಪ್ಪಿದನು. ಆಗ ಸೂರಮ್ಮಳನ್ನು ಭರಮದೇವನಿಗೆ ಕೊಟ್ಟು ವಿವಾಹ ಮಾಡಲಾಯಿತು. ವಿವಾಹವಾದ ಮೇಲೆ ಪುಷ್ಪದತ್ತನು ಕಾಶಿಗೆ ತೆರಳಿದನು. ಇಲ್ಲಿ ಭರಮದೇವನು ಅತೀ ಭಕ್ತಿಯಿಂದ ಪೂಜೆಯನ್ನು ಮಾಡುತ್ತಿದ್ದನು. ಭರಮದೇವನ ಭಕ್ತಿಗೆ ಶಿವನೇ ಮೆಚ್ಚಿದನು. ಭಕ್ತನೆಂದರೆ ಭರಮದೇವರೆ ಎಂಬ ಭಾವನೆ ಅವನಲ್ಲಿ, ಹೀಗಿರುವಾಗ ಒಂದು ದಿನ ಭರಮದೇವ ಶಿವಪೂಜೆಯಲ್ಲಿರಲು, ಕಾಶಿಯಿಂದ ಪುಷ್ಪದತ್ತ ಬಂದಾಗ, ದ್ವಾರಪಾಲಕರು ಒಳಗೆ ಬಿಡಲಿಲ್ಲ. ಆಗ ಮಕ್ಕಳಿಲ್ಲದ ಪೂಜೆ, ದೇವರಿಗೆ ಸಲ್ಲದು ಎಂದಾಗ, ಭರಮದೇವ ಬೇಸರವಾಗಿ ಮನೆಗೆ ತೆರಳಿ ಸೂರಮ್ಮದೇವಿಗೆ ತಿಳಿಸಿದಾಗ, ದಂಪತಿಗಳು ತಪಸ್ಸು ಮಾಡಿ, ಶಿವನಿಂದ ವರಪಡೆದು ಗರ್ಭವತಿಯಾದಳು. ಆಗ ಪುಷ್ಪದತ್ತ ದ್ವೇಷದಿಂದ ಗರ್ಭದಲ್ಲಿರುವ ಮಗುವನ್ನು ಸಾಯಿಸಲು ಬಂದಾಗ, ಗರ್ಭದಲ್ಲಿರುವ ಮಗುವೇ ತಾಯಿಯನ್ನು ಕಾಪಾಡುತ್ತದೆ. ಹೀಗೆ ಪವಾಡಗಳಿಂದ ಬೀರೇಶ ಜನಿಸುತ್ತಾನೆ. ಹುಟ್ಟಿದಾಗ ಪುಷ್ಪದತ್ತನ ಕುತಂತ್ರದಿಂದ ಕಾಡು ಪಾಲಾದನು. ಅಲ್ಲಿ

ಮಾಯವ್ವನ ಆಸರೆಯಲ್ಲಿ ಬೆಳೆದು ದೊಡ್ಡವನಾಗಿ, ಸೋದರ ಮಾವನ ಮಗಳನ್ನೇ ಮದುವೆಯಾದನು. ಹೀಗೆ ಇವನ ಪ್ರತಿಯೊಂದು ಜೀವನದ ಹಂತದಲ್ಲೂ ಕಷ್ಟಗಳೇ ಎಂಬುದನ್ನು ತಿಳಿಯುತ್ತೇವೆ. ಇವನ ಬಗ್ಗೆ ೧೨ನೇ ಶತಮಾನದ ಬಸವಣ್ಣನು ಬೀರಲಿಂಗನ ಬಗೆ

"ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ, ಬಾವಿ, ಹೂಗಿಡ ಮರಂಗಳಲ್ಲಿ,
ಗ್ರಾಮ ಮಧ್ಯಗಳಲ್ಲಿ, ಚೌಪಥ ಪಟ್ಟಣ ಪ್ರದೇಶದಲ್ಲಿ ಹಿರಿಯಾಲದ ಮಠದಲ್ಲಿ
ಮನೆಯ ಮಾಡಿ, ಕಂವೆಮ್ಮೆಯ, ಹಸಗೂಡು, ಬಸುಂ, ಬಾಣತಿ
ಕುಮಾರಿ, ಕೊಡಗೂಸೆಂಬವರ ಹಿಡಿದು ತಿಂಬ, ತಿರುದುಂಬ
ಮಾರಯ್ಯ, ಬೀರಯ್ಯ, ಕೇಚಗಾಮಿ, ಅಂತರ ಬೆಂತರ
ಕಾಳಯ್ಯ, ದೊಳಯ್ಯ, ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೆ?"[೧೮]

ಹೀಗೆ ಉಲ್ಲೇಖಿಸುತ್ತಾ ಬೀರಯ್ಯನು ಕಿರುಕುಳ ಕೊಡುವ ದೇವನಾಗಿದ್ದ ಎಂದು ಹೇಳಲಾಗುತ್ತದೆ. ಈ ಕಿರುಕುಳ ಯಾವ ರೀತಿಯದು ಎಂದು ಸೂಕ್ಷ್ಮವಾಗಿ ಆಲೋಚಿಸಿದ್ದಾರೆ. ಬೀರಯ್ಯನು ತನ್ನ ಸಮುದಾಯವೇ ಶ್ರೇಷ್ಠ ಎಂಬ ಭಾವನೆಯಿಂದ ಇತರ ವರ್ಗಗಳ ಜೊತೆ ಸಂಘರ್ಷವನ್ನು ಮಾಡಿರಬಹುದು. ಏಕೆಂದರೆ ಬಸವಣ್ಣನವರು ೧೨ನೇ ಶತಮಾನದಲ್ಲಿ ಕೆಳವರ್ಗಗಳ ಮತ್ತು ಮಧ್ಯಮ ವರ್ಗಗಳ ಅಸ್ಮಿತೆಯನ್ನು ಕಾಪಾಡಿಕೊಳ್ಳುವುದಕ್ಕೆ ಮುಕ್ತ ಸ್ವಾತಂತ್ರ್ಯವು ಎಲ್ಲರಿಗೂ ಇದೆ ಎಂದು ತೋರಿಸಿಕೊಟ್ಟಿದ್ದಾರೆ. ಆ ಕಾರಣಗಳು ಬೀರಪ್ಪನು ೧೨ನೇ ಶತಮಾನದಲ್ಲಿದ್ದುದು ಒಬ್ಬ ಸಾಂಸ್ಕೃತಿಕ ನಾಯಕನೆಂಬುದನ್ನು ಖಚಿತ ಪಡಿಸುತ್ತದೆ.

"ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾಟ ನಮ್ಮವ ನರಕುರಿಯ ಹಿಂಡುಗಳ"[೧೯]

ಎಂದು ಬೀರದೇವರನ್ನು ನಮ್ಮ ಕುಲದ ದೇವನೆಂದು ಆರಾಧಿಸಿದ್ದಾರೆ. ಒಟ್ಟಿನಲ್ಲಿ ಬೀರಲಿಂಗನು ಹಾಲುಮತದ ಗುರುವಾಗಿ ಬೀರಪ್ಪನ ಪಂಪರೆಯೇ ಮೂಡಿ ಬಂದಿದೆ. ಇವರೊಬ್ಬರು ಚಾರಿತ್ರಿಕ ವೀರನಾಗಿ, ಸಾಂಸ್ಕೃತಿಕ ವೀರನಾಗಿ ಹಾಲುಮತದಲ್ಲಿ ಚಿರಸ್ಥಾಯಿಯಾಗಿದ್ದಾರೆ.

೪.೨.೩. ಮಾಳಿಂಗರಾಯ

ಹಾಲುಮತದ ಸಾಂಸ್ಕೃತಿಕ ವೀರರಲ್ಲಿ ಪ್ರಮುಖರೆಂದರೆ ಮಾಳಿಂಗರಾಯ. ಧೈರ್ಯದಲ್ಲೂ, ವೀರತ್ವದಲ್ಲೂ, ಪವಾಡ ಮಾಡುವುದರಲ್ಲೂ ಮೈಕಟ್ಟಿನ ದೇಹದಲ್ಲೂ ಮಾಳಿಂಗರಾಯನ ವಿಶಿಷ್ಟತೆಯನ್ನು ಕಾಣುತ್ತೇವೆ. ಮಾಳಿಂಗರಾಯನು ಒಬ್ಬ ಚಾರಿತ್ರಿಕ ವ್ಯಕ್ತಿಯಾಗಿಯೇ ಹಾಲುಮತದಲ್ಲಿ

ಕಂಡುಬರುತ್ತಾನೆ. ಎಲ್ಲಾ ಮಹಾಪುರುಷರ ಜನನದಂತೆ ಮಾಳಿಂಗರಾಯನು ಶಿವನ ಕೃಪೆಯಿಂದ ಹುಟ್ಟಿದ ವ್ಯಕ್ತಿಯಾಗಿದ್ದಾನೆ.

ತುಕ್ಕಪ್ಪರಾಯ ಮತ್ತು ಅಮೃತಬಾಯಿಯರಿಗೆ ಮದುವೆಯಾಗಿ ಎಷ್ಟೋ ವರ್ಷಗಳಾದರೂ ಮಕ್ಕಳಾಗಿರುವುದಿಲ್ಲ. ಅವರು ಮಕ್ಕಳಿಗಾಗಿ ಘೋರ ತಪಸ್ಸನ್ನು ಕೈಗೊಳ್ಳುತ್ತಾರೆ. ಇವರ ತಪಸ್ಸನ್ನು ಕಂಡು ದೇವೇಂದ್ರನು ಎಲ್ಲಿ ನನ್ನ ಸ್ಥಾನವನ್ನು ಆಕ್ರಮಿಸುತ್ತಾನೆಂದು ತಿಳಿದು, ಅವರ ತಪಸ್ಸನ್ನು ಭಂಗಗೊಳಿಸಲು ರಂಭೆಯನ್ನು ಕಳುಹಿಸುತ್ತಾನೆ. ಅವಳು ಬಂದು ಭೀಕರವಾದ ಮಳೆಯನ್ನು ತರಿಸಿದರೂ ಯಾವುದೇ ಪ್ರಯೋಜನವಾಗದೆ ಮರಳಿ ಹೋಗುತ್ತಾಳೆ. ಕೆಲದಿನಗಳ ನಂತರ ಶಿವ ಪ್ರತ್ಯಕ್ಷನಾಗಿ, ಅವರಿಗೆ ಜಪಮಣಿ ಮತ್ತು ಮಾಣಿಕಮಣಿಯನ್ನು ಕೊಡುತ್ತಾನೆ. ಇವುಗಳನ್ನು ಪೂಜಿಸಿದರೆ, ನಿಮಗೆ ಮಕ್ಕಳಾಗುತ್ತಾರೆಂದು ತಿಳಿಸುತ್ತಾರೆ. ಇದರಂತೆ ತುಕ್ಕಪ್ಪ ಮತ್ತು ಅಮೃತಬಾಯಿ ಹಾಗೂ ತುಕ್ಕಪ್ಪನ ಸೋದರನಾದ ಸೋಮರಾಯರು ಮಣಿಗಳನ್ನು ಪೂಜಿಸಿದಕ್ಕಾಗಿ ಜಪಮಣಿಯಿಂದ ಜಗನ್ನಾಥನ ಅವತಾರಿ ಜಕ್ಕಪ್ಪರಾಯ, ಬಸವಣ್ಣನ ಅವತಾರಿ ಮಾಳಿಂಗರಾಯ ಮಾಣಿಕಮಣಿಯ ಪೂಜೆಯಿಂದ ಹುಟ್ಟುತ್ತಾರೆ. ಹೀಗೆ ಮಾಳಿಂಗರಾಯನ ಜನನವಾಯಿತು. ಇವರ ಪವಾಡಗಳು ಚಿಕ್ಕವರಿದ್ದಾಗಲೇ ಪ್ರಾರಂಭವಾದವು. ಹಾವು ಕಡಿದು ಸತ್ತ ಮಗುವನ್ನು ಮಾಳಿಂಗರಾಯ ಮೂರು ವರ್ಷದವನಿದ್ದಾಗಲೇ ಮಾಡಿ, ಹಾವನ್ನು ಕೈಯಲ್ಲಿ ಹಿಡಿದು ನೀನು ನನ್ನ ಕೈಯಲ್ಲಿ ಯಾವಾಗಲೂ ನಾಗಬೆತ್ತವಾಗಿ ಇರು ಎಂದು ಆಜ್ಞಾಪಿಸುತ್ತಾನೆ. ಇಲ್ಲಿಂದ ಮಾಳಿಂಗರಾಯನ ಪವಾಡಗಳು ಪ್ರಾರಂಭವಾದವು. ಸೋಮಣ್ಣರಾಯನು ಮಾಡಿದ ತಪ್ಪಿಗಾಗಿ, ಮೌಳಿಗದೇವಿಯ ಶಾಪಕ್ಕೆ ಒಳಗಾಗಿ, ಅವರಿಂದ ಪ್ರದೇಶದಲ್ಲಿ ಬರಗಾಲ ಬಂದು, ಪಶುವಿನ ಪಾಲನೆಗಾಗಿ ಕಾಡು-ಮೇಡುಗಳು ಅಲೆದಾಡುತ್ತಿದ್ದರು. ತುಕ್ಕಪ್ಪರಾಯ, ಸೋಮರಾಯರು. ಕೆಲವೊಂದು ಸಾರಿ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಕಳ್ಳರ ಹಟ್ಟಿಯಲ್ಲಿ ಏಳುನೂರು ಬೇಡರು ವಾಸವಾಗಿರುತ್ತಾರೆ. ಇವರು ತುಕ್ಕಪ್ಪರಾಯನ ಪಶುಗಳನ್ನು ಕದಿಯಬೇಕೆಂದು ಹೊಂಚು ಹಾಕುತ್ತಾರೆ. ಕಾಡಿಗೆ ತುಕ್ಕಪ್ಪರಾಯನು ಒಬ್ಬನೇ ಬಂದಿರುವುದನ್ನು ಕಂಡು ಬೇಡರು ಅವನ ಮೇಲೆ ಎರಗಿ ಬಂದರು. ತುಕ್ಕಪ್ಪರಾಯ ಎಷ್ಟೇ ವೀರಾವೇಷದಿಂದ ಹೋರಾಡಿದರು. ಅವರನ್ನು ಎದುರಿಸಲು ಸಾಧ್ಯವಾಗಲಿಲ್ಲ. ಎಲಾ ನಾನು ಅವರಿಂದ ಸಾಯುತ್ತೇನೆಂದು ಭಾವಿಸಿ, ಅವನೇ ಕತ್ತಿಯಿಂದ ದೇಹಕ್ಕೆ ಚುಚ್ಚಿಕೊಳ್ಳುತ್ತಾನೆ. ಇದನ್ನು ಕಂಡ ಬೇಡರು ಆಕಳುಗಳನ್ನು ಕರೆದೊಯ್ಯುತ್ತಾರೆ. ಅದರಲ್ಲಿರುವ ಗೂಳಿಯು ತಪ್ಪಿಸಿಕೊಂಡು, ಮನೆಯ ಬಳಿ ಬಂದಾಗ ಅಮೃತಬಾಯಿ, ಸೋಮರಾಯ ಏನು ಕೆಡುಕು ಆಗಿರುವುದೆಂದು ಭಾವಿಸಿ, ಅದರ ಹಿಂದೆಯೇ ತೆರಳಿದಾಗ, ಅಲ್ಲೊಂದು ದುಃಖ ವಿಷಯವಿದೆ. ತುಕ್ಕಪ್ಪರಾಯನು ಮರಣ ಹೊಂದಿರುತ್ತಾನೆ. ಮಕ್ಕಳೆಲ್ಲರು ದುಃಖಕ್ಕೆ ಒಳಗಾದಾಗ ಮಾಳಿಂಗರಾಯನ

"ಬ್ಯಾಡರ್ನ ಹುಡುಕ್ಯಾಡಿ ಚಂಡ ಕಡಿತೇವೆ ಕೂಗ್ಯಾಡಿ
ಚಂಡಿನ ಮೇಲೆ ವಕ್ರಗಟ್ಟಿ ಕಟ್ಟಿತೆವೊ
ರುದ್ದರ ಗಟ್ಟಿ ಮ್ಯಾಲ ಮಾಡಿ
ಆಗು ಹೋಗುವ ಭವಿಷ್ಯ ಹೇಳತೇವ ತಂದೀ
ಕೇಳಪ್ಪ ಮುಂದಿನ ನುಡಿ ನುಡಿ"[೨೦]

ಎಂದು ಮಾಳಿಂಗರಾಯ ಅವರನ್ನು ನಾನು ಸಂಹರಿಸುತ್ತೇನೆಂದು ಪ್ರತಿಜ್ಞೆ ಕೈಗೊಳ್ಳುತ್ತಾನೆ. ಪ್ರತಿಜ್ಞೆಯಂತೆ, ಗುರುವಿನ ಮಾರ್ಗದರ್ಶನದಿಂದ ಬೇಡರನ್ನು ಸಂಹರಿಸುತ್ತಾನೆ. ಮಾಳಿಂಗರಾಯನ ಜೀವನದ ಅತ್ಯಂತ ಬಹುಮುಖ್ಯವಾದ ಭಾಗವೆಂದರೆ ಗುರು ಬೀರಣ್ಣನ ಭೇಟಿ, ಬೀರಣ್ಣನು ತನ್ನ ಶಿಷ್ಯನಾದ ಮಾಳಿಂಗರಾಯನನ್ನು ಪರೀಕ್ಷಿಸಲು ನನ್ನ ಪೂಜೆಗೆ ಕಪ್ಪೆ ಮುಟ್ಟದ ನೀರು, ಹುಳ ಸವಿಯದ ಹೂ ಬೇಕೆನ್ನಲು, ಮಾಳಿಂಗರಾಯನು ಗುರುವಿನ ಮಹಿಮೆಯೊಂದಿದ್ದರೆ, ಎಂತಹ ಪರೀಕ್ಷೆಯನ್ನೂ ನಾನು ಗೆಲ್ಲುವೆ ಎಂದು ಹೋಗಿ ಪರೀಕ್ಷೆಯಲ್ಲಿ ಜಯಗಳಿಸಿ ಬರುತ್ತಾನೆ. ಬಂದು ಬೀರಣ್ಣನ ಪೂಜೆಯನ್ನು ಮಾಡುತ್ತಾನೆ.

ಮಾಳಿಂಗರಾಯನ ಗುರು ಭಕ್ತಿ ಇನ್ನು ಸಮಾಜಕ್ಕೆ ತಿಳಿಯಬೇಕೆಂದು ಬೀರಪ್ಪನು ನನ್ನ ಪ್ರಸಾದಕ್ಕೆ ಹುಲಿ ಹಾಲು ಬೇಕೆನ್ನಲು, ಮಾಳಿಂಗರಾಯ ಆಗಲಿ ಮಹಾಪ್ರಭು ಎಂದು ಗುರು ಕೊಟ್ಟ ಭಂಡಾರವನ್ನು ಪಡೆದು ಹುಲಿಯನ್ನು ಹುಡುಕುತ್ತಾ ಕಾಡಿಗೆ ಹೋದನು. ಅಲ್ಲೊಂದು ಗುಹೆಯಲ್ಲಿ ಹುಲಿಯ ಮರಿಗಳು ಆಟವಾಡುತ್ತಿದ್ದವು. ಅವುಗಳಿಗೆ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ, ಅದೇ ಸಂದರ್ಭದಲ್ಲಿ ಒಂದು ಸರ್ಪ ಅವುಗಳಿಗೆ ಕಚ್ಚಲು ಹೋಗುತ್ತಿತ್ತು. ಹುಲಿಯ ಮರಿಗಳನ್ನು ಸರ್ಪದಿಂದ ಕಾಪಾಡಿ, ಕಣ್ಣು ಕಾಣುವಂತೆ ಮಾಡುತ್ತಾನೆ. ಅದೇ ಸಂದರ್ಭದಲ್ಲಿ ತಾಯಿ ಹುಲಿಯು ಆರ್ಭಟಿಸುತ್ತ, ಇನ್ನೇನು ಮಾಳಿಂಗರಾಯನ ಮೇಲೆ ಹಾರಬೇಕೆಂದಾಗ, ಮರಿ ಹುಲಿಗಳು, ಅಮ್ಮಾ ಇವರು ನಮಗೆ ಸರ್ಪದಿಂದ ಪಾರು ಮಾಡಿದ್ದಾರೆ. ಹಾಗೆಯೇ ಕಣ್ಣು ಕಾಣುವಂತೆ ಮಾಡಿದ್ದಾರೆ ಎಂದಾಗ ಶಾಂತವಾಗಿ ಹುಲಿ ನನ್ನಿಂದ ತಪ್ಪಾಗುತ್ತಿತ್ತು, ನಿಮಗೆ ಏನು ಬೇಕು ಕೇಳಿ, ನಾನು ಪೂರೈಸುವೆ ಎನ್ನಲು ನನ್ನ ಗುರುವಿಗೆ ಹುಲಿಯ ಹಾಲು ಬೇಕಾಗಿದೆ ಎಂದಾಗ, ಹುಲಿಯು ನನ್ನ ಮೇಲೆ ಕುಳಿತುಕೋ ನಾನೇ ಅಲ್ಲಿಗೆ ಬಂದು ಹಾಲು ನೀಡುವೆ ಎಂದು ಹೇಳಿತು. ಹುಲಿಯ ಮೇಲೆ ಬಂದ ಮಾಳಿಂಗರಾಯನನ್ನು ಕಂಡು ಎಲ್ಲರು ಅಚ್ಚರಿಗೊಂಡರು. ಬೀರಪ್ಪನ ಮೇಲೆ ಶಿಷ್ಯರಿಗೆ ಎಷ್ಟೊಂದು ಭಕ್ತಿಯಿದೆ ಎನ್ನುವುದು ಪ್ರತಿಯೊಬ್ಬರಿಗೂ ತಿಳಿಯುತ್ತದೆ.

ಮಾಳಿಂಗರಾಯನು ಹೀಗೆ ಪವಾಡಗಳನ್ನು ಮಾಡುತ್ತ ಜೀವಿಸಿದನು. ಗುರುವೆಂದರೆ ಬೀರಪ್ಪ–ಶಿಷ್ಯನೆಂದರೆ ಮಾಳಿಂಗರಾಯನೆಂದು ಹಾಲುಮತದಲ್ಲಿ ಗುರು–ಶಿಷ್ಯರ ಸಂಬಂಧ ಹಿರಿದಾದದು ಹೀಗೆ ಪವಾಡಗಳನ್ನು ಮಾಡಿ ಮೆರೆದ ಮಾಳಿಂಗರಾಯನು ಸಾಂಸ್ಕೃತಿಕ ವೀರನಾಗಿ, ಹಾಲುಮತದ ದೈವವಾಗಿ ಪೂಜೆಗೆ ಒಳಗಾಗುತ್ತಿದ್ದಾನೆ.

"ಮಾಳಿಂಗರಾಯನ ಹಾಲಿನ ಬಿಂದಿಗೈತಿ ಹಾಲುಮತದಾಗ ಮೇಲವನು
ಹಾಲುಮತದಾಗ ಮೇಲವನು ಅದು ಯಾವ ಜಾಗದಾಗೈತವನು
ಕ್ವಾಣಗನೊರೆಂಬ ಉರಂದಿನೋ ಕರಿಸಿದ್ದನ ಪಾಳೆಯೊಂದಿನೋ
ಆ ಬಿಂದಗಿರಿಯ ಗಗನಕ ಹಾರಿಸುವನು ಮೇಲೆ ಬಿಟ್ಟ ಅಂತರಲಿ ನಿಂದ್ರುಸುವನು
ಸೀಗೆ ಹುಣ್ಣಿಮೆ ಸಿರಿಬೆಳಂದಿಗಳ ಹಾಲಿನಬ್ಬ ಮಾಳಪ್ಪ ಹಾಕಿದನೋ
ಹಾಲಿನಬ್ಬ ಮಾಳಪ್ಪ ಹಾಕಿದನೊ ಸಿದ್ದರ ದಂಡ ಉಣಿಸಿದನೋ
ಮೂನತ್ಮೂರು ಕೋಟಿ ಸಿದ್ದರೊಳಗ ಭಕ್ತಿವಂತನವ ಮಾಳಪ್ಪನೋ
ಅವನು ಕೊಟ್ಯಾನುಕೋಟಿ ಪುಣ್ಯನುಕೋಟಿ ಶಿವಶಿಖರಕೆ ಮುಂಡಾಸು ಸುತ್ತಿದವನೊ
ಕ್ಯಾಡ ಬಬ್ಬಲಿ ಗುಡ್ಡದೊಳಗ ಭಂಡಾರದಟ್ಟಿ ಹಾಕಿದವನೋ
ಅಲ್ಲಿ ಏಳುನೂರು ಕುರಿಗಳೂ ಹಿಂಡಿದನೋ
ರಾತ್ರಿ ಬ್ಯಾಸಗಿ ಮಳೆಗಾಲ ನಿದ್ದಿ ನೀರರಡಕೆ ಅರಿಯದವನೋ
ಗಂಡು ತೋಳಿನ ಮಿಂಡನ ಕರದ ಹಿಂಡ ತೋಳ ಗಂಡ
ಬಾರದವನೋ ಹಾಲುಬಾನವ ನೀಡಿದವನೋ ಅವ ಹಿಂಡ ಕಾಯಲು ಹೇಳದ
ಸಿದ್ದರೊಳಗ ಶಿವಗೇನಿ ಅವನು ಮಾನವರೊಳಗ ಮನಗೇನಿನವನು
ಎಳೆಯರಿ ಸಂಗಡ ಮಾತನಾಡಿದವನೋ ಆರ್ತ ತೀರ್ಥದಾಗ
ಕರಿಯ ಮಲ್ಲಿಗೆ ಹೂತಂದವನೊ
ತನ್ನ ಗುರುವಿಗೆ ಮುಟ್ಟಿಸಿದ ಗುಣವನುತನೊ ಕರಿದೇವರ ಕದನೆಕ್ಕಿದ್ದನೋ"[೨೧]

ಮಾಳಿಂಗರಾಯನು ಬೀರಪ್ಪನ ಶಿಷ್ಯ. ತನ್ನ ಆರಂಬಿಕ ಜೀವನ ತುಕ್ಕಪ್ಪರಾಯನ ಆಸೆಯನ್ನು ಪೂರೈಸುವುದಕ್ಕೆ ಮಾಡಿದ, ನಂತರ ಗುರು ಬೀರಪ್ಪನ ಆಜ್ಞೆಗಾಗಿ ಮಾಡಿದಂತೆ ಕಾಣಿಸುತ್ತದೆ. ಈ ಕಾರ್ಯಗಳನ್ನು ತನ್ನ ಇಚ್ಚೆಯಂತೆ ಮಾಡಿರುವುದು ಕಂಡು ಬರುವುದಿಲ್ಲ.

"ಮಾಳಿಂಗರಾಯ ಚಾರಿತ್ರಿಕ ಕಥನಗಳನ್ನು ಗಮನಿಸಿದರೆ ಮೊದಲು ನಾಥಪಂಥದ ಪ್ರಭಾವಕ್ಕೆ ಒಳಗಾಗಿ, ಕ್ರಮೇಣ ಸಿದ್ದಪಂಥದ ಸಂಕ್ರಮಣಾವಸ್ಥೆಯಲ್ಲಿ ಬದುಕಿ ಕೊನೆಗೆ ಶೈವನಾಗಿದ್ದಾನೆ. ಬೀರಪ್ಪನ ಪೂಜೆಯ ಆಯ್ಕೆ ಶೈವ ಆರಾಧನೆಯ ಆಯ್ಕೆಯಂತೆ ಕಾಣಿಸುತ್ತದೆ.

ಈತ ಭಂಡಾರ ಆರಾಧಕ ಭಂಡಾರ ಆರಾಧನೆಯಲ್ಲಿ ಅಪಾರ ಶ್ರದ್ಧೆಯುಳ್ಳವರು. ಭಂಡಾರ ಪಂಥವನ್ನು ಸಮರ್ಥವಾಗಿ ಮಂಡಿಸುವ ಪರಿಣಿತಿ ಹೊಂದಿದ್ದ. ಎದುರಾಳಿಗಳು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಅವರನ್ನು ಭಂಡಾರದಿಂದಲೇ ಸೋಲಿಸಿಬಿಡುತ್ತಿದ್ದ. ಭಂಡಾರ ಉಗ್ಗಿ ಗೆಲ್ಲುವ ಪ್ರಸಂಗದಂಥ ಅಂಶಗಳು ದ್ರಾವಿಡರ ತಾಂತ್ರಿಕಪಂಥ ನಂತರದ ನಾಥಪಂಥಗಳ ಸಂಬಂಧದ ಸೂಚನೆಗಳು".[೨೨]

ಮಾಳಿಂಗರಾಯನ ಆರಾಧನೆಗಾಗಿ "ಭಂಡಾರ ಮತ್ತು ಕುರಿಉಣ್ಣೆ ಅರ್ಪಿಸುವ ಆಚರಣೆ ರೂಢಿಯಲ್ಲಿದೆ. ಹುಲಿಜಂತಿ ಗ್ರಾಮದಲ್ಲಿ ದೀಪಾವಳಿ ಅಮವಾಸ್ಯೆಯ ದಿನದಂದು ನಡೆಯುವ ಜಾತ್ರೆಯಲ್ಲಿ ಭಕ್ತಾದಿಗಳು ಸುಮಾರು ೧೦ ಕ್ವಿಂಟಾಲ್‌ಗಿಂತ ಹೆಚ್ಚು ಭಂಡಾರ ಅರ್ಪಿಸಿ ಸಂಭ್ರಮಿಸುತ್ತಾರೆ. ಭಂಡಾರ, ಅರಿಶಿನ ತಂಗಡಿ, ಹೊನ್ನರಿಕೆ ಗಿಡ ಇವೆಲ್ಲ ಔಷಧಿಯ ಗುಣಗಳ ಅಪರೂಪದ ವಸ್ತುಗಳು ವೈದ್ಯಕೀಯತೆ ವಿಪರೀತ ಕೊರತೆಯಿದ್ದ ಹಿಂದಿನ ಕಾಲದಲ್ಲಿ ಅರಿಶಿನದಂತೆ ಔಷಧಿ ಗುಣಗಳಿರುವ ವಸ್ತುವನ್ನು ಕಂಡುಕೊಂಡು ಜನ ಸಂಭ್ರಮಿಸುವುದು ಸಹಜವೇ. ಹಾಗಾಗಿ ಭಂಡಾರದ ಪ್ರಾಶಸ್ತ್ಯ ಹೆಚ್ಚು ಕಂಡು ಬರುತ್ತದೆ."[೨೩]

ಹಾಲುಮತ ಸಾಂಸ್ಕೃತಿಕ ನಾಯಕರಂತೆ ಆಂದ್ರ, ಮಹಾರಾಷ್ಟ್ರ, ಕರ್ನಾಟಕ ಪ್ರದೇಶಗಳಲ್ಲಿ ಜನಪ್ರಿಯನಾದ ಸಾಂಸ್ಕೃತಿಕ ವೀರ ಮಾಳಿಂಗರಾಯ.

೪.೨.೪. ಅಮೋಘಸಿದ್ಧ

ಅಮೋಘಸಿದ್ದನು ಒಬ್ಬ ಶಿವನ ಪರಮ ಭಕ್ತನಾಗಿರುತ್ತಾನೆ. ಇವನಿಗೆ ಮಹಾ ಭಕ್ತನೆಂಬ ಅಹಂಕಾರವಿರುತ್ತದೆ. ನನಗಿಂತ ಶ್ರೇಷ್ಠ ಶಿವಭಕ್ತರು, ಈ ಲೋಕದಲ್ಲಿ ಯಾರೂ ಇಲ್ಲವೆಂದು ಕೈಲಾಸದಲ್ಲಿ ಇರುವ ಅಮೋಘಸಿದ್ದ ತಿಳಿದಿರುತ್ತಾನೆ. ಈ ವಿಷಯ ಶಿವನಿಗೆ ಗೊತ್ತಾಗುತ್ತದೆ, ಮಾಳಿಂಗರಾಯನನ್ನು ಭೂಲೋಕದಲ್ಲಿ ಶಿವಭಕ್ತನೆಂದು ಕರೆಯುತ್ತಾರೆ, ಆದರೆ ಅವನು ನನಗಿಂತ ಶಕ್ತಿಶಾಲಿ ಭಕ್ತನಲ್ಲ. ನಾನು ಅವನು ಎಂತಹ ಭಕ್ತನೆಂದು ನೋಡಬೇಕೆಂದು ಪರೀಕ್ಷಿಸಲು ಭೂಲೋಕಕ್ಕೆ ಬರುತ್ತಾನೆ. ಶಿವನ ಅನುಮತಿಯನ್ನು ಪಡೆದು ಶಿವನು ಮಾಳಿಂಗರಾಯನನ್ನು ತೋರಿಸಿ ಮಾಯವಾಗುತ್ತಾನೆ. ಆಗ ಅಮೋಘಸಿದ್ದನು ಹುಲಜಂತಿಗೆ ಬಂದನು. ಮಾಳಿಂಗ ರಾಯನು ಅತಿಥಿಯೆಂದು ಭಾವಿಸಿ, ಅಮೋಘಸಿದ್ದನನ್ನು ಭಕ್ತಿಯಿಂದ, ಗೌರವದಿಂದ ಬರಮಾಡಿ ಕೊಂಡರು. ಆದರೆ ಅಮೋಘಸಿದ್ದ ಅಹಂಕಾರದಿಂದ ಮಾತನಾಡಿದನು. ಇವರಿಬ್ಬರ ನಡುವೆ ಶಕ್ತಿ ಪ್ರದರ್ಶನದ ಸ್ಪರ್ಧೆಗಳು ನಡೆದವು.

ಅಮೋಘಸಿದ್ದನು ಹೋಗುವ ಎತ್ತುಗಳನ್ನು ಹಿಂದಕ್ಕೆ ನಡೆಯುವಂತೆ ಮಾಡಿದನು. ಆಗ ಮಾಳಿಂಗರಾಯ ಕೈಮಾಡಿದರೆ ಸಾಕು, ಎತ್ತುಗಳು ಮುಂದೆ ನಡೆದವು.

ಅಮೋಘಸಿದ್ದನಿಗೆ ಮಾಳಿಂಗರಾಯನು ಮಳೆ ತರಿಸು ಎಂದನು, ಅಮೋಘಸಿದ್ದನು ತನ್ನ ಶಕ್ತಿಯಿಂದ ಮಳೆಯನ್ನು ತರಿಸಿದರೆ, ಮಾಳಿಂಗರಾಯನು ಕೈ ಮಾಡಿದರೆ ಮಳೆ ಮತ್ತೆ ಆಕಾಶದಲ್ಲಿ ಅಡಗಿಕೊಂಡಿತು. ಮತ್ತೆ ಕರೆದಾಗ ಮಳೆ ಧಾರಾಕಾರವಾಗಿ ಸುರಿಯತೊಡಗಿತ್ತು. ಆಗ ಅಮೋಘಸಿದ್ದನು ಸೋತು, ಮಾಳಿಂಗರಾಯನಿಗೆ ಸಕಲ ವಿದ್ಯೆಗಳನ್ನು ದಯಪಾಲಿಸಿದನು. ಮಾಳಿಂಗರಾಯನನ್ನು ಪರೀಕ್ಷಿಸಿ ಸೋತು ಗರ್ವವನ್ನು ಬಿಟ್ಟನು.

ಅಮೋಘಸಿದ್ದನ ಪವಾಡಗಳು

೧. ಕುಂಬಾರ ಗುಂಡಯ್ಯನಿಗೆ ಮಕ್ಕಳಿರುವುದಿಲ್ಲ, ಅವರು ಅಮೋಘಸಿದ್ದನ ಬಳಿ ಬಂದು ಭಕ್ತಿಯಿಂದ ಸ್ವಾಮಿ ಮದುವೆಯಾಗಿ ಎಷ್ಟೋ ವರುಷಗಳಾದರೂ ನಮಗೆ ಮಕ್ಕಳಾಗಲಿಲ್ಲ. ದಯಮಾಡಿ ಮಕ್ಕಳ ಭಾಗ್ಯ ನೀಡಿ ಎಂದಾಗ, ಮಗುವನ್ನು ನಾನು ದಯಪಾಲಿಸುವೆ, ಆದರೆ ಹುಟ್ಟಿದ ಕೂಸಿನ ಮುಮ್ಮೆಟ್ಟಿ ಗುಡ್ಡದಲ್ಲಿ ಬಿಡಬೇಕೆಂದಾಗ ಅದಕ್ಕೆ ಒಪ್ಪಿದ ಕೂಡಲೇ ಗುಂಡಯ್ಯ ಮತ್ತು ನೀಲಮ್ಮ ದಂಪತಿಗಳಿಗೆ ಗಂಡು ಮಗು ಜನಿಸಿತು.

೨. ಒಂದು ದಿನ ಊರ ಅಗಸಗಿತ್ತಿಯು ಮಗುವನ್ನು ಕಟ್ಟೆಯ ಮೇಲೆ ಮಲಗಿಸಿ, ಅದು ಎಚ್ಚರವಾಗುವುದರೊಳಗೆ ಬಟ್ಟೆಯನ್ನು ಒಗೆದು ತರಬಹುದೆಂದು ಅರಿತು, ಬಟ್ಟೆ ತೆಗೆದುಕೊಂಡು ಹೋದಳು. ಆದರೆ ಅವಳ ಹಿಂದೆಯೇ ಆ ಮಗು ಎದ್ದು ಹೊರಟಿತು. ಅದನ್ನು ಅವಳು ಗಮನಿಸಲಿಲ್ಲ. ಮಗು ಕಾಲುಜಾರಿ ಹಳ್ಳದಲ್ಲಿ ಬಿತ್ತು. ಅಗಸಗಿತ್ತಿ ಬಟ್ಟೆಗಳನ್ನು ತೆಗೆದುಕೊಂಡು ಬಂದು ಮನೆಯಲ್ಲಿ ನೋಡಿದಳು ಕಂದ ಕಾಣಲಿಲ್ಲ. ಎರಡು ದಿನಗಳಾದರೂ ಮಗು ಬರಲಿಲ್ಲ. ಕೊನೆಗೆ ಅಮೋಘಸಿದ್ದನ ಬಳಿ ಹೋಗಿ, ದುಃಖವನ್ನು ತೋಡಿಕೊಂಡಾಗ ನೀನು ಹಳ್ಳದ ದಡಕ್ಕೆ ಹೋಗಿ ಮಗುವನ್ನು ಕರಿ, ಮಗು ಬರುವುದು ಎಂದಾಗ, ಹಾಗೆ ಮಾಡಲು ಹಳ್ಳದಿಂದ ಮಗು ನಗುತ್ತಾ ಓಡಿ ಬಂದು ತಾಯಿಯ ಮಡಿಲು ಸೇರಿತು.

ಹೀಗೆ ಇನ್ನೂ ಅನೇಕ ಪವಾಡಗಳನ್ನು ಅಮೋಘಸಿದ್ದನು ಮಾಡಿರುತ್ತಾನೆ. ಅಮೋಘಸಿದ್ದನು ರಾಜನಾದ ನಾಗರಾಜನ ಮಗಳಾದ ಪದ್ಮಾವತಿಯನ್ನು ಮದುವೆಯಾಗುತ್ತಾನೆ. ಇದಕ್ಕೆ ಹಿನ್ನೆಲೆಯಾಗಿ ಪ್ರಚಲಿತದಲ್ಲಿರುವ ಒಂದು ಕಥೆ ಹೀಗಿದೆ; ನಾಗರಾಜನು ಒಂದು ಕೆರೆಯನ್ನು ಕಟ್ಟಿಸಿರುತ್ತಾನೆ. ಆದರೆ ಅದು ಆರು ತಿಂಗಳಾದ ನಂತರ ಬಿದ್ದು ಬಿಡುತ್ತಿತ್ತು. ಇದನ್ನು ಯಾರು ಸರಿ ಮಾಡುತ್ತಾರೋ ಅವರಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆಂದು ಹೇಳಿದನು. ಹೇಳಿದ ಹಾಗೆ ವಿವಾಹ ಮಾಡಿಸಿದನು. ಹೀಗೆ ಇನ್ನೂ ಕಥೆ ಮುಂದುವರೆಯುತ್ತದೆ. ಇದನ್ನು ಕಥಾಸ್ವರೂಪದಲ್ಲಿ ನೋಡುತ್ತೇವೆ.

ಅಮೋಘಸಿದ್ದನ ದೇವಾಲಯವು ವಿಜಯಪುರದ ವಾಯುವ್ಯ ದಿಕ್ಕಿಗೆ ಸುಮಾರು ೧೫ ಕಿ.ಮೀ ದೂರದಲ್ಲಿರುವ ಮುಮ್ಮಟ ಗಿರಿಯಲ್ಲಿ ಇದೆ. ಇದು ಮೂರು ಮಡ್ಡಿ ಮಟ್ಟಿಯಿಂದ ಕೂಡಿದ ಎತ್ತರ ಪ್ರದೇಶದಲ್ಲಿರುವುದರಿಂದ ಅದಕ್ಕೆ ಮುಮ್ಮಟಗಿರಿ ಎಂದು ಹೆಸರಾಗಿದೆ. ಮುಮ್ಮಟಗಿರಿಗೊಂದು ಐತಿಹಾಸಿಕ ಕಥೆ ಇದೆ. ಶಿವನಿಂದ ವರ ಪಡೆದ ಅಮೋಘಸಿದ್ದನು ತನ್ನ ಗುರುವಿನೊಂದಿಗೆ ಭೂಲೋಕಕ್ಕೆ ಬರುತ್ತಾನೆ. ಗುರು ಹೇಳಿರುತ್ತಾನೆ ನೀನು ಮುಂದೆ ಹೋಗು, ನಾನು ಹಿಂದೆ ಬರುತ್ತಿರುತ್ತೇನೆ ಯಾವ ಕಾರಣಕ್ಕೂ ನೀನು ಹಿಂದೆ ತಿರುಗಿ ನೋಡಬಾರದು, ನೋಡಿದರೆ ನಾನು ಇರುವುದಿಲ್ಲ. ಹಾಗೆಯೇ ಆಗಲಿ ಎಂದು ಅಮೋಘಸಿದ್ದ ಮುಂದೆ ನಡೆದರೆ, ಗುರು ಹಿಂದೆ ಹೀಗೆ ಹೋಗುತ್ತಿರಲು ಅಮೋಘಸಿದ್ದರಿಗೆ ಏನೂ ಶಬ್ಧಬಾರದೆ ಇರುವ ಕಾರಣ ಹಿಂದೆ ನೋಡುತ್ತಾನೆ, ನೋಡಿದ ತಕ್ಷಣ ಗುರು ಸೋಮರಾಯ ಮಾಯವಾಗುತ್ತಾನೆ. ಆಗ ಅಮೋಘಸಿದ್ದನು ಅಲ್ಲಿಯೇ ನೆಲೆ ನಿಲ್ಲುತ್ತಾನೆ. ಅದುವೆ ಮುಮ್ಮಟಗಿರಿ ಆಗಿದೆ. ಹೀಗೆ ಕೆಲವು ಸಂಗತಿಗಳಿಂದ ಅಮೋಘಸಿದ್ದನು ಹಾಲುಮತದಲ್ಲಿ ಸಾಂಸ್ಕೃತಿಕ ವೀರನಾಗಿದ್ದಾನೆ.

೪.೨.೫. ರೇವಣ್ಣಸಿದ್ಧ

ಹಾಲುಮತ ಪುರಾಣಗಳಲ್ಲಿ ರೇವಣ್ಣಸಿದ್ದ ಪ್ರಮುಖವಾದ ವ್ಯಕ್ತಿಯಾಗಿ ಮೂಢಿ ಬಂದಿದ್ದಾನೆ. ಇವರ ಹುಟ್ಟಿನ ಹಿನ್ನೆಲೆಯನ್ನು ಗಮನಿಸಿದಾಗ ಹರಿಹರನ 'ರೇವಣ್ಣಸಿದ್ದೇಶ್ವರನ ರಗಳೆ' ಯಲ್ಲಿ ಹೀಗೆ ಮೂಢಿ ಬಂದಿದೆ. ಒಂದು ದಿನ ಶಿವನ ಒಡ್ಡೋಲಗದಲ್ಲಿ ತಾಂಬೂಲವನ್ನು ಕೊಡಲು ರೇಣುಕನನ್ನು ಕರೆಯಲು, ಅವನು ಅವಸರವಾಗಿ ಬರುವಾಗ ದಾರುಕನೆಂಬ ದೇವಗಣನನ್ನು ದಾಟಿ ಬರುತ್ತಾನೆ. ಕೋಪಗೊಂಡ ದಾರುಕ ನೀನು ಭೂಲೋಕದಲ್ಲಿ ಜನಿಸಬೇಕು ಎಂದು ಶಾಪ ನೀಡುತ್ತಾನೆ. ಆಗ ಪರಿಹಾರವಾಗಿ ಶಿವನ ಬಳಿ ಹೋದಾಗ ನೀನು ಲಿಂಗದಲ್ಲಿ ಜನಿಸು ಎಂದು ನಿಶಾಪವನ್ನು ನೀಡುವನು.

"ದಾರುಕನನಿಂತು ದಾಂಟುವರೆ ರೇಣುಕ ನಿನಗೆ
ಧಾರುಣಿಯೊಳೊಗೆವ ಜಡಜನ್ಮವಾದುದು ನಿನಗೆ
ಎನೆ ರೇಣುಕಂ ಬೆರ್ಚಿ ಕೈಗಳಂ ಮುಗಿವುತಂ
ಮನಸಿಜಹರಂಗೆ ಬಿನ್ನೈಸಿದಂನಡಗುತಂ
ದೇವ ಜಡಯೋನಿಯೊಳ್ಬರಲಾರ್ಪನೇ ತಂದೆ

ಎಂದು ಶಿವನಲ್ಲಿ ಪ್ರಾರ್ಥಿಸಲಾಗಿ

.... ದಾರುಕನನಿಂತು ದಾಂಟಿದೆ ಪೊಲ್ಲ
ಇದರಿಂದೆ ಸುಖದುಃಖಮಂ ಧರಣಿಯೊಳೆ ಪೊತ್ತು
ಸದಮಳವೆನಿಪ್ಪ ಲಿಂಗದೊಳೆ ಜನನಂಬೆತ್ತು".[೨೪]

ಹೀಗೆ ರೇವಣ್ಣನು ಲಿಂಗದಲ್ಲಿ ಉದ್ಭವಿಸಿದ ಎಂದು ಹರಿಹರನು ಕಥಾಸ್ವರೂಪದೊಂದಿಗೆ ರೇವಣ್ಣನ ಜನನವನ್ನು ಚಿತ್ರಿಸಿಕೊಟ್ಟಿದ್ದಾನೆ.

"ಆ ಸೋಮನಾಥನ ಶಿವಾಲಯದ ನಡುವೊಮ್ಮೆ
ಭಾಸುರನ ಶಿವಭಕ್ತಕೋಟಿ ಕುಳ್ಳಿರೆ..........
ರಾಗದಿಂದಿರ್ದ ಸಭೆ ನಡುಗುತ್ತಮಿರೆ ಕರಂ
ನೆಲಮೊಳಗಿದಂದದಿಂ ಮೇಘಗರ್ಜನೆಯಂತೆ
ಸಲೆ ಲಿಂಗದೊಳಗಣಿಂ ಪೊಣ್ಮುತ್ತಲಿರಲಿಂತೆ
ಪುಟ್ಟತಿರ್ದ ಸಿದ್ದರೇಣುಕಯ್ಯಂ ನೋಡ
ನಿಷ್ಠೆಮಿಗೆ ಸಿದ್ದರೇವಣನಾಮದಿಂ ನೋಡ".[೨೫]

ಶಾಪಗ್ರಸ್ಥನಾದ ರೇಣುಕನು ಶಿವನ ಕೃಪೆಯಿಂದ ಸೋಮನಾಥ ದೇವಾಲಯದ ಲಿಂಗದಲ್ಲಿ ಅಲೌಕಿಕವಾಗಿ ಜನಿಸಿದ ಎಂದು ರಗಳೆಯಲ್ಲಿ ಕಾಣುತ್ತೇವೆ. ಪ್ರಕೃತಿಯ ನಿಯಮದ ಹಾಗೆ ಸಹಜ ಮಾನವನ ರೀತಿ ಜನನವಾಗಿಲ್ಲ.

ಮಲ್ಲಣ್ಣ ಕವಿಯು 'ರೇವಣ್ಣಸಿದ್ದೇಶ್ವರ ಕಾವ್ಯದಲ್ಲಿ' ಬೇರೆ ರೀತಿಯಾಗಿಯೇ ರೇವಣ್ಣನ ಜನನವನ್ನು ಚಿತ್ರಿಸಲಾಗಿದೆ. ಭೂಲೋಕದಲ್ಲಿ ನಡೆಯುತ್ತಿರುವ ಅಧರ್ಮ, ಅನ್ಯಾಯ, ಅತ್ಯಾಚಾರ ಗಳನ್ನು ತಡೆಯಲು ಶಿವನೇ ರೇವಣ್ಣನಾಗಿ ಹುಟ್ಟಿ ಬಂದನು. ಬಾಲಕನಾಗಿಯೇ ಮಾರುವೇಷದಲ್ಲಿ ಶಿವ ಭೂಲೋಕಕ್ಕೆ ಬಂದನು. ದೇವಮಾನವನಾದರು ಮಾನವರಂತೆ ಹಸಿವು ನೀರಡಿಕೆಗಳಾಗು ತ್ತಿದ್ದವು. ಎಲ್ಲ ಕಾವ್ಯಗಳಲ್ಲೂ ರೇವಣ್ಣನ ತಂದೆ-ತಾಯಿಗಳ ವಿಷಯದ ಪ್ರಾಸ್ತಪವಿಲ್ಲ. ಆಶ್ರಯವನ್ನು ಬಯಸಿ ಬಾಲಕ ರೇವಣ್ಣ ಎಲ್ಲಗುಂಡಿಯ ಆದಿಗೊಂಡನ ಬಳಿ ಬಂದಾಗ ತಂದೆ-ತಾಯಿಯ ಹೆಸರು ಗೊತ್ತಿಲ್ಲವೆಂದು ಹೇಳಿರುತ್ತಾನೆ. ಆದರೆ "೧೧೮೭ರ ಸಿರಿವಾಳ ಶಾಸನದಲ್ಲಿ ಶಾಂತಮಯ್ಯ ದೇವಂಗಳ ಪುತ್ರ ಎಂದು ಹೇಳಿರುವುದನ್ನು ಕಾಣುತ್ತೇವೆ."[೨೬]

ನವನಾಥ ಚರಿತೆಯಲ್ಲಿ ಜನನ ವಿಷಯ ಅಜ್ಞಾತವಾದರೂ ಬಾಲ್ಯದ ಬಗ್ಗೆ ಕೆಲ ಸಂಗತಿ ತಿಳಿಯುತ್ತೇವೆ. ಗೋರಖನಾಥನು ದೇಶ ಸಂಚಾರ ಮಾಡುವಾಗ ರೇವಾನದಿಯ ದಂಡದ ಮೇಲೆ ಅನಾಥ ಮಗುವಾಗಿ ಅವರಿಗೆ ದೊರೆತ್ತಿರುತ್ತಾರೆ. ಆಗ ಗೋರಖನಾಥರು

ಅವನನ್ನು ಕರೆದುಕೊಂಡು ಹೋಗಿ ಬೆಳೆಸುತ್ತಾರೆ. ಹೀಗೆ ರೇವಣ್ಣನು ನಾಥ ಪಂಗಡದವರಲ್ಲಿ ಬೆಳೆಯತೊಡಗಿದನು. ರೇವಣ್ಣನು ಒಂದು ಕಡೆ ನಿಲ್ಲದೆ ದೇಶ ಸಂಚಾರ ಮಾಡುವ ವ್ಯಕ್ತಿತ್ವವನ್ನು ಬೆಳೆಸಿಕೊಂಡನು. ಇವರು ಲಂಕೆಯಿಂದ ಹಿಮಾಲಯವನ್ನು ದಾಟಿ ನೇಪಾಳದವರೆಗೂ ಸಂಚಾರ ಮಾಡಿದನು. ಕೆಲವು ರಗಳೆಗಳನ್ನು ಆಧರಿಸಿ ಕೊಲ್ಲಿಪಾಕಿ, ಪೊನ್ನಂಬಲ, ಕಂಚಿ, ಮಸೂರು, ಕಲ್ಯಾಣಪುರ, ಲಂಕೆ, ಮಂಗಳಖೇಡ, ಚೋಳದೇಶ, ಚೇರ, ಮಲೆಯಾಳ, ಗೌಳ, ಗುರ್ಜರ, ನೇಪಾಳ, ಕಳಿಂಗ, ಹಾವಿನಾಳು ಹೀಗೆ ಪ್ರದೇಶದಿಂದ ಪ್ರದೇಶಕ್ಕೆ ಸಂಚಾರಿಸುತ್ತಿರುತ್ತಾನೆ.

ಹೀಗೆ ಸಂಚರಿಸುವಾಗ ಮಸೂರಿನಲ್ಲಿ ಬಂದಾಗ ರಾತ್ರಿಯಾದ ಕಾರಣ ಊರ ಹೊರ ವಲಯದ ಶಿವದೇವಾಲಯದಲ್ಲಿ ಮಲಗಲು ಹೋಗುತ್ತಾನೆ. ಅಲ್ಲಿನ ಪೂಜಾರಿ ಜನರು ಅಲ್ಲಿಯೇ ನೆಲೆಸಿರುವ ತಗಣಿಗಳ ಬಗ್ಗೆ ಎಚ್ಚರಿಸಿದರು, ಹಾಗೆಯೇ ಮಲಗುತ್ತಾನೆ. ಅವನನ್ನು ತಿನ್ನಲು ಬಂದ ತಿಗಣಿಗಳನ್ನು ತನ್ನ ದೃಷ್ಟಿಯಿಂದಲೇ ಗುಂಡುಗಳನ್ನಾಗಿ ಮಾಡುತ್ತಾನೆ. ವಿಶ್ವಕರ್ಮನೊಬ್ಬನಿಂದ ಆ ಗುಂಡುಗಳನ್ನು ಕಠಾರಿಗಳನ್ನಾಗಿಸಿ ಅಲ್ಲಿಯೇ ಸಮೀಪದಲ್ಲಿದ್ದ ಮಡುವಿನಲ್ಲಿ ಹೂತಿಡುತ್ತಾನೆ. ಕೆಲ ವರ್ಷಗಳ ನಂತರ ಅವುಗಳ ಮಹಿಮೆ ತೀಳಿದ ಬಿಜ್ಜಳ ಅ ಕಠಾರಿಗಳನ್ನು ವಶಪಡಿಸಿಕೊಳ್ಳುವ ಹಂಬಲ ವ್ಯಕ್ತಪಡಿಸುತ್ತಾನೆ. ಈ ಕಾರ್ಯಸಾಧನೆಗೆ ಮಾಂತ್ರಿಕರ ಸಹಾಯ ಪಡೆಯುತ್ತಾನೆ. ಈ ಎಲ್ಲ ಕ್ರಿಯೆ ವಿವಾಹವೊಂದರಲ್ಲಿ ಮುಕ್ತಾಯವಾಗುತ್ತದೆ."[೨೭]

ಒಂದು ದಿನ ರೇವಣ್ಣ ಕಲ್ಯಾಣಕ್ಕೆ ಭಿಕ್ಷಕ್ಕೆ ಬರುತ್ತಾನೆ. ಭಿಕ್ಷುಕನ ವೇಷದಲ್ಲಿ ಬಂದು ಬಿಜ್ಜಳನ ಅರಮನೆಯ ಮುಂದೆ ನಿಲ್ಲುತ್ತಾನೆ. ಬಿಜ್ಜಳ ಬೆದರಿಸಿ ಸುಡುವ ಅಂಬಲಿಯನ್ನು ಅವನ ಅಂಗೈಯಲ್ಲಿ ಹಾಕುತ್ತಾನೆ. ಹಾಗೆಯೇ ರೇವಣ್ಣ ಕುಡಿದು, ಕೈಯನ್ನು ಹಜಾರಿನ ಕಂಬಕ್ಕೆ ಒರೆಸುತ್ತಾನೆ. ಹಜಾರ ಮತ್ತು ಅರಮನೆ, ನಗರವೆಲ್ಲ ಬೆಂಕಿ ಹತ್ತಿ ಉರಿಯುತ್ತದೆ. ಆಗ ಬಿಜ್ಜಳ ರೇವಣ್ಣನ ಬಳಿ ಬಂದು ಕ್ಷಮೆಯಾಚಿಸುತ್ತಾನೆ. ಕ್ಷಮೆಯ ನೀಡಿ ಮೊದಲಿನ ಸ್ಥಿತಿಗೆ ತರುತ್ತಾನೆ.

ಇನ್ನು ಗುಲ್ಬರ್ಗಾ ಜಿಲ್ಲೆಯ ಶಾಹಪೂರ ತಾಲೂಕಿನ ಭೀಮಾತೀರದ ಶಿರಿವಾಳದ ಸಿದ್ದಲಿಂಗೇಶ್ವರ ಗುಡಿಯಲ್ಲಿರುವ ಶಕೆ ೧೧೧೯(ಕ್ರಿ.ಶ.೧೧೮೭)ಶಾಸನದಲ್ಲಿ ಬರುವ ಪವಾಡಗಳ ವೃತ್ತಗಳು ಹೀಗಿವೆ.

"ಶ್ರೀ ಮಧ್ಯಣಿಮಾದ್ಯಷ್ಟಗುಣ ಸಂಪನ್ನರುಂ
ಸಾರಸೌಭ್ಯಸರ್ವನಿಸ್ಸಂಗರುಮಪ್ಪ ಶಿವಯೋಗಿ
ಶಾಂತಮಯ್ಯಗಳ
ಪುತ್ರ ರೇವಣ್ಣದೇವಯ್ಯಂಗಳ ಪ್ರಸಿದ್ಧಿಯಂತೆಂದೊಡೆ
ಬರ್ಬಲ ತಂಡುಲದಿಂದೆ

ದೋರ್ಬಿತಂ ರಾಯಕಟಕಮಂ ತಣಿಪಿದನಾ
ಸರ್ವಜ್ಞಮೂರ್ತಿ ಜಗದೋಳ
ಗೋರ್ವನೆ ಶಿವಸಿದ್ದಚಕ್ರಿ ರೇವಣ್ಣ ದೇವಾ
ತೊರೆತುಂಬಿ ಬಂದಡರೆ ತಾ
ಹರಗೋಲಂ ತನ್ನಿವೆನ್ನದಾಜ್ಞಾಬಲದಿಂ
ತೊರೆಯುಂ ದಾಟುವಂತಿರೆ
ದರುಪಿನ ತತುಕಾರನೀತ ರೇವಣದೇವಂ
ಅಂದೊಮ್ಮೆ ಸಿದ್ದನೆಂದಡೆ
ನಿಂದಿಸಿದರುಮನುಜರೆಲ್ಲ ಧರೆ ಭೂರ್ಬಗಿನೆಲೆಂ
ಬಂದದಿ ಸತ್ವರಜಂ ತಮ
ವಂದಿನ ಸಿದ್ಧಂ ಪ್ರಸಿದ್ಧ ರೇವಣದೇವಂ
ತಾರದ ಮಂತ್ರದ ಮಧುರದ
ಸಾರಾಯದ ಸಪ್ತಸ್ವರದಿಂದಾ ನರೇಶ್ವರಂ
ಭೋರನೆ ಕೇಳಿಸುತಿರ್ಪಂ
ಧಾರುಣಿ ತಳದೊಳಗೆ ನೆಗಳ್ದ ರೇವನದೇವಾ
ನೃತ್ಯಕ್ಕೆ ನಿಂದಡೆ ಬಳಿಕಾ
ಅದ್ಭುತಲಿಂಗ ಮರುಳ ತಾಂಡ ರೌದ್ರವಿಮೆನಲುಂ
ಪ್ರತ್ಯಕ್ಷಲಿಂಗ ಬೆಮರಲು
ಸತ್ಯದಲತ್ಯಂತ ಸಿದ್ಧರೇವಣದೇವ
ಆ ಮೂಲೋಕ ಸಿದ್ಧಿಪ್ರಸಿದ್ಧರಪ್ಪ ಸಿದ್ಧರೇವಣಯ್ಯಂಗಳ ಪಾದ
ಪೂರ್ವತದಿಂ ಮಾಡಿಕೊಟ್ಟರು."[೨೮]

ಹೀಗೆ ಪವಾಡಗಳನ್ನು ಗೈಯುತ್ತಾ ಹಾಲುಮತದ ಸಾಂಸ್ಕೃತಿಕ ವ್ಯಕ್ತಿಯಾಗಿ, ಕುಲದ ಗುರುವಾಗಿ ಪೂಜಿಸಲ್ಪಡುತ್ತಿದ್ದಾರೆ.

ರೇವಣ್ಣಸಿದ್ಧ ತಗರ ಪವಾಡದಲ್ಲಿ ಶಾಂತಮುತ್ತಯ್ಯನಿಗೆ ಗುರುವಾಗಿ ಕಂಡುಬರುತ್ತಾರೆ. ಭೂಲೋಕದಲ್ಲಿ ಮಾಯೆಯು ನೀಡಿದ ವಿಷವನ್ನು ಕುಡಿದು ನವಕೋಟಿಸಿದ್ದರನ್ನು ಕುರಿಗಳನ್ನಾಗಿ ಮಾಡುವ ಪ್ರಸಂಗ ನೋಡುತ್ತೇವೆ. "ರೇವಣ್ಣಸಿದ್ಧರು ಹಾಲುಮತೋತ್ತೇಜಕದಲ್ಲಿ ಶಾಪಗ್ರಸ್ತರಾಗಿ ನರಜನ್ಮ ಪಡೆದು ಭೂಮಿಯಲ್ಲಿನ ಸಮಸ್ಯೆ ಬಗೆಹರಿಸಿದರೆ, ತಗರ ಪವಾಡವು ನೇರವಾಗಿ

ಶಿವನ ಕಳೆಯೆ ರೇವಣರಾಗಿ ಜನ್ಮ ಪಡೆಯುತ್ತಾರೆ. ಹಾಲುಮತೋತ್ತಜಕದಲ್ಲಿ ಮೂರೇಣಿನ ಕಂತೆಯನ್ನು ರೇವಣ್ಣರು ಶಾಂತಯ್ಯನಿಗೆ ನೀಡುದರೆ ತಗರ ಪವಾಡದಲ್ಲಿ ಬಸವಣ್ಣನವರು ಮೂರೇಣಿನ ಕಂತೆಯನ್ನು ಶಾಂತಯ್ಯನಿಗೆ ನೀಡುತ್ತಾರೆ. ಅಂದರೆ ೧೨ ಶತಮಾನದಲ್ಲಿದ್ದ ವೀರಶೈವ ಧರ್ಮಕ್ಕೆ ಹಾಲುಮತದವರು ಪರಿವರ್ತನೆಗೊಂಡಿರುವುದನ್ನು ತಗರ ಪವಾಡಕ್ಕೆ ಪರೋಕ್ಷವಾಗಿ ರೇವಣಸಿದ್ಧರು ಅಗೋಚರವಾಗಿಯೇ ಆಶೀರ್ವಾದ ನೀಡಿದ್ದಾರೆ. ಮುಂಚೆಯೇ ಪಗರ ಪವಾಡ ಕಲ್ಯಾಣದಲ್ಲಿ ನಡೆಯುತ್ತದೆಂದು ಹೇಳಿರುತ್ತಾರೆ. ಶಾಂತಮುತ್ತಯ್ಯ ಸಂಪ್ರದಾಯಕ್ಕೆ ರೇವಣಸಿದ್ಧರು ಪ್ರಾಧಾನ್ಯತೆಯನ್ನು ತಂದುಕೊಟ್ಟರು. ಸಮಾಜದಲ್ಲಿನ ತಮ್ಮ ಅಸ್ಮಿತೆಯನ್ನು ಯಾವ ರೀತಿಯಲ್ಲಿ ಕಾಪಾಡಿಕೊಳ್ಳಬೇಕೆಂದು ರೇವಣರು ಸೂಕ್ಷ್ಮವಾಗಿ ಶಾಂತಮುತ್ತಯ್ಯನಿಂದ ಹೇಳಿಸುತ್ತಾರೆ. ಹೀಗೆ ರೇವಣಸಿದ್ಧರು ಅವತಾರ ಪುರುಷನಾಗಿಯೂ ಕುರುಬರ ಪರಮಗುರುವಾಗಿ ಸಧರ್ಮದಲ್ಲಿ ನಡೆಯುವಂತೆ ಬೋಧನೆ ಮಾಡಿದುದು ಕಂಡುಬರುತ್ತದೆ. ಕುರಿಗಳು ಹೇಗೆ ಜನಿಸಿದವು, ಅದರಿಂದ ಹೇಗೆ ಉಣ್ಣೆಯನ್ನು ಕತ್ತರಿಸಬೇಕು, ವ್ಯಾಪಾರ ಹೇಗೆ ನಿರ್ವಹಿಸಬೇಕೆಂದು ಸಂಸ್ಕೃತಿಯ ವಕ್ತಾರರಾಗಿ, ಆರ್ಥಿಕಾಭಿವೃದ್ಧಿಯ ಚಿಂತಕರಾಗಿಯೂ ಚಿತ್ರಣಗೊಂಡಿದ್ದಾರೆ.[೨೯]

೪.೩. ಹಾಲುಮತ ಸಂಸ್ಕೃತಿಯ ಸಾಮಾಜಿಕತೆ

ಸಂಸ್ಕೃತಿ ಎನ್ನುವ ಪದದ ಅರ್ಥ ಇತ್ತೀಚೆಗೆ ಬಹಳಷ್ಟು ಒಳ ಅರ್ಥಗಳನ್ನು ಹೊಂದುತ್ತಿದೆ. ಇದರ ಅರ್ಥವ್ಯಾಪ್ತಿ ವಿಸ್ತಾರವಾಗುತ್ತಿದೆ. ಪ್ರಾಚೀನ ಕಾಲದಲ್ಲಿ ಮನುಷ್ಯನು ಪ್ರಾಣಿಗಳಂತೆ ಜೀವಿಸುತ್ತಿದ್ದನು. ಅಲೆಮಾರಿಯಾಗಿದ್ದ ಇವನು ಕಾಲಾನಂತರದಲ್ಲಿ ಒಂದೇ ಕಡೆ ನೆಲೆಸಲು ಮುಂದಾದನು. ಕುಟುಂಬ ಜೀವಿಯಾಗಿ, ಸಂಘ ಜೀವಿಯಾಗಿ ಒಂದು ಜನಾಂಗವನ್ನು ಬೆಳೆಸಿದನು. ಜನಾಂಗಗಳು ಬೆಳೆದಂತೆ ಗ್ರಾಮಗಳು, ಗ್ರಾಮಗಳಂತೆ ನಗರಗಳು ಹುಟ್ಟಿ, ಅಲೆಮಾರಿಯಾದ ಮಾನವ ಗ್ರಾಮಸ್ಥನಾಗುತ್ತಾನೆ. ವಿಕಾಸಗೊಂಡ ಮಾನವ ಒಂದೆಡೆ ನೆಲೆಸಿ ಪರಿಸರದೊಡನೆ ಬೆರೆತು ಜೀವಿಸುವುದನ್ನು ಕಲಿತ. ಜೊತೆಗೆ ವೃತ್ತಿಯನ್ನು ಆಯ್ದುಕೊಂಡು ಜನರೊಂದಿಗೆ ವ್ಯವಹರಿಸುವ ರೀತಿ-ನೀತಿಗಳನ್ನು ಕಲಿತ. ಇವನು ಬೆಳೆದಂತೆ ಆಚಾರಗಳು, ಸಂಪ್ರದಾಯಗಳು ತನ್ನ ನಂಬಿಕೆಯಂತೆ ದೇವರುಗಳ ಸೃಷ್ಟಿ, ಆರಾಧನಾ ವಿಧಾನಗಳು ತನ್ನಂತೆ ರೂಪಿಸಿಕೊಂಡ. ಈ ಎಲ್ಲ ರೂಪಗಳು ವ್ಯಕ್ತಿಗತವಾಗದೆ ಒಂದು ಜನಾಂಗದ ಸಂಸ್ಕೃತಿಯಾಗಿ ಹೊರಬಂದವು. ಒಂದು ಪ್ರದೇಶದ ಎಲ್ಲರ ಭಾವನೆಗಳನ್ನು ಒಟ್ಟಾಗಿ ಸೇರಿಸಿ ವ್ಯಕ್ತಪಡಿಸಿದ ವಿಧಿ-ವಿಧಾನಗಳಾಗಿವೆ. ವಿಧಿ-ವಿಧಾನಗಳೊಂದಿಗೆ ಹಬ್ಬ-ಹರಿದಿನಗಳು ಸಂಬಂಧಗಳು, ಸಂಪ್ರದಾಯ ಗಳನ್ನು ಜನರು ರೂಢಿಸಿಕೊಳ್ಳುತ್ತಾರೆ. ಜನರ ಭಾವನೆಗಳು ವಿಶಾಲವಾದಂತೆ, ಅವರಲ್ಲಿಯೇ ಪ್ರಾದೇಶಿಕ ಭೇದಗಳು ಉಂಟಾದರೂ ಮೂಲ ಆಧಾರ ಒಂದೇ ಆಗಿತ್ತು. ಎಲ್ಲರೂ ಸೇರಿ

ಜನಾಂಗದ ಹುಟ್ಟಿಗೆ ಕಾರಣವಾದರು. ಪ್ರತಿಯೊಂದು ಜನಾಂಗವು ತನ್ನ ಸಂಸ್ಕೃತಿ ಸೃಷ್ಟಿಸಿಕೊಂಡು ಅದರ ವಿಶಿಷ್ಟತೆಯನ್ನು ಉಳಿಸಿಕೊಳ್ಳಲು ಪ್ರಯತ್ನಪಡುತ್ತಿದೆ. ಕಾಲ ಬದಲಾದಂತೆ ಅನ್ಯ ಸಂಸ್ಕೃತಿಗಳ ಪ್ರಭಾವಕ್ಕೆ ಸಿಲುಕಿ ಕೆಲವು ಬದಲಾವಣೆಗಳು ಸಂಸ್ಕೃತಿ ಸಹಜವಾಗಿಯೇ ಆಗುತ್ತದೆ. ಇಂತಹ ಬದಲಾವಣೆಗಳು ಜೀವಂತಿಕೆಯ ಲಕ್ಷಣಗಳನ್ನು ಹೊಂದಿದೆ.

"ಒಂದು ಸಂಸ್ಕೃತಿಯ ಶಿಷ್ಟ ಮತ್ತು ಪರಿಶಿಷ್ಟಗಳು ಆ ಸಂಸ್ಕೃತಿಯು ಎದುರಿಸುತ್ತಿರುವ ಬಿಕ್ಕಟ್ಟುಗಳ ಮೂಲಕ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ. ಬಿಕ್ಕಟ್ಟುಗಳು ಸಾಮಾನ್ಯವಾಗಿ ಅನ್ಯ ಸಂಸ್ಕೃತಿಯ ಪ್ರಭಾವದಿಂದ ಕಾಣಿಸಿಕೊಳ್ಳುತ್ತವೆ ಅಥವಾ ಅದರ ಒಳಗಿನ ಭಿನ್ನ ನಡಾವಳಿಗಳ ಮೂಲಕ ಪ್ರಕಟವಾಗುತ್ತವೆ. ಅಂಥ ಬಿಕ್ಕಟ್ಟಿನ ಅಥವಾ ಸಂಘರ್ಷದ ಸಂದರ್ಭಗಳಲ್ಲಿ ಸಂಸ್ಕೃತಿಯು ತನ್ನ ಬಿರುಕುಗಳನ್ನು ಮುಚ್ಚಿಕೊಳ್ಳಲು ಗರಿಷ್ಠ ಮಟ್ಟದಲ್ಲಿ ಪ್ರಯತ್ನಿಸುತ್ತದೆ. 'ತನ್ನದು' ಎಂಬುದನ್ನು ಉಳಿಸಿಕೊಳ್ಳಲು ಬಗೆ ಬಗೆಯ ತಂತ್ರಗಳನ್ನು ಪ್ರಯೋಗಿಸುತ್ತಾ ಹೆಣಗಾಡುತ್ತದೆ. ಅಂತರ್ಜಾತೀಯ ಮದುವೆಗಳ ಸಂದರ್ಭದಲ್ಲಿ ಮತ್ತು ಸಾವಿನ ಸಂದರ್ಭದಲ್ಲಿ ಸಂಸ್ಕೃತಿ ಇಕ್ಕಟ್ಟಿಗೆ ಸಿಲುಕಿ ತತ್ತರಿಸುವುದನ್ನು ನೋಡಬಹುದಾಗಿರುತ್ತದೆ. ಅಂತರ್ಜಾತಿಯ ಮದುವೆಯಲ್ಲಿ ಹೊರಗಿನ ಜಾತಿಯ ವ್ಯಕ್ತಿಯ ಒಳಪ್ರವೇಶದಿಂದ ಸಾಂಸ್ಕೃತಿಕ ಅಸಮತೋಲನ ಕಾಣಿಸಿಕೊಂಡರೆ ಸಾವಿನ ಸಂದರ್ಭದಲ್ಲಿ ಒಳಗಿನ ವ್ಯಕ್ತಿಯ ನಿರ್ಗಮನದಿಂದ ಅಸಮತೋಲನ ಉಂಟಾಗುತ್ತದೆ."[೩೦] ಈ ಹಿನ್ನೆಲೆಯಲ್ಲಿ ಒಂದು ಸಮುದಾಯದಲ್ಲಿ ವೈವಾಹಿಕ ಸಂಬಂಧಗಳಿಂದ ಒಳಪಂಗಡಗಳ ಸೃಷ್ಟಿಗೆ ಕಾರಣ. ಹಾಗೆಯೇ ಹಾಲುಮತದಲ್ಲೂ ವೈವಾಹಿಕ ಸಂಬಂಧವಾಗಿಯೇ ಒಳಪಂಡಗಳಾದವು.

"ಯಾವುದೇ ಒಂದು ಸಂಸ್ಕೃತಿಗೆ ಪ್ರತ್ಯೇಕ ಅಸ್ತಿತ್ವವಿದ್ದು, ಅದು ಇತರ ಸಂಸ್ಕೃತಿಗಳಿಗಿಂತ ಭಿನ್ನವಾಗಿ ತನ್ನದೆ ಆದ ವಿಶಿಷ್ಟಾಂಶಗಳನ್ನು ಪ್ರಕಟಪಡಿಸಿದರೆ ಅದನ್ನು ಆಯಾ ಸಂಸ್ಕೃತಿಯ ಅನನ್ಯತೆ ಎಂದು ಕರೆಯಬಹುದು".[೩೧] ಹಾಲುಮತ ಸಮುದಾಯವು ತನ್ನ ಸಂಸ್ಕೃತಿಯ ವಿಶಿಷ್ಟತೆಯನ್ನು ಅರಿಯಲು ಕೆಲವು ಪುರಾಣಗಳು ಸಹಾಯವಾಗಿವೆ.

ಸಂಪ್ರದಾಯಗಳು

ಹಾಲುಮತದವರು ಸಂಪ್ರದಾಯಗಳಿಗೆ ತುಂಬ ಮಹತ್ವ ನೀಡುತ್ತಾರೆ. ಇವರು ಯಾವುದೇ ಒಂದು ಚಿಕ್ಕ ಶುಭಕಾರ್ಯವು ತಮ್ಮ ಕುಟುಂಬದಲ್ಲಿ ಜರುಗಿದರೂ ಸುಖ–ಸಂತೋಷದಿಂದ ಸಮುದಾಯದವರೆಲ್ಲ ಸೇರಿ ವೈಭವದಿಂದ ಕೂಡಿ ಮಾಡಬೇಕೆಂಬುದು ಅವರ ಬಯಕೆಯಾಗಿರುತ್ತದೆ. ಸಮುದಾಯಗಳಲ್ಲಿನ ರೀತಿ–ನೀತಿ, ಆಚರಣೆಗಳು, ಸಂಪ್ರದಾಯಗಳು ಆಯಾ ಸಮುದಾಯಗಳ ಪುರಾಣಗಳಲ್ಲಿ ಅಭಿವ್ಯಕ್ತಗೊಂಡಿರುತ್ತದೆ. ಪುರಾಣಗಳು ಮಾನವ ಸಂಸ್ಕೃತಿಯನ್ನು ಎತ್ತಿ

ಹಿಡಿಯುವಂತಹ ಕಾರ್ಯಗಳನ್ನು ಮಾಡುತ್ತವೆ. ಆದ್ದರಿಂದ ಪ್ರತಿಯೊಂದು ಸಮುದಾಯದ ಸಂಸ್ಕೃತಿಯೂ ವಿಶಿಷ್ಟತೆಯನ್ನು ಒಳಗೊಂಡಿರುತ್ತದೆ. ಈ ವಿಶಿಷ್ಟತೆಯಲ್ಲಿ ಸಮುದಾಯದ ಜೀವನ ಶೈಲಿಯಲ್ಲಿ ಭಿನ್ನತೆಯು ಕಂಡುಬರುತ್ತದೆ. ಜನರ ಆಶೋತ್ತರಗಳನ್ನು ನಿಯಂತ್ರಿಸುವ ಕೆಲವು ರೀತಿ-ರಿವಾಜುಗಳು ಸಮಾಜದಲ್ಲಿ ಸೃಷ್ಟಿಯಾಗುತ್ತವೆ. ಸಮಾಜದಲ್ಲಿ ಅನೇಕ ಸಮುದಾಯಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಆಚಾರ-ವಿಚಾರಗಳು ಶ್ರೇಷ್ಠವೆಂದು ಜೀವಿಸುತ್ತಾರೆ. ಎಲ್ಲ ಸಮುದಾಯಗಳ ಆಚರಣೆಗಳು ಏಕ ರೀತಿಯಾಗಿರುವುದಿಲ್ಲ. ಸಂಪ್ರದಾಯಗಳು ಮನುಷ್ಯನ ಕ್ರೂರತ್ವವನ್ನು ಬಿಡಬೇಕೆಂಬ ಆಶಯದೊಂದಿಗೆ ಆಚರಣೆಗಳು, ಸಂಸ್ಕೃತಿಯಲ್ಲಿ ರೂಪುಗೊಂಡಿವೆ.

೧. ವಿವಾಹ: ವಿವಾಹ ಮನುಷ್ಯನ ಜೀವನದ ಪ್ರಮುಖ ಘಟ್ಟ. ವಿವಾಹ ಎರಡು ಕುಟುಂಬಗಳ ಬೆಸುಗೆಯನ್ನು ಮಾಡುತ್ತದೆ. ವಂಶಾಭಿವೃದ್ಧಿಯ ಮೂಲ ಉದ್ದೇಶದೊಂದಿಗೆ ವಿವಾಹದ ಕಾರ್ಯ ಜರುಗುತ್ತದೆ. ಜನಾಂಗದ ಶುದ್ಧತೆಯನ್ನು ಕಾಪಾಡಿಕೊಳ್ಳಲು ವಿಭಿನ್ನ ಜನಾಂಗದೊಂದಿಗೆ ವಿವಾಹ ಸಂಬಂಧವನ್ನು ಬೆಳೆಸಿಕೊಳ್ಳುವುದಿಲ್ಲ. ಹಾಲುಮತ ಪುರಾಣಗಳಲ್ಲಿ ವಿವಾಹಕ್ಕೆ ಮೊದಲು ಹೆಣ್ಣು ನೋಡುವ ಶಾಸ್ತ್ರವು ಸಂಪ್ರದಾಯಬದ್ಧವಾಗಿ ನಡೆಯುತ್ತದೆ. ಕುರುಬರಲ್ಲಿ ಸ್ತ್ರೀಯರಿಗೆ ಗಂಡನ್ನು ತರುವುದು ಪುರುಷ ನಿಯಮದಂತೆ ಅವನ ತೀರ್ಮಾನವೇ ಅಂತಿಮ. ಪುರಾಣದಲ್ಲಿ

"ಬಸವಣ್ಣ ಹೋದಮನಿಯಾಗೆ ಕನ್ಯಾ ತಗಿಬೇಕೆಂದಾರ
ಕನ್ಯಾ ತಗಿಬೇಕಂದಾರೆ ಗಟ್ಟಿ ಮಾಡಬೇಕಂದಾರ
ಗಟ್ಟಿ ಮಾಡಬೇಕಂದಾರ ಹಾಲಗಡಬ ಉಂಡೇವ
ಹಿಂತ ಮಾತನಾಡೇವ ಕೈಲಾಸ ಬಿಟ್ರು ಇಳಿದೇವ"[೨]

ಬಾಳಬರಮನಿಗೆ ಹೆಣ್ಣು ಹುಡುಕಲು ಕೈಲಾಸದ ಬ್ರಹ್ಮ, ವಿಷ್ಣು, ಶಿವ ಎಲ್ಲರೂ ಭೂಮಿಗೆ ಬರುತ್ತಾರೆ. ಎತ್ತು(ಬಸವಣ್ಣ) ಹೋಗಿ ಕಾಳಿನಾರಾಯಣ ಮನೆಯ ಮುಂದೆ ನಿಂತಾಗ, ಆ ಮನೆಯ ಸೂರಮ್ಮದೇವಿಯನ್ನು ವಿವಾಹ ಮಾಡಿಕೊಳ್ಳಲು ಒಪ್ಪುತ್ತಾರೆ. ಆ ಮನೆಯ ಹೆಣ್ಣನ್ನು ನಿಶ್ಚಯಿಸಲು ಹಾಲುಗಡುಬು ಊಟವನ್ನು ಮಾಡುತ್ತಾರೆ ಹಾಗೂ ಇಳಿಯಾ(ವೀಳೆದೆಲೆ)ಯನ್ನು ಹೆಣ್ಣಿನವರಿಗೆ ನೀಡಿ ಕನ್ಯೆಯನ್ನು ನಿಶ್ಚಯಿಸಿಕೊಂಡು ಬರುತ್ತಾರೆ. ಇದೇ ರೀತಿ ಬೀರಪ್ಪನ ವಿವಾಹವು ಮಾಯವ್ವನ ಮಾತಿನಂತೆ ಸಂಪ್ರದಾಯಬದ್ದವಾಗಿ ಸೂತರತೇಜಿಯನ್ನು ಕಟ್ಟಿ ನಡೆಯುತ್ತದೆ. ಕನ್ನಿಕಾದೇವಿ ಮತ್ತು ಬೀರಣ್ಣರ ಮದುವೆಯೂ ಆಚರಣೆಬದ್ಧವಾಗಿ ನಡೆಯುತ್ತದೆ.

ವಿವಾಹ ಎನ್ನುವುದು ಜೀವನದ ಅನಿವಾರ್ಯವಾದ ಪದ್ಧತಿಯಾಗಿದೆ. ನಮ್ಮ ಸಂಪ್ರದಾಯ ಗಳಲ್ಲಿ ಮನುಷ್ಯ ಹುಟ್ಟಿದ ಮೇಲೆ ಮದುವೆಯಾದರೆ ಅವನಿಗೆ ಮುಕ್ತಿ ಎಂಬ ನಂಬಿಕೆ ಇದೆ. ಹಾಲುಮತದವರು ತಮ್ಮ ಸಂಸ್ಕೃತಿಯಲ್ಲಿ ವಿವಾಹಕ್ಕೆ ನೀಡುವ ಮಹತ್ವ ವೈಶಿಷ್ಟವಾಗಿದೆ.

ಪುರಾಣಗಳಲ್ಲಿ ವ್ಯಕ್ತವಾದಂತೆ ಭೂಲೋಕದಲ್ಲಿ ಹುಟ್ಟಿದ ಮುದ್ದವ ಮುದ್ದಾಯಿರ ವಿವಾಹ ಕುಲಗುರು ರೇವಣ್ಣಸಿದ್ಧರ ಆಶೀರ್ವಾದದಿಂದ ನಡೆಯುತ್ತದೆ. ಇವರ ಮಗನಾದ ಆದಿಗೊಂಡನ ವಿವಾಹಗಳಿಂದ ಎರಡು ಸಂಪ್ರದಾಯಗಳು ಹುಟ್ಟಿಕೊಂಡವು. ಉಣ್ಣೆಕಂಕಣ, ಹತ್ತಿಕಂಕಣವೆಂದು ವ್ಯವಸಾಯವನ್ನೇ ಮೂಲ ಕಸುಬಾಗಿಸಿದ ಸುಗ್ಗಳೆ(ಆದಿಗೊಂಡನ ಹೆಂಡತಿ) ಉಣ್ಣೆಕಂಕಣದವ ರಾದರು. ವಿವಾಹದ ಸಂದರ್ಭದಲ್ಲಿ ಕೈಗೆ ಉಣ್ಣೆಯಿಂದ ಕಂಕಣ ಕಟ್ಟುವುದರಿಂದ ಉಣ್ಣೆ ಕಂಕಂಣದವರಾದರು. ಆದಿಗೊಂಡನು ಕುರಿಗಳನ್ನು ಹೊಡೆದುಕೊಂಡು ಅಲೆಮಾರಿಯಾಗಿ ಕಾಡಿನಲ್ಲಿ ರಾಕ್ಷಸಿಯ ಮಗಳು ಸಿರಿವಂತಿಕೆಯನ್ನು ವಿವಾಹವಾಗುವ ಸಂದರ್ಭದಲ್ಲಿ ಕುರಿಯ ಹತ್ತಿಯಿಂದ ಕಂಕಣ ಕಟ್ಟುವುದರ ಮೂಲಕ ವಿವಾಹ ಆರಂಭವಾಗುತ್ತವೆ. ಈ ಸಂಪ್ರದಾಯ ಹಿಂದಿನಿಂದಲೂ ಕಾಣಸಿಗುತ್ತದೆ.

ಹಾಲುಮತದವರಲ್ಲಿ ಹೆಣ್ಣು ನಿಶ್ಚಯವಾದ ಮೇಲೆ ವಿವಾಹದ ಸಂದರ್ಭದಲ್ಲಿ ಚಪ್ಪರಕಟ್ಟಿ ವಿಳ್ಳೇಶಾಸ್ತ್ರ(ದೊಡ್ಡ ವಿಳ್ಳೇಶಾಸ್ತ್ರ) ಮಾಡುತ್ತಾರೆ. ಬಳೆ ಶಾಸ್ತ್ರ, ಎಣ್ಣೆ ಅರಿಶಿನದ ಶಾಸ್ತ್ರದೊಂದಿಗೆ ಹೆಣ್ಣನ್ನು ಅಲಂಕಾರ ಮಾಡುತ್ತಾರೆ. ಇದೇ ರೀತಿ ಸರಕ್ಕಿ ಶಾಸ್ತ್ರದೊಂದಿಗೆ ಗಂಡನ್ನು ಅಲಂಕಾರ ಗೊಳಿಸುತ್ತಾರೆ. ಗಂಡಿಗೆ ಅಲಂಕಾರವಾದ ಮೇಲೆ ಕುಲದೇವರ ಮುಂದೆ ಕೂರಿಸಿ ದೇವರ ಪೂಜಾರಿಯಿಂದ ಕಂಕಣವನ್ನು ಕಟ್ಟಿಸುತ್ತಾರೆ. ಇದಾದ ಮೇಲೆ ಧಾರೆ ಎರೆಯುವ ಕಾರ್ಯ ವಾಗುತ್ತದೆ. ಗಂಡಿನ ಕೈ ಮೇಲೆ, ಹೆಣ್ಣಿನ ಕೈ ಇಡಿಸಿ ಅದರ ಮೇಲೆ ತೆಂಗಿನ ಕಾಯಿ, ಬಾಳೆಹಣ್ಣು, ವೀಳ್ಯದೆಲೆ, ದಕ್ಷಿಣೆ ಇಟ್ಟು ಹೆಣ್ಣಿನ ತಂದೆ-ತಾಯಿಗಳು ಅನಂತರ ಸೋದರಮಾವ, ಬಳಿಕ ಅಲ್ಲಿ ಸೇರಿರುವ ಎಲ್ಲರೂ ಧಾರೆ ಎರೆಯುತ್ತಾರೆ.

೨. ಸೀಮಂತ: ಚೊಚ್ಚಲ ಗರ್ಭಿಣಿಗೆ ಗಂಡನ ಮನೆಯವರು ಐದು ಅಥವಾ ಒಂಬತ್ತು ತಿಂಗಳಲ್ಲಿ ಸೀಮಂತ ಕಾರ್ಯವನ್ನು ಮಾಡುತ್ತಾರೆ. ಹೊಸ ಸೀರೆ, ಹೂ ಮುಡಿಸಿ, ಹಸೆ ಮೇಲೆ ಕೂರಿಸಿ ಐದು ಜನ ಮುತ್ತೈದೆಯರಿಂದ ಆರತಿ ಮಾಡಿಸಿ, ತವರು ಮನೆಯಿಂದ ತಂದ ಬುತ್ತಿಯನ್ನು ಉಣಬಡಿಸುತ್ತಾರೆ. ಹಾಲುಮತ ಪುರಾಣದಲ್ಲಿ ಸೂರಮ್ಮ ದೇವಿಯು ಗರ್ಭಿಣಿಯಾದ ಮೇಲೆ ತವರು ಮನೆಗೆ ಸೀಮಂತಕಾರ್ಯ ಮತ್ತು ಬಯಕೆ ಬುತ್ತಿಯನ್ನು ತರಲು ಹೇಳಿ ಕಳುಹಿಸುವಳು. ಆದರೆ ಕುತಂತ್ರದ ಬುದ್ಧಿ ಹೊಂದಿದ ಕಾಳಿನಾರಾಯಣನು ಆಲೋಚಿಸಿ ಹೊಟ್ಟೆಯೊಳಗಿರುವ ಮಗುವನ್ನು ಸಾಯಿಸಬೇಕೆಂದು ನಿಶ್ಚಯಿಸಿದನು. ಬುತ್ತಿಯಲ್ಲಿ ಕಳ್ಳಿಯ ಹಾಲಿನಿಂದ ಮೊಸರು, ನಾಗರ ಹಾವಿನ ವಿಷದಿಂದ ಹಿರೇಕಾಯಿ ಪಲ್ಯೆ, ಹಸಿರು ಹಾವಿನಿಂದ ಬಾಳೆಕಾಯಿಯನ್ನು ಹೀಗೆ ವಿಷಪೂರಿತವಾದ ಬುತ್ತಿಯನ್ನು ಮಾಡಿಕೊಂಡು ಬಯಕೆಯನ್ನು ತೀರಿಸಲು ಸೀಮಂತಕ್ಕೆ ತರುವ ಸೀರೆ, ಬಳೆ, ಕುಪ್ಪಸ ಎಲ್ಲವನ್ನು ಜೊತೆ

ಮಾಡಿ ತಂದುದರ ಪ್ರಸ್ತಾಪ ಪುರಾಣಗಳಲ್ಲಿವೆ. ಈ ಕಥೆಯಲ್ಲಿ ವ್ಯಕ್ತವಾದಂತೆ ಗರ್ಭಿಣಿ ತಂಗಿಗೆ ಅಣ್ಣನಾದ ಕಾಳಿನಾರಾಯಣನೇ ವಿಷಪೂರಿತ ಬುತ್ತಿ ತಂದಿದ್ದನು. ತಂಗಿಗೆ ಕೇಡುಂಟು ಮಾಡಿದನು. ಈ ಕಾರಣವಾಗಿ ಹಾಲುಮತದವರಲ್ಲಿ ಗರ್ಭಿಣಿ ಸ್ತ್ರೀಯರನ್ನು ಗಂಡನ ಮನೆಯಿಂದ ತವರು ಮನೆಗೆ ಕರೆತರಲು ಸಹೋದರರು ಈಗಲೂ ಹೋಗುವುದಿಲ್ಲ.

೩. ನಾಮಕರಣ: ಜನಿಸಿದ ಮಗುವಿನ ಪರಿಸರಕ್ಕೆ ತಕ್ಕಂತೆ ಹೆಸರೊಂದನ್ನು ಇಡಲಾಗುವುದು. ಮಗು ಗಂಡಾಗಲಿ, ಹೆಣ್ಣಾಗಲಿ ಅದನ್ನು ಗುರುತಿಸುವ ಕಾರಣ ಸಂಪ್ರದಾಯಬದ್ಧವಾಗಿ ಸಮುದಾಯದಲ್ಲಿ ತಮ್ಮದೇ ಆದ ರೀತಿ–ನೀತಿಗಳಿಂದ ಸಂಭ್ರಮಿಸಿ ನಾಮವೊಂದು ಇಡಲಾಗುವುದು. ನಾಮಕರಣ ಶಾಸ್ತ್ರವನ್ನು ಕುರುಬ ಸಮುದಾಯವು ದೈವದ ನೆಲೆಯಲ್ಲಿ ಆಚರಿಸಲಾಗುತ್ತದೆ. ಹಾಲುಮತ ಪುರಾಣಗಳಲ್ಲಿ ಜನಿಸಿದ ಪವಾಡ ಪುರುಷರ ನಾಮಕರಣ ಶಾಸ್ತ್ರವು ಸಂಸ್ಕೃತಿಯ ಮಹತ್ವವನ್ನು ತಿಳಿ ಹೇಳುತ್ತದೆ. ಈ ಸಮುದಾಯದಲ್ಲಿ ನಾಮಕರಣ ಸಂಬಂಧದಲ್ಲಿ ಸುತ್ತ–ಮುತ್ತಲಿನ ಮುತ್ತೈದೆಯರನ್ನು ಕರೆಯುತ್ತಾರೆ. ಹಾಗೆಯೇ ತವರು ಮನೆಯಿಂದ ತಂದ ತೊಟ್ಟಿಲಲ್ಲಿ ಮಗುವನ್ನು ಹಾಕಿ, ಹುಟ್ಟಿದ ಹನ್ನೆರಡನೇ ದಿನಕ್ಕೆ ನಾಮಕರಣ ಶಾಸ್ತ್ರವನ್ನು ನೆರವೇರಿಸುತ್ತಾರೆ. ತೊಟ್ಟಿಲಲ್ಲಿ ಮಗುವನ್ನು ಮಲಗಿಸಿ, ಸೋದರ ಮಾವ ಅಥವಾ ಸೋದರ ಅತ್ತೆಯಿಂದ ಹೆಸರನ್ನು ಮಗುವಿನ ಕಿವಿಯಲ್ಲಿ ಹೇಳುವುದರ ಮೂಲಕ ನಾಮಕರಣ ಮಾಡಲಾಗುತ್ತದೆ. ಮಗುವಿನ ಹೆಸರು ಕರೆಯುವ ಮೊದಲು ಸಮುದಾಯದವರು ಮನೆ ದೇವರ ನಾಮಗಳನ್ನು ಕಿವಿಯಲ್ಲಿ ಹೇಳುವುದು ರೂಢಿಯಾಗಿದೆ. ಹಾಲುಮದವರು ನಾಮಕರಣ ಮಾಡುವಾಗ

> "ಬಂಗಾರದ ಹಲಗಿ ಕೊಟ್ಯಾನೆ ಲ್ಯಾಯದ ಪರಿಸಾಲಿ ಒಳಗೇನ
> ಲ್ಯಾಯದ ಪಡಸಾಲಿ ಒಳಗೇನೆ ತೊಟ್ಟಿಲ ಕಟ್ಟುತಾರೇನ
> ತೊಟ್ಟಿಲು ಕಟ್ಟುತಾರೇನೆ ಅತ್ತಿಯ ಮನಿಯ ಸೊಸ್ತೇರ
> ಅತ್ತಿಯ ಮನಿಯ ಸೊಸ್ತೇರ ತೌರಮನಿಯ ಹೆಣ್ಣುಮಕ್ಕಳ
> ಬಕ್ಕುಳ ಗುಗ್ಗರಿ ಹಾಕ್ಯಾರೆ ತಾವ ಕರಸುತಾರೇನೆ
> ಹೊನ್ನಿನ ಬಿಂದಿಗಿ ತಂದಾರೆ ಮಣ್ಣಿನ ಬಿಂದಿಗೆ ತಂದಾರೆ
> ನೆಲ್ಲಕ್ಕಿ ನೆಲಗಡಲೇನೆ ಕೊನಿವಂದು ಬಾಳಿಹಣ್ಣೀನ
> ಉತ್ತತ್ತಿ ಉರಿಗೊಬ್ಬರ ಉಡಿಯಕ್ಕಿ ಸಾಮನ ತಂದಾರೆ
> ವಾರಿಗೆ ನಾರ್‍ಯಾರ ಸಂಗಾಟೆ ಗಂಗೀನ ಮಿನಿನಾಕ ಹೋದರೆ
> ಗಂಗೀನ ಮಿನಿಲಾಕ ಹೋಗ್ಯಾರೆ ಕಲ್ಲಕಟ್ಟಿದ ಬಾಂಯೇನ"[೩೩]

ಹೀಗೆ ನಾಮಕರಣ ಶಾಸ್ತ್ರದಲ್ಲಿ ಮುತ್ತೈದೆಯರು ತಯಾರಿಸಿದ ಬಹಳ ಗುಗ್ಗರಿಯನ್ನು ಜನರಿಗೆ ನೀಡಿ ತಾಯಿ-ತಂದೆಗೆ ಆಶೀರ್ವದಿಸುತ್ತಾರೆ.

೪. ಶವಸಂಸ್ಕಾರ: ಹಾಲುಮತದಲ್ಲಿ ಸತ್ತವರನ್ನು ಹೂಳುತ್ತಾರೆ. ಸತ್ತವರಿಗೆ ಮುಖ ತೊಳೆದು ವಿಭೂತಿ ಹಚ್ಚಿ, ತಲೆ ಹತ್ತಿರ ಅಕ್ಕಿ, ಬೆಲ್ಲ ಇಟ್ಟು ದೀಪ ಹಚ್ಚುತ್ತಾರೆ. ಸಂಬಂಧಿಕರೆಲ್ಲರೂ ಬಂದ ಮೇಲೆ ನೀರು ಹಾಕಿ, ಹೊಸ ಬಟ್ಟೆಗಳನ್ನು ಹಾಕುತ್ತಾರೆ. ನಂತರ ಪಾದಪೂಜೆಯನ್ನು ಮಾಡುತ್ತಾರೆ. ಚಟ್ಟದಲ್ಲಿ ಇಡುವಾಗ ಬಾಯಿಗೆ ಅಂಬುದಂಬುಲ ಕಟ್ಟುತ್ತಾರೆ. ಸತ್ತು ಹೋದ ಗಳಿಗೆ ಸರಿ ಇಲ್ಲದಿದ್ದರೆ ಮೂಗಿಗೆ ಕಾಸು ಕಟ್ಟುತ್ತಾರೆ.

"ಸ್ಮಶಾನಕ್ಕೆ ಕೊಂಡು ಹೋಗುವಾಗ ಮೂರು ರಸ್ತೆ ಕೂಡಿದ ಜಾಗದಲ್ಲಿ ಚಟ್ಟವನ್ನು ಪೂರ್ವಪಶ್ಚಿಮವಾಗಿ ಇಟ್ಟು ಮಗನ ಕೈಯಲ್ಲಿ ಅದರ ಸುತ್ತ ಮೂರು ಸುತ್ತು ಸುತ್ತಿಸುತ್ತಾರೆ. ಅನಂತರ ಕೂಳಿನ ಮಡಿಕೆಯನ್ನು ಹಿಮ್ಮುಖವಾಗಿ ಎತ್ತಿ ಹಾಕಿಸಿ ಒಡೆದು ಹಾಕುತ್ತಾರೆ. ಹೊರುವವರಲ್ಲಿ ಮುಂದಿನವರು ಹಿಂದಕ್ಕೆ ಬರುತ್ತಾರೆ. ಸಮಾಧಿಯನ್ನು ಉತ್ತರ-ದಕ್ಷಿಣವಾಗಿ ತೆಗೆಯುತ್ತಾರೆ. ದಕ್ಷಿಣಕ್ಕೆ ತಲೆ ಇಡುತ್ತಾರೆ. ಹೆಣವನ್ನು ಮಲಗಿಸಿ ಉಡಿದಾರದ ಸಮೇತ ಎಲ್ಲ ಉಡುಗೆ ತೊಡುಗೆಗಳನ್ನು ತೆಗೆದು ಹಾಕುತ್ತಾರೆ. ಸತ್ತವನು ಗಂಡಸಾದರೆ ಅವನ ಹೆಂಡತಿಯ ಕೈನ ಒಂದು ಬಳೆಯನ್ನು ಒಡೆದು ಹಾಕುತ್ತಾರೆ. ಸತ್ತವನ ಕೈಯಿಂದ ಹೆಂಡತಿಗೆ ವೀಳ್ಯ ಕೊಡಿಸುತ್ತಾರೆ. ಇದು ಬಾಂಧವ್ಯದ ಋಣ ತೀರಿದ ಸಂಕೇತ ಅವಳ ಕೈಯಿಂದ ಅವನಿಗೆ ವೀಳ್ಯ ಕೊಡಿಸುತ್ತಾರೆ. ನಂತರ ಎಲ್ಲರೂ ಒಂದೊಂದು ಹಿಡಿ ಮಣ್ಣು ಹಾಕಿ ಮುಚ್ಚುತ್ತಾರೆ. ಹಿರಿಯ ಮಗನ ಹೆಗಲ ಮೇಲೆ ಒಂದು ನೀರು ತುಂಬಿದ ಮಡಕೆಯನ್ನು ಇಟ್ಟು ಗುದ್ದದ ಸುತ್ತ ಮೂರು ಸುತ್ತು ಸುತ್ತಿಸುತ್ತಾರೆ. ಪ್ರತಿಯೊಂದು ಸುತ್ತಿಗೂ ಮಡಕೆಗೆ ಒಂದು ತೂತನ್ನು ಮಾಡುತ್ತಾರೆ. ಮೂರನೇ ಸುತ್ತಿನ ಅನಂತರ ಆತ ಮಡಕೆಯನ್ನು ಹಿಮ್ಮುಖವಾಗಿ ಗುಡ್ಡೆಯ ಮೇಲೆ ಜಾರಿಸಿ ಹಿಂತಿರುಗಿ ನೋಡದಂತೆ ಮನೆಗೆ ಹೋಗಬೇಕು."[೩೪]

ಹೀಗೆ ಹಾಲುಮತ ಸಮುದಾಯದ ಆಚಾರ-ವಿಚಾರಗಳು ಜನಸಾಮಾನ್ಯರಲ್ಲಿ ಬೇರೂರಿವೆ. ಹುಟ್ಟು-ಯೌವನ-ವಿವಾಹ ವೃದ್ಧಾಪ್ಯ-ಸಾವು-ನೋವು-ನಲಿವುಗಳು ಜನಪದರ ನಂಬಿಕೆಗಳಾಗಿವೆ.

ಕೊನೆಟಿಪ್ಪಣಿಗಳು

೧. ನಾಯ್ಕರ ಬ.ಪ., ಹಾಲುಮತಸ್ಥರು, ಪು.೭

೨. ಅದೇ, ಪು.೮

೩. ಅದೇ, ಪು.೮

೪. ಅದೇ, ಪು.೯

೫. ಅದೇ, ಪು.೧೦

೬. ಅದೇ, ಪು.೧೩

೭. ಅದೇ, ಪು.೧೫

೮. ಅದೇ, ಪು.೧೭

೯. ಅದೇ, ಪು.೧೮

೧೦. ಅದೇ, ಪು.೧೯

೧೧. ವಂಟಗೂಡಿ ಟಿ.ಎಸ್., ರಾಯಭಾಗ ತಾಲೂಕಿನ ಹಾಲುಮತದ ದೈವಗಳು, ಪು.೫೫

೧೨. ರಾಜಶ್ರೀ ಪಾಟೀಲ, ಹಾಲುಮತ ಗುರು ಸರೂರು ಶಾಂತಮುತ್ತಯ್ಯ, ಪು.೬

೧೩. ಎಫಿಗ್ರಾಫಿಯಾ ಕರ್ನಾಟಕ ಚಿತ್ರದುರ್ಗ ಜಿಲ್ಲೆ ಪು.೩೪೯

೧೪. ರಸ್ತಾಪುರ ಭೀಮಕವಿಯ 'ಹಾಲ್ಮತೋತ್ತಜಕ ಪುರಾಣ ಪು.೨-೧೨

೧೫. ಎಫ್.ಟಿ.ಹಳ್ಳಿಕೇರಿ, ರೇವಣ್ಣಸಿದ್ದನ ಪರಂಪರೆಯ ಹಾಲುಮತ ಮಠಗಳು, ಇತಿಹಾಸ ದರ್ಶನ,

೧೬. ಕಲಬುರ್ಗಿ ಎಂ.ಎಂ., ಬಸವಣ್ಣನವರ ವಚನ ಸಂಪುಟ ೧, ಪು.೧೩೮

೧೭. ಗಂಗಾಧರ ದೈವಜ್ಞ(ಸಂ), ಅಡಿವೆಪ್ಪ ಹಾಡಿದ ಕಾವ್ಯ, ಪು.೧೭

೧೮. ಶಂಕರ ಶಿ.ಕುಂಬಾರ, ಹಾಲುಮತದ ಮೂಲಗುರು ರೇವಣ್ಣ ಸಿದ್ಧರು, ಪು.೪

೧೯. ಹಾಡಿದವರು: ವಿಠ್ಠಲ ಯಣಕಂಚಿ ಅಥಣಿ ಪು.೬೨

೨೦. ಎಸ್.ಎಸ್.ಹಿರೇಮಠ, ಜಾತ್ರೆಗಳು ಪು.೨೪

೨೧. ಅದೇ ಪು.೨೯

೨೨. ಡಾ.ಎಫ್.ಟಿ.ಹಳ್ಳಿಕೇರಿ(ಸಂ), ಹಾಲುಮತ ವ್ಯಾಸಂಗ-೫, ರೇವಣ್ಣಸಿದ್ದ ಪರಂಪರೆ, ಪು.೮೧-೮೨

೨೩. ಅದೇ, ಪು.೮೨

೨೪. ಅದೇ, ಪು.೮೩.

೨೫. ಅದೇ, ಪು.೮೫

೨೬. ಚಂದ್ರಕಾಂತ ಬಿಜ್ಜರಗಿ ಕುರುಬರ ಕುಲಗುರು ರೇವಣಸಿದ್ಧ, ಪು.೪೭

೨೭. ಹುಲಿಗೆಮ್ಮ ಬಿ. ಹಾಲುಮತ ಪುರಾಣಗಳು: ಸಾಂಸ್ಕೃತಿಕ ಅಧ್ಯಯನ ಪು.೧೪೨

೨೮. ಅದೇ, ಪು.೫

೨೯. ಅದೇ, ಪು.೨೦

೩೦. ಪುರುಷೋತ್ತಮ ಬಿಳಿಮಲೆ, ಕೂಡುಕಟ್ಟು, ಪು.೭೨

೩೧. ಲಕ್ಕಪ್ಪಗೌಡ ಎಚ್.ಜೆ., ಜಾನಪದ ಕೈಪಿಡಿ, ಪು.೫೨೪

೩೨. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೮೫

೩೩. ಅದೇ, ಪು.೧೯೧

೩೪. ಜೈಕುಮಾರ ಎಂ., ಚಲುವು ಚಪ್ಪರ, ಪು.೩೧

ಅಧ್ಯಾಯ: ಐದು

ಹಾಲುಮತ ಪುರಾಣಗಳ ವಸ್ತುವೈಶಿಷ್ಟ್ಯತೆಗಳು

ಅಧ್ಯಾಯ: ಐದು

ಹಾಲುಮತ ಪುರಾಣಗಳ ವಸ್ತುವೈಶಿಷ್ಟ್ಯತೆಗಳು

ಮಹಾಪುರುಷರು ತಮ್ಮ ನಡತೆಗಳಿಂದಲೇ ಸಮಾಜಕ್ಕೆ ವಿವಿಧತೆಯಲ್ಲಿ ಏಕತೆಯನ್ನು, ಸಮನ್ವಯತೆಯನ್ನು, ಜಾತಿಯಲ್ಲಿ ಭೇದ-ಭಾವಗಳನ್ನು ಮಾಡಬಾರದೆಂದು ಸರ್ವಧರ್ಮ ಏಕತೆಯ ಬಗ್ಗೆ ಸಾರಿದ್ದಾರೆ. ಆಡಂಬರ, ಡಂಭಾಚಾರ, ಬೂಟಾಟಿಕೆಗಳಿಲ್ಲದೆ ಮೌನವಾಗಿದ್ದುಕೊಂಡೆ ದೇವರನ್ನು ಮನದಲ್ಲಿ ನೆನೆದು, ತಮ್ಮ ಅಲೌಕಿಕ ಶಕ್ತಿಗಳಿಂದ, ಮೌನಗಳಿಂದ ಜನರ ಮನವನ್ನು ಗೆದ್ದಿದ್ದಾರೆ. ಮಾತಿಗಿಂತಲೂ, ಮೌನ ಶ್ರೇಷ್ಠವಾದದು ಎನ್ನುವ ಹಾಗೆ ಮಹಾಪುರುಷರು ಮೌನಕ್ಕೆ ಪ್ರಾಶಸ್ತ್ಯ ನೀಡಿ ಮೌನದಿಂದಲೇ ಪ್ರಗತಿಯನ್ನು ಸಾಧಿಸಿದವರು. ಇವರ ಸ್ವಭಾವಗಳನ್ನು ನೋಡುವುದಾದರೆ ಇವರು ನುಡಿದ ಕೆಲ ಮಾತುಗಳು ಜನಸಾಮಾನ್ಯರಿಗೆಲ್ಲ ಪವಾಡಗಳಾಗಿಯೇ ಕಂಡು ಬರುತ್ತವೆ. ಈ ಮಹಾಪುರುಷರ ಪುರಾಣಗಳು ಹಾಲುಮತದಲ್ಲೂ ಸಾಕಷ್ಟು ರಚನೆಯಾಗಿವೆ.

೧. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ

ರಸ್ತಾಪುರ ಭೀಮಕವಿಯು ರಚಿಸಿರುವ ಈ ಪುರಾಣವು ವಾರ್ಧಕ ಷಟ್ಪದಿಯಲ್ಲಿದೆ. ಒಂಬತ್ತು ಸಂಧಿಗಳಿಂದ ಕೂಡಿದೆ, ೫೫೮ ಪದ್ಯಗಳಲ್ಲಿದೆ. ಇದೊಂದು ಚಾರಿತ್ರಿಕ ಅಂಶಗಳನ್ನೊಳ ಗೊಂಡ ಪುರಾಣವಾಗಿದೆ. ಪ್ರತಿಯೊಂದು ಸಂಧಿಯ ಆರಂಭದಲ್ಲಿ ಶಿವನನ್ನು ವಿವಿಧ ಹೆಸರುಗಳಿಂದ ಸ್ತುತಿಸಿರುವುದನ್ನು ಕಾಣುತ್ತೇವೆ. ವಿಘ್ನರಾಜ, ಗಂಗಾಧರ, ವರಕವಿ ಕಾಳಿದಾಸ, ಸಿದ್ಧರಾಮೇಶ್ವರ, ಭವಭೂತಿ, ಮಲುಹಣ, ನಂದಿಕೇಶ, ಬಾಣ, ಕೆರೆಯ ಪದ್ಮರಸ, ಮೊಗ್ಗೆಯ ಮಾಯಿದೇವ ಭೀಮಕವಿ, ಹರಿಹರ, ರಾಘವಾಂಕ, ಗುರು ಪಂಡಿತೇಶ, ಉದ್ಭಟ, ಚಾಮರಸ, ಮಲ್ಲಚಾರ್ಯ, ಶಿವಯೋಗಿ ಮೊದಲಾದವರಿಗೆ ವಂದಿಸುತ್ತ, ನಿಮ್ಮೆಲ್ಲರ ಹಂಬಲವಿಲ್ಲವೆಂದು ನನ್ನ ಪುರಾಣದಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದರೆ ಬೇಡಿಕೊಳ್ಳುತ್ತೇನೆ.

ಮೊದಲ ಸಂದರ್ಭದಲ್ಲಿ ೧೪ ಪದ್ಯಗಳಿವೆ. ಇದು ಪ್ರಾರಂಭವಾಗುವುದು ದೇವರ, ಗುರು ಸ್ಮರಣೆ ಮಾಡುತ್ತಾ, ರೇವಣ್ಣಸಿದ್ದನನ್ನು ಸ್ಮರಿಸಿ ಪ್ರಾರಂಭಿಸುತ್ತಾನೆ. ಎರಡನೆ ಸಂಧಿಯಲ್ಲಿ

ಕಥೆ ಪ್ರಾರಂಭಿಸುತ್ತೇನೆ. ಇಲ್ಲಿ ರೇವಣ್ಣ ಚರಿತ್ರೆಯ ಕುರಿತು ವಿಸ್ತಾರವಾದ ಮಾಹಿತಿ ಇದೆ. ರೇವಣ್ಣನ ಜನನವು ಕೊಲ್ಲಿಪಾಕಿಯ ಸೋಮಲಿಂಗದಲ್ಲಿ ಆಗಿರುತ್ತದೆ. ರೇವಣ್ಣಸಿದ್ದನು ತನ್ನ ಪವಾಡಗಳನ್ನು ತೋರಿಸುತ್ತಾ ಸರೂರು ಗ್ರಾಮಕ್ಕೆ ಬಂದು ಹಾಲಮತದಲ್ಲಿ ಜನಿಸಿದ ಶಾಂತಮುತ್ತಯ್ಯನಿಗೆ 'ಸಿದ್ದಿಸಲಿ ನೀವಂದ ನುಡಿಗಳು ಭೂಮಿಯಲ್ಲಿ' ಎಂದು ಹಾರೈಸಿ, ಲಿಂಗದೀಕ್ಷೆಯನ್ನು ನೀಡಿ, ಹಾಲುಮತಕ್ಕೆ ಅಧ್ಯಕ್ಷನನ್ನಾಗಿ ಮಾಡಿದರು. ಈತನಿಗೆ ಸುಲ ಮುತ್ತಯ್ಯ, ಜಗಮುತ್ತಯ್ಯ, ಲಲಿತಶಾಂತಯ್ಯರೆಂಬ ಮಕ್ಕಳಿದ್ದರು ಎಂದು ಪುರಾಣದಲ್ಲಿದೆ. ರೇವಣ್ಣಸಿದ್ದನು ತನ್ನ ಶಿಷ್ಯನಾದ ಶಾಂತಯ್ಯನಿಗೆ ಹೇಳಿ ಮುಂಡಾಸುರನನ್ನು ಕೊಲ್ಲಿಸಿ, ಅವನಿಂದ ಮೂರು ಭಾಗಗಳನ್ನಾಗಿ ಮಾಡಿ, ಮೂರಡಿಯ ಕಂತೆಗಳಾಗಿ ಮಾಡಿದನು.

ಶಿವಪದ್ಮನ ಚರಿತ್ರೆ ಎಂಬ ಮೂರನೆಯ ಸಂಧಿ ೪೯ ಪದ್ಯಗಳನ್ನು ಹೊಂದಿದೆ. ಕೈಲಾಸದಲ್ಲಿ ಗಂಧರ್ವರಿಬ್ಬರು ಕುರೂಪಿಯಾದ ಋಷಿಯನ್ನು ಕಂಡು ಅಪಹಾಸ್ಯ ಮಾಡಿದ್ದಕ್ಕಾಗಿ ಭೂಲೋಕದಲ್ಲಿ ಗಂಡ-ಹೆಂಡತಿಯಾಗಿ ಹುಟ್ಟಿದರು. ಅವರೇ ಮುದ್ದುಗೊಂಡ-ಮುದ್ದಾಯಿ ದಂಪತಿಗಳಾಗಿ ಜನಿಸಿ, ಇವರಿಗೆ ಆದಿಗೊಂಡನೆಂಬ ಹೆಸರಿನ ಮಗ ಹುಟ್ಟುವನು. ಆದಿಗೊಂಡ ಬೆಳೆದು ದೊಡ್ಡವನಾದ ಮೇಲೆ ಮುದ್ದುಗೊಂಡನ ಸಹೋದರಿಯ ಮಗಳಾದ ಚುಂಚಲೆಯೊಂದಿಗೆ ವಿವಾಹ ಮಾಡಿದರು. ಇವರಿಗೆ ನಾಲ್ವರು ಮಕ್ಕಳು ಆಯ್ಗೊಂಡ, ಪಾಯ್ಗೊಂಡ, ಮರಗೊಂಡ ಮತ್ತು ಜಾಯ್ಗೊಂಡ ಹುಟ್ಟಿದರು. ಕೊನೆಯ ಇವರ ವೃದ್ಧಾಪ್ಯದಲ್ಲಿ ಕೊನೆಯ ಮಗನಾಗಿ ಶಿವಪದ್ಮನು ಐದು ತಿಂಗಳಿಗೆ ಜನಿಸುತ್ತಾನೆ.

ನಾಲ್ಕನೇ ಸಂಧಿಯಲ್ಲಿ ೫೧ ಪದ್ಯಗಳಿವೆ. ಶಿವಪದ್ಮನ ಚರಿತ್ರೆ ಎಂಬ ಸಂಧಿಯಲ್ಲಿ ಶಿವಪದ್ಮನ ಬಾಲಲೀಲೆಗಳು ಕಳೆದು, ದೊಡ್ಡವನಾಗುತ್ತಿದ್ದಂತೆ, ತನ್ನ ಸಹೋದರಿಯ ಮಗಳೊಂದಿಗೆ (ಜಿಂಕಾದೇವಿ) ಮದುವೆಯಾಗುವ ಸಂಗತಿ ಇದೆ. ಶಿವಪದ್ಮನನ್ನು ಕಾಣಲು ಗುರು ರೇವಣ್ಣನು ಜಾಗೃತಿಪುರಕ್ಕೆ ಬರುತ್ತಾನೆ. ಬರುವಾಗ ಬಡವಿ ಗಂಗಮ್ಮನೆಂಬ ಕಡು ಬಡವೆಯ ಮನೆಯಲ್ಲಿ ಭೋಜನ ಮಾಡಿ, ಎದ್ದು ಬಂದರೆ, ರೇವಣ್ಣಸಿದ್ದ ಕುಳಿತ ಜಾಗದಲ್ಲಿ ನಿಧಿಯು ಇರುತ್ತದೆ. ಅವಳು ಗುರುಗಳು ಮರೆತು ಹೋದರೇನೋ ಎಂದು ಅವರ ಹಿಂದೆಯೇ ಹೋಗಿ, ಗುರುಗಳೇ ನಿಧಿಯನ್ನು ಮರೆತಿರುವಿರಿ ಎಂದಾಗ, ಗುರುಗಳು ಇಲ್ಲ ತಾಯಿ ಇದು ನಿನಗಾಗಿ ಎಂದು ಹೇಳಿದಾಗ, ಬೇಡವೆಂದರು, ಗುರುಗಳು ನೀಡಿದರು, ಅಂದಿನಿಂದ ಅವಳು ಶ್ರೀಮಂತೆಯಾದಳು. ತದನಂತರ ಶಿವಪದ್ಮನ ಮನೆಗೆ ಬಂದು ಪಂಚಾಕ್ಷರಿ ಮಂತ್ರವನ್ನು ಬೋಧಿಸಿದರು. ಐದನೆಯ ಸಂಧಿಯಲ್ಲಿ ೨೧೨ ಪದ್ಯಗಳಿವೆ. "ಶಿವಪದ್ಮ ಚರಿತ್ರೆ" ಎಂಬ ಶೀರ್ಷಿಕೆಯಿಂದ ರೂಪುಗೊಂಡಿದೆ. ಇಲ್ಲಿ ಕೈಲಾಸದಲ್ಲಿ ಒಬ್ಬ ಖೇಚರನು ಶಿವನಿಗೆ ನಮಸ್ಕರಿಸಿ ಹಿಂದೆ ಸರಿದಾಗ, ಋಷಿಯ

ಕಾಲಿಗೆ-ಖೇಚರನ ಕಾಲು ತಾಗಿ, ಅವರು ಅವನಿಗೆ ಶಾಪ ನೀಡುತ್ತಾರೆ. ಖೇಚರನು ಭೂಲೋಕದಲ್ಲಿ ಜಾಬಾಲ ಮುನಿಯಾಗಿ ಜನಿಸುತ್ತಾನೆ. ಶಿವ ಆಜ್ಞೆಯಂತೆ ಮೃತ್ಯು ದೇವತೆ ರಾಜ ಗಂಗಾಧರನ ಮಗುವಿನ ರುಂಡ ಕಡಿದು, ಋಷಿಯ ಮುಂದೆ ಹಾಕಿದಾಗ ಅದನ್ನು ಕಂಡ ಗಂಗಾಧರನು ಋಷಿಯ ರುಂಡವನ್ನು ಕತ್ತರಿಸಿ ಹಾಕುತ್ತಾನೆ. ರಕ್ತದಿಂದ ಕುರಿಗಳು ಉದ್ಭವಿಸುತ್ತವೆ. ರಾಜ, ಮಂತ್ರಿ, ಸೈನಿಕರು ಕಾಯ್ದು ಸಾಕಾಗಿ, ಕಡೆಗೆ ಶಿವ-ಪಾರ್ವತಿಯರು ಕಾಯ್ದು ಹುತ್ತದಲ್ಲಿ ಅಡಗಿಸಿಟ್ಟ ಕಥೆ ಬರುತ್ತದೆ. ಹಾಗೆಯೇ ಶಿವಪದ್ಮ ಮತ್ತು ಜಿಂಕಾದೇವಿಯ ಮದುವೆಯ ಪ್ರಸಂಗ ಬರುತ್ತದೆ.

ಇನ್ನು ಆರನೆಯ ಸಂಧಿ ೬೧ ಪದ್ಯಗಳನ್ನು ಒಳಗೊಂಡಿದೆ, ಶಿವಪದ್ಮ ಚರಿತ್ರೆಯ ಶೀರ್ಷಿಕೆಯೊಂದಿಗೆ ಈ ಸಂಧಿಯಲ್ಲಿ ಶಿವಪದ್ಮನು ಕುರಿಗಳನ್ನು ಕಾಯುತ್ತ ಅಲೆಮಾರಿಯಾಗಿ ಹೋಗುವ ಪ್ರಸಂಗಗಳು ಬರುತ್ತವೆ. ಇವರ ಜೊತೆ ವೀರೇಶನು ಹೋಗುತ್ತಾನೆ. ಕುರಿಗಳನ್ನು ಕಾಯುತ್ತ ಇರಬೇಕಾದರೆ, ರೇವಣ್ಣಸಿದ್ದರು ಬಂದರು, ಅವರಿಗೆ ಊಟ ಮಾಡಿಸಬೇಕೆಂದು, ಬೆಂಕಿಯನ್ನು ಅರಸಿ ದೂರದ ಬೆಟ್ಟಗಳ ಬಳಿ ಹೋದಾಗ, ಅಲ್ಲಿ ಹೊಗೆ ಬರುವುದು ಕಂಡು, ಹೋದಾಗ ಚುಮಲೆಯ ಪ್ರಸಂಗ ಬರುವುದು. ಬೆಂಕಿಯನ್ನು ಅರಸಿ ಹೋದ ಶಿವಪದ್ಮನು ಚುಮಲೆಯ ಮನಗೆಲ್ಲುತ್ತಾನೆ. ಬೆಂಕಿ ತೆಗೆದುಕೊಳ್ಳುವಾಗ, ಚುಮಲಾದೇವಿಯ ನೀವು ನನಗೂ ಪ್ರಸಾದವನ್ನು ತರಬೇಕೆಂದು ಕೇಳಿದಾಗ, ಆಗಲಿ ಎಂದು ಹೇಳಿ ಹೋಗಿ, ಗುರುಗಳಿಗೆ ಪ್ರಸಾದ ನೀಡಿ ಚುಮಲೆಯ ಬಳಿ ಬಂದು, ಕೈಲಾಸದಿಂದ ಶಾಪಗೊಳಗಾಗಿ ರಕ್ಕಸಿ, ಕಾಗೆ, ಕಾಂಚಾಲ ಮರವಾಗಿದ್ದ, ಎಲ್ಲರನ್ನು ಕೊಂದು, ಶಾಪದಿಂದ ವಿಮೋಚನೆ ಮಾಡಿದ ಪ್ರಸಂಗ, ಹಾಗೆಯೇ ವೀರರ ಕೃಪೆಯಿಂದ ಚುಮಲೆಯೊಂದಿಗೆ ಶಿವಪದ್ಮನ ವಿವಾಹವಾಗುವ ಸಂಗತಿ ಇದೆ.

ಏಳನೆಯ ಸಂಧಿಯಲ್ಲಿ ೯೦ ಪದ್ಯಗಳಿವೆ. ರಾಕ್ಷಸಿಯನ್ನು ಕೊಂದು, ಅವಳಿಗೆ ಐವತ್ತೆರಡು ಬಾವನ್ನು ಬಿರುದಾವಳಿಗಳನ್ನು ಬಂಕಾಪುರದಲ್ಲಿ ಇಡುತ್ತಾರೆ. ಮಕ್ಕಳ ಪ್ರಸಂಗ ಬರುತ್ತದೆ. ಹಾಗೆಯೇ ಕೈಲಾಸಕ್ಕೆ ತೆರಳಿ ಮುಂದಿನ ಜನ್ಮದಲ್ಲಿ ಧರ್ಮದೇವ-ಸುರಾಮತಿಯರ ಮಗನಾಗಿ ಶಿವಸಿದ್ದ ಬೀರೇಶನಾಗಿ ಜನಿಸುವ ಪ್ರಸಂಗ ಬರುತ್ತದೆ. ಆದರೆ ಸುರಾಮತಿಯ ಅಣ್ಣನಾದ ಕೃಷ್ಣನು ಅಳಿಯನಿಂದಲೇ ತನಗೆ ಕೇಡಿದೆ ಎಂದು ಅವನನ್ನು ಗರ್ಭದಲ್ಲಿಯೇ ಸಾಯಿಸಲು ಹೊಂಚು ಹಾಕುತ್ತಾನೆ. ಅದು ಆಗದೇ, ಹುಟ್ಟಿದ ೧೧ ದಿನಗಳಿಗೆ ಕಾಡಿಗೆ ಬಿಟ್ಟುಬರಬೇಕೆಂದು ಹೇಳಿ, ಕಾಡುಪಾಲು ಮಾಡುತ್ತಾರೆ. ಈ ಸಂಧಿಯಲ್ಲಿಯೇ ದೇವಗನ್ನೆಯ ಪ್ರಸಂಗವು ಬರುತ್ತದೆ. ಅಕ್ಕಮ್ಮಳಿಗೆ ಬೀರೇಶ ಸಿಗುವ ಕಥೆ ಬರುತ್ತದೆ.

ಎಂಟನೆಯ ಸಂಧಿಯಲ್ಲಿ ೯೫ ಪದ್ಯಗಳಿವೆ. ಶಿವಸಿದ್ದ ಬೀರೇಶ್ವರ ಚರಿತ್ರೆ ಎಂಬ ಶೀರ್ಷಿಕೆ ಇದೆ. ಅಕ್ಕಮ್ಮನ ಉಡಿಗೆ ಬೀರೇಶ್ವರನು ಸೇರಿ ಕುರಿಯ ಕೊರಳ ಮೇಲೆ ಹಾಲನ್ನು ಕುಡಿಸಿ ಬೆಳೆಸುತ್ತಾಳೆ. ಬಾಲ್ಯದ ತುಂಟಾಟಗಳನ್ನು ಅವನು ಊರ ಕೇರಿಯಲ್ಲಿ ಮಾಡುತ್ತಿರುತ್ತಾನೆ. ಅಕ್ಕಮ್ಮನೊಂದಿಗೆ ಹಠ ಮಾಡಿ ಚೆಂಡು, ಬಿಲ್ಲು-ಬಾಣಗಳನ್ನು ಪಡೆದುಕೊಂಡಿರುತ್ತಾನೆ.

"ಭರದಿ ಬೈಲಿಗೆ ಬಂದು ನೀರ್ತರುವ ಏಳ್ನೂರು
ತರುಣಿಯರ ತುಂಬದ ಕೊಡಕ್ಕೆ ಬಾಣವನೆಸೆ
ಉರೆ ಛಿದ್ರ ಬಿಳುವರತಿ, ಕೋಪದಿಂದ ನಿಂದು ಜನನಿ
ಕನಕರ ಕಾರಣ"(೮-೩೨)

ಆಗ ಅವನಿಗೆ ಬೇಸರವಾಗಿ ಅಕ್ಕಮ್ಮನೊಡನೆ ತನ್ನ ಹುಟ್ಟನ್ನೆ, ತಂದೆ-ತಾಯಿಯನ್ನು ಗುರುತನ್ನು ತಿಳಿದುಕೊಂಡು, ಸೋದರಮಾವನ ಮಗಳಾದ ಕನ್ನಿಕಾಮಾಲೆಯನ್ನು ತರುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಇವಳನ್ನು ಕಾಣಲು ಬಳಿಗಾರನ ವೇಷದಲ್ಲಿ ಹೋಗುತ್ತಾನೆ. ಅವಳನ್ನು ಹೊತ್ತು ತಂದು ಮದುವೆಯಾಗುತ್ತಾನೆ.

ಒಂಭತ್ತನೆಯ ಸಂಧಿಯಲ್ಲಿ ೧೬೩ ಪದ್ಯಗಳಿವೆ. ಶಿವಸಿದ್ದ ಬೀರೇಶ್ವರನ ಚರಿತ್ರೆ ಎಂಬ ಶೀರ್ಷಿಕೆ ಹೊಂದಿದೆ. ಬೀರೇಶ್ವರ ಮಾಳಿಂಗರಾಯ ಇಬ್ಬರ ಪ್ರಸಂಗ ಬಂದಿದೆ. ಗುರು-ಶಿಷ್ಯರ ಸಂಬಂಧದ ಕಥೆಗಳು ಬರುತ್ತವೆ. ಕೊಲ್ಲಿಪಾಕಿಯಿಂದ ಹಾಲ್ಬಾವಿ ಗ್ರಾಮಕ್ಕೆ ಬಂದ ಹೆಂಡದ ದೇವಮ್ಮನ ಶ್ರೀಮಂತಿಕೆಯು ಬರುವಂತೆ ಮಾಡಿ, ಅವಳಲ್ಲಿ ಹಣದ ಗರ್ವ ಬಂದಾಗ, ಮತ್ತೆ ಮಾಳಿಂಗರಾಯನು ಅವಳಿಗೆ ಮೊದಲಿನಂತೆ ಬಡವಿಯಾಗು ಎಂದು ಶಾಪ ಕೊಡುತ್ತಾನೆ. ಇನ್ನು ಗುರು-ಶಿಷ್ಯರ ಸಂಬಂಧ ಲೋಕಕ್ಕೆ ತಿಳಿಯಲು ಬೀರೇಶನು ಮಾಳಿಂಗನಿಗೆ ಕಪ್ಪೆ ಕಲಕದ ಜಲ, ಹುಳ ಮುಟ್ಟದ ಪುಷ್ಪಗಳನ್ನು ತಂದು ಪೂಜಿಸು ಎನ್ನವುದು, ಹಾಗೆಯೇ ಪ್ರಸಾದಕ್ಕೆ ಹುಲಿಯ ಹಾಲು ಬೇಕೆನ್ನುವುದು, ಇವುಗಳು ಪ್ರಪಂಚಕ್ಕೆ ಗುರುಗಳ ಮಹತ್ವ ತಿಳಿಯಲೆಂದು ಮಾಡಿದ ಪವಾಡಗಳಾಗಿವೆ. ಇನ್ನು ಗುರುಗಳು ಮಾಳಿಂಗರಾಯನನ್ನು ಹೆಚ್ಚು ಇಷ್ಟಪಡುವುದನ್ನು ಕಂಡು ಸಹಿಸಲು ಆಗದ ಕೆಲವರು ಅವನನ್ನು ಕೊಲ್ಲಲು ಮುಂದಾಗುತ್ತಾರೆ. ಗುರುಗಳ ಕೃಪೆಯಿಂದ ಅದು ಸಾಧ್ಯವಾಗುವುದಿಲ್ಲ. ಇನ್ನು ಕೊನೆಯಲ್ಲಿ ಈ ಪುರಾಣದಲ್ಲಿ ಬರುವ ಎಲ್ಲಾ ಪಾತ್ರಗಳು ಕೈಲಾಸಕ್ಕೆ ಹೋಗುವ ಪ್ರಸಂಗವನ್ನು ವಿವರಿಸಲಾಗಿದೆ.

ಒಟ್ಟಿನಲ್ಲಿ ಈ ಪುರಾಣವು ಚಾರಿತ್ರಿಕವಾದ ರಚನೆಯಾಗಿದೆ. ಕುರುಬರ ಸಾಂಸ್ಕೃತಿಕ ವೀರರಾದ ರೇವಣ್ಣಸಿದ್ದ, ಶಾಂತಮುತ್ತಯ್ಯ, ಶಿವಪದ್ಮ, ಶಿವಸಿದ್ದ ಬೀರ, ಮಾಳಿಂಗರಾಯರ ಮಾಟಗಳು, ಅವರ ಜೀವನದ ಬಗ್ಗೆ ಚರಿತ್ರೆ ಇರುವುದು ಕಾಣುತ್ತದೆ. ಮಹಾಪುರುಷರ

ಕಥೆಗಳ ಜೊತೆ ಅವರ ಪವಾಡಗಳು, ರಾಕ್ಷಸರ ಸಂಹಾರ, ದೇವ-ರಾಕ್ಷಸರ ಸಂಬಂಧ ವರ್ಣನೆ ಇದೆ.

೨. ಜನಪದ ಹಾಲುಮತ ಮಹಾಕಾವ್ಯ

ಜನಪದ ವಿದ್ವಾಂಸರಾದ ವೀರಣ್ಣ ದಂಡೆಯವರು ಜನಪದ ಹಾಲುಮತ ಮಹಾಕಾವ್ಯವನ್ನು ಸಂಪಾದಿಸಿದ್ದಾರೆ. ಈ ಕಾವ್ಯವನ್ನು ಸಿದ್ದಪ್ಪ ಮೇಟಿರವರು ಹಾಡಿದ್ದಾರೆ. ಈ ಮಹಾಕಾವ್ಯವು ಅಧಿಕೃತವಾಗಿ ಹಾಲುಮತದ ಪ್ರತಿಯೊಂದು ಮಾಹಿತಿಯನ್ನು ತಿಳಿಸುವ ಆಕರ ಗ್ರಂಥವಾಗಿದೆ. ಇದೊಂದು ಜನಪದ ಕೃತಿ ಎಂದೇ ಪ್ರಸಿದ್ಧಿ ಪಡೆದಿದೆ. ಪೌರಾಣಿಕ ನೆಲೆಗಟ್ಟಿನ ಮೇಲೆ ರಚನೆಗೊಂಡ ಕೃತಿ ಅಲೌಕಿಕ ಛಾಪನ್ನು ಮೂಡಿಸಿದೆ. ಈ ಮಹಾಕಾವ್ಯದಲ್ಲಿ ಮೊದಲನೆಯದಾಗಿ ಕೈಲಾಸದ ವಾಡಿಕೆಯಿಂದ ಹಿಡಿದು, ಶರಣರ ವೃತ್ತಾಂತದವರೆಗೂ ಮುಂದುವರೆದುಕೊಂಡು ಹೋಗಿದೆ. ಒಟ್ಟು ೧೪ ಅಧ್ಯಾಯಗಳನ್ನು ಕಾಣುತ್ತೇವೆ, ಈ ಪುರಾಣಗಳಲ್ಲಿ ಸಾಕಷ್ಟು ಪಾತ್ರಗಳು ಬರುತ್ತವೆ. ಆದರೆ ಗುರು-ಶಿಷ್ಯರಾಗಿರುವ ಬೀರಪ್ಪ, ಮಾಳಿಂಗರಾಯರ ಪಾತ್ರ ಪ್ರಮುಖವಾದುದು ಇವರ ಒಟ್ಟೊಟ್ಟಿಗೆ ಕಮಳಾದೇವಿ, ಸೂರಮ್ಮದೇವಿ, ಮಾಯಮ್ಮ, ಅಕ್ಕವ್ವ, ಕನ್ನಿಕಾಮವ್ವ ಮುಂತಾದವರ ಸ್ತ್ರೀ ಪಾತ್ರಗಳನ್ನು ಗಮನಿಸುತ್ತೇವೆ. ಪೌರಾಣಿಕ ನೆಲೆಯಲ್ಲಿಯೇ ಕಥೆ ಪ್ರಾರಂಭವಾಗಿ, ಮುಕ್ತಾಯವಾಗುತ್ತದೆ.

'ಶಿವನೇ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾ ಬನ್ನೀರೆ'

ಎಂದು ಪ್ರಾರಂಭವಾಗುವ ಕೈಲಾಸದ ಹಾಡಿಗೆಯೊಂದಿಗೆ ಭೂಮಂಡಲವೇ ಒಂದು ನೀರೆ ನಿರಂಕಾರವಾಗಿತ್ತು. ನೀರಿನ ಮೇಲೊಂದು ಗುರುಳಿ ಬಂದು, ಅದೇ ರುಂಡವಾಗಿ ಕೈ-ಕಾಲು, ರಕ್ತ-ಮಾಂಸಗಳಾಗಿ ಅಖಂಡೇಶ್ವರ ಸೃಷ್ಟಿಯಾದನು. ಆದಿಶಕ್ತಿಯ ಗರ್ಭದಿಂದ ರಕ್ಕಸರ ಜನನವಾಯಿತು. ಮುಂದೆ ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ, ಮಹಾದೇವ, ಶಾಂತಮುತ್ತಯ್ಯನ ಜನನಗಳಾದವು. ಇಲ್ಲಿ ಕುರುಬರ ಗುರು ಶಾಂತಮುತ್ತಯ್ಯ ಜನನ ದೇವರೊಂದಿಗೆ ಆಗಿದೆ ಎಂಬ ಪ್ರಸ್ತಾಪವು ಬಂದಿದೆ. ಶಾಂತಮುತ್ತಯ್ಯನು ಐದುಮಂದಿ ರಕ್ಕಸರನ್ನು ಕೊಂದು ಕುರಿಗಳನ್ನಾಗಿಸಿದನು. ಮತ್ತೊಬ್ಬನನ್ನು ಟಗರು ಮಾಡಿದನು. ಕುರಿಗಳ ರೋಮಗಳಿಂದ ಕಂಬಳಿ ತಯಾರಿಸಿದನು. ಡೊಳ್ಳಸುರನಿಂದ ಕಂಬಳಿ ನೇಯಲು ಬೇಕಾದ ಸಾಮಗ್ರಿ ತಯಾರಿಸಿದನು. ಕುರಿಗಳ ಸೃಷ್ಟಿಕರ್ತ ಶಾಂತಮುತ್ತಯ್ಯರಿಗೆ ಕುರಿಗಳನ್ನು ಕಾಯ್ದು ಸಾಕಾಗಿ, ಬ್ರಹ್ಮ, ವಿಷ್ಣು, ಪರಮೇಶ್ವರನಿಗೆ ಕಾಯಲು ಹೇಳಿದನು. ಅವರಿಗೆ ಕಾಯ್ದು ಸಾಕಾದಾಗ, ಪಾರ್ವತಿಯೇ ಕುರಿಗಳನ್ನು ಕಾಯಲು ಹೋದಳು. ಅವಳಿಗೂ ಕೊನೆಗೆ ಬೇಸರವಾದಾಗ ಭೂಲೋಕದ

ಒಂದು ಹುತ್ತದಲ್ಲಿ ಹುದುಕಿಸಿದಳು. ಇಲ್ಲಿ ಪ್ರಥಮವಾಗಿ ಭೂಲೋಕಕ್ಕೆ ಕಾಲಿಟ್ಟವಳು ಪಾರ್ವತಿ ಮತ್ತು ಮುಗ್ಧ ಪ್ರಾಣಿಗಳಾದ ಕುರಿಗಳು ಎಂಬ ಪ್ರಸ್ತಾಪ ಬಂದಿದೆ.

"ಭೂಲೋಕದ ಸೃಷ್ಟಿಗೆ ಜೀವಿಗಳ ಸೃಷ್ಟಿಯಾಗಬೇಕು ಆಗ ಪಾರ್ವತಿಯು
ಮಣ್ಣು ಮುಟಗಿ ಮಾಡೀರೆ ಗೊಂಬಿ ಮಾಡೀನಿ ಅಂದಾಳ
ಎಡಕಿನ ಮಲಿಯ ಹಾಲಿಗ ಒಂದು ಗೊಂಬಿ ಮಾಡೀನೆ
ಬಲಕಿನ ಮಲಿಯ ಹಾಲಿಗ ಒಂದು ಗೊಂಬಿ ಮಾಡೀನೆ
ಎರಡು ಗೊಂಬಿ ಮಾಡೀನೆ ಮುಕ್ಕಣ್ಣ ಶಿವರಾಯನ
ಮುಕ್ಕಣ್ಣ ಶಿವರಾಯಗೆ ಮಂತರ ಮಾಡಬೇಕೆಂದಾಳೆ
ಮಂತರ ಮಾಡ ಬೇಕೆಂದಾಳಿ ಜೀವನ ಕೊಡಬೇಕಂದಾಳ"(೧೩೧)

ಈ ಎರಡು ಗೊಂಬೆಗಳಿಗೆ ಜೀವ ನೀಡೆಂದು ಶಿವನಲ್ಲಿ ಕೇಳಿದಾಗ ಬಲಗಡೆ ಗೊಂಬೆ ಗಂಡಾಗಿ, ಎಡಗೈ ಗೊಂಬೆ ಹೆಣ್ಣಾಗಿ ಜೀವ ಪಡೆದವು. ಮುದ್ದುಗೊಂಡ, ಮುದ್ದಾಯಿ ಎಂದು ನಾಮಕರಣ ಮಾಡಲಾಯಿತು. ಇವರನ್ನು ಪಾರ್ವತಿಯು ತನ್ನ ಎದೆ ಹಾಲಿನಿಂದ ಸೃಷ್ಟಿಯಾದರಿಂದ ಇವರು ಹಾಲುಮತದವರು ಎಂದು ಕರೆದಳು. ಅಂದಿನಿಂದ ಹಾಲುಮತ ಸೃಷ್ಟಿಯಾಯಿತು. ಹಾಲುಮತದ ಸೃಷ್ಟಿಗೆ ಜಗನ್ಮಾತೆಯೇ ಕಾರಣೀಕಗಳಾಗಿದ್ದಾಳೆ. ಪಾರ್ವತಿಯು ಇವರಿಬ್ಬರಿಗೆ ವಿವಾಹ ಮಾಡಿಸಿ ಕೈಲಾಸಕ್ಕೆ ಹೋದರು. ಮುಂದೆ ಇವರಿಗೆ ಆದಿಗೊಂಡ, ಅನಂತಗೊಂಡ, ಸಿದ್ದಗೊಂಡ, ಪದುಮಣ್ಣನೆಂಬ ನಾಲ್ವರು ಮಕ್ಕಳಾದರು. ಎಲ್ಲ ಮಕ್ಕಳು ಒಂದೊಂದು ವೃತ್ತಿಯನ್ನು ಹಿಡಿದಿದ್ದರು. ಪದುಮಣ್ಣ ಮಾತ್ರ ಉಂಡಾಂಡಿಯಾಗಿದ್ದನು. ಆದರೆ ಒಂದು ದಿನ ಯಾರೂ ಇಲ್ಲದಿದ್ದರಿಂದ ತಾನೇ ಹೊಲದ ಕೆಲಸಕ್ಕೆ ಹೋಗಬೇಕಾಯಿತು. ಅಲ್ಲೊಂದು ಅಚ್ಚರಿಯೇ ಆಯಿತು. ಪದುಮಣ್ಣನಿಂದ ಹೊಲದ ಹುತ್ತಕ್ಕೆ ನೇಗಿಲು ತಾಗಿ, ಹುತ್ತವು ಒಡೆದು ಕುರಿಗಳೆಲ್ಲ ಪ್ರಪಂಚವೇ ಒಂದಾಗುವ ರೀತಿ ಅರಚುತ್ತ ಹೊರ ಬಂದವು. ಏನು ಮಾಡುವುದು ತೋಚದೇ ಕುರಿಗಳ ಹಿಂದೆಯೇ ಕಾಯುತ್ತ ಹೋದನು. ಮೂರು ದಿನಗಳಾದವು ಆಹಾರವೇ ಇಲ್ಲದಂತಾಯಿತು. ಆಗ ಶಿವ ಪ್ರತ್ಯಕ್ಷನಾಗಿ ಹಸಿಯ ಹಾಲಿದೆ, ಬಿಸಿಯ ಗಿಣ್ಣವಿದೆ, ಕೊಬ್ಬರಿ, ಬೆಂಕಿ ಶೋಧ ಮಾಡಿ, ತೆಗೆದುಕೊಂಡು ಬಾ ನಾನು ಕುರಿಗಳನ್ನು ಕಾಯುತ್ತೇವೆಂದು ಹೇಳಿದನು. ಆಗ ಗುಡ್ಡಗಳನ್ನು ಹತ್ತಿ ಇಳಿದರೆ, ಅಲ್ಲೊಂದು ರಾಕ್ಷಸಿಯ ಮನೆ ಇತ್ತು. ಅಲ್ಲಿ ಒಬ್ಬ ಸುಂದರಿ ಇದ್ದಳು. ಅವಳಿಂದ ಕೊಬ್ಬರಿ ಮತ್ತು ಬೆಂಕಿಯನ್ನು ಪಡೆದನು. ಆದರೆ ಅವಳು ನನಗೂ ಗಿಣ್ಣವನ್ನು ತೆಗೆದುಕೊಂಡು ಬಾ ಎಂದು ಹೇಳಿದಳು. ಪದುಮಣ್ಣನು ಶಿವನಿಗೆ ಹಾಲು, ಗಿಣ್ಣ, ಕೊಬ್ಬರಿ ನೀಡಿ, ತಾನು ಸೇವಿಸಿ, ಉಳಿದದನ್ನು ಶಿವಲಿಂಗಮ್ಮಳಿಗೆ ಕೊಟ್ಟು ಬರುತ್ತೇನೆಂದು

ಬಂದನು. ಅವಳು ಅದನ್ನೇ ಸೇವಿಸಿ, ತೃಪ್ತಳಾದಳು. ಕೊನೆಗೆ ರಾಕ್ಷಸಿಯ ಸಂಹಾರ ಮಾಡಿ ಶಿವನ ಕೃಪೆಯಿಂದ ಶಿವಲಿಂಗಮ್ಮಳನ್ನು ಎರಡನೇ ವಿವಾಹವಾದನು. ಇವರ ಮಕ್ಕಳೇ ಮುದ್ದಪ್ಪ, ಇವನು ಕಾಡಿನಲ್ಲಿಯೇ ಬೆಳೆಯುತ್ತಾನೆ. ಅವರನ್ನು ಕಾಡು ಕುರುಬರೆಂದು ಕರೆಯುತ್ತಾರೆ.

ಇನ್ನು ಎರಡನೆ ಭಾಗದಲ್ಲಿ ಬೀರಪ್ಪನ ಪೂರ್ವಜರ ವೃತ್ತಾಂತದ ಪ್ರಸ್ತಾಪವಿದೆ. ತಿಪರೇಸೂರು ತಿಪರಂಗಿ ಅರಸನು, ಹೆಂಡತಿ, ತಿಪ್ಪಾದೇವಿ ಇವರಿಗೆ ಹುಟ್ಟಿದ ಏಳು ಹೆಣ್ಣು ಮಕ್ಕಳಿಗೆ, ಏಳು ಜನ ಅಣ್ಣ-ತಮ್ಮಂದಿರಿಗೆ ವಿವಾಹ ಮಾಡಿಸಬೇಕೆಂದು, ದೊರೆಯದೇ ಇರುವ ಕಾರಣ ಅವರನ್ನು ಸಮುದ್ರದ ಪಾಲು ಮಾಡುವ ಪ್ರಸಂಗ ಬರುತ್ತದೆ. ಈ ಕಾವ್ಯದ ನಾಯಕ ಬೀರಪ್ಪನು ಶಿವ ಪ್ರಸಾದದಿಂದ ಜನಿಸಿದವನು ಎಂಬುದನ್ನು ಈ ಕಾವ್ಯವು ಚಿತ್ರಿಸಿದೆ. ಬೀರಪ್ಪ ಭರಮದೇವ ಮತ್ತು ಸೂರಮ್ಮದೇವಿಯರ ಮಗನಾಗಿ ಜನಿಸುವನು. ಹುಟ್ಟಿನಿಂದಲೇ ಬೀರಪ್ಪನು ಪವಾಡ ಪುರಷನಾಗಿದ್ದನು. ಬೀರಪ್ಪನ ಜನನವೇ ಒಂದು ಅದ್ಭುತ. ಸಮುದ್ರ ಪಾಲು ಮಾಡಿದ ಹೆಣ್ಣು ಮಕ್ಕಳಲ್ಲಿಲ್ಲ, ಕೊನೆಯವಳು ಉಳಿದು ಬಂದು, ಬಂಧಿಯಾಗಿರುತ್ತಾಳೆ. ಆಗ ಶಿವನು ಅವಳಿಗೆ ಸೂಜಿ, ಡಬ್ಬಣದಿಂದ ಚುಚ್ಚುವಂತಹ ಬೇನೆ ತರಿಸುತ್ತಾನೆ. ನಂತರ ತಾನೇ ಬಂದು ಮದುವೆಯಾದವರಿಗೆ ಮಾತ್ರ ಔಷಧಿ ನೀಡುವುದು ಎಂದು ಅದಕ್ಕೆ ಅರಸನಿಗೆ ಉಳಿದ ಕೂಡಲೇ ಗಿಡವಾಗಿ ಬೆಳೆಯುವ ಸತ್ಯದ ಬೀಜವನ್ನು ಕೊಟ್ಟು, ಹೊಳಲು ಹೇಳುವನು. ಅದು ಬೆಳೆದಂತೆ, ಕಮಳಾದೇವಿಯೊಂದಿಗೆ ವಿವಾಹ ಮಾಡಿಸುತ್ತಾರೆ., ಗರ್ಭವತಿಯಾಗುತ್ತಾಳೆ. ಇದರಿಂದ ಗಾಬರಿಯಾದ ಕಮಳಾದೇವಿಯು ಮಗು ಹುಟ್ಟಿದಾಗಲೇ, ಎಲ್ಲಿಯೋ ಬಿಟ್ಟು ಬರಬೇಕೆಂದು, ಸೇವಕಿಯರಿಗೆ ನೀಡುತ್ತಾಳೆ. ಆಗ ಪಾರ್ವತಿಯು ಕೊರವಂಜಿ ವೇಷವನ್ನು ತೊಟ್ಟು, ಅರಮನೆಯ ಬಾಗಿಲಿಗೆ ಬಂದಾಗ, ಸೇವಕಿಯರು ಅವಳ ಬುಟ್ಟಿಗೆ ಕೂಸನ್ನು ಹಾಕುವರು. ಆಗ ಪಾರ್ವತಿ ಬುಟ್ಟಿಯ ಸಮೇತ ಕೈಲಾಸಕ್ಕೆ ಬರುವಳು. ಆ ಮಗುವನ್ನು ಕಮಲದ ಹೂವಿನಲ್ಲಿ ಇಟ್ಟು ಜೋಪಾನ ಮಾಡುವರು. ಈ ಮಗುವೇ ಬಾಳಭರಮನಾಗುತ್ತಾನೆ. ಇದೇ ಸಂದರ್ಭದಲ್ಲಿ ಕೈಲಾಸದಲ್ಲಿ ಪಾರ್ವತಿಯ ಕೋಪದ ಬೆವರಿನ ಹನಿಯಿಂದ ಗೊಂಬೆ ಮಾಡಿ, ಅದಕ್ಕೆ ಜೀವ ತುಂಬಿ ಅ ಮಗುವಿಗೆ ಅಮೋಘಸಿದ್ದನೆಂದು ಹೆಸರಿಸುತ್ತಾರೆ. ಕಾಳಿನಾರಾಯಣನು ಅವನ ಭಕ್ತನಾಗಿರುತ್ತಾನೆ. ಪ್ರತಿನಿತ್ಯವು ಶಿವನ ಪೂಜೆಯನ್ನು ನೇಮ-ನಿಷ್ಠೆಯಿಂದ ಮಾಡುತ್ತಾನೆ. ಆದರೆ ಒಂದು ದಿನ ಕೆಳಗೆ ಬಿದ್ದ ಹೂವನ್ನು ಶಿವಲಿಂಗಕ್ಕೆ ಇಟ್ಟ ತಪ್ಪಿಗಾಗಿ ಕಾಶಿಗೆ ಹೋಗಿ ಗಂಗೆಯನ್ನು ತಂದು ಪಾಪ ನಿವಾರಣೆ ಮಾಡಿಕೊಳ್ಳಬೇಕೆಂದು ಯೋಚಿಸಲು, ನನ್ನ ಶಿವಪೂಜೆ ಯನ್ನು ಯಾರು ಮಾಡುತ್ತಾರೆಂದು ವಿಚಾರಿಸಲು ಭರಮದೇವನನ್ನು ಕೇಳಿದರೆ, ನಿನ್ನ ತಂಗಿಯಾದ ಸೂರಮ್ಮದೇವಿಯನ್ನು ವಿವಾಹ ಮಾಡಿ ಕೊಟ್ಟರೇ, ನಾನು ಇದಕ್ಕೆ ಒಪ್ಪುತ್ತೇನೆಂದಾಗ, ಕಾಳಿನಾರಾಯಣನು ಇದಕ್ಕೆ ಒಪ್ಪಿ, ಅವರಿಬ್ಬರ ಮದುವೆ ಮಾಡಿಸುತ್ತಾರೆ.

ಮೂರನೆ ಭಾಗದಲ್ಲಿ ಕಾಳಿನಾರಾಯಣ ದೇವರ ವೃತ್ತಾಂತ ಬರುತ್ತದೆ. ಕಾಳಿನಾಯಣನು ಕಾಡಿಗೆ ಹೋಗಿ, ಮರಳಿ ಬಂದಾಗ ಭರಮದೇವನು ಶಿವನ ಪೂಜೆಯಲ್ಲಿ ಮಗ್ನನಾಗಿದ್ದನು. ಇದರಿಂದ ಸೈನಿಕರು ಕಾಳಿನಾರಾಯಣನನ್ನು ಒಳಗಡೆ ಬಿಡಲಿಲ್ಲ. ಆಗ ಕಾಳಿನಾರಾಯಣನು ಮೂರು ಮಾತುಗಳನ್ನು ಹೇಳಿ ಹೋಗುತ್ತೇನೆಂದು ಒಳಗಡೆ ಬಂದು.

"ಮುಂಜಾಲಿ ಉಳಿಯಬಾರದ ಒಣಗಿದ ನೋಡಲುಬಾರದ
ಮುಂಜಾಲಿ ಏಳಲಿಬಾರದ ಕುಳಿಬಾನ ನೋಡಲಿಬಾರದ
ಕೊಳಬಾನ ನೋಡಲಿಬಾರದ ಉರಿಯ ಕಿಚ್ಚನಂದಾಸ
ಒಣಗಿದ ನೋಡಲಿ ಬಾರದ ಒಣಗಿಡ ಕಟಗಿನಂದಾನ"(೨೨೬)

ಇಲ್ಲಿ ಮಕ್ಕಳಿಲ್ಲದವರ ಪೂಜೆ ಶಿವನಿಗೆ ಸಲ್ಲದು ಎಂಬ ಮಾತುಗಳನ್ನು ಆಡಿದ ಕಾಳಿ ನಾರಾಯಣನ ಕೆಟ್ಟ ಮನಸ್ಥಿತಿಯ ಪ್ರಭಾವವನ್ನು ಕಾಣುತ್ತೇವೆ.

ನಾಲ್ಕನೆಯ ಭಾಗದಲ್ಲಿ ಬೀರಪ್ಪನ ಜನನ ವೃತ್ತಾಂತವಿದೆ. ಬೀರಪ್ಪನ ಸೋದರ ಮಾವನಾದ ಕಾಳಿನಾರಾಯಣನ ದುಷ್ಟ ಬುದ್ಧಿಯ ವಿಮರ್ಶೆಯನ್ನು ಕಾಣುತ್ತೇವೆ. ಕಾಳಿನಾರಾಯಣನ ಅವಮಾನದಿಂದಾಗಿ ಸೂರಮ್ಮದೇವಿಯು ಶಿವನನ್ನು ಕುರಿತು ತಪಸ್ಸು ಮಾಡುತ್ತಾಳೆ. ಶಿವ ಪ್ರತ್ಯಕ್ಷವಾಗಿ ತನ್ನ ಬೆವರಿನಿಂದ ಬೀರಣ್ಣನ ಜನನಕ್ಕೆ ಕಾರಣೀಕರ್ತನಾಗುತ್ತಾನೆ. ಶಿವನ ಕೃಪೆಯಿಂದ ಸೂರಮ್ಮದೇವಿಯು ಗರ್ಭ ಧರಿಸುತ್ತಾಳೆ. ಈ ಸುದ್ದಿಯಿಂದ ಕಾಳಿನಾರಾಯಣ ನಿಗೆ ಎಲ್ಲಿಲ್ಲದ ದ್ವೇಷ ಉಂಟಾಗಿ, ಹೇಗಾದರೂ ಮಾಡಿ ಸೂರಮ್ಮದೇವಿಯು ಮಗುವನ್ನು ಹೆರಬಾರದು ಎಂದು ಗರ್ಭದಲ್ಲಿಯೇ ಇರುವ ಮಗುವನ್ನು ಸಾಯಿಸಲು ಹೊಂಚು ಹಾಕುತ್ತಿರುತ್ತಾನೆ. ಆಗಲೇ ಅವಳಿಗೆ ತವರು ಮನೆಯ ಊಟ ಮಾಡಬೇಕೆಂಬ ಬಯಕೆ ಉಂಟಾಗುತ್ತದೆ. ಎಷ್ಟೇ ದ್ವೇಷ ಇದ್ದರೂ, ಹೆಣ್ಣು ಮಕ್ಕಳಿಗೆ ತವರು ಮನೆ ಎಂದರೆ ಪ್ರೀತಿ, ವಾತ್ಸಲ್ಯ, ಅದೇ ರೀತಿ ಇಲ್ಲಿ ಸೂರಮ್ಮದೇವಿಗೂ ತವರಿನ ಮೇಲೆ ಮೋಹ. ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದ ಕಾಳಿನಾರಾಯಣನು ಬುತ್ತಿಯಲ್ಲಿ ವಿಷವನ್ನು ಹಾಕಿ ತಂಗಿಗೆ ಕಳುಹಿಸಿಕೊಡುತ್ತಾನೆ. ಆದರೆ ಅವನ ಯಾವ ತಂತ್ರವೂ ಇಲ್ಲಿ ನಡೆಯಲಿಲ್ಲ. ಕಾರಣ ಸೂರಮ್ಮದೇವಿಯ ಗರ್ಭದಲ್ಲಿರುವ ಮಗು ತನ್ನ ಶಕ್ತಿಯಿಂದ ತಾಯಿಯ ಪ್ರಾಣವನ್ನು ಉಳಿಸುತ್ತದೆ. ಇಲ್ಲಿ ಬೀರಪ್ಪನ ಪವಾಡಗಳು ರಾಜಕೀಯ ಕುತಂತ್ರದಿಂದ ಮಾಡಿದವು ಆಗಿವೆ. ಇದು ಆಗಲಿಲ್ಲವೆಂದು ಕಾಳಿನಾರಾಯಣನು ತಂಗಿಯ ಹೆರಿಗೆಗೆ ಸೂಲಗಿತ್ತಿಯರನ್ನು ತನ್ನ ಊರಿನಿಂದಲೇ ಕಳುಹಿಸಿಕೊಡುತ್ತಾನೆ. ಮಗು ಹುಟ್ಟಿದ ತಕ್ಷಣ, ಆ ಮಗುವನ್ನು ಸಾಯಿಸಬೇಕೆಂದು ಆಜ್ಞೆ ಮಾಡಿ ಕಳುಹಿಸಿಕೊಡುತ್ತಾನೆ. ಆದರೆ ಈ ತಂತ್ರವು ಹುಲ್ಲುಕಡ್ಡಿಯ ಹಾಗೆ ಹುಸಿಯಾಯಿತು. ಬೀರಪ್ಪನ ಪವಾಡದಿಂದ

ಸೂಲಗಿತ್ತಿಯರು ಹೊಡೆಸಿಕೊಂಡು, ಓಡಿಹೋಗುತ್ತಾರೆ. ಇದು ಸಾಧ್ಯವಾಗದ ಕಾರಣ, ಕಾಳಿನಾರಾಯಣನು, ಜೋತಿಷಿಯ ವೇಷಧಾರಿ ಯಾಗಿ ಬಂದು, ಇವನ ಭವಿಷ್ಯದಿಂದ ರಕ್ತಪಾತವಾಗುತ್ತದೆ ಎಂದು ಹೇಳಿ, ಇದಕ್ಕೆ ಪರಿಹಾರವಾಗಿ ಈ ಮಗುವನ್ನು ಕಾಡಿಗೆ ಬಿಟ್ಟು ಬರಬೇಕೆಂದು ಹೇಳಿದನು. ಸೂರಮ್ಮದೇವಿಯು ತನಗೆ ಎಷ್ಟೇ ಕಷ್ಟವಾದರೂ ಪರವಾಗಿಲ್ಲ. ಆದರೆ ರಾಜ್ಯಕ್ಕೆ ತೊಂದರೆಯಾಗಬಾರದೆಂಬ ಕಾರಣದಿಂದ ತನ್ನ ರಾಜ್ಯದ ಉಳಿವಿಗಾಗಿ ಬೀರಪ್ಪನನ್ನು ಕಾಡಿಗೆ ಬಿಟ್ಟು ಬರಲು ಒಪ್ಪುತ್ತಾಳೆ. ಇಲ್ಲಿ ಸ್ತ್ರೀಯ ಯಾವ ಭಾವನೆಗೂ ಬೆಲೆಯನ್ನು ನೀಡದ ಪ್ರಸಂಗವನ್ನು ನೋಡುತ್ತೇವೆ. ಸೈನಿಕರು ಬೀರಪ್ಪನನ್ನು ಕಾಡಿನಲ್ಲಿ ಹೋಗಿ ಆಲದ ಮರದ ಮೇಲೆ ತೊಟ್ಟಿಲು ಕಟ್ಟಿ ಬಿಟ್ಟು ಬರುತ್ತಾರೆ. ಮಗು ಅಳುವುದನ್ನು ಕಂಡು, ಶಿವನೇ ಮಗುವಿಗೆ ರಕ್ಷಕನಾಗಿ ಭುವಿಗೆ ಬರುತ್ತಾನೆ. ಮಗುವಿಗೆ ರಕ್ಷಕನಾಗಿ, ರಕ್ಷಣೆ ನೀಡಿ ಕೈಲಾಸಕ್ಕೆ ತೆರಳುತ್ತಾನೆ.

ಐದನೆಯ ಭಾಗದಲ್ಲಿ ಅಕ್ಕವ್ವ-ಮಾಯವ್ವರ ವೃತ್ತಾಂತ ಬರುತ್ತದೆ. ದೇವಗಿರಿಯ ಅರಸನು ಗೌಡ ದೇವಿಂದ್ರರಾಯನಿಗೆ ಆರು ಮಂದಿ ಹೆಣ್ಣು ಮಕ್ಕಳಿದ್ದಾರೆ. ಕೊನೆಯವಳಾಗಿ ಮಾಯವ್ವ ಜನಿಸುತ್ತಾಳೆ. ಆದರೆ ಇವಳ ಜಾತಕ ಸರಿಯಿಲ್ಲವೆಂದು ಹೇಳಿ, ಬಂಗಾರದ ಪೆಟ್ಟಿಗೆಯಲ್ಲಿ ಹಾಕಿ, ನದಿಯ ತೆಪ್ಪದಲ್ಲಿ ತೇಲಿ ಬಿಡುತ್ತಾರೆ. ಈ ಮಗು ಹೋಗಿ ದಿಬರಾಯನಿಗೆ ಸಿಗುತ್ತದೆ. ಇವಳನ್ನು ತನ್ನ ಮನೆಗೆ ಕರೆದುಕೊಂಡು ಬಂದು ಪ್ರೀತಿಯಿಂದಲೇ ಸಾಕುತ್ತಾರೆ. ಇವಳಿಗೆ ಮಾಯವ್ವ ಎಂದು ನಾಮಕರಣ ಮಾಡುತ್ತಾರೆ. ಇವಳ ಕಾಲು ಗುಣದಿಂದ ಅವರ ಬದುಕೆ ಬದಲಾಗುತ್ತದೆ. ಅವರು ಶ್ರೀಮಂತರಾಗುತ್ತಾರೆ. ಇವಳು ಒಂದು ದಿನ ನಾನೇ ಕುರಿಗಳನ್ನು ಹೊಡೆದುಕೊಂಡು ಹೋಗುತ್ತೇನೆಂದು ಹೋದಾಗ, ಅಲ್ಲಿ ತನ್ನ ಹುಟ್ಟಿನ ವೃತ್ತಾಂತವನ್ನು ತನ್ನ ಅಕ್ಕಂದಿರಿಂದ ತಿಳಿದು, ಅಕ್ಕವ್ವಳನ್ನು ಮನೆಗೆ ಕರೆತರುತ್ತಾಳೆ. ತಂದೆಯಿಂದ ನಿಜಸಂಗತಿ ತಿಳಿದು ಮಾಯವ್ವ-ಅಕ್ಕವ್ವನೊಂದಿಗೆ ಜೀವನ ಸಾಗಿಸುತ್ತಾಳೆ.

ಹೀಗೆಯೇ ಇಬ್ಬರು ಕುರಿಗಳನ್ನು ಕಾಯುತ್ತ ಕಂಚಿನಾಳದ ಮರದ ಕೆಳಗೆ ವಿಶ್ರಾಂತಿಗಾಗಿ ಕುಳಿತಾಗ, ಮಗುವಿನ ಅಳು ಕೇಳಿಸುತ್ತದೆ. ಆ ಮಗುವನ್ನು ನೋಡಿ, ಇಬ್ಬರು ನಾನು ಹೋಗುತ್ತೇನೆ ಎಂದು ವಾದಗಳಾದರೆ ಮಾಯವ್ವ ನೀನೇ ಹೋಗು ಎಂದಳು. ಅಕ್ಕವ್ವ ಮರ ಹತ್ತುವಾಗ ಇರುವೆಗಳು ಅವಳನ್ನು ಹತ್ತಲು ಬಿಡುವುದಿಲ್ಲ. ಆಗ ಮಾಯವ್ವ ಸಿದ್ಧಳಾಗಿ, ಇರುವೆಗಳಿಗೆ ನೀವು ದಾರಿ ಬಿಟ್ಟರೆ ಸೋಮವಾರ ಸಕ್ಕರೆ ಹಾಕುವುದಾಗಿ ಹೇಳಿ, ಹೋದಾಗ, ಅವು ದಾರಿ ಬಿಟ್ಟವು. ಮರ ಹತ್ತುವಾಗ ತೊಟ್ಟಿಲು ಬಳಿ ನಾಗರಾಜ ಅಡ್ಡಿ ಬಂದಾಗ, ನಿನ್ನ ರೂಪವನ್ನು ಬಾಗಿಲ ಬಳಿ ಹಾಕುತ್ತೇನೆ. ಗಿಳಿ ಅಡ್ಡ ಬಂದಾಗ, ಮಕ್ಕಳ ಆಡುವ ತೊಟ್ಟಿಲ ಗೊಂಬೆ ಮಾಡುತ್ತೇನೆಂದಾಗ ಎಲ್ಲವು ದಾರಿ ಬಿಟ್ಟವು. ಆಗ ಮಗುವನ್ನು ಎತ್ತಿಕೊಂಡು, ಕೆಳ

ಬಂದಳು. ಆದರೆ ಅಕ್ಕವ್ವ-ಮಾಯವ್ವರಿಬ್ಬರು ಈ ಮಗು ನನಗೆ ಬೇಕು ನನಗೆ ಬೇಕೆಂದು ಜಗಳ ಮಾಡಲು ಬಳ್ಳಿಗುಂಪಿ ರಾಯಣ್ಣ ಅಲ್ಲಿಗೆ ಬಂದು

"ಬಾರೋ ಬಾರೋ ತಂಗದೇರಾ ನಾನು ಹೇಳಿದಂಗ ಕೇಳರೆ
ಏಳ ಅರಬಿ ತಗದಾರೆ ಕೂಸಿನ ತೊಟ್ಟಿಲದೊಳಗೇನ
ಮ್ಯಾಲ ಬಿಳಿ ಅರಬೇನ ಕೆಳಗೆ ಏಳು ಅರಬೇನ
ನಾನು ಹೇಳಿದಂಗಲ್ಲವ್ವ ನೀವೇ ಕೇಳಲಿಬೇಕವ್ವ
ಜಾಮ ಜಲಕ ಮಾಡರೆ ತೊಟ್ಟಿಲ ಸುತ್ತ ಹಾಕರೆ
ಎದಿಯಾ ಚಿಗಿಬೇಕಂದಾರೆ ಬದಿಯ ಚಿಗಿಬೇಕಂದಾರ
ಬಾಣಂತಿ ಆಗಬೇಕೆಂದರೆ ಕೂಸಿನ ಕುಡತಿನಿ ಅಂದಾರೆ"(೩೦೬)

ಹೀಗೆ ಬಾಣಂತಿಯ ಗುಣಗಳು ಯಾರಲ್ಲಿ ಬರುವುದೋ ಅವರಿಗೆ ಮಗುವನ್ನೆ ಕೊಡುತ್ತೇನೆಂದನು. ಅದಕ್ಕೆ ಅಕ್ಕವ್ವ ಒಪ್ಪಿ, ಹಾಗೆಯೇ ಮಾಡಿದಳು, ಆದರೆ ಅವಳ ಎದೆಗಳು ಚಿಗಿಯಲಿಲ್ಲ. ಮಾಯವ್ವಳು ಮುಂದಾಗಿ

"ತಾರನಂದಾರ ನೀವಪ್ಪ ತಂದಿನಂದರ ನೀವಪ್ಪ
ತಂದಿನಂದರ ನೀನಪ್ಪ ತಮ್ಮನ ಮಾಡಿ ಸಲವೇನ
ತಮ್ಮನ ಮಾಡಿ ಸಲವೇನೆ ಐದ ಸುತ್ತ ಹಾಕ್ಯಾಳ
ಐದು ಸುತ್ತ ಹಾಕ್ಯಾಳೆ ಎದಿಯ ಚಿಗಿಯುತಾವೇನ
ಏ ನಮ್ಮಕ್ಕ ಮಾಯವ್ವ ಬಾಣತಿ ರೂಪ ಬಂದಾವ
ಬಾಣತಿ ರೂಪ ಬಂದಾವೆ ಎರಳಿಗುಂಪಿ ರಾಯಣ್ಣ
ಮನಕ ಮಗನ ಮಾಡವ್ವ ಜನಕ ತಮ್ಮನ ಮಾಡುವ"(೩೦೭)

ಹೀಗೆ ಬೀರಪ್ಪನು ಮಾಯವ್ವಳ ತಮ್ಮನಾಗಿ, ಮಾಯವ್ವನ ಜೀವನದ ಭಾಗವಾಗಿ ಬರುತ್ತಾನೆ. ಅಂದಿನಿಂದ ಅವರಿಬ್ಬರ ನಡುವಿನ ಸಂಬಂಧದ ಬಾಂಧವ್ಯಗಳು ತೋರುವ ಪ್ರಸಂಗಗಳು, ಬೀರಪ್ಪನ ಬಾಲ್ಯದ ತುಂಟಾಟದ ಪ್ರಸಂಗಗಳು ಬರುತ್ತವೆ.

ಆರನೆಯ ಭಾಗದಲ್ಲಿ ಬಾಲ ಬೀರಣ್ಣನ ಲೀಲಾವೃತ್ತಾಂತವು ಎಂಬ ಪ್ರಸಂಗ ಬರುತ್ತದೆ. ಚಂದನಗಿರಿಯಲ್ಲಿ ಮಾಯವ್ವನ ಸಂರಕ್ಷಣೆಯಲ್ಲಿ ಬಾಲಬೀರಣ್ಣ ಬೆಳೆಯಲಾರಂಭಿಸುತ್ತಾನೆ. ಚಿಣಿದಾಂಡ, ಚೆಂಡು ಬೇಕೆಂದು ಹಠ ಮಾಡಿದಾಗ, ಮುತ್ತಿನ ಚೆಂಡನ್ನೇ ಮಾಡಿಸಿಕೊಡುತ್ತಾಳೆ. ಚೆಂಡಿನ ಆಟವಾಡುವಾಗ ಚಿಟ್ಟಿ ಸಾಹುಕಾರನ ಮಗ ಸಾಯುತ್ತಾನೆ.

"ಒಂದು ಲಗ್ಯಾನೋಡಪ್ಪ ಕರುಸಣಗಿ ಮಠಕ ಹೋಗಾವೂ
ಕ್ವಾಣಗನೂರಿಗ ಬಂದೇನ ರಾಯಹುನೂರಕ ಬಂದೇನ
ಜ್ಯೋತಿ ಸಿಡಿಯಾಣಕ ಬಂದೇನ ಗೊಡಗೇರಿ ಗುಡ್ಡದ ಬಂದೇನ
ಎಂಬುದು ಮಠಕ ಬಂದೇನ ಅಲಕುಮಾರಿಗೆ ಬಂದೇನ
ಬಾಣಮತಿಗೆ ಬಂದೇನ ತೇಡಾಮತಿ ಬಂದೇನ"(೩೨೧)

ಮತ್ತೆ ಬಿಲ್ಲು ಬಾಣಗಳಿಂದ ನೀರಿಗೆ ಬಂದ ಹೆಣ್ಣು ಮಕ್ಕಳ ಬಿಂದಿಗೆಗಳನ್ನು ಹೊಡೆದಾಗ, ತಂದೆ-ತಾಯಿ ಇಲ್ಲದವನೇ ಎಂದು ಬೈದಾಗ, ಬೇಸರವಾಗಿ, ಅಕ್ಕನ ಬಳಿ ಬಂದು ತನ್ನ ಹುಟ್ಟಿನ ಹಿನ್ನೆಲೆಯನ್ನು ಕೇಳುತ್ತಾನೆ. ಒಬ್ಬ ಅನಾಥನನ್ನು ಸಮಾಜ ಯಾವ ರೀತಿ ಕಾಣುತ್ತದೆ ಎಂಬುದನ್ನು ಈ ಪ್ರಸಂಗದಿಂದ ಅರಿಯಬಹುದು.

ಏಳನೆಯ ಭಾಗದಲ್ಲಿ ಲಿಂಗ ಬೀರಣ್ಣನ ಮದುವೆಯ ವೃತ್ತಾಂತದ ವಿವರ ಬರುತ್ತದೆ. ಮಾಯವ್ವಳಿಂದ ಬೀರಣ್ಣನು ತನಗೆ ತನ್ನ ಸೋದರ ಮಾವನಿಂದ ಆದ ಅನ್ಯಾಯವನ್ನು ತಿಳಿದು, ನಾನು ಕಾಳಿನಾರಾಯಣನ ಮಗಳನ್ನೇ ಮದುವೆಯಾಗಿ ಅವನ ಗರ್ವಭಂಗ ಮಾಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ, ಬಳೆಗಾರನ ವೇಷದಲ್ಲಿ ಅರಮನೆಗೆ ಹೋಗಿ, ಕನ್ನಿಕಾದೇವಿಯ ಮನವನ್ನು ಗೆದ್ದು, ಕಾಳಿನಾರಾಯಣನು ಎಷ್ಟೇ ಕಾವಲು ಇಟ್ಟರು, ಬೀರಣ್ಣ ಕನ್ನಿಕಾದೇವಿಯನ್ನು ಮನಪೂರ್ವಕ ಕರೆದು ಹೋಗಿ, ಮಾಯವ್ವನ ಸನ್ನಿಧಿಯಲ್ಲಿ ವಿವಾಹವಾಗುತ್ತಾನೆ.

ಎಂಟನೆಯ ಭಾಗದಲ್ಲಿ ಲಿಂಗಬೀರಣ್ಣ ದೇವರ ವೃತ್ತಾಂತದಲ್ಲಿ ಬೀರಣ್ಣನ ಮದುವೆಯ ನಂತರ ಮಾಯವ್ವ ಬೀರಪ್ಪ ಸೇರಿ ನಾಡು ನೋಡಲು ಹೊರಡುತ್ತಾರೆ. ಬೀರಣ್ಣನು ಕೂಸಿನ ರೂಪದಲ್ಲಿ ಬರಬೇಕೆಂದು ಮಾಯವ್ವ ತಿಳಿಸುತ್ತಾಳೆ. ಹಾಗೆಯೇ ಬೀರಣ್ಣನು ಕೂಸಿನ ರೂಪತಾಳಿ, ಮಾಯವ್ವನ ಬಗಲಲ್ಲಿ ಹೋಗಿ ಕುಳಿತುಕೊಳ್ಳುತ್ತಾನೆ. ಇವರಿಬ್ಬರು ಸೇರಿ ಮೊದಲು ಹೋಗುವುದು ಮುಂಗಿಪಟ್ಟಣ ಅ ಊರಿನ ರಾಜಕುಮಾರಿ ಬೆನ್ನು ಬ್ಯಾತಳ ರೋಗವಿರುತ್ತದೆ. ಎಷ್ಟೇ ವೈದ್ಯರು ಬಂದು ನೋಡಿ, ಔಷಧಿ ನೀಡಿದರು ರೋಗ ವಾಸಿಯಾಗುವುದಿಲ್ಲ. ಆಗ ಯಾರು ರಾಜಕುಮಾರಿಯ ರೋಗವನ್ನು ವಾಸಿ ಮಾಡುವರೋ ಅವರಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿಸುತ್ತೇನೆಂದು ಡಂಗೂರ ಸಾರಿಸುತ್ತಾನೆ. ಇದನ್ನು ಕೇಳಿದ ಮಾಯವ್ವಳು ಬೀರಪ್ಪನಿಗೆ ರಾಜಕುಮಾರಿಯ ರೋಗ ವಾಸಿ ಮಾಡುವಂತೆ ಹೇಳುತ್ತಾಳೆ. ಆಗ ಬೀರಪ್ಪ ಹೋಗಿ ಅವಳ ರೋಗ ವಾಸಿ ಮಾಡಿ, ಬಾಯಿ ಗಂಗಾಳ, ರುಮ್ಮೀಚೋರಿ, ಪಂಚಡಂಕಿ, ಹೊನ್ನ, ಕಠಾರಿ, ಕಲಿಕೆ, ಸಿರಿಪೇಚಯನ್ನು ಪಡೆದು ಹೋಗುತ್ತಾನೆ. ಅಕ್ಕ-ತಮ್ಮ ಸೇರಿ ಕಲಬುರ್ಗಿಯ

ಕೆಳಗೆ ಭೀಮಾನದಿಯ ದಂಡೆಯ ಮೇಲಿರುವ ಕಲ್ಲತ್ತಿಗೆ ಬರುತ್ತಾರೆ. ಅಲ್ಲೊಂದು ಬೃಹದಾಕಾರದ ಹುತ್ತವಿರುತ್ತದೆ. ಬೀರಪ್ಪನಿಗೆ ಸರ್ಪವನ್ನು ನೋಡುವ ಆಸೆಯಾದಾಗ, ದೊಡ್ಡದಾದ ನಾಗರಹಾವು ಹುತ್ತದಿಂದ ಹೊರ ಬಂದು ದರ್ಶನ ನೀಡುತ್ತದೆ. ನಂತರ ಹೇಡಿಂಬ ಎಂಬ ಊರಿಗೆ ಬರುತ್ತಾರೆ. ಅಲ್ಲಿ ಹೇಡಿಂಬನೆಂಬ ರಾಕ್ಷಸ ವಾಸವಾಗಿರುತ್ತದೆ. ಇವರು ಬರುವ ದಾರಿಯಲ್ಲಿ ಅದು ಸೀರೆಯನ್ನೆತ್ತಿ ಮೂತ್ರ ವಿಸರ್ಜನೆ ಮಾಡುತ್ತಿರುವುದನ್ನು ಕಂಡು, ಅಕ್ಕ ಈ ಊರು ಮಾನಗೆಟ್ಟದು, ನಡಿ ಬೇರೆ ಕಡೆ ಹೋಗೋಣವೆಂದಾಗ ಮಾಯವ್ವ ಊರ ಜನರು ಒಳ್ಳೆಯವರು, ಈ ರಾಕ್ಷಸಿ ಎಲ್ಲರಿಗೆ ಕೇಡುಂಟು ಮಾಡುತ್ತಾಳೆ ಎಂದಳು. ಹೇಡಿಂಬ ಎಂಬ ಆ ಊರು 'ಸೇಡಂ' ಎಂದು ಹೆಸರು ಪಡೆಯುತ್ತದೆ. ತದನಂತರ ಇವರಿಬ್ಬರು ಕೊಂಕಣ ನಾಡಿನ ಸಿರವಾಳ ಗ್ರಾಮಕ್ಕೆ ಹೋಗುತ್ತಾರೆ. ಅಲ್ಲಿ ಬಗಿನಾಥನು ವಾರನ್ನೆಲ್ಲಾ ಆಳುತ್ತಿರುತ್ತಾನೆ. ಇವರಿಗೆ ತಿರುಗಾಡಿ ಸಾಕಾಗಿ ಬಗಲಲ್ಲಿ ಇದ್ದ ಬೀರಪ್ಪ ಪಕ್ಕದಲ್ಲಿ ಮಲಗಿಸಿಕೊಂಡು ಅವಳು ಮಲಗುತ್ತಾಳೆ. ಮಾಯವ್ವ ಮಲಗಿದ ತಕ್ಷಣ, ಬೀರಪ್ಪನನ್ನು ಅಲ್ಲಿಯೇ ಇದ್ದ ಬಾವಿಯಲ್ಲಿ ಹಾರಿ ಈಜಾಡಿ ನೀರನ್ನೆಲ್ಲ ರಾಡಿ ಮಾಡುತ್ತಾನೆ. ಹೂಗಿಡಗಳನ್ನೆಲ್ಲಾ ಹಾಳು ಮಾಡುತ್ತಾನೆ. ಇಲ್ಲಿಗೆ ಊರ ಬಗನಾಥನು ಬಂದು ನೋಡಿದರೆ, ಅಲ್ಲಿ ಮಾಯವ್ವ ಮಲಗಿರುತ್ತಾಳೆ. ಅವಳ ಸೌಂದರ್ಯಕ್ಕೆ ಮಾರು ಹೋಗಿ, ಬರನಾಥ ಮಂಚಕ್ಕೆ ಕರೆಯುತ್ತಾನೆ. ಪೈಲವಾನರಿಗೆ ಹೇಳಿ ಮರಕ್ಕೆ ಕಟ್ಟಿ ಹಾಕಲು ಹೇಳುತ್ತಾರೆ. ಆಗ ಮಗುವಾಗಿದ್ದ ಬೀರಪ್ಪನು ಅಮಾರಿ ಪುರುಷನಾಗಿ "ಪಾತಾಳದೊಳಗಿನ ಪಾದೇನ ಕೈಲಾದೊಳಗಿವನ ಕಳಸೇನ" ಎಂದು ಹೇಳಿ ದುಷ್ಟರನ್ನು ಸಂಹಾರ ಮಾಡುವನು.

ಮುಂದೆ ಕ್ವಾಣಗನೂರಿಗೆ ಬರುತ್ತಾರೆ, ಅಲ್ಲಿ ದೈತ್ಯ ಕ್ವಾಣೇಸುರನಿರುತ್ತಾನೆ. ಅವನು ಆರಾರು ತಿಂಗಳು ಮಲಗುವನು. ಮಲಗಿದಾಗ ಅವನಿಗೆ ಕನಸಿನಲ್ಲಿ ಮದುವೆಯಾದಂತೆ ಕನಸು ಬಿದ್ದಿತು. ಅವನು ಗಾಬರಿಯಿಂದ ಎದ್ದು ನೋಡಿದಾಗ, ಎದುರಿಗೆ ಬೀರಪ್ಪನಿದ್ದನು ಅವನನ್ನು ಸಂಹಾರ ಮಾಡಿದನು. ಕೊನೆಗೆ ಚಿಂಚಲಿಗೆ ಬಂದು ಮಾಯವ್ವ ಸ್ಥಿರವಾಗಿ ನೆಲೆಗೊಳ್ಳುತ್ತಾಳೆ. ಚಿಂಚಲಿಯಲ್ಲಿಯೇ ಮಾಯವ್ವನನ್ನು ಬಿಟ್ಟನು. ಬೀರಪ್ಪ ಬರುವಾಗ ತನ್ನ ಪಾಲಿನ ಕುರಿಗಳನ್ನೆಲ್ಲಾ ಬೀರಪ್ಪನಿಗೆ ನೀಡುವನು. ಈ ಕುರಿಗಳನ್ನು ಕಾಯಲು ಗೆಳೆಯ ಬೊಪ್ಪಣ್ಣನಿಗೆ ನೇಮಿಸುತ್ತಾನೆ. ಆದರೆ ಈ ಕುರಿಗಳು ಹನ್ನೆರಡು ವರ್ಷಗಳಾದರೂ ಮರಿ ಹಾಕುವುದಿಲ್ಲ. ಊರ ಹಿರಿಯರು ಅಕ್ಕನನ್ನು ಕರೆತಂದು ಹಬ್ಬ ಮಾಡಿದರೆ ಒಳ್ಳೆಯದಾಗುತ್ತದೆ ಎಂದಾಗ ಬಪ್ಪಣ್ಣನಿಗೆ ರೊಟ್ಟಿ ಖಾರ ಹಚ್ಚಿ ಬುತ್ತಿಕಟ್ಟಿ ಕಳುಹಿಸುವರು. ಅವನು ಚಿಂಚಲಿಗೆ ಬಂದು ಸಮಾಚಾರ ತಿಳಿಸುವರು ಆಗ ಮಾಯವ್ವ ಬುತ್ತಿಯನ್ನು ಬಿಚ್ಚಿ ನೋಡಿದರೆ ತಮ್ಮನ ಮನೆಯಲ್ಲಿ ಅಕ್ಕಿ ಇರಲಿಲ್ಲವೆ ಎಂದು ಅಳುತ್ತಾ, ನಾನಾ ವಿಧದ ಅಡುಗೆ ಮಾಡಿ, ಬುತ್ತಿ ಕಟ್ಟಿ,

ನಾನು ಇಲ್ಲಿಯೇ ಹಬ್ಬ ಮಾಡುತ್ತೇನೆಂದು ಹೇಳುವಳು. ಇಲ್ಲಿ ಅಕ್ಕನಿಗೆ ತಮ್ಮನ ಮನೆಯ ವಾತ್ಸಲ್ಯದ ಪ್ರೀತಿಯನ್ನು ಕಾಣುತ್ತೇವೆ. ಈ ಸುದ್ದಿ ಕೇಳಿ ಬೀರಪ್ಪನೇ ಅಕ್ಕನನ್ನು ಕರೆಯಲು ಬರುವನು. ಆಗ ನನಗೆ ಕೂಡಲು ಹಾವಿನ ಗದ್ದುಗೆ ಬೇಕು, ಎಂಜಲು ಆಗದ ನೀರು ಬೇಕೆಂದಾಗ, ಹುತ್ತಿನ ಬಳಿ ಹೋಗಿ ನಾಗರವನ್ನು ಕರೆದರೆ ಬಂದು ಗದ್ದುಗೆಯಾಗುತ್ತದೆ. ಗಂಗೆಯನ್ನು ಮನದಲ್ಲಿ ಧ್ಯಾನಿಸಿದರೆ ಬಿಂದಿಗೆ ನೀರು ಬರುತ್ತದೆ. ಅದರಿಂದ ಸ್ನಾನ ಮಾಡಿ ಗದ್ದುಗೆ ಏರಿ, ಹಾಲು ಕುಡಿಯುತ್ತಾನೆ. ಅಕ್ಕನನ್ನು ಮನೆಗೆ ಕರೆದುಕೊಂಡು ಹೋಗಿ, ಸೀರೆ ಚೆನ್ನಾಗಿಲ್ಲವೆಂದರೆ, ತಾನೇ ಅವಳನ್ನು ಕರೆದುಕೊಂಡು ಹೋಗಿ ಇಷ್ಟವಾದ ಸೀರೆ ಕೊಡಿಸುತ್ತಾನೆ. ಹಬ್ಬ ಆಚರಿಸಿದ ಮೇಲೆ ಮತ್ತೆ ಚಿಂಚಲಿಗೆ ಮಾಯವ್ವ ಬರುತ್ತಾಳೆ.

ಒಂಬತ್ತನೆ ಭಾಗದಲ್ಲಿ ಮಾಳಿಂಗರಾಯನ ಪೂರ್ವಜರ ವೃತ್ತಾಂತ ಬರುವುದು. ಶ್ಯಾಡಬಾಬನ ಗುಡ್ಡದಲ್ಲಿ ಗುರು ಗೋರಖನಾಥನ ಆಜ್ಞೆಯಂತೆ ಏಳುನೂರು ಬಾಲಕನ್ನಿಕೆಗಳನ್ನು ಕಾಯಲು ಸೋಮರಾಯ ಮತ್ತು ತುಕ್ಕಪ್ಪರಾಯರು ಹೋಗುವರು. ಬರಗಾಲದಲ್ಲಿ ಗೋರಖನಾಥರು ಇವರಿಗೆ ಕಿಲ್ಲಾರಗಳನ್ನು ಕೊಟ್ಟು ಸುವ್ಯವಸ್ಥಿತ ಜಾಗಕ್ಕೆ ಹೋಗಲು ಹೇಳುವರು. ಇವರ ಪತ್ನಿಯಾದ ಕಾನಾಬಾಯಿ, ಅಮೃತಬಾಯಿಯರು ಮನೆಯಲ್ಲಿ ಇರುವಾಗಲೇ ಶಿವ ಬಂದು ಮಕ್ಕಳ ಫಲ ನೀಡುವನು. ಅವನು ತನ್ನ ಕೊರಳಲ್ಲಿಯ ಮಾಣಿಕ್ಯದ ಹರಳನು ಪಾರ್ವತಿಯು ಜಂಬು ನೀಲದ ಹರಳನ್ನು ಕೊಡುವರು. ಇವುಗಳನ್ನು ತೆಗೆದುಕೊಂಡು ಹೋಗಿ ದೇವರ ಜಗುಲಿಯ ಮೇಲೆ ಇಡಲು, ಸಂಜೆಯ ವೇಳೆಗೆ ಸೋಮರಾಯ, ತುಕ್ಕಪ್ಪರಾಯರು ಬಂದು ಕೇಳಲು ನಡೆದ ಸಂಗತಿ ತಿಳಿಸುವರು. ದೇವರ ಜಗುಲಿಯ ಹರಳುಗಳು ಮಾನವ ಪಿಂಡ ಗಳಾಗಿದ್ದವು. ಅವರೇ ಜಕ್ಕಪ್ಪ ಮತ್ತು ಮಾಳಪ್ಪ ಇವರು ಹುಟ್ಟಿ ಏಳು ವರ್ಷಗಳಾದವು ಮತ್ತೆ ಬರಗಾಲ ಬಂದಿತು. ಎಲ್ಲರೂ ಭಾರಮತಿ ಅಡವಿಗೆ ಬರುವಾಗ ಇಚೇರಿಯ ಮಲ್ಲಕ್ಕನನ್ನು ಪುಟ್ಟಿಯಲ್ಲಿ ಕಟ್ಟಿಕೊಂಡು ಬಂದರು. ಅಲ್ಲೊಂದು ಎಮ್ಮೆಯ ದೊಡ್ಡಿ ನಿರ್ಮಿಸಿ ಎಮ್ಮೆಗಳನ್ನು ಕಾಯುತ್ತ ಬದುಕಿದರು. ಬರು-ಬರುತ್ತ ಎಲ್ಲರು ಶ್ರೀಮಂತರಾದರು. ಆದರೆ ಶ್ರೀಮಂತಿಕೆ ಬಂದ ಮೇಲೆ ಅವರು ಮಲಕ್ಕನನ್ನು ಮರೆತು ಬಿಟ್ಟರು. ಆಗ ಹಾಲು ಹಿಂಡುವ ಎಮ್ಮೆ ರಕ್ತ ಹಿಂಡತೊಡಗಿದವು. ಕಿಲ್ಲಾರಿಗಳಿಗೆ ಉಟುಗಿಬ್ಯಾನಿ ಹತ್ತಿತ್ತು. ಕರುಗಳು ಹಾಲು ಕುಡಿಯಲಿಲ್ಲ. ಪಾರ್ವತಿ ಅವರ ಬಳಿ ಕೊರವಂಜಿ ವೇಷದಲ್ಲಿ ಬಂದು ನೀವು ನಿಮ್ಮ ಮನೆತನದ ದೇವರು ಇಜೇರಿ ಮಲಕ್ಕನನ್ನು ಮರೆತಿದ್ದೀರಿ. ಅವಳು ನಿಮ್ಮಿಂದ ನರಬಲಿ ಬೇಡುತ್ತಿದ್ದಾಳೆ ಎಂದು ಹೇಳಿ, ಭಂಡಾರ ಕೊಟ್ಟಳು. ಆಗ ಭಂಡಾರವನ್ನು ಎಮ್ಮೆಗಳ ಮೇಲೆ ಹಾಕಿದಾಗ ಹಾಲು ಹಿಂಡಲು ಪ್ರಾರಂಭಿಸಿದವು. ಹಬ್ಬವನ್ನು ಆಚರಿಸಬೇಕೆಂದು ಗಾಣಿಗೇರ ಮಲ್ಲಣ್ಣನಿಗೆ ಬಲಿಕೊಡುವ ಜವಾಬ್ದಾರಿಯನ್ನು ವಹಿಸಿದರು, ಅಡುಗೆ ಮಾಡಿ ನೈವೇದ್ಯ ದೇವಿಗೆ ಸರ್ಮಪಿಸುವಾಗ ಗೌಳಿಗರು

ಮೋಸದಿಂದ ಕಲ್ಲಣ್ಣನ ಶಿರವನ್ನು ಕಡಿದು ದೇವಿಗೆ ಬಲಿ ಕೊಡುತ್ತಾರೆ. ಹೀಗೆ ಗೌಳಿಗರು ನರಬಲಿ ಕೊಟ್ಟು ನೆಮ್ಮದಿಯಿಂದ ಮಲಗಿರುವಾಗ ಇವರ ಎಮ್ಮೆಗಳು ಸೋಮರಾಯನ ಹೊಲಕ್ಕೆ ನುಗ್ಗಿ ಹಾಳು ಮಾಡುತ್ತವೆ. ಎಮ್ಮೆಗಳನ್ನು ಹಿಂಬಾಲಿಸಿದ ಸೋಮರಾಯನಿಗೆ ಅಲ್ಲೊಂದು ಅವರ ಅಪ್ಪಣೆ ಇಲ್ಲದೆ ಪೂಜಿಸಿರುವುದನ್ನು ಕಂಡು ವಿರೋಧಿಸುತ್ತಾನೆ. ಗೌಳಿಗರು ನಾವು ಹಬ್ಬವನ್ನೇ ಮಾಡಿಲ್ಲವೆಂದೇ ಸುಳ್ಳು ಹೇಳುವರು. ಆದರೆ ಅಲ್ಲಿರುವ ಅಲಂಕಾರ, ಭಂಡಾರ ಚೆಲ್ಲಿರುವುದನ್ನು ಕಂಡು ಕೋಪಗೊಂಡು, ದೇವಿಯ ಮುಂದೆ ಇರುವ ಬಾಳಿಕಾಯಿ, ಭಂಡಾರ, ನಿಂಬಿ ಕಾಯಿಯನ್ನು ತರುತ್ತಾನೆ. ಸೋಮರಾಯನಿಂದ ಪೂಜೆಗೆ ಮೈಲಿಗೆ ಆಗುತ್ತದೆ. ಆಗಿನಿಂದ ಸೋಮರಾಯನ ಏಳನೂರು ಕಿಲಾರಿಗಳು ರಕ್ತ ಹಿಂಡುವಂತೆ ಮಾಡುತ್ತಾಳೆ. ಆಕಳುಗಳು ರೋಗ ರುಜಿನಿಗಳಿಂದ ನರಳುತ್ತವೆ. ಪಾರ್ವತಿಯಿಂದ ಮಲಕವ್ವ ಕೋಪಗೊಂಡಿರು ವುದು ತಿಳಿಯುತ್ತದೆ. ನರಬಲಿ ನೀಡಬೇಕೆಂದು ಹೇಳುತ್ತಾಳೆ. ಆಗ ದೇವಿಗೆ ನರಬಲಿ ಕೊಡಲು ಸೋಮರಾಯ ತಾಮಟಗೇರ ಹೆಣ್ಣು ಮಗಳ ಮಗನನ್ನು ಬಲಿಕೊಡಲು ಹೊತ್ತುಕೊಂಡು ಬಂದು ಬಲಿ ಕೊಡುತ್ತಾನೆ. ಸಂಜೆಯ ಹೊತ್ತಿಗೆ, ತಾಯಿ ಬಂದು ನೋಡಿದರೆ ಮಗು ಇರುವುದಿಲ್ಲ. ಊರಲ್ಲಿ ಕೊಂದದ್ದು ಒಬ್ಬ ಮುದುಕಿ ಸೋಮರಾಯ ಎತ್ತಿಕೊಂಡು ಹೋಗಿರು ವುದನ್ನು ಹೇಳುತ್ತಾಳೆ. ಆಗ ಊರಮಂದಿ ಎಲ್ಲರು ಬಂದು ನೋಡಿದರೆ, ಕಂದನ ತಲೆಯ ಬದಲು ಟಗರಿನ ತಲೆ ಗೋಚರಿಸುತ್ತದೆ. ಇಲ್ಲಿ ದೇವಿಯು ಮಗುವಿನ ಪ್ರಾಣವನ್ನು ಕಾಪಾಡುವುದು ಗೋಚರಿಸುತ್ತದೆ. ಹೀಗೆ ಸೋಮರಾಯನ ಕುಟುಂಬ ದೇವಿಯ ಕೃಪೆಗೆ ಒಳಗಾಗುತ್ತಾರೆ.

ತುಕ್ಕಪ್ಪರಾಯ ಮತ್ತು ಸೋಮರಾಯರು ಕಿಲಾರಿಗಳನ್ನು ಕಾಯುತ್ತಾ ನೆಮ್ಮದಿಯ ಜೀವನ ಸಾಗಿಸುತ್ತಿದ್ದರು. ಆದರೆ ಬೇಡರು ಇವರ ಏಳನೂರು ಕಿಲಾರಿಗಳನ್ನು ಅಪಹರಿಸಲು ಹೊಂಚು ಹಾಕುತ್ತಿದ್ದರು. ಒಂದು ದಿನ ತುಕ್ಕಪ್ಪರಾಯ ಒಬ್ಬನೇ ಇರುವುದನ್ನು ಕಂಡು ಬೇಡರು ಅವರ ಮೇಲೆ ಏರಿಬಂದು ಅವನನ್ನು ಘಾಸಿ ಮಾಡಿದರು. ನಾನು ಅವರಿಂದ ಸಾಯಬಾರದೆಂದು ತುಕ್ಕಪ್ಪರಾಯನೇ ಬಾಣದಿಂದ ಹೊಡೆದುಕೊಂಡನು. ನಂತರ ಬೇಡರು ಆಕಳುಗಳನ್ನು ಹೊಡೆದುಕೊಂಡು ಹೋಗುವಾಗ ಎರಡು ಗೂಳಿಗಳು ಬೇಡರನ್ನು ಇರಿಯಲು ಹೋದಾಗ, ಅವರು ಬಿಟ್ಟು ಓಡಿ ಹೋದರು. ಗೂಳಿಗಳು ಸೋಮರಾಯನಲ್ಲಿಗೆ ಬಂದವು. ಅವುಗಳ ರಕ್ತನನ್ನು ನೋಡಿ, ಗಾಬರಿಯಾಗಿ ಅವುಗಳ ಹಿಂದೆ ಬಂದು ನೋಡಿದರೆ, ತುಕ್ಕಪ್ಪರಾಯ ತಾನೇ ಬಾಣದಿಂದ ಹೊಡೆದುಕೊಂಡಿದನ್ನು ಕಂಡನು. ಆಗ ಮಾಳಿಂಗ ನಮ್ಮ ತಂದೆಯ ಈ ಸ್ಥಿತಿ ತಂದ ಬೇಡರನ್ನು ನಾನು ಸಂಹಾರ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದನು. ಭಾಷೆಯಂತೆ ಮಾಳಿಂಗರಾಯನು ಬೇಡರನ್ನು ಸಂಹರಿಸುತ್ತಾನೆ.

ಜಕ್ಕಪ್ಪ ಮತ್ತು ಮಾಳಿಂಗರು ಯೌವನಾವಸ್ಥೆಗೆ ಬಂದಾಗ, ಅವರಿಗೆ ಮದುವೆಯ ಮಾಡಬೇಕೆಂದು ಸೋಮರಾಯ ಏಣಕಿ ಊರಿನ ಬಾಕೋಬಾಯಿಯನ್ನು ಜಕ್ಕಪ್ಪರಾಯನಿಗೂ, ಕೆಂಪನೂರಿನ ಶರಣಮ್ಮ, ಗಂಗಿನಾದ ಗೌಡನ ಮಗಳು ಈರಮ್ಮ ಈ ಇಬ್ಬರನ್ನು ಮಾಳಿಂಗರಾಯ ಮದುವೆ ಮಾಡಿಕೊಂಡನು.

ಹತ್ತನೆ ಭಾಗದಲ್ಲಿ ಮಾಳಿಂಗರಾಯ ಬೀರಪ್ಪನ ಸೇವೆಯೆಂಬ ವೃತ್ತಾಂತ ಬರುವುದು. ಬೀರಪ್ಪನು ಶಿಷ್ಯನಿಗಾಗಿ ತಪಸ್ಸು ಮಾಡಲು ಪ್ರಾರಂಭಿಸಿದನು. ಅವನ ಮೇಲೆ ಹುತ್ತವೇ ಬೆಳೆದರೂ ಲೆಕ್ಕಿಸದೇ ತಪಸ್ಸು ಮಾಡುತ್ತಿದ್ದನು. ಶಿವ ಪ್ರತ್ಯಕ್ಷವಾಗಿ ಏನು ಬೇಕೆಂದಾಗ, ನನಗೆ ಶಿಷ್ಯ ಬೇಕೆಂದು ಕೇಳಿದನು. ಆಗ ಮಾಳಿಂಗರಾಯನನ್ನು ಶಿಷ್ಯನನ್ನಾಗಿ ಪಡೆದುಕೊಂಡನು. ಇಲ್ಲಿ ಬೀರಪ್ಪನು ಶಿಷ್ಯನ ಶಕ್ತಿ ಸಾಮರ್ಥ್ಯವನ್ನು ಬಿಡಿ-ಬಿಡಿಯಾಗಿ ಪರೀಕ್ಷಿಸುತ್ತಾ, ಪ್ರಪಂಚಕ್ಕೆ ಅವನ ಶಕ್ತಿ ಸಾಮರ್ಥ್ಯ ಗುರುವಿನ ಮೇಲಿನ ಗೌರವ, ಭಕ್ತಿ, ಶ್ರದ್ಧೆಗಳನ್ನು ತೋರಿಸುವುದಕ್ಕಾಗಿ ಕೆಲವರ ಅಸೂಯೆಯನ್ನು ಹೋಗಲಾಡಿಸಲು ಊಟಕ್ಕೆ ಹುಲಿಗಿಣ್ಣ, ಆಡಲು ಹುಲಿಮರಿ ಬೇಕೆನ್ನಲು ಮಾಳಿಂಗರಾಯ ಆಗಲಿ ಗುರುಗಳಿಗೆ ಎಂದು ತಂದು ಗುರುಗಳಿಗೆ ಕೊಡುವನು. ಬೀರಪ್ಪನು ತನ್ನ ಪೂಜೆಗೆ ನಾಗರಬಾವಿಯ ನೀರು, ಖಾಸಭಾಗದ ಹೂ ಬೇಕೆನ್ನಲು ಮಾಳಿಂಗ ತಂದು ಪೂಜೆ ಮಾಡುವನು. ಇದಕ್ಕೆ ಮೆಚ್ಚಿ ಏನು ಬೇಕು ಕೇಳು ಎನ್ನಲು ಆಗ ಮಾಳಿಂಗರಾಯ ಇಟ್ಟಲ್ಲಿ ಇರಬೇಕು. ಕರೆದಲ್ಲಿ ಬರಬೇಕು, ಎಂತಹ ಕಷ್ಟದ ವೇಳೆ ಬಂದರೂ ಅಂತರದಲ್ಲಿ ಹೋಳಾಗಬೇಕೆಂದು ಬೇಡಿಕೊಳ್ಳುತ್ತಾನೆ. ಇಲ್ಲಿ ಬೀರಪ್ಪ ಎಲ್ಲದಕ್ಕೂ ಒಪ್ಪಿ ಮಾಳಿಂಗರಾಯ ಸಾಹಸ, ಭಕ್ತಿಗಳನ್ನು ನೋಡಿ ಸಂತೋಷದಿಂದ ಇರುವರು.

ಹನ್ನೊಂದನೆ ಭಾಗದಲ್ಲಿ ಡಂಕನಾಥ ದೈಗೊಂಡನ ವೃತ್ತಾಂತ ಬರುತ್ತದೆ. ಡಂಕನಾಥ ದೈಗೊಂಡನು ತಾನು ಮಾಡಿದ ತಪ್ಪಿಗಾಗಿ ಅವನ ಸಂಪತ್ತೆಲ್ಲಾ ಕಳೆದು ಹೋಗಿರುತ್ತದೆ. ಮತ್ತೆ ಬೀರಪ್ಪ ಮತ್ತು ಮಾಳಿಂಗರಾಯನ ಮಹಿಮೆಯಿಂದ ಸಂಪತ್ತು ಬರುತ್ತದೆ. ಆದರೆ ದೈಗೊಂಡನಿಗೆ ಗರ್ವ ಬಂದು ಗುರುಗಳನ್ನೇ ಮರೆತಿದ್ದಕ್ಕೆ ಮಾಳಿಂಗರಾಯ ತಕ್ಕ ಪಾಠ ಕಲಿಸುತ್ತಾನೆ. ಹನ್ನೆರಡನೇ ಭಾಗದಲ್ಲಿ ಅಮೋಘಸಿದ್ದನ ವೃತ್ತಾಂತ ಬರುತ್ತದೆ. ಶಿವಭಕ್ತನೆಂದು ಬೀಗುತ್ತಿದ್ದ ಅಮೋಘಸಿದ್ದನಿಗೆ ಕೊನೆಗೆ ಮಾಳಿಂಗರಾಯನೇ ನನಗಿಂತ ಶ್ರೇಷ್ಠ ಭಕ್ತನೆಂದು ತಿಳಿಯುತ್ತದೆ. ಕೆಲವು ಪವಾಡಗಳಿಂದ ಶ್ರೇಷ್ಠ ಭಕ್ತನೆಂದು ಹೇಳಲಾಗಿದೆ.

ಅಮೋಘಸಿದ್ದ ನಡುವಟ್ಟಿ ಊರಿನ ಅರಸನ ಕೆರೆ ಕಟ್ಟಡ ನಿಲ್ಲಿಸಿದ್ದಕ್ಕೆ ಪದ್ಮಾವತಿಯನ್ನು ಮದುವೆಯಾಗುವ ಪ್ರಸಂಗ ಬರುತ್ತದೆ. ಮದುವೆಗೆ ಅಮೋಘಸಿದ್ದ ಬಾರದೇ ಅವನ ಶಿಷ್ಯನೊಂದಿಗೆ ನಾಗಬೆತ್ತವನ್ನು ಕಳುಹಿಸಿ, ಅದರೊಂದಿಗೆ ಮದುವೆಯಾಗುವುದನ್ನು ಕಾಣುತ್ತೇವೆ. ಇಲ್ಲಿ ಮದುವೆಗಿಂತ

ಕೊಟ್ಟ ಮಾತು ಮುಖ್ಯವಾಗಿರುವುದು. ಮುಂದೆ ಅಮೋಘಸಿದ್ದನ ಮಕ್ಕಳ ಪ್ರಸಂಗದ ವಿವರವಿದೆ. ಈ ಕಾವ್ಯದಲ್ಲಿ ಮುಂದೆ ಪಾಂಡುರಂಗನ ವೃತ್ತಾಂತ ಬರುವುದು ಮಾಳಿಂಗರಾಯನ ಭಕ್ತಿಯನ್ನು ಪರೀಕ್ಷಿಸಲು ಪಾಂಡುರಂಗ ಬರುವ ವಿಷಯಗಳಿವೆ. ಮುಂದೆ ರೇವಣ್ಣನ ವೃತ್ತಾಂತ, ಮೂಕನಾದ ಸಿದ್ದರಾಮನಿಗೆ ಮಾತು ಬರಿಸುವಲ್ಲಿಗೆ ಕಾವ್ಯ ಮುಕ್ತಾಯವಾಗುತ್ತದೆ. ಒಟ್ಟಾರೆಯಾಗಿ ಜನಪದ ಹಾಲುಮತ ಮಹಾಕಾವ್ಯವು ತನ್ನ ಸ್ವರೂಪದಿಂದ ಅಲೌಕಿಕತೆಯಿಂದ ಕೂಡಿದೆ. ಹಾಲುಮತ ಸಂಪ್ರದಾಯದ ದೈವಗಳ ವೃತ್ತಾಂತಗಳ ವಿವರವಿದೆ.

೩. ಹಾಲುಮತದ ಪುರಾಣ(೧೯೫೭)

ಚನ್ನಬಸವಶಾಸ್ತ್ರೀಯವರು ಈ ಕೃತಿಯನ್ನು ರಚಿಸಿದರು. ಈ ಕೃತಿಯಲ್ಲಿ ೧೫ ಸಂಧಿಗಳಿವೆ, ಸಾಂಗತ್ಯ ರೂಪದ ಸಂಧಿಗಳಿವೆ, ೧೬೨೯ ಪದ್ಯಗಳನ್ನು ಹೊಂದಿದೆ, ಮೊದಲ ಸಂಧಿಯು ೮೪ ಪದ್ಯಗಳನ್ನು ಹೊಂದಿದೆ, ಗುರುಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಕೈಲಾಸದ ಶಿವ ಪಾರ್ವತಿಯರ ಭೃಂಗಿಯ ಭೂಲೋಕದಲ್ಲಿ ಶಿವಮತೋದ್ಧಾರಕ್ಕಾಗಿ ಶ್ರೀ ರೇಣುಕಾ ಗಣಾಧೀಶ್ವರರು ಜನಿಸಲು ಶಿವನಿಂದ ಅಪ್ಪಣೆಯ ವಿಷಯಗಳಿವೆ.

ಎರಡನೆಯ ಸಂಧಿಯಲ್ಲಿ ೧೫೭ ಪದ್ಯಗಳಿವೆ, ರೇವಣ್ಣಸಿದ್ದೇಶ್ವರ, ಸರೂರು ಶಾಂತಮುತ್ತಯ್ಯನ ವಿಷಯಗಳ ಪ್ರಸ್ತಾಪವಿದೆ. ಶಾಂತಮುತ್ತಯ್ಯನಿಗೆ ರೇವಣ್ಣಸಿದ್ದನು ಲಿಂಗದೀಕ್ಷೆ ಮಾಡಿ ಬೋಧಿಸಿದರು. ಗುರುವಿನ ಅಪ್ಪಣೆಯಂತೆ ಶಾಂತಮುತ್ತಯ್ಯನು ಕೊಲ್ಲಾಪುರದ ಕುಟಿಲ ಸಿದ್ದರನ್ನು ನಿಗ್ರಹಿಸಿದ್ದು, ಮುಂಡಾಸುರ ರಾಕ್ಷಸನನ್ನು ಸಂಹರಿಸಿ, ಜ್ಞಾಪಕಾರ್ಥವಾಗಿ ಮೂರ ಹಿಂಡಿನ ಕಂತೆ ಮಾಡಿದರು ಪ್ರಸಂಗವಿದೆ. ಹಾಗೆಯೇ ಕುರುಬರ ರಟ್ಟಮತ ಶಾಸ್ತ್ರ ಎಂಬ ಭವಿಷ್ಯ ಗ್ರಂಥದ ವಿವರವಿದೆ. ಮೂರನೆಯ ಸಂಧಿಯಲ್ಲಿ ೧೫೭ ಪದ್ಯಗಳಿವೆ, ಕೈಲಾಸದ ಒಡ್ಡೋಲಗದಲ್ಲಿ ಮುನಿಯ ಶಾಪದಿಂದ ಭೂಲೋಕದಲ್ಲಿ ಆದಿಗೊಂಡ, ಚುಂಚಲೆಯರ ಜನನವಾಗುತ್ತದೆ. ಇವರಿಬ್ಬರ ಮಗನಾಗಿ ಶಿವಪದ್ಮನ ಜನನವಾಗುತ್ತದೆ.

ನಾಲ್ಕನೆಯ ಸಂಧಿಯು ೧೫೭ ಪದ್ಯಗಳನ್ನು ಹೊಂದಿದೆ, ಇಲ್ಲಿ ಶಿವಪದ್ಮನ ಬಾಲ್ಯ ಚೇಷ್ಟೆಗಳೊಂದಿಗೆ ತಂದೆ–ತಾಯಿಯರ ಆನಂದದ ವರ್ಣನೆಯಿದೆ. ಐದನೆಯ ಸಂಧಿಯಲ್ಲಿ ೧೧೬ ಪದ್ಯಗಳಿವೆ, ಶಿವಪದ್ಮನ ಮದುವೆಯ ಪ್ರಸಂಗ, ಬಡವಿ ಗಂಗಮ್ಮಳ ಭಕ್ತಿ, ಶಿವಪದ್ಮನಿಗೆ ಕುರಿಗಳ ಪ್ರಾಪ್ತಿ, ಕುರಿಗಳನ್ನು ಕಾಯುವ ವಿಚಾರವಿದೆ. ಆರನೆಯ ಸಂಧಿಯಲ್ಲಿ ೧೧೬ ಪದ್ಯಗಳಿವೆ ನೂತನಪುರದ ಗಂಗಾಧರ ರಾಜನ ಪ್ರಸಂಗ ಬರುತ್ತದೆ. ದೇವಾನು ದೇವತೆಗಳು ಕುರಿಗಳನ್ನು ಕಾಯುವ ಪ್ರಸಂಗ ಬರುತ್ತದೆ. ಹುತ್ತದಲ್ಲಿ ಕುರಿಗಳನ್ನು ಹುದುಗಿಸಿದ ಕಥೆಯು ಬರುತ್ತದೆ. ಏಳನೆಯ ಸಂಧಿಯಲ್ಲಿ ೩೩ ಪದ್ಯಗಳಿವೆ, ಶಿವಪದ್ಮನಿಗೆ ರೇವಣ್ಣಸಿದ್ದನೆಂಬ ಮಗ

ಜನಿಸುತ್ತಾನೆ. ಹಾಗೆಯೇ ಕುರಿಗಳ ಪ್ರಾಪ್ತವಾಗಲು ವಿಷಯಗಳ ವಿಚಾರವಿದೆ. ವೀರೇಶ್ವರನ ವಿಚಾರ ಬರುತ್ತದೆ.

ಎಂಟನೆಯ ಸಂಧಿಯಲ್ಲಿ ೧೦೪ ಪದ್ಯಗಳಿವೆ, ಶಾಪಗ್ರಸ್ಥ ಮೂರು ಜನ ಗಂಧರ್ವರು ಕಾಗೆ, ಕಾಂಚಾಲಮರ ಮತ್ತು ಕುದರ ರಕ್ಕಸಿಯಾಗಿ ಭೂಲೋಕದಲ್ಲಿ ಜನಿಸಿದ ಕಥೆಯು ಬರುತ್ತದೆ. ಹಾಗೆಯೇ ಚುಮಾಲಾ ದೇವಿಯ ವಿಚಾರ ಬರುತ್ತದೆ. ಒಂಬತ್ತನೆಯ ಸಂಧಿಯಲ್ಲಿ ೩೮ ಪದ್ಯಗಳಿವೆ, ಶಿವಪದ್ಮ ರಕ್ಕಸಿಯನ್ನು ಕೊಂದು, ಚುಮಲಾದೇವಿಯನ್ನು ಮದುವೆಯಾದ ವಿಚಾರ ಬರುತ್ತದೆ. ಹತ್ತನೆಯ ಸಂಧಿಯಲ್ಲಿ ೯೯ ಪದ್ಯಗಳಿವೆ, ಶಿವಪದ್ಮನು ಮರಳಿ ಜಾಗ್ರತಪುರಕ್ಕೆ ಚುಮಲಾದೇವಿಯೊಂದಿಗೆ ಹೋಗುತ್ತಾನೆ. ಮೊದಲ ಹೆಂಡತಿ ಜಿಂಕಾದೇವಿ ಮಗ ರೇವಣ್ಣ, ಎರಡನೇ ಹೆಂಡತಿ ಚುಮಲಾದೇವಿಯೊಂದಿಗೆ ಸುಖವಾಗಿರುವ ಪ್ರಸಂಗ ಬರುತ್ತದೆ. ಹಾಗೆಯೇ ಇಲ್ಲಿ ಕಥೆ ಸ್ವಲ್ಪ ಬದಲಾಗಿ ಪುಷ್ಪದತ್ತ ಮತ್ತು ಹರಿಹರ ಪ್ರಸಂಗ ಬರುತ್ತದೆ, ಭರಮದೇವ ಮತ್ತು ಸುರಾವತಿಯ ವಿವಾಹದ ಪ್ರಸಂಗ, ವೀರೇಶನ ಪ್ರಸಂಗ, ಮಾಳಿಂಗರಾಯನ ಪ್ರಸಂಗಗಳು ಈ ಸಂಧಿಯಲ್ಲಿ ಬಂದಿವೆ. ಹನ್ನೊಂದನೆಯ ಸಂಧಿಯಲ್ಲಿ ೩೮ ಪದ್ಯಗಳಿವೆ, ಅಕ್ಕಮ್ಮ ಮತ್ತು ಬೀರೇಶ್ವರ ಪ್ರಸಂಗಗಳು ಬರುತ್ತವೆ. ಹನ್ನೆರಡನೆಯ ಸಂಧಿಯಲ್ಲಿ ೧೩೦ ಪದ್ಯಗಳಿವೆ, ಅಕ್ಕಮ್ಮ ಬೀರೇಶನನ್ನು ಸಾಕುವ ಪ್ರಸಂಗ, ಬೀರೇಶನ ತುಂಟಾಟಗಳು, ಬೀರೇಶನಿಗೆ ಸೋದರ ಮಾವನ ಮಗಳಾದ ಕನ್ನಿಕಾಮಾಲೆಯನ್ನು ವಿವಾಹವಾದ ಪ್ರಸಂಗಗಳಿವೆ. ಹದಿಮೂರನೆಯ ಸಂಧಿಯಲ್ಲಿ ೮೬ ಪದ್ಯಗಳಿವೆ, ಶಿಷ್ಯನಿಗಾಗಿ ತಪಸ್ಸು ಮಾಡಿದ ಪ್ರಸಂಗ, ಹಾಗೆಯೇ ವೀರ ಮಾಳಿಂಗರಾಯನ ಕಥೆಯ ವಿವರವಿದೆ.

ಹದಿನಾಲ್ಕನೆಯ ಸಂಧಿಯಲ್ಲಿ ೧೮೩ ಪದ್ಯಗಳಿವೆ, ಮದವೇರಿದ ಕೋಣವನ್ನು ಕೊಂದಿದ್ದಕ್ಕಾಗಿ ಮುಂಡಗನೂರಾಗಲೀ ಕೋಣ ಬಿದ್ದಲ್ಲಿ ಕೋಣಗನೂರಾಯಿತು. ಇದರ ಪ್ರಸಂಗದೊಂದಿಗೆ ರೇವಣ್ಣಸಿದ್ದೇಶ್ವರ ಲಿಂಗೈಕ್ಯರಾದ ಪ್ರಸಂಗಗಳಿವೆ.

ಹದಿನೈದನೆಯ ಸಂಧಿಯಲ್ಲಿ ೧೩೩ ಪದ್ಯಗಳಿವೆ, ಬಂಕಣ್ಣನಿಗೆ ಕೈಲಾಸ ಪ್ರಾಪ್ತವಾಗುವ ಪ್ರಸ್ತಾಪ, ಶಿಷ್ಯ ಮಾಳಿಂಗರಾಯನ ಪರೀಕ್ಷೆ, ಮಾಳಿಂಗರಾಯನ ಪವಾಡಗಳು, ಪ್ರಸಂಗಗಳು ಬಂದಿವೆ. ಈ ಕೃತಿಯು ರಸ್ತಾಪುರ ಭೀಮ ಕವಿಯ ಹಾಲುಮತ್ತೋಜಕ ಕೃತಿಯನ್ನೆ ಹೋಲುತ್ತದೆ.

೪. ತಗರ ಪವಾಡ

ಹಾಲುಮತದವರ ಚರಿತ್ರೆ ಪೌರಾಣಿಕ ವಿಷಯವನ್ನು ಒಳಗೊಂಡ ಕೃತಿಯಾಗಿದೆ. ಈ ಕೃತಿಯಿಂದ ನಮಗೆ ಸಾಹಿತ್ಯದಿಂದ ಇತಿಹಾಸವನ್ನು, ಸಂಸ್ಕೃತಿಯನ್ನು ಹುಡುಕುವ ಉದ್ದೇಶವನ್ನು

ಅರಿಯುತ್ತೇವೆ. ಹಾಲುಮತ ಸಮುದಾಯದ ಭಿನ್ನ ಸಂಪ್ರದಾಯವನ್ನೊಳ ಗೊಂಡ ಚರಿತ್ರೆಯೇ ಆಗಿದೆ. ಶಾಂತಮುತ್ತಯ್ಯನ ನಾಯಕತ್ವದ ಕೃತಿಯೆಂದರು ತಪ್ಪಾಗಲಾರದು. ಇದೊಂದು ಸಾಂಗತ್ಯ ಕೃತಿಯಾಗಿದ್ದು, ಎಂಟು ಸಂಧಿಗಳನ್ನು ಒಳಗೊಂಡಿದೆ.

ವೃತ್ತ, ಕಂದ, ಸಾಂಗತ್ಯಗಳಿಂದ ಪ್ರಾರಂಭಿಸುತ್ತಾ

"ನಾಡಿಗೆ ಕಲಶ ಕನ್ನಡಿ ಎಂದೆನಿಸುವ
ಪೊಡವಿಗಯ್ಯೆನೆ ನೆಲಸಿ(ಹನು)
ಕಾಡೊಳಗಾಡುವ ಕರಿಯಸಿದ್ದೇಶನ
ಹಾಡುವೆ ನಾನು ನೇಮದಲ್ಲಿ"(೧)

ಸಂಗನಬಸವರಾಜ, ಅಲ್ಲಮ, ಸಿದ್ದರಾಮ, ರುದ್ರಮುನಿ, ಚೆನ್ನಬಸವ ವೀರಮಡಿವಾಳರಿಗೆ ನಲಿಸುತ್ತಾ, ಗಿರಿಜೆಯ ಮಗನಾದ ರೇವಣ್ಣಸಿದ್ದನೇ ರಕ್ಷಿಸುತ್ತಾ ಎಂದು ನನ್ನ ಹೃದಯಲ್ಲಿ ನೆಲೆಸುತ್ತಾ ನಿನ್ನ ಮಹಿಮೆಯನ್ನು ಸಾರು ಎಂದು ಶಿವ, ಗಣಪತಿ, ಸರಸ್ವತಿ, ವೀರಭದ್ರರಿಗೆ ನಮಸ್ಕರಿಸುತ್ತಾ ಕಥೆಯನ್ನು ಪ್ರಾರಂಭಿಸುವರು.

"ಒಂದಿನದಲಿ ಶಿವ ಕೈಲಾಸಪುರದಲಿ
ನಂದಿ ಭೃಂಗೀಶ ಪ್ರಮಥರ
ಸಂದಣಿಯಿಂದ ಒಡ್ಡೋಲಗದೊಳಗಿರೆ
ಬಂದನಲ್ಲಿಗೆ ನಾರದನು"(೨)

ಶಿವನು ನಾರದನನ್ನು ನೋಡಿ, ಮುಗಳ್ನಗುತ್ತಾ, ಏನು ವಿಷಯವನ್ನು ತಂದಿರುವೆ. ಹೇಳುವಂತವನಾಗು. ನಾರದ ಏನೆಂದು ಹೇಳಲಿ, ಶಿವ ಭೂಲೋಕದಲ್ಲಿ ಮಾಯೆ ಎಂಬ ಸ್ತ್ರೀಯು ದಾನವರನ್ನು, ಮಾನವರನ್ನು ಲೆಕ್ಕಿಸದೇ ಅನ್ಯಾಯದಲ್ಲಿ ಜೀವಿಸುತ್ತಿದ್ದಾಳೆ. ಆಕೆಯ ರೂಪು ಲಾವಣ್ಯಕ್ಕೆ ಮಾರು ಹೋಗಿ, ಮೋಹಿಸಲು ಮುಂದಾಗಿ ಅವಳು ನೀಡುವ ವಿಷವನ್ನು ಕುಡಿದು ಬದುಕಿದ ನವಕೋಟಿ ಸಿದ್ದರನ್ನು

"ಮೂಗಿಗೆ ಕವಡೆಯ ಕಟ್ಟಿ ಬಿಂದಿಗೆಗೊಟ್ಟು
ಬೇಗ ನೀರನು ಹೊತ್ತು ತನ್ನಿ
ಪೋಗೆಂದು ಸೆರೆಮನೆಯೊಳು ನೂಕಿಕೊಂಡಿಹ
ಯೋಗಸಿದ್ಧರು ನವಕೋಟಿ"(೩)

ಇದನ್ನು ಅರಿತ ಪರಮೇಶ್ವರನನ್ನು ರೇವಣಸಿದ್ದನೆಂಬ ಹೆಸರನ್ನು ಧರಿಸಿ ಸಂತೋಷದಿಂದ ಭೂಲೋಕಕ್ಕೆ ಇಳಿದು, ಕೊಲ್ಲಾಪುರದಲ್ಲಿ ಮೋಸವೇ ತನ್ನ ಕರ್ಮವೆಂಬಂತೆ ಇದ್ದ ಮಾಯೆಯ ಬಳಿ ಬಂದು, ಅವಳು ನೀಡಿದ ವಿಷದ ಕೊಡವನ್ನೆಲ್ಲ ಕ್ಷಣ ಮಾತ್ರದಲ್ಲಿ ಕುಡಿದು ಮುಗಿಸಿದಾಗಲೆಲ್ಲ ಮತ್ತೆ ಮತ್ತೆ ವಿಷದ ಕೊಡಗಳನ್ನು ರೇವಣಸಿದ್ದರ ಬಳಿ ಇಡುತಿರಲು ರೇವಣ ಹಿಂಜರಿಯದೆ ಕುಡಿಯುತ್ತಿರುವುದನ್ನು ಕಂಡ ಮಾಯೆಯು ಇವನು ಸಾಮಾನ್ಯನಲ್ಲ. ಯಾವುದೋ ಶಕ್ತಿಯ ಸ್ವರೂಪವೆಂದು ತಿಳಿದು, ಆತನ ಶಕ್ತಿಗೆ, ಸಾಮರ್ಥ್ಯಕ್ಕೆ ಬೆರಗಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಾಳೆ. ಅವಳ ತಪ್ಪಿಗೆ, ತಕ್ಕ ಶಿಕ್ಷೆಯನ್ನು ನೀಡಿದನು ಹಾಗೆಯೆ. ನವಕೋಟಿ ಸಿದ್ಧರನ್ನು ಕುರಿಗಳಾಗಿ ಎಂದು ಶಪಿಸುತ್ತಾನೆ. ನವಕೋಟಿ ಸಿದ್ದರೆಲ್ಲ ಕುರಿಗಳಾಗಿ ರೇವಣ್ಣಸಿದ್ಧರ ಸುತ್ತಲೂ ಆವರಿಸಲು ನೀವೆಲ್ಲರೂ ಬೆಟ್ಟಗಳಲ್ಲಿ ಬದುಕಿ ಎಂದು ಆಜ್ಞೆ ಮಾಡಿ, ದೇವತೆಗಳ ಹರಕೆಗೆ ಬಲಿಪಶುಗಳಾಗಿ ಎಂದೆನ್ನುತ್ತಾ, ಅಷ್ಟದೇವತೆಗಳನ್ನು ಆಹ್ವಾನಿಸಿ, ಕುರಿಗಳನ್ನು ಕಾಯಲು ಆದೇಶಿಸು ತ್ತಾನೆ. ಅಷ್ಟದೇವತೆಗಳು ಕುರಿಗಳನ್ನು ಕಾಯ್ದು ಸಾಕಾಗಿ ಶಿವನಲ್ಲಿ ಮೊರೆಹೋದಾಗ, ಅವನೇ ಶರಣರ ವೇಷದಲ್ಲಿ ಕುರಿಗಳನ್ನು ಕೆಲ ಕಾಲದವರೆಗೆ ಕಾಯ್ದು ಕೊನೆಗೆ ತೊಗರಸಿಯ ಆದಿಗೊಂಡನ ಕೊಡಗಿ ಎಂಬ ಹೆಸರಿನ ಹೊಲದ ಮೂಲೆಯಲ್ಲಿನ ಒಂದು ಹುತ್ತದಲ್ಲಿ ಕುರಿಗಳನ್ನೆಲ್ಲಾ, ಹಾಕಿ ಅದರ ಮೇಲೆ ಒಂದು ಮುತ್ತುಗದ ಮರವನ್ನು ನೆಟ್ಟು ಪರಮೇಶ್ವರ ವೀರೇಶನನ್ನು ಹುತ್ತಕ್ಕೆ ಕಾವಲಿಟ್ಟು, ಪದ್ಮಣ್ಣನೆಂಬುವವನು ಬರುವವರೆಗೂ ಇದನ್ನು ಯಾರಿಂದಲೂ ಮುಟ್ಟಲು ಬಿಡಬೇಡವೆಂದು ಕೈಲಾಸಕ್ಕೆ ತೆರಳುವನು.

"ಒಕ್ಕಲಿಗನ ಆದಿಗೊಂಡನ ಉದರದಿ
ಚಿಕ್ಕವ ಸಹ ಏಳುಮಂದಿ
ಹೊಕ್ಕು ಆರಂಭನ ಮಾಡಲೊಲ್ಲನುಯೆಂದು
ಮಲ್ಲಮ್ಮ ಬುದ್ಧಿ ಹೇಳಿದಳು."(೧೪)

ಆದಿಗೊಂಡನಿಗೆ ಏಳುಮಂದಿ ಮಕ್ಕಳಲ್ಲಿ, ಕೊನೆಯವನು ಉಂಡಾಡಿ ಪದುಮಣ್ಣನು ಯಾವುದೇ ಕೆಲಸಗಳಿಲ್ಲದೇ ಊರು ಸುತ್ತುವ, ಸೋಮಾರಿ ಮಗನಾದ ಇವನಿಗೆ ತಾಯಿಯು ಬುದ್ಧಿ ಹೇಳಿ, ಹೊಲಕ್ಕೆ ಕಳುಹಿಸುವಳು. ಹೊಲಕ್ಕೆ ಹೋಗುವಾಗ ತಂದೆಯು ಅವನಿಗೆ ಅಲ್ಲಿರುವ ಹುತ್ತವನ್ನು ಒಡೆಯಬೇಡ, ಅದರ ಮೇಲಿರುವ ಮುತ್ತುಗ ಮರವನ್ನು ಕಡಿಯಬೇಡ ವೆಂದು ಹೇಳಿ ಕಳಿಸುತ್ತಾರೆ. ಪದುಮಣ್ಣನು ಹೊಲವನ್ನು ಹಸನು ಮಾಡುತ್ತ, ಬರುವಾಗ ಹುತ್ತವು ಕಣ್ಣಿಗೆ ಬೀಳುತ್ತದೆ. ತಂದೆಯ ಮಾತನ್ನು ಲೆಕ್ಕಿಸದೇ ಅದರ ಮೇಲಿನ ಮುತ್ತುಗದ

ಮರವನ್ನು ಕಡಿದು, ಹುತ್ತವನ್ನು ಬೀಳಿಸುತ್ತಾನೆ. ಆಗ ಹುತ್ತದಲ್ಲಿನ ಸಾವಿರಾರು ಕುರಿಗಳು ಅರಚುತ್ತಾ ಹೊರಬರುತ್ತವೆ. ಪದುಮಣ್ಣನು ಗಾಬರಿಯಾಗಿ ಅಯ್ಯೋ ತಂದೆಯ ಮಾತನ್ನು ಕೇಳದೆ ನಾನು ಎಂತಹ ಕೆಲಸ ಮಾಡಿದೆ. ಈಗ ಈ ಕುರಿಗಳನ್ನು ಏನು ಮಾಡುವುದು ಎಂದು ಚಿಂತಿಸುತ್ತ ಏನೂ ಮಾಡಲು ತೋಚದೆ ಹಾಗೆ ಕುಳಿತಿರಲು ಕೈಲಾಸದಲ್ಲಿನ ಶಿವನಿಗೆ ಕುರಿಗಳ ಅರಚುವಿಕೆ ಕೇಳಿ, ಗಿರಿಜೆ ಸಹಿತೆಯಾಗಿ ಭೂಲೋಕಕ್ಕೆ ಬರುವನು. ಪದುಮಣ್ಣನು ಶಿವನನ್ನು ನೋಡಿ

"ಏನ ಪೇಳಲಿ ನಮ್ಮ ಹೊಲದೊಳಗಿರುತಿಹ
ನಾನು ಮುತ್ತಕವ ತರಿದೆನು
ಮಾನನಿಧಿಯೆ ಹುತ್ತದೊಳಗಿಂದ ಬಂದವು
ಹೆಂಗೆ ಇದ್ದವೋ ಅಲ್ಲಿ ದೇವಾ"(೧೮)

ಇದನ್ನು ತಿಳಿದ ಶಿವನು ಒಳಿತಾಯಿತು. ಇಂದಿನಿಂದ ಈ ಎಲ್ಲ ಕುರಿಗಳಿಗೆ ಒಡೆಯ ನಾಗೆಂದನು. ಶಿವ ನುಡಿದ ಮಾತಿಗೆ ಬೆರಗಾಗಿ ಪದುಮಣ್ಣನು ಅಸಂಖ್ಯಾತ ಕುರಿಗಳನ್ನು ಕಾಯಲು ನನ್ನೊಬ್ಬನಿಂದ ಸಾಧ್ಯವಿಲ್ಲ ದೇವ ಎಂದೆನ್ನುತ್ತಾನೆ. ಇದನ್ನು ಅರಿತ ಶಿವ ವೀರಬೀರಯ್ಯನನ್ನು ಜೊತೆ ಮಾಡಿ ಕೈಲಾಸಕ್ಕೆ ತೆರಳಿದನು. ಪದುಮಣ್ಣ, ವೀರ ಬೀರಯ್ಯನು ಜೊತೆಯಾಗಿ ಅಡವಿಯೊಳಗೆ ಹುಲ್ಲನ್ನು ಮೇಯುತ್ತಿರುವಾಗ, ಕುರಿಗಳ ಹಿಂಡನ್ನು ತಿನ್ನಲು ಬಂದ ಬಕನೆಂಬ ರಾಕ್ಷಸನನ್ನು ವೀರಬೀರಯ್ಯನು ವೀರವೇಶದಿಂದ ಹೋರಾಡಿ ಬಕನನ್ನು ಸಂಹರಿಸಿ ಕುರಿಗಳ ರಕ್ಷಣೆ ಮಾಡುತ್ತಾನೆ. ಆ ಸಂದರ್ಭದಲ್ಲಿ ಬಕನ ಮಗಳಾದ ಸಿರಿವಂತೆ ನಾನು ಅನಾಥೆಯಾದೆ ಎಂದು ದುಃಖಿಸುತ್ತಿರುವಾಗ, ವೀರಬೀರಯ್ಯನು ಪದುಮಣ್ಣನಿಗೆ ಆಜ್ಞೆಯ ಮಾಡಿ ನೀನು ಸಿರಿವಂತೆಯನ್ನು ಮದುವೆಯಾಗು ಎಂದು ಮದುವೆ ಮಾಡಿಸುತ್ತಾನೆ. ಈ ಸಂದರ್ಭದಲ್ಲಿ ಶಿವ ಪ್ರತ್ಯಕ್ಷನಾಗಿ

"ಕಂದಯ್ಯ ನಿನ್ನ ಹಿರಿ ಹೆಂಡತಿ ಲಿಂಗಮ್ಮಗೆ
ಕಂದರು ಹದಿಮೂರು ಮಂದಿ
ಚೆಂದದಿ ಹತ್ತಿಕಂಕಣದ ಕುರುಬರೆಂದು
ನಿಂದು ಶಿವನು ನಿರೂಪಿಸಿದ
ಕಂದಯ್ಯ ನಿನ್ನ ಚಿಕ್ಕ ಹೆಂಡತಿ ಸಿರಿವಂತೆ
ಗಂಡು ಮಕ್ಕಳು ಮೂರು ಮಂದಿ

ಉಣ್ಣೆ ಕಂಕಣದ ಕುರುಬರೆಂದು ಶಿವ ಪೇಳಿ
ಮುಂದನ ಕುರುಹ ಪೇಳಿದನು."(೨೧)

ಕುರಿ ಕಾಯುವ ನೀನು ಕುರುಬಗೌಡನಾಗಿ ನಿಮ್ಮ ಕುಲದೈವವಾಗಿ ಪೂಜಿಸಲ್ಪಡುವೆ ಎಂದು ವೀರಬೀರಯ್ಯನು ತಿಳಿಸುವನು. ಹಾಗೆಯೇ ನಿನ್ನ ಕುಲಗುರು ಶಾಂತಮುತ್ತಯ್ಯ ಎಂದು ಆಶೀರ್ವದಿಸಿ ಮಾಯವಾಗುತ್ತಾನೆ. ಪದುಮಣ್ಣನು ಸಿರಿವಂತೆಯ ಜೊತೆ ಆನಂದದಿಂದಲೇ ಅಡವಿಯಲ್ಲಿ ಬಾಳುತ್ತಿರುತ್ತಾರೆ.

ಒಂದು ದಿನ ಪದುಮಣ್ಣನ ತಾಯಿಯ(ಮಲ್ಲಮ್ಮ) ಸ್ವಪ್ನದಲ್ಲಿ ಮಗನನ್ನು ಕಂಡು ದುಃಖಿತಳಾಗುತ್ತಾಳೆ. ಬೆಳಗಿನ ಜಾವದಲ್ಲಿ ಶರಣನು ಮನೆಯ ಬಳಿ ಬಂದು ನೀ ಕಂಡಂತಹ ಸ್ವಪ್ನದಂತೆ ಇಂದು ನಿನ್ನ ಮಗನನ್ನು ಕಾಣುವೆ. ನಿನ್ನ ಮಗ ಹಿಂದುರುಗಿ ಇಲ್ಲಿಗೆ ಬರುವನೆಂದು, ಹೇಳಿ ಅದರ ಜೊತೆಗೆ ನಿನ್ನ ಮೊಮ್ಮಗನಾದ ಶಾಂತಯ್ಯನಿಗೆ ಮದುವೆ ಮಾಡಿ ಸುಖದಿಂದ ಬಾಳು ಎಂದು ಆಶೀರ್ವದಿಸಿ ಹೋಗುತ್ತಾನೆ. ಶರಣರ ಮಾತಿನಂತೆ ಪರವಿಗೊಂಡನ ಮೊಮ್ಮಗಳು ದೇವಮ್ಮನೊಂದಿಗೆ ಶಾಂತಮುತ್ತಯ್ಯನಿಗೆ ಮದುವೆ ಮಾಡಿಸಿದರು.

"ಶರಣರಾಡಿದ ಮಾತು ಸ್ಥಿರವೆಂದು ಶಾಂತಯ್ಯಗೆ
ಪರಿವಿಗೊಂಡನ ಮೊಮ್ಮಗಳ
ಹರಿವಿ ಸೇಸೆಯನಿಟ್ಟು ಚಿರಂಜೀವಿಯಾಗೆಂದು
ಹರುಷದಿ ಮದುವೆ ಮಾಡಿದರು."(೨೫)

ಪದುಮಣ್ಣನು ಹೆಂಡತಿ ಸಿರಿವಂತೆ– ಮೂರು ಮಕ್ಕಳೊಂದಿಗೆ ಕುರಿ ಹಿಂಡನ್ನು ಹೊಡೆದುಕೊಂಡು ತೊಗರಸಿ ಹಳ್ಳಿಗೆ ಬಂದರು. ಸೊಂಪಾಗಿ ಬೆಳೆದ ಹೊಲದಲ್ಲಿ ಕುರಿಗಳು ಮೇಯುತ್ತಿರುವಾಗ, ಊರಿನ ಜನರು ಪ್ರತಿರೋಧಿಸಿ, ಅವರನ್ನು ಓಡಿಸುತ್ತಾರೆ. ಮಲ್ಲಮ್ಮ ಯಾರಿರಬಹುದೆಂದು ಹೊಲಕ್ಕೆ ಬಂದು ನೋಡಿ ನೀವು ಯಾರು? ಯಾವ ಊರಿಂದ ಬಂದೀರಿ ಎಂದು ಕೇಳಲು. ನಾವು ಗಂಗಾಪುರದಿಂದ ಬಂದೆವು ಎಂದು ಹೇಳಿದರು. ಪದುಮಣ್ಣನು ತಂದೆ–ತಾಯಿಯರ ಗುರುತು ಹಿಡಿದು ಕಣ್ಣೀರಿಟ್ಟನು. ಆಗ ಮಲ್ಲಮ್ಮ ದುಃಖಿತಳಾಗಿ ಪದುಮಣ್ಣನನ್ನು–ಮಲ್ಲಮ್ಮಳು ಮನೆಗೆ ಕರೆದುಕೊಂಡು ಹೋದರು.

ಎಷ್ಟೋ ವರ್ಷಗಳ ತರುವಾಯ ಬಂದ ಪದುಮಣ್ಣನನ್ನು ತುಂಬಾ ಆನಂದದಿಂದ ಮನೆಗೆ ಸ್ವಾಗತಿಸಿ, ಮೊದಲ ಹೆಂಡತಿ ಲಿಂಗಮ್ಮ, ಮಗಳೊಂದಿಗೆ ಆನಂದದಿಂದ ಸಹಭೋಜನ ಮಾಡಿದರು. ಮರುದಿನ ಪದುಮಣ್ಣನು ಹೊರಡಲು ಸಿದ್ಧನಾಗುವನು. ಹೆಂಡತಿ ಲಿಂಗಮ್ಮ ಮತ್ತು ಮಕ್ಕಳೊಂದಿಗೆ ಹೊರಡುವನು.

ಕೆಲ ದಿನಗಳ ಕಳೆದಂತೆ ಶಾಂತಯ್ಯನಿಗೆ ಅವರ ತಂದೆ ರಾಕ್ಷಸಿಯಾದ ಸಿರಿವಂತೆಯ ಜೊತೆ ಜೀವನ ನಡೆಸುವುದು ಕಂಡು ಬೇಸರವಾಗಿ ನಾಲ್ಕು ಕುರಿಗಳ ಹಿಂಡನ್ನು ತೆಗೆದುಕೊಂಡ. ಹೆಂಡತಿಯ ಜೊತೆ ಬೇರೆ ಹೋಗಿ ಜೀವನ ನಡೆಸುವನು. ಶಿವನು ಶಾಂತಯ್ಯನ ಭಕ್ತಿಯನ್ನು ಪರೀಕ್ಷೆ ಮಾಡಲು ಲಕ್ಷ ಜಂಗಮರೊಂದಿಗೆ ಅವರಲ್ಲಿಗೆ ಬರುವರು. ಶಾಂತಯ್ಯ ದಂಪತಿಗಳು ಎಲ್ಲರಿಗೂ ಭಕ್ತಿಯಿಂದಲೇ ಕರಗ ಅಂಬಲಿಯನ್ನು ನೀಡಿ ಸಂತೃಪ್ತಿ ಪಡಿಸಿದರು. ಜಂಗಮರ ಸಂತೃಪ್ತಿಗೆ ಆನಂದಗೊಂಡು ಶಾಂತಯ್ಯನು ಚಕೋರ ಹೊಳೆಗೆ ಹೋಗಿ

"ಹೊಳೆಯೊಳು ನಿಂದು ಮಾರಹರ ಗತಿಯೆಂದು
ಶಿವನ ಪೂಜೆಯ ಮಾಡುತಿರಲು
ದಳದುಳಿಯಲಿ ಬಂಡಿ ನಡೆದು ಬರಲು ಕಂಡು
ತಾಳಿದ ಕೋಪವನಾಗ"(೩೮)

ಬಂಡಿಯಲ್ಲಿರುವವರು ಎದ್ದೇಳು ಎನ್ನುತ್ತಿರಲು ಶಾಂತಯ್ಯನು ಆರ್ಭಟಿಸಿದನು. ಕೋಪ ದಿಂದ ತಿರುಗಿ ಬಂಡಿಯನ್ನು ಕೆಂಗಣ್ಣಿನಿಂದ ನೋಡಿದ ತಕ್ಷಣ ಬಂಡಿಯು ತುಂಡು–ತುಂಡಾಗಿ ಬಿದ್ದಿತು. ಬಂಡಿಕಾರರು ಅದನ್ನು ನೋಡಿ ಅಂಜಿದರು. ಶಾಂತಯ್ಯನಿಗೆ ಕ್ಷಮೆಯಾಚಿಸಿ ನಮ್ಮಿಂದ ತಪ್ಪಾಗಿದೆ. ಏನು ಮಾಡಬೇಕು ಹೇಳಿ ಎಂದರು.

"ನಮ್ಮಯ್ಯ ಶಿವ ಸಿದ್ಧಯ್ಯನಿಗೆ
ದೇಗುಲ ಕಟ್ಟಿ ಹೇಳಿದನು"(೩೮)

ಅದಕ್ಕೆ ಅವರು ಒಪ್ಪಿದಾಗ ಬಂಡಿಗಳು ಮೊದಲಿನಂತಾಗಿ ಮುಂದೆ ಹೋದವು. ದೇಶ–ವಿದೇಶದಲ್ಲಿನ ಶಿಲ್ಪಕಾರರೆಲ್ಲರು ಬಂದು ಗುಡಿಯನ್ನು ನಿರ್ಮಿಸಿದರು. ಗುಡಿಯಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ದಿನಾಲು ಶಾಂತಯ್ಯನು ಭಕ್ತಿಯಿಂದ ಪೂಜಿಸುತ್ತಿದ್ದನು. ಇದನ್ನು ಪರಮೇಶ್ವರನು ಕಂಡು, ಅವನ ಭಕ್ತಿಗೆ ಮೆಚ್ಚಿ, ಪ್ರತ್ಯಕ್ಷನಾಗಿ ಯಾವ ವರ ಬೇಕು ಕೇಳು ಎಂದು ಹೇಳಿದ. ಶಾಂತಯ್ಯನು ನನಗೆ ಸಕಲ ಸೌಲಭ್ಯಗಳಿವೆ. ನನಗೆ ದೀಕ್ಷೆ ಬೇಕಾಗಿದೆ. ದೀಕ್ಷೆಯನ್ನು ನೀಡಿ ಎಂದು ವರ ಬೇಡಿದನು.

"ಧರೆಯೊಳು ನಿನಗೆಣೆವುಂಟೆನೋ ಮಹದೇವ
ಕರುಣಿಸು ಎನಗೊಂದು ವರವ
ಕರುಣಾಳು ರೇವಣ್ಣ ದೀಕ್ಷೆಮೋಕ್ಷವನಿತ್ತು
ಗುರುವಾಗಬೇಂದ ಶಾಂತ"(೩೯)

ಇದನ್ನು ಒಪ್ಪಿದ ಶಿವನು (ರೇವಣ್ಣಸಿದ್ಧ), ಪರಿಮಳವಾದ ಪುಷ್ಪಗಳಿಂದ ತೋರಣದಿಂದ, ಗಂಧಾಕ್ಷತೆಗಳಿಂದ, ನಾಲ್ಕು ದಿಕ್ಕುಗಳಿಗೆ ಪಂಡಿತಾರಾಧ್ಯ, ರೇವಣಾರಾಧ್ಯ, ಏಕೋರಾಮ, ಮರುಳಸಿದ್ಧ ಹೆಸರುಗಳಿಂದ ನಾಲ್ಕು ಕಳಸಗಳನ್ನು ಇಟ್ಟು, ದೀಕ್ಷೆಗೆ ಸಿದ್ಧತೆಯನ್ನು ನಡೆಸಿದರು. ಅಲ್ಲಿಯ ಶರಣರು ಶಾಂತಯ್ಯನಲ್ಲಿ ಶಿವನಿಗೆ ಕರಿಮಲ್ಲಿಗೆಯ ಪುಷ್ಪವನ್ನು ತಂದು ಪೂಜಿಸು ಎನ್ನಲು ಶಾಂತಯ್ಯನು ಶಿವನಲ್ಲಿ ಭಕ್ತಿಯಿಂದ ಬೇಡಲು, ಯಾವುದೇ ರೀತಿಯ ಉತ್ತರ ಬಾರದೆ ಇರಲು, ನನ್ನ ಭಕ್ತಿಯಲ್ಲಿ ದೋಷವಿರುವುದೆಂದು ಭಾವಿಸಿ, ಶಿರಚ್ಛೇದ ಮಾಡಿಕೊಳ್ಳುತ್ತಿರಲು, ಶಿವನು ಮೆಚ್ಚಿ ಕರಿಮಲ್ಲಿಗೆಯ ಮಳೆ ಸುರಿಸುವನು. ಅಲ್ಲಿನ ಶರಣರೆಲ್ಲರೂ ಅವನ ಭಕ್ತಿಗೆ ಪುಳಕಿತರಾದರು. ಅವತ್ತಿನಿಂದ ಈ ಸ್ಥಳವನ್ನು ಸರವೂರು ಎಂದು ಕರೆಯುವುದು ರೂಢಿಯಾಗಿದೆ. ಎಲ್ಲರೂ ಆನಂದದಿಂದ, ಭಕ್ತಿಯಿಂದ, ಹೋಮ, ಮಂತ್ರಗಳಿಂದ ಶಾಂತಯ್ಯನಿಗೆ ದೀಕ್ಷೆಯನ್ನು ನೀಡಿದರು. ಶಿವನು ಶಾಂತಯ್ಯನಿಗೆ ಇಂದಿನಿಂದ ನೀನು ಲಿಂಗಾಂಗಿಯಾಗಿದೀಯಾ. ಮುಂದಿನ ಜೀವನದಲ್ಲಿ ಎಲ್ಲರಿಗೂ ಒಳಿತನ್ನು ಮಾಡುತ್ತಾ ಜಯಶಾಲಿಯಾಗಿರು. ಮುಂದೆ ಪದುಮಣ್ಣನ ರಾಕ್ಷಸಿಯ ಮಕ್ಕಳು ನಿನ್ನ ಬಳಿ ಬಂದಾಗ ಅವರಿಗೆ ಉಣ್ಣೆಕಂಕಣ ರೆಂಬ ಕುಲವನ್ನು ನೀಡಿ ಕರುಣಿಸು, ನಿನ್ನ ಸಂತತಿಯವರನ್ನು ಹತ್ತಿಕಂಕಣದವರೆಂದು ಕರುಣಿಸು ಎಂದು ಹೇಳಿ ಮಾಯವಾದರು.

"ಉನ್ನತ ಕಲ್ಯಾಣದೊಳಗೊಬ್ಬ ಶರಣನು
ಕಿನ್ನರಯ್ಯನು ಇರುತಿರಲು
ಹೊನ್ನು ಹಣವನ್ನಿತ್ತು ಬಿಜ್ಜಳ ಮಡದಿಗೆ
ಚಿನ್ನವ ಮಾಡಿಕೊಡೆನಲು"(೪೪)

ಚಿನ್ನದ ವಿಷಯದಲ್ಲಿ ರಾಜನಿಗೆ ಕಿನ್ನರಯ್ಯನಿಗೆ ಮನಸ್ತಾಪ ಹುಟ್ಟಿ, ಆ ವೃತ್ತಿಯನ್ನು ತ್ಯಜಿಸಿ, ಕಿನ್ನರಿ ಭಾರಿಸಲು ಪ್ರಾರಂಭಿಸಿದನು. ತ್ರಿಪುರಾಂತಕ ದೇವಾಲಯದಿಂದ, ದಿನನಿತ್ಯ ಹನ್ನೊಂದು ಹಣ ಪಡೆದು ಜೀವನ ನಡೆಸುತ್ತಿದ್ದ. ಅದೇ ಗ್ರಾಮದಲ್ಲಿ ವಿಟನಾದ ಬೊಪ್ಪಯ್ಯ ಅಲ್ಲಿಯ ವೇಶ್ಯೆ ಚೆನ್ನಿ ಎಂಬುವಳಿಗೆ ತಗರು(ಮೇಷ)ನು ಖರೀದಿಸಿಕೊಂಡು ಬರುತ್ತಿರಲು, ಆ ತಗರು ತಪ್ಪಿಸಿಕೊಂಡು ತ್ರಿಪುರಾಂತಕ ದೇವಾಲಯದ ಒಳಗೆ ಪ್ರವೇಶಿಸುತ್ತದೆ. ಪ್ರವೇಶಿಸಿದ ತಗರನ್ನು ಬ್ರಹ್ಮಯ್ಯನು ಎರಡುಪಟ್ಟು ಹಣಕೊಟ್ಟು, ಖರೀದಿಸಿ ಆ ತಗರಿಗೆ ಲಿಂಗಮುದ್ರೆಯನ್ನು ಒತ್ತುವನು. ಇದನ್ನು ತಿಳಿದ ವೇಶ್ಯೆ ಚೆನ್ನಿಯು ನನಗೆ ಹಣಬೇಡ. ಆ ತಗರೇ ಬೇಕೆಂದು ಹಠ ಮಾಡಿದಳು. ಬೊಪ್ಪಯ್ಯನು ದೇವಾಲಯದ ಬಳಿ ಹೋಗಿ ಕಿನ್ನರಿ ಬ್ರಹ್ಮಯ್ಯನಿಗೆ ಹಣ ತೆಗೆದುಕೊಂಡು ತಗರು ಕೊಡಲು ಕೇಳಿದನು. ಅದಕ್ಕೆ ಬ್ರಹ್ಮಯ್ಯ ನಿರಾಕರಿಸಿದನು. ವಿಷಯವು

ಚೆನ್ನಿಗೆ ತಿಳಿದು, ಅವಳ ತಮ್ಮಂದಿರನ್ನು ಕಳುಹಿಸುತ್ತಾಳೆ. ಅವರಲ್ಲಿ ದೊಡ್ಡದಾದ ಜಗಳವೇ ಸಂಭವಿಸಿ ಕಿನ್ನರಯ್ಯನಿಂದ ಚೆನ್ನಿಯ ತಮ್ಮಂದಿರು ಮರಣ ಹೊಂದಿದರು. ದುಃಖಿತಳಾದ ಚೆನ್ನಿಯು ಬಿಜ್ಜಳನಲ್ಲಿಗೆ ಹೋಗಿ ದೂರು ನೀಡುವಳು.

"ಕೇಳಯ್ಯ ಬಿಜ್ಜಳ ಹಾಳಾಯ್ತು ಪಟ್ಟಣ
ಹೇಳಿಕೇಳುವವರಾರುಯಿಲ್ಲ
ಮೇಳದ ಚೆನ್ನಿ ನಾ ಕೋಳ್ಕೊಟ್ಟೆ ತಮ್ಮ ನಾ
ಆಳುವ ದೊರೆ ಸತ್ತ ಕಾಣೊ"(೫೨)

ಚೆನ್ನಿಯ ದುಃಖವನ್ನು ಅರಿತು ಬಸವಣ್ಣನು ಯಾರಮ್ಮ ನಿನ್ನ ತಮ್ಮನವರನ್ನು ಹೊಡೆದವರು. ಅವರನ್ನು ನಾ ಈ ಕ್ಷಣವೇ ಶಿಕ್ಷಿಸುವೆನು. ಹೆದರಬೇಡ. ಬಿಡು ನಿನ್ನ ದುಃಖವನು ಎನ್ನುತ್ತ, ಆಸ್ಥಾನದ ಚರರಿಗೆ (ಸೇವಕರಿಗೆ–ಸೈನಿಕರಿಗೆ) ಬೇಗನೆ ಹೋಗಿ ಕಿನ್ನರಿ ಬ್ರಹ್ಮಯ್ಯನನ್ನು ಕರೆತನ್ನಿ ಎಂದು ಆಜ್ಞಾಪಿಸುವನು. ಎಲ್ಲ ಸೈನಿಕರು, ಗಜದಳ, ಅಶ್ವದಳ ಜೊತೆಗೆ ದೇವಾಲಯದ ಕಡೆಗೆ ನಡೆದರು. ಅವರನ್ನು ಕಂಡ ಕಿನ್ನರಿ ಬ್ರಹ್ಮಯ್ಯ ಖಡ್ಗವನ್ನು ಹಿಡಿದು, ಶಿವನಲ್ಲಿ ಪ್ರಾರ್ಥಿಸಿ, ಕರುಣಿಸು ಎಂದು ಚರಣಕ್ಕೆ ನಮಸ್ಕರಿಸಿ ಅವರೊಂದಿಗೆ ಯುದ್ಧ ಮಾಡುವನು. ಯುದ್ಧದಲ್ಲಿ

"ಕೊರಳು ಹರಿದು ಮುಂಡ ಉರುಳಿತು ಪರಿವಾರ
ಹೊರುಳತ್ತ ಹಲ್ಲ ಗಿರಿಯುತಲಿ
ಕರುಳ ಕತ್ತರಿಸಿ ಕೈಕಾಲ ಬೆರಳ್ಗಳ ಕಡಿದು"(೫೭)

ಉರುಳಿ ಬಿದ್ದವು ರಣದೊಳಿಗೆ ಸೈನಿಕರಲ್ಲಿ ಕೆಲವರು ಸತ್ತರು, ಕೆಲವರು ಕೈಕಾಲು ಕಳೆದುಕೊಂಡು ನರಳುತ್ತಾ ಬಸವನಲ್ಲಿ ಬಂದು ವಿಷಯವನ್ನು ತಿಳಿಸುವರು. ಬಿಜ್ಜಳ ಆಶ್ಚರ್ಯವಾಗಿ, ಈ ವಿಷಯವನ್ನು ಬಸವಣ್ಣನಲ್ಲಿ ಹೇಳಲು, ಚರರಿಂದ (ಸೈನಿಕರಿಂದ) ಹೇಳಿ ಕಳುಹಿಸುವರು.

ಬಿಜ್ಜಳನು ಎಲ್ಲ ವಿಷಯವನ್ನು ಬಸವಣ್ಣನಲ್ಲಿ ವ್ಯಕ್ತಪಡಿಸಿದಾಗ ಬಸವಣ್ಣನು ಕಿನ್ನರಿ ಬ್ರಹ್ಮಯ್ಯನ ಪರವಾಗಿ ಮಾತನಾಡಲು ನಿಜವನ್ನು ತಿಳಿದುಕೊಳ್ಳಲು ಕೊಂಡೆಯ ಮಂಚಣ್ಣನನ್ನು ಬ್ರಹ್ಮಯ್ಯನಲ್ಲಿಗೆ ಹೇಳಿ ಕಳುಹಿಸುತ್ತಾರೆ. ಸತ್ಯವನ್ನೆಲ್ಲ ತಿಳಿದ ಮಂಚಣ್ಣ ಮರಳಿ ಬಂದು, ಈ ಪ್ರತಿಯೊಂದನ್ನು ವಿವರವಾಗಿ ರಾಜನಲ್ಲಿ ವಿಜ್ಞಾಪಿಸುತ್ತಾನೆ. ಸ್ವತಃ ನಿಜಸಂಗತಿಯನ್ನು ಅರಿಯಲು ಬಿಜ್ಜಳ, ಬಸವಣ್ಣನವರೆಲ್ಲರು ತ್ರಿಪುರಾಂತಕ ದೇವಾಲಯಕ್ಕೆ ಬರುವರು. ವಿಷಯವನ್ನು ತಿಳಿದ ಬಿಜ್ಜಳನ ಮಾತಿಗೆ ಕಿನ್ನರಿಯು ನನಗೆ ಸಾಕ್ಷಿಯಾಗಿ ಶಿವನಿರುವನು ಬೇಕೆಂದರೆ ಅದನ್ನು ನಿರೂಪಿಸುತ್ತೇವೆಂದು ಹೇಳಿ,

"ನನಗಿಲ್ಲ ಕೀರ್ತಿ, ಅಪಕೀರ್ತಿ ನಿಮ್ಮದುಯೆಂದು
ಚಿನ್ಮಯ ಶರಣಾವತಾರ
ನೆನವಿನೊಳಿಹ ಪರಮಾತ್ಮ ನೀನುಳಿಸೆ(ನ್ನ)
ವಿನಯದ ನುಡಿಯ ಪಾಲಿಪುದು"(೬೧)

ಎಂದು ಕಿನ್ನರಿ ಬ್ರಹ್ಮಯ್ಯನು ಶಿವನಲ್ಲಿ ಪ್ರಾರ್ಥಿಸಲು, ಶಿವಲಿಂಗವು "ನಿರುತವಹುದು ಮೇಷನ ಕೊಂಡದ್ದೆನುತಲಿ ಎಂಟೆಂಟು ಬಾರಿಗೆ ಉಂಟು" ಎಂದು ನುಡಿಯಿತು. ಇದಕ್ಕೆ ಬೆರಗಾದ ಬಿಜ್ಜಳನು "ನಿಮ್ಮಯ ಶರಣರು ಘನ ಮಹಿಮೆಯುಳ್ಳವರು" ಎಂದು ಬಸವಣ್ಣನಲ್ಲಿ ಹೇಳುತ್ತಾ, ಕಿನ್ನರಿ ಬ್ರಹ್ಮಯ್ಯನಿಗೆ ಕೈಮುಗಿದು, ಬಸವಣ್ಣ ಸಹಿತನಾಗಿ ಅರಮನೆಗೆ ಬರುವರು. ಅಂದಿನಿಂದ ಆ ತಗರಿಗೆ ಪುರಜನರೆಲ್ಲ ಪೂಜಿಸತೊಡಗಿದರು.

"ಒಂಬತ್ತು ಹುರಿಯ ಚಿನ್ನದ ಮುಖವಾಡವು
ಕೊಂಬು ಕೊಂಬಿಗೆ ಕೋಡಣಸು
ತುಂಬಿದ ಕೊರಳ ಪದಕದಿಂದ ಮೇನು
ಶಂಭುಯೆನಿಸಿ ಕೊಂಡಿಹುದು"(೬೩)

ಆಗಿನಿಂದ ತಗರಿಗೆ 'ಶಂಭು' ಎಂದು ಪ್ರೀತಿಯಿಂದ ಕರೆಯತೊಡಗಿದರು. ಶಂಭು ಪ್ರತಿನಿತ್ಯ ಮನೆ–ಮನೆಗೆ ಎಲ್ಲರೂ ನೀಡಿದನ್ನು ತಿಂದು, ಕೊಬ್ಬಿ ಬೆಳೆಯಿತು. ಕಂಡ–ಕಂಡವರಿಗೆ ಇರಿಯ ತೊಡಗಿತು. ದೇವಾಲಯದಲ್ಲಿ ಕಿನ್ನರಿ ಬ್ರಹ್ಮಯ್ಯ ಮಾಡಿದ ಲಿಂಗ ಪೂಜೆಯ ಅಲಂಕಾರವನ್ನು ಕೆಡಿಸತೊಡಗಿತು. ಶಂಭುವಿನಿಂದ ಬೇಸತ್ತ ಜನರು ಕಿನ್ನರಿಯು ಇದು ಊರಿನಲ್ಲಿ ಇರಬಾರದು, ಕುರಿಯ ಹಿಂಡಿನಲ್ಲಿರಬೇಕೆಂದು ನಿರ್ಧರಿಸಿ, ಶಾಂತಯ್ಯನಲ್ಲಿ ಬಿಟ್ಟು ಬಂದರು. ಅಂದಿನಿಂದ ಅದರ ಜವಾಬ್ದಾರಿಯು ಶಾಂತಯ್ಯನಿಗೆ ಬಂದಿತು.

ಊರಿನಲ್ಲಿ ಇದ್ದ ಕುರುಬರು ಬದುಕು ನಿರ್ವಹಿಸಲು ಹಾಲು, ಮೊಸರು ಮಾರಿಕೊಂಡು ಜೀವಿಸುತ್ತಿದ್ದರು. ಇವರ ಭಕ್ತಿಯನ್ನು ಪರೀಕ್ಷಿಸಲು ಶಿವನು ಮಲ್ಲಶೆಟ್ಟಿ, ಸಿದ್ಧಶೆಟ್ಟಿ ಎಂಬ ನಾಮದಿಂದ ಕಲ್ಯಾಣದಲ್ಲಿ ವ್ಯಾಪಾರ ಪ್ರಾರಂಭಿಸಿದರು. ಅಲ್ಲಿಯೇ ವ್ಯಾಪಾರಸ್ಥನಾದ ಗಂಗಿಶೆಟ್ಟಿಯು ಇವರನ್ನು ಯಾರೆಂದು ವಿಚಾರಿಸಲು, ನಾವು ಕಡವಾಡದಿಂದ ಇಲ್ಲಿಗೆ ಬಂದಿದ್ದೇವೆ ಎಂದು ವ್ಯಾಪಾರ ಮುಂದುವರೆಸಿದರು. ಕುರುಬರು ಹಾಲು ಮತ್ತು ಮೊಸರಿನೊಂದಿಗೆ, ಸತ್ತ ಕುರಿಯನ್ನು ಮಾರುತ್ತಿರುವವರೆಂದು, ಊರಿನ ಜನರೆಲ್ಲರಿಗೂ ಹೇಳಿ, ಕುರುಬರನ್ನು ಊರಿನಿಂದ ಹೊರ ಹಾಕಿಸಿದರು. ಕುರುಬರು ಬೇರೆ ದಾರಿ ಕಾಣದೆ ಕಲ್ಯಾಣದಿಂದ ಒಂದು ಮೈಲು ದೂರದ ಅಡವಿಯಲ್ಲಿ ಸುಮಾರು ೧೨ ವರ್ಷಗಳಿಂದ ವಾಸಿಸುತ್ತಿರುತ್ತಾರೆ. ಇವರ ಕಷ್ಟಗಳನ್ನು ನೋಡಲಾರದೆ

ಶಿವ ಸಿದ್ಧಶೆಟ್ಟಿಯ ವೇಷಧಾರಿಯಾಗಿ ಮಲ್ಲಿಗೌಡನ ಹತ್ತಿರ ಬಂದು ವಿಚಾರಿಸಲು, ಮಲ್ಲೀಗೌಡ ನಾವು ೧೨ ವರ್ಷಗಳಿಂದ ಅಡವಿಯಲ್ಲಿಯೇ ಜೀವಿಸುತ್ತಿದ್ದೇವೆ. ನಮ್ಮ ಕಷ್ಟಕ್ಕೆ ಯಾರೂ ಬರಲಿಲ್ಲ. ನಮಗೆ ಯಾವ ನಾಯಕತ್ವ, ಗುರುಗಳೂ ಇಲ್ಲ ಎಂದು ದುಃಖಿಸುತ್ತಿರುವಾಗ, ಸಿದ್ಧಶೆಟ್ಟಿಯು ಸರವೂರೆಂಬ ಹಳ್ಳಿಯಲ್ಲಿ ಶಾಂತಯ್ಯನೆಂಬುವ ವ್ಯಕ್ತಿ ಇದ್ದಾನೆ. ಅವನ ಬಳಿ ಹೋಗಿ, ನಿಮ್ಮ ಕಷ್ಟಗಳನ್ನು ಹೇಳಿಕೊಳ್ಳಿ, ಅವನು ನಿಮ್ಮ ಕಷ್ಟಗಳನ್ನೆಲ್ಲಾ ಪರಿಹರಿಸುತ್ತಾನೆ. ಚಿಂತಿಸಬೇಡಿ. ಅವರಲ್ಲಿ ಹೋಗಿ ಭಕ್ತಿಯಿಂದ ವಿಜ್ಞಾಪಿಸಿಕೊಳ್ಳಿ ಎಂದು ತಿಳಿಸಿ ಹೋಗುವನು. ಇದರಂತೆ ಮಲ್ಲಿಗೌಡನು ಸರೂರಿನ ಶಾಂತಯ್ಯನ ಬಳಿ ಹೋಗಿ ತಮಗಾದ ಅನ್ಯಾಯವನ್ನು ಕಷ್ಟವನ್ನು ವಿವರವಾಗಿ ತಿಳಿಸುವನು. ಇವರಿಬ್ಬರ ನಡುವೆ ಮಾತುಕತೆ ನಡೆಯುತ್ತಿರುವಾಗಲೇ ಚಿಕ್ಕ ಎಂಬ ವ್ಯಕ್ತಿ ಬಂದು ಕಿನ್ನರಿ ಬ್ರಹ್ಮಯ್ಯ ಕೊಟ್ಟ ಶಂಭು ತಗರು ಸತ್ತಿರುವ ಸುದ್ಧಿ ತಿಳಿಸಿದ. ಶಾಂತಯ್ಯನು ಈ ಸಂದರ್ಭವನ್ನು ಉಪಯೋಗಿಸಬೇಕೆಂದು ಸತ್ತ ಶಂಭುವಿಗೆ ಅಲಂಕಾರ ಮಾಡಿ, ಮೆರವಣಿಗೆಯನ್ನು ಮಾಡುತ್ತಾ, ಕಲ್ಯಾಣಕ್ಕೆ ಪ್ರವೇಶಿಸುವರು.

> "ಎಪ್ಪತ್ತ ಏಳ್ನೂರು ಅಮರಗಣಂಗಳು
> ತಪ್ಪದೆ ಹಾದಿ ಅರಸುತರಲಿ
> ಕಲ್ಯಾಣದ ರಾಜವೀದಿಯೋಳ್ ಬರುತಿರೆ
> ಮಲ್ಲಿಶೆಟ್ಟಿಗಳು ತಡೆದರು"(೭೪)

ಇದರಿಂದ ಶಾಂತಯ್ಯನು ಕೋಪಗೊಂಡು "ಬಸವ ಹುಟ್ಟಲು ತೀರ್ಥ ಪ್ರಸಾದವಾದವು" ಎಂದು ಸತ್ತ ತಗರನ್ನು ಮತ್ತೆ ಹುಟ್ಟಿಸುತ್ತೇನೆ ಎಂದು ಶಿವನ ಭಕ್ತನಾದ ಶಾಂತಯ್ಯನು ಎಲ್ಲರ ಎದುರು ಪವಾಡಕ್ಕೆ ಸಿದ್ಧನಾದನು. ಈ ಪವಾಡವನ್ನು ವೀಕ್ಷಿಸಲು

> "ಚೆನ್ನಬಸವರಾಜ, ಕಿನ್ನರಿ ಬ್ರಹ್ಮಯ್ಯ
> ಸೊನ್ನಲಿಗೆಯ ಸಿದ್ಧರಾಮ
> ಚೆನ್ನಯ್ಯ ಹೊನ್ನಯ್ಯ ಕನ್ನದ ಮಾರಯ್ಯ
> ಉನ್ನತ ಶರಣರೈದಿದರು"(೭೬)

ಬಸವಣ್ಣನವರೊಂದಿಗೆ ಎಲ್ಲರು ಸೇರಿ ವೀಕ್ಷಿಸುತ್ತಿದ್ದರು. ಬಿಜ್ಜಳ, ಕೊಂಡೆಮಂಚಣ್ಣ ಇತರರು ಸೇರಿ ಈ ಪವಾಡ ವಿಫಲವಾಗುತ್ತದೆ ಎಂದು ಮಾತನಾಡುವುದನ್ನು ಬಸವಣ್ಣ ಕೇಳಿ, " ಶರಣರ ಕರುಣೆ ಇದ್ದರೆ ಪವಾಡವನ್ನು ಗೆಲ್ಲಬಹುದು" ಎಂದು ಸಮಾಧಾನ ಪಡಿಸುತ್ತಾನೆ. ಬಸವಣ್ಣನು ಶಾಂತಯ್ಯನ ಬಳಿ ಹೋಗಿ, ಹಣೆಗೆ ಭಸ್ಮವನ್ನಿಟ್ಟು, ಆಶೀರ್ವದಿಸುತ್ತಾನೆ. ಶಾಂತಯ್ಯನ ಭಕ್ತಿಯಿಂದ ರೇವಣಸಿದ್ದನನ್ನು (ಶಿವ) ಸ್ಮರಿಸಿ, ತಗರಿಗೆ ಭಸ್ಮವನ್ನು ಹಚ್ಚಿ, ತೀರ್ಥ ಪ್ರಸಾದವನ್ನು

ತಗರಿನ ಮೇಲೆ ಎರಚಲು, ಸತ್ತ ಶಂಭು ಮೇಲೆ ಏಳುತ್ತದೆ. ಪವಾಡ ಕಂಡ ಬಿಜ್ಜಳನು ಶಾಂತಯ್ಯನ ಮಹಿಮೆಯನ್ನು ಮನಸಾರೆ ಹೊಗುಳುತ್ತಾನೆ. ಬಸವಣ್ಣನು ಶಾಂತಯ್ಯನ ಮಹಿಮೆ ಕುರಿತು ಹೊಗಳುತ್ತಾ, ಏನು ಬೇಕು ಕೇಳು ಎಂದನು. ಶಾಂತಯ್ಯನು ನನಗೆ ಏನೂ ಬೇಡ, ಬಹಿಷ್ಕರಿಸಿದ ಕುರುಬರನ್ನು ಗ್ರಾಮಕ್ಕೆ ಪ್ರವೇಶಿಸುವಂತೆ ಅವಕಾಶ ಮಾಡಿಕೊಡಿ, ಕುರುಬರ ಕುಲವನ್ನು ಉದ್ಧರಿಸಿ ಎಂದು ಕೇಳಿಕೊಂಡನು. ಬಸವಣ್ಣನು ಶಾಂತಯ್ಯನ ನಿಸ್ವಾರ್ಥಕ್ಕೆ ಬೆರಗಾಗಿ ಕುರುಬರಿಗೆ ಗ್ರಾಮಕ್ಕೆ ಪ್ರವೇಶ ನೀಡಿದರು. ಕಲ್ಯಾಣಕ್ಕೆ ಕುರುಬರೆಲ್ಲರು ಆನಂದದಿಂದ ಬರತೊಡಗಿದರು. ಬಸವಣ್ಣನು ಶಾಂತಯ್ಯನ ಒಳ್ಳೆ ಮನಸ್ಸಿಗೆ 'ಮೂರೇಣಿನ ಕಂಥೆಯನ್ನು ಕೊಡುತ್ತಾನೆ. ಬಸವಣ್ಣ ಮತ್ತು ಬಿಜ್ಜಳ ರಾಜರು ಪವಾಡವನ್ನು ನೋಡಿ ಶಾಂತಯ್ಯನು ಕುರುಬ ಜನಾಂಗಕ್ಕೆ ಒಡೆಯನಾಗೆಂದು ಹಾರೈಸುತ್ತಾರೆ.

"ನಿಮ್ಮ ಕುಲಕ್ಕೆ ನೀನು ಗುರುವಾಗಿ ಸ್ಥಿರಕಾಲ
ಸುಮ್ಮಾನದಲಿ ಬಾಳುಯೆಂದು
ನಿರ್ಮಲ ಹೃದಯ ಬಸವರಾಜ ಹರಕೆಯ
ಕೊಟ್ಟು ಕಲ್ಯಾಣಕ್ಕೆ ನಡೆಯ"(೯೭)

ಕಲ್ಯಾಣದಿಂದ ಶಾಂತಯ್ಯ ಎಲ್ಲರೊಂದಿಗೆ, ಸರವೂರಿಗೆ ಬರುವರು. ಈ ವಿಷಯ ತಿಳಿದ ಸಂಗಮ್ಮಾಜಿಯು, ಅವರನ್ನು ಆದರದಿಂದ ಸ್ವಾಗತಿಸಿದರು. ಶರಣರ ಪಾದ ಪೂಜೆ ಮಾಡಿ, ಬಸವಣ್ಣನರು ಲಿಂಗಪೂಜೆಯನ್ನು ಮಾಡಿ ಪ್ರಸಾದವನ್ನು ಸ್ವೀಕರಿಸಿ, ಬಸವಣ್ಣನವರು ಶಾಂತಯ್ಯನಿಗೆ ಕುರುಬ ಜನಾಂಗಕ್ಕೆ ಒಡೆಯನಾಗೆಂದು ಹಾರೈಸುತ್ತಾನೆ.

ತದನಂತರ ರೇವಣಸಿದ್ದರು ಶಾಂತಯ್ಯನಿಗೆ ಉತ್ತಮ ಪದವಿಯನ್ನು ಕೊಟ್ಟರು. ಹೂ ಮಳೆಯಿಂದ ಶಾಂತಯ್ಯನಿಗೆ ಭಕ್ತಿಯಿಂದ ಬೇಡಿ ಎಲ್ಲರೂ ಕಲ್ಯಾಣಕ್ಕೆ ಹೊರಟರು. ಮುಂದಿನ ದಿನಗಳಲ್ಲಿ ಶಾಂತಯ್ಯನು ಸರ್ವರಿಗೂ ಒಳಿತನ್ನು ಮಾಡುತ್ತಾ, ಸರ್ವಸೇವೆಯಲ್ಲಿ ಜೀವನವನ್ನು ಕಳೆದರು. ಕೊನೆಯದಾಗಿ ತಗರ ಪವಾಡದಿಂದ ಹಾಲುಮತ ಕುಲಕ್ಕೆ ಉತ್ತಮ ಸ್ಥಾನ-ಮಾನ ದೊರೆತು ಗೌರವವಾಗಿ ಬಾಳಲು ಅವಕಾಶವಾಯಿತು.

೫. ಹಾಲುಮತ ಪುರಾಣ ಅಥವಾ ಮುದ್ದಲಿಂಗೇಶ್ವರ ಚರಿತ್ರೆ

ಅಂಬಾಸುತರು ರಚಿಸಿದ ಮುದ್ದಲಿಂಗೇಶ್ವರ ಚರಿತ್ರೆಯು ೧೮ ಅಧ್ಯಾಯಗಳನ್ನು ಒಳಗೊಂಡ ಭಾಮಿನಿ ಷಟ್ಪದಿಯ ಕಾವ್ಯವಾಗಿದೆ.

"ದೂರದಿಂದಲಿಯೆ ನೋಡಲದನು
ಬಾರಿ ಬಂಡೆಯ ಪರಿಲಿ ಕಾಣುತ

ನಾರಿಯೋರ್ವಳು ಭೊಗಗನರೊಂದಾಗಿ ನಿಂತವಳ
ಸೀರೆ ಸೆರಗಿನ ನರಿಗೆಗಳೆಲ್ಲ
ಜಾರಿ ನೆಲಕರಡಿರುವ ಪರಿಯಲಿ
ಬಾರಿ ಮಂಜದು ಮುಸುಕಿರುವ ಹಿಮಗಿರಿಯ ಬೆಟ್ಟಗಳು"(೪)

ಕೈಲಾಸದ ವರ್ಣನೆಯೊಂದಿಗೆ ಈ ಕಾವ್ಯವು ಆರಂಭವಾಗುತ್ತದೆ. ಶಿವ ಪಾರ್ವತಿಯರು ಆನಂದದಿಂದ ಮೈಮರೆತು ನಾಟ್ಯ ಮಾಡುತ್ತಿದ್ದರು. ದಕ್ಷ ಬ್ರಹ್ಮನು ವೈಕುಂಠಕ್ಕೆ ಹೋಗಿ ಲಕ್ಷ್ಮಿಯನ್ನು ಕಂಡು ಅವರ ಗೌರವಗಳನ್ನೆಲ್ಲಾ ಸ್ವೀಕರಿಸಿ ಕೈಲಾಸಕ್ಕೆ ಬರಬೇಕೆಂದು ಕೈಲಾಸಕ್ಕೆ ಬಂದರು. ಆದರೆ ಶಿವ ಪಾರ್ವತಿಯು ನಾಟ್ಯದಲ್ಲಿಯೇ ತನುಮನಗಳನ್ನು ಮೀರಿ ಆನಂದಿಸುತ್ತಿದ್ದರು. ದಕ್ಷ ಬ್ರಹ್ಮನನ್ನು ನೋಡಲೇ ಇಲ್ಲ. ಕುಪಿತನಾದ ದಕ್ಷಬ್ರಹ್ಮನು ತನ್ನ ನಿವಾಸಕ್ಕೆ ಹೋಗಲು ಸಿದ್ಧನಾದಾಗ, ನಂದಿಯು ಕೋಪಗೊಳ್ಳಬೇಡಿ ನಿಮ್ಮ ಮಗಳನ್ನು ಮಾತನಾಡಿಸಿಕೊಂಡು ಹೋಗಿ ಎಂದರು. ಆದರೂ ದಕ್ಷಬ್ರಹ್ಮ ನಂದಿಯ ಮಾತನ್ನು ಕೇಳದೇ ಕುಪಿತನಾಗಿ ಹೊರಟು ಹೋಗುವನು. ಶಿವ ಪಾರ್ವತಿಯರು ನಾಟ್ಯವಾಡಿದ ಮೇಲೆ ನಂದಿಯು ದಕ್ಷಬ್ರಹ್ಮನ ಬಗ್ಗೆ ತಿಳಿಸಿದನು. ಪಾರ್ವತಿಯು ಬೇಸರಗೊಂಡಳು.

ಬೇಸರಗೊಂಡ ದಕ್ಷಬ್ರಹ್ಮನು ನಾನು ಬಹುದೊಡ್ಡ ಯಜ್ಞವನ್ನು ಮಾಡುವೆ, ಯಜ್ಞಕ್ಕೆ ಪ್ರತಿಯೊಬ್ಬ ದೇವಾನುದೇವತೆಗಳನ್ನೆಲ್ಲ ಆಹ್ವಾನಿಸುವೆ. ಆದರೆ ಶಿವ ಪಾರ್ವತಿಯನ್ನು ಆಹ್ವಾನಿಸುವುದಿಲ್ಲ.

"ಪರಶಿವ ಪಾರ್ವತಿಯರನು ಕರೆಯ
ದಿರಲಹಕೇಳಿ ಪಾರ್ವತಿಯರ ನಾ
ನೊರಡುವೆನು ಅಪ್ಪ ಮಾಡುತಿರುವ ಯಜ್ಞಕೆ ನಲದಕೆ
ಪರಶಿವನು ಬೇಡ ಪಾರ್ವತಿ ನೀ
ನೊರಡುವುದು ಬೇಡ ಹೋದೆಯಾದ
ರಿರದು ನಿನಗಲ್ಲಿ ಸ್ಥಾನವೆಂದು ಪರಿಪರಿ ಹೇಳಿದರು"(೭)

ಶಿವನು ಪಾರ್ವತಿಯನ್ನು ನೀನು ಯಜ್ಞಕ್ಕೆ ಹೋಗಬೇಡವೆಂದರೂ ಕೇಳದೆ ಪಾರ್ವತಿಯು ಹಠಮಾಡಿ ಹೋದಳು. ದಕ್ಷಬ್ರಹ್ಮನ ಅರಮನೆಯಲ್ಲಿ ಪಾರ್ವತಿಯನ್ನು ಯಾರೂ ಮಾತನಾಡಿಸದೇ ಇರುವುದರಿಂದ ಪಾರ್ವತಿಯು ತಂದೆಯನ್ನು ಮಾತನಾಡಿಸುವೆನೆಂದು, ಯಜ್ಞ ಮಾಡುವ ಜಾಗಕ್ಕೆ ಹೋಗಿ ಮಾತನಾಡಿಸಲು, ದಕ್ಷಬ್ರಹ್ಮನು ಅವಳನ್ನು ಮತ್ತು ಶಿವನನ್ನು ಅವಮಾನಿಸುವನು.

ಇದರಿಂದ ಕುಪಿತಳಾದ ಪಾರ್ವತಿಯು ಯಜ್ಞ ಕುಂಡಲಿಯೊಳಗೆ ಹಾರಿ ಹೋದಳು. ಪಾರ್ವತಿಯ ಹಿಂದೆ ಬಂದಿದ್ದ ನಂದಿಯು ನಡೆದ ವಿಷಯಗಳನ್ನೆಲ್ಲಾ ಶಿವನಲ್ಲಿ ಹೇಳಿದಾಗ,

'ಕಲ್ಲಿಗೆನ್ನಯ ಜಟಿಯ ಬಡಿಯಲು
ಚಲ್ಲನೆ ಚಿಮ್ಮಿದ ವೀರಭದ್ರನು
ಯಲ್ಲಿ ನನ್ನಯ ಶತ್ರುವೆನ್ನುತ ಶಿವನ ಪಾದಕೆರಗಿ'(೯)

ವೀರಭದ್ರನು ದಕ್ಷಬ್ರಹ್ಮನನ್ನು ಸಂಹರಿಸಲು ಕೋಪಾಗ್ನಿಯಾಗಿ ಹೊರಡುವನು. ಕೋಪದಿಂದಲೇ ಅರಮನೆಗೆ ಬಂದ ವೀರಭದ್ರನು ಎಲ್ಲರನ್ನು ಹೊಡೆಯುತ್ತಾ, ಬಡಿಯುತ್ತಾ, ದಕ್ಷಬ್ರಹ್ಮನ ತಲೆಗೂದಲನ್ನೇ ಹಿಡಿದು ರುಂಡವನ್ನು ಕತ್ತರಿಸಿ, ಹಾಕಲು ದಕ್ಷಬ್ರಹ್ಮನ ಹೆಂಡತಿ, ಶಿವನ ಪಾದಕ್ಕೆ ನಮಸ್ಕರಿಸಿ ನನ್ನ ಪತಿಯ ಜೀವವನ್ನು ಉಳಿಸಿ ಎಂದು ಬೇಡಿಕೊಳ್ಳಲು, ಕುರಿಗಳ ಹಿಂಡುಗಳಲ್ಲಿನ ಗಂಡು ಕುರಿಯ ತಲೆಯನ್ನು ಕಡಿದಾಗ, ಹೆಣ್ಣು ಕುರಿಯು ನನಗೂ ಮೋಕ್ಷ ಕೊಡಿ ಎಂದು ಗೋಳಾಡುತ್ತಿರಲು, ಶಿವನು ಸಂತಾನವಾಗುವವರೆಗೂ ನೀವು ಜೊತೆಯಾಗಿ ಇರಿ ಎಂದು ಹೇಳಿ ಹೋಗುತ್ತಿರಲು. ಹಿಮಂತರಾಜನು, ನನ್ನನ್ನು ಕ್ಷಮಿಸಿ ಎಂದನು. ಪಾರ್ವತಿಯು ಯಜ್ಞಕುಂಡದಲ್ಲಿ ಹಾರಿದಾಗ ನಾನು ಅವಳನ್ನು ರಕ್ಷಿಸಿ ಇಟ್ಟಿದ್ದೇನೆ. ದಕ್ಷಬ್ರಹ್ಮನ ಗರ್ವಭಂಗವನು ಮಾಡಲೆಂದು.

"ಶಿವನು ಹರಿಸಿದ ಕುರಿಗೆ ಮರಿಗಳ
ಲವು ಜನಿಸಿದವುಗಳ ಹಿಂಡು ಹೆಚ್ಚಿ
ಅವು ಬರಿ ಒಂದೆರಡಾಗದೆ ನೂರು ಸಾವಿರವಾಗಿ
ಅವುಗಳನು ನಾನೇಗೆ ಸಾಕಲಿ
ಶಿವನೆ ಯವುಗಳ ಸಾಕು ಮಾಡೆನು
ತವನೆ ಮೊರೆಹೊಕ್ಕಿರಲು ಕುರಿಯದನು ಕಂಡು ಶಿವನು"(೧೨)

ಶಿವನು ಕುರಿಯ ಮಾತನ್ನು ಕೇಳಿ ನಗುತ, ನೀನೆ ಮುಕ್ತಿಯನ್ನು ಬೇಡಿರುವೆ. ಮತ್ತೆ ಸಾಕು ಎಂದು ನೀನೆ ಕೇಳುತ್ತಿರುವೆಯಾ ಎಂದು ನಗುವನು. ಶಿವನು ಕುರಿಯ ಮಾತನ್ನು ಕೇಳಿ ಅದಕ್ಕೆ ಒಪ್ಪಿ, ಅವುಗಳ ರಕ್ಷಣೆಗೆ ವೀರಭದ್ರನನ್ನು ನೇಮಿಸಿ, ಹೋಗುವನು. ವೀರಭದ್ರನು ಅವುಗಳನ್ನು ಕಾಯ್ದು, ಬೇಸತ್ತು ಹಾವಿನ ಹುತ್ತದಲ್ಲಿ ಹಾಕಿದನು. ನಿಮ್ಮ ಯಜಮಾನನು ಬರುವವರೆಗೂ ಇಲ್ಲಿಯೇ ಇರಿ ಎಂದು ಹೇಳಿ ಸಾಕಾಗುವಷ್ಟು ಆಹಾರವನ್ನು ಅಲ್ಲಿ ಇರಿಸಿ ಕೈಲಾಸಕ್ಕೆ ಹೋಗುವನು. ಶಿವ ಪಾರ್ವತಿಯರು ನಿಸರ್ಗದ ಸೊಗಸನ್ನು ಅನುಭವಿಸಲು ಭೂಲೋಕಕ್ಕೆ ಬಂದು ಸಂತೋಷದಿಂದ ಇರಲು, ಪಾರ್ವತಿಯ ಎದೆಯ ಹಾಲಿನಿಂದ ೨

ಮಣ್ಣಿನ ಗೊಂಬೆಗಳನ್ನು ಮಾಡಿ, ಒಂದು ಗಂಡು, ಇನ್ನೊಂದು ಹೆಣ್ಣು ಗೊಂಬೆಗಳನ್ನು ಮಾಡಿ ಜೀವ ತರಿಸಿ, ಗಂಡ – ಹೆಂಡಂದಿರನ್ನಾಗಿ ಮಾಡಿದರು. ಅವತ್ತಿನಿಂದ ಇವರನ್ನು ಹಾಲುಮತದವರು ಎಂದು ಕರೆಯಲಾಗುತ್ತಿದೆ. ಇವರಿಗೆ ಐದು ಜನ ಮಕ್ಕಳಾದರು. ನಾಲ್ಕು ಮಕ್ಕಳು ಯಾವಾಗಲೂ ಯಾವುದಾದರೂ ಕೆಲಸದಲ್ಲಿರುತ್ತಿದ್ದರು. ಆದರೆ ಕೊನೆಯವನು ಉಂಡಾಡಿ ಪದುಮಣ್ಣನು. ಕೆಲಸ ಕಾರ್ಯಗಳಿಲ್ಲದೆ ಕಾಲಹರಣ ಮಾಡುತಿದ್ದನು. ಎಲ್ಲ ಅಣ್ಣಂದಿರು ಬೈಯ್ಯುತ್ತಿರಲು, ತಾಯಿ ಮಾತಿನಂತೆ ಒಂದು ದಿನ ತಮ್ಮ ಹೊಲಕ್ಕೆ ಹೋಗಿ, ಹೊಲದ ಕಸವನ್ನೆಲ್ಲ, ಸ್ವಚ್ಛ ಮಾಡಿ, ಕಸವನ್ನೆಲ್ಲಾ ಅಲ್ಲಿಯೆ ಇರುವ ಹುತ್ತದ ಮೇಲೆ ಹಾಕಿ ಬೆಂಕಿಯನ್ನು ಹಚ್ಚಲು ಅದರಲ್ಲಿಯ ಕುರಿಗಳು ಬೆಂಕಿಯ ತಾಪಕ್ಕೆ ಹೊರಬಂದವು. ಪದುಮಣ್ಣನಿಗೆ ಏನೂ ತೋಚದಂತಾಗಿ ಕುರಿಯನ್ನು ಕಾಯುತ್ತ, ಕಾಡಿನಲ್ಲಿ ಬರಲು ಗುರು ರೇಣುಕಾರು ಕಂಡರು. ಶಿಷ್ಯರನ್ನು ಅರಸುತ್ತ ಬಂದೆ. ನಾನು ಯಜ್ಞವನ್ನು ಮಾಡುವೆ, ಅದಕ್ಕಾಗಿ ಕಟ್ಟಿಗೆಗಳು ಬೇಕು, ನೀನು ತಂದು ಕೊಡುವೆಯ ಎಂದಾಗ ಪದುಮಣ್ಣನು ಒಪ್ಪಿ, ಯಜ್ಞಕ್ಕೆ ಎಲ್ಲ ತರಹದ ಕಟ್ಟಿಗೆಗಳನ್ನು ತರಲು ಪದುಮಣ್ಣನು ಕಟ್ಟಿಗೆಯನ್ನು ಅರಸುತ್ತ ಹೊರಟನು. ಕಾಡಿನಲ್ಲಿ ಎಲ್ಲೋ ಹೊಗೆಯು ಬರುತ್ತಿರು ವುದನ್ನು ಕಂಡು ಅಲ್ಲಿಗೆ ಹೋಗಲು ನಿರ್ಧರಿಸಿದನು. ಕಟ್ಟಿಗೆಯನ್ನು ಸಂಗ್ರಹಿಸಲು ಆ ರಾಜಕುಮಾರಿಯ ಹತ್ತಿರವೇ ಹೋಗುತ್ತಿರುವಾಗ ರಾಜಕುಮಾರಿಯು, ಪದುಮಣ್ಣನ ಸೌಂದರ್ಯಕ್ಕೆ ಮಾರು ಹೋಗಿ ಹಾಗೆಯೇ ನಿಂತಳು. ಮಾತನಾಡಿಸಲು, ಇಬ್ಬರು ಸಲಿಗೆಯಿಂದಲೇ ಮಾತನಾಡಿದರು. ಇಬ್ಬರಲ್ಲಿಯೂ ಪ್ರೇಮ ಭಾವನೆ ಮೂಡಿ ಬಂದಿತು. ಬಹಳ ವರ್ಷಗಳಿಂದ ಊರೊಳಗೆ ಬಂದು, ದಿನಾಲು ಒಬ್ಬೊರ ಮನೆಯಿಂದ ನರಭಕ್ಷ ಬೇಕೆಂದು ಹೇಳಿ, ದಿನಾಲು ಪ್ರತಿಯೊಬ್ಬರ ಮನೆಯಿಂದಲೂ ಒಬ್ಬ ವ್ಯಕ್ತಿ ರಾಕ್ಷಸಿಯ ಹತ್ತಿರ ಹೋಗುತ್ತಿದ್ದರು. ೮ ಸರದಿಯಂತೆ ಒಂದು ದಿನ ರಾಜರ ಮನೆಯ ಸರದಿ ಬಂದಾಗ, ರಾಜಕುಮಾರಿಯು ರಾಕ್ಷಿಸಿಯ ಹತ್ತಿರ ಹೋದಳು. ಅವಳು ಇನ್ನು ಚಿಕ್ಕವಳಿದ್ದರಿಂದ ಅವಳ ಸೌಂದರ್ಯಕ್ಕೆ ಮಾರು ಹೋದ ರಾಕ್ಷಸಿಯು ಅವಳನ್ನು ಮಗಳಂತೆ ಸಾಕಿ ದೊಡ್ಡವಳನ್ನಾಗಿ ಮಾಡಿದಳು. ರಾಕ್ಷಸಿಯನ್ನು ಪದುಮಣ್ಣನು ಸಂಹರಿಸಿ, ಗುರುವಿನ ಹತ್ತಿರ ರಾಜಕುಮಾರಿಯನ್ನು ಕರೆದೊಯ್ದನು. ಗುರುವು ಇವರಿಬ್ಬರಿಗೂ ಮದುವೆಯನ್ನು ಮಾಡಿಸಿ, ಯಜ್ಞವನ್ನು ಮಾಡಿ ದೀಕ್ಷೆ ನೀಡಿ ಹೊರಟರು. ಪದುಮಣ್ಣ ಮತ್ತು ಚಮಲೆಯರು ಕುರಿಗಳನ್ನು ಕಾಯುತ್ತ, ತಮ್ಮ ಊರಿನ ಹೊಲಕ್ಕೆ, ಮರಳಿ ಬಂದರು. ಅಲ್ಲಿ ತಮ್ಮ ಕುಟುಂಬದವರನ್ನು ನೋಡಿ ಸಂತಸಗೊಂಡು ತಾಯಿಯ ಜೊತೆ ಹರುಷದಿಂದ ಮಾತನಾಡಿ, ಆದಂತಹ ಘಟನೆಗಳನ್ನೆಲ್ಲಾ ವಿವರವಾಗಿ ತಾಯಿಗೆ ಹೇಳಿ, ನಾನು ಚುಮಲೆ ಎಂಬ ಹೆಣ್ಣನ್ನು ಮದುವೆಯಾಗಿರುವೆನೆಂದು ಹೇಳಿ, ಆಶೀರ್ವಾದ ಪಡೆದುಕೊಂಡರು. ಇವಳಿಗಿಂತ

ಮೊದಲೇ ಮದುವೆಯಾದ ಹೆಂಡತಿ ಈಗಿನ ಚಮಲೆಯ ಜೊತೆ ಸಂತಸದೊಂದಿಗೆ ಜೀವನ ನಡೆಸುವನು.

"ಹಲವು ಕಾಲವ ಹೀಗೆ ಕಳೆದವ
ಒಲುಮೆಯಿಂದ ಶಿವನ ಧ್ಯಾನಿಸಿ
ಸಲಹು ತಂದೆಯೆ ನಿನ್ನ ಬಳಿಗೆನ್ನ ಕರೆದುಕೊಳ್ಳೆನುತ
ಬಲು ವಿಧದಿ ಶಿವನ ಧ್ಯಾನಿಸುವ
ಒಲುಮೆಯೆ ನುಡಿಯ ಕೇಳಿದ ಶಿವನು
ನೆಲದೊಳಿಂದಿರಿ ಕರೆದುಕೊಂಡನು ಯನ್ನ ಬಳಿಗಾಗ ಇಲ್ಲಿಗೆ
ಪದುಮಣ್ಣನ ವೃತ್ತಾಂತ ಕೊನೆಗೊಳ್ಳುವುದು"(೩೫)

ಬಿಲ್ಲಾಸುರನು ವರವನ್ನು ಪಡೆದುಕೊಳ್ಳಲು ಪಾರ್ವತಿಯನ್ನು ಕುರಿತು ಘೋರ ತಪಸ್ಸನ್ನು ಮಾಡಿ ವರವನ್ನು ಪಡೆದುಕೊಂಡನು. ವರಪಡೆದ ನಂತರ ಬಿಲ್ಲಾಸುರನು

"ಮೆರೆದಿರಲು ಭೂಮಿ ಮೇಲೆನ್ನಯ
ಸರಿ ಸಮರಾರೆನುತ ಮನುಜರನು
ಸುರಮುನಿಗಳನು ಹಿಂಸಿಸುತ್ತಿರುವರು ಉಪಟಳವನು"(೩೫)

ಮುನಿಗಳು ಪರಶಿವನಲ್ಲಿ ಬೇಡಲು, ಶಿವನು ಪಾರ್ವತಿಯ ಸನಿಹಕ್ಕೆ ಹೋಗಿ, ಕೇಳಲು, ಅವನ ಕೊನೆಯ ಸಮಯ ಬಂದಿದೆ. ವೀರಭದ್ರನಿಂದಲೇ ಅವನ ಕೊನೆಯಾಗುವುದೆಂದು ಹೇಳಿದಳು. ಶಿವನು ವೀರಭದ್ರನನ್ನು ಆಹ್ವಾನಿಸಿ ಭೂಮಿಯಲ್ಲಿ ಬೀರೇಶ್ವರನಾಗಿ ಜನಿಸಿ, ಬಿಲ್ಲಾಸುರನನ್ನು ಸಂಹರಿಸು, ಎಂದು ಆಜ್ಞೆ ಮಾಡುವನು.

ಅದರಂತೆ ವೀರಭದ್ರರು ಬೀರೇಶ್ವರನಾಗಿ ಜನಿಸಿದನು. ಶಿವನು ಬೀರೇಶ್ವರನ ಸಹಾಯಕ್ಕೆ ಬಾರಿ ವೇಗದಿಂದ ಕೂಡಿದ ವಾಯು ಪಕ್ಷಿಯನ್ನು ವಾಹನವನ್ನಾಗಿ ನೀಡುವನು. ಕಾಲಾಂತರದಲ್ಲಿ ಇಬ್ಬರ ನಡುವೆ ಬಾರಿ ಯುದ್ಧ ಸಂಭವಿಸಲು ಬೀರೇಶ್ವರನು ಬಿಲ್ಲಾಸುರನಿಗೆ ವೀರಾವೇಶದಿಂದ ಹೊಡೆಯಲು

"ತರಿದು ಹೊಗೆಯಲು ದೇಹವೊಂದೆಡೆ
ಶಿರವು ವೊಂದೆಡೆ ಬಿದ್ದ ರಕ್ಕಸ
ಒರಗೆ ಭೂಮಿಯೊಳು ದೊಡ್ಡ ಪರ್ವತ ದೋಪರಿಯಲವನು"(೩೯)

ಬೀರೇಶ್ವರನು ವೀರಾವೇಶದಿಂದ ಹೋರಾಡಿ, ಬಿಲ್ಲಾಸುರನನ್ನು ಸಂಹರಿಸುವನು. ಇದರಿಂದ ಸಂತಸಗೊಂಡ ಮುನಿಜನರು ದೇವಾನುದೇವತೆಗಳು ಪುಷ್ಪ ಮಳೆಯನ್ನು ತರಿಸುವರು. ಎಲ್ಲರೂ ಬೀರೇಶ್ವರನ ಸಾಹಸವನ್ನು ಹೊಗಳಿ ಕೊಂಡಾಡುವರು.

ಲಿಂಗಪೂಜೆಯ ದೋಷದಿಂದಾಗಿ ಶಿವಹರಿ ದೇವನು ಕಾಶಿಗೆ ಹೋಗಿ ಗಂಗೆಯನ್ನು ತರಬೇಕಾದ ಪ್ರಸಂಗ ಒದಗುತ್ತದೆ. ನಾನು ಬರುವವರೆಗೂ ಲಿಂಗ ಪೂಜೆಯನ್ನು ಮಾಡುವವರು ಯಾರು ಎಂದು ಯೋಚಿಸುತ್ತಿರಲು, ಇನ್ನೊಬ್ಬ ಶಿವಭಕ್ತನಾದ ಭರಮದೇವನನ್ನು ಲಿಂಗದ ಪೂಜೆಗೆ ನೇಮಿಸಲು ಸಿದ್ಧನಾದಾಗ ಭರಮ ದೇವನು, ನಿನ್ನ ತಂಗಿಯನ್ನು ಮದುವೆ ಮಾಡಿ ಕೊಟ್ಟರೆ. ನಾನು ಪ್ರತಿನಿತ್ಯವೂ ನೇಮದಿಂದ ಭಕ್ತಿಯಿಂದ ಪೂಜಿಸುವೆನೆಂದು ಹೇಳಿದನು. ಹರದೇವನು ಇದಕ್ಕೆ ಒಪ್ಪಿ, ಭರಮದೇವನಿಗೆ ತನ್ನ ತಂಗಿಯಾದ ಮಧುರಮತಿಯನ್ನು ಕೊಟ್ಟು ವಿವಾಹ ಮಾಡಿದನು. ವಿವಾಹ ಮುಗಿಸಿ, ಗಂಗೆಯನ್ನು ತರಲು ಕಾಶಿಗೆ ಹೋಗಿ, ಕೆಲ ದಿನಗಳ ನಂತರ ಬಂದು ಶಿವಪೂಜೆಯನ್ನು ಮಾಡಬೇಕೆಂದು ಅವಸರವಾಗಿ ಒಳಗಡೆ ಹೋಗ ಬೇಕೆನ್ನುವಷ್ಟರಲ್ಲಿ ದ್ವಾರಪಾಲಕರು ಅವನನ್ನು ತಡೆಯುವರು. ಭರಮದೇವನು ಪೂಜೆಯಲ್ಲಿರುವನು. ಅವನ ಪೂಜೆಯಾಗುವವರೆಗೂ ಯಾರಿಗೂ ಪ್ರವೇಶವಿಲ್ಲವೆಂದಾಗ ಅವಮಾನಗೊಂಡ, ಹರದೇವ, ಮಕ್ಕಳಿಲ್ಲದ ಇವರ ಪೂಜೆ ಶಿವನಿಗೆ ಸಲದು ಎಂದು ಘರ್ಜಿಸಲು ಭರಮದೇವನು ಮನನೊಂದು, ಸತಿಯ ಸಮೇತವಾಗಿ ತಪಸ್ಸನ್ನು ಮಾಡಲು, ಶಿವ ಮೆಚ್ಚಿ ಪ್ರತ್ಯಕ್ಷನಾಗಿ ಯಾವ ವರ ಬೇಕೆನ್ನಲು ನಮಗೆ ಮಕ್ಕಳನ್ನು ದಯಪಾಲಿಸು ಎಂದಾಗ ವರವನ್ನು ನೀಡುತ್ತಾನೆ.

೬. ಹಾಲುಮತದ ಪುರಾಣ(೧೯೧೦)

ಬಂಕಾಪುರದ ಬಸವಣ್ಣೆಪ್ಪ ನೀಲಪ್ಪ ಅವರು ರಚಿಸಿರುವ ಈ ಕೃತಿಯು ೧೯೧೦ರಲ್ಲಿ ಪ್ರಕಟಗೊಂಡಿದೆ. ಹಾಲುಮತ ಧಾರ್ಮಿಕ ಮಹಾಸಭೆಯಲ್ಲಿ ಈ ಕಾವ್ಯವನ್ನು ಉಚಿತವಾಗಿ ಕೊಡಲಾಗಿತ್ತು. ಈ ಕೃತಿಯಲ್ಲಿ ಐದು ಸಂಧಿ, ೪೧೫, ಸಾಂಗತ್ಯ ಪದ್ಯಗಳನ್ನು ಒಳಗೊಂಡಿದೆ. ಮೊದಲಿಗೆ ಗುರುವಿಗೆ ನಮಿಸುತ್ತಾ, ಈ ಭೂಮಿಯಲ್ಲಿ ಅಧಿಕವಾದ ದೇವರು ಪಂಪಾ ಕ್ಷೇತ್ರದ ಶ್ರೀ ವಿರೂಪಾಕ್ಷನನ್ನು ನೆನೆದು, ಕಪ್ಪುಕೊರಳು ಹೊಂದಿರುವ ಶಿವನನ್ನು ಸ್ಮರಿಸಿ ಈ ಕೃತಿಯನ್ನು ಮುಂದುವರೆಸುತ್ತಾರೆ. ಕೈಲಾಸದಲ್ಲಿ ಶಿವ-ಪಾರ್ವತಿಯರು ಕುರಿಗಳನ್ನು ಭೂಲೋಕದಲ್ಲಿ ಕಾದು ಸಾಕಾಗಿ ಹುತ್ತದಲ್ಲಿ ಅಡಗಿಸಿದ ಕಥೆಯು ಬರುತ್ತದೆ. ಇನ್ನು ಮುಂದೆ ಎರಡನೆ ಸಂಧಿಯಲ್ಲಿ ಸಿದ್ದರಾಮನ ಜನನ, ಬಾಲ್ಯ, ಸಿದ್ದರಾಮನನ್ನು ಶಿವ ಪರೀಕ್ಷಿಸಿದ ಸಂಗತಿಗಳ ವಿವರವಿದೆ.

ಮೂರನೆ ಸಂಧಿಯಲ್ಲಿ ಸಿದ್ದರಾಮನಿಗೆ ಶಿವನು ಅವನ ಭಕ್ತಿಯನ್ನು ಮೆಚ್ಚಿ ವರವನ್ನು ನೀಡುತ್ತಾನೆ.

"ಸೂಜಿ ಹನ್ನೆರಡು ದಬ್ಬಣವೆ ಈರಾರು
ವಾಜಿಲಿ ಕೊಟ್ಟ ಬಾಲಕಗೆ
ತಾಜಮೆ ಮಾಡಿದ ಶಕ್ಕ ಮುಝುವು
ಗುಂಜಿ ಸಾಧಿಸಿ ತೂಗು ಭೂಮಿಯನು"(೨೭)

ಇದನ್ನು ಸಾಧಿಸಿ ಶಿವನಿಂದಲೇ ಮರುಳಸಿದ್ದನೆಂಬ ಹೆಸರನ್ನು ಪಡೆದುಕೊಂಡ ವಿವರವಿದೆ. ಶಿವನು ಸಿದ್ದನಿಗೆ ಹನ್ನೆರಡು ಸೂಜಿ, ಹನ್ನೆರಡು ದಬ್ಬಣ ನೀಡಿ ಭೂಮಿಯನ್ನು ಅಳೆಯುತ್ತಾ ಹೋಗು, ಎಲ್ಲಿ ಭೂಮಿ ಇಂದು ಗುಂಜು ಹೆಚ್ಚಾಗುವುದೋ ಅಲ್ಲಿ ನೀನು ನೆಲೆಸು ಎಂದು ಹೇಳಿ, ಕೈಲಾಸಕ್ಕೆ ತೆರಳುವರು. ಆಗ ಸಿದ್ದರಾಮ ತಪಸ್ಸು ಮಾಡುವನು. ಮುಂದಿನ ಕಥೆ ಆದಿಗೊಂಡನ ಮಕ್ಕಳೊಂದಿಗೆ ಪ್ರಾರಂಭವಾಗುತ್ತದೆ. ನಾಲ್ಕನೆ ಸಂಧಿಯಲ್ಲಿ ಪದ್ಮಗೊಂಡನ ವಿವರದೊಂದಿಗೆ ಹೆಂಡತಿ ಸಿದ್ದಮ್ಮ, ಇನ್ನು ಎರಡನೆ ಹೆಂಡತಿಯ ವಿಷಯ, ಇವರೊಂದಿಗೆ ಹತ್ತಿಕಂಕಣ, ಉಣ್ಣೆಕಂಕಣದ ವಿವರ ಬರುತ್ತದೆ. ಹಾಗೆಯೆ ಸಿದ್ದಮಂಕನ ತಪಸ್ಸು ತೀವ್ರತೆಯ ವರ್ಣನೆಯು ಬಂದಿದೆ. ಐದನೆಯ ಸಂಧಿಯಲ್ಲಿ ಶಿವ-ಪಾರ್ವತಿಯರು ಸಿದ್ದಮಂಕನ ತಪಸ್ಸನ್ನು ಮೆಚ್ಚಿ ಭೂಲೋಕಕ್ಕೆ ಬಂದು, ಯಾವುದಕ್ಕೆ ತೀವ್ರ ತಪಸ್ಸು ಮಾಡುತ್ತಿರುವೆ ಹೇಳು ಎನ್ನಲು, ಸಿದ್ದನು ನನಗೆ ಕುರುಬರ ಗುರುವನ್ನಾಗಿ ಮಾಡಿರಿ, ಮತ್ತು ಕಲ್ಯಾಣದಿಂದ ಹೊರಹಾಕಿದ ಕುರುಬರಿಗೆ ಮತ್ತೆ ಪ್ರವೇಶ ನೀಡಬೇಕೆಂಬ ವರ ಬೇಡುತ್ತಾನೆ. ಅವರು ವರ ನೀಡಿ ಕೈಲಾಸಕ್ಕೆ ತೆರಳುತ್ತಾರೆ. ಕುರುಬರನ್ನು ಮತ್ತೆ ಕಲ್ಯಾಣಕ್ಕೆ ಪ್ರವೇಶ ನೀಡಲು, ಅವರ ಸಹಾಯಕ್ಕೆ ತಗರ ಪವಾಡದಲ್ಲಿ ಶಾಂತಮುತ್ತಯ್ಯ ಬರುತ್ತಾನೆ. ಆದರೆ ಇಲ್ಲಿ ಅವರ ಪ್ರಸ್ತಾಪ ಬರುವುದೆ ಇಲ್ಲ. ರೇವಣ್ಣಸಿದ್ದ ಬೋದು ಅವರಿಗೆ ಸಹಾಯಮಾಡುತ್ತಾನೆ. ಹಾಲುಮತ ಪುರಾಣವು ಹಾಲುಮತದ ಇತಿಹಾಸವನ್ನು ತಿಳಿಸುವ ಕೃತಿಯಾಗಿದೆ.

ಅಧ್ಯಾಯ: ಆರು

ಪವಾಡ ಕಥೆಗಳ ವರ್ಗೀಕರಣ ಮತ್ತು ಕಥೆಗಳ ಸ್ವರೂಪ

೬.೧. ಪವಾಡಗಳ ಪರಿಕಲ್ಪನೆ

೬.೨. ಪವಾಡಗಳ ವರ್ಗೀಕರಣ

೬.೩. ಕಥೆಗಳ ಸ್ವರೂಪ

ಅಧ್ಯಾಯ: ಆರು

ಪವಾಡ ಕಥೆಗಳ ವರ್ಗೀಕರಣ ಮತ್ತು ಕಥೆಗಳ ಸ್ವರೂಪ

೬.೧. ಪವಾಡಗಳ ಪರಿಕಲ್ಪನೆ

ಸಾಮಾನ್ಯನ ದೃಷ್ಟಿಗೆ ನಿಲುಕದೆ ಇರುವ ಅತಿಮಾನುಷ ಕಲ್ಪನೆಯನ್ನು ಪವಾಡ ಎನ್ನಬಹುದು. ಈ ಪವಾಡ ಎಂಬ ಪದಕ್ಕೆ ರೆವೆರೆಂಡ್ ಫಾದರ್ ಫರ್ಡಿನ್ಯಾಂಡ್ ಕಿಟ್ಟೆಲ್ಲರು ತಮ್ಮ ಕನ್ನಡ-ಇಂಗ್ಲಿಷ್ ನಿಘಂಟುವಿನಲ್ಲಿ ಈ ಕೆಳಗಿನ ಅರ್ಥಗಳನ್ನು ಕೊಟ್ಟಿದ್ದಾರೆ.

ಪವಾಡ

A vow or determination to effect an objected, Fanatical obstinate, pompous or Marvelous words or acts.[1] 'ಪವಾಡಗಳಂ ಮಾಡಿ ಶಿವನ ಕೃಪೆಯಂ ಪಡೆದರೆ'

ವೀರ ಪವಾಡ ಪುರುಷ: A many of Marvellous words or acts[2] ಉಳಿದ ನಿಘಂಟುಗಳಲ್ಲಿ ಈ ಪವಾಡಕ್ಕೆ ಅಶ್ಚರ್ಯಕರವಾದ ಘಟನೆ, ಅತಿಮಾನುಷ ಕಾರ್ಯ ಮೊದಲಾದ ಅರ್ಥಗಳನ್ನು ಕೊಟ್ಟಿದ್ದಾರೆ. ಪವಾಡ ಕಲ್ಪನೆಯು ಬಹುಶಃ ಮನುಷ್ಯ ಜನಾಂಗದ ಹುಟ್ಟಿನೊಂದಿಗೆ ರೂಪ ತಾಳಿರಬೇಕು. ರಾಮಾಯಣ, ಮಹಾಭಾರತದ ಕಾಲದಲ್ಲಿ ನಮಗೆ ಇದರ ಸುಳಿವು ಸಿಗುತ್ತದೆ. ಉದಾಹರಣೆಗೆ ಹನುಮಂತನ ಸಾಗರೋಲ್ಲಂಘನೆ, ರಾವಣನ ಪುಷ್ಪಕ ವಿಮಾನ, ಹನುಮಂತನ ಬಾಲಕ್ಕೆ ಬೆಂಕಿ ಇಟ್ಟಾಗ ಏನೂ ಆಗದಿರುವಿಕೆ, ಸೀತೆಯ ಅಗ್ನಿ ಪ್ರವೇಶ. ದ್ರೌಪದಿಯ ಅಕ್ಷಯ ಪಾತ್ರೆ, ಅಕ್ಷಯಾಂಬರ ವಿಲಾಪ ಇತ್ಯಾದಿ ಪ್ರಸಂಗಗಳನ್ನು ನೋಡುತ್ತೇವೆ. ಇನ್ನೂ ಹಲವಾರು ಪುರಾಣ ಅಥವಾ ಕಾವ್ಯಗಳಲ್ಲಿ ಈ ರೀತಿಯ ಅಸಂಭಾವ್ಯ ಘಟನೆಗಳನ್ನು ಕಾಣಬಹುದು. ಆದರೆ ಈ ಪವಾಡಗಳು ಅಥವಾ ಈ ಅಸಂಭಾವ್ಯಗಳಲ್ಲಿ ಕೆಲವು ಸಂಭವನೀಯವಾಗುವುದೂ

ಇದೆ. ಉದಾಹರಣೆಗಾಗಿ ಹಿಂದಿನ ಪುಷ್ಪಕ ವಿಮಾನದ ಕಲ್ಪನೆಯು ಇಂದು ನಿಜದ ಮಾತಾಗಿದೆ. ಆಕಾಶವಾಣಿಯು ಇಂದು ರೇಡಿಯೋಗಳ ರೂಪದಲ್ಲಿ ಜನಸಾಮಾನ್ಯನಿಗೂ ನಿಲುಕುವ ಮಟ್ಟಕ್ಕೆ ಬಂದಿದೆ. ಹೀಗಾಗಿ ಪವಾಡದ ಕಲ್ಪನೆಯು ಎಲ್ಲ ಕಾಲಕ್ಕೂ ಒಂದೇ ರೀತಿಯಾಗಿರಬೇಕಾಗಿಲ್ಲ. ಕಾಲದಿಂದ ಕಾಲಕ್ಕೆ ಮಾನವನ ಬುದ್ಧಿ ಶಕ್ತಿ ಬೆಳೆದಂತೆ, ನಾಗರೀಕತೆ ಮುಂದುವರೆದಂತೆ ಕೆಲವು ಪವಾಡಗಳು ಮಾನವ ಸಾಮ್ಯತೆಗಳ ಪಟ್ಟು ಸಾಮಾನ್ಯ ವಿಷಯವಾಗುತ್ತವೆ. ಹಿಂದಿನ ಕಾಲದಲ್ಲಿ ಧರ್ಮ ಪ್ರಚಾರಕರು ತಮ್ಮ ತಮ್ಮ ಧರ್ಮಗಳಿಗೆ ಜನರ ಮನಸ್ಸನ್ನು ಒಲಿಸಲು ಕೆಲವು ಅಸಂಭವ್ಯವಾದ ಚಮತ್ಕಾರಗಳನ್ನು ಮಾಡಿತೋರಿಸುತ್ತಿದ್ದರು. ಕೆಲವರು ದುರುಪಯೋಗ ದಿಂದಲೂ ಜನಸಾಮಾನ್ಯರ ಕಲ್ಪನೆಗೆ ನಿಲುಕದ ಕೆಲವು ಕಾರ್ಯಗಳನ್ನು ಎಸಗುತ್ತಿದ್ದರು. ಇದರಿಂದ ಮುಗ್ಧ ಜನಾಂಗದಲ್ಲಿ ಅದರ ಬಗ್ಗೆ ಒಂದು ವಿಶೇಷ ರೀತಿಯ ಗೌರವ. ಅವರು ತಮ್ಮಿಂದ ತುಂಬಾ ಎತ್ತರದಲ್ಲಿದ್ದಾರೆಂಬ ಭಾವವನ್ನು ಬೆಳೆಸಿಕೊಂಡು ಜನರು ಅವರನ್ನು ಪೂಜಿಸುವ ಮಟ್ಟಕ್ಕೂ ಬಂದಿವೆ. ಉಲ್ಲೇಖಗಳು ಇವೆ. ದೊಂಬರಾಟಗಳು ಅಭ್ಯಾಸ ಬಲದಿಂದ ಸಾಧಿಸುವುದಾದರೆ ಇಂದಿನ ಇಂದ್ರ ಜಾಲ ಕೇವಲ ಕೈಚಳಕದಿಂದ ಸಾಧಿಸುವಂತಹದು. ಇದನ್ನು ಕೂಡ ಈ ಪವಾಡಗಳ ಗುಂಪಿಗೆ ಸೇರಿಸಬಹುದು. ಇವೆರಡೂ ವಿಭಾಗಗಳಲ್ಲಿ ತಂತಿಯ ಮೇಲೆ ನಡೆಯುವುದು ಒಂದೇ ಗಾಲಿಯ ಬೈಸಿಕಲ್ಲನ್ನು ಬಿಡುವುದು, ಬ್ಲೇಡ್ ನುಂಗುವಿಕೆ, ತಲೆ ಟೊಪ್ಪಿಯಿಂದ ಪಕ್ಷಿ ಬರುವುದು, ಮನುಷ್ಯನ ರುಂಡ ಮುಂಡವನ್ನು ಬೇರೆ ಬೇರೆ ಮಾಡಿ ತೋರಿಸುವುದು ಮುಂತಾದ ಪವಾಡಗಳನ್ನು ಕಾಣುತ್ತೇವೆ. ಅದೇ ರೀತಿಯಲ್ಲಿ ಧರ್ಮದ ಹೆಸರಿನಲ್ಲಿ ಅಂಧ ಶ್ರದ್ಧೆಯಿಂದ ಮಾಡುವ ಸಿಡಿ, ಗುಗ್ಗಳಗಳೇ ಮೊದಲಾದ ವಿಚಾರಗಳನ್ನು ಈ ಗುಂಪಿಗೆ ಸೇರಿಸಬಹುದು.

ಇವರಲ್ಲಿ ಬರಿಗಾಲಲ್ಲಿ ಕೆಂಡದಲ್ಲಿ ನಡೆಯುವುದು, ಕೆಂಡದ ದೊಡ್ಡ ರಾಶಿಯಲ್ಲಿ ಬಿದ್ದು ಹೊರಳಾಡುವುದು, ನಾಲಗೆಗೆ ತಂತಿಯನ್ನು ಚುಚ್ಚಿಕೊಳ್ಳುವುದು, ಕೆನ್ನೆಗಳಿಂದ ತೂರಿಬರುವ ಹಾಗೆ ಚೂರಿಯಿಂದ ಚುಚ್ಚಿಕೊಳ್ಳುವುದು, ಸೊಂಟಕ್ಕೆ ತಂತಿಯಿಂದ ಚುಚ್ಚಿ ಆಳೆತ್ತರದಲ್ಲಿ ನೇತಾಡುವುದು ಮುಂತಾದ ವಿಚಾರಗಳನ್ನು ಕಾಣಬಹುದು. ಇವುಗಳೆಲ್ಲ ಇಂದಿಗೂ ಪವಾಡ ಗಳಾಗಿಯೇ ಉಳಿದಿವೆ. ಇವುಗಳಿಗೆ ಕಾರಣವನ್ನು ಕೊಡುವುದು ಸ್ವಲ್ಪ ಕಷ್ಟವೇ ಸರಿ. ಸಿಡಿಯನ್ನು ಬೇಕಾದರೆ ಹಟಯೋಗ ಎಂದರೂ ಬರಿಗಾಲಲ್ಲಿ ಬೆಂಕಿಯಲ್ಲಿ ನಡೆದು ಹೋಗುವುದು ಅದರ ಮೇಲೆ ಹೊರಳಾಡುವುದು ಮೊದಲಾದವುಗಳಿಗೆ ಕಾರಣಗಳನ್ನು ಕಲ್ಪಿಸುವುದು ದುಸ್ತರವಾಗಿದೆ. ಈ ಮೇಲೆ ನೋಡಿದ ವಿಚಾರಗಳಿಂದ ನಮಗೆ ತಿಳಿದು ಬರುವ ಒಂದೇ ಒಂದು ವಿಚಾರವೆಂದರೆ ಪವಾಡಗಳು ಕಾಲದಿಂದ ಕಾಲಕ್ಕೆ, ಜನರಿಂದ ಜನರಿಗೆ, ದೇಶದಿಂದ ದೇಶಕ್ಕೆ ಹೊಸ ಹೊಸ ಅರ್ಥ ಗಳನ್ನು ಹೊಸ ಹೊಸ ವ್ಯಾಖ್ಯಾನಗಳನ್ನು ಪಡೆಯುತ್ತದೆ ಎಂಬುದು. ಧಾರ್ಮಿಕ ವ್ಯಕ್ತಿಗಳು

ಯಾವುದೇ ಪವಾಡಗಳನ್ನು ಮಾಡದೆ ಇದ್ದರೂ ಅವರ ಅನುಯಾಯಿಗಳು ಅವರ ಕಾಲಾನಂತರ ಆ ವ್ಯಕ್ತಿಗಳ ತಲೆಗೆ ಪವಾಡಗಳನ್ನು, ಆಪಾದಿಸಿದುದುಂಟು ಪುರಾಣಗಳಲ್ಲಿ ಇದಕ್ಕೆ ಉದಾಹರಣೆ ಗಳನ್ನು ಕಾಣುತ್ತೇವೆ. ಪವಾಡ ಪುರುಷರು ಎನಿಸಿಕೊಂಡವರ ಹುಟ್ಟಿನ ಹಿನ್ನೆಲೆಯಲ್ಲೂ ಕೆಲವು ಪವಾಡ ಸಾದೃಶ್ಯಾಚಾರಗಳನ್ನು ನೋಡುತ್ತೇವೆ. ಆ ಗರ್ಭಿಣಿ ಹೆಂಗಸಿಗೆ ಏನಾದರೂ ಕನಸು ಕಾಣಿಸುವುದು. ಆ ಕನಸಿನ ಮೂಲಕ ತನ್ನ ಮನದ ಬಗ್ಗೆ ಅಚ್ಚುತ ಕಲ್ಪನೆಗಳನ್ನು ಕಂಡು ಕೊಳ್ಳುವುದು ಇವೇ ಮುಂತಾದ ವಿಚಾರಗಳ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಇದನ್ನೆ ಮುಂದು ಮಾಡಿಕೊಂಡು ಹುಟ್ಟುವ ಮಗು ಮುಂದೆ ದೊಡ್ಡ ದೊಡ್ಡ ಪವಾಡ ಪುರುಷನಾಗುತ್ತದೆ. ಏಸು, ಬುದ್ಧ, ಮೊದಲಾದ ಧಾರ್ಮಿಕ ಪುರುಷರು ಸಂಯಮಿಗಳ ವಿಚಾರದಲ್ಲೂ ನಡೆದದ್ದು ಇಷ್ಟೇ. ಇಲ್ಲದೆ ಹೋದಲ್ಲಿ ಏಸುವಿನ ಕೊನೆಯ ಕಾಲದಲ್ಲಿ ಸಿಲುಬೆಗೇರಿಸಿ ದೇಹಕ್ಕೆ ಮೊಳೆಗಳಿಂದ ಹೊಡೆಯುವಾಗ ಆ ನರಕ ಯಾತನೆಯನ್ನು ಅವನು ಅನುಭವಿಸಬೇಕಾಗಿತ್ತೆ. ಅವನಿಗೆ ಯಾವುದಾದರೊಂದು ರೀತಿಯ ಪವಾಡವನ್ನು ಮಾಡಿ ತನ್ನ ನೋವನ್ನು ಪರಿಹರಿಸಿ ಅನ್ಯಾಯದ ವಿರುದ್ಧ ಸಿಡಿದೇಳಬಹುದಾಗಿತ್ತಲ್ಲವೆ. ಆ ವಿಚಾರವೊಂದನ್ನೂ ಮಾಡದೆ ಆತ ಸುಮ್ಮನಿದ್ದು ತನಗಾದ ಅನ್ಯಾಯವನ್ನು ಹೊಟ್ಟೆಯಲ್ಲಿ ಹಾಕಿಕೊಂಡು ತನ್ನ ಈ ಸ್ಥಿತಿಗೆ ಕಾರಣವಾದ ಜನರಿಗೆ ಒಳಿತನ್ನೇ ದೇವರಲ್ಲಿ ಬೇಡುವ ಏಸು ಪವಾಡ ಪುರುಷನೆಂಬುದು ಸಮಂಜಸವಲ್ಲ. ಅವನು ಕೇವಲ ಮಹಾನ್ ವ್ಯಕ್ತಿ ಅಷ್ಟೆ. ಆದರೆ ಅವನ ಮತವನ್ನು ಅನುಸರಿಸುವವರು ಮುಂದಿನ ಧರ್ಮಪ್ರಚಾರಕರು ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದಕ್ಕೆಂದು ಇಂತಹ ಮಹಾನ್ ವ್ಯಕ್ತಿಯ ಬಗ್ಗೆ ಕಥೆ ಕಟ್ಟಿ ಅವನನ್ನು ದೊಡ್ಡ ಪವಾಡ ಪುರುಷನನ್ನಾಗಿ ಮಾಡಿ ಅವನ ಹೆಸರಲ್ಲಿ ಈ ಧಾರ್ಮಿಕ ಪುರುಷರೆ ಹಲವಾರು ಪವಾಡಗಳನ್ನು ಮಾಡಿದರು.

ಕಾವಿ ಬಟ್ಟೆಯನ್ನು ಹಾಕಿಕೊಂಡು ದೊಡ್ಡ ಸ್ವಾಮಿಗಳಂತೆ ನಟಿಸಿ ಅಥವ ಮಂತ್ರಗಾರನಂತೆ ವೇಷವನ್ನು ಹಾಕಿ ಜನರ ಶೋಷಣೆ ನಡೆಸುವುದು ಹಿಂದಿನಿಂದಲೂ ನಡೆದು ಬಂದ ಪದ್ಧತಿ ಜನರಿಗೆ ಯಾವುದಾದರೂ ಭೂತ ಹಿಡಿಯುವುದು ಗಾಳಿ ಸೋಂಕುವುದು ಇತ್ಯಾದಿ ವಿಚಾರಗಳನ್ನು ಮುಂದಿರಿಸಿಕೊಂಡು ಅವುಗಳಿಗೆ ತಾವು ಪರಿಹಾರವನ್ನು ಕಂಡು ಹುಡುಕುತ್ತೇವೆ ಎಂದು ಕೊಚ್ಚಿಕೊಂಡು ಮಂತ್ರಿಸಲು ಬರುತ್ತಾರೆ. ಹಾಗೆ ಬಂದು ಜನಕ್ಕೆ ತಿಳಿಯದ ಭಾಷೆಯಲ್ಲಿ ಮಂತ್ರವಾದವನ್ನು ಮಾಡುವವನಂತೆ ನಟಿಸುತ್ತ ಧೂಪ ಹಾಕುವುದು, ಬೇವಿನ ಸೊಪ್ಪಿನಿಂದ ಹೊಡೆಯುವುದು ಅದರೊಂದಿಗೆ ಚಾವಟಿಯಿಂದ ಮೈಗೆ ಹೊಡೆಯುವುದು ಇತ್ಯಾದಿ ಆಚಾರಗಳನ್ನು ಮಾಡುತ್ತಾರೆ. ಏನೋ ಕಾಕತಾಳೀಯ ನ್ಯಾಯದಂತೆ ಅವನಿಗೆ ಗುಣವಾಗಿ ಬಿಟ್ಟರೆ ಇವನು ದೊಡ್ಡ ಪವಾಡ ಪುರುಷನಾಗಿ ಬಿಡುತ್ತಾನೆ. ಅವನಿಗೆ ಜನರಲ್ಲಿ ತನ್ನಿಂದ ತಾನೆ ಬಹು ಮಹತ್ವದ ಸ್ಥಾನ ಬಂದು ಬಿಡುತ್ತದೆ. ತಾನೇ ಮಹಾನ್ ವ್ಯಕ್ತಿಯೆಂಬ ಅಹಂಭಾವದೊಂದಿಗೆ

ಆಮೇಲೆ ಅವನು ಜನರ ಶೋಷಣೆಯನ್ನು ಇನ್ನೂ ಹೆಚ್ಚುಗೊಳಿಸುತ್ತಾನೆ. ಹೀಗಾದಾಗ ಆ ಮೇಲೆ ಅವನು ಮಾಡಿದ ಮಂತ್ರಗಳಿಂದ ಯಾರಿಗಾದರೂ ಗುಣವು ಕಾಣಿಸದಿದ್ದಲ್ಲಿ ಅದನ್ನು ಕಾಣದ ದೇವರ ತಲೆಗೂ ಅಲ್ಲ ಈ ಮನುಷ್ಯನ ಹಣೆಬರಹಕ್ಕೆ ಎತ್ತಿ ಕಟ್ಟಿ ಬಿಡುತ್ತಾನೆ. ಆದರೂ ಮಾಂತ್ರಿಕ ಈ ಸಮಯದಲ್ಲಿ ಸೋಲುವುದಿಲ್ಲ. ಇಂತಹವನ್ನೇ ಪವಾಡಗಳೆಂದು ನಂಬುತ್ತಾರೆ. ಆದರೆ ಇದು ಬರೀ ಜನಶಕ್ತಿಯನ್ನು ದುರುಪಯೋಗಪಡಿಸುವ ಹಲವು ತರಹದ ಉಪಾಯಗಳು.

ಆದರೆ ಜನರು ಇಂದಿಗೂ ಈ ಮಾಂತ್ರಿಕರನ್ನು ಪವಾಡ ಪುರುಷರನ್ನು ನಂಬುತ್ತಾರೆ. ಆದರೆ ಆ ಪವಾಡ ಪುರುಷನು ಮಾಡುವ ಅದೇ ಪವಾಡವನ್ನು ಒಬ್ಬ ಇಂದ್ರ ಜಾಲಿಕ ಮಾಡಿದರೆ ಅದು ಕೇವಲ ಕೈಚಳಕವಾಗಿ ಬಿಡುತ್ತದೆ. ಅವನಿಗೆ ಈ ಪವಾಡ ಪುರುಷನ ಸ್ಥಾನ ಲಭಿಸುವುದಿಲ್ಲ. ಅವನು ಈ ಸತ್ಯವನ್ನು ಕಂಡು ಹಿಡಿದು ಜನರಿಗೆ ತಿಳಿಯಪಡಿಸಿದರೆ ಇಂತಹ ಠಕ್ಕು ಪವಾಡ ಪುರುಷರಿಗೆ ಮಾರುಹೋಗಬೇಡಿರೆಂದು ಅಡಿಗಡಿಗೆ ಎಚ್ಚರವಿತ್ತರೂ ಅದನ್ನು ಲೆಕ್ಕಿಸದೆ ಕುರಿಗಳಂತೆ ಒಂದೇ ಸಮನೆ ಈ ಪವಾಡ ಪುರುಷರ ಬೆಂಬತ್ತಿ ಹೋಗುತ್ತಿರುವರಲ್ಲ ವೆಂಬುದು ತುಂಬಾ ಬೇಸರದ ಸಂಗತಿ. ಇಷ್ಟೇ ಅಲ್ಲದೆ ಆ ಸತ್ಯವನ್ನು ಕಂಡು ಹಿಡಿದು ಪವಾಡ ಪುರುಷನ ಬಣ್ಣವನ್ನು ಹೊರಗೆಡಹಿದ ಆ ಮನುಷ್ಯನನ್ನೇ ಜನ ತುಚ್ಛೀಕರಿಸಿ ಅವನೊಬ್ಬ ತಲೆ ಹರಟೆ ಮನುಷ್ಯನೆಂದು ಅವನ ಮಾತಿಗೆ ಬೆಲೆಕೊಡುವುದು ತರವಲ್ಲವೆಂದು ಭಾವಿಸುವುದು ಶೋಚನೀಯ. ಈ ಸೋಗಿನ ಪವಾಡ ಪುರುಷರು ತಮ್ಮ ಹಿಂಬಾಲಕರಾದ ಜನಗಳಲ್ಲಿ ಅಂತರಗಳನ್ನು ಸೃಷ್ಟಿಸುವುದು ಸಹಜ. ಯಾವನಾದರೊಬ್ಬ ಬಡವನು ಇವನನ್ನು ಸಂದರ್ಶಿಸಿದಾಗ ಕೇವಲ ಭಸ್ಮವು ಅವನಿಗೆ ಪ್ರಸಾದವಾಗಿ ಸಿಗುತ್ತದೆ. ಆದರೆ ಅದೇ ಪವಾಡ ಪುರುಷನ ಬಳಿಗೆ ಇನ್ನೊಬ್ಬ ಮಧ್ಯಮ ವರ್ಗದ ಜನ ಬಂದಾಗ ಅವನಿಗೆ ಸಿಕ್ಕುವ ಫಲವು ಸ್ವಲ್ಪ ಮಟ್ಟಿಗೆ ಹಿರಿದಾದುದೇ. ಇನ್ನೊಬ್ಬ ಆಗರ್ಭ ಶ್ರೀಮಂತ ಬಂದನೆಂದರೆ ಅವನಿಗೆ ಅವನ ಅಂತಸ್ತಿಗೆ ತಕ್ಕ ಹಾಗೆ ಬೆಲೆ ಬಾಳುವಂತಹ ಇತರ ವಸ್ತುಗಳು ಪ್ರಸಾದ ರೂಪವಾಗಿ ಸಿಗುತ್ತವೆ. ಇದೇ ರೀತಿ ವಿವಿಧ ವರ್ಗದ ಜನರು ತಮ್ಮ ದರುಶನಕ್ಕೆ ಬಂದಾಗ ಪವಾಡ ಪುರುಷರು ಅವರನ್ನು ಸ್ವಾಗತಿಸುವ ಸತ್ಕರಿಸುವ ಅತಿಥಿ ಸತ್ಕಾರವನ್ನು ಮಾಡುವ ರೀತಿಯೂ ಬೇರೆ ಬೇರೆ. ಜನರೆಲ್ಲ ತಮ್ಮ ದೃಷ್ಟಿಯಲ್ಲಿ ಒಂದೇ ಎಂದು ಹೇಳಿ ಕೊಳ್ಳುವ ಈ ಪವಾಡ ಪುರುಷರ ಹತ್ತಿರಕ್ಕೆ ಜನ ಬಂದಾಗ ಈ ಅಂತರವೇಕೆ? ಎಂಬ ಪ್ರಶ್ನೆಗೆ ಉತ್ತರವಿಲ್ಲ. ಏಕೆಂದರೆ ಅವರಿಗೆ ಬೇಕಾಗಿದ್ದು ಸಮಾಜದಲ್ಲಿ ಉನ್ನತಸ್ಥಾನ ನಮ್ಮ ಕಪಟ ವಿದ್ಯೆಗಳು ಮೋಸದ ಜಾಲಗಳು ಬಯಲಾಗಬಾರದಲ್ಲ ಎಂಬ ಕಾರಣಕ್ಕಾಗಿ ಈ ರೀತಿ ನಡೆದುಕೊಂಡು ತಮ್ಮ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತಾರೆ.

ಪ್ರಾಚೀನ ಕಾಲದಲ್ಲಾದರೆ ಒಂದು ಧಾರ್ಮಿಕ ಉದ್ದೇಶವನ್ನು ಜನರಲ್ಲಿ ಐಕ್ಯತೆಯನ್ನು ತರುವ ಮಹದುದ್ದೇಶವನ್ನು ಈ ಪವಾಡಗಳ ಹಿನ್ನೆಲೆಯಲ್ಲಿ ಕಾಣುತ್ತೇವೆ. ಉದಾಹರಣೆಗಾಗಿ ಬಸವಣ್ಣನವರನ್ನೇ ತೆಗೆದುಕೊಳ್ಳಬಹುದು. ಬಸವಣ್ಣನ ಹೆಸರಿನಲ್ಲಿ ವೀರಶೈವ ಮತದವರು ಬಸವಣ್ಣನ ಕಾಲಾನಂತರ ಹಲವಾರು ಪವಾಡಗಳನ್ನು ಮಾಡಿ ಬಸವಣ್ಣನಿಗೆ ಆರೋಪಿಸಿದರು. ಅದು ತಮ್ಮ ಮತ ಧರ್ಮವನ್ನು ಕಾಪಾಡುವುದಕ್ಕಾಗಿ ಹಾಗೂ ಅದರ ಏಳಿಗೆಗಾಗಿ ಈ ಪವಾಡಗಳನ್ನು ಬಸವಣ್ಣನ ಮೇಲೆ ಆರೋಪಿಸಿದರೇ ಹೊರತು ಬೇರೆ ಯಾವ ಆಮಿಷಕ್ಕೂ ಸ್ವಪ್ರತಿಷ್ಠೆಗೂ ಮರುಳಾಗಿ ಅಲ್ಲ. ಹೀಗೆ ಬಸವಣ್ಣನ ಮೇಲೆ ಪವಾಡಗಳನ್ನು ಆರೋಪಿಸುವುದರಿಂದ ಜನ ಸಾಮಾನ್ಯರು ಪಕ್ಕನೆ ಇವರೇನೋ ಕಾರಣಿಕ ಪುರುಷರು ಎಂದು ನಂಬಿ ಅವರನ್ನು ಅನುಸರಿಸುತ್ತಾರೆ ಎಂಬುದೇ ಇದರಲ್ಲಿ ಅಡಗಿರುವ ಒಳಗುಟ್ಟು.

ಆದರೆ ಇಂದಿನ ಪವಾಡ ಪುರುಷರು ತಮ್ಮ ಸುತ್ತಲಿನ ಸಮಾಜದಲ್ಲಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸುವ ಸ್ವಾರ್ಥ ದೃಷ್ಟಿಯಿಂದ ಕಾರ್ಯ ಕೈಗೊಳ್ಳುತ್ತಾರೆ ವಿನಃ ತಮ್ಮ ಮತಕ್ಕೆ ಅಥವಾ ತನ್ನ ಧರ್ಮಕ್ಕೆ ಬೇಕಾಗಿ ಅದನ್ನು ಊರ್ಜಿತಗೊಳಿಸುವುದಕ್ಕಾಗಿ ಇವರು ಪವಾಡಗಳನ್ನು ಮಾಡುತ್ತಿಲ್ಲ. ನಿಜವಾಗಿ ನೋಡಿದರೆ ಇವರು ಧರ್ಮ, ಸಮಾಜ ಇತ್ಯಾದಿಗಳನ್ನೆಲ್ಲ ಬೇರೆ ಅರ್ಥದಲ್ಲಿ ಗ್ರಹಿಸಿದಂತಿದೆ. ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗುವುದೇ ಅವರ ಧರ್ಮವೇನೋ ಪ್ರತಿಷ್ಠಿತ ವ್ಯಕ್ತಿಯಾಗುವ ಹಂಬಲ, ಕನಸು ಇತ್ಯಾದಿಗಳು ತಪ್ಪು ಎನ್ನುವುದು ಕಷ್ಟ. ಆದರೆ ಅದಕ್ಕೆ ಅನುಸರಿಸುವ ಮಾರ್ಗಗಳು ಮಾತ್ರ ತೀರ ಕೆಳಮಟ್ಟದಾಗಿರುತ್ತವೆ. ಯಾವುದಾದರೂ ಒಳ್ಳೆಯ ಕೆಲಸ ಉತ್ತಮ ಉದ್ದೇಶ, ನಾಲ್ಕು ಜನರಿಗೆ ಉಪಕಾರವಾಗುವಂತೆ ಕಾರ್ಯಗಳನ್ನು ಮಾಡುವುದು ಅಥವಾ ತಮ್ಮ ವಿದ್ವತ್ತಿನಿಂದ ಪ್ರತಿಷ್ಠೆಯನ್ನು ಗಳಿಸಿಕೊಳ್ಳಬೇಕೆ ಹೊರತು ಇನ್ನೊಬ್ಬರನ್ನು ಮೂಢರನ್ನಾಗಿಸುವುದರಿಂದ ಅಥವಾ ಅವರನ್ನು ಶೋಷಿಸುವುದರಿಂದ ತಾನು ಪ್ರತಿಷ್ಠಿತ ವ್ಯಕ್ತಿಯಾಗಬೇಕೆಂಬ ಹಂಬಲ ಮೆಚ್ಚತಕ್ಕದ್ದಲ್ಲ.

ಪವಾಡಗಳನ್ನು ಮುಖ್ಯವಾಗಿ ಕಲ್ಪನೆಯ ಪವಾಡಗಳು, ಸಾಧನೆಯಿಂದ ಮಾಡುವ ಪವಾಡಗಳು ಮತ್ತು ಇಂದು ನಿಜ ಜೀವನದಲ್ಲಿ ಕಾಣುವ ಹಿಂದಿನ ಪವಾಡಗಳು ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಪ್ರಸ್ತುತ ಪ್ರಬಂಧದಲ್ಲಿ ಪವಾಡಗಳ ಸಮಗ್ರ ವಿವೇಚನೆಯ ದೃಷ್ಟಿಯನ್ನು ಇಟ್ಟುಕೊಂಡಿಲ್ಲ. ಇಲ್ಲಿ ಹರಿಹರ, ರಾಘವಾಂಕ ಮತ್ತು ಚಾಮರಸರ ಈ ಮೂವರು ಶಿವಕವಿಗಳ ಕಾವ್ಯಗಳಲ್ಲಿ ಕಂಡು ಬರುವ ಪವಾಡಗಳ ಕುರಿತಾಗಿ ಮಾತ್ರ ವಿವೇಚನೆಯನ್ನು ನಡೆಸಲಾಗಿದೆ.

೧. **ಕಲ್ಪನೆಯ ಪವಾಡಗಳು:** ನಿಜ ಜೀವನದಲ್ಲಿ ನಾವು ಊಹಿಸಲಾರದ ಕೆಲವಾರು ಕಲ್ಪನೆಗಳು ಕಣ್ಣ ಮುಂದೆ ಹಾದು ಹೋಗುವುದುಂಟು. ಇಂತಹ ವಿಚಾರಗಳ ಬಗ್ಗೆ ಕುತೂಹಲಗೊಂಡ ನಮ್ಮ ಹಿಂದಿನ ಕವಿಗಳು ಇವುಗಳನ್ನು ಕಾವ್ಯಗಳಲ್ಲಿ ಅಳವಡಿಸಿದರೆ ಹೇಗೆ ಎಂಬ ಯೋಚನೆಯಿಂದ ಕಾರ್ಯಪ್ರವೃತ್ತರಾದರು. ಸಹಜವಾಗಿಯೇ ಅತಿಮಾನುಷ ಕಲ್ಪನೆಗಳನ್ನು ತಮ್ಮ ಪುರಾಣಗಳಲ್ಲಿ ಹೊಂದಿಸಿಕೊಂಡರು. ಆ ಕಾಲದಲ್ಲಿ ಜನರನ್ನು ತಮ್ಮ ಧರ್ಮದ ಕಡೆಗೆ ಒಲಿಸುವ ಪರಿ ಯಾವುದೆಂದು ಚಿಂತಿಸಿ ಕೊನೆಗೂ ಧಾರ್ಮಿಕ ಮಹಾಪುರುಷರ ಕುರಿತಾದ ಪುರಾಣಗಳನ್ನು ರಚಿಸಿ ಆ ಕಾವ್ಯಗಳಲ್ಲಿ ಈ ಮಹಾಪುರುಷರಿಗೆ ಅತಿಮಾನುಷ ಕಲ್ಪನೆಯ ಹಲವಾರು ಪವಾಡಗಳನ್ನು ಆರೋಪಿಸಿದರು. ಸಹಜವಾಗಿ ಜನರು ಸಾಮಾನ್ಯ ಮನುಷ್ಯರು ಮಾಡುವ ವಿಚಾರ ಅದರಲ್ಲಿ ಧಾರ್ಮಿಕ ಪ್ರವಚನಗಳಲ್ಲಿ ಆಸಕ್ತಿ ತೋರಿಸುವುದಿಲ್ಲ. ಆದರೆ ಅದ್ಭುತ ಪವಾಡಗಳನ್ನು ಅತಿಮಾನುಷ ಶಕ್ತಿಗಳನ್ನು ನಂಬಿ ಬೇಗನೆ ಇವುಗಳಿಗೆ ಮಾರು ಹೋಗುತ್ತಾರೆ. ಈ ಸತ್ಯವನ್ನರಿತ ಕವಿಗಳು ತಮ್ಮ ಕಾವ್ಯಗಳ ತುಂಬ ಇಂತಹ ಪವಾಡಗಳನ್ನು ತುಂಬಿದರು. ಜನರನ್ನು ಒಲಿಸಲು ಹಾಗೂ ಕಾವ್ಯ ಸೌಂದರ್ಯವನ್ನು ಹೆಚ್ಚಿಸಲು ಈ ಕವಿಗಳು ಮಾಡಿಕೊಂಡ ಪವಾಡಗಳ ಕಲ್ಪನೆಯನ್ನು ಮೇಲೆ ಹೇಳಿದ ಮೂರು ವಿಭಾಗಗಳಾಗಿ ಈ ಕೆಳಗಿನಂತೆ ನೋಡಬಹುದು.

ಸಾಧನೆಯಿಂದ ಸಾಧಿಸಲಾಗದ ಇಂದು ನಿಜ ಜೀವನದಲ್ಲಿ ಕಂಡು ಬರದ ಕೇವಲ ಕಾವ್ಯಗಳಲ್ಲಿ ಮಾತ್ರ ಕಂಡು ಬರುವ ಪವಾಡಗಳನ್ನು ಕಲ್ಪನಾತ್ಮಕ ಪವಾಡಗಳೆನ್ನಬಹುದು. ಇವು ಕವಿ ಕಲ್ಪನೆಯ ಮೂರ್ತರೂಪವಾಗಿ ಪುರಾಣಗಳಲ್ಲಿ ಪಡಿಮೂಡಿವೆ. ಹರಿಹರನ ಕಾವ್ಯಗಳಲ್ಲಿ ಮುಖ್ಯವಾಗಿ ರಗಳೆಗಳಲ್ಲಂತು ಇವುಗಳ ಅಧಿಕ್ಯವನ್ನು ಕಾಣುತ್ತೇವೆ..

ಪುರಾಣಕಾರರು ತಮ್ಮ ಆರಾಧ್ಯ ದೈವವಾದ ಪರಶಿವ ಹಾಗೂ ತಮ್ಮ ಮತವಾದ ಹಾಲುಮತದಲ್ಲಿ ಜನರಿಗೆ ಆಸಕ್ತಿಯನ್ನು ಕುದುರಿಸಲು ಪುರಾಣಗಳಲ್ಲಿ ಹಲವಾರು ಚಮತ್ಕಾರಗಳನ್ನು ಮಾಡಿದ್ದಾರೆ. ತತ್ಫಲವಾಗಿ ಪುರಾಣಗಳಲ್ಲಿ ಪವಾಡಗಳ ಅಧಿಕ್ಯವಿದೆ. ಹಲವಾರು ಮಹಾಪುರುಷರ ವಿಚಾರಗಳನ್ನು ಕುರಿತಾದ ಪುರಾಣಗಳನ್ನು ರಚಿಸಿ ಮಹಾಪುರುಷರ ಭಕ್ತಿಯ ಪರಾಕಾಷ್ಠೆಯನ್ನು ವರ್ಣಿಸುವಲ್ಲಿ ಪವಾಡಗಳನ್ನು ತಂದರು. ಸಾಧಾರಣವಾಗಿ ಪುರಾಣಗಳಲ್ಲಿ ನಾಯಕರಾದ ಎಲ್ಲಾ ಭಕ್ತರಿಗೂ ಶಿವನು ಪ್ರತ್ಯಕ್ಷನಾಗಿದ್ದಾನೆ. ಹಾಗೂ ಅವರನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿದ್ದಾನೆ. ಇದಕ್ಕಾಗಿ ಅವನು ಕೊಟ್ಟ ಭಕ್ತರ ಚಿತ್ರಣ ಅವರ ಭಕ್ತಿಯ ವೈವಿಧ್ಯ ಮೊದಲಾದವುಗಳನ್ನು ವೈವಿಧ್ಯಮಯವಾದ ಪವಾಡಗಳಲ್ಲಿ ನಾವು ನೋಡುತ್ತೇವೆ.

ತಿರುನೀಲಕಂಠರ ರಗಳೆಯಲ್ಲಿ ಗಂಡ ಹೆಂಡಿರು ತಮ್ಮ ಕಲ್ಪನೆಯಿಂದ ಶಿವನಾಣೆಯ ಕಾರಣವಾಗಿ ಒಬ್ಬರನ್ನೊಬ್ಬರು ಪರಸ್ಪರ ಮುಟ್ಟದೆ ಕಾಲಕಳೆದು ಮುದುಕರಾದಾಗ, ಇವರ

ಗುಪ್ತ ಭಕ್ತಿಯ ಪರಾಕಾಷ್ಠೆಯನ್ನು ಆ ಕಾರಣಕ್ಕಾಗಿ ಗಂಡ ಹೆಂಡಿರ ಅದ್ಭುತ ಸಂಯಮವನ್ನು ಜನರಿಗೆ ತಿಳಿಯಪಡಿಸುವುದಕ್ಕೆ ಯೋಚಿಸಿದ ಶಿವನು ಇವರನ್ನು ಪರೀಕ್ಷಿಸುತ್ತಾನೆ. ಈ ಪರೀಕ್ಷೆಯ ಒಂದು ಅಂಗವಾಗಿ ಗೊರವ ವೇಷದ ಶಿವನು ಜತನದಿಂದ ಕಾಪಾಡುವಂತೆ ಕೊಟ್ಟ ಪಾತ್ರೆಯು ಭಕ್ತನ ಪೆಟ್ಟಿಗೆಯಿಂದ ತನಗೆ ತಾನೇ ಮಾಯವಾಗುವುದು ಮತ್ತು ಕಳ್ಳತನದ ಆಪಾದನೆಯಿಂದ ಮುಕ್ತರಾಗಲು ನಡೆಸಿದ ಪರೀಕ್ಷೆಯ ಅಂಗವಾಗಿ ಕೊಂಡದಲ್ಲಿ ಮುಳುಗೆದ್ದ ಮುದಿ ದಂಪತಿಗಳಿಬ್ಬರು ಹದಿಹರೆಯದವರಾಗಿ ಕಂಗೊಳಿಸುವುದು.

ಇಳೆಯಾಂಡ ಗುಡಿಮಾರ ರಗಳೆಯಲ್ಲಿ ಗುಡಿಮಾರನು ಹಾವು ಕಚ್ಚಿ ಮಡಿದ ತನ್ನ ಈ ಮಗುವನ್ನು ಕರೆದಾಗ ನಿದ್ದೆ ತಿಳಿದೆದ್ದವನಂತೆ ಎದ್ದು ಬರುತ್ತಾನೆ. ಮೆರುವಿಂಡ ದೇವರ ರಗಳೆಯ ನಂಬಿಯು ಕರೆದಾಗ ಶಿವನು ಲಿಂಗದಿಂದಲೇ ಎದ್ದು ಬರುತ್ತಾನೆ. ಅಮರ ನೀತಿಯ ರಗಳೆಯಲಿ, ಯಃಕಶ್ಚಿತ್ ಕೌಪೀನವು ಅಮರ ನೀತಿ ಅವನ ಹೆಂಡತಿ ಮತ್ತು ಮಗ ಈ ಮೂವರ ತೂಕಕ್ಕೆ ಸಮವಾಗುತ್ತದೆ. ಹಾಲುಮತದಲ್ಲೂ ಸಾಕಷ್ಟು ಪವಾಡಗಳನ್ನು ಮಾಡಿರುವ ಮಹಾಪುರುಷರ ಸಂಖ್ಯೆ ಅಧಿಕ ಅವರ ಪವಾಡಗಳನ್ನು ಮುಂದೆ ಚರ್ಚಿಸಲಾಗಿದೆ.

೨. ಸಾಧನೆಯಿಂದ ಮಾಡುವ ಪವಾಡಗಳು: ನಿರಂತರ ಸಾಧನೆಯಿಂದ ಮಾಡುವ ಪವಾಡಗಳು ಹಲವಿವೆ. ಇವು ಜನ ಸಾಮಾನ್ಯರಿಗೆ ಪವಾಡ ಎಂದೆನಿಸಿಕೊಂಡರೂ ಅದನ್ನು ಸಮರ್ಥ ಮನುಷ್ಯರು ಸಾಧನೆಯಿಂದ ಸಿದ್ಧಿಸಿಕೊಳ್ಳುತ್ತಾರೆ. ಹೀಗೆ ಸಾಧನೆಯಿಂದ ಸಿದ್ಧಿಸಿಕೊಂಡ ಒಬ್ಬನು ಜನಸಾಮಾನ್ಯರ ದೃಷ್ಟಿಯಲ್ಲಿ ಪವಾಡ ಪುರುಷನಾಗುತ್ತಾನೆ. ಉದಾಹರಣೆಗೆ ತಂತಿಯ ಮೇಲೆ ನಡೆಯುವುದು, ಸಣ್ಣ ಕಬ್ಬಿಣದ ಬಳೆಯೊಳಗೆ ನುಗ್ಗುವುದು, ವಿಧ ವಿಧವಾದ ಯೋಗಾಸನಗಳನ್ನು ಮಾಡುವುದು. ನಿರಂತರ ತಪಸ್ಸಿನಿಂದ ಉಸಿರು ಬಿಗಿ ಹಿಡಿದು ಸಮಾಧಿಸ್ಥನಾಗುವುದು. ಉಸಿರನ್ನು ಹಿಡಿತದಲ್ಲಿಟ್ಟುಕೊಂಡು ಶರೀರವನ್ನು ಹಗುರಾಗಿಸಿ ನೆಲದಿಂದ ಮೇಲೆದ್ದು ಗಾಳಿಯಲ್ಲಿ ತೇಲುವುದು. ಮೃಗ ಪಕ್ಷಿಗಳನ್ನು ಹಿಡಿದು ಪಳಗಿಸಿ ಅವುಗಳನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವುದು ಮೊದಲಾದ ವಿಚಾರಗಳು ನಿರಂತರ ಸಾಧನೆಯಿಂದ ಸಾಧಿಸಲ್ಪಡುವ ಅಂಶಗಳು ಹಾಲುಮತ ಪುರಾಣಗಳಲ್ಲಿವೆ. ಈ ರೀತಿಯ ಪವಾಡಗಳು ಅಲ್ಲೊಂದು ಇಲ್ಲೊಂದು ದೊರೆಯುತ್ತವೆ. ಗೋವುಗಳನ್ನು ಕರೆಯಲು ಅವುಗಳು ಬಂದು ಶಿವಲಿಂಗಕ್ಕೆ ಹಾಲಿನ ಮಳೆಗರೆದವು. ಮಹಾಲಿಂಗನಿಗೆ ವಿಷ ಸರ್ಪಗಳನ್ನು ಆತನಿಗೆ ಅವು ಕಚ್ಚದೇ ಇದ್ದದ್ದು. ಮಹಾಲಿಂಗನಿಗೆ ಹುಲಿಗಳು ಏನೂ ಮಾಡದೇ ಅವನ ಹಿಂದೆ ಬಂದದ್ದು.

ಕೌಶಿಕನು ಮಾಯಾ ವರಾಹವನ್ನು ಹರಿಶ್ಚಂದ್ರನೆಡೆಗೆ ಛೂ ಬಿಟ್ಟದ್ದು, ಸಿದ್ಧರಾಮನು ಮೋಹಿಸಿ ಗಜವನ್ನು ಹತೋಟಿಗೆ ತಂದದ್ದು, ವಿಷ್ಣುವು ಜಿಂಕೆಯ ರೂಪವನ್ನು ಧರಿಸಿದ್ದು,

ಮನ್ಮಥನು ಸೃಷ್ಟಿಸಿ ಕಳುಹಿಸಿದ ತ್ರಿಲೋಕ ಸುಂದರಿಯರಿಗೂ ಸಿದ್ಧರಾಮನು ಮಾರುಹೋಗದೇ ಇದ್ದುದ್ದು, ಭೂಗರ್ಭದಲ್ಲಿದ್ದ ದೇವಾಲಯದಲ್ಲಿ ರೆಪ್ಪೆ ಹೊಡೆಯದೆ ಲಿಂಗದಲ್ಲಿ ತನ್ಮಯವಾಗಿದ್ದ ಸಮಾಧಿಸ್ಥವಾದ ದೇಹವನ್ನು ಅಲ್ಲಮಪ್ರಭು ಗೊಗ್ಗಯ್ಯ ನೋಡಿದ್ದು ಇತ್ಯಾದಿ ವಿಚಾರಗಳನ್ನು ಮೂವರು ಕವಿಗಳ ಕಾವ್ಯದಲ್ಲಿ ಕ್ವಚಿತ್ತಾಗಿ ಕಾಣುತ್ತೇವೆ. ಈ ಸಿದ್ಧ ಸಾಧನೆಗಳ ವಿಚಾರಗಳನ್ನು ಪುರಾಣಗಳ ಮೂಲಕ ಜನರಿಗೆ ತಿಳಿಯಪಡಿಸಿದ್ದಾರೆ ಜನರ ಸಾಧನೆಯ ಮಟ್ಟವು ಬೆಳೆಯಬಹುದೆಂಬ ಯೋಚನೆಯಿಂದ ಈ ರೀತಿಯ ಸಾಧಿತ ಪವಾಡಗಳ ಉಲ್ಲೇಖಗಳನ್ನು ಮಾಡಿದ್ದಾರೆ.

೩. ಇಂದು ನಿಜಜೀವನದಲ್ಲಿ ಕಂಡು ಬರುವ ಪವಾಡಗಳು: ಹಿಂದೊಮ್ಮೆ ಪುರಾಣಗಳಲ್ಲಿ ಕಲ್ಪನೆಗಳಾಗಿದ್ದು ಕಾಲಸರಿದಂತೆ ಅವುಗಳನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳುವ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ. ಹೀಗೆ ಒಂದು ಕಾಲದಲ್ಲಿ ಪವಾಡಗಳು ಎಂದೆನಿಸಿದ್ದ ವಿಚಾರಗಳು ಇಂದು ಸತ್ಯವಾದದ್ದನ್ನು ನಾವು ನೋಡುತ್ತೇವೆ. ಸಾಧಾರಣವಾಗಿ ದೈವ ದೇವರುಗಳ ವಿಚಾರವು ಕಾವ್ಯದಲ್ಲಿ ಬಂದಾಗ ಅವರ ಪುಷ್ಪಕ ವಿಮಾನದ ಉಲ್ಲೇಖ ಸಿಗುತ್ತದೆ. ಈ ಪುಷ್ಪಕ ವಿಮಾನಗಳು ಅಂದಿನ ಜನರ ಕಲ್ಪನೆಗಳು ವಸ್ತುಗಳು, ಪಕ್ಷಿಗಳು ಗಗನದಲ್ಲಿ ರೆಕ್ಕೆ ಬಿಚ್ಚಿ ಹಾರಾಡುವುದನ್ನು ತಾವು ಹಾಗೆಯೇ ಹಾರಿದರೆ ಹೇಗೆಂಬ ಕಲ್ಪನೆಯು ಜನರ ಮನಸ್ಸಿನಲ್ಲಿ ಮೂಡಿ ನೆಲದ ಮೇಲೆ ನಾವು ವಾಹನಗಳನ್ನು ಉಪಯೋಗಿಸುವಂತೆಯೇ ಆಕಾಶದಲ್ಲಿಯೂ ಉಪಯೋಗಿಸಬಹುದೇನೋ ಎನ್ನುವ ಕಲ್ಪನೆಯು ಕಾವ್ಯಗಳಲ್ಲಿ ಪುಷ್ಪಕ ವಿಮಾನದ ಕಲ್ಪನೆ ಹೊರಹೊಮ್ಮಿದೆ. ಇಂದಾದರೂ ವಿಮಾನಗಳು ಸಾಮಾನ್ಯ ಸಂಗತಿಗಳಾಗಿವೆ. ವಿಶ್ವಾಮಿತ್ರನು ಸೃಷ್ಟಿಸಿದ ವನ್ಯ ಮೃಗ ಪಕ್ಷಿಗಳಿಂದ ಹರಿಶ್ಚಂದ್ರನ ಪ್ರಶ್ನೆಗಳಿಗೆ ತೊಂದರೆಯಾದುದು, ಜಿಂಕೆಗೆ ಹೆದರಿ ಹುಲಿ, ಆನೆಗೆ ಹೆದರಿ ಸಿಂಹ, ಈ ಸಿಂಹಕ್ಕೆ ಹೆದರಿ ಶರಭ ಮುಂತಾದವು ಓಡಿ ಹೋದವು. ಸಿಂಹಗಳು ಆನೆಗಳು ನಾಯಿ, ಬೆಕ್ಕು, ಹಾವು ಮುಂಗೂಸಿಗಳು ಪರಸ್ಪರ ಆಟವಾಡುತ್ತಿದ್ದುದು ಮುಂತಾದವುಗಳು ಇಂದಿಗೂ ಕಲ್ಪನೆಯಾಗಿ ಕಾಣಬಹುದಾದ ವಿಚಾರಗಳು.

ಹೀಗೆ ಪುರಾಣಗಳಲ್ಲಿ ಕಲ್ಪನೆಯ ಪವಾಡಗಳು, ಸಾಧನೆಯಿಂದ ಮಾಡಬಹುದಾದ ಪವಾಡಗಳು ಮತ್ತು ಇಂದಿನ ಜೀವನದಲ್ಲಿ ಕಾಣುವ ಪವಾಡಗಳು ಎಂದು ಮುಖ್ಯವಾಗಿ ಮೂರು ವಿಭಾಗಗಳನ್ನು ಮಾಡುತ್ತೇವೆ. ಇವು ಅಲ್ಲದೆ ಇನ್ನೂ ಕೆಲವು ವಿಧಗಳನ್ನು ಕಾಣುತ್ತೇವೆ. ಅವುಗಳ ಬಗ್ಗೆ ಮುಂದೆ ವಿವರಿಸಲಾಗಿದೆ. ಇವಲ್ಲದೆ ಇಂದ್ರಜಾಲಿಕ ವಿದ್ಯೆಯಿಂದ ಕೆಲವೊಂದು ಪವಾಡಗಳನ್ನು ಮಾಡುತ್ತೇವೆ. ಸುಂದರಿಯಾದ ಕಾರಿಕಾಲಮ್ಮೆಯು ತನ್ನನ್ನು ಹಿಂಬಾಲಿಸಿದವರಿಗೆ ಅಸ್ಥಿಪಂಜರವಾಗಿ ಕಂಡದ್ದು. ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟಿದ್ದ ಪಾತ್ರೆ, ಕೌಪೀನಗಳು ಮಾಯವಾಗುವುದು.

ಅರಮನೆಯನ್ನು ಸುಟ್ಟಂತೆ ತೋರಿಸಿ ಪುನಃ ಯಾಥಾಸ್ಥಿತಿಗೆ ತರುವುದು. ರೇವಣಸಿದ್ದರು ಬಿಜ್ಜಳರಿಗೆ ಕೊಟ್ಟ ದಂಡವು ಐದು ಹೆಡೆಯ ಸರ್ಪವಾಗುವುದು ಇವೇ ಮೊದಲಾದ ಐಂದ್ರಜಾಲಿಕ ಉದಾಹರಣೆಗಳು ಈ ಪುರಾಣಗಳಲ್ಲಿ ಕಂಡು ಬರುತ್ತವೆ.

ಹಿಂದೆ ಜನರಲ್ಲಿ ಅಶರೀರವಾಣಿ, ಮಾಯ ಕನ್ನಡಿ, ಹಾರುವ ತಟ್ಟೆ, ಶಬ್ದವೇದಿ ಇವೇ ಮೊದಲಾವುಗಳ ಬಗ್ಗೆ ಇದ್ದ ಕಲ್ಪನೆಗಳು ಇಂದು ರೇಡಿಯೋ, ದೂರದರ್ಶನ, ಉಪಗ್ರಹಗಳು, ಕ್ಷಿಪಣಿಗಳು ಮೊದಲಾದವುಗಳ ರೂಪದಲ್ಲಿ ಜನ ಸಾಮಾನ್ಯರ ಸೂತ್ರವಾಗಿದೆ. ಆದರೂ ಪವಾಡಗಳ ಕಲ್ಪನೆ ನಿರಂತರವಾಗಿ ಮುಂದುವರೆಯುತ್ತದೆಯೇ ಹೊರತು ಒಂದು ಹಂತಕ್ಕೆ ಬಂದು ನಿಲ್ಲುವುದಿಲ್ಲ. ಹೊಸ ಹೊಸ ಕಲ್ಪನೆಗಳು ಉದ್ಭವವಾಗುತ್ತಲೇ ಇವೆ. ಇಂದು ಪವಾಡ ಪುರುಷರು ಧಾರಾಳವಾಗಿ ಕಂಡುಬರುತ್ತಾರೆ. ಹೊಸ ಹೊಸ ಪವಾಡಗಳ ಬಗ್ಗೆಯೂ ನಾವು ಕೇಳುತ್ತಲೇ ಇರುತ್ತೇವೆ. ಮನುಷ್ಯನ ಕೆಲವು ಕಲ್ಪನೆಗಳು ಕಾಲಕಳೆದಂತೆ ನಿಜ ಜೀವನದಲ್ಲಿ ನೈಜವಾಗುವುದರೊಂದಿಗೆ ಇನ್ನಷ್ಟು ಹೊಸ ಮಹತ್ವಾಕಾಂಕ್ಷೆಗಳು ಮನುಷ್ಯನನ್ನು ತಮ್ಮೆಡೆಗೆ ಸೆಳೆಯುತ್ತವೆ. ಇವುಗಳನ್ನೆಲ್ಲ ನೋಡಿದರೆ ಪವಾಡಗಳು ಸರ್ವಾಂತರ್ಯಾಮಿಯಾಗಿರುವ ವಿಚಾರ ವನ್ನು ಅವು ಮನುಷ್ಯರ ಜೀವನದಲ್ಲಿ ಎಷ್ಟು ಮಹತ್ವವನ್ನು ಬೀರುತ್ತವೆ ಎಂಬ ವಿಚಾರವನ್ನು ನಾವು ಮನಗಾಣಿಸಿಕೊಳ್ಳುತ್ತೇವೆ.

೬.೨. ಪವಾಡ ಕಥೆಗಳ ವರ್ಗೀಕರಣ ಮತ್ತು ಕಥೆಗಳ ಸ್ವರೂಪ

ಸಾಮಾನ್ಯವಾಗಿ ಭಾರತೀಯ ಪರಂಪರೆಯಲ್ಲಿರುವ ಎಲ್ಲ ಧರ್ಮಗಳಲ್ಲಿರುವ ಪವಾಡ ಕಥೆಗಳು ಭಿನ್ನವಾಗಿವೆ. ಆದರೆ ಅವುಗಳ ಹೋಲಿಕೆ ಒಂದೇ. ಹಾಲುಮತ ಪುರಾಣಗಳಲ್ಲಿ ಉಲ್ಲೇಖವಾಗಿರುವ ಪವಾಡ ಕಥೆಗಳು, ಇನ್ನು ವಿವಿಧ ಧರ್ಮಗಳ ಪುರಾಣಗಳಲ್ಲಿರುವ ಪವಾಡ ಕಥೆಗಳು ಒಂದೇ ರೀತಿಯ ಮೂಲಾಂಶಗಳನ್ನು ಹೊಂದಿರುವುದು ಗಣನೀಯವಾದ ಅಂಶವಾಗಿದೆ. ಧಾರ್ಮಿಕ ಮಹಾಪುರುಷರ ಜನನ ಕಥೆಗಳು ಅವರು ಮಾಡಿದ ಪವಾಡಗಳು, ದುಃಖವಾಗಿರುವ ಜನರನ್ನು ರಕ್ಷಿಸುವುದು, ತಮ್ಮ ಧರ್ಮಗಳ ತತ್ವಗಳನ್ನು ಸಮಾಜದಲ್ಲಿ ಎತ್ತಿ ತೋರಿಸಲೆಂದು ಮಾಡಿದ ಅದ್ಭುತ ಶಕ್ತಿಗಳನ್ನು ಜನರ ಮನದಲ್ಲಿ ಬಿಂಬಿಸುತ್ತಿದ್ದು, ಹಾಗೆಯೇ ಆಯಾ ಧರ್ಮದ ಆಚಾರ–ವಿಚಾರಗಳನ್ನು ಜನ ಮನಗಳಲ್ಲಿ ತುಂಬಿರುವ ಹಲವು ಪವಾಡ ಕಥೆಗಳ ಸ್ವರೂಪಗಳನ್ನು ಹೇಳಲಾಗಿದೆ.

ಹಾಲುಮತ ಮಹಾಪುರುಷರು ಜನಸಾಮಾನ್ಯರ ಹಿತದೃಷ್ಟಿಯಿಂದ ಅನೇಕ ಪವಾಡಗಳನ್ನು ಮಾಡಿದರು. ಮಹಾಪುರುಷರು ಧರ್ಮದ ಏಳ್ಗೆಗಾಗಿ ಜನತೆಗಾಗಿ ತಮ್ಮ ಅನುಭವಗಳನ್ನು,

ಜನರ ಕಷ್ಟಗಳನ್ನು ನಿವಾರಿಸಿ, ಅವರನ್ನು ಉತ್ತಮ ಜೀವನ ನಡೆಸಲು ಪ್ರೇರೇಪಿಸಲು, ನಾನಾ ರೀತಿಯ ಪವಾಡಗಳನ್ನು ಮಾಡಿ, ಧರ್ಮದ ತತ್ವಗಳನ್ನು, ಜೀವನದ ಮೌಲ್ಯಗಳನ್ನು ಅರ್ಥಮಾಡಿಸಿ, ಉತ್ತಮ ಜೀವನಕ್ಕೆ ದಾರಿ ದೀಪವಾದರು. ಪವಾಡ ಕಥೆಗಳು ಮಹಾಪುರುಷರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಪವಾಡ ಕಥೆಗಳು ಒಂದು ಪ್ರದೇಶದ ಹಾಗು ಒಂದು ಸಮುದಾಯದ ಚರಿತ್ರೆಯನ್ನು ಹೇಳುತ್ತವೆ. ಹಾಗಾಗಿ ಪವಾಡ ಕಥೆಗಳನ್ನು ಅಧ್ಯಯನಕ್ಕಾಗಿ ವಿಭಾಗಿಸಲಾಗಿದೆ.

೧. ಧಾರ್ಮಿಕ ಮಹಾಪುರುಷರ ಜನನದ ಪವಾಡ ಕಥೆಗಳು

೨. ದುಷ್ಟ ಜನರನ್ನು ಸಂಹರಿಸಿದ ಪವಾಡ ಕಥೆಗಳು

೩. ವ್ಯಕ್ತಿ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ಪವಾಡ ಕಥೆಗಳು

೪. ಇತರೆ ಪವಾಡ ಕಥೆಗಳು.

೧. ಧಾರ್ಮಿಕ ಮಹಾಪುರುಷರ ಜನನ ಕುರಿತ ಪವಾಡ ಕಥೆಗಳು

ನಮ್ಮ ಭಾರತೀಯ ಪರಂಪರೆಯಲ್ಲಿ ವಿವಿಧ ಧರ್ಮಗಳು ಹುಟ್ಟಿಕೊಂಡಿವೆ. ಆಯಾ ಧರ್ಮಗಳಲ್ಲಿ ಒಬ್ಬೊಬ್ಬ ಮಹಾಪುರುಷನು ಹುಟ್ಟಿ, ಧರ್ಮದ ಏಳ್ಗೆಗೆ ತನ್ನದೆ ಆದ ಕೊಡುಗೆಯನ್ನು ನೀಡಿದ್ದಾರೆ. ಆ ಮಹಾಪುರುಷರ ಜನನವು ಅಲೌಖಿಕವಾಗಿರುವುದೆಂದು, ಪುರಾಣಗಳಲ್ಲಿ ಕಾಣುತ್ತೇವೆ. ರಾಮಾಯಣ, ಮಹಾಭಾರತದಲ್ಲೂ ದೇವರೆನ್ನಿಸಿರುವ ಹಲವರ ಜನನವು ಅಲೌಖಿಕವಾದುದು. ಬುದ್ಧನ ಜನನವು ಸಹ ಒಂದು ಅಲೌಖಿಕ ಜನನವಾಗಿದೆ. ರಾಮಾಯಣದಲ್ಲಿ ಬರುವ ದಶರಥನು ಪುತ್ರ ಕಾಮೇಷ್ಟಿ ಯಜ್ಞ ನಡೆಸಿ, ಅಗ್ನಿದೇವನಿಂದ ಪಾಯಸ ಪ್ರಸಾದ ಪಡೆದು ಅದನ್ನು ತನ್ನ ಮೂವರು ಪತ್ನಿಯರಿಗೆ ಕೊಡುವನು. ಅದನ್ನವರು ಸೇವಿಸಲು ಗರ್ಭಧರಿಸುವರು. ಮುಂದೆ ಅವರು ರಾಮ, ಲಕ್ಷ್ಮಣ, ಶತ್ರುಘ್ನ ಮತ್ತು ಭರತ ಇವರಿಗೆ ಜನ್ಮವೀಯುವರು. ಪಾಂಡುರಾಜನ ಅಣತಿಯ ಮೇರೆಗೆ ಕುಂತಿಯು ಧರ್ಮನನ್ನು ಕರೆದು ಮಂತ್ರ ಜಪಿಸಿ ಯುಧಿಷ್ಠನಿಗೆ ಜನ್ಮವೀಯುವಳು. ಇದರಂತೆಯೇ ವಾಯುವಿನಿಂದ ಭೀಮನಿಗೆ, ಇಂದ್ರನಿಂದ ಅರ್ಜುನನಿಗೆ ಜನ್ಮವೀಯುವಳು ಇನ್ನು ಕನ್ಯೆಯಿರುವಾಗಲೇ ವಿಧವೆಯಾದ ಕಬೀರನ ತಾಯಿಯು ಅಲೌಕಿಕ ಶಕ್ತಿಯಿಂದ ಆತನಿಗೆ ಜನ್ಮ ನೀಡುವಳು.ಹೀಗೆ ಅನೇಕ ಧರ್ಮಗಳಲ್ಲೂ ಮಹಾಪುರುಷರ ಜನನವು ಪ್ರಕೃತಿ ವಿರೋಧಿಯಂತೆ ಆಗಿರುವುದು ಕಾಣುತ್ತೇವೆ. ಇದೇ ರೀತಿ ಹಾಲುಮತದಲ್ಲೂ ನಾವು ಧಾರ್ಮಿಕ ಮಹಾಪುರುಷರ ಅಲೌಖಿಕ ಜನನ ಕುರಿತ ಪವಾಡ ಕಥೆಗಳಿರುವುದನ್ನು ಕಾಣುತ್ತೇವೆ.

೧. ಮುದ್ದವ್ವ–ಮುದ್ದಗೊಂಡರ ಜನನ

೨. ಪದ್ಮಗೊಂಡನ ಜನನ

೩. ಬೀರೇಶ್ವರನ ಜನನ

೪. ಮಾಳಿಂಗರಾಯನ ಜನನ

೫. ದಕ್ಷಬ್ರಹ್ಮನ ಮಗಳಾಗಿ ಪಾರ್ವತಿಯ ಜನನ

೬. ವೀರಭದ್ರನ ಜನನ

೭. ಅಮೋಘಸಿದ್ಧನ ಜನನ

೧. ಮುದ್ದುಗೊಂಡ–ಮುದ್ದವರ ಜನನ

"ಶಿವನೆ ನಮ್ಮಯಿ ದ್ಯಾವರು ಬಂದಾರ ಬನ್ನಿರೆ
ಸ್ವಾಮಿ ನಮ್ಮಯ ದ್ಯಾವರು ಬಂದಾರ ಬನ್ನೀರೆ".[೩]

ಎಂದು ಪ್ರಾರಂಭವಾಗುವ ಜನಪದ ಹಾಲುಮತ ಮಹಾಕಾವ್ಯದಲ್ಲಿ ಲೋಕದ ಪ್ರಥಮ ಮಾನವರಾದ ಮುದ್ದಗೊಂಡ–ಮುದ್ದವ್ವರ ಜನನ ಕಥೆಯ ಸ್ವರೂಪ ಭಿನ್ನವಾಗಿ ಮೂಡಿ ಬಂದಿವೆ.

ಶಾಂತಮುತ್ತಯ್ಯನು ಸೃಷ್ಟಿಸಿದ ಕುರಿಗಳನ್ನು ಕಾಯಲು ಬ್ರಹ್ಮ, ವಿಷ್ಣು, ಶಿವ ಬೇಸತ್ತರು, ಕೊನೆಗೆ ಪಾರ್ವತಿಯೇ ಕುರಿಗಳನ್ನು ಕಾಯಲು ಮಗನಾದ ಷಣ್ಮುಖನನ್ನು ಮಗಲಲ್ಲಿ ಹೊತ್ತುಕೊಂಡು, ಗಣಪತಿಯನ್ನು ಕೈಲಾಸದಲ್ಲಿಯೇ ಬಿಟ್ಟು, ಕುರಿಗಳನ್ನು ಹೊಡೆದುಕೊಂಡು

"ಸ್ವರ್ಗದ ಬಾಗಲ ತಗದಾಳ ಮರ್ತ್ಯಾಕ ಇಳಿಸುತಾಳೇನೆ
ಮರ್ತ್ಯಕ ಇಳಸೂತಾಳೇನೆ ಬಂಕಾಪುರದ ಭೂಮ್ಯಾಗ
ಬಂಕಾಪುರದ ಭೂಮ್ಯಾಗ ಕುರಿಯಾ ಇಳಿಸುತಾಳೇನ".[೪]

ಭೂಮಿಗೆ ಬಂದ ಪಾರ್ವತಿಯು ಕುರಿಗಳನ್ನು ಕಾಯ್ದು, ಬೇಸತ್ತು,

"ಮೂರ ಕಣ್ಣಿನ ಹುತ್ತೇನ ಬಿಚ್ಚಿನೋಡುತಾಳೇನ
ಮೂರಕಣ್ಣಿನ ಹುತ್ತೇನ ಬಿಚ್ಚಿ ನೋಡುತಾಳೇನ
ಕುರಿಯಾ ಹೊಗಸುತಾಳೇನ ಹುತ್ತ ಮುಚ್ಚುತಾಳೇನ".[೫]

ಹುತ್ತದಲ್ಲಿ ಕುರಿಗಳನ್ನು ಮುಚ್ಚಿ, ಅದರ ಮೇಲೆ "ಮುತ್ತಲ" ಮರವನ್ನು ಬೆಳೆಸಿದಳು. ಹಾಗೆ ವಿಶ್ರಾಂತಿಗಾಗಿ ಮರದ ಕೆಳಗೆ ಕುಳಿತು ಷಣ್ಮುಖನಿಗೆ ಹಾಲು ಕುಡಿಸುತ್ತಿರಲು, ಅವಳ ಎದೆ ಹಾಲಿನಿಂದ ಮಣ್ಣಿನ ಗೊಂಬೆಗಳನ್ನು ಮಾಡಿದಳು. ಶಿವನು ಪಾರ್ವತಿಯನ್ನು ಹುಡುಕಿ ಕೊಂಡು, ಬಂಕಾಪುರಕ್ಕೆ ಬಂದಾಗ, ಪಾರ್ವತಿಯು ಶಿವನಿಗೆ ಹೇಳುತ್ತಾಳೆ.

"ಬಾರೋ ಬಾರೋ ಮಹಾದೇವ ನಂದೊಂದು ಮಾತ ಕೇಳಯ್ಯ
ಉಪ್ಪ ಉಂಡಿದ ಖಾಯದ ಹಾಲ ಮಣ್ಣಿಗ ಸುರುವಲಿಬಾರದ
ಮಣ್ಣ ಮುಟಗಿ ಮಾಡೀನೆ ಗೊಂಬಿ ಮಾಡೀನೆ ಅಂದಾಳ
ಎಡಕಿನ ಮಲಿಯ ಹಾಲಿಗ ಒಂದು ಗೊಂಬಿ ಮಾಡೀನೆ
ಬಲಕಿನ ಮಲಿಯ ಹಾಲಿಗ ಒಂದು ಗೊಂಬಿ ಮಾಡೀನೆ".[೬]

ಎಂದು ಶಿವನಿಗೆ ಹೇಳುತ್ತಾ, ಪಾರ್ವತಿಯು ಈ ಗೊಂಬೆಗಳಿಗೆ ಹೆಸರು ನೀಡಿ ಎಂದಾಗ ಶಿವನು

"ಮುದ್ದವ್ವ ಮುದಗೊಂಡನೆ ಹೆಸರ ಕರಿಬೇಕಂದಾಳ
ಬಲಕಿನ ಗೊಂಬಿನಲ್ಲೇಳ ಮುದ್ದಗೊಂಡನಾದನ
ಎಡಕಿನ ಗೊಂಬಿನಲ್ಲೇಳ ಮುದ್ದವ್ವಳಾಗಿ ಹುಟ್ಟ್ಯಾಳ
ಜೋಡೆರಡು ಗೊಂಬೇನ ಮುದ್ದವ್ವ ಮುದ್ದಗೊಂಡನ
ಮುದ್ದವ್ವ ಮುದಗೊಂಡನೆ ಜೋಡಿಲಿನಿಂದ್ರುಸುತಾರೇನ
ಜೋಡಿಲಿ ನಿಂದ್ರುಸುತಾರೇನ ಏನಂದಾಡುತಾರೇನ
ಮುದ್ದವ್ವ-ಮುದ್ದಗೊಂಡನೆಂದು ಹೆಸರ ಕೂಗುತಾರೇನ".[೭]

ಆಗ ಶಿವ-ಪಾರ್ವತಿಯರು ಮುದ್ದವ್ವ-ಮುದ್ದುಗೊಂಡರಿಗೆ ವಿವಾಹವಾಗಿ ಭೂಲೋಕಕ್ಕೆ ಹಾರೈಸಿ ಕಳುಹಿಸುತ್ತಾರೆ.

ಈ ಕಥೆಯೇ ಸುಕ್ಷೇತ್ರ ಹುಲಜಂತಿ ಶ್ರೀ ಮಾಹಿಮಾಂತಕ ಮಹಾಳಿಂಗರಾಯರ ಹಾಲುಮತ ಪುರಾಣದಲ್ಲಿ ಭಿನ್ನವಾಗಿ ವ್ಯಕ್ತವಾಗಿದೆ. ಕೈಲಾಸದಲ್ಲಿ ಪರಶಿವನ ಸಾನಿಧ್ಯದಲ್ಲಿ ನಾರದ, ಭೃಂಗಿ, ನಂದೀಶ್ವರಾದಿ ಅನೇಕ ಗಂದರ್ವರೊಂದಿಗೆ ಶಿವ, ಪಾರ್ವತಿಯವರು ಸಂತೋಷದಿಂದ ಇದ್ದರು. ಬಹುದಿನಗಳಿಂದ ಪಾರ್ವತಿಯರು ಭೂಲೋಕಕ್ಕೆ ಹೋಗಿಲ್ಲವೆಂದು, ಭೂಲೋಕದ ಸೌಂದರ್ಯವನ್ನು ಸವಿಯಲು ದಂಪತಿಗಳು ಹರ್ಷಪೂರಿತವಾಗಿ ಭೂಲೋಕಕ್ಕೆ ಆಗಮಿಸಿದರು. ಭೂ ಲೋಕದಲ್ಲಿ ಆನಂದಿಸುತ್ತಾ, ಪಂಚಭೂತಗಳನ್ನು ಒಗ್ಗೂಡಿಸಿ, ಮಣ್ಣಿನಿಂದ ಎರಡು ಗೊಂಬೆಗಳನ್ನು ಮಾಡಿದಳು. ಆ ಗೊಂಬೆಗಳಿಗೆ ಶಿವನು ಜೀವವನ್ನು ನೀಡಿ, ಪಾರ್ವತಿಯ ಮಡಿಲಿಗೆ ಹಾಕಿದನು. ಹಾಕಿದ ತಕ್ಷಣ ಪಾರ್ವತಿ ದೇವಿಯ ಎದೆಯ ಹಾಲು ಉಕ್ಕಿ ಬರುತ್ತಿರಲು, ಆ ಎರಡು ಜೀವಿಗಳು ಹಾಲನ್ನು ಕುಡಿದು, ಸಂತೃಪ್ತಿ ಪಟ್ಟವು.

"ಆ ಎರಡು ಶಿಶುಗಳಿಗೆ ಐದೇಶಿ ಮಾಡಿದರು. ಹನ್ನೆರಡನೇ ದಿನದಂದು ಶಿಶುಗಳಿಗೆ ನಾಮಕರಣ ಮಾಡುವುದಾಗಿ ವಜ್ರವೈಢೂರ್ಯಗಳಿಂದ ಮಾಡಲ್ಪಟ್ಟ ಬಂಗಾರದ ತೊಟ್ಟಿಲಲ್ಲಿ

ಹಾಕಿ, ರೇಷ್ಮೆ ವಸ್ತ್ರದಿಂದ ಅಲಂಕೃತ ಮಾಡಿದರು. ದೇವಾನು–ದೇವತೆಗಳಿಗೆ ಆಹ್ವಾನಿಸಿದರು. ಎಲ್ಲರೂ ಸಂತೋಷದಿಂದ ಈ ಶುಭ ಕಾರ್ಯದಲ್ಲಿ ಪಾಲ್ಗೊಂಡು ಹರ್ಷವನ್ನು ವ್ಯಕ್ತಪಡಿಸಿದರು. ಶಿವ–ಪಾರ್ವತಿಯರಿಂದ ಅನುಗ್ರಹಿಸಲ್ಪಟ್ಟ ಶಿಶುಗಳೀರ್ವರ ಮಂಗಲ ಕಾರ್ಯಕ್ಕೆ ಎಲ್ಲ ದೇವರ್ಷಿಗಳ ಶಾಸ್ತ್ರ ಶುದ್ಧ ಮಂಡನೆಗೆ ಯೋಗ್ಯ ದೇವಿಯು ವಿಚಾರಿಸಿ ಗಂಡು ಮಗುವಿಗೆ ಮುದ್ದುಗೊಂಡನೆಂದೂ, ಹಾಗೂ ಹೆಣ್ಣು ಮಗುವಿಗೆ ಮುದ್ದವ್ವನೆಂದು ಹೆಸರಿಡಿರೆಂದು ಆಜ್ಞೆ ಮಾಡಿದರು."[೮] ಅದರಂತೆ ಮುದ್ದವ್ವ–ಮುದ್ದುಗೊಂಡರೆಂದು ನಾಮಕರಿಸಲಾಯಿತು.

ತೇಜೋಮಯ ಹಾಲುಮತ ಪುರಾಣದಲ್ಲಿ ಬರುವ ಕಥಾ ಸ್ವರೂಪ "ಒಂದಾನೊಂದು ದಿನ ಕೈಲಾಸದಲ್ಲಿ ದೇವರ ಸಭೆಯು ನಡೆಯುತ್ತಿರುವಾಗ ಬ್ರಹ್ಮ, ವಿಷ್ಣು, ಇಂದ್ರ, ನಾರದ, ಭೃಂಗಿ, ನಂದಿ, ಗಂಧರ್ವರೊಡನೆ ಎಲ್ಲರೂ ಸಂತೋಷದಿಂದ "ಉಘೇ, ಉಘೇ ಎಂದು ಹೇಳುತ್ತಿದ್ದರು. ಶಿವನ ಪಕ್ಕದಲ್ಲಿದ್ದ ಗಂಧರ್ವರು ಮುನಿಗಳ ಗುಂಪಿನಲ್ಲಿದ್ದ ಒಬ್ಬ ಕುರೂಪಿ ಮುನಿಯನ್ನು ಕಂಡು ಹಾಸ್ಯ ಮಾಡಿ ನಕ್ಕರು. ಆ ಮುನಿಯು ಕೋಪಗೊಂಡು ನೀವಿಬ್ಬರೂ ಭೂಲೋಕದಲ್ಲಿ ಜನ್ಮ ತಾಳಿ, ಸತಿಪತಿಗಳಾಗಿ ಬಾಳಿರಿ ಎಂದು ಶಾಪ ನೀಡಿದನು."[೯] ಗಂಧರ್ವರು ಭಯಭೀತರಾಗಿ "ಪ್ರಭುವೇ ನೀನು ಮಹಾಮುನಿ ಎಂಬುದನ್ನು ಅರಿಯದ ನಾವು ನಿಮಗೆ ಹಾಸ್ಯ ನೀಡಿದ್ದು ನಿಜ. ನಮ್ಮಿಂದ ಸರ್ವಥಾ ತಪ್ಪಾಗಿದೆ. ನೀವು ನರಜನ್ಮಕ್ಕೆ ಹೋಗಿ ಎಂದು ಶಪಿಸಿದ್ದೀರಿ ಇದಕ್ಕೆ ನಿಶ್ಯಾಪವನ್ನು ಕರುಣಿಸಬೇಕು"[೧೦] ಎಂದು ದೈನ್ಯತೆಯಿಂದ ಬೇಡಿಕೊಂಡರು. ಆಗ ಮುನಿಯು ನೀವು ಭೂಲೋಕದಲ್ಲಿ ಸತಿ–ಪತಿಗಳಾಗಿ ಹುಟ್ಟಿದ ಮೇಲೆ, ನಿಮ್ಮ ಗರ್ಭದಲ್ಲಿ ಗಂಡು ಮಗು ಜನಿಸುವುದು. ಆ ಮಗುವಿನಿಂದ, ನಿಮ್ಮ ಶಾಪ ನಿಶ್ಯಾಪವಾಗುವುದು ಎಂದರು. ಈ ಗಂಧರ್ವರಿಬ್ಬರೇ ಭೂ ಲೋಕದಲ್ಲಿ ಮುದ್ದವ್ವ–ಮುದ್ದುಗೊಂಡರಾಗಿ ಜನಿಸುವರು.

ತೇಜೋಮಯ ಹಾಲುಮತ ಪುರಾಣದಲ್ಲಿ ಬರುವ ಹಾಗೆ ರಸ್ತಾಪುರ ಭೀಮಕವಿಯ "ಹಾಲುಮತೋತ್ತೇಜಕ ಪುರಾಣ" ದಲ್ಲಿ ಬರುವ ಕಥೆಗೆ ಸಾಮ್ಯವಿರುವುದು ಕಂಡು ಬರುತ್ತದೆ. ತೇಜೋಮಯ ಹಾಲುಮತ ಪುರಾಣದಲ್ಲಿ ಶಿವ–ಪಾರ್ವತಿಯರು ಕೈಲಾಸದಲ್ಲಿ ಎಲ್ಲರೊಂದಿಗೆ ಸಂತೋಷದಿಂದಲೂ, ಇಬ್ಬರು ಗಂಧರ್ವರು ಕುರೂಪಿ ಮುನಿಯ ನೋಡಿ ಹಾಸ್ಯದ ಫಲವಾಗಿ ಭೂಮಿಯಲ್ಲಿ ನರ ಜನ್ಮ ತಾಳಿದರು – ಇದೇ ರೀತಿಯಾಗಿ ಹಾಲುಮತ್ತೋತ್ತೇಜಕ ಪುರಾಣದಲ್ಲಿ ಸ್ವಲ್ಪ ವ್ಯತ್ಯಾಸದೊಂದಿಗೆ ಕಥೆ ಹುಟ್ಟಿದೆ. ಇಲ್ಲಿ

"ಒಂದು ದಿನ ಹರನು ಕೈಲಾಸಪುರ ಮಂದಿರದಿ
ಇಂದಿರಾಪತಿ ಮುಖ್ಯಸುರರ ಸಮ್ಮೇಳದಲಿ
ನಂದಿನಾರದ ಗರುಡಗಂಧರ್ವರಿಂ ಕೂಡಿ ಪರಮ ಸಂತಸದಿರುತಿರೆ

ಬಂದರಲ್ಲಿಗೆ ಸಕಲ ಮುನಿಗಳೊಂದಾಗುತಾ
ನಂದದಿಂ ನಾಟ್ಯವ ನಾಡುತ್ತಾ ಸ್ತುತಿ ಮಾಡುತ್ತ
ಇಂದು ಶೇಖರನ ಪಾದಕೊಂದಿಸಿದರಖಿಳ ನೆರದಿರ್ದಸುರರು ಘೇಯೆನುತಿರೆ".[೧೧]

"ಹರನಯಡ ಬಲದಿರ್ದ ಉಭಯ ಗಂಧರ್ವರಾ
ವರಮುನಿಯ ತಂಡದಿ ಕುರೂಪಿಯಾದೋರ್ವ
ಪರತರ ತಾಪಸೋತ್ತಮನ ಮಹಿಮವರಿಯದೆ ಮೂಢರಂತೆ
ನೆರೆನಕ್ಕು ಕರಬಡಿಯೆ ಮುನಿನಾಥ ಕೋಪದಿಂ
ನರಲೋಕಕ್ಕಿಳಿದು ಕುಡುವಕ್ಕಲಿಗರುದರದೋಳ್
ಸರಸದಿಂದ್ಭುಳಿಸಿ ಸತಿಪತಿಗಳಾರೆಂದತಿ ಕೋಪದಿಂ ಶಪಿಸಿ"[೧೨]

ಹೀಗೆ ಎರಡು ಪುರಾಣಗಳಲ್ಲಿ ಹೋಲಿಕೆ ಇರುವುದನ್ನು ಕಾಣುತ್ತೇವೆ. ಮುಂದೆ ಶಾಪ ವಿಮುಕ್ತಿಗಾಗಿ ಮುನಿಯ ಬಳಿ ಕ್ಷಮೆ ಕೇಳಿದಾಗ, ನಿಮಗೊಂದು ಗಂಡು ಮಗು ಹುಟ್ಟುವುದು, ಮಗುವಿನೊಂದಿಗೆ ನಿಮ್ಮ ಶಾಪ ವಿಮುಕ್ತಯಾಗುವುದು ಎಂದು ಹೇಳಿದಾಗ, ಭೂಲೋಕದಲ್ಲಿ ಮುದ್ದವ್ವ-ಮುದ್ದಾಯಿಯಾಗಿ ಜನಿಸುವರು.

ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣದಲ್ಲಿ ಎಲ್ಲ ಹಾಲುಮತ ಪುರಾಣ ಗಳಲ್ಲಿರುವ ಮುದ್ದಾಯಿ-ಮುದ್ದವ್ವರ ಹೆಸರಿಗೆ ಬದಲಾಗಿ, ಇಲ್ಲಿ ಮುದ್ದಾಯಿಯ ಹೆಸರು ಮನು, ಮುದ್ದವ್ವರ ಇಂಡಾದೇವಿ ಎಂಬ ವ್ಯತ್ಯಾಸವನ್ನು ಕಾಣುತ್ತೇವೆ. ಮನು-ಇಂಡಾದೇವಿ ಹುಟ್ಟಿನ ಕಥೆ ಪಾರ್ವತಿಯು ಶಿವನಲ್ಲಿ ಯಾವಾಗಲೂ ಬಾಳಿ ಬೆಳಗುತ್ತ ಮುಗ್ಧ ಭಾವದಿಂದ ಇರುವ ಪ್ರಜಾಸೃಷ್ಟಿ ಯಾವುದು? ಎಂದು ಕೇಳಿದಳು. ಅದಕ್ಕೆ ಶಿವನು "ದೇವಿ ನೀನು ಕೇಳುವ ಮಾತು, ಸರಿ, ದೇವಿ ಕೃತ ಯುಗದಿಂದ ಸೃಷ್ಟಿ ನಿರ್ಮಾಣವಾಗುತ್ತ ಬರುತ್ತಿರಲಾಗಿ ದೇವಗಣ, ದೈತ್ಯಗಣ, ಮನುಷ್ಯಗಣ ಇನ್ನುಳಿದ ಅನೇಕ ಜೀವರಾಶಿಗಳೆಲ್ಲ ನಿರ್ಮಾಣ ಮಾಡುತ್ತ ಬರಲಾಗಿ ಅದರೊಳಗೆ ರುದ್ರನು ಮಾಡಿದ ಸೃಷ್ಟಿ ಬ್ರಹ್ಮ ಸೃಷ್ಟಿ, ಬ್ರಹ್ಮನ ಮಕ್ಕಳು ಮಾಡಿದ ಸೃಷ್ಟಿ, ದೇವ ಮುನಿಗಳು ಇವರೆಲ್ಲ ಸೃಷ್ಟಿಗಿರಬೇಕಾಗುವ ಸಕಲ ಜೀವರಾಶಿಯೆಲ್ಲ ನನ್ನ ನಿನ್ನ ಕರುಣೆಯಿಂದ ನಿರ್ಮಾಣ ಮಾಡುತ್ತ ಬಂದರು. ಆದರೆ ಮುಗ್ಧ ಭಾವದಿಂದ ಬಾಳಿ ಬೆಳಗುವರಾರೆಂದರೆ ಮನುಷ್ಯಗಣ, ಚಾಕ್ಷುಸ ಮನ್ವಂತರ ನಂತರ ಜಲಪ್ರಳಯವಾಗಿ ಸೃಷ್ಟಿ ನಿರ್ಮಾಣವಾಗುವ ಪ್ರಥಮದಲ್ಲಿ ನನ್ನ ಅಂಶವೇ ನನ್ನ ಪರಿಹಾಸದಿಂದ ಇಚ್ಛೆಯಿಂದ ಮಾನವ ರೂಪದಿಂದ ಹುಟ್ಟಿ ಬಂದನು. ಅವನೇ ಮನುಕುಲ ಮಾನವ ಅವನಿಂದ ಬೆಳೆದ ವಂಶವೇ ಮುಗ್ಧ ಭಾವದಿಂದ ಕಲಿಯುಗದಂತ್ಯದವರೆಗೆ ಬಾಳಿ ಬೆಳಗುವರೆಂದು ದೇವರು ದೇವಿಯ ಮುಂದೆ

ಹೇಳಿದರು."[೧೩] ಹೀಗೆ ಶಿವನ ಅಂಶದಿಂದ ಮನು(ಮುದ್ದಾಯಿ) ಯು ಜನಿಸಿದನು. ಹಾಗೆಯೇ ಅವನ ಸತಿ ಹೇಗೆ ಉತ್ಪತ್ತಿಯಾದಳು ಎಂದು ಕೇಳಿದಾಗ, ಶಿವನು ಹೇಳಲು ಆರಂಭಿಸಿ, ದೇವಿ ಒಂದು ದಿನ ಮನುವು ನನ್ನ ಬಳಿ ಬಂದು, ಪರಮಾತ್ಮನೇ ನನ್ನ ವಂಶ ಸರ್ವಕಾಲದಲ್ಲೂ ಬೆಳೆಯಬೇಕು. ನಿಮ್ಮ ಕರುಣೆ ನನ್ನ ಮೇಲೆ ಇರಬೇಕೆಂದಾಗ, ಶಿವನು ಅವನಿಗೆ ನಿನ್ನ ವಂಶ ವೃದ್ಧಿಯಾಗಬೇಕೆಂದರೆ, ನೀನು ಒಂದು ಯಜ್ಞವನ್ನು ಮಾಡು, ಅದಕ್ಕೆ ಎಲ್ಲ ದೇವಾನು–ದೇವತೆಗಳಿಗೆ, ಸೂರ್ಯ–ಚಂದ್ರರನ್ನು ಆಹ್ವಾನಿಸು ಎಂದು ಹೇಳಿ ಕಳುಹಿಸಿದನು.

ಶಿವನ ಮಾತಿನಂತೆ, ಮನುವು ಯಜ್ಞಕ್ಕೆ ತಯಾರಾಗಿ, ದೇವಾನು–ದೇವತೆಗಳನ್ನು, ಋಷಿ–ಮುನಿಗಳನ್ನು, ಸೂರ್ಯ–ಚಂದ್ರನನ್ನು ಆಹ್ವಾನಿಸಿ, ಯಜ್ಞ ಮಾಡುತ್ತಿರಲು, ನನ್ನ ಒಂದು ಶಕ್ತಿಯಿಂದ, ಆಸೆಯಿಂದ, ನಿನ್ನ ಅಂಶದಿಂದಲೇ ಒಂದು ಹೆಣ್ಣು ಮಗು ಜನಿಸಬೇಕೆಂದು ಆಲೋಚಿಸಿ, "ನಿನ್ನ–ನನ್ನ ಕರುಣೆಯಿಂದ ಆ ಯಜ್ಞದಲ್ಲಿ ಒಂದು ಅದ್ಭುತವಾದ ಸುಂದರ ಕನ್ಯೆ ಜನಿಸಿದಳು. ಆ ಕನ್ಯೆಯನ್ನು ನೋಡಿ, ಎಲ್ಲ ಮುನಿಗಳು ಈ ಹೆಣ್ಣಿಗೆ ನಾಮಕರಣ ಮಾಡೆಂದು ನನಗೆ ಹೇಳಿದರು. ಆವಾಗ ನಾನು ವಿಚಾರ ಮಾಡಿ ಈ ಯಜ್ಞಕ್ಕೆ ಕ್ಷೀರವೇ(ಹಾಲು) ಪ್ರಸಾದ ಮಾಡಿ ಶಿವಗಣವೆಲ್ಲ ಸ್ವೀಕರಿಸಿದ್ದರಿಂದ, ಯಜ್ಞದಲ್ಲಿ ಹುಟ್ಟಿದ ಈ ಮಹಾಶಕ್ತಿಗೆ(ಕನ್ಯೆ) ಇಡಾದೇವಿ ಅಥವಾ ಹಾಲುದೇವಿ ಎಂದು ಕರೆಯಿರಿ"[೧೪] ಎಂದು ಹೇಳಿ ಆ ಮಗುವಿಗೆ ನಾಮಕರಣ ಮಾಡಲಾಯಿತು. ಹೀಗೆ ಹಾಲುಮತ ಪುರಾಣಗಳಲ್ಲಿ ಮುದ್ದವ್ವ–ಮುದ್ದಾಯಿಯರ ಜನನದ ಕಥೆಗಳು ಸ್ವಲ್ಪ ಭಿನ್ನತೆಯಿಂದ ಕಂಡು ಬಂದರೂ ಅವುಗಳಲ್ಲಿರುವ ಕಾಥಾಂಶ ಒಂದೆ.

೨. ಪದ್ಮಗೊಂಡನ ಜನನದ ಕಥೆ: ಹಾಲುಮತದ ಪ್ರಮುಖರಲ್ಲಿ ಒಬ್ಬನಾದ ಪದ್ಮಗೊಂಡನ ಜನನವು ಅಲೌಕಿಕವಾದದು. ಇವನ ಜನನದ ಕಥೆಯು ಹಲವು ಪುರಾಣಗಳಲ್ಲಿ ವೈರುಧ್ಯವಿರುವುದನ್ನು ಕಾಣುತ್ತೇವೆ. ಶ್ರೀ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣದಲ್ಲಿ ವ್ಯಕ್ತಗೊಂಡಿರುವ ಕಥೆ ಜಾಗ್ರತ ಪುರದಲ್ಲಿ ಮುದ್ದಾಯಿ– ಮುದ್ದವ್ವರು ಪ್ರೀತಿಯಿಂದ ವಾಸಿಸುತ್ತಿರಲು, ಒಂದು ದಿನ ಮುದ್ದವ್ವಳು ತನ್ನ ಗಂಡನ ಬಳಿ ನಾವು ವಿವಾಹವಾಗಿ ಏಳು ವರ್ಷಗಳಾದವು. ಅವತ್ತಿನಿಂದಲೂ ಶಿವನ ದರ್ಶವನ್ನು ಪಡೆದೆ ಇಲ್ಲ. ಅವರ ದರ್ಶನ ಪಡೆಯಬೇಕೆಂದು, ಶಿವ ನಾಮವನ್ನು ಜಪಿಸುತ್ತ, ತಪಸ್ಸನ್ನು ಮಾಡಲಾರಂಭಿಸಿದಳು. ೧೨ ವರ್ಷಗಳ ಕಾಲ ತಪಸ್ಸನ್ನು ಮಾಡಿದ ಬಳಿಕ, ಶಿವ ಪಾರ್ವತಿಯರು ಮಾರು ವೇಷದಲ್ಲಿ ಭೂಲೋಕಕ್ಕೆ ಬಂದು ಕಾರ್ಯ ನಿರತನಾಗಿರುವ ಮುದ್ದಾಯಿ (ಮುದ್ದುಗೊಂಡ)ನ ಹತ್ತಿರ ಬಂದು ನನಗೆ ಹಸಿವೆಯಾಗಿದೆ, ಏನಾದರೂ ನೀಡಿ ಎಂದನು. ನಮ್ಮ ಮನೆಗೆ ಅತಿಥಿ ಬಂದಿದ್ದಾರೆಂದು, ಮುದ್ದುಗೊಂಡನು ತನ್ನ ಹೆಂಡತಿಯ ಹತ್ತಿರ ಹೋಗಿ, ಅಡುಗೆ ಮಾಡಿಸಿಕೊಂಡು ಬರುವಷ್ಟರಲ್ಲಿ ಮಾರುವೇಷದ

ಶಿವ ನಟ್ಟು ಕಡಿಯುತ್ತಿದ್ದ ಗುದ್ದಲಿಯಿಂದಲೇ ಹನ್ನೆರಡು ಹರದಾರಿ ಅಳತೆಯ ಭೂಮಿಯನ್ನು, ಅಂದರೆ ನೆಲವನ್ನು ನಟ್ಟು ಕಡೆದು ಮುಗಿಸಿದ್ದನು. ಇದನ್ನು ಕಂಡ ಮುದ್ದುಗೊಂಡ ಇವನು ಸಾಮಾನ್ಯನಲ್ಲ, ಪರಶಿವನೆ ಇರಬೇಕೆಂದು ಓಡಿ ಬಂದು ಕಾಲಿಗೆ ನಮಸ್ಕರಿಸಿದನು. ಆಗ ಬೆವರುಗೊಂಡ ಮೈಯಿಂದ ಬೆವರು ತೆಗೆದು ಅಲ್ಲಿಯೆ ಇದ್ದ, ಮೂರುಕಣ್ಣಿನ ಹುತ್ತದಲ್ಲಿ ಹಾಕಿದನು. ಮುದ್ದುಗೊಂಡನಿಗೆ ಯಾವತ್ತಿಗೂ ಹುತ್ತದಲ್ಲಿ ಕೈ ಹಾಕಬೇಡ ಎಂದು ಆಜ್ಞೆ ಮಾಡಿದ. ಇದಕ್ಕೆ ಮುದ್ದಗೊಂಡ ಒಪ್ಪಿ, ಇಬ್ಬರು ಮುದ್ದವ್ವನ ಬಳಿ ಹೋಗಿ, ಶಿವ ನಿಜಸ್ವರೂಪಿಯಾಗಿ ದರ್ಶನ ನೀಡಿ, ಅವರಿಗೆ ಮಗುವಾಗಲೆಂದು, ಹರಸಿ ಹತ್ತು ಉತ್ತುತ್ತಿಯನ್ನು ತಿನ್ನಲು, ನೀಡಿ ಕೈಲಾಸಕ್ಕೆ ತೆರಳುವನು. ಇಲ್ಲಿ ಮುದ್ದುಗೊಂಡ–ಮುದ್ದವ್ವರವರು ಭಕ್ತಿಯಿಂದ ಶಿವಪೂಜೆಯನ್ನು ಮಾಡುತ್ತ ಕಾಲ ಕಳೆಯುತ್ತಿದ್ದರು. ಶಿವ ನೀಡಿದ ಹಣ್ಣುಗಳನ್ನು, ಮುದ್ದವ್ವ ಸೇವಿಸಿ, ಏಳು ಪುತ್ರರಿಗೆ ಜನ್ಮ ನೀಡಿದಳು. ಕ್ರಮವಾಗಿ "ರಾಚಗೊಂಡ ಉಫಘ, ಆದಿಗೊಂಡ, ಅನಾದಿಗೊಂಡ, ಲಕ್ಕಗೊಂಡ, ಕ್ಯಾಮಗೊಂಡ, ದ್ಯಾಮಗೊಂಡ, ನೇಮಗೊಂಡ, ಕಡೆ ಹುಟ್ಟಿದ ಮಗು ಉಂಡಾಡ ಪದ್ಮಗೊಂಡರೆಂದು ಪರಮ ಹರುಷದಿಂದ ಸರ್ವರು ನಾಮಕರಣ ಮಾಡಿದರು."[೧೫]

ತೇಜೋಮಯ ಹಾಲುಮತ ಪುರಾಣದಲ್ಲಿ ಹಾಗೂ ಪಂಡಿತ ಶ್ರೀ ಚನ್ನಬಸವಕವಿಯ 'ಹಾಲುಮತ ಪುರಾಣವು' ಎಂಬ ಪುರಾಣಗಳಲ್ಲಿ ಪದ್ಮಗೊಂಡನ ಜನನ ಕಥೆಯ ಸ್ವರೂಪವು ಒಂದೇ ರೀತಿಯಾಗಿರುವುದು. ಹಾಗೆಯೇ ಪದ್ಮಗೊಂಡನು 'ಶಿವಪದ್ಮ'ನೆಂಬ ಹೆಸರಿನಿಂದ ಕರೆಯಲಾಗಿದೆ. ಶಾಪಗ್ರಸ್ತರಾಗಿ ಭೂಲೋಕದಲ್ಲಿ ಮುದ್ದುಗೊಂಡ ಮತ್ತು ಮುದ್ದಾಯಿಯರು ಜನಿಸಿ, ಅವರ ಗರ್ಭದಲ್ಲಿ ಆದಿಗೊಂಡನೆಂಬ ಮಗ ಹುಟ್ಟುತ್ತಾನೆ.

"ಇಂಥವರೊಳು ಮುದ್ದುಗೊಂಡ ಮುದ್ದಾಯಿಯು। ಸಂತತಂ ಸತಿಪತಿಯಾಗಿ
ಕುಂತುಹರನಧ್ಯಾನದಿಂದಿರುತಿರಲಾಗ। ಕಾಂತೆ ಮುದ್ದಮ್ಮನುದರದಿ
ಸ್ವಾತಿಯುದಕದ ಮೌಕ್ತಿಕದಂತೆ ಶಾಪವ। ನ್ನಾಂತ ಗಂಧರ್ವನು ಜನಿಸ॥
ಸುತನುದಿಸಲು ಸತಿಪತಿಗಳು ಹರುಷದಿ। ಹಿತದಿಂದ ಸಾಕುತ್ತಲಿರುತ
ದ್ವಾದಶ ಏನದಿ ನಾರಿಯರಂ ಕರೆದು ಸಂ। ಮ್ಮೋದದಿಂ ನಾಮಕರಣವ
ವೇದಿಸಿ ಮಗನಿಗೆ ಆದಿಗೊಂಡನುಯೆಂಬ। ಮೋದದ ಪೆಸರನ್ನು ಕರೆಯೆ"[೧೬]

ಹೀಗೆ ಆದಿಗೊಂಡನೆಂಬ ಮಗನು ಜನಿಸಿದನು. ಆದಿಗೊಂಡನ ವೃತ್ತಾಂತವನ್ನು ಹಾಲುಮ ತೋತ್ತೇಜಕ ಪುರಾಣದಲ್ಲಿ

"ಕೃತಿವಾಸನು ಪೇಳಲಾಗ ಗಂದರ್ವರುರೆ
ಚಿತ್ತ ಜಾರಿಗೆ ನಮಿಸಲಾಕ್ಷಣದಿ ಶಿವಭಸಿತ
ವಿತ್ತವರಿಗಪ್ಪಣೆಯ ಕೊಟ್ಟು ಕಳಿಸಿದ ಮುದದಿ ನರಲೋಕ ವಿಷಯಸುಖಕೆ
ಇತ್ತ ಭೂತಲ ಮದ್ಯಪ್ರಾಂತದೊಳತ್ಕೀರ್ತಿ
ವೆತ್ತು ಶೋಭಿಸುವ ಜಾಗೃತಿ ಪುರದೊಳಿರುತಿರ್ದ
ಉತ್ತಮೋತ್ತಮ ಮುದ್ದುಗೊಂಡಧರ್ಾಂಗಿ ಮುದ್ದಾಯಿಯಸುಗರ್ಭದಿಂದ"[೧೭]

ಇವರಿಬ್ಬರ ಉದರದಲ್ಲಿ ಆದಿಗೊಂಡನೆಂಬ ಮಗನು ಜನಿಸಿದನು.

ಈ ಎರಡು ಪುರಾಣಗಳಲ್ಲಿ ಆದಿಗೊಂಡನ ವಿವಾಹದ ಕುರಿತು ಇರುವ ಕಥೆಗಳ ಸ್ವರೂಪ ಒಂದೇ ರೀತಿಯಾದುದು. ಕೆಲ ದಿವಸಗಳಾದ ಮೇಲೆ ಮುದ್ದುಗೊಂಡನ ಸಹೋದರಿಯ ಉದರದಲ್ಲಿ "ಚುಂಚಲೆ" ಎಂಬ ಹೆಣ್ಣು ಮಗು ಜನಿಸಿತು. ಇವರಿಬ್ಬರು ಯೌವನಾವಸ್ಥೆಗೆ ಬಂದ ಮೇಲೆ ಆದಿಗೊಂಡ ಮತ್ತು ಚುಂಚಲೆಗೆ ವಿವಾಹ ಮಾಡಲಾಯಿತು. ಇವರಿಗೆ

"ಪುಂಡ ಆಯ್ಗೆಂಡ, ಪಾಯ್ಗೊಂಡ ಮರಗೊಂಡ ಜಾ। ಯೊಂಡರೆಂಬೈವರುಗಳನು॥
ಮಂಡಲದೊಳಗಾದರ್ರರೆಂದೆಲ್ಲರು। ಕೊಂಡಾಡುವಂತೆ ಸಾಕಿದರು[೧೮]

ಹೀಗೆ ನಾಲ್ಕು ಗಂಡು ಮಕ್ಕಳಾದರು. ಆದರೆ ಶಿವ ಹೇಳಿದಂತೆ ಮಗು ಇನ್ನೂ ಆಗಲಿಲ್ಲ ಎಂಬ ದುಃಖದಲ್ಲಿ ಕೊರಗುತ್ತಿದ್ದರು. ಆದಿಗೊಂಡನು ಮುಪ್ಪಿನಾವಸ್ಥೆಗೆ ಬರುತ್ತಿದ್ದನು. ಮಡದಿಯನ್ನು ಕರೆದು.

"ಬಿಟ್ಟನೂಟವನಾದಿಗೊಂಡ ಸುಖಭೋಗಗಳ್
ಸುಟ್ಟನತಿ ದುಗುಡ ಮಾನಸನಾಗಿ ಗತಿಗೆ ಗುರಿ
ಇಟ್ಟನಾಗಳೆ ಶಿವಾಧವನಸಥ್ಯಾನ ಮಂಗಯ್ಯಲನುವಾರ ಮುದದಿ
ಕೆಟ್ಟನಾತ್ಮಜನುದ್ಭಮಿಸಿದಕ್ಕೆ ಶಪಥವನು
ತೊಟ್ಟನಾ ಸತಿ ಚುಂಚಲೆಯ ಕರೆದು ದುಃಖದಿಂ
ಕೊಟ್ಟನಭಯವ ಸಾಕು ಸಂಸಾರ ಸುಖಮೆಂದು ಮೈಮೆರೆದು ಧರೆಗೊರಗಿದಂ"[೧೯]

ಸಾಕು ಈ ಸಂಸಾರ ಎನ್ನುತ್ತಿರಲು, ಅದೇ ಸಮಯಕ್ಕೆ ಗುರು ರೇವಣಸಿದ್ದರು ಶಿಷ್ಯರೊಂದಿಗೆ ಊರಿನ ಬೀದಿಯಲ್ಲಿ ಬರುತ್ತ 'ಇದು ಮಹಾಪುಣ್ಯಸ್ಥಳ' ಎಂದು ಹೇಳುತ್ತಾ ನೇರವಾಗಿ ಆದಿಗೊಂಡನ ಮನೆಗೆ ಆಗಮಿಸಿ, ಅವರ ಆತಿಥ್ಯ ಸ್ವೀಕರಿಸಿ "ನಿನ್ನ ಉದರದಲ್ಲಿ ಶಿವನ ಚೀತ್ಕಳೆಯು ಮಹಾ ಚೈತನ್ಯ ಮೂರ್ತಿಯೊಂದು ಜನಿಸಿ ಬರುವುದು. ಆತನು ಅಸಹಜ ಗುಣ

ಕಳೆಗಳುಳ್ಳ ಮಹಾತ್ಮನು. ಆತನಿಗೆ 'ಶಿವಪದ್ಮ'ನೆಂದು ನಾಮಕರಣ ಮಾಡಬೇಕು. ಸತಿಪತಿಗಳು ಮನದಲ್ಲಿ ಇನ್ನು ಕೊರಗುವುದು ಅವಶ್ಯಕತೆಯಿಲ್ಲ" ಎಂದನು. ಇದೇ ಸಂದರ್ಭವು ಚನ್ನಕವಿಯ ಹಾಲುಮತ ಪುರಾಣದಲ್ಲಿ ಹೀಗೆ ವ್ಯಕ್ತವಾಗಿದೆ. ರೇವಣಸಿದ್ದನು ಬಂದು, ಇದು ಪುಣ್ಯಸ್ಥಳವೆಂದು ಶಿಷ್ಯರಿಗೆ ತಿಳಿಸುತ್ತಿರಲು, ಇಲ್ಲಿ ಚುಂಚಲೆಯು ಮುಪ್ಪು ಎಂದರು, ಇನ್ನು ಶಿವ ಹೇಳಿದ ಮಗ ಹುಟ್ಟಲಿಲ್ಲವೆಂದು ದುಃಖಿಸುತ್ತಿದ್ದಾರೆ.

ಚಿಂತೆಗೂ ಚಿತೆಗೂ ಬಿಂದುವೆ ಮಾತ್ರ ವ್ಯತ್ಯಾಸ। ಚಿತೆಯು ನಿರ್ಜೀವ ವಸ್ತುವನು॥
ಚಿಂತೆಯು ಜೀವನ ವಸ್ತುವಂ ಸುಡುವುದು। ಚಿಂತೆಬೇಡೆನ್ನಯ ಕಾಂತ
ನಾವು ಸಾಯುವ ಸಮಯ ಬಂದರು ಮಗು ಹುಟ್ಟಲಿಲ್ಲ, ಎಂದು ಚಿಂತೆಯಲ್ಲಿರಲು
"ಒಣಗುವ ಪೈರಿಂಗೆ ಸುವೃಷ್ಟಿಗರೆದಂತೆ। ಸೆಣಸದಿರುವ ಸತಿಪತಿಗೆ॥
ಅಣೆಯಾದಂತೆ ಈಗಾದಗೊಂಡನಿಗಾಗಿ। ತ್ರಿಣೆಯನುಣುಗ ರೇವಣ್ಣ॥[೨೦]

ಅದೇ ರೇವಣ್ಣಸಿದ್ದನು ಅವರ ಕಷ್ಟ ನಿವಾರಿಸಲು ಅಲ್ಲಿಗೆ ಬಂದನು. ಅವರ ದುಃಖ ಕಂಡು, ಯೋಚಿಸದಿರಿ.

"ಇದರಿರವೇನೆಂದು ಬೆಸಗೊಳ್ಳೆ ಸಿದ್ದನು। ಬೆದರಬೇಡೆಂದಾ ಶೀರ್ವಚಿಸಿ
ಸದಮಲಾನಂದ ಶಿವನ ಸತ್ಕಲೆ ನಿನ್ನ। ಉದರದೊಳ್ ಜನಿಪುದು ಮತ್ತೆ॥೮॥
ಎಂದು ಹೇಳಿ। ಶಿವ ಹೇಳಿದ ಹಾಗೆ
ಜಲಮಲ ಶೀತೋಷ್ಣವೇನಿಲ್ಲ ಮೊಲೆಯುಣ್ಣ। ನೆಳಸಿದ್ವದನೆಯ ಮಾಸದೊಳು
ವಿಲಸಿತಾಂಗಿಯೆ ನಿನ್ನ ಪೂರ್ವದ ಪುಣ್ಯದಿನ ಸಲೆಶೀವಶರಣ ಪುಟ್ಟುವನು"[೨೧]

ಎಂದು ಹೇಳಿ ಹಾರೈಕೆ ತೆರಳುತ್ತಿರಲು, ಚುಂಚಲೆಯ ಗೆಳತಿಯಾದ ನಾಗತಿಯು ಬಂದು "ಮುಪ್ಪಿನ ಮುದುಕಿಗೆ ಮಗ ಹುಟ್ಟುವುದು ಸಾಧ್ಯವೇ? ಈ ರೀತಿ ಸುಳ್ಳು ಹೇಳುವುದು ಸೂಕ್ತವೇ? ನಿಮಗೆ ನಮಸ್ಕಾರ, ದಯವಿಟ್ಟು ಸುಮ್ಮನೆ ಮೊದಲು ನೀವು ಇಲ್ಲಿಂದ ಹೊರಟು ಹೋಗಿ" ಎಂದು ಬಿರುನುಡಿದಳು. ರೇವಣಸಿದ್ದರು ಆಡಿದ ಮಾತು ಸುಳ್ಳಾಗದು ಎಂದು ನಸುನಗುತ ಶಿಷ್ಯರೊಂದಿಗೆ ಹೊರಡುವರು. ಕೆಲ ತಿಂಗಳ ನಂತರ ಚುಂಚಲೆಯು ಗರ್ಭವತಿಯಾದಳು. ಒಂದು ದಿನ ಚುಂಚಲೆಯ ಗೆಳತಿ ನಾಗಲೆಯೊಂದಿಗೆ ಮಂಚದ ಮೇಲೆ ಮಲಗಿರಲು, ಇಬ್ಬರಿಗೂ ಮೂರ್ಛೆ ಹೋಗಿ ಆಗ ಚುಂಚಲೆಗೆ ಇನ್ನು ಐದು ತಿಂಗಳು. ಮೂರ್ಛೆ ಹೋದ ಚುಂಚಲೆಗೆ ಒಂದು ಗಂಡು ಮಗು ಜನಿಸಿತ್ತು. ಆಕಾಶದಲ್ಲಿ ದೇವಾನು ದೇವತೆಗಳೆಲ್ಲ ಪುಷ್ಪದ ಮಳೆ ಸುರಿಸಿದರು. ಅಲ್ಲಿ ಪಾರ್ವತಿಯು

"ಗಿರಿಜಾತೆ ಕೂಸಿನಂ ಪಿಡಿದೆತ್ತಿ ಮುದ್ದಿಟ್ಟು
ಹರನ ಸಕಲೈಶ್ವರ್ಯ ಸಚ್ಛಕ್ತಿ ರಮೆದಮೆಯು
ಸ್ಥಿರವಾಗಿ ನಿನಗೆ ದೊರೆಯಲೆಂದು ಮೋಹದಿಂದರಸಿದಳು ಪಲತೆರೆದಳು
ಕರಕಮಲವನ್ನು ತೊಟ್ಟಿಲಮಾಡಿ ತರುಳನಂ
ಸರಸದಿಂ ತೂಗಿದರ್ಜೊಗುಳುವ ಪಾಡಿದರ್
ಸ್ವರವೆತ್ತಿ ಸದ್ಗಾನ ಮಾಡಿದಮ್ರುಕದಿಂದೇನೆಂಬೆನಚ್ಚರಿಯನು"[೨೨]

ಈ ಮಗು ಹುಟ್ಟಿದಾಗ ಮಗುವಿಗೆ ರಕ್ತ ಮಾಂಸಗಳ ಕಲೆಗಳಿಲ್ಲ ಪರಿಶುದ್ಧತೆಯಿಂದ ಕಂಗೊಳಿಸುತ್ತಿತ್ತು. ಹೀಗೆ ಪದುಮಣ್ಣನ (ಶಿವಪದ್ಮನ) ಜನನವಾಯಿತು.

೩. ಬೀರೇಶ್ವರನ ಜನನ: ಚುಮಲಾದೇವಿ ಮತ್ತು ಪದುಮಣ್ಣ ದಂಪತಿಗಳಿಗೆ ಹುಟ್ಟಿದ ಮಗ ದೇವಗೊಂಡ. ದೇವಗೊಂಡನು ಬೆಳೆದು ಯೌವನಾವಸ್ಥೆ ಬಂದಾಗ ಭವಾನಿದೇವಿ ಎಂಬ ಸುಂದರಿಯೊಂದಿಗೆ ವಿವಾಹ ಮಾಡುವರು. ಇವರ ಉದರದಿಂದ ನಿಲಂಕಾರನೆಂಬ ಗಂಡು ಮಗು ಜನಿಸುವುದು. ನಿಲಂಕಾರ ತುಂಬಾ ಮೃದು ಸ್ವಭಾವದವನು. ವಿಶಾಲವಾದ ಸಾಮ್ರಾಜ್ಯದ ಒಡೆಯನಾದನು ನಿಲಂಕಾರ. ಇವನಿಗೆ ಧರಣಿದೇವಿ ಎಂಬ ಕನ್ಯೆಯೊಂದಿಗೆ ವಿವಾಹವಾಯಿತು. ಸುಖ ಜೀವನ ನಡೆಸುತ್ತಿದ್ದ ಇವರ ಜೀವನದಲ್ಲೊಂದು ಘಟನೆ ನಡೆಯಿತು. ಇವರ ಸಾಮ್ರಾಜ್ಯದಲ್ಲಿ ಇವರ ಮೃದು ಸ್ವಭಾವವನ್ನು ಬಳಸಿಕೊಂಡು, ಮಂತ್ರಿಗಳೇ ಇವರಿಗೆ ಮೋಸ ಮಾಡಿದರು. ಇವರ ಕುತಂತ್ರ ತಿಳಿದು, ಇವರಿಗೆ ಹುಟ್ಟಿದ ಮಗುವನ್ನು ಗುಪ್ತವಾಗಿ ಬೇರೆ ಕಡೆ ಕೊಂಡೊಯ್ದು ವಿದ್ಯಾಭ್ಯಾಸವನ್ನು ಮಾಡಿಸಲಾಗುತ್ತಿತ್ತು. ಒಂದು ದಿನ ವೈರಿಗಳ ಜೊತೆ ಕೈ ಜೋಡಿಸಿ, ಮಂತ್ರಿಗಳು ನೀಲಂಕಾರ ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ನೀಲಂಕಾರನನ್ನು ಸಂಹರಿಸಲಾಯಿತು. ಇವರ ಮರಣದಿಂದಾಗಿ ಭಯ ಭೀತಿಯಿಂದ ಧರಣಿ ದೇವಿಯು ಮರಣ ಹೊಂದಿದಳು. ಗುಪ್ತದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮಗ ಭರಮದೇವನನ್ನು ರಾಜನ ಹಿತೈಷಿಗಳು ಕಾಪಾಡಿ, ರಾಜರ ಕುರಿಗಳನ್ನು ಕಾಯುವವರ ಬಳಿ ಬಿಟ್ಟು, ಇವನನ್ನು ಕಾಪಾಡುವ ಜವಾಬ್ದಾರಿ ನಿಮ್ಮದು ಎಂದು ಹೇಳಿ, ಅವರ ಜೊತೆ ರಕ್ಷಣೆಗಾಗಿ, ಸುಖವಾಗಿ ಬಾಳಬೇಕಾದ ಯುವರಾಜನನ್ನು ಕುರಿಗಳ ಜೊತೆ ಅಡವಿಗೆ ಕಳುಹಿಸಿಕೊಟ್ಟರು.

ಕುರುಬರ ಪವಿತ್ರ ಸ್ಥಳವಾದ ಬಾಗಿನಾಡಿನಲ್ಲಿ ನಾರಾಯಣನೆಂಬ ಕುರುಬ ರಾಜನಿದ್ದನು. ತುಂಬಾ ಗರ್ವಿಷ್ಠಿಯಾಗಿದ್ದ. ಇವನಿಗೆ ಮದುವೆಯಾಗಿ ಎಷ್ಟೋ ವರುಷಗಳು ಕಳೆದರು ಮಕ್ಕಳಾಗಿರಲಿಲ್ಲ. ಅವನಿಗೆ ಯಾರೋ ಶಿವಾಲಯವನ್ನು ತೋರಿಸಿ, ಪ್ರತಿನಿತ್ಯವು ನೀನು ಪಕ್ಕದ ಹಳ್ಳದಲ್ಲಿ ಸ್ನಾನ ಮಾಡಿಕೊಂಡು, ಮಡಿಯಿಂದ, ಪರಿಶುದ್ಧ ಮನಸಿನಿಂದ ಹೂಗಳ ಅಲಂಕಾರದಿಂದ

ಲಿಂಗಕ್ಕೆ ಪೂಜಿಸಿದರೆ, ನಿನಗೆ ಮಕ್ಕಳಾಗುತ್ತಾರೆ ಎಂದು ಹೇಳಿದರು. ಅವರಂತೆಯೇ ಇವನು ಸಹ ಪ್ರತಿನಿತ್ಯವೂ ಚಾಚು ತಪ್ಪದೆ ಭಕ್ತಿಯಿಂದ ಪೂಜೆಯನ್ನು ಸಲ್ಲಿಸುತ್ತಿದ್ದನು. ಆದರೆ ಒಂದು ದಿನ ಅನಾರೋಗ್ಯದಿಂದ ಪೂಜೆ ಮಾಡಲು ತಡವಾಗಿ ಬಂದಿದ್ದನು. ಇವನು ಬರುವದೊಳಗಾಗಿ ಪುಷ್ಪದತ್ತನೆಂಬ ದಾರಿಹೋಕನು ಶಿವ ಪೂಜೆಯನ್ನು ಮಾಡಿ ಹೋಗಿದ್ದನು. ಇದನ್ನು ಕಂಡ ನಾರಾಯಣನು ಕೋಪದಿಂದ ಅವನನ್ನು ಬೈಯ್ದು, ಶಿವನ ಮೇಲಿರುವ ಪುಷ್ಪಗಳನ್ನೆಲ್ಲ ತಳ್ಳಿ, ಲೆಕ್ಕಿಸದೆ, ಅವನನು ಬೈಯುತ್ತ, ಹೂಗಳನ್ನು ತುಳಿಯುತ್ತಿದ್ದನು. ಇದನ್ನು ಅಲ್ಲಿರುವ ಸಾಧು ಒಬ್ಬ ಗಮನಿಸಿ, ಲೋ ಗರ್ವಿರಾಜನೇ ನೀನು ಬಹು ದೊಡ್ಡ ಪಾಪವನ್ನು ಮಾಡುತ್ತಿರುವೆ, ಇಷ್ಟು ದಿನ ಮಾಡಿದ ನಿನ್ನ ಪೂಜೆಯೆಲ್ಲ ವಿಫಲವಾದವು. ನೋಡು ಶಿವನ ಮೇಲಿರುವ ಹೂಗಳನ್ನು ತುಳಿಯುತ್ತಿರುವೆ, ಹೇಗೆ ನಿನಗೆ ಮಕ್ಕಳಾಗುತ್ತವೆ ಎಂದು ಗದರಿಸಿದರು. ಇದರಿಂದ ಭಯಭೀತನಾದ ನಾರಾಯಣನು ಮುಂದೆ ನಾ ಏನು ಮಾಡಬೇಕೆಂದು ಹೇಳಿ ಎಂದು ಕಾಲಿಗೆ ಬಿದ್ದು ಕೇಳುತ್ತಿರಲು, ಕಾಶಿಗೆ ಹೋಗಿ ಗಂಗೆಯ ನೀರನ್ನು ತಂದು ಶಿವಲಿಂಗಕ್ಕೆ ಅರ್ಪಿಸಿದರೆ, ನಿನಗೆ ಮಕ್ಕಳಾಗುವವು ಎಂದು ತಿಳಿಸಿದನು. ಇದಕ್ಕೆ ಒಪ್ಪಿ ನಾರಾಯಣನು, ನಾನು ಕಾಶಿಗೆ ಹೋದರೆ, ಪ್ರತಿನಿತ್ಯವು ಶಿವಲಿಂಗಕ್ಕೆ ಪೂಜೆಯನ್ನು ಯಾರು ಮಾಡುವರೆಂದು, ಶಿವಾಲಯದಲ್ಲಿ ಕುಳಿತಿರಲು, ಅಲ್ಲಿಗೆ ಭರಮದೇವನು ಬಂದನು ಶಿವಲಿಂಗಕ್ಕೆ ಭಕ್ತಿಯಿಂದ ಕೈ ಮುಗಿಯುತ್ತಿರಲು, ಅವನ ದೃಢತೆಯನ್ನು ಕಂಡು, ಇವನೇ ನನ್ನ ಸಹಾಯಕ್ಕೆ ಬರಬಹುದೆಂದು, ಅರಿತು, ಅವನ ಬಳಿ ಹೋಗಿ ಅವನನ್ನು ಮಾತನಾಡಿಸಲು, ನಾನು ಭರಮದೇವ ಎಂದು ಅವನ ಹಿನ್ನೆಲೆಯನ್ನೆಲ್ಲ ಹೇಳಿದನು. ಆಗ ನಾರಾಯಣನು ವಿಚಾರಮಾಡಿ, ಭರಮದೇವನಿಗೆ ನಾನು ಕಾಶಿಗೆ ಹೋಗಬೇಕಾಗಿದೆ, ಅಲ್ಲಿಯವರೆಗೂ ನೀನು ಶಿವ ಪೂಜೆಯನ್ನು ಮಾಡಬೇಕೆಂದು ಕೇಳಿಕೊಂಡನು. ಹಾಗೆಯೇ ಅವನ ವ್ಯಕ್ತಿತ್ವವನ್ನು ಕಂಡು ತನ್ನ ತಂಗಿಯಾದ ಸೂರಮ್ಮದೇವಿಯನ್ನು ಮದುವೆ ಮಾಡಲು ಯೋಚಿಸಿದನು. ಈ ವಿಚಾರವನ್ನು ಭರಮದೇವಿಗೆ ತಿಳಿಸಲು ಅದಕ್ಕೆ ಒಪ್ಪಿದ ಭರಮದೇವನೊಂದಿಗೆ ವಿವಾಹ ಮಾಡಿಸಿ, ಮದುವೆಯಾದ ಮೇಲೆ ನಾರಾಯಣನು ಕಾಶಿಗೆ ಹೋದನು. ಸೂರಮ್ಮದೇವಿ, ಭರಮದೇವರು ಜೀವನ ಸುಖಕರವಾಗಿ ಸಾಗುತ್ತಿತ್ತು, ಹಾಗೆಯೇ ಪ್ರತಿನಿತ್ಯವೂ ಶಿವಲಿಂಗಕ್ಕೆ ಭಕ್ತಿಯಿಂದ, ಮಡಿಯಿಂದ ಪೂಜೆಯನ್ನು ಸಲ್ಲಿಸುತ್ತಿದ್ದನು. ಸುಮಾರು ತಿಂಗಳ ಬಳಿಕ ನಾರಾಯಣನು ಕಾಶಿಯಿಂದ ಗಂಗೆಯನ್ನು ತಂದನು. ಆ ದಿನ ಭರಮದೇವನು ಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದನು. ನಾರಾಯಣನು ಬಂದಾಗ ಶಿವಾಲಯದ ಬಳಿಯಿರುವ ಕೆಲವು ಭಕ್ತರು ನಾರಾಯಣನಿಗೆ, ಭರಮದೇವನು, ಅತೀ ಭಕ್ತಿಯಿಂದ, ನಿಷ್ಠೆಯಿಂದ ಶಿವಲಿಂಗಕ್ಕೆ ಪೂಜಿಸುತ್ತಿದ್ದನು. ಇದನ್ನು ಕೇಳಿದ ನಾರಾಯಣನಲ್ಲಿ ಅಸೂಹೆ ಹುಟ್ಟಿ, ಇವನು ನನಗಿಂತ ಶ್ರೇಷ್ಠ ಭಕ್ತನಾಗಿರುವನೇ ಎಂದು ಕುಪಿತನಾಗಿ, ಶಿವಾಲಯದಲ್ಲಿರುವ ಅವನ ಬಳಿ

ಹೋಗಿ, ಹಿಂದೂ-ಮುಂದೆ ನೋಡದೆ ಬೈದನು. ಇದರಿಂದ ಬೇಸರಗೊಂಡು ಮನೆಗೆ ಬಂದಾಗ ಸೂರಮ್ಮದೇವಿಯು ವಿಚಾರಿಸಲು ನಡೆದ ಸಂಗತಿಯನ್ನು ವಿವರಿಸಿದನು. ಸೂರಮ್ಮದೇವಿಯು ದುಃಖಿತಳಾಗಿ ಮನದಲಿ ಕುಲದೈವನಾದ ರೇವಣಸಿದ್ದನನ್ನು ಸ್ಮರಿಸಿಕೊಂಡು, ಮಲಗಿದಳು. ಮುಂಜಾನೆ ಸಮಯದಲ್ಲಿ ರೇವಣಸಿದ್ದನು ಇವರ ಮನೆಗೆ ಬಂದನು. ದಂಪತಿಗಳಿಬ್ಬರು ಅವರನ್ನು ಭಕ್ತಿಯಿಂದ ಪೂಜೆ ಸಲ್ಲಿಸಿ ಮನೆಯೊಳಗೆ ಕರೆದುಕೊಂಡು ಬಂದರು. ಭಕ್ತರ ದುಃಖ ತಿಳಿದು ಬಂದಿರುವುದನ್ನು ಕಂಡು ಸುರಮ್ಮದೇವಿಯು ಸಂತೋಷಗೊಂಡಳು. ಆದ ಘಟನೆಗಳನ್ನು ಹೇಳಿದಳು. ಇದನ್ನು ತಿಳಿದ ರೇವಣಸಿದ್ದನು ಇದೆಲ್ಲ ಶಿವಲೀಲೆ ಮುಂದೆ ತುಂಬಾ ಒಳ್ಳೆಯ ಸಂಗತಿಗಳಾಗುತ್ತವೆ. ನಿಮ್ಮ ಒಡಲಲ್ಲಿ ಶಿವನ ರೂಪವೆ ಆದ ಮಗುವೊಂದು ಜನಿಸುತ್ತದೆ. ಚಿಂತಿಸಬೇಡಿ ಒಳ್ಳೆಯದಾಗುತ್ತದೆ ಎಂದು ಭಂಡಾರವನ್ನು ಇಬ್ಬರ ಹಣೆಗೆ ಹಚ್ಚಿ ಆಶೀರ್ವದಿಸಿದರು. ಹಾಗೆಯೇ ಭರಮದೇವನಿಗೆ ನಿಮ್ಮ ಕುಲ ಕಸುಬುಯಾಗಿರುವ ಕುರಿಗಳನ್ನು ಕಾಯುತ್ತ ಶಿವಪೂಜೆ ಮಾಡುತ್ತ ಜೀವನ ಸಾಗಿಸಿ, ಒಳ್ಳೆಯದಾಗುತ್ತದೆ ಎಂದು ಹೇಳಿ ಹೊರಟುಹೋದರು. ಕೆಲ ತಿಂಗಳ ನಂತರ ಸುರಮ್ಮದೇವಿಯು ಗರ್ಭವತಿಯಾದಳು. ಇವರ ಪುತ್ರನೇ ಮುಂದೆ ಭೀರದೇವನಾಗಿ ಪ್ರಸಿದ್ಧಿಯಾಗುವನು. ಇನ್ನು ಹಲವು ಹಾಲುಮತ ಪುರಾಣಗಳಲ್ಲಿ ಇದೇ ರೀತಿಯ ಕಥೆಗಳು ಇರುವುದನ್ನು ಕಾಣುತ್ತೇವೆ. ಸ್ವಲ್ಪ ವ್ಯತ್ಯಾಸದೊಂದಿಗೆ ಕಥೆ ಕಂಡುಬರುತ್ತದೆ. ಹೆಸರಿನ ಬದಲಾವಣೆಯೊಂದಿಗೆ ಕಾಳಿನಾರಾಯಣನು ಶಿವ ಪೂಜೆಯನ್ನು ಮಾಡುವಾಗ ಕೆಳಗೆ ಬಿದ್ದ ಹೂಗಳನ್ನು ಹಾಗೆಯೇ ಶಿವನಿಗೆ ಅರ್ಪಿಸಿದನು, ಇದನ್ನು ಕಂಡ ಶಿವನ ಮೈಲಿಗೆಯ ಹೂವನ್ನು ಅರ್ಪಿಸುವೆಯಾ, ಇದರಿಂದ ನಿನಗೆ ಪಾಪವು ಅಂಟಿಕೊಂಡಿದೆ. ಎಂದಾಗ ಪರಿಹಾರಕ್ಕಾಗಿ ನೀನು ಕಾಶಿಗೆ ಹೋಗಿ ಗಂಗೆಯನ್ನು ತಂದು ಅಭಿಷೇಕ ಮಾಡಿದರೆ ನಿನ್ನ ಪಾಪ ಹೋಗುವುದು. ಶಿವನ ಮಾತಿನಂತೆ ಕಾಳಿನಾರಾಯಣನು ಕಾಶಿಗೆ ಹೋಗಲು ಸಿದ್ದನಾದನು. ಆದರೆ ನಾನು ಕಾಶಿಗೆ ಹೋದರೆ ಶಿವಪೂಜೆಯನ್ನು ಯಾರು ಮಾಡುವರು ಎಂಬ ಆಲೋಚನೆ ಕಾಡುತ್ತಿತ್ತು, ಆಗ ಅಲ್ಲಿಗೆ ಭರಮದೇವನೆಂಬ ವ್ಯಕ್ತಿಯ ಭಕ್ತಿಯನ್ನು ಕಂಡು, ಅವನನ್ನು ಕೇಳಲು ನಿಮ್ಮ ತಂಗಿಯನ್ನು ಮದುವೆಮಾಡಿಕೊಟ್ಟರೆ, ನಾನು ಒಪ್ಪುವೆ ಎಂದನು, ಅದರಂತೆ ಮದುವೆಯಾಯಿತು. ಕಾಳಿನಾರಾಯಣ ಕಾಶಿಗೆ ಹೋದನು. ಭರಮದೇವ ಭಕ್ತಿಯಿಂದ ಪೂಜೆಯನ್ನು ಪ್ರತಿನಿತ್ಯ ಮಡಿಯಿಂದ ಮಾಡಿ ಶಿವನ ಕೃಪೆಯನ್ನು ಪಡೆದು, ಜನರಲ್ಲೂ ಕಾಳಿನಾರಾಯಣನಿಗಿಂತಲೂ ಇವನೆ ನಿಜವಾದ ಭಕ್ತನೆಂದು ಕರೆಸಿಕೊಂಡನು. ಹೀಗೆ ಒಂದು ದಿನ ಪೂಜೆಯಲ್ಲಿ ಇರುವಾಗ ಕಾಶಿಗೆ ಹೋಗಿದ್ದ ಕಾಳಿನಾರಾಯಣ ಬಂದನು, ಆದರೆ ಸೈನಿಕರು ಅವನನ್ನು ಒಳಗೆ ಬೀಡಲಿಲ್ಲ. ಇದನ್ನು ಕಂಡ ಕಾಳಿನಾರಾಯಣ ಮಕ್ಕಳಿಲ್ಲದವರ ಪೂಜೆ ಶಿವನಿಗೆ ಸಲ್ಲದು ಎಂದು, ಹೀಯಾಳಿಸಿ ಮಾತಾನಾಡಲು ಭರಮದೇವ ಬೇಸರವಾಗಿ

ಮನೆಗೆ ಹೋದಾಗ, ಸೂರಮ್ಮದೇವಿಗೆ ತಿಳಿದು ಶಿವನಿಂದ ವರ ಪಡೆಯಲು ತಪಸ್ಸು ಆಚರಿಸಿ, ಒಂದು ಗಂಡು ಮಗುವಿಗೆ ಜನ್ಮನೀಡುತ್ತಾಳೆ. ಹೀಗೆ ಸ್ವಲ್ಪ ಬಿನ್ನತೆಯಿಂದ ಕಥೆಯ ಸ್ವರೂಪ ಕಾಣುತ್ತೇವೆ.

೪. **ಮಾಳಿಂಗರಾಯನ ಜನನ :** ಸಂಪತ್ತಿನಿಂದ ಕೂಡಿದ ಬಿಲ್ವಾಡಪ್ಪರವೆಂಬ ರಾಜ್ಯದಲ್ಲಿ ತುಕ್ಕಪ್ಪರಸನೆಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ರಾಮನಿಗೆ ಲಕ್ಷ್ಮಣನಂತೆ, ತುಕ್ಕಪ್ಪರಸನಿಗೆ ಸೋಮರಾಯನೆಂಬ ತಮ್ಮನಿದ್ದನು. ತುಕ್ಕಪ್ಪರನಗೆ ಕಾನಬಾಯಿ, ಸೋಮರಾಯನಿಗೆ ರಮಾಬಾಯಿ ಎಂಬ ಹೆಂಡತಿಯರಿದ್ದರು. ಇವರು ಸುಂದರರೂ, ಸದ್ಗುಣಿಗಳೂ ಆಗಿದ್ದರು. ರಾಜ್ಯದಲ್ಲಿ ಎಲ್ಲ ಸಂಪತ್ತು, ಬೆಳೆ-ಕಾಳುಗಳೆಲ್ಲ ಸಮೃದ್ಧವಾಗಿತ್ತು. ಆದರೆ ರಾಜ್ಯದಲ್ಲಿ ಒಂದೇ ಒಂದು ದುಃಖದ ವಿಷಯವೆಂದರೆ, ರಾಜಮನೆತನಕ್ಕೆ ಇದುವರೆಗೂ ಮಕ್ಕಳಾಗಿರಲಿಲ್ಲ. ಇವರು ರಾಜ್ಯದ ಜನರನ್ನೆ ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಆದರೆ ಮಂತ್ರಿವರ್ಗಕ್ಕೆ ಜನ ಸಮೂಹಕ್ಕೆ ರಾಜ್ಯದ ವಂಶ ಇಲ್ಲಿಗೆ ಕೊನೆಗೊಳ್ಳೋದು ಸರಿಬರಲಿಲ್ಲ. ಆದ್ದರಿಂದ ಎಲ್ಲರು ಕೂಡಿ ರಾಜರನ್ನು ಗೋರಖನಾಥನೆಂಬ ಗುರುಗಳ ಬಳಿ ಕರೆದುಕೊಂಡು ಬಂದರು.

ಗೋಖರನಾಥರ ಬಳಿ ಬಂದು ಅವರಿಗೆ ನಮಸ್ಕರಿಸಿ, ಅವರ ಮುಂದೆ ಕುಳಿತುಕೊಂಡರು. ರಾಜನಿಗೆ ಅವರ ಸಮಸ್ಯೆ ಹೇಳುವ ಮನಸ್ಸಿಲ್ಲದೆ, ಮೌನವಾಗಿ ಕುಳಿತಿರಲು, ಮಂತ್ರಿಯೇ ಗುರುಗಳಿಗೆ ನಮಸ್ಕರಿಸಿ, ಗುರುಗಳೇ ಇವರು ನಮ್ಮ ರಾಜ್ಯದ ರಾಜರು. ನಮಗೆ ಯಾವುದಕ್ಕೂ ಕೊರತೆ ಇಲ್ಲ. ಆದರೆ ರಾಜರಿಗೆ ಇಷ್ಟು ವರ್ಷಗಳಾದರು ಮಕ್ಕಳಾಗಲಿಲ್ಲ. ಅವರಿಗೆ ಮಕ್ಕಳ ಭಾಗ್ಯವನ್ನು ಕರುಣಿಸಿ ಎಂದು ಬೇಡಿಕೊಂಡರು. ಇದಕ್ಕೆ ಗುರುಗಳು ಕೆಲವರಿಗೆ ಫಲ ದೂರದಲ್ಲಿರುತ್ತದೆ. ಭಯ ಪಡಬೇಡಿ ಎಂದು ರಾಜರ ಕೈಯಲ್ಲಿ ಒಂದು ಮಾಣಿಕ್ಯವನ್ನು ಇಟ್ಟು, ಇದನ್ನು ನಿಮ್ಮ ದೇವರ ಜಗಲಿ ಮೇಲೆ ಇಟ್ಟು, ಪ್ರತಿನಿತ್ಯ ಮುಂಜಾನೆ ಎದ್ದು ಮಣಿಯನ್ನು ಕೈಯಲ್ಲಿಟ್ಟುಕೊಂಡು ಗಂಡ-ಹೆಂಡತಿಯಿಬ್ಬರು ಪೂಜಿಸಿ ಎಂದು ಹಾರೈಸಿದರು. ಗುರುಗಳ ಮಾತಿಗೆ ಒಪ್ಪಿ ಮಾಣಿಕ್ಯವನ್ನು ಸ್ವೀಕರಿಸಿದರು. ಆದರೂ ರಾಜರ ಮುಖದಲ್ಲಿ ಸಂತೋಷದ ಭಾವನೆಯೇ ಇಲ್ಲ. ಇದನ್ನು ಅರ್ಥೈಸಿಕೊಂಡ ಗುರು, ಚಿಂತಿಸಬೇಡ ಮಗುವೆ, ನಿಮ್ಮ ತಮ್ಮನಿಗೂ ನಾನು ಇನ್ನೊಂದು ಮಾಣಿಕ್ಯವನ್ನು ನೀಡುವೆ, ಅದನ್ನು ಅವರು ಪೂಜಿಸಲು ಹೇಳಿ ಎಂದರು. ಗುರುಗಳ ಮಾತನ್ನು ಕೇಳಿ, ಹರುಷದಿಂದ ಅವರ ಕಾಲಿಗೆ ನಮಸ್ಕರಿಸಿ, ಊರಿಗೆ ಬಂದು ಗುರುಗಳು ಹೇಳಿರುವಂತೆ, ಪ್ರತಿನಿತ್ಯವು ಮಡಿಯಿಂದ ಮಾಣಿಕ್ಯವನ್ನು ಪೂಜಿಸ ತೊಡಗಿದರು. ಸ್ವಲ್ಪ ದಿನಗಳ ತರುವಾಯ ಕಾನಬಾಯಿ ಮತ್ತು ರಮಾಬಾಯಿಯರು ಗರ್ಭಧರಿಸಿದರು. ಒಂಬತ್ತು ತಿಂಗಳು ರಾಜ್ಯದ ಜನರೆಲ್ಲ, ಗರ್ಭಿಣಿಯರ ಆರೈಕೆಯಲ್ಲಿ ತೊಡಗಿದರು.

ನವ ಮಾಸಗಳು ತುಂಬಿ, ಇಬ್ಬರು ಗಂಡು ಮಗುವಿಗೆ ಜನ್ಮವಿತ್ತರು. ಸೂರ್ಯನ ಪ್ರಕಾಶ ಬೆಳಕಿನಂತೆ ಮಗುವಿನ ಮುಖ ಹೊಳೆಯುತ್ತಿತ್ತು. ಮಕ್ಕಳ ನಾಮಕರಣ ಸಂಭ್ರಮದಲ್ಲಿ ಊರು-ಊರಿಗೆ ಹಬ್ಬದ ವಾತಾವರಣ ತುಕ್ಕಪ್ಪರಾಯ-ಕಾನಬಾಯಿ ಮಕ್ಕಳಿಗೆ ಮಾಳಿಂಗರಾಯನೆಂದು, ಸೋಮರಾಯ-ರಮಾದೇವಿಯರ ಮಗುವಿಗೆ ಜಕ್ಕಪ್ಪರಾಯರೆಂದು ಹೆಸರಿಟ್ಟರು. ರಾಜ ಜನರ ಏಳ್ಗೆ ಬಯಸಿದರೇ, ಜನರು ರಾಜರ ವಂಶವೃದ್ಧಿಯಾಗುವುದನ್ನು ಬಯಸುತ್ತಾರೆ. ಮಹಾರಾಜರು ಸಂತೋಷದಿಂದ ಬಾಳಿದರೆ, ನಮ್ಮ ಬಾಳು ಹಸನು ಎಂಬುದನ್ನು ತಿಳಿದ ಜನರು ರಾಜರ ಕಷ್ಟಕ್ಕೆ ಕೈಜೋಡಿಸಿದ್ದನ್ನು, ನಾವು ಈ ಕಥೆಯ ಮೂಲಕ ಅರ್ಥಮಾಡಿಕೊಳ್ಳಬಹುದು.

೫. ದಕ್ಷಬ್ರಹ್ಮನ ಮಗಳಾಗಿ ಪಾರ್ವತಿ ಹುಟ್ಟಿದ ಕಥೆ: "ಹಾಲುಮತದ ಉದ್ಧಾರಕ್ಕಾಗಿ ಏನು ಮಾಡಬೇಕೆಂದು ಪ್ರಜಾಪತಿಯಾದ ದಕ್ಷಬ್ರಹ್ಮನು ಹಾಲಿನ ಸಾಗರದ ಮುಂದೆ ಕುಳಿತು ತಪವ ಮಾಡುತ್ತಿದ್ದನು. ಆ ತಪಸ್ಸಿಗೆ ಪಾರ್ವತಿಯು ಮೆಚ್ಚಿ, ಪ್ರತ್ಯಕ್ಷಳಾಗಿ, ಏನಾಗಬೇಕೆಂದು ಕೇಳಿದಳು. ಅದಕ್ಕೆ ದಕ್ಷಬ್ರಹ್ಮನು ದೇವಿ ಮುಂದೆ ಮೈಥುನ ಸೃಷ್ಟಿಯಲ್ಲಿ ಮಾನವ ಕುಲವೆಲ್ಲ ಹಾಲಿನಿಂದ ಬೆಳೆದು ಉಳಿಯಬೇಕಾಗಿದೆ ಮತ್ತು ಹಾಲುಮತದ ವಂಶ ಬೆಳೆಯಬೇಕಾದರೆ ನೀನು ಪರಮಾತ್ಮನ ಪತ್ನಿಯಾಗಬೇಕಾಗಿದೆ. ಮತ್ತು ನಮ್ಮ ಪುತ್ರಿಯಾಗಿ ಹುಟ್ಟಿ ನನ್ನ ವಂಶಕ್ಕೆ ಕೀರ್ತಿ ಬೆಳಗಿಸಬೇಕೆಂದು ಕರಮುಗಿದು ಶಿರಬಾಗಿ ಕೇಳುವೆನು ದೇವಿ ಎಂದನು".[೨೩] ಇದಕ್ಕೆ ಪ್ರತಿಯಾಗಿ ಪಾರ್ವತಿಯು ಒಪ್ಪಿ ದಕ್ಷನೇ ಚಿಂತಿಸಬೇಡ, ನಿನ್ನ ಅರವತ್ತು ಮಕ್ಕಳಲ್ಲಿ ನಾನೊಬ್ಬಳು ಹುಟ್ಟಿ ದ್ರಾಕ್ಷಾಯಣಿ ಎಂಬ ಹೆಸರಿನಿಂದ ಜೀವಿಸುವೆನು. ಆದರೆ. ಒಂದು ಷರತ್ತು "ನಿನ್ನ ಮಗಳಾಗಿ ಹುಟ್ಟಿದಾಗ, ಮುಂದೆ ಯಾವುದೋ ಪ್ರಸಂಗದಿಂದ ನನ್ನನ್ನು ನೀನು ಅಪಮಾನ ಮಾಡಿದ್ದಾದರೆ, ನನ್ನ ಸತಿ ಪರಶಿವನಿಗೆ ಅಪಮಾನ ಮಾಡಿದಂತಾಗುವದು. ಅಂಥ ಪ್ರಸಂಗ ಬಂದರೆ ನಾನು ನನ್ನ ಶರೀರವನ್ನೇ ತ್ಯಾಗ ಮಾಡುವೆನು"[೨೪] ಎಂದಳು. ಹೀಗೆ ಹೇಳಿ ಪಾರ್ವತಿಯು ಮಾಯವಾದಳು. ಕೆಲ ತಿಂಗಳ ನಂತರ ದಕ್ಷಬ್ರಹ್ಮನ ಹೆಂಡತಿಯಾದ ಪ್ರಸೂತಿ ಗರ್ಭವತಿಯಾದಳು. ನವಮಾಸಗಳು ತುಂಬಿ, ಶುಭದಿನದಂದು ಪ್ರಸೂತಿಯ ಒಡಲಿನಲ್ಲಿ ಮಗುವೊಂದು ಜನಿಸಿತು. ಆ ಮಗುವೆ ದಾಕ್ಷಾಯಣಿಯಾಗಿ ಮುಂದೆ ಬೆಳೆದಳು.

೬. ವೀರಭದ್ರನ ಹುಟ್ಟು : ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣದಲ್ಲಿ ವೀರಭದ್ರನ ಹುಟ್ಟಿನ ಪ್ರಸ್ತಾಪವಿದೆ. ಶಿವ-ಪಾರ್ವತಿಯರ ಮದುವೆಯ ಸಂದರ್ಭದಲ್ಲಿ ಗುಗ್ಗುಳ ಹೋಮ (೩೧) ನಡೆಯುವಾಗ, ನನ್ನ ಶಕ್ತಿ ಪ್ರಭಾವದಿಂದ ಹೋಮದಲ್ಲಿ ಒಬ್ಬ ಸುಂದರ ಬಾಲಕ ಉದ್ಭವಿಸಿ, ಅವನ ರೂಪ ಲಾವಣ್ಯ ಅತಿ ಅದ್ಭುತ ಗುಂಗುರ-ಗುಂಗುರ ಕೂದಲುಗಳಿವೆ. ಅವನ ಗದ್ದುಗೆಯ ಮೇಲೆಲ್ಲ, ಆಟ ಆಡುತ್ತಾ ನನ್ನ ಬಳಿ ಬಂದು ಕುಳಿತು ನಗುತ್ತಿದ್ದರೆ, ಅಲ್ಲಿ

ನೆರೆದಿರುವ ಪ್ರತಿಯೊಬ್ಬರಲ್ಲಿಯೂ ಆನಂದ, ಆನಂದದೊಂದಿಗೆ ಆಶ್ಚರ್ಯ ಹೊರ ಹೊಮ್ಮಿತ್ತು. ಎಲ್ಲರು ಆ ಕಂದನನ್ನೇ ನೋಡುತ್ತಿರಲು, ಆ ಬಾಲಕನೇ ಸರ್ವರನ್ನು ಉದ್ದೇಶಿಸಿ "ಎಲ್ಲೈ ಬ್ರಹ್ಮಾದಿ ದೇವರುಗಳೇ ಋಷಿ ಮುನಿಗಳಿಗೇ ನಿಮಗೆ ಪ್ರಸಂಗ ಬಂದಲ್ಲಿ ನನ್ನನ್ನು ಕರೆಯಿರಿ". ದುಷ್ಟರನ್ನು ಮರ್ದನ ಮಾಡಿ ನಿಮ್ಮನ್ನು ಕಾಪಾಡುವೆನೆಂದು ಕೂಗಿ–ಕೂಗಿ ಹೇಳಿದನು. ನಾನು ಯಾವಾಗಲೂ ಶಿವನ ಸ್ವಾಧೀನನೆಂದು ತಿಳಿಯಿರಿ ಎಂದು ಹೇಳಿ ಕಂದನು ಗಪ್ಪಾದನು". ಆಗ ಶಿವನು ಎಲ್ಲರಿಗೂ ಹೇಳಿದನು ಇವನು ಸಿದ್ಧಭೈರವ ಇವನೇ ವೀರಭದ್ರನಾಗಿ ಹಾಲುಮತದ ಕುಲದೇವನಾಗುವನು ಎಂದು ಹಾರೈಸಿದನು.

೭. ಅಮೋಘ ಸಿದ್ಧನ ಜನನ : ಒಂದು ದಿನ ಪರಮೇಶ್ವರನು ಭೂಲೋಕಕ್ಕೆ ಸಂಚಾರಕ್ಕಾಗಿ ಬಂದನು. ಹಾಗೆಯೇ ಭೂಲೋಕವನ್ನು ಸಂಚರಿಸುತ್ತಾ, ಇರಬೇಕಾದರೆ, ಕುರುಬರ ಕುರಿಗಳ ದೊಡ್ಡಿಯಲ್ಲಿ ಕುರಿಗಳ ಮಧ್ಯೆಯಲ್ಲಿ ಒಂದು ಲಿಂಗವನ್ನು ಇಟ್ಟು ಹೋದನು. ಈ ವಿಷಯ ಗುರು ಬೀರೇಶನಿಗೆ ತಿಳಿಯುತ್ತದೆ. ಅಲ್ಲಿಂದ ಶಿವ ಕೈಲಾಸಕ್ಕೆ ಹೋದನು. ಆ ಲಿಂಗವು ಶಿಶುವಾಗಿ ಆಡುತ್ತಿತ್ತು, ಆಗ ಬೀರಣ್ಣನು ಅಲ್ಲಿಗೆ ಬಂದು ಶಿಶುವನ್ನು ಎತ್ತಿಕೊಂಡು 'ಎಲ್ಲೈ ಕಂದನೇ ನೀನು ಶೀಘ್ರದಲ್ಲಿ ಕೈಲಾಸಕ್ಕೆ ತೆರಳು, ಅಲ್ಲಿ ಆದಿ ಗುರುವಾದ ಪರಮಾತ್ಮನನ್ನು ಕುರಿತು ಉಗ್ರ ತಪಸ್ಸನ್ನು ಆಚರಿಸು, ಆಗ ನಿನ್ನ ತಪಸ್ಸಿನ ಪ್ರಭಾವಕ್ಕೆ ಮೆಚ್ಚಿ, ಆತನು ನಿನ್ನನು ಅಮೋಘಸಿದ್ದನೆಂದು ಕರೆಯುವನು. ಕೈಲಾಸದಲ್ಲಿರುವ ಹೋಮಗಂಬಳಿಯನ್ನು ನಿನಗೆ ಉಡುಗೊರೆಯಾಗಿ ನೀಡಿ, ನೇಮಬೆತ್ತವನ್ನು ದಂಡವನ್ನಾಗಿ ಕೊಟ್ಟು ಪುನಃ ಭೂಲೋಕಕ್ಕೆ ಕಳುಹಿಸಿ ಕೊಡುವನು. ನೀನು ಭೂಲೋಕಕ್ಕೆ ಬಂದ ನಂತರ ನಾನು ನಿನಗೆ ಅಸಂಖ್ಯಾತ ಶಿಷ್ಯರನ್ನು ಕೊಟ್ಟು ಪಾಲಿಸುವೆನು. ಕಾರಣ ತಡ ಮಾಡದೆ ನೀನು ಕೈಲಾಸಕ್ಕೆ ಹೊರಡು' ಎಂದು ಆಜ್ಞಾಪಿಸಿದನು ಇದೇ ರೀತಿ ಆ ಸ್ಥಿರವು ಮಾಡಲು ಶಿವ ಪ್ರತ್ಯಕ್ಷವಾಗಿ ಆಶೀರ್ವದಿಸುವನು.

೨. ದುಷ್ಟ ಜನರ ಸಂಹರಿಸಿದ ಪವಾಡ ಕಥೆಗಳು

ಧಾರ್ಮಿಕ ಮಹಾಪುರುಷರ ಜೀವನ ವೃತ್ತಾಂತವೇ, ಅವರ ಧರ್ಮದ ಭಕ್ತರಿಗೆ ದಾರಿದೀಪವಾಗಿದೆ. ಇವರು ತೋರಿದ ದಾರಿಯಲ್ಲಿ ಭಕ್ತರು ತಮ್ಮ ಬದುಕನ್ನು ಬೆಳಗಿಸಿಕೊಳ್ಳುತ್ತಾರೆ. ಧಾರ್ಮಿಕ ಮಹಾಪುರುಷರು, ಆಯಾ ಧರ್ಮದ ಸಾಂಸ್ಕೃತಿಕ ವೀರರಾಗಿ, ಜನಸಾಮಾನ್ಯರ ಮನಸಿನಲ್ಲಿ ಧಾರ್ಮಿಕ ತತ್ವಗಳನ್ನು, ಜೀವನ ಮೌಲ್ಯಗಳನ್ನು, ಜೀವನ ನಡೆಸಲು ಬೇಕಾದ ಧೈರ್ಯಗಳನ್ನು ಮೂಡಿಸುವ ಕಾರ್ಯವನ್ನು ಮಾಡಿ ಸಮಾಜದಲ್ಲಿ ಅವರದೇ ಆದ ನಿಟ್ಟಿನಲ್ಲಿ ತಮ್ಮ ಬದುಕನ್ನು ಜನರ ಸೇವೆಗಾಗಿಯೇ ಮುಡುಪಾಗಿಟ್ಟ ಮಹಾಪುರುಷರು. ಪುರಾಣಗಳಲ್ಲಿ ಸಾಮಾನ್ಯವಾಗಿ ದೇವಾನು–ದೇವತೆಗಳು, ರಾಕ್ಷಸರು, ಜೊತೆಗೆ ಜನಸಾಮಾನ್ಯರು, ಜನ ಸಾಮಾನ್ಯರ

ರಕ್ಷಕರಾಗಿ ಮಹಾಪುರುಷರು ಹುಟ್ಟುತ್ತಾರೆ. ಪುರಾಣಗಳಲ್ಲಿ ಬರುವ ರಾಕ್ಷಸರನ್ನು ಸಂಹರಿಸಿ, ಶಿಷ್ಟರ ರಕ್ಷಣೆ ಮಾಡುತ್ತಾರೆ. ಜನಸಾಮಾನ್ಯರಿಂದ ಆಗದ ಕಾರ್ಯವನ್ನು ಮಾಡಿ, ಸಮಾಜದಲ್ಲಿ ಪವಾಡಪುರುಷರಾಗಿ ಮೆರೆದ ಕೆಲವು ಕಥೆಗಳ ಸ್ವರೂಪಗಳು ಹೀಗಿವೆ.

೧. ಕ್ರೂರ ರಾಕ್ಷಸಿಯನ್ನು ಕೊಂದು, ಉಂಡಾಡಿ ಪದುಮಣ್ಣ ಚುಮಲಾದೇವಿಯ ವಿವಾಹವಾದ ಕಥೆ.

೨. ಬೀರೇಶ್ವರ ದಕ್ಷನನ್ನು ಸಂಹರಿಸಿದ ಕಥೆ.

೩. ಬೀರೇಶ್ವನಿಂದ ರಾಕ್ಷಸನಾದ ಬಿಲ್ಲಾಸುರನನ್ನು ಸಂಹರಿಸಿದ ಕಥೆ.

೪. ಕೋಣಾಸುರನನ್ನು ಸಂಹರಿಸಿದ ಕಥೆ.

೫. ದೈತ್ಯನಾದ ಜೊಳ್ಳಾಸುರನನ್ನು ಸಂಹರಿಸಿದ ಕಥೆ.

೧. ಕ್ರೂರ ರಾಕ್ಷಸಿಯನ್ನು ಕೊಂದು, ಉಂಡಾಡಿ ಪದುಮಣ್ಣ ಚುಮಾಲಾ ದೇವಿಯ ವಿವಾಹವಾದ ಕಥೆ: ಹಾಲುಮತದ ಮೂಲ ಪುರುಷರಾಗಿರುವ ಮುದ್ದವ್ವ-ಮುದ್ದುಗೊಂಡರು ಕುರಿಗಳನ್ನು ಕಾಯುತ್ತ, ಸುಖ ಜೀವನ ನಡೆಸುತ್ತ, ಕಾಲ ಕಳೆಯುತ್ತಿದ್ದರು, ಕಾಲ ಕಳೆದಂತೆ ಮುದ್ದವ್ವ ಗರ್ಭವತಿಯಾಗಿ ಅವಳಿಗೆ ಎಂಟು ಜನ ಗಂಡು ಮಕ್ಕಳು ಹುಟ್ಟಿದರು, ಅವರು ದಷ್ಟ-ಪುಷ್ಟವಾಗಿ ಬೆಳೆದರು, ಆದರೆ ಅವರ ಕುಲ ವೃತ್ತಿಯನ್ನು ಮಾಡಲು ಯಾರೂ ಇಷ್ಟ ಪಡುವುದಿಲ್ಲ. ದಂಪತಿಗಳಿಬ್ಬರು ಚಿಂತೆಯಿಂದ ಶಿವನನ್ನು ದ್ಯಾನಿಸಲು ಶಿವ ಬಂದು ನಿಮಗೆ ನಿಮ್ಮ ಕುಲವೃತ್ತಿಯನ್ನು ಮುಂದು ವರೆಸಲು ಒಬ್ಬ ಮುದ್ದಾದ ಮಗು ಹುಟ್ಟುವುದೆಂದು ಅವನಿಂದ ಕುಲ ಉದ್ಧಾರವಾಗುವುದೆಂದು ಹೇಳಿ ಹೋದ. ಕೆಲ ಕಾಲನಂತರ ಮುದ್ದವ್ವ ಗಂಡು ಮಗುವಿಗೆ ಜನ್ಮ ನೀಡಿದಳು. ಆ ಮಗು ಆದಿಗೊಂಡನೆಂದು ನಾಮಾಂಕಿತವಾಗಿ ಬೆಳೆದು ಚುಂಚುಲಾದೇವಿಯೊಂದಿಗೆ ವಿವಾಹವಾಗಿ ನಾಲ್ಕು ಮಕ್ಕಳಾಗಿ, ಅವರು ಕುಲಕಸಬು ಒಪ್ಪದೇ ಇರಲು, ರೇವಣಸಿದ್ಧನ ಕೃಪೆಯಿಂದ ಕುಲ ಉದ್ದಾರ ಮಾಡುವ ಮಗ ಹುಟ್ಟುವನು ಉಂಡಾಡಿ ಪದುಮಣ್ಣ ಎಂದು ಹೆಸರುಗಳಿಸುವನು ಇವನು ಯಾವುದೇ ಕೆಲಸವಿಲ್ಲದೆ, ಮನೆಯಲ್ಲಿಯೇ ತಂದೆ-ತಾಯಿಯರನ್ನು ಬಿಟ್ಟು, ಉಳಿದವರಿಂದ ತಿರಸ್ಕೃತನಾಗಿ, ಯಾವಾಗಲೂ ಬೈಯಿಸಿಕೊಳ್ಳುತ್ತಾ ಜೀವನ ನಡೆಸುತ್ತಿದ್ದನು. ಒಂದು ದಿನ ಕಾರಣಾಂತರದಿಂದ ಪದುಮಣ್ಣನು ಕುರಿಗಳನ್ನು ಕಾಯಲು ಹೊರಡುವನು. ಆ ಕಾಯಕ ಅವನಿಗೆ ಇಷ್ಟವಾಗಿ, ಅವನು ಕುರಿಗಳನ್ನು ಅಡವಿಯಲ್ಲಿ ಮೇಯಿಸುತ್ತ ಹೋಗುವನು. ಮನೆಯ ಯೋಚನೆ ಇಲ್ಲದೆ ಆನಂದದಿಂದ ಕುರಿಗಳನ್ನು ಕಾಯುತ್ತ ಕಾಲ ಕಳೆಯುವನು. ಇಲ್ಲಿ ಇವನ ಚಿಂತೆಯಲ್ಲಿಯೇ ತಂದೆ-ತಾಯಿಯರು ಇಹಲೋಕವನ್ನು ತ್ಯಜಿಸಿದರು. ಪದುಮಣ್ಣನು ಕುರಿಗಳ ಹಾಲನ್ನು ಕುಡಿಯುತ್ತಾ, ಅಡವಿಯಲ್ಲಿಯ ಗೆಡ್ಡೆ-ಗೆಣಸು ತಿನ್ನುತ್ತಾ ಜೀವಿಸುತ್ತಿದ್ದನು. ಹೀಗೆಯೇ

ಜೀವನ ಕಳೆಯುತ್ತಿರಲು ಇದ್ದಕ್ಕಿಂದತೆಯೇ ಅವನಿಗೆ ಒಂಟಿ ಜೀವನ ಬೇಸತ್ತು, ಗುರುವನ್ನು ಮನದಲ್ಲಿ ಧ್ಯಾನಿಸುತ್ತಾ ಕುಳಿತಿರಲು, ರೇವಣಸಿದ್ದರು ಅಲ್ಲಿಗೆ ಆಗಮಿಸಿದರು. ಅವರನ್ನು ಕಂಡ ಪದುಮಣ್ಣನು ಹರ್ಷದಿಂದ ಕುರಿಯ ಹಾಲನ್ನು ಹಿಂಡಿ, ತಂದು ನೀಡಿದರೆ, ನನಗೆ ಹಸಿ ಹಾಲು ಬೇಡ ಮಗು ಕಾಸಿದ ಹಾಲು ಬೇಕು ಎಂದಾಗ ಪದುಮಣ್ಣ ನಸು ನಕ್ಕು, ದೇವಾ ತಮಾಷೆ ಮಾಡುತ್ತಿರುವಿರ ಮಾನವ ವಾಸವೇ ಇಲ್ಲದ ಅಡವಿಯಲ್ಲಿ ಎಲ್ಲಿಂದ ಬರ ಬೇಕು ಬೆಂಕಿ, ಎಲ್ಲಿಂದ ತರಲಿ ಕಾಸಿದ ಹಾಲು ಎಂದನು. ಗುರು ರೇವಣ್ಣನು ಚಿಂತೆ ಬೇಡ, ಇಲ್ಲಿಂದ ನೇರವಾಗಿ ಹೋಗಿ ಬೆಟ್ಟದ ತುದಿಯಲ್ಲಿ ಒಂದು ಗುಹೆ ಉಂಟು, ಅಲ್ಲಿ ನಿನಗೆ ಬೆಂಕಿ ದೊರೆಯುವುದು, ಕಿಚ್ಚು ತೆಗೆದುಕೊಂಡು ಬಂದು ಕಾಸಿದ ಹಾಲು ಕೊಡು ಎಂದರು.

ಪದುಮಣ್ಣನು ಗುರುಗಳು ಹೇಳಿದಂತೆ ಅವಸರವಾಗಿ ನೇರವಾಗಿ ಹೋಗಿ, ಬೆಟ್ಟ ತಲುಪಿದರು. ಅಲ್ಲಿ ಹೊಗೆಯಾಡುವುದನ್ನು ಕಂಡನು. ಆನಂದಗೊಂಡು ಸುತ್ತಲೂ ನೋಡಿದರೂ, ಅಲ್ಲಿ ಯಾರೂ ಇಲ್ಲ, ಭಯದಿಂದ ಗುರುವನ್ನು ನೆನೆದು, ಬೆಂಕಿ ತರಲು ಮುಂದೆ ಹೆಜ್ಜೆಯನ್ನಿಟ್ಟನು. ಇನ್ನೇನು ಬೆಂಕಿಯ ಕಿಚ್ಚನ್ನು ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ಒಬ್ಬ ಸುಂದರ ಹುಡುಗಿ ಪದುಮಣ್ಣನ ಕಣ್ಣ ಮುಂದೆ ಬರುವಳು. ಅವಳ ಸೌಂದರ್ಯಕ್ಕೆ ಮಾರು ಹೋಗಿ, ಹಾಗೆಯೇ ನೋಡುತ್ತ ನಿಲ್ಲುವನು. ಅವಳು ಸಹ ಮಾನವರನ್ನೇ ನೋಡದ ಹಾಗೆ ತೆರೆದ ಕಣ್ಣು, ತೆರೆದ ಹಾಗೆ ನೋಡುವಳು. ಕ್ಷಣ ಕಾಲ ನಂತರ ಎಚ್ಚೆತ್ತು, ಒಬ್ಬೊಬ್ಬರು ಸಲಿಗೆಯಿಂದಲೇ ಮಾತನಾಡಿದರು. ನಾಳೆ ಬರುತ್ತೇನೆಂದು ಬೆಂಕಿಯ ಕಿಚ್ಚನ್ನು ತೆಗೆದುಕೊಂಡು ಹೋಗಿ, ಹಾಲನ್ನು ಕಾಸಿ, ಗುರುವಿಗೆ ನೀಡಿದರು. ನಾನು ಬಂದ ಕಾರ್ಯ ನೆರವೇರಿತು ಎಂದು ಆಶೀರ್ವದಿಸಿ ಹೋಗುವರು.

ಪದುಮಣ್ಣನಿಗೆ ನಿದ್ದೆಯಲ್ಲಿಯೂ ಆ ಹುಡುಗಿಯ ನೆನಪಾಗುವುದು, ಅಲ್ಲಿ ಅವಳಿಗೂ ಸಹ ಹಾಗೆಯೇ, ಹೀಗೆ ರಾತ್ರಿಯು ಕಳೆಯಿತು, ಮತ್ತೆ ಪದುಮಣ್ಣನು ಮತ್ತೆ ಹುಡುಗಿಯನ್ನು ಕಾಣಲು, ಅಲ್ಲಿಗೆ ಹೋದನು. ಇವನ ಬರುವಿಕೆಗಾಗಿ ಕಾಯುತ್ತಿದ್ದಳು. ಬರು-ಬರುತ್ತಾ ಇವರಿಬ್ಬರ ನಡುವೆ ಪ್ರೀತಿ ಅಂಕುರವಾಯಿತು. ಅವಳು ನಾನೊಬ್ಬ ರಾಕ್ಷಸಿಯ ಮಗಳು, ನನಗೆ ನನ್ನ ಅಮ್ಮನಿಂದ ಸ್ವಲ್ಪ ಸ್ವತಂತ್ರ್ಯವಿಲ್ಲದಂತಾಗಿದೆ. ಇವಳು ನನ್ನ ಸಾಕು ತಾಯಿ. ನಮ್ಮ ತಂದೆ ಚಂದ್ರಧರನ ರಾಜ. ಇವನ ರಾಜಧಾನಿಯಲ್ಲಿ ಈ ರಾಕ್ಷಸಿಯು ಜನರಿಗೆ, ಪ್ರಾಣಿಗಳಿಗೆ, ಪಕ್ಷಿಗಳಿಗೆ ಹಿಂಸೆಯನ್ನು ಮಾಡುತ್ತ ಬಂದಿತು. ಹೀಗೆ ಅರಮನೆಗೆ ಬಂದಾಗ ಇವಳ ಕ್ರೂರತ್ವಕ್ಕೆ ನನ್ನ ತಂದೆ-ತಾಯಿ ಹೋದರು. ನನ್ನನ್ನು ಹೊತ್ತುಕೊಂಡು ಬಂದು, ಪ್ರೀತಿಯಿಂದಲೇ ನನ್ನನ್ನು ಸಾಕಿ-ಸಲುಹಿದಳು. ಆದರೆ ಅವರ ಪ್ರೀತಿ ನನಗೆ ಹಿಂಸೆಯಾಗುತ್ತಿದೆ. ಅವಳಿಂದ ಬಿಡಿಸಿ, ನನಗೆ ಮುಕ್ತಿಯನ್ನು ಕೊಡಿ ಎಂದು ಬೇಡಿಕೊಳ್ಳಲು, ಪದುಮಣ್ಣನು ಚಿಂತೆ ಬೇಡ ಸುಂದರಿ,

ನಾನು ರಾಕ್ಷಸಿ ಜನ್ಮದಿಂದ ಮುಕ್ತಿ ಕೊಡಿಸುವೆ ಎಂದು ಸಲುಗೆಯಿಂದ ಮಾತನಾಡುತ್ತಿರಲು ಭಯಂಕರವಾಗಿ ಶಬ್ಧ ಮಾಡುತ್ತ, ರಾಕ್ಷಸಿಯು ಗವಿಯ ಹತ್ತಿರ ಬಂದು, ಯಾರಿವನು ನಿನ್ನ ಬಳಿ ಯಾಕೆ ಇರುವನು ಎಂದು ಗಟ್ಟಿಯಾಗಿಯೇ ಕೇಳುವಳು. ಭಯ-ಭೀತಳಾದ ಚಮಲಾ ದೇವಿಯು ಇವನು ಇಲ್ಲಿಯೇ ಸುತ್ತ-ಮುತ್ತ ಕುರಿಯನ್ನು ಕಾಯುತ್ತಿರುವನು ಎಂದರು. ಸಂಶಯದಿಂದ ಅವನ ಮೇಲೆಯೇ ಎರಗಿ ಬಂದು ರಾಕ್ಷಸಿಯು ಹೊಡೆಯುವಳು, ಚಳಿ, ಮಳೆ, ಬಿಸಿಲುಗಳಿಂದ ಗಟ್ಟಿಯಾದ ದೇಹ, ಆ ಏಟಿಗೆ ಜಗ್ಗದೇ ಗುರುವನ್ನು ನೆನೆದು ತಿರುಗಿ ಏಟನು ಕೊಟ್ಟರೆ, ರಾಕ್ಷಸಿಯು ನೆಲಕ್ಕೆ ಉರುಳಿ ಬಿದ್ದಳು. ಚುಮಲಾದೇವಿಯು ತಾಯಿಯ ಪ್ರೀತಿಯಿಂದ ಹೊಡೆಯ ಬೇಡಿರಿ ಎಂದು ಅಡ್ಡ ಬಂದಳು. ಇದನ್ನು ಕಂಡ ರಾಕ್ಷಸಿಯು ಸಮಾಧಾನದಿಂದ ಮೇಲೆ ಎದ್ದು, ಇಂತಹ ಶಕ್ತಿಯುತವಾದ ನನ್ನನ್ನು ಸೋಲಿಸಿದ ಇವನು ದೈವಿ ಸ್ವರೂಪನೆ ಇರುವನು ಎಂದು ಭಕ್ತಿಯಿಂದ ರಾಕ್ಷಸತ್ವವನ್ನು ಬಿಟ್ಟು ಕೈಮುಗಿದು, ಮೃದುತ್ವದಿಂದ ಮಾತನಾಡಿ ನಾನು ರಾಕ್ಷಸಿಯೇಯಾಗಿರಬಹುದು. ಆದರೆ ನನ್ನಲ್ಲೂ ತಾಯಿಯ ಪ್ರೀತಿ ಇದೆ. ನಾನು ನನ್ನ ಸಾಕು ಮಗಳಾದ ಚುಮಲಾದೇವಿಯನ್ನು ನಿನಗೆ ಒಪ್ಪಿಸುವೇ ಅವಳನ್ನು ಹೂವಿನಂತೆ ನೋಡಿಕೋ ಎಂದು ವಿವಾಹವನ್ನು ಮಾಡಿಸುವಳು. ರಾಕ್ಷಸತ್ವ ಹೊಂದಿದ ರಾಕ್ಷಸಿಯನ್ನು ದೈವ ಸ್ವರೂಪದಿಂದ ಮಾನವಳನ್ನಾಗಿ ಮಾಡಿದ ಪದುಮಣ್ಣ. ಕ್ರೂರ ಮನಸ್ಸಿರುವ ರಾಕ್ಷಸರಲ್ಲೂ, ಮಾನವೀಯ ಗುಣವಿರುವುದು ಕಾಣುತ್ತೇವೆ.

೨. ವೀರಭದ್ರ ದಕ್ಷನನ್ನು ಸಂಹರಿಸಿದ ಕಥೆ : ಪಾರ್ವತಿದೇವಿಯು ಶಿವನ ಮಾತನ್ನು ಕೇಳದೆ, ತವರು ಮನೆಯ ವಾತ್ಸಲ್ಯದಿಂದ ಕರೆಯದೆ ಮನೆಗೆ ಬಂದು ಅವಮಾನಿತಳಾಗಿ, ಅಗ್ನಿಕುಂಡವನ್ನು ಪ್ರವೇಶಿಸಿದಳು. ಇದನ್ನು ಕಂಡ ನಂದಿಯು, ಹೋಗಿ ಶಿವನಲ್ಲಿ ಹೇಳಲು, ಶಿವನು ಉಗ್ರನಾಗಿ ಕೋಪಾಗ್ನಿಯಿಂದ ವೀರಭದ್ರನನ್ನು ಕರೆಯಲು, ವೀರಭದ್ರನು ಆರ್ಭಟಿಸುತ್ತಾ ಶಿವನ ಎದುರುಗಡೆ ಏನು ಅಪ್ಪಣೆ ಎಂದು ಕೇಳಲು, ಶಿವನು ನಿನ್ನ ತಾಯಿಯಾದ ಪಾರ್ವತಿಯು ದಕ್ಷಬ್ರಹ್ಮನ ಕಾರಣದಿಂದಾಗಿ, ಅಗ್ನಿಪ್ರವೇಶವನ್ನು ಮಾಡಿದ್ದಾಳೆ. ಅದಕ್ಕೆ ಕಾರಣರಾದ ಎಲ್ಲರನ್ನು ಸಂಹರಿಸು ಎಂದು ಆಜ್ಞಾಪಿಸುವನು. ವೀರಭದ್ರನು ದಕ್ಷಬ್ರಹ್ಮನ ಅರಮನೆಗೆ ಆರ್ಭಟಿಸುತ್ತ ಬರುವುದನ್ನು ಕಂಡ ದಕ್ಷನು ಭಯಭೀತನಾಗಿ, ವಿಷ್ಣುವಿನ ಬಳಿ ಹೋಗಿ, ನನ್ನನ್ನು ಕಾಪಾಡು ತಂದೆ ಎನ್ನಲು ವಿಷ್ಣುವು ನೀನು ತಪ್ಪನ್ನು ಮಾಡಿರುವೆ, ನಿನ್ನ ಯಜ್ಞವು ಹಾಳಾಗದಂತೆ ನೋಡಿಕೊಳ್ಳುವೆ ಎಂದನು. ವೀರಭದ್ರನು ಬಂದು ವಿಷ್ಣುವು ನೀನು ದುಷ್ಟನಾದ ದಕ್ಷನನ್ನು ರಕ್ಷಸುವೆಯಾ "ದಕ್ಷನಿಂದ ಪೂಜೆಗೊಳ್ಳವ ನಿನಗೆ ನಾನು ನಿನ್ನ ಎದಿಯನ್ನೆ ಸೀಳುವೆನು ನಿನ್ನನ್ನು ರಕ್ಷಿಸಲಿಕ್ಕೆ ಬಂದವರಿಗೂ ನಿನಗೂ ಯಮಲೋಕಕ್ಕೆ ಕಳಿಸುವೆನು!"[೨೫]

ಎಂದು ವಿಷ್ಣುವಿನ ಮೇಲೆ ಯುದ್ಧಕ್ಕೆ ನಡೆದನು. ಇವರಿಬ್ಬರ ನಡುವೆ ಭೀಕರ ಕಾಳಗ ಜರುಗಿತು. ಈ ಯುದ್ದದಲ್ಲಿ ಪ್ರಜಾಪತಿ, ಧರ್ಮ, ಕಶ್ಯಪ, ಅರಿಷ್ಟನೇಮಿ ಮುನಿಗಳನ್ನೆಲ್ಲ ಮನಬಂದಂತೆ ಹೊಡೆದನು. "ಸರಸ್ವತಿಯ ಮೂಗನ್ನೇ ತನ್ನ ಉಗುರಿನಿಂದ ಚಿವುಟಿ ಕತ್ತರಿಸಿ ಕೊಂಡನು, ಬ್ರಗು ಮುನಿಯ ಗಡ್ಡವನ್ನು ಕಿತ್ತಿದನು, ಪುನಃ ದಕ್ಷನ ಸನ್ನಿದಿಯಲ್ಲಿ ಹೋಗಿ ಅವನ ಶಿರಸನ್ನು ತಿರುವಿ ಹರಿದು ಅಗ್ನಿಯಲ್ಲಿ ಹಾಕಿದನು. ಈ ಕಥೆಯು ಮುದ್ದಲಿಂಗೇಶ್ವರ ಚರಿತ್ರೆಯಲ್ಲಿ ಭಿನ್ನವಾಗಿ ಮೂಡಿ ಬಂದಿದೆ. ವೀರಭದ್ರನು ದಕ್ಷ ಬಳಿಬರುವುದಾಗಿ

"ಸಿಕ್ಕಿನಜ್ಞಾಗಿರಲು ಯಲವೋ
ಸೊಕ್ಕಿನಿಂದಲಿ ಮೆರೆವ ದಕ್ಷನೆ
ಭಕ್ಷಿಸುವೆ ನಿನ್ನ ನೀಗಲೆಯೆಂದ ವೀರಭದ್ರನು
ಸಿಕ್ಕವನ ಕೂದಲ ತುಡುಕಿಡಿದು
ಜಕ್ಕನೆಗರಿಸಿದ ತಲೆಯ ಸೆಳಿದು
ಪಕ್ಕದಿರುಪಾ ಯಜ್ಞ ಕುಂಡದೊಳಗದ ನೆಸೆದೊಟ"[೨೬]

ಹೀಗೆ ವೀರಭದ್ರನ ಕೈಯಲ್ಲಿ ದಕ್ಷನು ಸತ್ತನು.

೩. ಬೀರೇಶ್ವರನಿಂದ ರಾಕ್ಷಸನಾದ ಬಿಲ್ಲಾಸುರನನ್ನು ಸಂಹರಿಸಿದ ಕಥೆ : ಶಿವನ ಒಡ್ಡೋಲಗದಲ್ಲಿ ಸರ್ವರು ಸಂತೋಷದಿಂದರಲು, ಭೂಲೋಕದಿಂದ ಬ್ರಾಹ್ಮಣರು ಕೈಲಾಸಕ್ಕೆ ಬಂದು, ತಮಗೆ ಬಂದ ಕಷ್ಟವನ್ನು ಹೇಳಿಕೊಳ್ಳುವರು. ಪರಮಾತ್ಮನೆ ಭೂಲೋಕದಲ್ಲಿ ಬಿಲ್ಲಾಸುರನೆಂಬ ರಾಕ್ಷಸನು ಉಗ್ರ ತಪಸ್ಸಿನಿಂದ ಪಾರ್ವತಿಯನ್ನು ಒಲಿಸಿಕೊಂಡು ವರ ಪಡೆದುಕೊಂಡು ಗರ್ವದಿಂದ ಭೂಲೋಕದಲ್ಲಿ ಮಾನವರಿಗೂ, ಪ್ರಾಣಿ-ಪಕ್ಷಿಗಳಿಗೂ ತೊಂದರೆಯನ್ನು ಕೊಡುತ್ತಿದ್ದಾನೆ. ಅವನ ಉಪಟಳದಿಂದ ಪಾರು ಮಾಡಿ ಎಂದು ಬೇಡಿಕೊಳ್ಳುವರು. ಇದನ್ನು ಕೇಳಿಸಿಕೊಂಡ ಶಿವನು, ವೀರಭದ್ರನನ್ನು ಕರೆದು, ನೀನು ಭೂಲೋಕದಲ್ಲಿ ಬೀರೇಶ್ವರನಾಗಿ ಅವತಾರ ತಾಳಿ, ಬಿಲ್ಲಾಸುರನನ್ನು ಸಂಹಾರ ಮಾಡು ಎಂದು ಆಜ್ಞಾಪಿಸಿದನು. ಭೂಲೋಕಕ್ಕೆ ಬೀರೇಶ್ವರನಾಗಿ ಹೋಗುವ ಸಂದರ್ಭದಲ್ಲಿ ಜಲದೇವತೆಯು ಮಲ್ಲಗಂಬಳಿ ಮತ್ತು ಪಂಚಡಂಗಿಯನ್ನು ಅವನಿಗೆ ದೇವಾನು-ದೇವತೆಗಳು ಸೇರಿ ನೀಡಿ, ಆಶೀರ್ವದಿಸಿ ಕಳುಹಿಸಿಕೊಟ್ಟರು. ಇದರ ಜೊತೆ ವಾಯುಪಕ್ಷಿಯೊಂದು, ಅವನ ಬಳಿ ಬಂದು ನಿಂತಿತು. ಬೀರೇಶ್ವರ ಅದರ ಮೇಲೆ ಏರಿ ಹಾರಿ ಭೂಲೋಕಕ್ಕೆ ಗರ್ಜಿಸುತ್ತಾ ಬಂದನು.

ಬಿಲ್ಲಾಸುರನಲ್ಲಿರುವ ಸ್ಥಳಕ್ಕೆ ಸಿಂಹದಂತೆ ಆರ್ಭಟಿಸುತ್ತಾ ಬರುತ್ತಿದ್ದನು. ಇದನ್ನು ಕಂಡ ಪರಾಕ್ರಮ ವೀರನಾದ ಬಿಲ್ಲಾಸುರನೇ ನಡುಗಿಹೋದನು. ಆದರೂ ಎದೆಗುಂದದೆ ಬೀರೇಶ್ವರನ

ಜೊತೆ ಯುದ್ಧಕ್ಕೆ ನಿಂತನು. ಸ್ವಲ್ಪ ಸಮಯದವರೆಗೆ ಇಬ್ಬರಲ್ಲಿಯೂ ಯುದ್ಧವು ನಡೆದು, ಕೊನೆಗೆ ಬೀರೇಶ್ವರನು ಡಂಗಿಯಿಂದ ರಭಸವಾಗಿ, ಬಿಲ್ಲಾಸುರನ ತಲೆಗೆ ಹೊಡೆದಾಗ ಅವನು ಅಲ್ಲಿಯೇ ರಕ್ತ ಚೆಲ್ಲಿ ಸತ್ತು ಹೋದನು. ವೀರಭದ್ರನ ಸ್ವರೂಪಿಯಾಗಿರುವ ಬೀರೇಶ್ವರನು, ಕಷ್ಟದಲ್ಲಿರುವ ಜನರಿಗೆ ತನ್ನ ಶಕ್ತಿಯಿಂದ ದುಷ್ಟರನ್ನು ಸಂಹರಿಸಿ, ಭೂಲೋಕದಲ್ಲಿ ದೈವಿಸ್ವರೂಪನಾಗಿ ಮೆರೆದನು.

೪. ಕೋಣಾಸುರನನ್ನು ಸಂಹರಿಸಿದ ಕಥೆ : ಭೂಲೋಕದಲ್ಲಿ ಕೋಣಾಸುರನೆಂಬ ರಾಕ್ಷಸರು ಎಲ್ಲರಿಗೂ ಹಿಂಸೆ ನೀಡುತ್ತಾ, ಅವರನ್ನು ತಿನ್ನುತ್ತಾ ಜೀವಿಸುತ್ತಿದ್ದನು. ರಾಕ್ಷಸನ ತಾಯಿ ಎಮಾಯಿಯು ಮಲಗಿರಲು ಒಂದು ಕನಸನು ಕಂಡಳು. "ಕೋಣೇಶ್ವರ ಧೈತ್ಯನ ಲಗ್ನ ಜರುಗಿದಂತಾಗಿ ಮೊಗಲಾಯಿ ನಾಡಿನ ಪಠಾಣನೊಬ್ಬನು ಬಂದು ಕೋಣೇಶ್ವರ ದೈತ್ಯನಿಗೆ ಕಂಕಣ ಕಟ್ಟಿದಂತಾಗಿತ್ತು."[೨೭]

ಈ ಸ್ವಪ್ನವನ್ನು ತನ್ನ ಮಗನಿಗೆ ತಿಳಿಸಿ. ನೀನು ಎಲ್ಲಿಗಾದರು ದೂರ ಹೊರಟುಹೋಗು, ನಿನ್ನನ್ನು ಕೊಲ್ಲಲು ಪಠಣನೊಬ್ಬನು ಬರುತ್ತಿರುವನು. ಎಂದಾಗ ತಾಯಿಯ ಮಾತನ್ನು ಕೇಳದೆ ರಾಕ್ಷಸನು ತಾಯಿಯನ್ನು ಬೈದು ಅಟ್ಟಿದ್ದನು. ತಾಯಿ ಹೋದ ಕೆಲವು ಸಮಯದ ಬಳಿಕ ಅಕ್ಕಂದಿರೊಂದಿಗೆ, ಬೀರೇಶ್ವರನು ಬಂದನು. ಅಕ್ಕಂದಿರು ಮರೆಯಲ್ಲಿ ನಿಂತರು. ರಾಕ್ಷಸನ ಹತ್ತಿರ ಬಂದನು. ಆಗ ಕೋಣಾಸುರ ಅವನ ಸಾದುತ್ವವನ್ನು ನೋಡಿ, ನನಗೆ ನಿನ್ನನ್ನು ತಿನ್ನಲು ಮನಸ್ಸಾಗುತ್ತಿಲ್ಲ. ಹೋಗು ನೀನು ಇಲ್ಲಿಂದ ಎಂದರು. ಬೀರೇಶ ಹೋಗದೆ ಮೌನವಾಗಿದ್ದನು. ಮೌನದಿಂದಲೇ ಹತ್ತಿರ-ಹತ್ತಿರ ಬರುತ್ತಿದ್ದನು. ಕೋಣಾಸುರನಿಗೆ ಕೋಪಗೊಂಡು ಎಲೈ ಬಾಲಕನೆ ನಾನೇನೋ ಸಾಧುವಾಗಿದಿಯಾ ಎಂದರೆ, ಹಾಸ್ಯಾ ಮಾಡುತ್ತಿರುವಿಯಾ ಎಂದು ಎದ್ದು ತಿನ್ನಲು ಬಂದನು. ಆಗ ಬೀರೇಶನು ನಾನು ನಿನ್ನನ್ನು ಕೊಲ್ಲಲು ಬಂದಿರುವೆ ಎಂದಾಗ ಕೋಣಾಸುರನು ಪರ್ವತದಂತೆ ಬೆಳೆದನು. ಇಲ್ಲಿ ಬೀರೇಶ ಸಾಮಾನ್ಯ ಎತ್ತರದಲ್ಲಿದ್ದನು. ಅಕ್ಕಮ್ಮ ತಮ್ಮ ಹೆದರಬೇಡ ಮುನ್ನುಗ್ಗು ಎನ್ನಲು, ರಾಕ್ಷಸ ಕಣ್ಣು ಮುಚ್ಚಿ ತೆರೆಯುವುದರೊಳಗೆ ಬೀರೇಶನು ತಲೆ ಕೈಲಾಸಕ್ಕೆ, ಚರಣ ಪಾತಾಳಕ್ಕೆ ಹೋಗುವ ರೀತಿ ಬೃಹತಾಕಾರವಾಗಿ ಬೆಳೆದು ನಿಂತನು. ಕೋಣಾಸುರನು ಅಚ್ಚರಿಯಿಂದ ನೋಡುತ್ತಿರಲು, ಬೀರೇಶನು ಪಂಚಡಂಗಿ ಶಸ್ತ್ರಕ್ಕೆ ಗುರಿ ಇಟ್ಟು, ಕೋಣಾಸುರನ ರುಂಡವನ್ನು ಕತ್ತರಿಸಿದನು. ಅದು ತುಂಬಿರಾಯನ ಪಟ್ಟಣದ ಹತ್ತಿರಕ್ಕೆ ಹೋಗಿ ಬಿದ್ದಿತು. ಅಲ್ಲಿಗೆ ಹೋಗಿ ನೋಡಿದರೆ ಪ್ರಾಣ ಬಿಟ್ಟಿರಲಿಲ್ಲ. ಬೀರೇಶನು ಹೋಗಿ ರುಂಡದ ಮೇಲೆ ಪಾದವನ್ನು ಇಟ್ಟಾಗ ನನ್ನನ್ನು ಕ್ಷಮಿಸು ದೇವಾ, ನನ್ನ ತಾಯಿ ಹೇಳಿದಳು. ಆದರೂ, ಕೇಳದೆ ನಾನು ಗರ್ವದಿಂದ ಇಲ್ಲಿಯೇ ಇದ್ದೆ. ನನಗೇನಾದರೂ ವರ

ನೀಡಿ ಎಂದು ಕೋಣಾಸುರನು ಕೇಳಿದನು. ಅದಕ್ಕೆ ಬೀರೇಶ್ವರನು "ಕಲಿಯುಗದಲ್ಲಿ ನಿನ್ನ ಮೂಗು ಜಿಗಿದು ಬಿದ್ದಲ್ಲಿ ಮುಗೀನೂರು ಅರ್ಥಾತ್ ಮುಂಡಗನೂರುವೆಂದು, ನಿನ್ನ ಖೋಡ ಬಿದ್ದಲ್ಲಿ ಕೋಡ್ಯಾಳವೆಂದು, ನಿನ್ನ ಮಸ್ತಕದ ಮೇಲೆ ನನ್ನ ವಸ್ತಿ ಇದ್ದು, ಕುಂಬಿರಾಯರ ಪಟ್ಟಣ ಮುರಿಸಿ ಕೊಣ್ಣೂರು ಅನಿಸಿ ಇಂಥ ಸ್ಥಾನದಲ್ಲಿ ಕರಿಸಿದ್ದನೆಂಬ ನಾಮದಿಂದ ನಾಮ ಪಡೆದು, ನಿನ್ನ ಹೆಸರು ಸೂರ್ಯಚಂದ್ರರಿರುವವರೆಗೂ ಉಳಿಸುತ್ತೇನೆ ಎಂದಾಗ ಕೋಣಾಸುರ ದೈತ್ಯನು ಬೀರೇಶನಿಗೆ ಮನದಲ್ಲಿಯೇ ವಂದಿಸಿ ಪ್ರಾಣ ಬಿಟ್ಟನು."[೨೮] ಈ ಕಥೆಯಲ್ಲಿ ದುಷ್ಟನಾದ ಕೋಣಾಸುರನ ಅಂತ್ಯದಲ್ಲಿ, ಅವನ ಕೊನೆಯ ಆಶೆಯಂತೆ, ಬೀರೇಶ್ವರನು, ರಾಕ್ಷಸನ ಅಂಗಾಗಕ್ಕೂ ಒಂದೊಂದು ಊರು ನಿರ್ಮಾಣವಾಗುವ ವರ ನೀಡಿದನು. ಇಲ್ಲಿ ಭಕ್ತಿಯಿಂದ ಬೀರೇಶ್ವರನನ್ನು ಎಂತಹ ಭಕ್ತನಾದರೂ ಬೇಡಿಕೊಂಡರೆ, ಯಾವತ್ತಿಗೂ ಅವರು ನಮ್ಮನ್ನು ಮರೆಯುವುದಿಲ್ಲವೆಂಬುದಕ್ಕೆ ಈ ಕಥೆಯೇ ಸಾಕ್ಷಿಯಾಗಿದೆ.

೫. ದೈತ್ಯನಾದ ಜೊಳ್ಳಾಸುರನ ವಧೆ ಮಾಡಿದ ಕಥೆ : ಕುಂತಲ ದೇಶದಲ್ಲಿ ಜೊಳ್ಳಾಸುರನೆಂಬ ದೈತ್ಯನ ಹಾವಳಿ ಪ್ರಬಲವಾಗಿತ್ತು. ಅವನು ಮಾನವರಿಗೂ, ದಾನವರಿಗೂ, ಪಕ್ಷಿ–ಪಶುಗಳಿಗೂ, ದೇವಾನು–ದೇವತೆಗಳಿಗೂ ಹಿಂಸೆ ನೀಡುತ್ತಿದ್ದನು. ಇದರಿಂದ ಬೇಸತ್ತು ಎಲ್ಲರು ಇಂದ್ರನ ಹತ್ತಿರ ಹೋಗಿ ಮೊರೆ ಇಟ್ಟಾಗ, ಅವನ ಮರಣ ರಹಸ್ಯವನ್ನು ತಿಳಿಯಬೇಕೆಂದು ವಿಚಾರಿಸಲು, ಇವನ ಅಂತ್ಯ ವೀರಭದ್ರನ ಅವತಾರಿಯಾದ ಬೀರೇಶನಿಂದ ಮಾತ್ರ ಸಾಧ್ಯವೆಂದು ಅರಿತು, ಬೀರೇಶನ ಬಳಿ ಬಂದು ಇಂದ್ರನು ಜೊಳ್ಳಾಸುರನನ್ನು ಸಂಹಾರ ಮಾಡಿ, ಎಲ್ಲರನ್ನು ಕಾಪಾಡುವ ಕರ್ತವ್ಯ ನಿನ್ನದು ಎಂದು ಹೇಳಿ ಹೋಗುವನು.

ಇಂದ್ರನ ಮಾತನ್ನು ಕೇಳಿದ ಬೀರೇಶನು ಅಕ್ಕಮ್ಮನೊಂದಿಗೆ ವಿಚಾರ ಮಾಡುತ್ತಿರಲು, ಅಕ್ಕ ನಾನು ಅವನ ಉದರದಲ್ಲಿ ಪ್ರವೇಶ ಮಾಡಿ ಕೊಲ್ಲಲೇಬೇಕು ಎಂದು ನಿರ್ಧರಿಸಿ ಯುದ್ಧಕ್ಕೆ ಹೋಗುವನು. ಇವರಿಬ್ಬರಲ್ಲಿ ಭೀಕರ ಯುದ್ಧವಾಯಿತು. ಯುದ್ಧದ ಮಧ್ಯದಲ್ಲಿ ಜೊಳ್ಳಾಸುರನು ಬೀರೇಶನನ್ನು ನುಂಗಿದನು. ಆಗ ಬೀರೇಶನು ಅವನ ಹೊಟ್ಟೆಯನ್ನು ಬಗೆದು ಹೊರಬಂದನು. ಎಷ್ಟೋ ದೇವತೆಗಳು ಸಹ ಹೊರ ಬಂದರು. ಇನ್ನೇನು ಜೊಳ್ಳಾಸುರ ಸಾಯಬೇಕು ಅಷ್ಟರಲ್ಲಿ ಬೀರೇಶನಿಗೆ ದೇವಾ ನನ್ನಿಂದ ತಪ್ಪಾಗಿದೆ, ಕ್ಷಮಿಸಿ ಎಂದು ನನಗೊಂದು ವರ ನೀಡಬೇಕೆಂದು ಪರಿ–ಪರಿಯಾಗಿ ಕೇಳುವನು. ಅವನು ಸ್ವಾಮಿಯೇ ನನ್ನ ದೇಹದ ಒಂದೊಂದು ಭಾಗದಿಂದ, ಒಂದೊಂದು ಬಿರುದು ತಯಾರಿಸಿ ಎಂದು ವರ ಕೇಳಿದನು. ಅದಕ್ಕೆ ಒಪ್ಪಿ ಒಟ್ಟು ೫೨ ಬಿರುದುಗಳನ್ನು ನೀಡಿದನು.

"೧. ಡೊಳ್ಳು, ೨. ಕೈತಾಳ, ೩. ಕಹಳೆ, ೪. ನಪೇರಿ, ೫. ಹೆಗ್ಗಾಳಿ, ೬. ಚಿನಕಾಳಿ ೭. ಕಣಗೆಜ್ಜೆ, ೮. ಝೂಂಗಟೆ, ೯. ಖಡಾವೆ, ೧೦. ಢಾಲು, ೧೧. ಸಾಳಸತ್ತಿಗೆ, ೧೨. ಕಳಸ, ೧೩. ಧೂಪಾರತಿ, ೧೪. ಪಂಚಗಂಟೆ, ೧೫.ಡಪ್ಪ, ೧೬.ನಗಾರಿ, ೧೭.ಸೌಬತ್, ೧೮. ಪಲಾಕ್ಷಿ, ೧೯. ತುರಾಯಿ, ೨೦. ಹಣಮಗರಿ, ೨೧. ಹಂದಿಕ್ವಾರಿ, ೨೨. ಹನ್ನರಿಕ್ಕದ ಗೊಂಡೆ, ೨೩. ಆಲಗ, ೨೪. ಪದಕದ ಹಾರ, ೨೫. ಕುಂದರ ಉಡದಾರ, ೨೬. ನಡಕಟ್ಟೆ, ೨೭. ಮುರಿಕಂಕಡಿ, ೨೮. ರುಳಿಪದಕ, ೨೯. ರೇಮಿಯ ಚೂರಿ, ೩೦. ಗಂಡುಗತ್ತರಿ, ೩೧. ಕಠಾರಿ, ೩೨. ಕಿರೀಟ, ೩೩. ಮುಳ್ಳಾವಿಗೆ, ೩೪. ಕಂಕಣಗತ್ತಿ, ೩೫. ಗಜಾಂಕುಶ, ೩೯. ಬಿಲ್ಲು-ಬಾಣ, ೪೦. ಕೆಂಡಬಾಣ, ೪೧. ರೇತುಬಾಣ, ೪೨. ವೆಂಶಬಾಣ, ೪೩. ಸೂರ್ಯಬಾಣ, ೪೪. ಉರಿಬಾಣ, ೪೫. ಹೋಗಿ ಬಾಣ, ೪೬. ಚೌರಿ, ೪೭. ಸಮೆಯಿ, ೪೮. ದಂಡ , ೪೯. ಗುಂಡು, ೫೦. ಕೈಗಡಗ ೫೧. ಕಾಲ್ಗಡಗ, ೫೨.ಕರ್ಣಕುಂಡಲ".[೨೯]

೩. ವ್ಯಕ್ತಿ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ಪವಾಡಕಥೆಗಳು

ವ್ಯಕ್ತಿ: ಶತಶತಮಾನಗಳಿಂದ ದೇವರು, ಧರ್ಮದ ಹೆಸರಿನಲ್ಲಿ ಅನೇಕ ಸಂಪ್ರದಾಯಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಧಾರ್ಮಿಕ ಕೇಂದ್ರಗಳು ಜನರನ್ನು ಮೂಢನಂಬಿಕೆಗಳನ್ನು ಅನುಸರಿಸುವಂತೆ ಮಾಡಿವೆ. ಇಂತಹುಗಳಿಂದ ಜನಸಾಮಾನ್ಯರು ವಂಚನೆಗೆ ಒಳಗಾಗುತ್ತಿದ್ದಾರೆ. ಜನರು ಧರ್ಮದ ಮೂಢ ಸಂಪ್ರದಾಯಗಳಿಂದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅರ್ಥಹೀನ ಆಚರಣೆಗಳ ಬಗ್ಗೆ ಜನರಲ್ಲಿ ತಿಳುವಳಿಕೆ ತುಂಬಿ, ಅವರನ್ನು ಒಳ್ಳೆಯ ಹಾದಿಗೆ ಹೋಗುವಂತೆ ದಾರಿತೋರಿದವರು ಮಹಾಪುರುಷರು.

ಮಹಾಪುರುಷರ ಪವಾಡಗಳು ಸಾಮಾನ್ಯ ವ್ಯಕ್ತಿಯ ಪ್ರತೀಕವಾಗಿರುತ್ತವೆ. ಮಹಾಪುರುಷರು ತಮ್ಮ ನಡೆ-ನುಡಿಗಳಿಂದ ಜಗತ್ತಿಗೆ ಉಪಯೋಗವಾಗುವ ಕಾರ್ಯಗಳನ್ನು ಮಾಡುತ್ತಾರೆ. ಜನಸಾಮಾನ್ಯರ ಮನಸಿನಲ್ಲಿ ಶಾಶ್ವತವಾಗಿ ನೆಲೆ ನಿಲ್ಲುತ್ತಾರೆ. ಇಂತಹ ವ್ಯಕ್ತಿಗಳ ಮೇಲೆ ಪವಾಡಕಥೆಗಳು ಹುಟ್ಟಿಕೊಳ್ಳುತ್ತವೆ. ಸಮಾಜಸೇವೆ ಮಾಡುವುದು, ಬಡತನ ನಿವಾರಿಸುವುದು, ಜನರ ಮೌಢ್ಯತೆ ನಿವಾರಿಸುವುದು ಇನ್ನು ಮುಂತಾದ ಪವಾಡ ಕಥೆಗಳು ವ್ಯಕ್ತಿಯ ಸುತ್ತ ಇರುತ್ತವೆ.

ಪ್ರಾಣಿ: ಪ್ರಾಣಿಗಳಿಗೂ-ಪವಾಡಗಳಿಗೂ ಬಿಡಿಸಲಾಗದ ನಂಟು. ಜನಪದರಲ್ಲಿ ಪ್ರಾಣಿಗಳಿಗೆ ದೇವರ ಸ್ವರೂಪವೆಂದೇ ಭಾವಿಸಿ ಪೂಜಿಸುತ್ತಾರೆ. ಜನಪದರು ಅಲ್ಲದೆ ಭಾರತೀಯ ಸಂಸ್ಕೃತಿಯೇ ಪ್ರಾಣಿಗಳನ್ನು ಪೂಜಿಸುತ್ತಾರೆ. ಹಾಲುಮತದವರಿಗೆ ಕುರಿಯೇ ಬದುಕು. ಕುರಿಯನ್ನು ದೇವರೆಂದೆ ಭಾವಿಸಿ ಪೂಜಿಸುತ್ತಾರೆ. ಪ್ರಾಣಿಗಳಿಗೂ ಸಂಬಂಧಿಸಿದ ಪವಾಡಕಥೆಗಳು ಸಾಕಷ್ಟು ಇವೆ.

೧. ಸೂರಮ್ಮದೇವಿಗೆ ಹೊಟ್ಟೆಯೊಳಗಿರುವ ಮಗು ಊಟದಲ್ಲಿ ವಿಷವಿದೆ ಎಂದ ಕಥೆ.

೨. ಸೂಲಗಿತ್ತಿಯರ ಕಪಟ ಮೋಸದಿಂದಲೂ ಜನಿಸಿದ ಕಥೆ.

೩. ಶಿವ-ಪಾರ್ವತಿಯರ ಆರೈಕೆಯಲ್ಲಿ ಮಗು.

೪. ಮಾರವ್ವ ಜೀವನದ ವೃತ್ತಾಂತದ ಕಥೆ.

೫. ಬಾಲಬೀರಣ್ಣನು ಮಾಯವ್ವನಿಗೆ ಸಿಕ್ಕ ಕಥೆ.

೬. ಮಾಯವ್ವನ ಪಾದುಗಟ್ಟೆಯ ಕಥೆ.

೭. ಸತ್ತು ಹೋದ ಬಾಲಕನನ್ನು ಬದುಕಿಸಿದ ಕಥೆ.

೮. ಬೀರಣ್ಣ ಹಾವು ಕಡಿದು ಸತ್ತವರನ್ನು ಬದುಕಿಸಿದ ಕಥೆ.

೯. ಸತ್ತ ಕುರಿಗಳನ್ನು ಬದುಕಿಸಿದ ಕಥೆ.

೧೦.ಬೀರಪ್ಪನ ಕೆಲವು ಪವಾಡಗಳು.

೧೧.ಬೀರಪ್ಪ ಶಿವಲಿಂಗ ಅವತಾರವಾಗುವ ಕಥೆ.

೧೨.ಕುರಿಗಳ ಹುಟ್ಟಿನ ಕಥೆ.

೧೩.ದೇವಾನು-ದೇವತೆಗಳು ಕುರಿಗಳನ್ನು ಕಾದ ಕಥೆ.

೧೪.ಬಡವಿ ಗಂಗಮ್ಮನಿಗೆ ನಿಧಿ ನೀಡಿದ ಕಥೆ.

೧೫.ಪದುಮಣ್ಣನಿಗೆ ಕುರಿಗಳು ಪ್ರಾಪ್ತವಾದ ಕಥೆ.

೧೬.ಶಿವನ ಮೇಲೆ ದಕ್ಷಬ್ರಹ್ಮನಿಗೆ ಕೋಪ ಬಂದ ಕಥೆ.

೧೭.ದಾಕ್ಷಾಣಿಯು(ಪಾರ್ವತಿ)ದಕ್ಷಬ್ರಹ್ಮನ ಮನೆಗೆ ಯಜ್ಞಕ್ಕೆ ಹೋಗಿ ಅವಮಾನಿತಳಾದ ಕಥೆ.

೧೮.ಯಜ್ಞಕುಂಡದಲ್ಲಿ ಹಾರಿದ ಪಾರ್ವತಿಗೆ ಮರುಜನ್ಮದ ಕಥೆ.

೧೯.ಮಾಳಿಂಗರಾಯರ ಕುಟುಂಬಕ್ಕೆ ಕೌಳೇಶ್ವರಿಯ ಶಾಪದ ಕಥೆ.

೨೦.ತ್ರಿಜನ ಗಂದರ್ವರಿಗೆ ಶಾಪ ನೀಡಿದ ಕಥೆ.

೨೧.ಕಪ್ಪೆ ಕಲಗದ ನೀರು ಹಾಗು ಹುಳು ಮುಟ್ಟದ ಹೂ ತಂದು ಗುರುವಿಗೆ ಪೂಜಿಸಿದ ಕಥೆ.

೨೨.ಶಿಷ್ಯನನ್ನು ಪಡೆದುಕೊಳ್ಳಲು ತಪಸ್ಸು ಮಾಡಿದ ಕಥೆ.

೨೩.ಸತ್ತ ಮಗುವನ್ನು ಮಾಳಿಂಗರಾಯ ಬದುಕಿಸಿದ ಕಥೆ.

೨೪.ಮಹಾಲಿಂಗರಾಯನ ಭಕ್ತಿ ಪರೀಕ್ಷಿಸಲು ಶಿವ-ಪಾರ್ವತಿಯರು ಭೂಲೋಕಕ್ಕೆ ಬಂದ ಕಥೆ.

೨೫.ಹಾವಿನ ಹೆಡೆಯ ಮೇಲೆ ಕುಳಿತು ಊಟ ಮಾಡಿದ ಕಥೆ.

೨೬.ಮುಂಗಿಪಟ್ಟಣ ಶ್ರೀ ಕೇಶುರಾಜರ ರೋಗ ನಿವಾರಿಸಿದ ಕಥೆ.

೨೭.ಮಹಾಲಿಂಗರಾಯನಿಗೆ ಸಂತಾನವಾಗುವಂತೆ ಗುರುಗಳು ಮಾಡಿದ ಪವಾಡ ಕಥೆ.

೨೮.ಗುರು ಬೀರೇಶನು ಮಹಾಲಿಂಗರಾಯನಿಂದ ಯಂಕಪ್ಪನಿಗೆ ಸಂತಾನವಾಗುವಂತೆ ಮಾಡಿದ ಕಥೆ.

೨೯.ಮಹಾಲಿಂಗರಾಯನ ಇತರೆ ಮಹಿಮೆಗಳು.

೩೦.ಬೆಟ್ಟಗೇರಿ ದೇವಗೊಂಡಗೌಡರ ಸಂಪತ್ತನ್ನು ಮುರುಕಳಿಸಿದ ಕಥೆ.

೩೧.ಮಾಳಿಂಗರಾಯನು ಸತ್ತ ಗೂಳಿಯನ್ನು ಬದುಕಿಸಿದ ಕಥೆ.

೩೨.ಗುರುವಿಗಾಗಿ ಹುಲಿಯ ಹಾಲನ್ನು ತಂದ ಕಥೆ.

೩೩.ಅಮೋಘಸಿದ್ಧನ ಗರ್ವಭಂಗ ಮಾಡಿದ ಕಥೆ.

೩೪.ರೇವಣ್ಣಸಿದ್ದನು ಕುರಿಗಳನ್ನು ಸೃಷ್ಟಿಸಿದ ಕಥೆ.

೩೫.ಶಾಂತಮುತ್ತಯ್ಯನ ಪವಾಡದಿಂದ ಸರವೂರು ಸೃಷ್ಟಿಸಿದ ಕಥೆ.

೩೬.ಸತ್ತ ಟಗರನ್ನು ಬದುಕಿಸಿದ ಕಥೆ.

೩೭.ಟಗರಿನ ಕೊಂಬುಗಳಲ್ಲಿ ಶಾಂತಮುತ್ತಯ್ಯನ ಬೆರಳುಗಳ ಗುರುತು ಮೂಡ

೧. ಸೂರಮ್ಮದೇವಿಗೆ ಹೊಟ್ಟೆಯೊಳಗಿರುವ ಮಗು ಊಟದಲ್ಲಿ ವಿಷವಿದೆ ಎಂದು ತಿಳಿಸಿದ ಪವಾಡ:

ಸೂರಮ್ಮ ದೇವಿಗೆ ಗರ್ಭಧರಿಸಿದ ವಿಷಯ ತುಂಬಾ ಸಂತೋಷವನ್ನು ತಂದಿತು. ಊರಿಗೆ ಊರೇ ಆನಂದದಲ್ಲಿ ಮುಳಿಗಿಹೋಯಿತು. ಸೂರಮ್ಮದೇವಿಗೆ ತನ್ನ ಗರ್ಭದ ವಿಷಯವನ್ನು ತನ್ನ ಅಣ್ಣನಿಗೆ (ತವರಿಗೆ) ತಿಳಿಸಬೇಕೆಂಬ ಆಸೆಯಾಗಿ, ಸೈನಿಕರನ್ನು ಕಳುಹಿಸಿ ಕೊಡುವಳು. ಜೊತೆಗೆ ಅವಳಿಗೆ ತವರು ಮನೆಯ ಊಟವನ್ನು ಮಾಡಬೇಕೆಂದು ಬಯಕೆಯನ್ನು ತನ್ನ ಅಣ್ಣನಿಗೆ ತಿಳಿಸಿ, ಬುತ್ತಿಯನ್ನು ತೆಗೆದುಕೊಂಡು ಬರಬೇಕೆಂದು ತಿಳಿಸುವಳು. ಇದರಂತೆ ಸೈನಿಕರು ಅವಳ ಬಯಕೆಯನ್ನು ಹೊತ್ತು, ನಾರಾಯಣನಲ್ಲಿಗೆ ಬಂದು ಎಲ್ಲ ವಿಷಯವನ್ನು ತಿಳಿಸುವರು. ಸೂರಮ್ಮ ದೇವಿಯು ಗರ್ಭಧರಿಸುವ ವಿಷಯ ತಿಳಿದು ಘಾತಿಯಾಯಿತು. ತನಗೆ ಮಕ್ಕಳಿಲ್ಲ ಆದರೆ ನನ್ನ ಶತ್ರುವಾದ ತಂಗಿಗೆ ಮಕ್ಕಳಾಗುತ್ತಿದೆ. ಇದನ್ನು ಹೇಗಾದರೂ ಮಾಡಿ

ಹೋಗಲಾಡಿಸಬೇಕೆಂದು, ಇದೊಂದು ಸರಿಯಾದ ಸಮಯವೆಂದು ತಿಳಿದು ಸೈನಿಕರಿಗೆ ನಾನೇ ಬಯಕೆಯ ಊಟವನ್ನು ತರುವೆ, ನೀವಿನ್ನು ಹೋಗಿ ಎಂದು ಹೇಳಿ, ಮನೆಯಲ್ಲಿ ಮೃಷ್ಟಾನ್ನವನ್ನು ತಯಾರಿಸಿಕೊಂಡು ಹೊರಟಲು ತಯಾರಾಗಿ, ಅಡವಿಯಲ್ಲಿ ಸಾಗುತ್ತಿರಬೇಕಾದಾಗ, ಯಾರು ಇಲ್ಲವೆಂದು ಪರೀಕ್ಷಿಸಿ, ತಾನು ತಂದ ಬುತ್ತಿಯನ್ನು ತೆರೆದ ಘೋರತರವಾದ ವಿಷವನ್ನು ಆ ಊಟದಲ್ಲಿ ಬೆರೆಸಿದನು. ಬೇಗ-ಬೇಗ ಮುಚ್ಚಿ, ಸೂರಮ್ಮದೇವಿಯ ಮನೆಗೆ ಬಂದು ಅತಿ ಪ್ರೀತಿಯಿಂದ ಮಾತನಾಡಿಸಿ, ನಿಮ್ಮ ಅತ್ತಿಗೆಯು ಬಹು ಪ್ರೀತಿಯಿಂದ ಅಡುಗೆ ಮಾಡಿ ಕೊಟ್ಟಿದ್ದಾರೆ ಎಂದು ಹೇಳಿ, ನೀನು ಇದನ್ನು ತಿಂದು ಆರಾಮಾಗಿ ಮಲಗು ನನಗೆ ಸ್ವಲ್ಪ ಕೆಲಸವಿದೆ, ಮುಗಿಸಿಕೊಂಡು ಬರುತ್ತೇನೆಂದು ಹೋದನು. ಸೂರಮ್ಮದೇವಿಯು ಆಗಲೇ ಊಟ ಮಾಡಿದ್ದರಿಂದ ರಾತ್ರಿ ಮಾಡಿದರಾಯಿತೆಂದು, ಅಡುಗೆ ಮನೆಯಲ್ಲಿ ಇಟ್ಟು ಮಲಗಿಕೊಂಡಳು. ಗಾಢ ನಿದ್ರೆಯಲ್ಲಿರಬೇಕಾದರೆ, ಒಂದು ಚಿಕ್ಕ ಮಗು ಕನಸಿನಲ್ಲಿ ಬಂದು, ಅಮ್ಮ ನಾನು ನಿನ್ನ ಹೊಟ್ಟೆಯೊಳಗಿರುವ ಮಗು, ನಿನ್ನ ತವರು ಮನೆಯಿಂದ ಬಂದ ಬುತ್ತಿಯಲ್ಲಿ ವಿಷ ಬೆರೆಸಿದ ಊಟವಿರುವುದರಿಂದ, ಅದನ್ನು ತಿಂದರೆ ನಾನು-ನೀನು ಪರಲೋಕಕ್ಕೆ ಹೋಗುವೆವು. ದಯಮಾಡಿ ತಿನ್ನಬೇಡಮ್ಮ ಎಂದು ಹೇಳುತ್ತದೆ. ಇದನ್ನು ಕೇಳಿದ ಸೂರಮ್ಮದೇವಿಗೆ ಏನೋ ಶಬ್ಧವಾದಂತಾಗಿ ಎಚ್ಚರವಾಗುತ್ತದೆ. ನೋಡಿದರೆ ಅಡುಗೆ ಮನೆಯಲ್ಲಿ ಬೆಕ್ಕು ಬಂದು ಬುತ್ತಿಯಲ್ಲಿನ ಅನ್ನವನ್ನು ಕದ್ದು ತಿನ್ನುತ್ತಿರುತ್ತದೆ. ಅದನ್ನು ಹೊಡೆಯಲು ಹೋದಾಗ ಅದು ಓಡಿ ಹೋಗಲು ಬಾಗಿಲಲ್ಲಿರುವಾಗಲೇ ಅದು ರಕ್ತ ಕಕ್ಕಿ ಸಾಯುತ್ತದೆ. ಸೂರಮ್ಮದೇವಿಗೆ ಕನಸು ನೆಪವಾಗಿ, ನಿಜವಾಗಲೂ ನನ್ನ ಮಗು ನನ್ನನ್ನು ಇವತ್ತು ಕಾಪಾಡಿತು ಎಂದು ದೇವರಿಗೆ ನಮಸ್ಕರಿಸಿದಳು.

೨. ಸೂಲಗಿತ್ತಿಯರ ಕಪಟ ಮೋಸದಿಂದಲೂ ಜನಿಸಿದ ಕಥೆ: ನಾರಾಯಣನು ತನ್ನ ಕುತಂತ್ರವೆಲ್ಲ ಫಲಿಸದೆ ಇರುವುದರಿಂದ, ದುಃಖಿತನಾಗಿ ಕುಳಿತು ಯೋಚನೆ ಮಾಡುತ್ತ ಇರಲು, ಏನೋ ಹೊಳೆದಂತಾಗಿ ತನ್ನ ಊರಿನಲ್ಲಿರುವ ನಾಗವ್ವ ಮತ್ತು ಸುಬ್ಬಕ್ಕೆ ಎನ್ನುವ ಸೂಲಗಿತ್ತಿಯರನ್ನು ಕರೆಸಿ, ನೀವು ಸೂರಮ್ಮದೇವಿಯ ಊರಿಗೆ ಹೋಗಿ, ಅವರಿಗೆ ಆತ್ಮೀಯರಾಗುವಂತೆ ನಟಿಸಿ, ಹೆರಿಗೆಯಾಗುವಾಗ ಹುಟ್ಟುವ ಮಗುವನ್ನು ಹುಟ್ಟುತ್ತಿದ್ದಂತೆಯೇ ಸಾಯಿಸಬೇಕೆಂದನು. ಇದಕ್ಕೆ ಒಪ್ಪದೆ ಇರಲು ಅವರಿಗೆ ಬಂಗಾರದ ಆಭರಣಗಳನ್ನು ಮತ್ತು ಇಬ್ಬರಿಗೂ ಎರಡು ಊರುಗಳ ಇನಾಮು ಕೊಡುತ್ತೇನೆಂದು ಹೇಳಿದ. ಇದರ ಆಸೆಗೆ ನಾಗವ್ವ ಮತ್ತು ಸುಬ್ಬಕ್ಕರವರು, ಸೂರಮ್ಮದೇವಿಯ ಬಳಿ ಹೋಗಿ, ದಂಪತಿಗಳ ವಿಶ್ವಾಸವನ್ನು ಬೆಳೆಸಿಕೊಂಡು, ಅಲ್ಲಿಯೇ ಹೆರಿಗೆಯಾಗುವವರೆಗೂ ಇರುವ ಹಾಗೆ ಜಾಣತನದಿಂದ ಮೆರೆದರು. ಸೂರಮ್ಮದೇವಿಗೆ ಬೇಕಾದ ಎಲ್ಲಾ ಬಯಕೆಗಳನ್ನು ತೀರಿಸುತ್ತ, ನಾಗವ್ವ ಮತ್ತು ಸುಬ್ಬಕ್ಕರವರು ಇನ್ನೂ ಹತ್ತಿರವಾದರು.

ಸೂರಮ್ಮದೇವಿಯು ತುಂಬು ಗರ್ಭಿಣಿ ಇರುವಾಗ ಯಾರೋ ಬಂದು ಭರಮದೇವರು ನೀವೇನಾ? ಎಂದು ಕೇಳಿ, ಹೌದು ಎನ್ನಲು, ತಾವು ಯಾರು ನನ್ನನ್ನು ಕೇಳಿಕೊಂಡು ಇಲ್ಲಿಗೇಕೆ ಬಂದಿದ್ದೀರಿ ಎಂದು ವಿಚಾರಿಸಲು ರಾಜರೇ ನಮ್ಮ ಗುರುತು ಹಿಡಿಯಲಿಲ್ಲವೆ ನಾವು ನಿಮ್ಮ ಸೇವಕರು, ನಿಮ್ಮ ರಾಜ್ಯದ ಮೇಲೆ ದಾಳಿಯಾಗಿ ಮಹಾರಾಜರು ತೀರಿಕೊಂಡರು. ಮಹಾರಾಣಿಯು ಅವರ ದುಃಖದಲ್ಲಿಯೇ ತೀರಿಹೋದರು. ನೀವು ಇಲ್ಲದ ರಾಜ್ಯಭಾರ ಮಾಡಲು ಯಾರು ಇಲ್ಲದೆ ದಂಗೆಕೋರರು ದಾಳಿ ಮಾಡಿ, ಈಗ ಅವರು ಹೊರಟು ಹೋಗಿದ್ದಾರೆ. ತಾವು ಅಲ್ಲಿಗೆ ಬಂದರೆ ಮತ್ತೆ ನಾವು ನಮ್ಮ ನೆಲೆಕಟ್ಟಿಕೊಳ್ಳಬಹುದೆಂದು ತಿಳಿಸಿದರು. ಇದರಿಂದ ಭರಮದೇವನು ಸೂರಮ್ಮದೇವಿಗೆ ತಿಳಿ ಹೇಳಿ, ದುಃಖಕ್ಕೆ ಒಳಗಾಗಬೇಡ, ನನ್ನ ಚಿಂತೆ ಬಿಡು, ನೀನು ತುಂಬು ಗರ್ಭಿಣಿ ಅಳಬೇಡ, ನಿನ್ನ ಸಂಗಡ ತಾಯಿಯ ಹಾಗೆ ಇರುವ ನಾಗವ್ವ ಮತ್ತು ಸುಬ್ಬಕ್ಕರವರು ಇರುವರು. ನಿನ್ನ ಹೆರಿಗೆಯೊಳಗೆ ಬರುತ್ತೇನೆಂದು ಹೇಳಿ ಸೈನಿಕರೊಂದಿಗೆ ಕುದುರೆ ಏರಿ ಹೊರಡುವನು. ಹೋದವನು ಮರಳಿ ಬರಲೇ ಇಲ್ಲ. ಇದೆಲ್ಲ ನಾರಾಯಣನ ಕುತಂತ್ರದಿಂದ ಆದ ಘಟನೆಯಾಗಿತ್ತು. ಸೂರಮ್ಮ ದೇವಿಯು ಭರಮದೇವನ ಬರುವಿಕೆಗಾಗಿ, ಕಾಯುತ್ತ-ಕಾಯುತ್ತ ಇರಲು ಅವಳಿಗೆ ಇದ್ದಕ್ಕಿದ್ದಂತೆ ಹೆರಿಗೆ ನೋವು ಶುರು ವಾಯಿತು. ಆಗ ನಾಗವ್ವ ಮತ್ತು ಸುಬ್ಬಕ್ಕರು ಬಂದು ಅವಳನ್ನು ಕೋಣೆಗೆ ಕರೆದುಕೊಂಡುಹೋಗಿ ಎಲ್ಲರನ್ನು ಹೊರಗಡೆ ಕಳುಹಿಸಿ, ಮಗು ಜನಿಸುವುದನ್ನೇ ನೋಡುತ್ತ, ಹೊರಗೆ ಬರುವಾಗಲೇ ಅದನ್ನು ಸಾಯಿಸಬೇಕೆಂದು ಕಾಯುತ್ತಿದ್ದರು. ಶನಿವಾರ ರಾತ್ರಿಯೆಲ್ಲ ಕಳೆದು ಆದಿತ್ಯವಾರ ಉದಯದಲ್ಲಿ ಸೂರ್ಯ ಉದಯವಾಗುವ ಹಾಗೆ ಮಗು ತನ್ನ ತಾಯಿಯ ಗರ್ಭದಿಂದ ಹೊರ ಬರುತ್ತಿರುವಾಗ, ಕಾಲುಗಳ ಮುಂದು ಮಾಡಿ ಬರುತ್ತಿರುತ್ತದೆ. ಕಾಲುಗಳನ್ನು ಹಿಡಿದು, ಹೊರ ಏಳೆಯಲು ಹೋದಾಗ ಸೂರಕ್ಕ ಮತ್ತು ನಾಗವ್ವರನ್ನು ಮಗು ರಭಸದಿಂದ ಜೋರಾಗಿ ಒದೆಯಲು, ಅವರು ಕೋಣೆಯ ಯಾವುದೋ ಮೂಲೆಗೆ ಹೋಗಿ ಬಿದ್ದರು. ತನ್ನನ್ನು ಸಾಯಿಸಲು ಬಂದ ಸೂಲಗಿತ್ತಿಯರನ್ನು ಹಸುಗೂಸು ಶಿಕ್ಷಿಸಿತು. ಏನೋ ಶಬ್ಧವಾಯಿತು ಎಂದು ಸೇವಕಿಯರು ಒಳಗೆ ಬಂದು ನೋಡಿದರೆ, ನಗುಮುಖದ ಗಂಡು ಮಗು, ಲೇಸುಮಾತ್ರ ರಕ್ತ ಲೇಪವಿಲ್ಲದೆ ನಸುನಗುತ ಆಡುತ್ತಿತ್ತು. ಆದರೆ ಸೂಲಗಿತ್ತಿಯರು ಮೂಲೆಯಲ್ಲಿ ನೋವು ಸಹಿಸಲಾರದೇ ನರಳಿ ಮೂರ್ಛೆ ಹೋಗಿದ್ದರು.

೩. ಶಿವ-ಪಾರ್ವತಿಯ ಆರೈಕೆಯಲ್ಲಿ ಮಗು : ಸೂರಮ್ಮದೇವಿಗೆ ಮುದ್ದಾದ ಗಂಡು ಮಗು ಜನಿಸಿತು. ಸೂರಮ್ಮದೇವಿಯ ಅಣ್ಣನಾದ ನಾರಾಯಣನು ತನ್ನ ಶತ್ರುವಿನ ಮಗುವನ್ನು ಗರ್ಭದಲ್ಲಿಯೇ ಸಾಯಿಸಬೇಕು ಎಂದು ಎಷ್ಟೇ ಪ್ರಯತ್ನಪಟ್ಟರೂ, ಆಗದೆ ಇರುವುದರಿಂದ

ಹೇಗಾದರು ಮಾಡಿ ಆ ಮಗುವನ್ನು ಸಾಯಿಸಲೇಬೇಕೆಂದು ನಾರಾಯಣನೇ ಸ್ವತಃ ಜ್ಯೋತಿಷಿಯ ವೇಷದಲ್ಲಿ ಬಂದು ಈ ಮಗುವು ಕೆಟ್ಟ ಜಾತಕದಲ್ಲಿ ಹುಟ್ಟಿದೆ, ಹೊಟ್ಟೆಯಲ್ಲಿರುವಾಗಲೇ ನಿಮ್ಮಿಂದ ಗಂಡನನ್ನು ದೂರ ಮಾಡಿದೆ, ವಿಷಪ್ರಾಸವಾಗಿದೆ, ಮುಂದೆ ಈ ಮಗು ನಿಮ್ಮ ಬಳಿಯೇ ಇದ್ದರೆ ಈ ರಾಜ್ಯದಲ್ಲಿರುವ ಪ್ರತಿಯೊಬ್ಬರಿಗೂ ಕೇಡು ಉಂಟಾಗುತ್ತದೆ ಎಂದು ಸುಳ್ಳು ಭವಿಷ್ಯವನ್ನು ನುಡಿದನು. ಇದರಿಂದ ಸೂರಮ್ಮದೇವಿಯು ಭಯಬೀತಳಾಗಿ, ಇದಕ್ಕೆನಾದರೂ ಪರಿಹಾರವಿದೆಯೇ ಎಂದು ಕೇಳಲು, ಜ್ಯೋತಿಷಿ ಇದೆ. ಈ ಮಗುವನ್ನು ಜನ ಸಂಪರ್ಕವಿಲ್ಲದ ಕಾಡಿನಲ್ಲಿ ಬಿಟ್ಟು ಬರಬೇಕು. ಎಂದು ಕಠೋರವಾದ ಭವಿಷ್ಯವನ್ನು ನುಡಿದು, ಬಿರುಸಿನಿಂದ ನಡೆದು ಹೋದನು. ಆದರೆ ಇಲ್ಲಿ ಸೂರಮ್ಮದೇವಿಗೆ ಮನಸ್ಸಿನಲ್ಲಿ ಗೊಂದಲ, ದುಃಖ ಮನೆಮಾತಾಯಿತು. ರಾಜನಿಲ್ಲದ ರಾಜ್ಯದಲ್ಲಿ ನಾನೇ ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು, ಹೆತ್ತ ಮಗುವನ್ನು ಜನರ-ರಾಜ್ಯದ ಸುರಕ್ಷಿತಕ್ಕಾಗಿ ಮಗುವನ್ನು ಕಾಡಿಗೆ ಬಿಟ್ಟು ಬರಲು ಹೇಳಿದಳು. ಆದರೆ ರಾಜ್ಯದ ಜನರಾರೂ ಇದಕ್ಕೆ ಒಪ್ಪದೆ ಇರಲು, ಸೂರಮ್ಮದೇವಿಯು ಅನಿವಾರ್ಯವಾಗಿ ಅಣ್ಣನಿಗೆ ಕರೆದು ನಡೆದ ಸಂಗತಿ ತಿಳಿಸಿ, ಈ ಮಗುವನ್ನು ಕಾಡಿಗೆ ಬಿಟ್ಟು ಬಾ ಎಂದು ದುಃಖದಲ್ಲಿಯೇ ತಿಳಿಸಿದಳು.

ನಾರಾಯಣನಿಗೆ ಎಲ್ಲಿಲ್ಲದ ಸಂತೋಷ ನನ್ನ ಶತ್ರು ಈಗ ನನ್ನ ಕೈಯಲ್ಲಿ ಎಂದು ಸರಿ ತಂಗಿ, ನೀನು ರಾಜ್ಯಕ್ಕಾಗಿ ಇಷ್ಟೊಂದು ತ್ಯಾಗಕ್ಕೆ ಸಿದ್ಧಳಿರಬೇಕಾದರೆ, ಇಷ್ಟು ಚಿಕ್ಕ ಕಾರ್ಯ ನನ್ನಿಂದ ಸಾಧ್ಯವಿಲ್ಲವೆ ಎಂದು ಹೇಳಿ, ಮಗುವನ್ನು ಎತ್ತಿಕೊಂಡು, ಹೋಗಿ ಅವರ ಇಬ್ಬರು ಸೈನಿಕರ ಕೈಗೆ ಕೊಟ್ಟು, ಈ ಮಗುವನ್ನು ಎತ್ತಿಕೊಂಡು ಹೋಗಿ ಕಾಡಿನಲ್ಲಿ ಯಾರು ಇಲ್ಲದನ್ನು ನೋಡಿ, ರುಂಡವನ್ನು ಕತ್ತರಿಸಿ ನನಗೆ ತಂದು ತೋರಿಸಬೇಕೆಂದು ಆಜ್ಞಾಪಿಸುವನು. ಇದರಂತೆ ಸೈನಿಕರು ತೊಟ್ಟಿಲ ಸಮೇತ ಮಗು ಎತ್ತಿಕೊಂಡು ಕಾಡಿನ ಮಧ್ಯ ಭಾಗದಲ್ಲಿ ಬಂದು, ತೊಟ್ಟಿಲಲ್ಲಿ ಮಲಗಿರುವ ಮುದ್ದಾದ ಮಗುವಿನ ಮುಖ ನೋಡಿದರೆ, ಸೈನಿಕರಿಗೆ ಕೊಲ್ಲುವ ಮನಸ್ಸೆ ಆಗಲಿಲ್ಲ. ಅದಕ್ಕೆ ಅವರು ದೊಡ್ಡದಾದ ಮರಕ್ಕೆ ತೊಟ್ಟಿಲನ್ನು ಕಟ್ಟಿ ಯಾವುದೋ ಮರದ ತೊಗಟೆಗಳಿಂದ ಮಗುವಿನ ಆಕಾರ ಮಾಡಿ, ರುಂಡವನ್ನು ತೆಗೆದುಕೊಂಡು ಹೋಗಿ, ನಾರಾಯಣನಿಗೆ ತೋರಿಸಿದರು. ಅಲ್ಲಿ ನಾರಾಯಣನು ನನ್ನ ಶತ್ರುವು ಕೊನೆಯಾದನೆಂದು ಆನಂದದಿಂದ ಇದ್ದನು. ಆದರೆ ಸೈನಿಕರ ಮಾನವೀಯತೆಯಿಂದಾಗಿ ಮಗುವು ಬದುಕಿ ಕಾಡಿನಲ್ಲಿ ಮರದ ಮಧ್ಯದಲ್ಲಿ ಮಲಗಿದೆ. ಸ್ವಲ್ಪ ಸಮಯದ ನಂತರ ಹೊಟ್ಟೆಯ ಹಸಿವೆಯಿಂದಾಗಿ ಮಗುವು ಗಟ್ಟಿಯಾಗಿ ಅಳಲು ಪ್ರಾರಂಭಿಸಿತು. ಅದರ ಅಳು ಕಾಡಿನ ಸುತ್ತ ಆವರಿಸಿತ್ತು.

ಕೈಲಾಸದಿಂದ ಶಿವ–ಪಾರ್ವತಿಯರು ನಿಸರ್ಗದ ಸೌಂದರ್ಯವನ್ನು ಸವಿಯಲು, ಭೂಲೋಕಕ್ಕೆ ಬಂದು ಇಳಿದರು. ಆದರೆ ಅಲ್ಲಿ ಮಗುವಿನ ಅಳು ಅವರ ಕಿವಿಗೆ ತಲುಪಿತು. ಮಾತೃ ಹೃದಯಿಯಾದ ಪಾರ್ವತಿಯು ಮಗುವಿನ ಬಳಿ ಬಂದು, ಹೋ ಬೀರೇಶ್ವರನು ತೊಟ್ಟಿಲಲ್ಲಿ ಹೊಟ್ಟೆ ಹಸಿವಿನಿಂದ ಅಳುತ್ತಿದ್ದಾನೆ. ಅವನಿಗೆ ಹೇಗಾದರು ಮಾಡಿ ಹೊಟ್ಟೆ ತುಂಬಿಸಬೇಕೆಂದು ವಿಚಾರಿಸಲು, ಆಲೋಚನೆ ಮಾಡಿ ತನ್ನ ಮೈಯ ಬೆವರ ಮಣ್ಣಿನಿಂದ ಜೇನು ಹುಳುಗಳನ್ನು ನಿರ್ಮಾಣ ಮಾಡುತ್ತಾಳೆ. ಶಿವನು ಅವುಗಳಿಗೆ ಜೀವವನ್ನು ನೀಡುತ್ತಾನೆ. ಅವು ಜೇನು ಹುಳುಗಳಾಗುತ್ತವೆ. ಮಗುವಿನ ತೊಟ್ಟಿಲ ಮೇಲೆ ಜೇನುಗೂಡನ್ನು ನಿರ್ಮಾಣ ಮಾಡಿ, ಅವುಗಳನ್ನು ಅದರಲ್ಲಿ ಬಿಟ್ಟು, ಅವುಗಳ ಸವಿ, ಮಗುವಿನ ಬಾಯಿಗೆ ಬೀಳುವ ಹಾಗೆ, ಸರಿಯಾಗಿ ಹೊಂದಿಸಿ, ಮಗುವಿನ ಹಸಿವು ನೀಗಿಸುತ್ತಾರೆ. ಮಗು ಅತ್ತಾಗಲೆಲ್ಲಾ, ಆ ಜೇನು ಹುಳುಗಳು ಸವಿ ನೀಡುವ ಹಾಗೆ ವ್ಯವಸ್ಥೆ ಮಾಡಿ, ಮಗುವಿನ ರಕ್ಷಣೆಗಾಗಿ ಇರುವೆಗಳ ಗುಂಪೊಂದನ್ನು ಮರಗಳಲ್ಲಿ ಬಿಡುತ್ತಾರೆ. ಹಾಗೆಯೇ ಬಿಸಿಲಿನ ಬೇಗೆ ತಡೆಯಲು ನಾಗ ಬಂದು ಹೆಡೆಯನ್ನು ಎತ್ತಿ ರಕ್ಷಣೆ ನೀಡುತ್ತದೆ. ಹೀಗೆ ಶಿವ–ಪಾರ್ವತಿಯರು ಮಗುವಿಗೆ ರಕ್ಷಣೆ ನೀಡಿ, ಕೈಲಾಸಕ್ಕೆ ಮರಳಿ ಹೋಗುತ್ತಾರೆ.

೪. ಮಾಯವ್ವ ಜೀವನದ ವೃತ್ತಾಂತ ಕಥೆ : ದೇವಗಿರಿಯ ಅರಸ ದೇವೆಂದ್ರನ, ಮಡದಿ ಸುಭದ್ರಿ, ಈ ದಂಪತಿಗಳಿಗೆ ಆರು ಜನ ಹೆಣ್ಣು ಮಕ್ಕಳು, ಇವರೊಂದಿಗೆ ಕೊನೆಯ ಮಗಳಾಗಿ ಮಾಯವ್ವಳು ಜನಿಸುತ್ತಾಳೆ. ಆದರೆ ಇವಳ ಜಾತಕದಿಂದ ತಂದೆ–ತಾಯಿಗಳಿಗೆ ಕೇಡಿದೆ ಎಂಬುದನ್ನು ಅರಿತು, ದೇವೇಂದ್ರನು ಒಂದು ಚಿನ್ನದ ಪೆಟ್ಟಿಗೆಯನ್ನು ಮಾಡಿಸಿ, ಅದರಲ್ಲಿ ವಜ್ರ, ವೈಡೂರ್ಯದಿಂದ ಅಲಂಕರಿಸಿ ಮೆತ್ತಗಿನ ಹಾಸಿಗೆಯ ಒಳಗೆ ಮಗುವನ್ನು ಮಲಗಿಸಿ, ಹಡಗಿನಲ್ಲಿ ಹೊಳೆಯಲ್ಲಿ ತೇಲಿ ಬಿಡುತ್ತಾರೆ. ಹೊಳೆಯ ಅಂಚಿನಲ್ಲಿ ತಪಸ್ಸಿಗೆ ಕುಳಿತಿರುವ ಋಷಿಗಳು ಆ ಚಿನ್ನದ ಪೆಟ್ಟಿಗೆಯನ್ನು ಕಂಡು, ಎತ್ತಿಕೊಂಡು ತೆಗೆದು ನೋಡಿದರೆ ಹೆಣ್ಣು ಮಗು ಚಂದ್ರನ ಬೆಳಕಿನಂತೆ ಹೊಳೆಯುತ್ತಿರುತ್ತದೆ. ಋಷಿಗಳು ಏನಪ್ಪ ಮಾಡೋದು ಎಂದು ಚಿಂತೆಗೆ ಒಳಗಾಗುತ್ತಾರೆ.

ಅದೇ ಕಾಡಿನಲ್ಲಿ ದಿಬ್ಬರಾಯನೆಂಬ ಕುರುಬನಿರುತ್ತಾನೆ. ಅವನಿಗೆ ಏಳು ಜನ ಹೆಣ್ಣು ಮಕ್ಕಳಿದ್ದರು. ದಿನಾಲೂ ಅವರು ಕುರಿಗಳನ್ನು ಕಾಯುತ್ತಿದ್ದರು. ಪ್ರತಿದಿನದಂತೆ, ಕುರಿಗಳನ್ನು ಕಾಯುತ್ತ, ಹೊಳೆಯ ದಂಡೆಯ ಬಳಿ ಬಂದಾಗ, ಋಷಿಗಳು ಚಿನ್ನದ ಪೆಟ್ಟಿಗೆ, ವಜ್ರ–ವೈಡೂರ್ಯಗಳನ್ನು ಇಟ್ಟುಕೊಂಡು, ಆ ಮಗುವನ್ನು ಏಳು ಜನ ಹೆಣ್ಣು ಮಕ್ಕಳ ಕೈಗೆ ಕೊಟ್ಟರು. ಆ ಮಕ್ಕಳಿಗೆ ಎಲ್ಲಿಲ್ಲದ ಆನಂದ ಚಿಕ್ಕ ಮಗುವನ್ನು ಮುದ್ದಾಡುತ್ತಾ, ಕುರಿಗಳ

ಸಮೇತ ಸಂಜೆಯ ಸಮಯದಲ್ಲಿ ಮನೆಗೆ ಬಂದರು. ದಿಬ್ಬರಾಯ ಮತ್ತು ದಿಬ್ಬರಾಯನ ಮಡದಿ ಶಾಂಭವಿಯು. ಆನಂದದಿಂದಲೇ ಮಗುವನ್ನು ಮುದ್ದಾಡಿ, ಬೆಳೆಸತೊಡಗಿದರು. ಈ ಮನೆಗೆ ಬಂದ ಗಳಿಗೆಯಿಂದ ಬಂಜೆತನ ಅನುಭವಿಸಿದ ಕುರಿ ಮೇಕೆಗಳೆಲ್ಲ ಗರ್ಭಧರಿಸಿ, ನೂರಾರು, ಸಾವಿರಾರು, ಕುರಿಗಳಾದವು ಇವಳ ಕಾಲು ಗುಣದಿಂದಾಗಿ ಅವರ ಜೀವನವೇ ಬದಲಾಯಿಸಿ ಹೋಯಿತು. ಮಾಯವ್ವನನ್ನು ಅತೀ ಪ್ರೀತಿ-ವಿಶ್ವಾಸದಿಂದ ಬೆಳೆಸುತ್ತಿದ್ದರು.

ಮಾಯವ್ವಳು ದೊಡ್ಡವಳಾಗುತ್ತ, ಒಂದು ದಿನ ಅಪ್ಪ, ನಾನು ಕುರಿಗಳನ್ನು ಮೇಯಿಸಲು ಹೊಡೆದು ಕೊಂಡು ಹೋಗುವೆ ಎಂದು ಹಠ ಹಿಡಿದಳು. ಅಪ್ಪ ಒಪ್ಪಿ ಕಳುಹಿಸಿಕೊಟ್ಟನು. ಕುರಿಗಳನ್ನು ಮೇಯಿಸುತ್ತಾ-ಮೇಯಿಸುತ್ತಾ ನಡೆಯುವಾಗ, ಅವಳ ಕಾಲ ಹೆಜ್ಜೆಗಳು ಭೂಮಿಯ ಮೇಲೆ ಬಿದ್ದು, ಬಲಗಾಲಿನ ಹೆಜ್ಜೆಯಲ್ಲಿ ಕುಂಕುಮ, ಎಡಗಾಲಿನಿಂದ ಭಂಡಾರವು ಹುಟ್ಟಿತು. ಅದೇ ದಾರಿಯಲ್ಲಿ ದೇವೇಂದ್ರನ ಆರು ಹೆಣ್ಣು ಮಕ್ಕಳು, ನಮ್ಮೊಲ್ಲೊಬ್ಬ ತಂಗಿ ಇರುವ ವಿಷಯ ತಿಳಿದು, ಅವಳನ್ನು ಹುಡುಕಲು ಬರುತ್ತಿದ್ದರು. ಅಲ್ಲಿ ಕುಂಕುಮ, ಭಂಡಾರದ ಗುರುತುಗಳಿರುವುದು ಕಂಡು, ಇವಳೇ ನಮ್ಮ ತಂಗಿ ಇರಬೇಕೆಂದು, ಅವಳ ಬಳಿ ಹೋಗಿ, ಅವಳ ಜನ್ಮ ರಹಸ್ಯ ತಿಳಿಸಿದರು. ಸಂಜೆಯೊಳಗಾಗಿ ದೇವಲೋಕಕ್ಕೆ ಹೋಗಬೇಕಾಗಿತ್ತು. ಕಾರಣ ಎಲ್ಲರೂ ಹೋಗಲು ಸಿದ್ದರಾದರು. ಆದರೆ ಅಕ್ಕವ್ವ ಮಾತ್ರ ನಾನು ನನ್ನ ತಂಗಿಯ ಜೊತೆ ಇರುತ್ತೇನೆಂದು ಹೇಳಿ, ಮಾಯವ್ವನ ಜೊತೆ ದಿಬ್ಬರಾಯನ ಮನೆಗೆ ಬಂದು, ನಡೆದ ಸಂಗತಿ ತಿಳಿಸಿದಳು, ಮಾಯವ್ವ ಹಾಗೆಯೇ ನಾನು ನಿಮ್ಮ ಮಗಳಲ್ಲವೇ ಎಂದು ಕೇಳಿದಳು. ಅನಿವಾರ್ಯವಾಗಿ ಗತಕಾಲದಲ್ಲಿ ನಡೆದ ಸಂಗತಿಯನ್ನು ಹೇಳಬೇಕಾಯಿತು.

೫. ಬಾಲ ಬೀರಣ್ಣನು ಮಾಯವ್ವನಿಗೆ ಸಿಕ್ಕ ಕಥೆ : ಮಾಯವ್ವ ಮತ್ತು ಅಕ್ಕವ್ವರು ಸೇರಿ ಕುರಿಗಳನ್ನು ಕಾಯುತ್ತ, ಒಂದು ದಿನ ಹೊನ್ನಿನ ಮರದ ಬಳಿ ಬಂದು ವಿಶ್ರಾಂತಿಗಾಗಿ ಕುಳಿತುಕೊಳ್ಳುತ್ತಾರೆ. ಇದ್ದಕ್ಕಿಂದತೆಯೇ ಅಲ್ಲಿ ಮಗುವಿನ ಅಳು ಕೇಳಿಸಲಾರಂಬಿಸುತ್ತದೆ. ಇಂತಹ ಕಾಡಿನಲ್ಲಿ ಎಲ್ಲಿಯ ಮಗು ಅಳುವುದು ಎಂದು ಹುಡುಕಾಡುತ್ತಾರೆ. ಹೊನ್ನಿನ ಮರದ ಮೇಲೆ ಒಂದು ತೊಟ್ಟಿಲು, ಅದರಲ್ಲಿ ಒಂದು ಮಗು ಅಳುತ್ತಿರುತ್ತದೆ. ಅದನ್ನು ಕಂಡು ಆಶ್ಚರ್ಯವಾಗಿ ಯಾವುದೋ ಮಗು ಮೇಲೆ ಅಳುತ್ತಿದೆ. ಹೇಗೆ ಮಗುವನ್ನು ಇಳಿಸಿಕೊಳ್ಳಬೇಕೆಂದು ಯೋಚಿಸಿ, ಅಕ್ಕವ್ವ ಮರವನ್ನು ಹತ್ತಲು ಹೋದಳು, ಆದರೆ ಇರುವೆಗಳ ಗುಂಪು, ಅವಳನ್ನು ಕಚ್ಚಿ ಹೋಗಲು ಬಿಡಲಿಲ್ಲ. ಆದರೆ ಮಾಯವ್ವ ಹತ್ತಲು ಹೋದರೆ ಇರುವೆಗಳು ದಾರಿ ಬಿಟ್ಟವು. ಹಾಗೆಯೇ ಬಿಸಿ ಬೇಗೆಯಿಂದ ರಕ್ಷಿಸಲು ಇದ್ದ ನಾಗ, ಅವಳು ಬಂದಾಕ್ಷಣ ಇಳಿದು ಹೋಯಿತು. ಆಗ ಮಾಯವ್ವಳು ಮಗುವನ್ನು ಎತ್ತಿಕೊಂಡು ಕೆಳಗೆ ಇಳಿದಳು. ಇವಳು ಕೆಳಗೆ

ಬಂದಾಕ್ಷಣ ಅಕ್ಕವ್ವ ಮಗು ನನಗೆ ಬೇಕು ಮಾಯವ್ವ ನನಗೆ ಬೇಕೆಂದು ಜಗಳವಾಡುತ್ತಿರಲು, ಅಲ್ಲಿಯೇ ಇದ್ದ ರಾಯಣ್ಣನೆಂಬ ವ್ಯಕ್ತಿ ಬಂದು ಜಗಳ ಬೇಡ, ನಿಮ್ಮಿಬ್ಬರಲ್ಲಿ ಯಾರ ಎದೆ ಬಿಗಿದು, ತಾಯಿಯ ಕಳೆ ಬರುವುದೋ, ಅವರೆ ಮಗುವನ್ನು ಅಮ್ಮನ ತರ ಸಾಕಿ ಎಂದನು. ಅಕ್ಕವ್ವ ತೊಟ್ಟಿಲ ಬಳಿ ಹೋಗಿ ಮಗುವನ್ನು ಎತ್ತಿಕೊಂಡಳು. ದೇವರಲ್ಲಿ ಬೇಡಿದಳು. ಆದರೂ ಅವಳಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ಅವಳು ನಿರಾಸೆಯಿಂದ ಹಿಂದೆ ಸರಿದಳು. ಮಾಯವ್ವಳು ತೊಟ್ಟಿಲಿಗೆ ಮೂರು ಸುತ್ತು ತಿರುಗಿ ನಿಂತಳು. ಆಗಲೇ ಅವಳ ಎದೆಯಲ್ಲಿ ಹಾಲು ಉಕ್ಕಿ ಬಂದು, ತಾಯಿಯ ಗುಣ ಅವಳ ದೇಹದಲ್ಲಿ ಎದ್ದು ಕಂಡು ಬಂದಿತು. ಅಂದಿನಿಂದ ಮಾಯವ್ವಳ ತಮ್ಮನಾಗಿ ಬೀರಪ್ಪ ಬೆಳೆಯತೊಡಗಿದ.

೬. ಮಾಯವ್ವನ ಪಾದುಗಟ್ಟೆಯ ಕಥೆ : ಮಾಯವ್ವಳು ಬೀರಲಿಂಗನಿಗೆ ಚಿಕ್ಕವನಿಂದ ಹಿಡಿದು ಕಂಚುಯೋಳಿಸ(ಕುರಿಯ ಹೆಸರು) ಕುಡಿಯ ಹಾಲನ್ನೆ ಯಾವಾಗಲೂ ಕುಡಿಸುತ್ತಿದ್ದಳು. ಬೀರಲಿಂಗ ದೊಡ್ಡವನಾಗಿ, ಅಕ್ಕ ನನಗೆ ಈ ಹಾಲು ಕುಡಿದು-ಕುಡಿದು ಸಾಕಾಗಿದೆ. ಇನ್ನು ನನಗೆ ಎಲ್ಲರೂ ತಿನ್ನುವ ಊಟ ಬೇಕು ಎಂದು ಹಠ ಹಿಡಿಯುವನು. ಇದಕ್ಕೆ ಮಾಯವ್ವಳು ಏನು ಮಾಡಲಾಗದೇ ಕುರಿಯ ಹತ್ತಿರ ಹೋಗಿ ಕುರಿಗೆ ನಿನ್ನಿಂದ ನಮಗೆ ತುಂಬಾ ಸಹಾಯವಾಗಿದೆ, ನನ್ನ ತಮ್ಮ ಹಸುಗೂಸುವಿನಿಂದ ಹಿಡಿದು, ಈವರೆಗೂ ನಿನ್ನ ಹಾಲನ್ನೆ ಕುಡಿದು ಬೆಳೆದಿರುವನು. ಆದರೆ ಈಗ ಅವನ ಆಸೆಯೇ ಬೇರೆಯಾಗಿದೆ ಎಂದು ನೀನು ದೈವೀಸ್ವರೂಪವಾಗಿರುವೆ ಎಂದು, ಅದಕ್ಕೆ ಕುಂಕುಮ, ಭಂಡಾರ ಹಚ್ಚಿ, ಆರತಿ ಮಾಡುವಳು. ಆದರೆ ಕುರಿಯು ಆರತಿ ಆದ ತಕ್ಷಣವೇ ಸತ್ತುಹೋಗುವುದು. ಇದರಿಂದ ಭಯ ಭೀತಳಾದ ಮಾಯವ್ವ ದುಃಖದಲ್ಲಿರಲು, ಕುರಿಯ ಪಕ್ಕದಿಂದಲೇ ಇದಕ್ಕಿದಂತೆ ಒಬ್ಬ ಸುಂದರಿ ಮಾಯಜಾಲದಂತೆ ಹುಟ್ಟಿ ಬರುವಳು. ಮಾಯವ್ವ ಇದೇನಿದು ಮಾಯೆ ಎಂದು ದಿಗ್ಭ್ರಮೆಯಿಂದ ನೋಡುತ್ತಿರಲು, ಆ ಸುಂದರಿ ಕೈ ಮುಗಿದು ನಾನು ದೇವಲೋಕದ ಸ್ತ್ರೀ, ಪಾರ್ವತಿಯ ಸೇವಕಿಯಾಗಿ ಸೇವೆ ಸಲ್ಲಿಸುತ್ತಿದ್ದೆ. ಒಂದು ದಿನ ನನ್ನ ಸೋಮಾರಿತನದಿಂದ ಕೆಲಸ ವ್ಯವಸ್ಥಿತವಾಗಲಿಲ್ಲ. ಇದಕ್ಕೆ ಬೇಸತ್ತ ಪಾರ್ವತಿಯು ಕೋಪಗೊಂಡು, ನನಗೆ ಕುರಿಯಾಗಿ ಹುಟ್ಟಿ, ಭೂಮಿಯಲ್ಲಿ ಜನಿಸು ಎಂದಳು. ಭಯಬೀತಳಾಗಿ ನಾನು ದಾರಿ ತೋಚದೆ ಶಿವನಲ್ಲಿ ಬಂದು ಬೇಡಿಕೊಳ್ಳುತ್ತಾ ಪರಮಾತ್ಮನೇ ಯಾವುದೋ ಕೆಟ್ಟ ಗಳಿಗೆಯಲ್ಲಿ ನನ್ನಿಂದ ಈ ತಪ್ಪಾಗಿದೆ. ಇದಕ್ಕೆ ಪರಿಹಾರವಿದೆಯೇ ಎಂದೆನು. ಶಿವನು ಭಯಭೀತಳಾಗಬೇಡ, ಪಾರ್ವತಿಯ ಶಾಪವನ್ನು ತಡೆಯಲು ಸಾಧ್ಯವಿಲ್ಲ. ಅದಕ್ಕೆ ನೀನು ಕುರಿಯಾಗಿ ಹುಟ್ಟು. ನನ್ನ ಕಳೆಯೇ ಭೂಲೋಕದಲ್ಲಿ ಬೀರದೇವನಾಗಿ ಹುಟ್ಟಿ ಬರುತ್ತಿದ್ದಾನೆ. ಅದಕ್ಕಾಗಿ ದೇವಲೋಕದ ಹಾಲೇ

ಬೀರದೇವನಿಗೆ ಬೇಕಾಗಿರುವುದು. ನೀನು ಅವರ ಕುರಿ ಹಿಂಡಿಯಲ್ಲಿ ಹುಟ್ಟಿ, ಬೀರದೇವನಿಗೆ ಸಾಕಾಗುವಷ್ಟು ಹಾಲು ನೀಡು, ಅವನ ಬೇರೆ ಊಟಮಾಡುವವರೆಗೂ ಹಾಲುನೀಡು, ಯಾವತ್ತು ಅವನ ಬೇರೆ ಆಹಾರ ಬೇಕು ಎನ್ನುವನು ಯಾವತ್ತು ಮಾಯವ್ವ ನಿನಗೆ ಭಕ್ತಿಯಿಂದ ಆರತಿ ಎತ್ತುವಳೋ ಅವತ್ತು ನೀನು ಮತ್ತೇ ದೇವತಾ ಸ್ತ್ರೀಯಾಗಿ ಪರಿವರ್ತನೆಯಾಗು ಎಂದು ಹಾರೈಸಿ ಕಳುಹಿಸುವನು. ಇದೆಲ್ಲವನ್ನು ದೇವತಾ ಸ್ತ್ರೀ, ಮಾಯವ್ವಳಿಗೆ ಹೇಳುವಳು. ಇನ್ನು ಮೇಲೆ ನನ್ನ ನಿಮ್ಮ ಋಣ ಮುಗಿತೆಂದು, ದೇವಲೋಕಕ್ಕೆ ಸ್ತ್ರೀ ಹೋಗುವಳು. ಮಾಯವ್ವ ಸತ್ತ ಕುರಿಯನ್ನು ಭೂಮಿಯಲ್ಲಿ ಹಾಕಿ ಊಣಿಕ್ಕಿದಳು. ಆ ಮಣ್ಣಿನ ಮೇಲೆ ಒಂದು ಕಟ್ಟೆಯನ್ನು ಕಟ್ಟಿದಳು. ಅದುವೇ ಮಾಯವ್ವಳ ಪಾದುಗಟ್ಟೆಯಾಗಿ ಪ್ರಸಿದ್ಧಿ ಪಡೆದುಕೊಂಡಿದೆ.

೭. ಸತ್ತು ಹೋದ ಬಾಲಕನನ್ನು ಬದುಸಿದ ಕಥೆ : ಬೀರದೇವರು ಬಾಲಕನಾಗಿರುವಾಗ ಕೇರಿಯ ಬಾಲಕರೊಂದಿಗೆ ಚೆಂಡಿನಾಟವನ್ನು ಆಡುತ್ತಿದ್ದನು. ಮಂಕಣ್ಣನೆಂಬ ಹುಡುಗ ಮತ್ತು ಬೀರ ದೇವರಿಬ್ಬರು ಆಟವಾಡುತ್ತಾ–ವಾಡುತ್ತ ಜಗಳವಾಡಿದರು. ಮಂಕಣ್ಣನು ಚೆಂಡನ್ನು ತೆಗೆದುಕೊಂಡು ಬೀರದೇವನ ಹೊಟ್ಟೆಗೆ ರಭಸವಾಗಿ ಎಸೆದನು. ಅದು ತಗಲಿ ನೋವಾಯಿತು. ಬೀರದೇವನಿಗೆ ಕೋಪಬಂದು ಅದೇ ಚೆಂಡಿನಿಂದ ರಭಸವಾಗಿ, ಮಂಕಣ್ಣನ ಹೊಟ್ಟೆಗೆ ಹೊಡೆದನು. ಅದು ಅವನಿಗೆ ತಗುಲಿ, ಅಲ್ಲಿಯೇ ಅವನು ಮೂರ್ಛೆ ಹೋದನು. ಇದನ್ನು ಕಂಡ ಹುಡುಗರು ಗಾಬರಿಯಾಗಿ ಅವನನ್ನು ಎಬ್ಬಿಸಲು ಹೋದರು. ಆದರೆ ಅವನು ಮಾತನಾಡುತ್ತಿರಲಿಲ್ಲ. ಅವರು ಗಾಬರಿಯಾಗಿ ಅವರ ತಂದೆ–ತಾಯಿಯರ ಬಳಿ ಹೋಗಿ ನಡೆದ ಸಂಗತಿಯನ್ನು ತಿಳಿಸಿದರು. ಅವರು ಓಡೋಡಿ ಬಂದು ಅಳತೊಡಗಿದರು. ಮಂಕಣ್ಣನನ್ನು ಎತ್ತಿಕೊಂಡು ಮಾಯವ್ವಳ ಬಳಿ ಹೋಗಿ ಗೋಳಾಡಿದರು. ಮಾಯವ್ವಳು ಬೀರದೇವನಲ್ಲಿ ಕೋಪಗೊಂಡು, ಬೈಯತೊಡಗಿದಳು. ಬೀರದೇವನು ಅಕ್ಕ ನನ್ನದು ಏನೂ ತಪ್ಪಿಲ್ಲ, ಅವನು ಮೊದಲು ಹೊಡೆದ, ಅದಕ್ಕೆ ನಾನು ಕೋಪಗೊಂಡು, ಹೊಡೆದೆ ಬೇಕಿದ್ದರೆ ಅವನನ್ನೇ ಕೇಳಿ ಎಂದು ಗಟ್ಟಿಯಾಗಿ ಮಾತಾಡಿದ, ಎಲ್ಲರನ್ನು ಅವನಲ್ಲಿಗೆ ಕರೆದುಕೊಂಡು ಹೋಗಿ, ಎಲೇ ಮಂಕಣ್ಣ ಎದ್ದೇಳು, ನಾನು ಮೊದಲು ನಿನ್ನನು ಹೊಡೆದೆನೋ, ಇಲ್ಲ ನೀನೋ, ಎದ್ದೇಳು ಹೇಳು ಎಂದು ಗಟ್ಟಿಯಾಗಿ ಮಾತಾಡಿಸಿದನು. ಅವನ ಮಾತು ಕೇಳಿ, ಮಂಕಣ್ಣ ಎದ್ದು ಇಲ್ಲ ನಾನೇ ಮೊದಲು ಬೀರದೇವನಿಗೆ ಹೊಡೆದದ್ದು ಎಂದು ಉತ್ತರಿಸಿದನು. ಇದನ್ನು ಕಂಡ ಸುತ್ತಲ ಜನ ಆಶ್ಚರ್ಯದಿಂದ ನೋಡತೊಡಗಿದರು. ಮಾಯವ್ವ ಸತ್ತವನನ್ನು ಬದುಕಿಸಿದ ಇವನು ಸಾಮಾನ್ಯನಲ್ಲ ಎಂದು ದಿಗ್ಭ್ರಮೆಗೊಳಗಾದಳು ಅವತ್ತಿನಿಂದ ಇವನನ್ನು ಯಾರೂ ಮಾತನಾಡಿಸುತ್ತಿರಲಿಲ್ಲ ಅವನನ್ನು ಕಂಡು ದೂರ ಹೋಗುತ್ತಿದ್ದರು. ಇದರಿಂದ ಬೇಸರಗೊಂಡು ಬೇರೆ ಕಡೆ ವಾಸ ಮಾಡಲು ಹೋದರು.

೮. ಹಾವು ಕಡಿದು ಸತ್ತವರನ್ನು ಬದುಕಿಸಿದ ಕಥೆ : ಮಾಯವ್ವ ಮತ್ತು ಬೀರದೇವರು ಕುರಿಗಳನ್ನು ಕಾಯುತ್ತ ಅಡವಿಗೆ ಬಂದು, ರಾತ್ರಿಯ ಹೊತ್ತಿನಲ್ಲಿ ಕುರಿಹಿಂಡನ್ನು ಒಂದು ಕಡೆ ಮಲಗಲು ಬಿಟ್ಟು, ಇವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಮಾಯವ್ವಳಿಗೆ ಮಾತ್ರ ನಿದ್ರೆ ಬರುತ್ತಿಲ್ಲ, ಕಾರಣ ಯಾರಾದರು ಕಳ್ಳರು ಬರಬಹುದೆಂಬ ಭೀತಿ ಅವಳಲ್ಲಿ, ಬೀರದೇವನು ಮಲಗಿದನು. ಸರ್ರೊತ್ತಿಗೆ ಯಾರೋ ನಾಲ್ವರು ಕಳ್ಳರು ಕುರಿಗಳನ್ನು ಕದ್ದೊಯ್ಯಲು ಬಂದರು. ಮಾಯವ್ವಳು ಗಂಡುಗಲಿ ಹುಲಿ-ಚಿರತೆ, ಮತ್ತು ಯಾರೇ ಕಳ್ಳರಾದರು ಸರಿಯೇ ಅವರನ್ನು ಎದುರಿಸುವ ಶಕ್ತಿಯುಳ್ಳ ಹೆಂಗಸು. ನಾಲ್ವರು ಕಳ್ಳರು ಬಂದಿರುವರು ಎಂದು ಕಿರುಚಲು ಬೀರದೇವ ಎದ್ದು, ಇಬ್ಬರು ಅವರ ಬಳಿ ಹೋಗಲು ಸಿದ್ದರಾಗುತ್ತಿದಂತೆಯೇ, ಕಳ್ಳರು ಗಾಬರಿಯಿಂದ ಹಾವು – ಹಾವು ಎಂದು ಚೀರುತ್ತಾ ಇಬ್ಬರು ಓಡಿ ಹೋದರು. ಇದನ್ನು ಇಬ್ಬರು ಹಾವು ಕಚ್ಚಿ ಅಲ್ಲೇ ಸತ್ತರು, ಮಾಯವ್ವಳು ಕೋಪಾಗ್ನಿಯಾಗಿ ಕೈ ಕತ್ತಿ(ಖಡ್ಗ) ಹಿಡಿದು ಹಾಗೆ ನಿಂತಿದ್ದಾಳೆ. ಮುಂಜಾನೆಯ ಹೊತ್ತಿನಲ್ಲಿ ಮಹಿಳೆಯರು ಬಂದು ನೋಡಿ, ಶಾಂತಳಾಗುಮಾತೆ, ಎಂದು ಕುಂಕುಮ, ಭಂಡಾರದಿಂದ ಆರತಿ ಮಾಡಬೇಕೆಂಬ ಬಯಕೆ, ಆದರೆ ಸರ್ಪಗಳ ಭೀತಿಯಿಂದ ಅಲ್ಲೆ ನಿಂತರು. ಮಾಯವ್ವ ಅವರ ಅಂಜಿಕೆ ನೋಡಿ, ದೇವರಲ್ಲಿ ಪ್ರಾರ್ಥಿಸಲು, ಸರ್ಪ (ಹಾವು)ಗಳೆರಡು ಹೋಗಲು, ಎಲ್ಲರು ಮಾಯವ್ವಳಿಗೆ ಆರತಿ ಮಾಡಿದರು. ಶಾಂತಳಾದಳು ಮಾಯವ್ವ, ಸ್ವಲ್ಪ ಹೊತ್ತಿನಲ್ಲಿಯೇ ಹಾವು ಕಚ್ಚಿ ಸತ್ತ ಇಬ್ಬರು ಕಳ್ಳರ ಹೆಂಡತಿಯರು ಬಂದು, ಮಾಯವ್ವಳಲ್ಲಿ ಬಂದು ಬೇಡುತ್ತಿದ್ದಾರೆ. ತಾಯೇ ಕರುಣೆ ತೋರಿ, ನಮ್ಮ ಗಂಡಂದಿರನ್ನು ಬದುಕಿಸಿ, ಮಾಂಗಲ್ಯ ಭಾಗ್ಯವನ್ನು ಕೊಡಿ ಎಂದು ಬೇಡಿಕೊಳ್ಳಲು, ಮಾಯವ್ವಳು ತಮ್ಮನನ್ನು ಕರೆದು ಇವರಿಬ್ಬರಿಗೆ ಸೌಭಾಗ್ಯವನ್ನು ನೀಡು ಎಂದಳು. ಅದರಂತೆ ಭೀರದೇವನು ಭಂಡಾರವನ್ನು ತೆಗೆದುಕೊಂಡು, ಅವರ ಹಣೆಗೆ ಹಚ್ಚಲು, ಇಬ್ಬರು ಎದ್ದು, ನಮ್ಮಿಂದ ತಪ್ಪಾಯಿತು ಕ್ಷಮಿಸಿ ಎಂದು ಬೇಡಿಕೊಂಡರು. ಮಾಯವ್ವಳು ಅವರನ್ನು ಕ್ಷಮಿಸಿ, ಈ ಜಾಗದಲ್ಲಿ ನಾಗದೇವನ ಲೀಲೆ ನಡೆದಿದೆ. ಇವತ್ತಿನಿಂದ ಇದನ್ನು ನಾಗದೇವನ ಠಾವು ಎಂದೇ ಪ್ರಸಿದ್ಧವಾಗಲಿ ಎಂದು ಹಾರೈಸಿ, ಮಾಯವ್ವ, ಬೀರದೇವರು ಕುರಿಗಳನ್ನು ಮೇಯಿಸುತ್ತಾ ಮುಂದೆ ಸಾಗಿದರು. ನಾಗದೇವನ ಠಾವು ಇಂದು ನಾಗಠಾಣ ಎಂದು ಆಗಿದೆ.

೯. ಸತ್ತ ಕುರಿಗಳನ್ನು ಬದುಕಿಸಿ, ದೈವ ಪುರುಷರಾದ ಕಥೆ : ದೇಶ ಸಂಚಾರಕ್ಕೆಂದು ಮಾಯವ್ವ ಮತ್ತು ಬೀರದೇವರು ಸಂಚಾರ ಮಾಡುತ್ತ ಬೆಳ್ಳಿಗುತ್ತಿ ಎಂಬ ಊರಿಗೆ ಪ್ರವೇಶಿಸಿದರು. ಇವರ ತೇಜೋ ಮುಖವನ್ನು ನೋಡಿ, ಊರಿನ ಹಿರಿಯ ವ್ಯಕ್ತಿ, ಯಾರಮ್ಮ ತಾವು ಎಲ್ಲಿಂದ ಬಂದಿರುವಿರಿ ಎಂದು ಕೇಳಲು, ಮಾಯವ್ವ ನಾವಿಬ್ಬರು ಅಕ್ಕ, ತಮ್ಮಂದಿರು ದೇಶ ಸಂಚಾರ

ಮಾಡುತ್ತಿದ್ದೇವೆ ಎಂದು ಹೇಳಿದರು. ಆಗ ಹೇಮಣ್ಣನೆಂಬ ಕುರುಬ ತನ್ನಲ್ಲಿರುವ ಕಂಬಳಿಯನ್ನು ಹಾಸಿ, ಅವರಿಗೆ ಕುಳಿತುಕೊಳ್ಳಲು ಹೇಳಿ, ಅವರ ಸುತ್ತಲು ಎಲ್ಲರು ಕುಳಿತುಕೊಂಡು, ಮಾತನಾಡುತ್ತಿರಬೇಕಾದರೆ, ಒಬ್ಬ ವ್ಯಕ್ತಿ ನಾಲ್ಕೈದು ಸತ್ತ ಕುರಿಗಳನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿದ್ದನು. ಅದನ್ನು ಕಂಡ ಮಾಯವ್ವಳು ಇದೇನಿದು ಕುರಿಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದಳು. ಕುರಿಗಳಿಗೆ ರೋಗ ಬಂದು ಸತ್ತು ಹೋಗಿವೆ ಊರ ಹೊರಗೆ ಇರುವ ಹೊಳೆಗೆ ಬಿಸಾಡಲು ತೆಗೆದುಕೊಂಡು ಹೋಗುತ್ತಿದ್ದಾರೆ. ಬೇಡ ಇಲ್ಲಿಗೆ ತೆಗೆದುಕೊಂಡು ಬನ್ನಿ ಎಂದು ಮಾಯವ್ವ ಬೀರದೇವನಿಗೆ ಕಣ್ಣ್ ಸನ್ನೆಯನ್ನು ನೀಡಿದಳು. ಇದನ್ನು ಅರಿತ ಬೀರದೇವನು ತನ್ನಲ್ಲಿರುವ ಭಂಡಾರವನ್ನು ಹಿಡಿದು ಶಿವನನ್ನು ಸ್ಮರಿಸಿ, ಭಂಡಾರವನ್ನು ಸತ್ತ ಕುರಿಗಳ ಮೇಲೆ ಹಾಕಲು, ಕುರಿಗಳು ಬ್ಯಾ–ಬ್ಯಾ–ಬ್ಯಾ–ಬ್ಯಾ ಎಂದು ಕಿರುಚುತ್ತಾ, ಅವುಗಳ ಹಿಂಡಿಗೆ ಓಡಿ ಹೋದವು. ಇದನ್ನು ಕಂಡ ಜನ ನೀವು ಸಾಕ್ಷಾತ್ ದೇವರುಗಳು ಎಂದು, ನೀವು ಎಲ್ಲಿಗೂ ಹೋಗಬೇಕಾಗಿಲ್ಲ ನೀವಿಬ್ಬರೂ ಇಲ್ಲಿಯೇ ವಾಸಮಾಡಿ, ನಿಮಗೆ ಏನು ಬೇಕು ಎಲ್ಲವನ್ನು ನಾವು ವ್ಯವಸ್ಥೆ ಮಾಡಿಕೊಡುತ್ತೇವೆ ಎಂದರು. ಅಂದಿನಿಂದ ಅವರಿಗೆ ಊರ ಜನರೇ ಊಟ–ವಸತಿ ನೀಡಿ, ಕುಂಕುಮ, ಭಂಡಾರದಿಂದ ಆರತಿ ಎತ್ತಿ ದೇವರ ಸ್ವರೂಪರಂತೆ ಕಾಣುತ್ತಿದ್ದರು. ಮಾಯವ್ವ –ಬೀರಪ್ಪರು ಸಹ ಜನ ಕಷ್ಟ ಎಂದು ತಮ್ಮ ಬಳಿ ಬಂದರೆ, ಅವರಿಗೆ ಪರಿಹಾರ ಸೂಚಿಸಿ ಕಳುಹಿಸುತ್ತಿದ್ದರು.

೧೦.ಬೀರಪ್ಪನ ಕೆಲ ಪವಾಡಗಳು : ಅಕ್ಕ ಮಾಯವ್ವ ಮತ್ತು ಬೀರಲಿಂಗರು ದೇಶ ಸುತ್ತಲು ಹೋಗಬೇಕೆಂದು ನಿರ್ಧರಿಸಿದರು. ಆದರೆ ಮಾಯವ್ವಳು ಬೀರಲಿಂಗನಿಗೆ ಒಂದು ಷರತ್ತನ್ನು ಹಾಕುವಳು. ಅದೇನೆಂದರೆ ಬೀರಪ್ಪ ನೀನು ಚಿಕ್ಕ ಕೂಸಾದರೆ ಮಾತ್ರ ನಾನು ನಿನ್ನ ಜೊತೆ ಬರುತ್ತೇನೆಂದು ಹೇಳಿದಳು. ಬೀರಲಿಂಗ ಇದಕ್ಕೆ ಒಪ್ಪಿ, ನವಶಿಶುವಾಗಿ ಅವಳ ಸೊಂಟದ ಮೇಲೆ ಹೋಗಿ ಕುಳಿತನು. ಬೀರಲಿಂಗನನ್ನು ಎತ್ತಿಕೊಂಡು ಮಾಯವ್ವ ಮುಂಗಿಪಟ್ಟಣಕ್ಕೆ ಬಂದಳು. ಮುಂಗಿಪಟ್ಟಣದಲ್ಲಿನ ಜನರನ್ನು, ನಾಡನ್ನು ನೋಡುತ್ತಾ, ಆರಾಮಗಿ ನಡೆದಾಡುತ್ತ ಸುತ್ತುತ್ತಿರಲು, ಯಾರೋ ಊರವರು, ಅಯ್ಯೋ! ರಾಜನ ಮಗಳಿಗೆ ಎಂತಹ ರೋಗ ಬಂತಪ್ಪ ಅವಳಿಗೆ ಎಷ್ಟೇ ನಿಪುಣರು ಬಂದು ವೈದ್ಯ ನೀಡಿದರು ವಾಸಿಯಾಗಲಿಲ್ಲ. ಅವಳು ಬದುಕುವುದೇ ಕಷ್ಟವಾಗಿದೆ ಎಂದು ಚಡಪಡಿಸುತ್ತಿದ್ದರು.

ಇವರ ಮಾತನ್ನು ಕೇಳಿ ಮಾಯವ್ವ ಇವರ ಒಳ್ಳೆಯತನಕ್ಕೆ ಏನಾದರೊಂದು ಮಾಡಬೇಕೆಂದು ಅರಮನೆಯ ಕಡೆ ಹೋಗಿ, ರಾಜನಲ್ಲಿ ನಿಮ್ಮ ಮಗಳ ರೋಗವನ್ನು ವಾಸಿ ಮಾಡುತ್ತೇವೆ ಎಂದು, ರಾಜಕುಮಾರಿ ಬಳಿ ಹೋಗಿ, ಅವಳನ್ನು ಗಮನಿಸಿ, ನೀವೆಲ್ಲರು ಸ್ವಲ್ಪ ಹೊರಗಡೆ

ಹೋಗಿ, ನಾನು ಅವಳನ್ನು ಪರೀಕ್ಷಿಸುತ್ತೇನೆ ಎಂದು ಬಾಗಿಲು ಹಾಕಿದಳು. ಆಗ ನವಶಿಶುಯಾಗಿದ್ದ ಬೀರಲಿಂಗನು ಎಚ್ಚರವೇ ಇಲ್ಲದ ರಾಜಕುಮಾರಿಯ ಬೆನ್ನಿನ ಮೇಲೆ ಭಂಡಾರದಿಂದ ಬೆನ್ನು ಸವರಿದರೆ, ಅವಳ ಬೇನೆ (ರೋಗ) ಕಡಿಮೆಯಾಗಿ, ಅವಳು ಎದ್ದು ಕುಳಿತುಕೊಳ್ಳುತ್ತಾಳೆ. ಅವಳು ಏಳುವುದರೊಳಗಾಗಿ ಬೀರಲಿಂಗನು ಮತ್ತೆ ನವಶಿಶುವಾಗಿದ್ದನು. ಮಾಯವ್ವ ಬಾಗಿಲು ತೆಗೆದಾಗ, ರಾಜ-ರಾಣಿಯರಿಗೆ ಜನಸಾಮಾನ್ಯರಿಗೆ ಎಲ್ಲಿಲ್ಲದ ಆನಂದ. ಈ ಆನಂದದಿಂದಾಗಿ ಮಾಯವ್ವಳಿಗೆ ಅರಮನೆಯಿಂದ ವಾಯಿಗಂಗಾಳ, ಪಂಚಡಂಗಿ, ರುಮ್ಮಿ, ಚೂರಿ, ಹೊನ್ನ, ಕಠಾರಿಗಳನ್ನು ಕೊಟ್ಟು ಮಾರ್ಯಾದೆಯಿಂದ ಅವರನ್ನು ಕಳುಹಿಸಿಕೊಟ್ಟರು.

ಹಾಗೆಯೇ ಅರಣ್ಯದಲ್ಲಿ ಸಾಗುತ್ತಿರಬೇಕಾದರೆ ಒಂದು ಸಣ್ಣ ಹಳ್ಳಿಯ ಮುಂದೆ ಬರುತ್ತಿರಬೇಕಾದರೆ ರಾಕ್ಷಸಿಯು ಯಾರ ಭಯ-ಭೀತಿ ಇಲ್ಲದೆ ದಾರಿಯಲ್ಲಿಯೇ ಹೇಸಿಗೆಯ (ಮೂತ್ರ ವಿಸರ್ಜನೆ) ಕೆಲಸವನ್ನು ಮಾಡುತ್ತಿದ್ದಳು. ಇದನ್ನು ಕಂಡ ಬೀರಪ್ಪ, ಥೇ ಹೊಲಸು, ಊರು ಅಕ್ಕ ನಾವು ಈ ಊರಿಗೆ ಹೋಗೋದು ಬೇಡ ಇಲ್ಲಿಯ ಜನ ಅಸಭ್ಯರು, ಎಂದಾಗ ಮಾಯವ್ವ ಇಲ್ಲ ಬೀರಲಿಂಗ, ಊರ ಜನರು ಸೌಮ್ಯ ಸ್ವಭಾವದವರು. ಇವಳೊಬ್ಬಳು ರಾಕ್ಷಸಿ, ಅವರನ್ನು ಚಿತ್ರ ಹಿಂಸೆಯನ್ನು ನೀಡಿ, ಅವರಿಗೆ ಕಿರುಕುಳ ನೀಡುತ್ತಿದ್ದಾಳೆ. ಜನರು ಅವಳನ್ನು ಎದುರಿಸಲು ಸಾಧ್ಯವಾಗದೆ ಸುಮ್ಮನೆ ಇದ್ದಾರೆ. ಇವಳನ್ನು ನೀನು ಸಂಹರಿಸಬೇಕು. ಇದೇ ಒಳ್ಳೆಯ ಸಮಯ ಹೋಗು ಅವಳನ್ನು ಸಂಹರಿಸು ಎಂದಾಗ, ಬೀರಲಿಂಗ ಜನರ ಒಳಿತಿಗಾಗಿ ಏನಾದರು ಮಾಡಲು ಸಿದ್ದ. ಅದಕ್ಕೆ ರಾಕ್ಷಸಿಯ ಮುಂದೆ ಹೋಗಿ ಎಲೇ ರಾಕ್ಷಸಿಯೇ, ಏನು ನಿನ್ನ ಅಬ್ಬರ, ತೋರಿಸು ಈಗ ನಿನ್ನ ಶಕ್ತಿ ಎಂದನು. ರಾಕ್ಷಸಿಗೆ ಎಲ್ಲಿಲ್ಲದ ಕೋಪ ಬರಲು ಇಬ್ಬರ ನಡುವೆ ಜಗಳಗಳಾದವು. ಈ ಗುದ್ದಾಟದಲ್ಲಿ ಹೇಡಿಂಬ ಎಂಬ ರಾಕ್ಷಸಿ ಸತ್ತು ಹೋದಳು. ಇದನ್ನು ತಿಳಿದ ಜನರು ಮಾಯವ್ವ-ಬೀರಲಿಂಗನಿಗೆ ಜೈಕಾರವನ್ನು ಕೂಗಿ, ನಮಸ್ಕರಿಸಿ, ಸತ್ಕರಿಸಿದರು.

ಇಲ್ಲಿಂದ ಹಾಗೆ ಹೋಗುತ್ತಿರಲು ಮಾಯವ್ವಳು, ನಾನು ಇಲ್ಲಿಯೇ ಸ್ವಲ್ಪ ಸಮಯ ವಿಶ್ರಾಂತಿಯನ್ನು ಪಡೆಯುತ್ತೇನೆ ಎಂದು ಒಂದು ಬೃಹತ್ ಮರದ ಕೆಳಗೆ ಮಲಗಿದಳು. ಬೀರಲಿಂಗನು ಹಾಗೆಯೇ ಅಕ್ಕನ ಜೊತೆ ಒರಲಿದನು. ಹಾಗೆ ಸುತ್ತ-ಮುತ್ತಲ ನೋಡುತ್ತಿರಲು, ಬೀರಲಿಂಗನಿಗೆ ದೂರದಲ್ಲಿ ದೊಡ್ಡ ಹುತ್ತ ಕಂಡಿತು. ಅವನಿಗೆ ಇಷ್ಟು ದೊಡ್ಡ ಹುತ್ತವಿದೆ, ಅದರಲ್ಲಿ ಎಷ್ಟು ದೊಡ್ಡದಾದ ಸರ್ಪವಿರಬಹುದು, ಅದನ್ನು ನೋಡಬೇಕೆಂಬ ಹಂಬಲ ಶುರುವಾಯಿತು. ಅವನು ಮನಸ್ಸಿನಲ್ಲಿ ನಾಗದೇವನನ್ನು ಸ್ಮರಿಸಿದ ತಕ್ಷಣ ಹುತ್ತದಲ್ಲಿನ, ಏಳು ಹೆಡೆಯ ಸರ್ಪ ಬಂದು ಬೀರಲಿಂಗನಿಗೆ ಶರಣು ಎಂದಿತು.

೧೧. ಬೀರಪ್ಪ ಶಿವಲಿಂಗ ಅವತಾರವಾಗುವ ಕಥೆ : ಮಾಯವ್ವ ಮತ್ತು ಬೀರದೇವರು ಸಂಚಾರ ಮಾಡುತ್ತಾ-ಮಾಡುತ್ತಾ ಸಿರಿವಾಳವೆಂಬ ನಾಡಿಗೆ ಬಂದರು. ಆಹಾರವನ್ನು ಸ್ವೀಕರಿಸಿ, ಮಧ್ಯಾಹ್ನ ಉರಿ ಬಿಸಿಲಿಗೆ ನಡೆಯಲು ಆಗದೆ ಮಾಯವ್ವ ಅಲ್ಲಿಯೆ ಇರುವ ಜಗನ್ನಾಥನ ದೇಗುಲದ ಬಾಗಿಲಿನ ಹತ್ತಿರ ಮಲಗುವಳು. ಬೀರಪ್ಪ ಸ್ವಲ್ಪ ಹೊತ್ತು, ನಾನು ಏನಾದರೊಂದು ಮಾಡಬೇಕೆಂದು ಗುಡಿಯ ಸಮೀಪ ಇರುವ ಬಾವಿಯಲ್ಲಿ ಹಾರಿ, ಈಜಾಡಿ-ನೀರನ್ನೆಲ್ಲಾ ಹೊಲಸು ಮಾಡಿ, ಜಗನ್ನಾಥನಿಗೆ ಹಾಕುವ ಹೂಗಳನ್ನೆಲ್ಲ ತುಳಿದು ಬಿಡುವನು. ಅಲ್ಲಿಯ ಪೂಜಾರಿಯು ಏನಿದು ಎಂದು ನೋಡಲು, ಬಾಗಿಲ ಬಳಿ ಮಾಯವ್ವ ಮಲಗಿರುವುದನ್ನು ಕಂಡು, ಅವಳ ರೂಪಕ್ಕೆ ಮಾರು ಹೋದನು. ಬಕನಾಥನಲ್ಲಿ ಬಂದು ಈ ಸುಂದರಿ ನಿನಗಾಗಿಯೇ ಬಂದಿರುವಂತೆ ಇದೆ, ಎಂದಾಗ ಬಕನಾಥನು ತನ್ನ ಗದ್ದುಗೆ ಇಂದ ಇಳಿದು, ಅವಳ ರೂಪಕ್ಕೆ ಮಾರು ಹೋಗಿ, ಅವಳ ಸೆರಗನ್ನು ಹಿಡಿಯಲು ಹೋಗುವನು. ಅವಳಿಗೆ ಎಚ್ಚರವಾಗಲು ಎದ್ದು ಸರಿಯುವಳು. ಬಗನಾಥನು ಬಾ ನನಗೆ ಸ್ವರ್ಗಸುಖ ತೋರಿಸು ಬಾ ಎಂದಾಗ, ಅಲ್ಲಿಯೆ ಇದ್ದ ಬೀರಲಿಂಗ ಕೋಪ ಬಂದು ತನ್ನಲ್ಲಿಯ ಆಯುಧಗಳಿಂದ ಬಗನಾಥನ ಶಿರವನ್ನು ಕತ್ತರಿಸುವನು. ಆಗ ಆ ದೇವಾಲಯದಲ್ಲಿನ ಬೀರಲಿಂಗ ಶಿವಲಿಂಗಪ್ಪನಾಗಿ ಮಾಯವ್ವ ಸುಜ್ಞಾನಿ ಅವತಾರಗಳನ್ನು ತಾಳುವನು.

೧೨.ಕುರಿಗಳ ಹುಟ್ಟಿನ ಹಿನ್ನೆಲೆಯ ಪವಾಡ ಕಥೆಗಳು: ಹಾಲುಮತದ ಪವಿತ್ರ ಎಂದೆ ಪ್ರಸಿದ್ಧಿ ಪಡೆದ ಕುರಿಗಳ ಹುಟ್ಟಿಗೂ ಒಂದು ಕಥೆಯಿದೆ. ಆ ಕಥೆಯ ಸ್ವರೂಪ ಹೀಗಿದೆ. ತಗರ ಪವಾಡದಲ್ಲಿ ಕುರಿಗಳ ಹುಟ್ಟಿನ ಕಥೆ

"ಒಂದಿನದಲ್ಲಿ ಶಿವ ಕೈಲಾಸಪುರದಲಿ
ನಂದಿಭೃಂಗೀರ ಪ್ರಥಮರ
ಸಂದಣಿಯಿಂದ ಒಡ್ಡೋಲಗದೊಳಗಿರೆ
ಬಂದನಲ್ಲಿಗೆ ನಾರದನು"[೩೦]

ಶಿವನು ನಾರದನನ್ನು ನೋಡಿ, ಮುಗುಳ್ನಗುತ್ತಾ, ಏನು ವಿಷಯವನ್ನು ತಂದಿರುವೆ ಹೇಳುವಂತವನಾಗು ನಾರದ ಎಂದು ಕೇಳಿದನು. ಏನೆಂದು ಹೇಳಿ, ಶಿವ ಭೂಲೋಕದಲ್ಲಿ ಮಾಯೆಯೆಂಬ ಸ್ತ್ರೀಯು ದೇವರನ್ನು, ಮಾನವರನ್ನು ಲೆಕ್ಕಿಸದೇ ಅನ್ಯಾಯದಲ್ಲಿ ಜೀವಿಸುತ್ತಿದ್ದಾಳೆ, ಆಕೆಯ ರೂಪು ಲಾವಣ್ಯಕ್ಕೆ ಮಾರುಹೋಗಿ, ಮೋಹಿಸಲು ಮುಂದಾಗಿ, ಅವಳು ನೀಡುವ ವಿಷವನ್ನು ಕುಡಿದು ಬದುಕಿದ ನವಕೋಟಿ ಸಿದ್ದರನ್ನು

"ಮೂಗಿಗೆ ಕವದೆಯ ಕಟ್ಟಿ ಬಂದಿಗೆಗೊಟ್ಟು
ಬೇಗ ನೀರನು ಹೊತ್ತು ತನ್ನಿ
ಪೋಗೆಂದು ಸೆರೆಮನೆಯೊಳು ನೂಕಿಕೊಂಡಿಹ
ಯೋಗಸಿದ್ದರು ನವಕೋಟಿ"[೨೧]

ಇದನ್ನು ಅರಿತ ಪರಮೇಶ್ವರನು ರೇವಣಸಿದ್ದನೆಂಬ ಹೆಸರನ್ನು ಧರಿಸಿ ಸಂತೋಷದಿಂದ ಭೂಲೋಕಕ್ಕೆ ಇಳಿದು, ಕೊಲ್ಲಾಪುರದಲ್ಲಿ ಮೋಸವೇ ತನ್ನ ಕರ್ಮವೆಂಬಂತೆ ಇದ್ದ ಮಾಯೆಯ ಬಳಿ ಬಂದು, ಅವಳು ನೀಡಿದ ವಿಷದ ಕೊಡವನ್ನೆಲ್ಲಾ ಕ್ಷಣ ಮಾತ್ರದಲ್ಲಿ ಕುಡಿದು, ಮುಗಿಸಿದಾಗಲೆಲ್ಲ ಮತ್ತೆ-ಮತ್ತೆ ವಿಷದ ಕೊಡಗಳನ್ನು ರೇವಣಸಿದ್ದರ ಬಳಿ ಇಡುತ್ತಿರಲು, ರೇವಣ್ಣ ಹಿಂಜರಿಯದೆ ಕುಡಿಯುತ್ತಿರುವುದನ್ನು ಕಂಡ ಮಾಯೆಯು ಇವನು ಸಾಮಾನ್ಯನಲ್ಲ, ಯಾವುದೋ ಶಕ್ತಿಯ ಸ್ವರೂಪವೆಂದು ತಿಳಿದು, ಆತನ ಶಕ್ತಿಗೆ, ಸಾಮರ್ಥ್ಯಕ್ಕೆ ಬೆರಗಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಾಳೆ. ಅವಳ ತಪ್ಪಿಗೆ ರೇವಣಸಿದ್ದನು.

"ಕಾಳಿಯ ಮೂಗನು ಬಾಳಾಕ್ಷನದರಿದನು
ಹಾಳು ಮಾಡಿದ ಕೊಲ್ಲಾಪುರದ
ಕಾಳಕೂಟದ ವಿಷವನುಂಡಿದ್ದ ಸಿದ್ದರ
ಮೇಳದ ಕುರಿಯ ಮಾಡಿದನು"[೨೨]

ನವಕೋಟಿ ಸಿದ್ಧರನ್ನು ಕುರಿಗಳಾಗಿರಿ ಎಂದು ರೇವಣಸಿದ್ದನು ಶಪಿಸುತ್ತಾನೆ. ನವಕೋಟಿ ಸಿದ್ದರೆಲ್ಲ ಕುರಿಗಳಾದರು. ತಗರ ಪವಾಡದಲ್ಲಿ ಕುರಿಗಳ ಹುಟ್ಟಿನ ಹಿನ್ನೆಲೆ ಈ ರೀತಿಯಾಗಿ ವ್ಯಕ್ತವಾಗಿದೆ. ಹಾಲುಮತ ಪುರಾಣದಲ್ಲಿ ಕುರಿಗಳ ಹುಟ್ಟಿನ ಹಿನ್ನೆಲೆ ಭಿನ್ನವಾಗಿದೆ. ಹಿಮದಿಂದ ಕೂಡಿದ ಹಿಮಾಲಯದ ಪರ್ವತದಲ್ಲಿ ಶಿವ-ಪಾರ್ವತಿಯರು ಧ್ಯಾನದಲ್ಲಿ ಕುಳಿತಿದ್ದರು. ಅವರ ಸುತ್ತಲು ಋಷಿಗಳು, ಗಣಂಧರರು ಕುಳಿತು ಧ್ಯಾನಿಸುತ್ತಿದ್ದರು. ಸೊಗಸಾದ ವಾತಾವರಣದ ಕ್ಷಣಗಳನ್ನು ಅನುಭವಿಸುತ್ತ ಧ್ಯಾನದಲ್ಲಿರಬೇಕಾದರೆ, ಇದಕ್ಕಿದ್ದಂತೆ ಸೃಷ್ಟಿಯಲ್ಲಿ ಹಿಮವು ಅಧಿಕವಾಗಿ ಹಿಮದ ಮಳೆಯು ಬೀಳಲಾರಂಭಿಸಿತ್ತು. ಹಿಮದ ಮಳೆ ಅಧಿಕವಾಗುತ್ತಿದ್ದಂತೆ, ದೇವಾನು ದೇವತೆಗಳು, ಋಷಿಗಳು, ಗಣಂಧರರು ಚಳಿಗೆ ತಾಳಲಾರದೆ, ದಿಕ್ಕು ತೋಚದೆ ಶಿವನಲ್ಲಿಗೆ ಬಂದು ದೇವಾ ನಮಗೆ ಹಿಮ ಮಳೆಯಿಂದಾಗಿ, ಚಳಿಯನ್ನು ತಾಳಲಾಗುತ್ತಿಲ್ಲ. ದಯಮಾಡಿ ಪರಿಹಾರವನ್ನು ಒದಗಿಸಿ, ಕಷ್ಟದಿಂದ ಪಾರು ಮಾಡಿ ಎಂದು ಬೇಡಿಕೊಂಡರು. ಪ್ರತಿಯಾಗಿ ಶಿವನು ಆಲೋಚನೆಯನ್ನು ಮಾಡಿ, ಚಳಿಯಿಂದ ತಪ್ಪಿಸಿಕೊಳ್ಳಲು ಉದ್ದವಾದ, ದಪ್ಪವಾದ, ಮೃದುವಾದ ಕೂದಲುಗಳಿಂದ ವಸ್ತ್ರವನ್ನು ತಯಾರಿಸಿ ಹೊದಿಸಿಕೊಂಡರೆ ಚಳಿ ಕಡಿಮೆಯಾಗುತ್ತದೆ

ಎಂದು ಯೋಚಿಸಿ, ಅಂತಹ ರೋಮಗಳಿಗೋಸ್ಕರ ಎಲ್ಲಾ ಕಡೆಯೂ ಹುಡುಕಿದರು ದೊರೆಯುವುದಿಲ್ಲ. ಆಗ ಶಿವನು ಸೃಷ್ಟಿಕರ್ತನಾದ ಬ್ರಹ್ಮನನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡನು. ಬ್ರಹ್ಮನು ಪ್ರತ್ಯಕ್ಷನಾಗಿ ಏನೆಂದು ಕೇಳಲು, ಶಿವನು ನಯವಾದ ಹಾಗೂ ಉದ್ದವಾದ ರೋಮಗಳುಳ್ಳ, ಸಾದು ಸ್ವಭಾವದ ಪ್ರಾಣಿಗಳನ್ನು ನಿರ್ಮಿಸಲು ಹೇಳಿದನು ಇದಕ್ಕೆ ಪ್ರತಿಯಾಗಿ ಬ್ರಹ್ಮನು ಕಪ್ಪಗಿರುವ ಕುರಿ, ಟಗರುಗಳನ್ನು ಸೃಷ್ಟಿಸಿದನು. ಹೀಗೆ ಹಾಲುಮತ ದರ್ಶನದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನಿಂದಲೇ ಕುರಿಗಳು ಹುಟ್ಟಿದ್ದವು ಎಂಬ ಕಥೆಗಳ ಸ್ವರೂಪವಿದೆ.

"ತೇಜೋಮಯ ಹಾಲುಮತ ಪುರಾಣ"ದಲ್ಲಿ ಕೈಲಾಸದಲ್ಲಿ ದೇವಾನು ದೇವತೆಗಳ ಸಮೂಹವು ಒಂದುಗೂಡಿ, ಚರ್ಚಿಸುತ್ತಿರಲು, ಅದೇ ಸಮಯದಲ್ಲಿ ಖೇಚರನು ಬಂದು, ಪರಶಿವನಿಗೆ ನಮಸ್ಕರಿಸಿ ಹಿಂದೆ ಸರಿದನು. ಆಗ ಅವನ ಕಾಲು, ಋಷಿ ಮುನಿಗೆ ತಾಗಿತ್ತು. ಇದರಿಂದ ಕ್ರೋದಗೊಂಡ, ಮುನಿಯು "ಭರದಲ್ಲಿ ಭೂಲೋಕಕ್ಕೆ ನೀನು ಹೋಗಿ ಮಾನವನಾಗಿ ಜನಿಸು"[೩೩] ಎಂದು ಶಾಪವಿತ್ತನು. ಈ ಮಾತನ್ನ ಕೇಳಿದ ಖೇಚರನು ಭಯಭೀತನಾಗಿ ಪರಶಿವನಲ್ಲಿಗೆ ಹೋಗಿ ಪರಿಹಾರ ಕೇಳಲು, ಆಗ ಶಿವನು ನೀನು ಮಾನವನಾಗಿ ಜನಿಸಿ, ಜಾವಾಲ ಮುನಿಯಾಗಿ ಯೋಗಾಭ್ಯಾಸವನ್ನು ಮಾಡುತ್ತಾ ಇರು, ನೂತನ ಪುರದ ಅರಸನಿಗೆ ತನ್ನ ಚೇತ್ಯಕಲಾಂಶವು ಮಗನಾಗಿ ಹುಟ್ಟಿ ಬರುವುದು. ಆತನಿಂದ ನಿನ್ನ ಶಾಪವು ಆಗ ನಿಶ್ಯಾಪಗೊಳ್ಳುವುದು ಎಂದು ಅನುಗ್ರಹಿಸಿದನು."[೩೪]

ಶಿವನ ಮಾತಿನಂತೆ ಖೇಚರನು ಜಾಬಾಲ ಮುನಿಯಾಗಿ ಹುಟ್ಟಿ, ಯಾವಾಗಲೂ ಧ್ಯಾನದಲ್ಲಿರುತ್ತಿದ್ದನು. ನೂತನ ಪುರದಲ್ಲಿನ ರಾಜನಿಗೆ ಗಂಡು ಮಗು ಹುಟ್ಟಿತು. ಮಗುವಿನ ಹುಟ್ಟಿನಿಂದಾಗಿ ಎಲ್ಲರೂ ಸಂತೋಷದಿಂದ ಕೂಡಿದರು. ಕೈಲಾಸದಲ್ಲಿ ಪರಶಿವನು ಮೃತ್ಯು ದೇವತೆಯನ್ನು ಕರೆದು, ನೀನು ನೂತನ ಪುರಕ್ಕೆ ಹೋಗಿ, ಆ ನಗರದ ಅರಸನ ಮಗುವಿನ ರುಂಡವನ್ನು ಕತ್ತರಿಸಿ, ಆ ರುಂಡವನ್ನು ಜಾಬಾಲಿ ಮುನಿಯ ಮುಂದೆ ಇಟ್ಟು ಬರಬೇಕೆಂದು ಆಜ್ಞಾಪಿಸುತ್ತಾನೆ. ಅದರಂತೆ ಮಗುವಿನ ರುಂಡವನ್ನು ಕತ್ತರಿಸಿ ಜಾಬಾಲಿ ಮುನಿಯ ಮುಂದೆ ಇಟ್ಟು ಬರುತ್ತಾನೆ. ಅರಮನೆಯಲ್ಲಿ ಮಲಗಿದ ರಾಣಿಯು ಎದ್ದು ನೋಡಿದರೆ ಮಗುವಿನ ರುಂಡವಿರುವುದಿಲ್ಲ. ಅದನ್ನು ಕಂಡ ರಾಣಿಯು ಮೂರ್ಛಿತಳಾದಳು. ಈ ವಾರ್ತೆ ರಾಜನಿಗೆ ತಿಳಿದು "ಈಗ ಮಗನ ರುಂಡವನ್ನು ಕತ್ತರಿಸಿಕೊಂಡು ಹೋಗಿರುವ ಆ ದುಷ್ಟನನ್ನು ಶೋಧಿಸಿ, ಆತನ ರುಂಡವನ್ನು ಸಹ ದೇಹದಿಂದ ಕತ್ತರಿಸಬೇಕು ಎಂದು ಆಜ್ಞಾಪಿಸಿದನು."[೩೫] ರಾಜನ ಆಜ್ಞೆಯಂತೆ ಸೈನಿಕರು ಎಲ್ಲ ಕಡೆ ಹುಡುಕಾಡಿದರು. ರುಂಡವು ಅರಣ್ಯದಲ್ಲಿ ಧ್ಯಾನದಲ್ಲಿರುವ ಜಾಬಾಲಿ ಮುನಿಯ ಮುಂದೆ ಇರುವುದನ್ನು ಕಂಡು ಗಾಬರಿಯಿಂದ ರಾಜನಿಗೆ ತಿಳಿಸಿದರು.

ರಾಜನು ಬಂದು ಕೋಪದಿಂದ ಕ್ರೋಧನಾಗಿ ಚಂದ್ರಾಯುಧದಿಂದ ಜಾಬಾಲಿ ರುಂಡವನ್ನು ಕತ್ತರಿಸಿದರು. ಆಗ ಆ ಮುನಿಯ ರಕ್ತವು ಭೂಮಿಯ ಮೇಲೆ ಆವರಿಸಲು, ರಕ್ತ ಕಣಗಳಿಂದ ಕುರಿಗಳು ಉದ್ಭವಿಸಿದವು. ಆಗ ಮುನಿಯು ಶಾಪದಿಂದ ಮುಕ್ತನಾಗಿ ಮತ್ತೆ ಖೇಚರನ ರೂಪ ತಾಳಿದನು.

ಶ್ರೀ ಬೀರಲಿಂಗೇಶ್ವರರ ಮಹಾಪುರಾಣದಲ್ಲಿ ಮೇಲಿನ ಕಥೆಗಳಿಗಿಂತ ವಿಭಿನ್ನವಾದ ಕಥೆಯ ಸ್ವರೂಪವನ್ನು ಕಾಣುತ್ತೇವೆ. ಈ ಕೃತಿಯಲ್ಲಿ ಶಿವನನ್ನು ಭವಳೇಶಂಕರ ಎಂದು ಪ್ರಸ್ತಾಪಿಸಲಾಗಿದೆ. ಕೈಲಾಸದಲ್ಲಿ ಒಂದು ದಿನ ಪಾರ್ವತಿ ದೇವಿಯು ಭವಳೇಶಂಕರನ ಬಳಿ ಬಂದು ದೇವಾ ಕುರಿಗಳು ಹುಟ್ಟುವ ಪ್ರಸಂಗವೇನು? ಎಂದು ಕೇಳಿದಳು. ಭವಳೇಶಂಕರನು ದೇವಿ ನಾನು ಯೋಗ ಧ್ಯಾನದಲ್ಲಿರುವಾಗ, ನೀನು ಅರ್ಧಾಂಗಿಯಾಗಿ, ನನ್ನ ಶರೀರದಲ್ಲಿ ಲೀನವಾಗಿದೆ. ನಾನು ಯೋಗ ನಿದ್ರೆಯಲ್ಲಿರುವಾಗ, ಅಗೋಚರ ಶಕ್ತಿಯಿಂದ, ನೀನು ಬಂದು ನನ್ನ ಸೇವೆಯನ್ನು ಮಾಡುವ "ಓಂ ನಮಃ ಶಿವಾಯ" ಎಂಬ ಮಂತ್ರವನ್ನು ಹೇಳುತ್ತಿರಬೇಕಾದರೆ, ನನ್ನ ಜಡೆಯಿಂದ ಕೆಲವು ಕುರಿಗಳು ಹುಟ್ಟಿ ಬಂದವು. ಆಗ ನೀನು ಅವುಗಳಿಗೆ ಜೀವ ತುಂಬಿ ಭೂಮಿಯ ಮೇಲೆ ಎಸೆಯುತ್ತಿದ್ದೆ. ಅವು ನನ್ನ ಶಕ್ತಿಯಿಂದ ಹಿಂಡು-ಹಿಂಡಾಗಿ ಬೆಳೆಯಲಾರಂಭಿಸಿ ದವು. ಹಾಗೆಯೇ ನಾನು ಯೋಗ ನಿದ್ರೆ(ಧ್ಯಾನ)ಯಿಂದ ಎಚ್ಚೆತ್ತು ಎದ್ದು, ಜಡೆಯನ್ನು, ಮೈಯನ್ನು ಜಾಡಿಸಿದಾಗ, ಎಷ್ಟೋ ರೋಮಗಳು ಕೆಳಗೆ ಬಿದ್ದವು, ಜಡೆಗಳು ಮತ್ತು ರೋಮಗಳು ಉದುರುವಾಗ ಅವುಗಳಲ್ಲಿ ಎಷ್ಟೋ ಸಣ್ಣ-ಸಣ್ಣ ಹುಳುಗಳು, ಹೇನು ಕುರಿಗಳು, ಉದುರಿ ಬಿದ್ದವು ಮತ್ತು ಅಗ್ನಿ ನೇತ್ರದ ಹನಿಗಳೂ, ಮಸ್ತಕದಿಂದ ಬಿದ್ದ ಹನಿಗಳು ಹೀಗೆ ಮೂರು ತರದಿಂದ ಬಿದ್ದ ಹನಿಗಳಲ್ಲಿ ನನ್ನ ಇಚ್ಛೆಯಿಂದ ಅದ್ಭುತವಾದ ರೋಮರೂಪವರಾದ ಋಷಿಗಳ ರೂಪದಂತೆ ಇರುವ ಎಷ್ಟೋ ಕುರಿಗಳು ಹುಟ್ಟಿದವು.

ಮುದ್ದಲಿಂಗೇಶ್ವರರ ಚರಿತ್ರೆಯಲ್ಲಿ ಕುರಿಗಳ ಹುಟ್ಟು ಈ ರೀತಿಯಾಗಿದೆ. ದಕ್ಷಬ್ರಹ್ಮನು ಪಾರ್ವತಿಗೆ ಅವಮಾನ ಮಾಡಿದಕ್ಕಾಗಿ ಪಾರ್ವತಿಯು ದಕ್ಷಬ್ರಹ್ಮ ಏರ್ಪಡಿಸಿದ ಯಜ್ಞಕುಂಡದಲ್ಲಿಯೇ ಹಾರಿದಳು. ಆಗ ಪರಶಿವನಿಗೆ ಈ ವಿಷಯ ತಿಳಿದು, ವೀರಭದ್ರನನ್ನು ಕರೆದು ಶಿವನು

"ಉಕ್ಕಿ ಬರುತಿಹ ಕೋಪದಿಂದಲಿ
ಸೊಕ್ಕಿನಿಂದಿಹ ದ್ರಕ್ಷಬ್ರಹ್ಮನ
ಸೊಕ್ಕು ಮುರಿದವನ ತಲೆಯನು ತರಿದು ಬಾ ಹೋಗೆನಲು
ಉಕ್ಕಿ ಬರುವುಮ್ಮಸ್ಸಿನಿಂದಲೆ

ಸೊಕ್ಕಿಮುರಿದಾಲ ದಕ್ಷ ಬ್ರಹ್ಮನ

ಇಕ್ಕು ವೆನವನ ತಲೆಯನಾಯಜ್ಞಾಹುತಿಯನ್ನು ತಲಿ"[೩೬]

ಎಂದು ಹೇಳಿ ಕಳುಹಿಸಿದನು. ಅದರಂತೆ ವೀರಭದ್ರನು ದಕ್ಷಬ್ರಹ್ಮನ ಹೆಂಡತಿಯು ಶಿವನ ಪಾದವನ್ನು ಹಿಡಿದು, ನನ್ನ ಗಂಡ ಮಾಡಿರುವುದು ತಪ್ಪಾಗಿದೆ. ಕ್ಷಮಿಸಿ, ನನಗೆ ಸೌಭಾಗ್ಯವನ್ನು ಕರುಣಿಸಿ ಎಂದು ಪರಿ–ಪರಿಯಾಗಿ ಕೇಳಿಕೊಳ್ಳಲು, ಆಗ ಅವಳ ದುಃಖಕ್ಕೆ ಮಾರುಹೋಗಿ, ಶಿವನು ಯಜ್ಞಕ್ಕೆ ಕಟ್ಟಿದ ಎರಡು ಕರುಗಳಲ್ಲಿ ಗಂಡು ಕುರಿಯ ರುಂಡವನ್ನು ತೆಗೆದು, ದಕ್ಷಬ್ರಹ್ಮನಿಗೆ ಇಡುತ್ತಿರಲು, ಇನ್ನೊಂದು ಹೆಣ್ಣು ಕುರಿಯು "ಪತಿಯಿಲ್ಲದಿರಲೇಗೆ ಬದುಕಲಿ ನಾನೀಗ" ಎಂದು ಗೋಳಾಡುತ್ತಿರಲು ನನಗಿನ್ನು ಮಕ್ಕಳಾಗಿಲ್ಲ, ನಾನು ಹೇಗೆ ಬಾಳಲಿ ಮುಕ್ತಿಯನ್ನು ನೀಡು ಎಂದು ಬೇಡಲು

"ಯನಗು ಮುಕ್ತಿಯ ನೀಡಿರೆನಲದ

ನಿನಗು ನಿನ್ನಯ ಪತಿಯು ದೊರಕುವ

ನಿನಗೆ ಸಂತಾನಾಗುವರೆಗೆ ನುತ ಕುರಿಯರಸಿ ಶಿವ

ನಿನಗೆ ಸಂತಾನ ಸುಖವನು ಬೇ

ಡೆನಲು ಬಂದಾಗ ಕಾಣಿನ್ನನು

ನಿನಗೆ ಮುಕ್ತಿಯ ನಾಗ ನೀಡುವೆನೆಂದ ಶಿವನಾಗ"[೩೭]

ಎಂದು ಕುರಿಗೆ ಶಿವನು ಹೇಳಿದನು. ಶಿವನು ಹಾರೈಸಿದ ಕುರಿಗೆ ಸಾವಿರಾರು ಕುರಿಗಳು ಜನಿಸಿದವು.

೧೩. ದೇವಾನು–ದೇವತೆಗಳು ಕುರಿಗಳನ್ನು ಕಾದ ಕಥೆ : ಹಾಲುಮತದಲ್ಲಿ ಪವಿತ್ರ ಪ್ರಾಣಿ ಎಂದೆನಿಸಿರುವ ಕುರಿಯನ್ನು, ಮೊದಲು ಬ್ರಹ್ಮ, ವಿಷ್ಣು, ಶಿವ, ಪಾರ್ವತಿಯರು ಕಾದರು. ಆ ಕಥೆಯ ಸ್ವರೂಪ ಹಾಲುಮತ ಪುರಾಣಗಳಲ್ಲಿ ಸ್ವಲ್ಪ ಭಿನ್ನತೆಯಿಂದ ಕಂಡು ಬಂದಿದೆ.

ತೇಜೋಮಯ ಹಾಲುಮತ ಪುರಾಣದಲ್ಲಿ "ಜಾಬಾಲ ಮುನಿಯ ರಕ್ತದ ಅಂಶದಿಂದ ನಾನಾ ರೀತಿಯ ಕುರಿಗಳೂ ಹುಟ್ಟಿದವು. ಇದರಿಂದ ಗಾಬರಿಯಾದ ನೂತನ ಪುರದ ಅರಸ ಗಂಗಾಧರ ಈ ಕುರಿಗಳು ದೇವರ ಅಂಶದಿಂದ ಸಾಧು ಪ್ರಾಣಿಗಳಾಗಿವೆ. ಇವುಗಳ ರಕ್ಷಣೆ ನಮ್ಮ ಕರ್ತವ್ಯವೆಂದು ಸೈನಿಕರನ್ನು ಕುರಿಕಾಯಲು ಬಿಟ್ಟು ಹೋದರು. ಸೈನಿಕರು ಕುರಿಗಳನ್ನು ಕಾಯುತ್ತ–ಕಾಯುತ್ತ ಸುಸ್ತಾದರು. ಈ ಕಾರ್ಯ ನಮ್ಮಿಂದ ಸಾಧ್ಯವಿಲ್ಲವೆಂದು ಅಲ್ಲಿಂದ ತೆರಳಿದರು. ಆಗ ಅನಿವಾರ್ಯವಾಗಿ ಮಂತ್ರಿ, ರಾಜರು ಕುರಿಗಳನ್ನು ಕಾಯಲು ಪ್ರಾರಂಭಿಸಿದರು.

ಅವರ ಕೈಯಲ್ಲೂ ಈ ಕಾರ್ಯ ಸಾಧ್ಯವಾಗದೆ ಶಿವನಲ್ಲಿ ಮೊರೆ ಹೋದರು. ನಿಮ್ಮ ವ್ಯಸನವನ್ನು ಬಿಟ್ಟು ನೀವು ನಿಮ್ಮ ನಿಮ್ಮ ಮನೆಗಳಿಗೆ ಮರಳಿ ಹೋಗಿರಿ"[೩೮] ಎಂದು ತಿಳಿಸಿ ಬ್ರಹ್ಮರಿಗೆ ಈ ಕಾರ್ಯವನ್ನು ಒಪ್ಪಿಸಿದನು. ಬ್ರಹ್ಮನಿಂದಲೂ ಕುರಿಗಳನ್ನು ಕಾಯಲು ಬೇಸರವಾಗಿ ವಿಷ್ಣುವನ್ನು ಕರೆದು ಕಾಯಲು ಹೇಳಿ ಬ್ರಹ್ಮನು ತನ್ನ ಲೋಕಕ್ಕೆ ತೆರಳಿದನು. ವಿಷ್ಣುವು ಸಂತೋಷದಿಂದ ಕೆಲ ತಿಂಗಳುಗಳ ಕಾಲ ಕಾದನು. ಆದರೆ ಅವುಗಳ ಚಂಚಲತೆಯಿಂದಾಗಿ ಸುಸ್ತಾಗಿ ಪರಶಿವನಿಗೆ ಮೊರೆಹೋದರು. "ಪರಶಿವನು ವಿಷ್ಣುವನ್ನು ಹೋಗಲು ಬಿಟ್ಟು, ತಾನೇ ಕುರಿಗಳನ್ನು ಕಾಯಲು ಭೂಲೋಕಕ್ಕೆ ಬಂದನು. ಆದರೆ ನಾನಾ ವರ್ಗಗಳಿಂದ ಕೂಡಿದ ಕುರಿಗಳನ್ನು ಒಂದು ಗೂಡಿಸಲು ಆಗದೆ ಬೇಸತ್ತು ದಣಿದು, ಅಲ್ಲಿಯೇ ಕುರಿಗಳನ್ನು ಬಿಟ್ಟು ಕೈಲಾಸಕ್ಕೆ ಬಂದು ಭೂ ಲೋಕದಲ್ಲಿರುವ ಕುರಿಗಳನ್ನು ಕಾಯುವವರು ಯಾರು ಎಂಬ ಚಿಂತೆಯೊಂದು ಆವರಿಸಿದೆ ಎಂದು ಪಾರ್ವತಿಗೆ ತಿಳಿಸಿದನು."[೩೯] ಆಗ ಪಾರ್ವತಿಯು ಚಿಂತಿಸ ಬೇಡಿ. ನಾನು ಕುರಿಗಳನ್ನು ಕಾಯಲು ಹೋಗುವೆ ಎಂದು ಮಕ್ಕಳನ್ನು ಕರೆದುಕೊಂಡು ಕುರಿಕಾಯಲು ಹೋದಳು. ಆದರೆ ಸ್ವಲ್ಪ ದಿನಗಳ ನಂತರ ಬೇಸತ್ತು. ಇವುಗಳಿಗೆ ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಚಿಂತಿಸಿ, ಜಾಗ್ರತಪುರಕ್ಕೆ ಬಂದು ಮೂರು ನೇತ್ರಗುಳ್ಳಳ್ಳ ಹುತ್ತಿನಲ್ಲಿ ಕುರಿಗಳನ್ನು ಹೋಗಿಸಿ, ಪರಮಾತ್ಮನೇ ಹುಟ್ಟಿಸಿದ ನೀನು ಇವುಗಳಿಗೆ ಆಹಾರ–ನೀರು ನೀಡಬೇಕೆಂದು ಕೇಳಿಕೊಂಡು, ಕೈಲಾಸಕ್ಕೆ ತೆರಳಿದರು.

ಜನಪದ ಹಾಲುಮತ ಮಹಾಕಾವ್ಯದಲ್ಲಿ ನೋಡುವುದಾದರೆ

"ಶಾಂತಮುತ್ತಯ್ಯನು ಕುರಿಗಳನ್ನು ಕಾಯ್ದು ಸಾಕಾಗಿ
ಬ್ರಹ್ಮಗ ಹೇಳುತಾನೇನ ಕುರಿಯಾ ಕಾಯುತಾನೇನ
ಮಹೇಶ ಬಿಟ್ಟ ಕುರಿಯೇನ ರುದ್ದರ ಕಾಯುತಾನೇನ
ಐದು ಮಂದಿನಲ್ಲೇಳ ಬ್ಯಾಸರ ಬಂದು ಕುಂತಾರ
ಹ್ಯಾಂಗ ಮಾಡಬೇಕಂದಾನ ಮಹಾದೇವ ಎಲ್ಲಿಗೆ ಹೋಗಬೇಕೆಂದಾನ"[೪೦]

ಆಗ ಪಾರ್ವತಿಯು ಮಕ್ಕಳೊಂದಿಗೆ ಕುರಿ ಕಾಯಲು ಹೋಗುವಳು. ಆದರೆ ಕುರಿಗಳನ್ನು ಕಾಯ್ದು–ಕಾಯ್ದು ಸಾಕಾಗಿ ಏನು ಮಾಡಬೇಕೆಂದು ಯೋಚಿಸಿ,

"ಮೂರ ಕಣ್ಣಿನ ಹುತ್ತಿನೊಳಗೆ ಕುರಿಯಾ ಹೊಗಸುತಾಳೇನ
ಕುರಿಯಾ ಹೊಗಸುತಾಳೇನ ಹುತ್ತ ಮುಚ್ಚತಾಳೇನ
ಎರಡು ಫಂಡಕನಲ್ಲೇಳ ಕೂಡಿಸಿ ಬಿಡುವುತಾಳೇನ

ಮುತ್ತಲ ಮರವಂದು ಮಾಡ್ಯಾಳೆ ಹುತ್ತಿನ ಗಡ್ಡಿಗ ಉರ್‍ಯಾಳ
ಮುತ್ತಿನಂತ ಮರವೇನ ಹುತ್ತಿಗ ಬೆಳೆಯುತಾವೇನ"[೪೧]

ಇದೇ ರೀತಿಯ ಕಥಾ ಸ್ವರೂಪವನ್ನು ಹಾಲುಮತ ಪುರಾಣ ದರ್ಶನದಲ್ಲಿ ಹಾಗೂ ಶ್ರೀ ಬೀರಲಿಂಗೇಶ್ವರ ಮಹಾಪುರಾಣದಲ್ಲೂ ಕಾಣುತ್ತೇವೆ.

ಬಸವಣ್ಣಪ್ಪ ನೀಲಪ್ಪ ಹಳವಳ್ಳಿ ಹಾಲುಮತದ ಪುರಾಣವು ಎಂಬುದರಲ್ಲಿ ಕುರಿಹಿಂಡನ್ನು

"ಮಾಧವ ಬ್ರಹ್ಮರುಗಳಿಗೆ ಕುರಿಗಳನ್ನೆಲ್ಲ
ಕಾದುತಾರೆಂದು ಈಶ್ವರನು
ಅದರಿಸುತ ದಿನಚರಿಲ್ಲೊಬ್ಬೊಬ್ಬರು
ಕಾದು ತರುವರು ಕುರಿವಿಂಡ"[೪೨]

ಹೀಗೆ ಕುರಿಹಿಂಡನ್ನು ಒಬ್ಬೊಬ್ಬರಂತೆ ಕಾಯುತ್ತಿರಲು ಶಿವನ ಸರದಿ ಬರಲು, ಪಾರ್ವತಿಗೆ ಅಂಬಲಿ ತೆಗೆದುಕೊಂಡು ಬಾ ಎಂದು ಭೂಮಿಗೆ ಬಂದನು ಶಿವ ಕುರಿಗಳನ್ನು ಕಾಯುತ ಸಂತೋಷದಿಂದ ಇರಲು, ಶಿವನಿಗೆ ಅಂಬಲಿಯನ್ನು ತಂದಳು ಪಾರ್ವತಿಯು

"ಅಂಬಲಿಯ ತುಂಬಿದಳು ಶಂಭು ಶಂಕರನಿಗೆ
ಅಂಬಿಕಾ ಗೌರಿ ಹರುಷದಲಿ
ಕುಂಭಿನಿಗಿಳಿದು ಕುರುಬ ಜಂಗಮಯ್ಯಗೆ
ರಂಭೆ ಪಾರ್ವತಿ ನೀಡಿದಳು"[೪೩]

ಆಗ ಶಿವನು ಸಂತೋಷದಿಂದ ಸ್ವೀಕರಿಸಿ, ದೇವಿ ಈ ಜಾಗ್ರತಪುರದಲ್ಲಿ ಗೌಡ ಆದಿಗೊಂಡನ ಬಳಿ ಹೋಗಿ ಭೂಮಿ ದಿನವ ಬೇಡುವೆ, ಎಂದು ಹೇಳಿ ಆದಿಗೊಂಡನ ಬಳಿಗೆ ಹೋಗಿ, ಐದು ಮೊಳ ಭೂಮಿಯನ್ನು ಬೇಡಿದನು. ಆದಿಗೊಂಡನು ಆಗ,

"ಗುರುವಿನ ಮಾಲೆಗೆ ಕರವ ಮುಗಿದು ಗೌಡ,
ಎರೆದನು ಭೂಮಿ ಧಾರೆಯನು॥
ಹರುಷದಿ ಕೈಕೊಂಡು ಗಿರಿಜೆ ಬಳಿಗೆ ಬಂದು
ಕುರಿಯ ಹಿಂಡನು ಸಾಗಿಸಿದನು"[೪೪]

ಶಿವನು ಅಲ್ಲಿಗೆ ಬಂದು ತ್ರಿಶೂಲದಿಂದ ಒತ್ತಿದಾಗ ಗುಹೆ ನಿರ್ಮಾಣವಾಯಿತು. ಆಗ ಅದರಲ್ಲಿ ಕುರಿಯ ಹಿಂಡನ್ನು ಹೋಗಿಸಿದನು.

"ಭರದಿ ಕಂತೆಯ ಮುಚ್ಚಿ ಬಾಗಿಲು ಬೀಗಕ್ಕೆ
ಗಿರಿಜೆ ಮೂಗುತಿಯ ಮುದ್ರೆಯನು

ಮತ್ತೆ ರೇವಣಸಿದ್ದ ಮುಚ್ಚಿದ ಕಂತೆಯ ಮೇಲೆ
ಹುತ್ತಿಕ್ಕಿಬೆಳೆದುದಾಕ್ಷಣ
ಮುತ್ತಿನಾಮೂಗುತಿ ಮೊಳೆತು ವೃಕ್ಷಗಳಾಗಿ
ಮುತ್ತಲಮರವಾಗಿ ಬೆಳೆದು"[೪೫]

ಕುರಿಗಳನ್ನು ಹುತ್ತಿನಲ್ಲಿ ಬಿಟ್ಟಿದ್ದರಿಂದ, ಅವರು ಕೈಲಾಸಕ್ಕೆ ತೆರಳಿದರು.

೧೪. ಬಡವಿ ಗಂಗಮ್ಮನಿಗೆ ನಿಧಿ ನೀಡಿದ ಕಥೆ: "ಅಡಯಿಡುತಲಿ ಮುಂದೆ ಮೃಡಧ್ಯಾನದಿಂದಿಹ! ಬಡವಿ ಗಂಗಮ್ಮ ಮನೆಗೆ ಮೃತರೂಪ ರೇವಣ್ಣ ಸಿದ್ದಲಲಾಮನು। ತಡೆಯಿಲ್ಲದೊಳಪೋಗೆ ತಾನು ॥೪೮॥ ಪು.೩೯(ಚನ್ನಕವಿಯ ಹಾಲುಮತ ಪುರಾಣ) ಆಗ ಗಂಗಮ್ಮಳು ಸಂತೋಷಗೊಂಡು ಗುರುವಿನ ಪೂಜೆಯನ್ನು ಮಾಡಿ, ಗುರುವೇ ತಾವು ಈ ದಿನ ಬಡವಳ ಮನೆಯಲ್ಲಿ ಪ್ರಸಾದ ಸ್ವೀಕರಿಸಿ ತೆರಳಬೇಕು ಎಂದು ಆಜ್ಞಾಪಿಸುತ್ತಾಳೆ. ಅದಕ್ಕೆ ಗುರುಗಳು ಒಪ್ಪಿ, ಸಿದ್ದಪಡಿಸಿದ ಪ್ರಸಾದವನ್ನು ಸ್ವೀಕರಿಸಲು ಅಣಿಯಾದಾಗ, ಕಂಬಳಿ ಗದ್ದುಗೆಯನ್ನು ಹಾಸಿ, ಅದರ ಮೇಲೆ ಕುಳಿತು ಪ್ರಸಾದ ಸ್ವೀಕರಿಸುವಂತೆ ಹೇಳುವಳು. ಅವರು ಸ್ವೀಕರಿಸಿ, ಆಶೀರ್ವದಿಸಲು ಹೋದಾಗ, ಇಂತಹ ಭಕ್ತಳಿಗೆ ಕಡು ಬಡತನ ಇರಬಾರದೆಂದು ಹಾರೈಸಿ, ಅಲ್ಲಿಂದ ಹೊರಡುವರು. ಇಲ್ಲಿ ಇವಳು ಕಂಬಳಿಯನ್ನು ತೆಗೆಯಲು ಹೋದಾಗ ಅದರ ಕೆಳಗೆ ನಿಧಿಯೇ ಇತ್ತು. ಅವಳು ಗುರುಗಳೆಲ್ಲೋ ಇದನ್ನು ಮರೆತಿರಬೇಕೆಂದು, ಅವರಲ್ಲಿಗೆ ಓಡಿ ಓಗಿ "ನಿಮ್ಮದು ಹಣವಿದು ನನಗೆ ಸಲ್ಲುವುದೆಂತು। ಹಮ್ಮಿನಾಟಗಳೀವೆಲ್ಲ॥ ಗಮ್ಮನೆ ತೆಗೆದುಕೊಳ್ಳುತ ಕೃಪೆ ಮಾಡಿರೆಂ । ದಮ್ಮಾಜಿಯೆರಗೆ ಪಾದಕ್ಕೆ ॥ ॥೫೭॥

"ತೆರಹರಿಸಲಿಬೇಡ ಯೋಚಿಸಿ ನೋಡೀಗ। ಪರಮಾತ್ಮ ನಿನಗೆ ಕೊಟ್ಟಹನು॥
ಜರಿಯದೆಕೈಕೊಂಡುಮನ ಹರುಷದೋಳಿಗ। ಚರತೃಪ್ತಿ ಮಾಡೊಳ್ಳಿತಹುದು॥"[೪೬]

ಎಂದು ಹೇಳಿದರು, ಗುರು ರೇವಣಸಿದ್ದನು, ನಿನಗಾಗಿ ಶಿವ ನಿಧಿಯನ್ನು ಕೊಟ್ಟಿದ್ದಾನೆ. ಎಂದು ಹೇಳಿ, ಹಾರೈಸಿ ತೆರಳುವನು.

೧೫. ಪದುಮಣ್ಣನಿಗೆ ಕುರಿಗಳು ಪ್ರಾಪ್ತವಾದ ಕಥೆ: ಆದಿಗೊಂಡನ ಕೊನೆಯ ಮಗನಾಗಿ ಪದುಮಣ್ಣನು ಅತಿ ಪ್ರೀತಿ ವಾತ್ಸಲ್ಯದಿಂದ ಬೆಳೆದನು. ಮದುವೆಯಾದರು ಯಾವ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಗಂಡ-ಹೆಂಡತಿಯು ಊಟ ಮಾಡುತ್ತ ಜೀವಿಸುತ್ತಿದ್ದರು. ಇವರನ್ನು ಕಂಡ ಸಹೋದರರು, ಅತ್ತಿಗೆಯರು ದ್ವೇಷ ಕಾರುತ್ತಿದ್ದರು.

"ಅವರಲಿ ಕಷ್ಟದಿ ದುಡಿವರು
ನಾಲುವರುಳಿದ ಕಿರಿ ವಾವುದೆಕೆಲ

ಸವನು ಗೈಯದವನುಂಡಾಡಿಯ ಪರಿಯಲಲೆಯುತಿರಲು
ಅವಗೆ ಯಾವುದೆ ಕೆಲಸವೀಯದ
ಲವಗೆ ತಾಯಿಯು ಹೆಚ್ಚು ಪ್ರೀತಿಯ
ಲವಗೆ ಒಳ್ಳೆಯ ಊಟ ಬಡಿಸುತ ಮುದ್ದು ಮಾಡುತಿರೆ"[೪೭]

ಹೀಗೆ ಪದಮಣ್ಣನಿಗೆ ಸಹೋದರರು ಮಾತಿನ ಮೂಲಕ ನೋವು ಮಾಡುತ್ತಿರಲು, ಬೇಸರವಾಗಿ, ಹೊಲವನ್ನು ಊಳಲು ಹೋಗುತ್ತಾನೆ. ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣದಲ್ಲಿ ಪದ್ಮಗೊಂಡನು ತನ್ನ ತಂದೆಯ ಇಳಿವಯಸ್ಸಿನಲ್ಲಿಯು ಹೊಲದಲ್ಲಿ ದುಡಿಯುವುದನ್ನು ಕಂಡು ತಂದೆಯ ಬಳಿ ಹೋಗಿ ನೀವು ಇನ್ನು ಮುಂದೆ ವಿಶ್ರಾಂತಿ ಪಡೆದುಕೊಳ್ಳಿ, ಹೊಲದ ಪ್ರತಿಯೊಂದು ಕೆಲಸವನ್ನು ನಾನು ಮಾಡಿ ಮುಗಿಸುತ್ತೇನೆಂದು ಹೇಳುವನು. ಇದನ್ನು ಕೇಳಿದ ಮುದ್ದುಗೊಂಡನಿಗೆ ಎಲ್ಲಿಲ್ಲದ ಆನಂದ ಪದ್ಮಗೊಂಡ ಚಿಕ್ಕವನಾದರೂ, ಅವನ ಜವಾಬ್ದಾರಿ ಕಂಡು, ಅತಿ ಸಂತೋಷದಿಂದ ಒಪ್ಪಿದನು. ಆದರೆ ಒಂದು ಎಚ್ಚರಿಕೆಯ ಮಾತು ಅದೇನೆಂದರೆ ಹೊಲದಲ್ಲಿರುವ ಮೂರು ಕಣ್ಣಿನ ಹುತ್ತಿಗೆ ಮಾತ್ರ ನೇಗಿಲು ಹಾಕಬೇಡ ಎಂದನು. ತಂದೆಯ ಮಾತನ್ನು ಆಲಿಸಿ, ಹೊಲಕ್ಕೆ ಹೋದನು. ಹೊಲದಲ್ಲಿ ಕೆಲಸ ಮಾಡುತ್ತಿರಲು, ಅವರ ತಾಯಿ ಮಗನಿಗಾಗಿ ಬುತ್ತಿಯನ್ನು ತಂದಳು. ಏನಮ್ಮ ಯಾಕ ಇಷ್ಟು ಕಷ್ಟ ಏಕೆ ಇಲ್ಲಿಗೆ ಊಟವ ತಂದೆ ಅನ್ನುವಷ್ಟರಲಿ

"ಅಷ್ಟರೊಳಾಜಯೊಂಡಪಾಯ್ಗೊಂಡಸೋರ್ದರ। ರಟ್ಟುಳಿಗೊಂಡು ಬರುತಲಿ
ಇಷ್ಟು ಪ್ರೀತಿಯದೇಕೆ ಶಿವಪದ್ಮನೋಳ್ ಮತಿ। ಗಟ್ಟತೆ ನಡೆ ಮನೆಗೆನಲು"[೪೮]

ಎಂದು ಗದರಿಸಿದನು. ಅನಿವಾರ್ಯವಾಗಿ ಪದ್ಮಣ್ಣನು (ಶಿವಪದ್ಮ) ನೇಗಿಲನ್ನು ಹೊಡೆಯಲು ಹೋದನು. ಬುತ್ತಿಯನ್ನೆಲ್ಲ ಅಣ್ಣಂದಿರು ಊಟ ಮಾಡಿ ಮುಗಿಸಿದರು. ನೇಗಿಲನ್ನು ಹೊಡೆಯಲು ಹೋಗುವಾಗ ತಾಯಿಯು ಒಂದು ಹುತ್ತವನ್ನು ತೋರಿಸಿ, ಅದಕ್ಕೆ ನೀನು ನೇಗಿಲನ್ನು ತಾಗಿಸಬೇಡವೆಂದಳು.

"ಬಾರೋ ಬಾರೋ ಏಯಪ್ಪ ನನ್ನೊಂದು ಮಾತು ಕೇಳಯ್ಯ
ಪದುಮಾಗೊಂಡನಂದಾರೆ ಒಳ್ಳೆಯ ಒಳ್ಳೇದಂದಾರ
ಹುತ್ತಿನ ಗಡ್ಡಿಗಲ್ಲಪ್ಪ ನೇಗಲ ಹಾಕಲಿ ಬ್ಯಾಡಯ್ಯ
ಇದುವಂದು ಹುತ್ತಿನ ಗಡ್ಡೇನೆ ಹಂಗೆ ಉಳಿಯಲಿ ಅಂದಾಳ"[೪೯]

ಇದಕ್ಕೆ ಒಪ್ಪಿದ ಪದುಮಣ್ಣ, ನೇಗಿಲು ಹೊಡೆಯುತ್ತಾ ಹೋಗುತ್ತಿರಬೇಕಾದರೆ, ಆಕಸ್ಮಿತವಾಗಿ ನೇಗಿಲು ಆ ಹುತ್ತಿಗೆ ತಾಗುತ್ತದೆ.

"ಒಳ್ಳೆದು ಒಳ್ಳೆದು ಅಂದಾನ ನೇಗಲ ಹೊಡಿಯುತಾನೇನ
ಒಂದು ಸಾರಿನಲ್ಲಪ್ಪ ಒಂದೇ ದಂಡಿಗ ಬಿದ್ದಾವ
ಹೋಗಿ ಹೊರಳಿ ಬಂದಾನ ತಿರುಗಿ ನೇಗಿಲ ಹಚ್ಯಾನ
ತಿರುಗಿ ನೇಗಿಲ ಹಚ್ಯಾನ ಹುತ್ತಿನ ನಡುವ ಬಿದ್ದಾವ ಎರಡು ಹೋಳನಾದವ
ಸೀಳಿ ಬೀಳುತಾವೇನೆ ಹುತ್ತಿನ ಗಡ್ಡಿ ಎರಡೇನ
ಹುತ್ತಿನ ಗಡ್ಡಿ ಸೀಳೆಯ್ಯ ಎರಡ ಹೋಳನಾದವ
ಎರಡ ಹೋಳನಾದವೆ ಕುರಿಯ ಬಯಲಿಗ ಬಂದಾವ
ಕುರಿಯ ಬಯಲಿಗ ಬಂದಾವ ಪದಮಣ್ಣ ನೋಡುತಾನೇನ
ಹ್ಯಾಂಗ ಮಾಡಬೇಕಂದಾನೆ ಏನು ಅವೇಳು ಅಂದಾನ"[೫೦]

ಎಂದು ಬೆಂಕಿಯನ್ನು ಹಾಕುತ್ತಾನೆ. ಸುಟ್ಟ ಕುರಿಗಳು ಕರಿಯಾಗುತ್ತವೆ. ಸುಡಲಾರದ ಕುರಿಗಳು ಬಿಳಿಯಾಗುತ್ತವೆ. ಹೀಗೆ ಎಷ್ಟೋ ಬೆಂಕಿ ಹಾರೆದರು. ಅವುಗಳಿಗೆ ಏನು ಆಗದೆ, ಹನ್ನೆರಡು ಎಕರಿ ಹೊಲದ ತುಂಬ ಕುರಿಗಳಾಗುತ್ತವೆ.

ಈ ಕಥೆಯ ಸ್ವರೂಪವು ಚೆನ್ನಕವಿ ಹಾಲುಮತ ಚರಿತ್ರೆದಲ್ಲಿ

"ಗಿರಿಜೆಯು ಕುರಿಗಳ ಧರೆಯ ಸುರಂಗದ।ಮರೆಯೊಳು ಪಿಗಿಸಿ ಮುಚುತ್ತ
ವರಮೂಗುತಿಯನಿಟ್ಟು ಮುದ್ರಿಸಿ ಪೋಗಿದ್ದ। ಮೂರು ಕಣ್ಣಿನ ಹುತ್ತಕ್ಕೆ।
ತೂರಲು ನೇಗಿಲ ಮೆನೆಯಾಗ ಭೂಮಿಯು। ಬಿರಿದು ಇಬ್ಬಾಗವಾಗಲ್ಕೆ॥
ಘೋರವಾದನ್ನಿಯುದ್ಭವಿಸುವ ದಳ್ಳುರಿ ।ಏರಲು ಭೂಮ್ಯಾಕಾಶವನು
ಒರವೇನೇನಲ್ಲಿದ್ದ ಖಗಮೃಗಗಳು ಪೋಗೆ । ಮರಗಿಡಗಳು ಸುಟ್ಟು ಬೀಳೆ॥
ಹರಿಯಲು ನೇಗಿಲಮಿಣಿ ಎತ್ತುವೆವರುತ್ತ । ಒರಗಲ್ಲು ಶಿವಪದ್ಮ ಕಂಡು"[೫೧]

ಇದೆಲ್ಲ ಶಿವನ ಆಟವೆಂದು ನಿಂತಿರಲು, ಬಲದಿಂದ ಕುರಿಗಳ ಹಿಂಡು ಹೊರಬರಲಾರಂಭಿಸಿದವು. ಮುದ್ದಲಿಂಗೇಶ್ವರ ಚರಿತ್ರೆಯಲ್ಲಿ ಪದುಮಣ್ಣನು ಹೊಲದಲ್ಲಿರುವ ಹತ್ತಿಯ ಗಿಡಗಳನ್ನು ಕಸವನ್ನು ಹುತ್ತದ ಮೇಲೆ ಹಾಕಿ ಬೆಂಕಿ ಹಚ್ಚಿದನು. ಬೆಂಕಿಯ ಕಾವು ಏರಲು

"ಹೊರಟಿ ತಾಗಲೆ ಹುತ್ತದಿಂದಲಿ
ಬರಬರೆನ್ನುವ ಸದ್ದು ಕೇಳುತ
ಸರಸರದರಿಂದಲೇನೋ ಹುಕ್ಕಿ ಬರುತಿರಲಾಗದ
ಸರಸರೆನ್ನುವ ಸದ್ದು ಕೇಳುವ

ಬರದಿಕ್ಕಣು ಮುಚ್ಚಿ, ಬಯದಲಿ

ತಿರುಗಿಸರ‍್ರನೇ ಓಡತೊಡಗಿದ ತಿರುಗಿ ನೋಡದೆಯೆ"[೫೨]

ನೋಡು ನೋಡುತ್ತಿದ್ದಂತೆ ನಾನಾ ವರ್ಣದ ಕುರಿಗಳು ಹುತ್ತದಿಂದ ಆಕಾಶ_ಭೂಮಿ ಒಂದಾಗುವ ಹಾಗೆ ಕುರಿಗಳು ತುಂಬಿ ಹೋದವು. ಇದನ್ನು ಕಂಡ ಪದುಮಣ್ಣನು ಭಯಭೀತನಾಗಿ ಶಿವನಲ್ಲಿ ಪ್ರಾರ್ಥಿಸುವನು. ಆಗ ಶಿವ ಪ್ರತ್ಯಕ್ಷನಾಗಿ, ನೀನು ಲೋಕ ಕಲ್ಯಾಣದ ಕಾರ್ಯ ಮಾಡಿರುವೆ, ಯಾವುದೇ ಭಯ ಪಡಬೇಡ. ಈ ಕುರಿಗಳನ್ನೆಲ್ಲಾ ಕಾಪಾಡಿ, ರಕ್ಷಿಸು ಎಂದು ಶಿವ ಆಜ್ಞೆ ಮಾಡುತ್ತಾನೆ. ನಿನ್ನಿಂದ ನಿನ್ನ ವಂಶವಾದ ಹಾಲುಮತ ಉದ್ದಾರವಾಗಬೇಕಾಗಿದೆ. ಇದು ನಿನ್ನ ಕಾಯಕವೆಂದು ಪಾಲಿಸು, ನಿನಗೆ ಮುಕ್ತಿ ದೊರೆಯುವುದು ಹಾಗೆಯೇ ನಿನ್ನ ಏಳನೇ ಜನ್ಮದಲ್ಲಿ 'ಮಹಾಲಿಂಗರಾಯ'ನಾಗಿ ಹುಟ್ಟಿ, ಹಾಲುಮತಕ್ಕೆ ದಾರಿ ದೀಪವಾಗುವೆ ಎಂದು ಶಿವ ಮಾಯವಾಗುವನು. ಶಿವ ನೀಡಿದ ಆಜ್ಞೆಯನ್ನು ತನ್ನ ಕರ್ತವ್ಯವೆಂದುಕೊಂಡು ಪಾಲಿಸುತ್ತಾ ಕುರಿಗಳನ್ನು ಮೇಯಿಸುತ್ತಾ ನಡೆದನು.

೧೬.ಶಿವನ ಮೇಲೆ ದಕ್ಷಬ್ರಹ್ಮನಿಗೆ ಕೋಪ ಬಂದ ಕಥೆ : "ಒಂದು ದಿನ ಪ್ರಯೂಗವೆಂಬ ಸ್ಥಳದಲ್ಲಿ ಎಲ್ಲರ ಸಮ್ಮುಖದಲ್ಲಿ ಯಜ್ಞ ಮಾಡುತ್ತಿರಲು, ಅಲ್ಲಿಗೆ ಸ್ವಲ್ಪ ತಡವಾಗಿ ದಕ್ಷಬ್ರಹ್ಮನು ಬಂದಾಗ, ಎಲ್ಲರೂ ಅವನಿಗೆ ಗೌರವದಿಂದ ಕಂಡರೂ, ಶಿವನು ಅವನನ್ನು ಮಾತನಾಡಿಸದೇ, ಅಸಡ್ಡೆಯಿಂದ ನಡೆದುಕೊಂಡನು. ಇದರಿಂದ ಕೋಪಗೊಂಡ ದಕ್ಷಬ್ರಹ್ಮನು ಶಿವನಿಗೆ ಶಾಪ ಕೊಡುವನು. ಇಂದಿನಿಂದ ಇವನು ದೇವತೆಗಳೊಡನೆ ಸೇರಿ ಭಾಗ ತೆಗೆದುಕೊಳ್ಳಲು ಅರ್ಹನಲ್ಲ. ಮೇಲಾಗಿ ಇವನಿಗೆ ಜ್ಯಾತಿ ವರ್ಣಗಳಿಲ್ಲ. ಸದಾ ಸ್ಮಶಾನವಾಸಿಯಾಗಿರುವನು ಎಂದು ಅನೇಕ ರೀತಿಯಿಂದ ನಿಂದಿಸಿದನು."[೫೩] ಈ ಮಾತುಗಳನ್ನೆಲ್ಲಾ ನಂದಿ ಕೇಳಿಸಿಕೊಂಡು, ಶಿವನಲ್ಲಿಯ ಭಕ್ತಿಯಿಂದಾಗಿ ದಕ್ಷಬ್ರಹ್ಮನನ್ನು ಕೋಪದಿಂದ ಹೀಯಾಳಿಸುತ್ತಾ, ಹೊಡೆಯಲು ಹೋದಾಗ, ಎಲ್ಲರು ಈ ಶುಭಕಾರ್ಯದಲ್ಲಿ ಇಂತಹ ಘಟನೆ ನಡೆಯಬಾರದೆಂದು ಸಮಾಧಾನ ಪಡಿಸಿದರು.

೧೭. ದಾಕ್ಷಾಯಣಿಯು(ಪಾರ್ವತಿ)ದಕ್ಷಬ್ರಹ್ಮನ ಮನೆಗೆ ಯಜ್ಞಕ್ಕೆ ಹೋಗಿ ಅವಮಾನಿತಳಾದ ಕಥೆ: ಮುದ್ದಲಿಂಗೇಶ್ವರ ಪುರಾಣದಲ್ಲಿ ವ್ಯಕ್ತವಾದಂತೆ ಒಂದು ದಿನ ದಕ್ಷಬ್ರಹ್ಮನು ದೇವಾನು ದೇವತೆಗಳನ್ನು ಕಾಣಲು, ಪ್ರಥಮವಾಗಿ ವೈಕುಂಠಕ್ಕೆ ಹೋಗಿ ಲಕ್ಷ್ಮಿಯನ್ನು ನೋಡಿ, ಅವರ ಆತಿಥ್ಯ ಪಡೆದು, ಬ್ರಹ್ಮಗಿರಿಯತ್ತ ಹೋಗಿ ಬ್ರಹ್ಮ-ಸರಸ್ವತಿಯನ್ನು ಕಂಡು, ಕೈಲಾಸಕ್ಕೆ ತೆರಳಿದರು. ಆದರೆ ಅಲ್ಲಿ

"ಪರಶಿವನು ಪಾರ್ವತಿಯೂ ನಾಟ್ಯದೊಳಿ

ಳಿರುತ ತಮ್ಮನೆ ತಾವು ಮರೆತಿ

ಬ್ಬರು ನಾಟ್ಯದೊಳು ಮೈ ಮರೆತು ನರ್ತಿಸುತಿರಲು

ನಾನಾ ಬಗೆಯಿರೊ ನಾಟ್ಯ ರೀತಿಯ
ನಾನಾವಿಧದಿಂದ ನರ್ತಿಸುತಲಿ
ತಾನ ತಾನನಮೆನುತ ಕುಣಿಯುತಿರೆ ಶಿವ ಪಾರ್ವತಿಯು
ನಾನು ಬಂದುದ ನೋಡಿದರು ಸಹ
ನಾನಾ ವಿಧದಲಿ ಕುಣಿಯಿತಿರುವರು
ಜ್ಞಾನವಿಲ್ಲದ ಪರಿಯೆ ಗರ್ವದಿಯನ್ನು ದಿಕ್ಕರಿಸಿ."[೩೪]

ಕೋಪಗೊಂಡು ಅಲ್ಲಿಂದ ತೆರಳುವನು. ಇದನ್ನು ಕಂಡ ನಂದಿಯು ಈ ವಿಷಯವನ್ನು ಶಿವ–ಪಾರ್ವತಿಯರಿಗೆ ತಿಳಿ ಹೇಳುವನು. ಇದರಿಂದ ಪಾರ್ವತಿಯು ಅತೀವ ದುಃಖಕ್ಕೆ ಒಳಗಾಗುವಳು. ಗೃಹಕ್ಕೆ ಬಂದ ದಕ್ಷಬ್ರಹ್ಮನು ಅವಮಾನಿತನಾಗಿ, ಅವರಿಗೂ ಅವಮಾನ ಮಾಡಬೇಕೆಂದು ನಿರ್ಧರಿಸಿದನು. ಆ ಯಜ್ಞಕ್ಕೆ ಎಲ್ಲರನ್ನು ಆಹ್ವಾನಿಸಿದನು. ಆದರೆ ಶಿವ–ಪಾರ್ವತಿಯರನ್ನು ಆಹ್ವಾನಿಸಲಿಲ್ಲ. ನಾರದರ ಮೂಲಕ ಈ ವಿಷಯ ಪಾರ್ವತಿಗೆ ತಿಳಿದಾಗ, ಅವಳು ಆತುರದಿಂದ ಶಿವನಲ್ಲಿಗೆ ಬಂದು ನಮ್ಮ ತಂದೆ ಮಾಡಿರುವುದು ತಪ್ಪು. ಅದಕ್ಕೆ ಕ್ಷಮೆ ಕೇಳುವೆ ಯಜ್ಞಕ್ಕೆ ಹೋಗೋಣ ಬನ್ನಿ ಎಂದಳು.

"ಪರಶಿವ ಪಾರ್ವತಿಯರನು ಕರೆಯ
ದಿರಲದ ಕೇಳಿ ಪಾರ್ವತಿಯು ನಾ
ನೊರಡುವೆನು ಅಪ್ಪ ಮಾಡುತಿರುವ ಯಜ್ಞ ಕೆನಲದಕೆ
ಪರಶಿವನು ಬೇಡ ಪಾರ್ವತಿ ನೀ
ನೊರಡುವುದು ಬೇಡ ಹೋದೆಯಾದ
ರಿರದು ನಿನಗಲ್ಲಿ ಸ್ಥಾನವೆಂದು ಪರಿಪರಿ ಲೇಳಿದರು"[೩೫]

ಕೇಳದ ಪಾರ್ವತಿಯು ಯಜ್ಞಕ್ಕೆ ಹೋದಳು. ಆದರೆ ಅಲ್ಲಿ ದಕ್ಷಬ್ರಹ್ಮನು ಅವಳ ಹತ್ತಿರ ಯಾರೂ ಮಾತನಾಡದಂತೆ ಹೇಳಿದರು. ಹಾಗೆಯೇ ಅವಳು ಯಜ್ಞಕ್ಕೆ ಬಂದಾಗ ಅವಳನ್ನು ಯಾರೂ ಮಾತನಾಡಿಸದೇ ಅವಮಾನಿಸಿದರು. ಆಗ ಪಾರ್ವತಿಯು ನನ್ನ ಪತಿರಾಯ ಹೇಳಿದ್ದು ಸರಿ, ಕರೆಯದ ಮನೆಗೆ ಹೋಗಬಾರದು, ಈಗ ಮತ್ತೆ ನನ್ನ ಮುಖವನ್ನು ಶಿವನಿಗೆ ಹೇಗೆ ತೋರಿಸಲಿ ಎಂದು ಮನದಲ್ಲಿ ನೆನೆದು

"ಬುಡು–ಬುಡುಕೆಯವ ನಿಗಗ್ರಪೂಜೆ
ಯಿಡುವುದು ಸಾಧ್ಯವಿಲ್ಲೆನುತ ಶಿವ
ನಡಿಗಡಿಗೆ ಬಯ್ಯುವುದನ್ನು ಕೇಳಿ ಪಾರ್ವತಿಯನ್ನುನಾ

ನಡೆವುದದೇಗೆ ಇಟ್ಟ ಮುಖ ಶಿವ
ನಡೆಗೆನುತ ಯಜ್ಞ ಕುಂಡವದರೊಳ
ಗಡೆಗೆ ಹಾರಿದೊಡನೆಲ್ಲಾಹಾಖಾರ ಗೈದಿರಲು"[೫೬]

ಪಾರ್ವತಿಯು ಯಜ್ಞಕುಂಡದ ಒಳಗೆ ಹಾರಿ ಪ್ರಾಣ ಬಿಟ್ಟಳು.

೧೮. ಯಜ್ಞಕುಂಡದಲ್ಲಿ ಹಾರಿದ ಪಾರ್ವತಿಗೆ ಮರುಜನ್ಮ : ಅವಮಾನಿತಳಾದ ಪಾರ್ವತಿಯು ಯಜ್ಞಕುಂಡದಲ್ಲಿ ಹಾರಿದಳು. ಆಗ ಶಿವನು ವೀರಭದ್ರನನ್ನು ಕರೆಸಿ, ದಕ್ಷಬ್ರಹ್ಮನ ತಲೆಯನ್ನು (ರುಂಡ) ಕತ್ತರಿಸಿ, ಯಜ್ಞಕ್ಕೆ ಹಾಕಿ, ಮತ್ತೆ ದೇವಾನು ದೇವತೆಗಳ ಮಾತಿಗೆ ಶಿವನು ದಕ್ಷಬ್ರಹ್ಮನಿಗೆ ಜೀವ ನೀಡಿದನು. ಆಗ ಎಲ್ಲರೂ ಪಾರ್ವತಿಯ ವಿಷಯ ಕೇಳಿದಾಗ, ಶಿವನು

"ವಿನಯದಲಿ ವಂದಿಸುತ ಅರ್ಪಿಸು
ವೆನಿದೊ ಪಾರ್ವತಿಯ ಯಜ್ಞಕುಂಡ
ವೆನಿದೊ ಪಾರ್ವತಿಯ ಯಜ್ಞಕುಂಡ
ವನೆಗರಿದಾಗ ರಕ್ಷಿಸಿ ಬಚ್ಚಿಟ್ಟಿದ್ದೆ ಪಾರ್ವತಿಯ"[೫೭]

ಹೀಗೆ ಪಾರ್ವತಿಯನ್ನು ನಾನು ದಕ್ಷನಿಗೆ ಬುದ್ಧಿ ಕಲಿಸಲು ಬಚ್ಚಿಟ್ಟಿದ್ದೆ ಎಂದು ಹೇಳಿದನು. ಆದರೆ ಈ ಕಥೆಯು ಹಾಲುಮತ ಶ್ರೀ ಬೀರಲಿಂಗೇಶ್ವರರ ಮಹಾಪುರಾಣದಲ್ಲಿ ಅಗ್ನಿಗೆ ಆಹುತಿಯಾದ ಪಾರ್ವತಿಯು ಭೂಲೋಕದಲ್ಲಿ ಹಿಮಾಚಲನ ಪತ್ನಿ ಮೇನಕೆಯ ಮಗಳಾಗಿ ಜನಿಸುವಳು.

೧೯. ಮಾಳಿಂಗರಾಯರ ಕುಟುಂಬಕ್ಕೆ ಕೌಳೇಶ್ವರಿಯ ಶಾಪದ ಕಥೆ : ಮಾಳಿಂಗರಾಯ–ಜಕ್ಕಪ್ಪ ರಾಯರು ಹುಟ್ಟಿದ ಮೇಲೆ ತುಕ್ಕಪ್ಪರಾಯ ಮತ್ತು ಸೋಮರಾಯರು ತುಂಬಾ ಸಂತೋಷದಿಂದ ಜೀವಿಸತೊಡಗಿದರು. ತುಕ್ಕಪ್ಪರಾಯ ರಾಜ್ಯಭಾರ ಮಾಡುತ್ತಿದ್ದ, ಸೋಮರಾಯ ಕುರಿ, ಆಕಳುಗಳನ್ನು ನೋಡಿಕೊಳ್ಳುತ್ತಿದ್ದರು. ಒಂದು ದಿನ ಸೋಮರಾಯನು ಕುರಿಗಳನ್ನು ಆಕಳುಗಳನ್ನು ರಾತ್ರಿಯಲ್ಲಿ ಅವುಗಳ ಸ್ಥಳಕ್ಕೆ ಬಿಟ್ಟು ಅವನು ಹೊಲದಲ್ಲಿಯೇ ಮಲಗಿಕೊಂಡನು. ರಾತ್ರಿಯ ಸರೊತ್ತಿನಲ್ಲಿ ಇದ್ದಕ್ಕಿದಂತೆ ಕೋಣಗಳು ಓಡಿ ಬಂದು, ಹೊಲವನ್ನೇ ನಾಶಮಾಡಿ, ಕುರಿಗಳ ಹಿಂಡನ್ನು ಚಲ್ಲಾಪಿಲ್ಲಿ ಮಾಡಿದವು. ಸೋಮರಾಯ ಮತ್ತು ಆಳುಗಳು ಅವುಗಳನ್ನು ಓಡಿಸಿದರು. ಹಾಗೆಯೇ ಇವುಗಳನ್ನು ಹಾಗೆಯೇ ಬಿಟ್ಟರೆ ಮತ್ತೆ ಬರುವವು ಅದಕ್ಕೆ ಇವುಗಳ ಒಡೆಯನ ಹತ್ತಿರ ಹೋಗಿ ಮಾತನಾಡಬೇಕೆಂದು ಅವುಗಳ ಹಿಂದೆ ಹೋದರೆ, ಒಂದು ಬೃಹತ್ ಗುಹೆಯಿತ್ತು. ಆ ಗುಹೆಯಿಂದ ಏನೇನೊ ಶಬ್ದ ಬರುವುದು ಕಂಡು ಸೋಮರಾಯ ಏನಿರುವುದು ಎಂದು ಒಳಗಡೆ ಹೋಗಿ ನೋಡಿದರೆ, ಗೌಳಿಗ ಎಂಬ ಕುಲವು ಕೌಳೇಶ್ವರಿ ದೇವಿಗೆ ಬಲಿಕೊಡುವ

ಹಾಗೂ ವರ್ಷವಿಡಿ ದುಡಿದು ಸಂಪತ್ತನ್ನು ದೇವಿಯ ಮುಂದೆ ಹಾಕಿ ಪೂಜಿಸುವುದನ್ನು ಕಂಡು ಸೋಮರಾಯ, ನೀವೆಲ್ಲ ಎಂತಹ ದೊಡ್ಡ ಅಪರಾಧ ಮಾಡುತ್ತಿದ್ದೀರಾ, ರಾಜ್ಯಕ್ಕೆ ತೆರಿಗೆ ಕಟ್ಟದೇ, ನಿಮ್ಮ ಸಂಪತ್ತನ್ನೆಲ್ಲಾ, ಈ ಕಲ್ಲಿನ ಮುಂದೆ ಹಾಕಿ, ನಾಟಕವಾಡುತ್ತಿದ್ದೀರ ಎಂದು ಆರ್ಭಟಿಸಿದನು. ಸೋಮರಾಯನಿಗೆ ಗೌಳಿಗರೆಲ್ಲರು ಇದು ನಮ್ಮ ಸಂಪ್ರದಾಯ, ಯಾರಿಗೂ ತಿಳಿಯದಂತೆ ಈ ಪೂಜೆ ಮಾಡಬೇಕು. ಇಲ್ಲದಿದ್ದರೆ, ದೇವಿಯು ಕೋಪಗೊಂಡು, ಬರಗಾಲ ಬರುವುದು, ದಯಮಾಡಿ ಅರ್ಥಮಾಡಿಕೊಳ್ಳಿ ಎಂದರು. ಅರ್ಥಮಾಡಿಕೊಳ್ಳದೆ ದೇವಿಯ ಮುಂದೆ ಇದ್ದ ಸಂಪತ್ತನ್ನೆಲ್ಲ ಸೇವಕರಿಗೆ ಹೇಳಿ ರಾಜನ ಸಂಪತ್ತಿಗೆ ಸೇರಿಸಿಕೊಂಡರು. ಯಾವತ್ತು ಗೌಳಿಗರ ಸಂಪ್ರದಾಯಕ್ಕೆ ಗೌರವ ನೀಡಲಿಲ್ಲವೋ, ಯಾವತ್ತು ಅವರ ಸಂಪತ್ತನ್ನು ತಂದು ರಾಜನ ಸಂಪತ್ತಿಗೆ ವಿಲಿನಗೊಳಿಸಿದರೋ, ಅವತ್ತಿನಿಂದ ತುಕ್ಕಪ್ಪರಾಯನ ರಾಜ್ಯಕ್ಕೆ ಬರಗಾಲ ಬಂದಿತು. ತಿನ್ನಲು, ಕುಡಿಯಲು, ನೀರು, ಆಹಾರ ಇಲ್ಲದಂತಾಯಿತು. ದನ, ಕರು, ಕುರಿ, ಮೇಕೆ, ಆಕಳು ಎಲ್ಲವು ಆಹಾರವಿಲ್ಲದೆ ನೀರಿಲ್ಲದೆ ಸತ್ತು ಹೊದವು. ಎಲ್ಲರು ಬರಗಾಲ ತಾಳಲಾಗದೆ ಬೇರೆ ಕಡೆ ವಲಸೆಹೋದರು. ರಾಜ್ಯದ ಸಂಪತ್ತೆಲ್ಲ ಕರಗಿ ಹೋಯಿತು. ತುಕ್ಕಪ್ಪರಾಯನ ಕುಟುಂಬವು ಉಳಿದ ಆಕಳು, ಕುರಿ-ಮೇಕೆಗಳನ್ನು ಹೊಡೆದುಕೊಂಡು ಅನುಕೂಲವಾಗುವ ಜಾಗಕ್ಕೆ ಹೋಗೋಣವೆಂದು ನಿರ್ಧರಿಸಿ, ರಾಜ್ಯವನ್ನು ತೊರೆದರು. ಇದಕ್ಕೆಲ್ಲ ಕೌಳೇಶ್ವರಿಯ ಶಾಪವೇ ಆಗಿದೆ.

೨೦. ತ್ರಿಜನ ಗಂಧರ್ವರಿಗೆ ಶಾಪ ನೀಡಿದ ಕಥೆ

"ಒಂದು ದಿನ ತ್ರಿಪುರಾಂತಕಂ ಗರುಡಗಂಧರ್ವ
ನಂದಿನಾರದ ಭೃಂಗಿ ಮುನಿಗಣರ್ವೆರಸಿಮುದ
ದಿಂದಿರಲ್ಕೋರ್ವ ಮುನಿಯಂ ಕಂಡು ಹಾಸ್ಯಗೈದರು ತ್ರಿಜನಗಂಧರ್ವರು
ದಂದುಗದಿ ಕೂಡು ತಾ ಮುನಿವರನವರಿಗೆ ಭರ
ದಿಂದ ಮರ್ತ್ಯಸಕ್ಕೆ ಪೋಗಿ ಕಷ್ಟದಿಂದಲಿ ಬಾಳಿ
ರೆಂದು ಕಡುಗೋಪದಿಂದುರತರದ ಶಾಪಮಂ ಕೊಟ್ಟ ನತ್ಯವಸದೊಳು"[೫೮]

ಹೀಗೆ ಶಿವನ ಒಡ್ಡೋಲಗದಲ್ಲಿ ಋಷಿ ಮುನಿಗಳು, ಗಂಧರ್ವರು, ನಂದಿ, ನಾರದರು ಮಹಾಮುನಿಯನ್ನು ನೋಡಿ ಕೇಕೆ ಹಾಕಿ ನಗಲು, ಕೋಪಗೊಂಡ ಮುನಿಯು ಮೂವರಿಗೆ "ಭೂಲೋಕದಲ್ಲಿ ಒಬ್ಬ ಗಂಧರ್ವ ಬಂಕಾಪುರದಲ್ಲಿರುವ ಕುದಯ ರಕ್ಕಸಿಯ ವಂಶದಲ್ಲಿ ರಕ್ಕಸಿಯಾಗಿ ಹುಟ್ಟಲಿ, ಇನ್ನೋರ್ವ ಕಾಗೆಯಾಗಿ ಜನ್ಮವೆತ್ತಿ ಸದಾ ಸಂಚರಿಸುತ್ತ ಬಾಳಲಿ ಮತ್ತೋರ್ವನು ಕಾಂಚಾಲ ಮರವಾಗಿ ಬೆಳೆಯಲಿ"[೫೯] ಎಂದು ಶಪಿಸಿದನು. ಮುನಿಯ

ಶಾಪದಂತೆ ಗಂಧರ್ವರು ಭೂ ಲೋಕದಲ್ಲಿ ರಕ್ಕಸಿಯಾಗಿ, ಕಾಗೆಯಾಗಿ, ಮರವಾಗಿ ಹುಟ್ಟಿ ಬೆಳೆದರು.

೨೧. ಕಪ್ಪೆ ಕಲಗದ ನೀರು ಹಾಗೂ ಹುಳು ಮುಟ್ಟದ ಹೂ ತಂದ ಕಥೆ: ಬೀರೇಶನು ಮಾಳಿಂಗರಾಯನ ಸೇವಾ ಮನೋಭಾವ ಮತ್ತು ಪ್ರಭಾವನವನು ಜಗತ್ತಿಗೆ ತೋರಿಸಲು ಗುರುವು 'ಕಪ್ಪೆ ಕಲಕದ ಜಲ, ಹುಳ ಮುಟ್ಟದ ಪುಷ್ಪಗಳನ್ನು ತಂದು ಪೂಜಿಸಬೇಕೆಂದು ಆಜ್ಞೆ ಮಾಡಿದನು' ಆಗ ಮಾಳಿಂಗರಾಯನು ನಿನ್ನ ದಯೆ ಇದ್ದರೆ ಸಾಕು ನಾನು ಜಯವಾಗಿ ಬರುತ್ತೇನೆ. ಆಗ ಬೀರಣ್ಣ ನಿನಗೆ ಏನು ಬೇಕು ಕೇಳು ಎಂದರೆ,

"ಬಾರೊ ಬಾರೊ ಏ ಗುರುವನಲ್ಲಿ ಇಟ್ಟಲ್ಲಿ ಇರಬೇಕಂದಾನ
ಇಟ್ಟಲ್ಲಿ ಇರಬೇಕಂದಾನ ಗುರುವಿನ ಕರದಲ್ಲಿ ಬರಬೇಕನಂದಾನ
ನಿಂತಲ್ಲೆ ನೆರಳಾಗೊ ಗುರುವ ಬೆನ್ನಹಿಂದ ಬರುವಲಿಬೇಕಲ್ಲ
ಹಗ್ಗ ಇಲ್ಲದ ಎಡಗುಡಿ ಗುರುವ ನೀನೆ ಬಿಡಸಲಿಲೇಕಲ್ಲ
ಎಂತುಯಾಳ್ಯಾ ಬಂದರ ಗುರುವ ಅಂತರಲೆ ಹೋಳ ಮಾಡಯ್ಯ
ಒಳ್ಳೆಯಾಳಾ ಬಂದರ ಗುರವ ಬಳ್ಳಿಲಿ ಹೋಳ ಮಾಡಯ್ಯ
ಗಾಂಜಿಧುಂದಿನೊಳಗ ಗುರುವ ಒಳ್ಳೆದು ಒಳ್ಳೇದಂದಾನ
ಶಿವಗೇನಿ ಮಾಳಿಂಗರಾಯನೋ ಅಲ್ಲಿ ಸಿರಿಗಂಧ ಪಾದ ಬಿಟ್ಟಾನೋ"[೨೦]

ಗುರುವಿಗೆ ನೀನು ಇಟ್ಟಲ್ಲಿ ಇರಬೇಕು. ಕರದಲ್ಲಿ ಬರಬೇಕು, ನಿಂತಲ್ಲಿ ನೆರಳಾಗಬೇಕು, ಕುಂತಲ್ಲಿ ಬೆನ್ನಾಗಬೇಕು, ಉಳಗರನಾಗಿ ಬೆನ್ನಿಂದ ಬರಬೇಕು. ಎಂತಹ ವೇಳೆ ಬಂದರೂ ಅಂತರಲೆ ಹೋಳಾಗಬೇಕು ಎಂದು ಬೇಡಿಕೊಂಡನು. ಗುರುವು ಗಾಡಿಯ ದುಂಧಿನಲ್ಲಿ ಭಾಷೆ ಕೊಡುತ್ತಾನೆ.

ಹೀಗೆ ಭಾಷೆ ಪಡೆದ ಮಾಳಿಂಗರಾಯ, ಮನೆಗೆ ಬಂದು ತಾಯಿಯ ಆಶೀರ್ವದ ಪಡೆದು, ನೀರು-ಹೂ ತರಲು ಹೊರಟನು ಹೋಗುವ ಮಧ್ಯದಲ್ಲಿ ಬೀರಪ್ಪನು ಮಾಳಿಂಗರಾಯನ ಭಕ್ತಿ ಪರೀಕ್ಷಿಸಲು ಮುಂದಾಗುವನು. "ಎಲೋ ಮೂರ್ಖ, ಮಹಾ ಮಹಿಮರಿಂದ ಆಗದ ಕಾರ್ಯವು ನಿನ್ನಿಂದ ಸಾಧ್ಯವೇ? ನಿನ್ನನು ಕೊಲ್ಲುವುದಕ್ಕಾಗಿ ನಿನ್ನ ಗುರುವು ಹಂಚಿಕೆ ಹೂಡಿದ್ದಾನೆ. ಮರುಳನಂತೆ ಹೋಗಿ, ಸುಮ್ಮ ಸುಮ್ಮನೆ ಅಲ್ಲಿ ಸಾಯಬೇಡ, ಇಲ್ಲಿಂದಲೇ ತಿರುಗಿ ಹೋಗು"[೨೧] ಎಂಬ ಉಪದೇಶದ ನುಡಿಗಳನ್ನಾಡಿದನು. ಆದರೆ ಮಾಳಿಂಗರಾಯನು ಯಾವುದನ್ನೂ ಲೆಕ್ಕಿಸದೇ ಮುಂದೆ ಸಾಗುವನು. ಆದರೆ ಬೀರಣ್ಣನು ಮತ್ತೆ ತಿರುಗಿಬಂದು ಮಾಳಿಂಗರಾಯನು ಹೋಗುವ ದಾರಿಗೆ.

"ಮಾಳ ಹೋಗ ದಾರಿಗೋನಲ್ಲಿ ರಿಕ್ಕತೇಳ ಮಾಡ್ಯಾನ
ರಿಕ್ಕತೇಳ ಮಾಡ್ಯಾನೊನಲ್ಲಿ ಶಿವಗೇನಿ ಮಾಳಿಂಗರಾಯನ
ಶಿವಗೇನಿ ಮಾಳಿಂಗರಾಯನೊ ರಿಕ್ಕುತೇಳ್ ನೋಡ್ಯಾನೋ
ರಿಕ್ಕತೇಳ ನೋಡ್ಯಾನೇನಲ್ಲಿ ಗುರುವಿನ ಉಂಗುರಂದಾನೋ
ಏ ನಿನ್ನ ಗುರುವಿನ ಸಿಕ್ಕೇದ ಉಂಗುರ ಇಲ್ಲಿಗ್ಯಾಕ ಬಂದಾವಂದಾಗ
ಕೈಯಾಗ ಹಿಡಿಯುತಾನೇನೋನಲ್ಲಿ ಬೆರಳಲ್ಲಿ ಇಡುವುತಾನೇನ
ಬೆರಳಲಿ ಬಳಸುತಾನೇನೋನಲ್ಲಿ ರಾಯಿಮಾರಗಿ ಹಡಿದಾನ"[೨]

ಹೀಗೆ ಬೀರಪ್ಪನು ಮಾಳಿಂಗನನ್ನು ಕ್ಷಣ–ಕ್ಷಣಕ್ಕೂ ಪರೀಕ್ಷಿಸುತ್ತಾ, ಹೋಗುವನು, ಕೊನೆಗೆ ಗುರುವೇ ಸೋತು ಸುಮ್ಮನಾದನು. ಮಾಳಿಂಗರಾಯನು ದಾರಿಸಾಗುತ ಪಾಂಡವಪುರ ಕೋಟೆಗೆ ಬರುತ್ತಾನೆ. ಅಲ್ಲೊಂದು ಬೃಹತ್ತಾಕಾರದ ಅರಮನೆ ಇರುತ್ತದೆ. ಅಲ್ಲಿಗೆ ಬಂದ ಮಾಳಿಂಗ ಬಾಗಿಲಿಗೆ ಭಂಡಾರವನ್ನು ಎರಚಿದಾಗ, ಬಾಗಿಲು ತೆರೆದುಕೊಳ್ಳುತ್ತದೆ. ಹಾಗೆ ಮುಂದೆ ಸಾಗಿದರೆ, ಪುಷ್ಪಗಳ ತೋಟ ದೊರೆಯುವುದು, ಅದರೊಂದು ಹುಳುವು ಇರುವುದಿಲ್ಲ, ಆ ಪುಷ್ಪಗಳನ್ನೆಲ್ಲ ತೆಗೆದುಕೊಂಡು, ನಾಗರಬಾವಿಯ ನೀರು ತರಲು ಮುಂದಾಗುವನು. ಮುಂದೆ ಹೋಗುತ್ತಿದ್ದಂತೆ, ಅಲ್ಲೊಂದು ನಾಗ ಇರುವುದು, ಇವನ ಕಾಲಗೆಜ್ಜೆಯಿಂದ ಎಚ್ಚರಗೊಂಡು ಎದುರಿಗೆ ಬಂದಿತು. ಈ ನಾಗನಿಗೆ ಕಣ್ಣು ಕಾಣುವುದಿಲ್ಲ. ಅದು ಕುರುಡು ನೀನು ನನಗೆ ಕಣ್ಣು ಬರುವಂತೆ ಮಾಡಿದರೆ ಬಾವಿಗೆ ಹೋಗಲು ಬಿಡುವೆನು ಎಂದು ಹೇಳಿತು. ಮಾಳಪ್ಪನು ಒಪ್ಪಿ ನಾಗನಿಗೆ

"ಏಳ ಸುಳ್ಳಿ ಬಿಚ್ಚಪ್ಪ ಮಸ್ತಕ ಮ್ಯಾಲ ಕೈಯಪ್ಪ
ಕಾರಿ ಕಂಟೀಲಿ ಹಾಯಪ್ಪ ಬಾರಿ ಕಂಟೀಲಿ ಹಾಯಪ್ಪ
ಬಾರಿಕಂಟೀಲಿ ಬಾರಪ್ಪ ಕಲ್ಲ ಫಡಕೀಲಿ ಬಾರಯ್ಯ"[೬೩]

ಹೀಗೆ ನಾಗರ ಮಾಡಲು ಕಣ್ಣುಗಳು ಬಂದವು. ಕಣ್ಣು ಬಂದ ತಕ್ಷಣ ಹಾವು ಕಡಿಯಲು ಹೋದಾಗ, ಮಾಳಿಂಗರಾಯ ಭಂಡಾರ ಎರಚಿ, ನಾಲಿಗೆ ಎರಡು ಮಾಡಿದ, ಅಂದಿನಿಂದ ನಾಗರಹಾವಿಗೆ ನಾಲಿಗೆ ಎರಡಾಗುತ್ತವೆ. ಆಗ ಬಾವಿಗೆ ಹೋಗಲು ದಾರಿ ಕೊಟ್ಟಿತು. ನಾಳಿಂಗ ನೀರು ತೆಗೆದುಕೊಂಡು ಹೊರಬಂದನು. ಬಂದಿದ್ದೇ ಗುರುವಿನ ಬಳಿ ಹೋದನು. ಆದರೆ ಬೀರಪ್ಪ ಅಲ್ಲಿ ಇರಲಿಲ್ಲ. ಗುರುವನ್ನು ಹುಡುಕುತ್ತ ಹೊರಟನು, ಹೀಗೆ ಬರುವ ಮಾಳಿಂಗರಾಯನನ್ನು ಕಂಡು ಹಾವಾಗಿ ಹುತ್ತದಲ್ಲಿ ಹೋದನು. ಆಗ ಮಾಳಿಂಗ ಕಂಬಳಿ ಬೀಸಿ ಎಷ್ಟು ಕರೆದರು ಬರುವುದಿಲ್ಲ. ಇದರಿಂದ ಬೇಸತ್ತ ಮಾಳಿಂಗ "ಗುರುವೇ, ನನ್ನಿಂದ ಸೇವೆ ಮಾಡಿಸಿಕೊಳ್ಳುವ ಇಚ್ಛೆ ನಿಮಗೆ ಇರದಿದ್ದರೆ, ನಾನು ಬದುಕಿ ಫಲವೇನು?

ಎಂದೆನ್ನುತ್ತ ಕೈಯಲ್ಲಿದ್ದ ಕತ್ತಿಯಿಂದ ತನ್ನ ಶರೀರದಲ್ಲಿ ಇರಿದುಕೊಂಡು, ಪ್ರಾಣಾರ್ಪಣೆ ಮಾಡಿಕೊಳ್ಳಲು ಸಿದ್ಧನಾದನು. ಶಿಷ್ಯನ ನಿಜ ಭಕ್ತಿಯನ್ನು ಕಂಡು, ಗುರುಗಳು ಹುತ್ತದಿಂದ ತಕ್ಷಣವೇ ಹೊರಬಂದರು. ಆಗ ವೀರ ಮಾಳಿಂಗರಾಯನು ಗುರುಗಳ ಪಾದಾರವಿಂದಗಳನ್ನು ಕಪ್ಪೆ ಕಲಕದ ಜಲದಿಂದ ತೊಳೆದು ಮತ್ತು ಹುಳ ಮುಟ್ಟದ ಪುಷ್ಪಗಳಿಂದ ಮಾಡಿಸಿ, ಧೂಪ ಹಾಕಿ, ಕರ್ಪೂರ ಬೆಳಗಿ ಜಯಕಾರ ಹಾಕಿದನು"[೬೪]

೨೨. ಶಿಷ್ಯನನ್ನು ಪಡೆದುಕೊಳ್ಳಲು ತಪ್ಪಸ್ಸು ಮಾಡಿದ ಕಥೆ : ಬೀರದೇವರು ಮನದಲ್ಲಿ ಯೋಚಿಸುತ್ತಿದ್ದನು, ಇನ್ನು ನನಗೊಬ್ಬ ಶಿಷ್ಯನಿದ್ದರೆ ಹಲವು ದೇವತಾ ಕಾರ್ಯಗಳನ್ನು ಮಾಡಬಹುದು, ಅನೇಕ ಸೇವೆಗಳನ್ನು ಮಾಡುತ್ತೇವೆ. ಎಂದು ಮನದಲ್ಲಿ ಯೋಚಿಸಿ, ಶಿಷ್ಯನಿಗಾಗಿ, ಶಿವನಲ್ಲಿ ಭಕ್ತಿಯಿಂದ ತಪಸ್ಸನ್ನು ಮಾಡಲು ಆರಂಭಗೊಂಡನು. ತಪಸ್ಸನ್ನು ಮಾಡುತ್ತಿರಲು, ಅವನ ದೇಹದ ಮೇಲೆ ಹುತ್ತವೇ ಬೆಳೆದರು, ಯಾವುದೇ ಪರಿವೆ ಇಲ್ಲದೆ ತಪದಲ್ಲಿ ಕುಳಿತನು. ದಟ್ಟರಣ್ಯದಲ್ಲಿ ಸರ್ಪಗಳು, ಸಿಂಹಗಳು, ಹುಲಿಗಳು ಮುಂತಾದ ಕ್ರೂರ ಪ್ರಾಣಿಗಳು ಇವನ ಭಕ್ತಿಯನ್ನು ನೋಡಿ, ಅವನ ಸುತ್ತಲೂ ಕುಳಿತು ಅವುಗಳು ಸಹ ಧ್ಯಾನದಲ್ಲಿ ಮೈಮರೆಯುತ್ತಿದ್ದವು. ಬೀರೇಶ್ವರನು ಯಾರಿಗೂ ಕಾಣದೆ ತನ್ನ ದೇಹದ ಪರಿವೆ ಇಲ್ಲದೆ, ಅವನು ತಪಸ್ಸು ಮಾಡುತ್ತಿದ್ದರೆ, ಕಾಮಧೇನು ಪ್ರತಿನಿತ್ಯವು ಬಂದು ಬೀರೇಶ್ವರನು ಇರುವ ಹುತ್ತದಲ್ಲಿ ಹಾಲಗರೆಯುತ್ತಿತ್ತು. ಆದರೆ ಬೀರೇಶ್ವರನಿಗೆ ಹಾಲಿನ ಹರಿವೆ ಇಲ್ಲದೆ ದ್ಯಾನಿಸುತ್ತಿದ್ದನು. ಹೀಗೆ ಸುಮಾರು ಹನ್ನೆರಡು ವರುಷಗಳು ತಪಸ್ಸನ್ನು ಮಾಡಿದನು. ಬೀರೇಶನು ಒಂದು ದಿನ ಭಾವೋದ್ರೇಕನಾಗಿ 'ಓಂ ನಮಃ ಶಿವಾಯ' ಎಂದು ಕಣ್ಣು ತೆರೆದಾಗ, ಕಣ್ಣಿನ ಹನಿಯೂ, ಕೈಲಾಸದಲ್ಲಿನ ಪಾರ್ವತಿಯ ತೊಡೆಯ ಮೇಲೆ ಬಿದ್ದಿತ್ತು. ಪಾರ್ವತಿಯು ಮಳೆಗಾಲವಲ್ಲ, ಮೋಡವಿಲ್ಲ, ಆದರೂ ಹನಿ ಬಿದ್ದಿದೆಯಲ್ಲ ಎಂದು ನೋಡಿಕೊಂಡರೆ, ಹನಿ ಬಿದ್ದ ಜಾಗದಲ್ಲಿ ಉರುಳೆಯೇ ಹುಟ್ಟಿದೆ. ಇದನ್ನು ಶಿವನಿಗೆ ತಿಳಿಹೇಳಿದಳು. ಆಗ ಶಿವನು ಬೀರೇಶನು ಹನ್ನೆರಡು ವರುಷಗಳಿಂದ ತಪಸ್ಸಿಗೆ ಕುಳಿತಿರುವನು. ಅವನ ಕಣ್ಣ ಹನಿ ನಿನ್ನ ಮೇಲೆ ಬಿದ್ದಿದೆ. ಈಗ ನಾನು ಅವನ ಬಳಿ ಹೋಗಿ ವರ ನೀಡಬೇಕೆಂದು ಹೇಳಿದನು. ಪಾರ್ವತಿಯು ಆನಂದದಿಂದ ಇಂತಹ ಭಕ್ತನನ್ನು ಕಾಣಲು, ನಾನು ಬರುತ್ತೇನೆಂದು ಹೇಳಿ ದಂಪತಿಗಳಿಬ್ಬರೂ, ಭೂಲೋಕಕ್ಕೆ ಬಂದು ಬೀರೇಶನ ಬಳಿಗೆ ಬಂದರು. ಮಗು ಬೀರೇಶ ಕಣ್ಣು ತೆರೆ, ಏಕೆ ಇಷ್ಟು ವರುಷ ಘನಘೋರ ತಪ್ಪಸ್ಸು ಮಾಡಿರುವೆ ಎಂದು ಕೇಳಿದರು. ಮುಂದಿನ ಸದ್ಭಕ್ತಿಗಾಗಿ ಸತ್‌ಕಾರ್ಯಕ್ಕಾಗಿ ನನಗೊಬ್ಬ ಶಿಷ್ಯನು ಬೇಕಾಗಿದ್ದಾನೆ. ಅನನನ್ನು ನನಗೆ ಕರುಣಿಸಿ ಎಂದು ಕೇಳಿದನು. ಅದಕ್ಕೆ ತಪಸ್ಸು ಎಂದರು. ಅದರೊಂದಿಗೆ ಭವಿಷ್ಯದ ಭವಿಷ್ಯವಾಣಿಯನ್ನು ನುಡಿದರು.

೨೩. ಸತ್ತ ಮಗುವನ್ನು ಬಾಲಕ ಮಹಾಲಿಂಗರಾಯ ಬದುಕಿಸಿದ ಕಥೆ : ಒಂದು ದಿನ ಬಾಲಕ ಜಕ್ಕಪ್ಪ ಮತ್ತು ಮಹಾಲಿಂಗರಾಯರು ಸಮವಯಸ್ಕ ಬಾಲಕರೊಂದಿಗೆ ಆಡುತ್ತಿರಲು ಎಲ್ಲಿಂದಲೋ ಒಂದು ವಿಷ ಸರ್ಪವು ಬಂದು ಒಬ್ಬ ಹುಡುಗನನ್ನು ಕಚ್ಚಿತ್ತು. ಕಚ್ಚಿ ಅದು ಹೋಯಿತು. ಆ ಹುಡುಗನು ಬಾಯಿಯಲ್ಲಿ ಬುರುಗು ಬಂದು ಸತ್ತುಹೋದನು. ಎಲ್ಲ ಹುಡುಗರು ಭಯದಿಂದಾಗಿ ಓಡಿ ಹೋದರು. ಆದರೆ ಮಹಾಲಿಂಗರಾಯನು, ಧೈರ್ಯದಿಂದ ಸರ್ಪವನ್ನು ಹುಡುಕಿ, ವಿಷಕಾರುವ ಸರ್ಪವನ್ನು ಕೈಯಲ್ಲಿ ಹಿಡಿದು, ಸರ್ಪಕ್ಕೆ ನೀನು ಅಮಾಯಕನಾದ ಬಾಲಕನ ಮೇಲೆ ವಿಷ ಪ್ರಹಾರ ಮಾಡಿರುವೆ ಎಂದು ಸರ್ಪವನ್ನು ಬೆತ್ತದೋಪಾದಿ ಮಾಡಿಕೊಂಡು, ಹುಡುಗನ ಮೈಮೇಲೆ ಸವರಿದಾಗ, ಹುಡುಗ ನಗುತ ಮೇಲೆದ್ದು ಎಲ್ಲರು ಎಲ್ಲಿಗೆ ಹೋದರು. ಆಡೋಣ ಬಾ ಮಾಲಿಂಗರಾಯನೆಂದು ಕರೆಯುವನು. ಮಹಾಲಿಂಗರಾಯನು ಆ ಸರ್ಪಕ್ಕೆ ಮುಂದೆ ನೀನು ನನ್ನ ಕೈಯಲ್ಲಿನ ನಾಗಬೆತ್ತವಾಗಿ ಪ್ರಸಿದ್ಧಿಯಾಗು ಎಂದು ವರ ನೀಡಿದನು.

೨೪. ಮಹಾಲಿಂಗನ ಭಕ್ತಿ ಪರೀಕ್ಷಿಸಲು ಶಿವ-ಪಾರ್ವತಿಯರು ಭೂಲೋಕಕ್ಕೆ ಬಂದ ಕಥೆ : ಗುರು ಬೀರೇಶನು ತನ್ನ ಶಿಷ್ಯನಾದ ಮಾಳಿಂಗರಾಯನನ್ನು ಪರೀಕ್ಷಿಸಿದನು. ಆ ಪರೀಕ್ಷೆಯಲ್ಲಿ ಗೆದ್ದ, ಮಾಳಿಂಗನಿಗೆ ಇದು ನಿನ್ನ ಭಕ್ತಿಯನ್ನು ಪ್ರಪಂಚಕ್ಕೆ ತೋರಿಸುವ ಸಲುವಾಗಿ, ನಾನು ಮಾಡಿದ ಪರೀಕ್ಷೆಯಾಗಿದೆ. ನಿನ್ನ ಈ ಸಾಧನೆಗೆ ಗುರು-ಹಿರಿಯರು ಋಷಿಮುನೀಂದ್ರಗಳ ಸಮೇತರಾಗಿ ಹೋಮವನ್ನು ಮಾಡು ಎಂದು ಆದೇಶ ನೀಡುವನು. ಮರುದಿವಸವೇ ಹೋಮ ಮಾಡಲು ಪ್ರಾರಂಭಿಸಿ, ಊರ ಜನರೆಲ್ಲರೂ ಪಾಲ್ಗೊಂಡು, ಹರುಷದಿಂದಿದ್ದರು. ಎಲ್ಲಿ ನೋಡಿದರು ಓಂ ನಮಃ ಶಿವಾಯ ಎನ್ನುವ ಜೈಕಾರ ಮೊಳಗಲು ಕೈಲಾಸದಲ್ಲಿ ಪಗಡೆಯಾಡುತ್ತ ಕುಳಿತಿದ್ದ ಶಿವ-ಪಾರ್ವತಿಯು ಗಮನಿಸಿದಾಗ, ಇದೆಲ್ಲ ಮಾಳಿಂಗರಾಯನ ಮಹಿಮೆಯಿಂದಾದುದು ಎಂದು ಶಿವ ಹೇಳಿ, ಆಗ ಶಿವ ಮಾಳಿಂಗರಾಯನ ಭಕ್ತಿ ಪರೀಕ್ಷಿಸಬೇಕು. ನಾನು ಇಂದು ಭೂಲೋಕಕ್ಕೆ ತೆರಳುವೆ ಎಂದನು. ಪಾರ್ವತಿಯು ಪ್ರಿಯನೆ ತಾಳು, ನಾನು ನಿಮ್ಮ ಜೊತೆ ಬರುವೆನು ಎಂದು, ಅವರಿಬ್ಬರು ಈ ವೇಷದಲ್ಲಿ ಹೋದರೆ, ನಿಜ ಭಕ್ತಿ ತಿಳಿಯದು ಮಾರು ವೇಷದಲ್ಲಿ ಹೋಗೋಣವೆಂದು ಶಿವನು ಮಹಾ ರೋಗಿಷ್ಠನಾಗಿ, ಪಾರ್ವತಿಯು ಮುದುಕಿಯ ವೇಷದಲ್ಲಿ ಮಾಳಿಂಗನಿರುವ ಜಾಗದ ಸ್ವಲ್ಪ ಊರಿನ ಹೊರಗೆ ಬಂದು ಕುಳಿತರು. ರೋಗಿಯ ದುರ್ವಾಸನೆ ಎಲ್ಲ ಕಡೆ ಹರಡಲು, ಎಲ್ಲರೂ ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದು. ಮಾಳಿಂಗರಾಯನು ಇವರನ್ನು ಕಂಡು, ಏನೋ ಯೋಚಿಸುವಂತನಾಗಿ, ಕೈಲಾಸದಲ್ಲಿ ಶಿವ-ಪಾರ್ವತಿಯರು ಇಲ್ಲದಿರುವ ಅರಿವಾಗಿ ದಿವ್ಯ ದೃಷ್ಟಿಯಿಂದ, ಓ ಶಿವ-ಪಾರ್ವತಿಯರು ನನ್ನ ಭಕ್ತಿ ಪರೀಕ್ಷಿಸಲು ಬಂದಿರುವರೋ ಎಂದು, ಅವರಲ್ಲಿಗೆ ಬಂದು, ಸ್ವಾಮಿ ಬನ್ನಿ ಒಳಗೆ, ಯಾಕೆ

ಇಲ್ಲಿಯೇ ಕುಳಿತಿರುವಿರಿ! ದಯಮಾಡಿ ಬನ್ನಿ ಎಂದನು. ಆಗ ಪಾರ್ವತಿಯು ಮಗನೆ! ನನ್ನ ಗಂಡನ ಮಹಾರೋಗದಿಂದ ಊರ ಜನರು ನಮ್ಮಿಬ್ಬರನ್ನು ಹೊರಗೆ ಹಾಕಿದ್ದಾರೆ, ನಾವು ಒಳಗಡೆ ಬರುವುದಿಲ್ಲ ಎಂದು ಹಠ ಹಿಡಿದರು. ಆಗ ಮಹಾಲಿಂಗರಾಯನು ಅವರಿಬ್ಬರನ್ನು ಎತ್ತಿಕೊಂಡು ಒಳಗೆ ಬಂದನು. ಆಗ ಮಹಾಲಿಂಗರಾಯನು ತನ್ನ ನಾಲಿಗೆಯಿಂದ ಮುದುಕನ ದೇಹದಲ್ಲಾದ ಗಾಯವನ್ನು ನೆಕ್ಕಿದಾಗ, ಗಾಯವು ಮಾಯವಾಗಿ, ರೋಗವು ಮಾಯವಾಗಿ ಮುದುಕ ದೇಹ ವಜ್ರದಂತೆ ಹೊಳೆಯುತ್ತಿತ್ತು, ಆಗ ಶಿವ-ಪಾರ್ವತಿಯರು ನಿಜರೂಪ ತೋರಿಸಿ, ಹಾರೈಸಿದರು.

೨೫. ಹಾವಿನ ಹೆಡೆಯ ಮೇಲೆ ಕುಳಿತು ಊಟ ಮಾಡಿದ ಕಥೆ : ಬೀರೇಶ್ವರನು ಮಾಯವ್ವ-ಅಕ್ಕಮ್ಮಳ ಮಮತೆಯಲ್ಲಿ ಚಿಕ್ಕ ವಯಸ್ಸಿನಿಂದ ಹರೆಯದವರೆಗೆ, ಹಾಗೂ ವಿವಾಹದವರೆಗೆ ಇದ್ದನು. ಅವನ ತಂದೆ-ತಾಯಿಯ ಗುರುತು ಸಿಕ್ಕಿ, ಹೆಂಡತಿಯೊಂದಿಗೆ ಅಕ್ಕಂದಿರ ಮಾತನ್ನು ಕೇಳಿ, ಅವರಲ್ಲಿಗೆ ತೆರಳಿದನು. ಕೆಲ ದಿನಗಳ ನಂತರ ಹಬ್ಬಕ್ಕಾಗಿ ಅಕ್ಕಂದಿರನ್ನು ಕರೆಯಬೇಕೆಂದು, ತಾನು ಹೋಗದೆ ಬಪ್ಪಣ್ಣನನ್ನು ಕಳುಹಿಸುವನು, ಆದರೆ ಅವರು ಬರುವುದಿಲ್ಲ, ಆಗ ಬೀರೇಶ್ವರನೇ ಅಕ್ಕಂದಿರನ್ನು ಕರೆಯಲು ಹೋಗುವನು. ಬೀರೇಶ್ವರನು ಮಂದನಗಿರಿಗೆ ಅತಿ ವೇಗದಿಂದ ಬಂದನು. ಅಕ್ಕಂದಿರು ಆರತಿ ಎತ್ತಿ ಒಳಗಡೆ ಕರೆದುಕೊಂಡು ಹೋಗಿ, ನೀರು ಕುಡಿ ತಮ್ಮ ಎಂದರು. ನನಗೆ ನೀರು ಬೇಡ, ಊಟ ಬೇಡ ಏನು ಬೇಡವೆಂದು ಹಠ ಹಿಡಿದನು. ಯಾಕೋ ಇಷ್ಟು ದೊಡ್ಡವನಾದರೂ ಹಠಮಾಡುವುದನ್ನು ಬಿಟ್ಟಿಲ್ಲ. ಏನಾಗಬೇಕು ಹೇಳು ನಾನು ನಿನಗೆ ಕೊಡುತ್ತೇನೆ ಎಂದರು. ಆಗ ಬೀರೇಶನು ಅಕ್ಕ ನಿನ್ನ ಅರಮನೆಯಲ್ಲಿರುವ ಶೇಷ (ಹಾವು)ನ ಗದ್ದುಗೆಯ ಮೇಲೆ ಕುಳಿತು ಊಟ ಮಾಡಬೇಕು ಎಂದಾಗ ಅಕ್ಕಮ್ಮ ತಮ್ಮನ ಆಸೆಯಂತೆ ಶೇಷವನ್ನು ಭಕ್ತಿಯಿಂದ ಮನದಲ್ಲಿ ನೆನೆದಳು. ಆಗ ಶೇಷ ಪ್ರತ್ಯಕ್ಷನಾಗಿ ಏನಾಗಬೇಕು ಎಂದು ಕೇಳಿದಾಗ ಅಕ್ಕಮ್ಮ ತಮ್ಮನ ಆಸೆಯನ್ನು ಹೇಳುವಳು. ಅದಕ್ಕೆ ಒಪ್ಪಿದ ಶೇಷನ ಗದ್ದೆಯ(ಹೆಡೆಯ)ಮೇಲೆ ಕುಳಿತು ಊಟ ಮಾಡುವನು.

೨೬. ಮುಂಗಿಪಟ್ಟಣ ಶ್ರೀ ಕೇಶರಾಜರ ರೋಗ ನಿವಾರಿಸಿದ ಕಥೆ : ಬೀರೇಶ ಹಾಗೂ ಅಕ್ಕಮ್ಮ, ಮಾಯವ್ವರು ಮುಂಗಿಪಟ್ಟಣಕ್ಕೆ ಬಂದು, ಅಲ್ಲಿ ಕೆಲ ಸಮಯ ವಿಶ್ರಾಂತಿ ಪಡೆಯುತ್ತಿರಲು, ಆ ಊರಿನ ಐದು-ಆರು ಹೆಂಗಸರು ನೀರಿಗಾಗಿ ನದಿಗೆ ಬಂದು, ಅಲ್ಲಿಯೇ ಕುಳಿತು ಮಾತನಾಡುತ್ತ, ಅಯ್ಯೋ ನಮ್ಮ ರಾಜನಿಗೆ ಇಂತಹ ರೋಗ ಬರಬಾರದಾಗಿತ್ತು. ಅವರಿಗೆ ಎಷ್ಟೇ ಸಂಪತ್ತು ಇದ್ದರೂ ಅನುಭವಿಸುವ ಸುಖ ಕೊಡಲಿಲ್ಲ ದೇವರು ಎಂದು ದುಃಖಿಸುತ್ತಿದ್ದರು. ಇದನ್ನು ಕೇಳಿಸಿಕೊಂಡ ಬೀರೇಶನು ಅವರ ಬಳಿ ಬಂದು, ತಾಯಿ ಏನಾಯಿತಮ್ಮ, ಹೀಗೆ ದುಃಖದಲ್ಲಿರುವಿರಿ

ಎಂದಾಗ, ಹೆಂಗಸರು ನಮ್ಮೂರಿನ ರಾಜನಿಗೆ ವಾಸಿಯಾಗದಂತಹ ರೋಗ ಬಂದಿದೆ. ಎಂತಹ ಪ್ರಸಿದ್ಧಿ ವೈದ್ಯರು ಬಂದು ಪರೀಕ್ಷಿಸಿದರು, ಚಿಕಿತ್ಸೆ ನೀಡಿದರು ವಾಸಿಯಾಗಲಿಲ್ಲ. ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದರು. ಬೀರೇಶನು ಅವರ ಮಾತನ್ನು ಕೇಳಿ ಅಕ್ಕಂದಿರೇ ನಾನು ಅವರನ್ನು ನೋಡಬಹುದೇ ಎಂದನು. ಹಾಗೆಯೇ ಆಗಲಿ ನಾವು ಹೋಗಿ ಈ ವಿಷಯವನ್ನು ಅರಸರಿಗೆ ತಿಳಿಸುತ್ತೇವೆ ಅವರ ಅಪ್ಪಣೆಯಾದ ಮೇಲೆ ಬಂದು ಕರೆದುಕೊಂಡು ಹೋಗುತ್ತೇವೆ ಎಂದರು.

ಊರ ಹೆಂಗಸರು ಅತೀ ವೇಗದಿಂದ ಅರಮನೆಗೆ ಹೋಗಿ, ಬೀರೇಶನ ವಿಷಯ ತಿಳಿಸಿದರು, ಅರಸನು ಧೂತರನ್ನು ಕಳುಹಿಸಿ, ಬೀರೇಶನನ್ನು ಕರೆಸಿಕೊಂಡರು. ಆಗ ಬೀರೇಶನು ಅರಮನೆಗೆ ಬಂದು, ದುಃಖಿಸುತ್ತಿರುವ ಎಲ್ಲರಿಗೆ ಸಮಾಧಾನ ಮಾಡಿ, ದುಃಖಿಸಬೇಡಿ, ಎಲ್ಲ ಒಳ್ಳೆಯದಾಗುತ್ತದೆ ಸ್ವಲ್ಪ ಸಮಯ ಎಲ್ಲರು ಹೊರಗೆ ಇರಿ, ನಾನು ಅರಸನನ್ನು ನೋಡುತ್ತೇನೆ. ಆಗ ಎಲ್ಲರು ಏನಾಗುವುದು ಎಂಬ ಭೀತಿಯಿಂದಲೇ ಹೊರಹೋದರು. ಬೀರೇಶನು ರಾಜನ ತಲೆ ಮೇಲೆ ತನ್ನ ಕೈಯನ್ನು ಇಟ್ಟು, ಶಿವನನ್ನು ಮನದಲ್ಲಿ ನೆನೆದನು. ಕ್ಷಣಾರ್ಧದಲ್ಲಿಯೇ ರಾಜ ರೋಗ ಮುಕ್ತವಾಗಿ, ನಗುತ್ತಲೆ ಮೇಲೆ ಎದ್ದು ಕುಳಿತನು.

ಅರಸನು ಸಂತೋಷದಿಂದ ನೀನು ನನ್ನ ಪಾಲಿಗೆ ದೇವನೇ ಎಂದು ನಯವಿನಯದಿಂದ ನಮಸ್ಕರಿಸಿದನು. ಎಲ್ಲರು ರಾಜನ ಮಾತುಗಳನ್ನು ಕೇಳಿ, ಓಡಿ ಓಡಿ ಒಳ ಬಂದು ನೋಡಿದರು, ರಾಜ ಎದ್ದು ಕುಳಿತುಕೊಂಡಿದ್ದನು. ಇದನ್ನು ಕಂಡ ಎಲ್ಲರೂ ಆನಂದದಿಂದ ಬೀರೇಶನಿಗೆ ಜಯವಾಗಲಿ ಎಂದು ಹಾರೈಸುತ್ತಿದ್ದರು. ರಾಜನು ದೇವನೆ ನಮ್ಮಿಂದ ಏನಾದರೂ ಕಾಣಿಕೆಯನ್ನು ಪಡೆಯಬೇಕೆಂದಾಗ ನನಗೇನು ಬೇಡಪ್ಪ ಪಂಚಡಂಗಿ ವಾಯು ಗಂಗಾಳ ಮತ್ತು ಅದರ ಮೇಲೆ ಲಿಂಗವಿರುವುದು ಕೊಟ್ಟರೆ ಸಾಕು ಎಂದನು. ಬೀರೇಶ ಹೇಳಿದಂತೆ ರಾಜನು ಅವುಗಳನ್ನೆಲ್ಲ ಮಾಡಿಸಿಕೊಟ್ಟರು.

೨೭. ಮಹಾಲಿಂಗರಾಯನಿಗೆ ಸಂತಾನವಾಗುವಂತೆ ಗುರುಗಳು ಮಾಡಿದ ಕಥೆ : ಮಹಾಲಿಂಗರಾಯನು ಪ್ರತಿನಿತ್ಯದಂತೆ ಗುರುಗಳ ಸೇವೆಯನ್ನು ಮಾಡುತ್ತಿದ್ದನು. ಎಲ್ಲ ರೀತಿಯ ಸೇವೆಯನ್ನು ಮುಗಿಸಿ, ಧ್ಯಾನದಲ್ಲಿ ಕುಳಿತಿರಲು, ಗುರು ಬೀರೇಶನು, ಮಹಾಲಿಂಗರಾಯನನ್ನು ಕರೆದು ಭಂಡಾರ ಹಾಗೂ ನಾಲ್ಕು ಹೂವುಗಳನ್ನು ನೀಡಿ, ನಿನಗೆ ಇನ್ನೂ ಮಕ್ಕಳಾಗಲಿಲ್ಲ ಇದನ್ನು ಹಚ್ಚಿಕೊಳ್ಳಿ ದಂಪತಿಗಳಿಬ್ಬರೂ ಮಕ್ಕಳಾಗುತ್ತವೆ ಎಂದಾಗ ಮಾಳಿಂಗರಾಯನು ಆಶ್ಚರ್ಯ ಚಕಿತನಾದನು. ಹಾಗೆಯೇ ಆಗಲಿ ಎಂದು ಮನೆಗೆ ತೆರಳಿದನು.

ಮನೆಗೆ ಬಂದಾಗ ತಿಳಿಯಿತು, ಹೆಂಡತಿ ಈರಮ್ಮಳಿಗೆ ವಂಶವೃದ್ಧಿಯ ಆಸೆಯೂ ಬಂದಿರಲು, ಇದನ್ನು ಅರಿತ ಗುರುಗಳು ಭಂಡಾರ, ಹೂವುಗಳನ್ನು ನೀಡಿದ್ದಾರೆ ಎಂದು ತಿಳಿಯುತ್ತಾನೆ. ಗುರು ನೀಡಿದ ಭಂಡಾರದಿಂದಾಗಿ ಈರಮ್ಮಳಿಗೆ ಮಕ್ಕಳ ಸೌಭಾಗ್ಯ ಒದಗಿ ರೆಬ್ಬರಾಯ, ಬೀರುಮುತಾಯ, ಕನಮುತ್ಯಾ, ಸೋಮರಾಯರೆಂಬ ನಾಲ್ವರು ಸುಪುತ್ರರಾದರು.

೨೮. ಗುರು ಬೀರೇಶನು ಮಹಾಲಿಂಗರಾಯನಿಂದ ಯಂಕಪ್ಪನಿಗೆ ಸಂತಾನವಾಗುವಂತೆ ನಡೆಸಿದ ಕಥೆ: ಒಂದು ದಿನ ಮಾಳಿಂಗರಾಯನು ಗುರು ನಾಮಸ್ಮರಣೆ ಮಾಡುತ್ತಾ, ಕುರಿಗಳನ್ನು ಕಾಯಲು ಹೋದನು. ಕುರಿಗಳನ್ನು ಮರೆತು, ತನು-ಮನವನ್ನು, ಲೋಕವನ್ನು ಮರೆತು, ಗುರುವಿನ ನಾಮಸ್ಮರಣೆ ಮಾಡುತ್ತಿರಲು ಕುರಿಗಳು ಯಂಕಪ್ಪ ಎನ್ನುವವನ ಹೊಲಕ್ಕೆ ಹೋಗಿ ಬೆಳೆಗಳನ್ನೆಲ್ಲ, ತಿನ್ನುತ್ತ, ಹಾಳು ಮಾಡುತ್ತಿರಲು ಅಲ್ಲಿಯೇ ಇದ್ದ ಯಂಕಪ್ಪನಿಗೆ ಕೋಪ ಬಂದು, ಕುರಿಗಳನ್ನು ಬಿಟ್ಟು, ಮೌನವಾಗಿ ಕುಳಿತಿರುವ ಮಾಳಿಂಗನಲ್ಲಿಗೆ ಬಂದು ಬೈಯುತ್ತಿದ್ದನು. ಆದರೂ ಮಾತನಾಡದೆ ಇರಲು ಹೊಡೆದನು. ಹೊಡೆದು-ಹೊಡೆದು ಸಾಕಾಗಿ ಕುಳಿತನು. ಈ ವಿಷಯ ಗುರುವಿಗೆ ಅಂತರ್ದಾನವಾಗಿ ಯಂಕಪ್ಪನಿಗೆ ಬುದ್ದಿ ಕಲಿಸಬೇಕೆಂದುಕೊಂಡನು.

ಯಂಕಪ್ಪನು ಬೆಳೆ ಹೇಗಾದರೂ ಹಾಳಾಯ್ತು ಎಂದು ಚಿಂತಿಸುತ್ತ ಮನೆಗೆ ಹೋದನು. ಮನೆಗೆ ಹೋಗಿ ಕಾಲು ತೊಳೆಯಲು ನೀರು ತೆಗೆದುಕೊಳ್ಳಲು ಹೋದರೆ ಅಲ್ಲಿ ಮಾಳಿಂಗರಾಯನ ರೂಪ ಕಾಣುವುದು, ಅದರಂತೆ ಅವರ ಮನೆಯ ಪ್ರತಿಯೊಂದು ವಸ್ತುವಿನಲ್ಲಿಯೂ ಅವನದೇ ರೂಪು ಕಾಣುವುದು. ಯಾರನ್ನು ಕಂಡರು ಮಹಾಲಿಂಗರಾಯನೆಂದು ತಪ್ಪಿಸಿಕೊಳ್ಳಲು ಹೋಗುವನು. ಇದೇನು ಆಯಿತು ನನಗೆ ಎಂದು ಹೊಲದ ಹತ್ತಿರ ಹೋದರು! ಮಹಾಲಿಂಗ ರಾಯ ಕಾಣಲಿಲ್ಲ. ಅವನ ಕಣ್ಣ ಮುಂದೆ ಕಾಣುವಂತೆ ಕಾಣುತ್ತಾನೆ, ಮಾಯವಾಗುತ್ತಾನೆ ಏನಾಯಿತು ಎಂದು ಹುಡುಕುತ್ತಾ ಹುಡುಕುತ್ತಾ ಬೀಜಗುಂತಿವರೆಗೂ ಬಂದು ಹುಡುಕುತ್ತಾನೆ. ಮಹಾಲಿಂಗರಾಯನನ್ನು ಕಾಣದೆ, ಹಾಗೆಯೇ ಕುಳಿತಿರಲು ಮಹಾಲಿಂಗರಾಯನು ಅವನ ಮುಂದೆ ಪ್ರತ್ಯಕ್ಷನಾಗಿ, ದುಃಖಿಸಬೇಡ ಯಂಕಪ್ಪ, ಸಮಾಧಾನವಾಗಿರು ಎಂದು ಹೇಳಿ, ಶ್ರೀ ಗುರುಗಳಂತೆ ಭಂಡಾರವನ್ನು ತೆಗೆದು, ಅವನ ಹಣೆಗೆ ಹಚ್ಚಿ, ಒಂದು ಹಣ್ಣನ್ನು ನೀಡಿ, ಇದನ್ನು ನೀನು ಅರ್ಧ ಮತ್ತು ನಿನ್ನ ಹೆಂಡತಿ ಅರ್ಧ ಸ್ವೀಕರಿಸಿ, ನಿಮಗೆ ಸಂತಾನ ಪ್ರಾಪ್ತವಾಗುವುದು ಎಂದು ಹಾರೈಸಿ ನಿಮಗೆ ನಾಲ್ಕು ಜನ ಗಂಡು ಮಕ್ಕಳು ಹುಟ್ಟುವರು ಚೊಚ್ಚಲ ಮಗುವನ್ನು ನಮ್ಮ ಗುರು ಸೇವೆಗೆ ನೀಡಬೇಕು ಎಂದನು. ಆಗ ಯಂಕಪ್ಪ ಹಾಗೆಯೇ ಆಗಲಿ ಮಹಾದೇವ ನಿಮ್ಮ ಕೃಪೆ ಸದಾ ನಮ್ಮ ಮೇಲೆ ಇರಲಿ ಎಂದು ಮಹಾಲಿಂಗರಾಯನ ಪಾದಗಳಿಗೆ ಸಾಷ್ಟಾಂಗ ನಮಸ್ಕರಿಸಿದನು. ಮನೆಗೆ ಬಂದು ಹೆಂಡತಿ ಲಿಂಗಮ್ಮಳಿಗೆ ಎಲ್ಲ ವಿಷಯ ತಿಳಿಸಲು,

ಹಣ್ಣನ್ನು ಅರ್ಧ-ಅರ್ಧ ಭಾಗಮಾಡಿಕೊಂಡು ತಿಂದರು. ಲಿಂಗಮ್ಮ ಗರ್ಭಿಣಿಯಾಗಿ ಗಂಡು ಮಗುವಿಗೆ ಜನ್ಮವಿತ್ತಳು. ಸಾಲಾಗಿ ನಾಲ್ಕು ಗಂಡು ಮಕ್ಕಳಾದವು.

೨೯. ಮಹಾಲಿಂಗರಾಯನ ಮಹಿಮೆ : ಮಹಾಲಿಂಗರಾಯನು ಯಂಕಪ್ಪನಿಗೆ ಗುರುವಿನ ಆಜ್ಞೆಯಂತೆ ಸಂತಾನವಾಗುವ ಹಾಗೆ ವರ ನೀಡಿದರು. ಅವರಿಗೆ ಮಕ್ಕಳಾದ ಮೇಲೆ ಚೊಚ್ಚಲ ಮಗನನ್ನು ಗುರು ಸೇವೆಗೆಂದು ಬಿಡಬೇಕೆಂದು ಹೇಳಿದರು. ಆದರೆ ಚೊಚ್ಚಲ ಮಗನಾದ ಬುಳ್ಳಪ್ಪನ ಬಾಲಲೀಲೆಗಳನ್ನು ಕಂಡು ಲಿಂಗಮ್ಮ ಅದಕ್ಕೆ ಒಪ್ಪದೆ, ಇನ್ನು ಹನ್ನೆರಡು ವರುಷವಿದೆ, ಕಾಣಿಕೆ ನೀಡಲು ಎಂದು ಮುಂದೆ-ಮುಂದೆ ಹಾಕುತ್ತಿದ್ದಳು. ಆದರೆ ಯಂಕಪ್ಪನಿಗೆ ಮನದಲ್ಲಿಯೇ ಭಯ ಆವರಿಸುತ್ತಿತ್ತು. ಆದರೂ ಹೆಂಡತಿಯ ಹಠದಿಂದ ಮೌನವಾದನು.

ಒಂದು ದಿನ ಬುಳ್ಳಪ್ಪನು ವಾರಿಗೆಯ ಹುಡುಗರೊಂದಿಗೆ ಆಟವಾಡುತ್ತಿರಲು, ಅವನು ಇದಕ್ಕಿದ್ದಂತೆ ಕಾಣದಂತೆ ಆದನು. ಹುಡುಗರೆಲ್ಲರೂ ಆಡಿ-ಆಡಿ ಸಾಕಾಗಿ ಮನೆಗಳಿಗೆ ಹೋದರು, ಆದರೆ ಬುಳ್ಳಪ್ಪ ಎಲ್ಲಿಗೆ ಹೋದನೋ ತಿಳಿಯದು, ರಾತ್ರಿಯಾದರೂ ಮನೆಗೆ ಬರಲಿಲ್ಲ. ತಂದೆ-ತಾಯಿಯರು ಹುಡುಕಿ-ಹುಡುಕಿ ದುಃಖದಲ್ಲಿ ಮುಳುಗಿದರು. ಅಯ್ಯೋ ಬುಳ್ಳಪ್ಪ ಎಲ್ಲಿಗೆ ಹೋದೆ, ಎಂದು ದುಃಖಿಸುತ್ತಾ, ಹುಡುಕುತ್ತಾ ಊರೂರು ಅಲೆದಾಡಿದರು. ಕೊನೆಗೆ ಸಿಕ್ಕದೆ ಇರಲು, ಮಹಾಲಿಂಗರಾಯನ ಹತ್ತಿರ ಹೋಗಿ ಕೇಳೋಣವೆಂದು, ಅವರಲ್ಲಿಗೆ ಹೋದರೆ, ಮಹಾಲಿಂಗನ ಬಳಿ ಬುಳ್ಳಪ್ಪ ಸಂತೋಷದಿಂದ ಆಡುತ್ತಿರುತ್ತಾನೆ. ಆಗ ಯಂಕಪ್ಪನು ಮಹಾಲಿಂಗರಾಯನ ಚರಣಗಳಿಗೆ ನಮಸ್ಕರಿಸಿದನು ನಮ್ಮ ಮಗ ಎಲ್ಲಿಗೆ ಬರಬೇಕೋ, ಅಲ್ಲಿಗೆ ಬಂದಿದ್ದಾನೆ ಎಂದು ಸಂತೋಷಗೊಂಡು ನಮ್ಮ ತಪ್ಪು ನಮಗೆ ಅರಿವಾಗಿದೆ, ಅದನ್ನು ತೋರಿಸಿಕೊಟ್ಟ ತಮಗೆ ವಂದನೆಗಳೆಂದು, ಲಿಂಗಮ್ಮ ಹೇಳಿ ನಮಸ್ಕರಿಸಿ ಮಗನನ್ನು ಮಹಾಲಿಂಗ ರಾಯನಲ್ಲಿಗೆ ಬಿಟ್ಟು ಹೋದರು.

೩೦. ಬೆಟ್ಟಗೇರಿ ದೇವಗೊಂಡ ಗೌಡರ ಸಂಪತ್ತನ್ನು ಮರುಕಳುಹಿಸಿದ ಕಥೆ: ಶ್ರೀ ಮಠಕ್ಕೆ ಸೇವೆಗೆಂದು ಏಳು ಗ್ರಾಮದ ಜನರು ಮಠಕ್ಕೆ ಬಂದು, ಗುರುಗಳ ದರ್ಶನ ಮಾಡಿಕೊಂಡು ಹಿಂದಿರುಗಿ, ತಮ್ಮ ಹಳ್ಳಿಗಳಿಗೆ ಹೋಗುತ್ತಿರಬೇಕಾದರೆ, ಅರ್ಧ ದಾರಿಯಲ್ಲಿ ವಿಶ್ರಾಂತಿಗಾಗಿ ಕೆಲವು ಜನರು ತಾವೇ ತಂದ ಬುತ್ತಿಗಳನ್ನು ಬಿಚ್ಚಿ, ಊಟ ಮಾಡಲು ಅಣಿಯಾದರು. ಆದರೆ ಅವರು ವಿಶ್ರಾಂತಿಗಾಗಿ ಕುಳಿತ ಹೊಲದ ಮಾಲೀಕನಾದ ದೇವಗೊಂಡನು, ಯಾರದು ಎಂದು ಕೋಪ ಗೊಂಡು ಊಟ ಮಾಡಲು ಬಿಡದೇ, ಅವರನ್ನು ಅಲ್ಲಿಂದ ಬೈದು ಓಡಿಸಿದರು. ಅವರೆಲ್ಲರೂ ಏನೂ ತಿಳಿಯದವರಂತೆ ಹೊರಟು ಹೋದರು.

ಸ್ವಲ್ಪ ಸಮಯದ ನಂತರ ಅವರಿಗೆ ನಾನು ಮಾಡಿದ್ದು ತಪ್ಪಾಯಿತು. ಅವರು ನಮ್ಮ ಹೊಲದಲ್ಲಿ ನೆರಳಿದೆ, ನೀರಿದೆ ಎಂದು ಊಟಕ್ಕೆ ಕುಳಿತರು, ಅದರೆ ನಾನು ಯಾಕೆ ಹೀಗೆ ಮಾಡಿದೆ, ಎಂದು ಚಿಂತಿಸುತ್ತಾ, ಕುಳಿತನು ಬಂದ ಅತಿಥಿಗಳಿಗೆ ನೆರವು ನೀಡದೆ ಬೈದು ಹೊಲದಿಂದ ಅಟ್ಟಿದ ಪರಿಣಾಮವಾಗಿ ಊರಿಗೆ ದೊಡ್ಡ ಗೌಡನಾಗಿದ್ದ ಇವನ ಸಂಪತ್ತೆಲ್ಲ ಕರಗಿ ಹೋಯಿತು. ಇವನಿಗೆ ಇದ್ದ ಗೌರವವೆಲ್ಲ ಕರಿಗಿ ಹೋಯಿತು. ಇವನ ಹೆಂಡತಿಗೆ ಚಿಂತೆಯಾಗಿ ಗಂಡನ ಹತ್ತಿರ ಬಂದು, ನಮ್ಮಲ್ಲಿ ಇದ್ದ ಸಂಪತ್ತು ಪೂರ್ವಿಕರದ್ದು, ನಾವು ಮಕ್ಕಳು, ಮೊಮ್ಮಕ್ಕಳು ಕುಳಿತು ತಿಂದರೂ ಕರಗಿ ಹೋಗುವುದಿಲ್ಲ. ಆದರೆ ಇದ್ದಕ್ಕಿದ್ದಂತೆ ಸಂಪತ್ತು ಕರಗಿ ಹೋಗುತ್ತಿದೆ ಎಂದರೆ ಅದು ಯಾವುದೋ ದೇವರ ಶಾಪದಿಂದಾಗಿ ಎಂದು ಹೇಳಿದಳು.

ದೇವಗೊಂಡನು ಹೆಂಡತಿಯ ಮಾತನ್ನು ಕೇಳಿಸಿಕೊಂಡು, ಹೌದು ಎಂದು ಕೊಂಡು, ಎಡವೂರ ಈರಣ್ಣ, ಪಾರ್ವತಮ್ಮ, ಕುಕನೂರ ದ್ಯಾವಮ್ಮರಿಗೆ ಸೇವೆ ಮಾಡಿ ಎಲ್ಲ ತೀರ್ಥ ಕ್ಷೇತ್ರಗಳಿಗೂ ಹೋಗಿ ಭಕ್ತಿಯಿಂದ ಬೇಡಿದರೂ ಕಷ್ಟಗಳು ನಿವಾರಣೆಯಾಗಲಿಲ್ಲ. ಕೊನೆಗೆ ಹಿರಿಯರ ಮಾತು ಕೇಳಿ ಕರಿಸಿದ್ದನ ಪುಣ್ಯಕ್ಷೇತ್ರಕ್ಕೆ ಬಂದು, ಗುರುಗಳನ್ನು ಭೇಟಿ ಮಾಡಬೇಕೆಂದು, ಗುರುಗಳಿಗೆ ಮೂರು ಪ್ರದಕ್ಷಿಣೆಯನ್ನು ಹಾಕಿ, ಗುರುವನ್ನು ಮಾತನಾಡಿಸಲು ಕುಳಿತಿದ್ದನು. ಅಲ್ಲಿರುವ ಭಕ್ತರೆಲ್ಲರೂ ಹೋದರೂ ಇವನು ಮಾತ್ರ ಎಲ್ಲಿಗೂ ಹೋಗಲಿಲ್ಲ. ಅದಕ್ಕೆ ಗುರುಗಳು ಮಹಾಲಿಂಗರಾಯನನ್ನು ಕರೆದು ಯಾರು ಇವನು? ಎಲ್ಲಿಯವನು? ಎಂದು ಕೇಳಿದರು. ಅದಕ್ಕೆ ಮಹಾಲಿಂಗರಾಯನು ಇವನು ಬೆಟಗೇರಿ ದೇವಗೊಂಡ, ಅಹಂಕಾರ ಭಾವದಿಂದ ತಿಳಿದೋ, ತಿಳಿಯದೆಯೋ ತಪ್ಪು ಮಾಡಿದ್ದಾನೆ. ಈಗ ಪಶ್ಚಾತ್ತಾಪದಿಂದ, ನಿಮ್ಮ ಸಾನಿಧ್ಯಕ್ಕೆ ಬಂದಿದ್ದಾನೆ. ಅವನಿಗೆ ಆಶೀರ್ವದಿಸಿ ಅವನ ಸಂಪತ್ತು ಮರಳಿ ಬರುವಂತೆ ಮಾಡಿ ಗುರುಗಳೆ ಎಂದಾಗ, ಅದಕ್ಕೆ ಗುರುಗಳು ನೀನು ಅವನ ಮೇಲೆ ಕರುಣೆ ತೋರಿ ಹೀಗೆ ಹೇಳುತ್ತಿರುವೆ. ಆದರೆ ಅವನಿಗೆ ಮರಳಿ ಸಂಪತ್ತು ನೀಡಿದರೆ, ಮತ್ತೆ ಅಹಂಕಾರ ಭಾವದಿಂದ ಮೆರೆಯುತ್ತಾನೆ ಎಂದರು. ಗುರುಗಳು ಮಹಾಲಿಂಗರಾಯನು ಇಲ್ಲ ಗುರುಗಳೇ ಹಾಗೆ ಆಗುವುದಿಲ್ಲ. ನೀವು ಕರುಣೆ ತೋರಿಸಿದರೆ, ಅವನ ಜೀವನ ಬದಲಾಗುತ್ತದೆ. ಎಂದು ಗುರುಗಳಿಂದ ಭಂಡಾರ ಸ್ವೀಕರಿಸಿಕೊಂಡು, ಅದನ್ನು ದೇವಗೊಂಡನಿಗೆ ನೀಡಿ, ಇದನ್ನು ನಿಮ್ಮ ಹೊಲಗಳಿಗೆ, ಮನೆಗಳಲ್ಲಿ ಭಕ್ತಿಯಿಂದ ಚೆಲ್ಲಿ ಒಳ್ಳೆಯದಾಗುತ್ತದೆ ಎಂದು ಹಾರೈಸಿ ಕಳುಹಿಸಿದರು.

ದೇವಗೊಂಡನು ಮನೆಗೆ ಬಂದು ಹೆಂಡತಿಯ ಬಳಿ ಎಲ್ಲವನ್ನು ವಿವರವಾಗಿ ತಿಳಿಸಿ, ಭಂಡಾರವನ್ನು ನೀಡಿ ಮಲಗಿದನು. ಬೆಳಿಗೆ ದಿನನಿತ್ಯದ ಕಾರ್ಯ ಮುಗಿಸಿಕೊಂಡು, ಭಂಡಾರವನ್ನು

ಪೂಜೆಮಾಡಿ ಮನೆಗೂ, ಹೊಲಗಳಿಗೂ ಚೆಲ್ಲಿದಾಗ, ತಿಂಗಳು ಕಳೆಯುವುದರೊಳಗಾಗಿ ಸಂಪತ್ತು ಮರಳಿ ಬಂದು ಅತಿ ಸಂತೋಷದಿಂದ ಕಾಲ ಕಳೆಯುತ್ತಿದ್ದರು.

೩೧. ಸತ್ತ ಕುರಿಯನ್ನು ಬದುಕಿಸಿದ ಮಾಳಿಂಗರಾಯ: ಒಂದು ದಿನ ಮಾಳಿಂಗರಾಯನು ಕಲ್ಯಾಣಕ್ಕೆ ಬಂದನು. ಅಲ್ಲಿ ಎಲ್ಲರು ಸತ್ತ ಗೂಳಿಯನ್ನು ಮೆರವಣಿಗೆ ಮಾಡುತ್ತ ಜನರು ಬರುತ್ತಿದ್ದರು. ಅವರನ್ನು ಮುಖಭಂಗ ಮಾಡಬೇಕೆಂದು, ಸತ್ತ ಕುರಿಯನ್ನು ಹೊತ್ತುಕೊಂಡು ಊರ ಒಳಗೆ ಬರುತ್ತಿರುತ್ತಾನೆ. ಈ ಊರ ದ್ವಾರ ಪಾಲಕರು ಅವನನ್ನು ತಡೆದು, 'ಎಲೋ ಲಿಂಗವಿಲ್ಲದ ಭವಿಯೇ ಸತ್ತ ಪ್ರಾಣಿಗಳನ್ನು ಊರ ಹೊರಗೆ ಒಯ್ಯಬೇಕಲ್ಲದೆ, ಸತ್ತ ಜೀವಿಯನ್ನು ಹೊತ್ತುಕೊಂಡು ಪುರ ಪ್ರವೇಶ ಮಾಡುತ್ತಿರುವಿಯಲ್ಲಾ ಮೂರ್ಖಾ, ನಡೆ, ಆಚೆಗೆ ಎಂದಾಗ ಸತ್ತ ಕುರಿಯನ್ನು ಕೆಳಗಿಳಿಸಿ, ಅಯ್ಯಾ ಲಿಂಗವಂತರೇ ನಿಮ್ಮಲ್ಲಿರುವ ಲಿಂಗದ ಮಹಿಮೆಯಿಂದ ಸತ್ತ ಗೂಳಿಯ ಪ್ರಾಣ ಪ್ರತಿಷ್ಠೆ ಮಾಡಿರಿ'[೬೫] ಎಂದನು. ಊರಲ್ಲಿ–ಮಾಳಿಂಗರಾಯನಲ್ಲಿ ವಾದಗಳು ನಡೆದು ಮೊದಲು ನೀನು ಸತ್ತ ಕುರಿಯನ್ನು ಜೀವಂತಗೊಳಿಸು ನೋಡೋಣ. ಆಗ ಮಾಳಿಂಗರಾಯ ಮನಸ್ಸಿನಲ್ಲಿ ಶಿವನನ್ನು ನೆನೆದು ಸತ್ತ ಕುರಿಯ ಮೇಲೆ ಭಂಡಾರವನ್ನು ಎರಚಿದಾಗ, ಆ ಕುರಿಯು ಕುಣಿದಾಡುತ್ತ, ಎಗರುತ್ತ ಓಡ ಹತ್ತಿತ್ತು. ಅಲ್ಲಿ ಇದ್ದ ಜನರು ಕೆಲವರು ಕುರಿಯ ತಲೆ ಹಿಡಿದರು, ಇನ್ನು ಕೆಲವರು ಕುರಿಯ ಹಿಂಗಾಲನ್ನು ಹಿಡಿದರು. ಮಾಳಿಂಗನಿಗೆ ಕೋಪ ಬಂದು "ಶಿರವನ್ನು ಹಿಡಿದವರು ಟಗರು ಜೋತಿಗಳಾಗಿಯೂ ಹಿಂಗಾಲನ್ನು ಹಿಡಿದ ಜನರಿಗೆ 'ಕಟುಕ'ರಾಗಿಯೂ ಜಗದಲ್ಲಿ ಬಾಳಿರಿ ಎಂದು ಶಾಪವಿತ್ತನು."[೬೬]

೩೨. ಗುರುವಿಗಾಗಿ ಹುಲಿಯ ಹಾಲನ್ನು ತಂದ ಕಥೆ: ಲೋಕಕ್ಕೆ ಮಾಳಿಂಗರಾಯನ ಮಹಿಮೆಯನ್ನು, ಗುರು ಭಕ್ತಿಯನ್ನು, ವೈರಿಗಳ ಕಿಚ್ಚನ್ನು ಅಡಗಿಸಲು ಬೀರಪ್ಪನು ಮಾಳಿಂಗರಾಯನಿಗೆ ಪರೀಕ್ಷೆಯನ್ನು ಮಾಡುವನು. ಬೀರಣ್ಣನು ಗದ್ದುಗೆ ಏರಿದ ಮೇಲೆ ಅವರು ಊಟಕ್ಕೆ

"ಏ ನಮ್ಮ ಗುರುವ ಬೀರಪ್ಪ ಹುಲಿಯ ಗಿಣ್ಣ ಬೇಡ್ಯಾನೆ
ಊಟಕ ಹುಲಿಗಿಣ್ಣ ಬೇಡ್ಯಾನ ಆಟಕ ಹುಲಿಮರಿಯೇನ"[೬೭]

ಎಂದು ಮಾಳಿಂಗರಾಯನು ಹುಲಿಯನ್ನು ಹರಸಿ ಹೊರಡುವನು, ಕಾಡಿನಲ್ಲಿ ಹುಡುಕುತ್ತಿರುವಾಗ ಒಂದು ಗುಹೆ ಕಂಡಿತು. ಒಳಗೆ ಹೋಗಿ ನೋಡುತ್ತಾನೆ. ಹುಲಿಯ ಮರಿಗಳು ಆಟವಾಡುತ್ತಿದವು, ಅ ಸಮಯದಲ್ಲಿಯೇ ಹಾವೊಂದು ಅವುಗಳನ್ನು ಕಚ್ಚಲು ಬರುತ್ತಿತ್ತು. ಅದನ್ನು ಕಂಡ ಮಾಳಿಂಗನು ಅದರ ಮೇಲೆ ಬೀರಪ್ಪನ ಹೆಸರು ಹೇಳಿ, ಭಂಡಾರ ಒಗೆದಾಗ ಹಾವು ಹಿಂದಕ್ಕೆ ಹೋಗಿತು. ಹುಲಿಯ ಮರಿಗಳಿಗೆ ಕಣ್ಣು ಕಾಣಿಸುತ್ತಿರಲ್ಲಿಲ್ಲ, ಮರಿ ಹುಲಿಗಳ ಮೇಲೆಯೂ

ಭಂಡಾರ ಹಾಕಿದಾಗ ಕಣ್ಣು ಬಂದು ಅವು ನಲಿದಾಡುತ್ತಿದವು. ಅದೇ ಸಮಯಕ್ಕೆ ತಾಯಿ ಹುಲಿಯು ಬಂದು ನೋಡಿ ಆರ್ಭಟಿಸುತ್ತಾ, ಮಾಳಿಂಗನ ಮೇಲೆ ಎರಗಲು ಬರಲು ಮರಿಹುಲಿಗಳು ತಾಯಿ ಹುಲಿಗೆ ನಿಲ್ಲು ಎಂದು ಹೇಳಿ, ನಡೆದ ಸಂಗತಿ ತಿಳಿ ಹೇಳಿದವು. ಆಗ ಹುಲಿಯು ಸಂತೋಷದಿಂದ ಏನು ಬೇಕು ಕೇಳು ನೀಡುವೆ ಎಂದಾಗ ಮಾಳಿಂಗ ನನ್ನ ಗುರುಗಳಿಗೆ ಹುಲಿಯ ಗಿಣ್ಣ ಪ್ರಸಾದಕ್ಕೆ ಬೇಕಾಗಿದೆ, ಎಂದು ಹೇಳಲು ಹುಲಿಯು ಹಾಲಿನ ಜೊತೆ ತನ್ನ ಮರಿಯನ್ನು ಬಹುಮಾನವಾಗಿ ನೀಡಿತು. ಇವುಗಳನ್ನು ಪಡೆದುಕೊಂಡು ಬಂದ ಮಾಳಿಂಗ ಗುರುವಿನ ಪೂಜೆ ಮಾಡಿದನು. ಎಂತಹ ಕ್ರೂರಿ ಪ್ರಾಣಿಗಳನ್ನು ಸೌಮ್ಯವಾಗಿ ಮಾಡಿದ ಮಾಳಿಂಗನು, ಅಜ್ಞಾನದಿಂದ ಕೂಡಿದ ಜನರಿಗೆ ಜ್ಞಾನವನ್ನು ನೀಡಿ, ಪರಿವರ್ತಿಸಿದ. ಹುಲಿಯನ್ನು ಧೈರ್ಯದ ಸಂಕೇತವಾಗಿ ಬಳಸುತ್ತೇವೆ. ಅದಕ್ಕೆ ಮಕ್ಕಳಿಗೆ ಅದರ ಉಗುರನ್ನು ಕೊರಳಿಗೆ ಕಟ್ಟುವುದನ್ನು ನೋಡುತ್ತೇವೆ. ಒಟ್ಟಿನಲ್ಲಿ ಬೀರಪ್ಪನ ಶಿಷ್ಯ ಮಾಳಿಂಗ ಜಗತ್ತಿಗೆ ಮಾದರಿಯಾಗಿದ್ದಾನೆ.

೩೩. ಅಮೋಘಸಿದ್ಧನ ಗರ್ವಭಂಗವಾದ ಕಥೆ : ಒಂದು ದಿನ ಕೈಲಾಸದಲ್ಲಿ ಶಿವನೊಂದಿಗೆ ಅಮೋಘಸಿದ್ಧನು ಕಾಲಹರಣ ಮಾಡುತ್ತಿರಲು, ಅಮೋಘಸಿದ್ಧನು ಭೂಲೋಕದಲ್ಲಿಯೇ ನನ್ನಂಥ ಶಿವ ಭಕ್ತನು ಯಾರೂ ಇಲ್ಲವೆಂದು ಗರ್ವದಿಂದ ಮಾತನಾಡುತ್ತಾನೆ. ಆಗ ಶಿವ ಹೇಳುತ್ತಾ

"ನಿನಕ್ಕಿಂತ ಹೆಚ್ಚಿನ ಸಿದ್ದ ಬಿದ್ದಳಗುಂತಿ ಬಯಲಾಗ
ಅವನ ಭಕ್ತಿ ಸದ್ದು ಮಾಳಿಂಗರಾಯನಿದ್ದಾನ
ಯೋಗಿ ಅಮ್ಮುಗಿಸಿದ್ದನೆ ಏನೆಂದಾಡುತ್ತಿದ್ದಾನೆ
ಉರದ ಬೆಂಕಿನಾದವೆ ತೆಲೆವೆಂದು ಕೆಂಡನಾದೆ
ಮರ್ತ್ಸಕ ಹೋಗೇನಂತಾನ ಮಾಳಗ ನೋಡ್ಯಾವತಾನ".[೬೮]

ಅವನು ಹೋಗಿ ಮಾಳಿಂಗರಾಯನನ್ನು ನೋಡಲು, ಅವನ ರೂಪ ಲಾವಣ್ಯವನ್ನು ನೋಡಿ, ಸದೃಢವಾದ ದೇಹವನ್ನು ನೋಡಿ, ಅದರೊಂದಿಗೆ ಅವನ ಭಕ್ತಿ ನೋಡಿ, ಗಾಬರಿಯಾಗಿ ಮಾಳಿಂಗರಾಯನನ್ನು ಮಾತನಾಡಿಸಲು, ಮಾಳಿಂಗರಾಯನು ಅತಿ ವಿನಯದಿಂದ ಅತಿಥಿ ಸತ್ಕಾರ ಮಾಡುವನು. ಆದರೆ ಅವುಗಳನ್ನು ಸ್ವೀಕರಿಸದೇ ಶಕ್ತಿ ಪ್ರದರ್ಶನಕ್ಕಾಗಿ ಕರೆಯುವನು. ಇದೆಲ್ಲ ಶಿವನ ಮಹಿಮೆ ಇರಬೇಕೆಂದು ಮಾಳಿಂಗ ಒಪ್ಪಿ ಬಂದನು.

"ಆಗ ಅಮ್ಮುಗಸಿದ್ದನಲ್ಲೇಳ ಎತ್ತು ತಿರುವಲಿಬೇಕಯ್ಯ
ಎತ್ತು ತಿರುವಲ್ಲಿಬೇಕಯ್ಯ ಹಿಂದಕ್ಕೆ ಹೊಳ್ಳಿಲಿಬೇಕಯ್ಯ
ಬಾರೋ ಬಾರೋ ಏಯೆಪ್ಪ ನನ್ನ ಎತ್ತುನಲ್ಲೇಳ"[೬೯]

ಹೀಗೆ ಹೋಗುತ್ತಿರುವ ಎತ್ತುಗಳನ್ನು ಹಿಂದಕ್ಕೆ ತರುತ್ತಾನೆ. ಅಮ್ಮುಗಸಿದ್ದ ಅವುಗಳನ್ನು ಮುಂದಕ್ಕೆ ಮಾಡುವಂತೆ ಕೈ ಮಾಡಿದರೆ ಅವು ಹೋಗುತ್ತವೆ.

ಇನ್ನೊಂದು ಸಾರಿ 'ಮಳಿಯಕೀಲ ತಂದಿವೆ ಬೆಳೆಯಕೀಲ ತಂದೀನೆ
ಮಳಿಯಕೀಲ ತಂದೀನೆ ಮಕ್ಕಳಕೀಲ ತಂದೇನ
"ಬೆಳಿಯಕೀಲ ತಂದಿದ್ದ ನಾಯೆವ ಹೇಳಲಿ ಅಂದಿದ್ದ
ವ್ಯಾಮದ ಕಂಬಳಿ ಹಿಡದಿದ್ದ ಮೆಂಡಿಯ ಮ್ಯಾಲೆಹೆಚ್ಚಾನ
ಕೈಯಲಾಸದ ಒಳಗೇನ ಕೈಯ ಮಾಡುತಾನೇವ
ಕೈಯ ಮಾಡುತಾನೇನ ಕಂಬಳಿ ಬೀಸುತಾನೇನ
ಗಂಗಿ ದಿಕ್ಕಿನೊಳಗೇನ ಅಂಗ್ಯೆಯಟ್ಟು ಮಾಡದಾವ"[೭೦]

ಹೀಗೆ ಮಳೆಯ ಪವಾಡವನ್ನು ಮಾಡಿದಾಗ ಇದರಲ್ಲಿ ಮಾಳಿಂಗ ಜಯಿಸಿ, ಅಮೋಘಸಿದ್ಧನ ಗರ್ವ ಭಂಗವಾಗುತ್ತದೆ. ಇಲ್ಲಿಯ ತತ್ವ ಎಂದರೆ ಯಾವುದೇ ಕಾರಣಕ್ಕೂ ನಾನು ಎನ್ನುವ ಅಹಂಭಾವವನ್ನು ಹೊಂದಬಾರದೆಂಬ ತಾತ್ವಿಕತೆಯ ಅಂಶ ಈ ಕತೆಯಲ್ಲಿ ಅಡಕವಾಗಿದೆ.

೩೪. ರೇವಣಸಿದ್ದನು ಕುರಿಗಳನ್ನು ಸೃಷ್ಟಿಸಿದ ಕಥೆ : ಕೈಲಾಸದಲ್ಲಿ ಶಿವನು ಧ್ಯಾನದಲ್ಲಿ ಇರಬೇಕಾದರೆ, ಅಲ್ಲಿಗೆ ನಾರದರು ಯಾವುದೋ ವಿಷಯವನ್ನು ಮನಸ್ಸಿನಲ್ಲಿ ಹೊತ್ತು ಬೇಸರದಿಂದ ಬಂದರು. ನಾರದರು ಬರುತ್ತಿರುವುದನ್ನು ಶಿವ ನೋಡಿ, ನಾರದರೇ ಯಾಕೋ ನಿಮ್ಮ ಮುಖದಲ್ಲಿ ಬೇಸರದ ಭಾವ ಮೂಡಿದೆ. ಏನು ವಿಷಯವೆಂದು ತಿಳಿಸಿ, ಎಂದಾಗ ನಾರದರು, ಏನಂತ ಹೇಳಲಿ ದೇವ, ಭೂಲೋಕದಲ್ಲಿ ಕೊಲ್ಲಾಪುರವೆಂಬ ನಗರದಲ್ಲಿ ಮಾಯೆಯೆಂಬ ಹೆಂಗಸನ್ನು ಮೋಹಿಸಲು ಹೋಗಿ ನವಕೋಟಿಸಿದ್ದರು, ಅವಳು ಕೊಟ್ಟ ವಿಷವನ್ನು ಸೇವಿಸಿ, ಕೆಲವರು ಸತ್ತರು, ಉಳಿದ ಕೆಲವರು ಅವಳ ಮನೆಯ ಆಳುಗಳಾಗಿ ಮನೆಗೆಲಸವನ್ನು ಮಾಡುತ್ತಿರುವರು. ನಾರದನ ಮಾತನ್ನು ಕೇಳಿದ ಶಿವನು ಅವಳ ಕುತಂತ್ರಕ್ಕೆ ಕಡಿವಾಣ ಹಾಕಲೆಂದು, ರೇವಣಸಿದ್ದನೆಂಬ ಹೆಸರಿನಿಂದ ಮಾರು ವೇಷದಲ್ಲಿ ಭೂಲೋಕಕ್ಕೆ ಬಂದು ಮಾಯೆಯ ಮನೆ ಸೇರಿ ಅವಳು ಕೊಟ್ಟ ವಿಷವನ್ನು ಕುಡಿದನು. ಬರಿ ಒಂದು ಕೊಡವಲ್ಲ, ಅನೇಕ ಕೊಡಗಳ ವಿಷಯವನ್ನು ಕುಡಿದು, ಬದುಕುಳಿದ ರೇವಣ್ಣನನ್ನು ಕಂಡು ಇವನೊಬ್ಬ ಸಾಮಾನ್ಯನಲ್ಲ, ದೇವತಾಪುರುಷನಿರಬೇಕು. ಇಲ್ಲದಿದ್ದರೆ ಇಷ್ಟೊತ್ತಿಗೆ ಇವನು ಸತ್ತು ಹೋಗಬೇಕಾಗಿತ್ತು. ಸತ್ತಿಲ್ಲವೆಂದರೆ ಇವನೊಬ್ಬ ಮಹಾನ್ ಪುರುಷನಾಗಿದ್ದಾನೆಂದು, ಅವರ ಕಾಲಿಗೆ ನಮಸ್ಕರಿಸುತ್ತಾಳೆ. ಆದರೆ ರೇವಣಸಿದ್ದ ಅವಳ ಮೋಸಕ್ಕೆ ಮಾರು ಹೋಗದೆ, ಅವಳ ತಪ್ಪಿಗಾಗಿ ಮಾಯೆಯ ಮೂಗನ್ನು ಕೊಯ್ದು, ಊರಿಂದ ಅಟ್ಟಿ, ಅವರಿಂದ ಮೋಸಕ್ಕೆ ಒಳಗಾದ ನವಕೋಟಿಸಿದ್ದರನ್ನು ಕುರಿಗಳನ್ನಾಗಿ ಮಾಡಿದನು. ಆ

ಕುರಿಗಳಿಗೆ ಇನ್ನು ಮುಂದೆ ನೀವು ದೇವರಿಗೆ ಬಲಿ ಕೊಡುವ ಪ್ರಾಣಿಗಳಾಗಿ ಬದುಕಿರಿ ಎಂದು ಹೇಳಿ ಅಷ್ಟದೇವತೆಗಳಿಗೆ ಕುರಿಕಾಯಲು ಹೇಳಿ ಕೈಲಾಸಕ್ಕೆ ಮರಳಿ ಹೋದನು.

೩೫. ಶಾಂತಮುತ್ತಯ್ಯನ ಪವಾಡದಿಂದ ಸರವೂರು ಸೃಷ್ಟಿಸಿದ ಕಥೆ : ಹಾಲುಮತದ ಪ್ರಥಮ ವ್ಯಕ್ತಿಯಾದ ಶಾಂತಮುತ್ತಯ್ಯನು, ತನ್ನ ತಂದೆಯಾದ ಪದುಮಣ್ಣನು ರಾಕ್ಷಸಿಯನ್ನು ಮದುವೆಯಾಗಿ, ಅವಳ ಜೊತೆ ಸಂಸಾರ ಮಾಡುವುದು ಇಷ್ಟವಿಲ್ಲದೆ ಶಾಂತಮುತ್ತಯ್ಯನು ತನ್ನ ಹೆಂಡತಿಯೊಂದಿಗೆ ಬೇರೆ ಹೋಗಿ ಸಂಸಾರ ಮಾಡಲು ಹೊರಟುಹೋದನು. ಇವನೊಬ್ಬ ಪರಮ ಶಿವ ಭಕ್ತನಾಗಿದ್ದನು. ಆದುದರಿಂದ ಒಂದು ದಿನ ಶಿವನು ಶಾಂತಮುತ್ತಯ್ಯನ ಭಕ್ತಿಯನ್ನು ಪರೀಕ್ಷಿಸಲು, ನೂರಾರು ಜಂಗಮರೊಡನೆ, ಜಂಗಮ ವೇಷ ಧರಿಸಿ, ಅವರ ಮನೆ ಮುಂದೆ ಭಿಕ್ಷೆ ಬೇಡಲು, ಶಾಂತಮುತ್ತಯ್ಯ ಮತ್ತು ಅವನ ಹೆಂಡತಿ ಅವರ ಸೇವೆಯನ್ನು ಗುರುಭಕ್ತಿಯಿಂದ ಮಾಡಿ ಅವರಲ್ಲಿರುವ ಅಕ್ಕಿಯಿಂದ ಅಂಬಲಿಯನ್ನು ಮಾಡಿ ಜಂಗಮರನ್ನು ತೃಪ್ತಿಗೊಳಿಸಿದರು. ತೃಪ್ತಿಗೊಂಡ ಜಂಗಮರು ಆಶೀರ್ವದಿಸಿ ಹೋದರು. ಶಿವ ಮತ್ತೊಮ್ಮೆ ಶಾಂತಮುತ್ತಯ್ಯನ ಭಕ್ತಿ ಪರೀಕ್ಷಿಸಲು, ಭೂಲೋಕಕ್ಕೆ ಬಂದನು. ಶಾಂತಮುತ್ತಯ್ಯನು ಕುರಿಗಳನ್ನು ನೀರು ಕುಡಿಸಲು ಪಕ್ಕದ ಹೊಳೆಗೆ ಹೋಗಿ, ಕುರಿಗಳನ್ನು ನೀರು ಕುಡಿಯಲು ಬಿಟ್ಟು, ಶಿವ ಪೂಜೆಯಲ್ಲಿ ಮಗ್ನನಾದನು. ಆಗ ಬಂಡಿಕಾರರ ವೇಷವನ್ನು ಶಿವನು ಧರಿಸಿ, ಹತ್ತಾರು ಬಂಡಿಗಾರರಿಂದ ಕೂಡಿ, ಪೂಜೆಯಲ್ಲಿದ್ದ ಶಾಂತಮುತ್ತಯ್ಯನ ಮೇಲೆ ಹರಿಸಲು ಬಂದಾಗ, ಅವನ ಗಂಭೀರ ನೋಟಕ್ಕೆ ಬಂಡಿಗಳೆಲ್ಲ ತುಂಡು-ತುಂಡಾಗಿ ಹೋದವು. ಇದರಿಂದ ಗಾಬರಿಯಾದ ಬಂಡಿಕಾರರು, ಇವನೊಬ್ಬ ಪವಾಡ ಪುರುಷನೆಂದು, ತಿಳಿದು ನಮ್ಮಿಂದ ತಪ್ಪಾಯಿತು. ಕ್ಷಮಿಸಿ, ನಮ್ಮ ತಪ್ಪಿಗಾಗಿ ಏನಾಗಬೇಕೆಂದು ಕೇಳಲು, ಶಾಂತಮುತ್ತಯ್ಯನು ಈ ಸ್ಥಳದಲ್ಲಿ ಶಿವದೇವಾಲಯವನ್ನು ನಿರ್ಮಿಸಿ ಎಂದು ಆಜ್ಞೆ ಮಾಡಿದನು. ಇದರಿಂದ ಆನಂದವಾದ ಬಂಡಿಕಾರರು ಒಪ್ಪಿದರು. ಬಂಡಿಕಾರರ ವೇಷದಲ್ಲಿದ್ದ ಶಿವನು ಪ್ರತ್ಯಕ್ಷನಾಗಿ, ಶಾಂತಮುತ್ತಯ್ಯನ ಭಕ್ತಿಗೆ ಮೆಚ್ಚಿ ವರವ ನೀಡುವೆ ಕೇಳ್ ಎನ್ನಲು, ಶಾಂತಮುತ್ತಯ್ಯನು ದೀಕ್ಷೆ ನೀಡಬೇಕೆನ್ನಲು ಅದಕ್ಕೆ ಒಪ್ಪಿದ ಶಿವ ಅದರ ವ್ಯವಸ್ಥೆಯನ್ನು ಪಂಡಿತಾರಾಧ್ಯ, ರೇವಣರಾಧ್ಯ ಏಕೋ ರಾಮ ಮರಳಸಿದ್ದರೆಂಬ ಹೆಸರಿನಿಂದ ದೀಕ್ಷೆಯನ್ನು ನೀಡಬೇಕಾದರೆ ಕರಿಮಲ್ಲಿಗೆಯ ಹೂ ಬೇಕೆನ್ನಲು, ಎಲ್ಲಿಯೂ ದೊರೆಯದ ಕಾರಣ ಶಿವನಲ್ಲಿ ಬೇಡಲು, ಶಿವ ಪ್ರತ್ಯಕ್ಷನಾಗದೆ ಇರುವುದನ್ನು ಕಂಡು, ಶಾಂತಮುತ್ತಯ್ಯ ಕೊರಳಿಗೆ ಕತ್ತಿಯ ಹಿಡಿಯಲು, ಶಿವ ಕರಿಮಲ್ಲಿಗೆಯ ಹೂಮಳೆಯನ್ನು ತರಿಸಿದನು. ಅಂದಿನಿಂದ ಈ ಸ್ಥಳವೂ ಸರವೂರು ಎಂದು ಪ್ರಸಿದ್ಧಿಯಾಗಿದೆ. ಇದೆಲ್ಲ ಶಾಂತಮುತ್ತಯ್ಯನ ಪವಾಡವೆಂದು ಹೇಳುತ್ತಾರೆ.

೩೬. ಸತ್ತ ಟಗರನ್ನು ಬದುಕಿಸಿದ ಪವಾಡ ಕಥೆ : ಇದೊಂದು ೧೨ನೇ ಶತಮಾನದಲ್ಲಿ ನಡೆದ ಪವಾಡದ ಕಥೆಯಾಗಿದೆ. ಕಲ್ಯಾಣದಲ್ಲಿ ನೆಲೆಸಿದ ಕುರುಬರು ತಮ್ಮ ಜೀವನಕ್ಕಾಗಿ ಕುರಿಗಳನ್ನು

ಸಾಕುತ್ತ, ಹಾಲು, ಮೊಸರು ಮಾರುವ ವ್ಯಾಪಾರದಲ್ಲಿ ತೊಡಗಿದರು. ಜೊತೆಗೆ ಶಿವನಿಗೆ ಭಕ್ತಿ-ಭಾವದಿಂದ ಪೂಜಿಸುತ್ತಿದ್ದರು. ಇವರ ಭಕ್ತಿಯನ್ನು ಪರೀಕ್ಷಿಸಬೇಕೆಂದು ಶಿವನು ಒಂದು ದಿನ ಮಲ್ಲಶೆಟ್ಟಿ ಮತ್ತು ಸಿದ್ದಶೆಟ್ಟಿ ಎಂಬ ಹೆಸರಿನಿಂದ ಅವರು ನೆಲೆಸಿದ್ದಲ್ಲಿಗೆ ಬಂದು, ನಾವು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದಿದ್ದೇವೆ, ಎಂದು ಕೆಲವು ದಿನಗಳವರೆಗೆ ವ್ಯಾಪಾರ ಮಾಡುತ್ತಾ, ಕುರುಬರ ವ್ಯವಹಾರಗಳನ್ನೆಲ್ಲಾ ಗಮನಿಸುತ್ತಿದ್ದರು. ಹಾಗೆಯೇ ಗಮನಿಸುತ್ತಿರಬೇಕಾದರೆ, ಕುರುಬರು ಸತ್ತ ಕುರಿಯನ್ನು ಮಾರಾಟ ಮಾಡುವುದನ್ನು ಕಂಡು, ಊರಿನವರ ಗಮನಕ್ಕೆ ತಂದು ಊರಿನವರ ಅಭಿಪ್ರಾಯದಂತೆ, ಅವರನ್ನು ಊರಿನಿಂದ ಬಹಿಷ್ಕರಿಸಿದರು. ಬಹಿಷ್ಕಾರಗೊಂಡ ಕುರುಬರು ಕಲ್ಯಾಣ ನಗರದ ದೂರದ ಕಾಡಿಗೆ ಹೋಗಿ ಜೀವಿಸತೊಡಗಿದರು. ಹೀಗೆ ಇವರು ೧೨ ವರ್ಷಗಳವರೆಗೆ ಕಾಡಿನಲ್ಲಿಯೇ ಕುರಿಗಳನ್ನು ಕಾಯುತ್ತ, ಕಷ್ಟದಲ್ಲಿಯೇ ಬದುಕುತ್ತಿದ್ದರು. ಹೀಗೆ ಜೀವನ ಸಾಗುಸುತ್ತಿರಬೇಕಾದರೆ, ಮಾರು ವೇಷದಲ್ಲಿದ್ದ ಶಿವ ಸಿದ್ದಶೆಟ್ಟಿಯ ಹೆಸರಿನಿಂದ ಅಲ್ಲಿಗೆ ಬಂದರು. ಸಿದ್ದಶೆಟ್ಟಿಗೆ ಕುರುಬರ ಗೌಡನಾದ ಮಲ್ಲಗೌಡನು ನಾವು ೧೨ ವರ್ಷಗಳಿಂದ ಈ ಕಾಡಿನಲ್ಲಿ ತುಂಬಾ ಕಷ್ಟದಿಂದ ಬದುಕುತ್ತಿದ್ದೇವೆ. ನಮಗೆ ಯಾವ ದಾರಿಯೂ ಸಿಗುತ್ತಿಲ್ಲ, ಯಾರ ಮಾರ್ಗದರ್ಶನವೂ ನಮಗೆ ದೊರೆತಿಲ್ಲ. ಇನ್ನು ಎಷ್ಟು ವರ್ಷಗಳವರೆಗೆ ಕಷ್ಟವನ್ನು ಅನುಭವಿಸಬೇಕೋ ತಿಳಿಯದಂತಾಗಿದೆ ಎಂದು ದುಃಖವನ್ನು ವ್ಯಕ್ತಪಡಿಸುತ್ತಾನೆ. ಸಿದ್ದಶೆಟ್ಟಿಯು ಇವರಿಗೆ ದಾರಿ ತೋರದೆ ಇವರ ಬಳಿ ಬಂದು ಇವರು ನಿಮಗೆ ಮುಂದಿನ ದಿನಗಳು ಸುಖಕರವಾಗಿರುತ್ತವೆ. ದುಃಖಿಸಬೇಡಿ ಸರವೂರಿನಲ್ಲಿ ಶಾಂತಮುತ್ತಯ್ಯನೆಂಬ ಗುರುವಿದ್ದಾನೆ. ಅವರನ್ನು ನೀವು ಕಂಡುಬಂದರೆ, ನಿಮ್ಮ ಕಷ್ಟಗಳೆಲ್ಲ ಪರಿಹಾರವಾಗುತ್ತವೆ ಎಂದು ಹೇಳಿ ಹೋಗುವನು. ಈ ವಿಷಯ ತಿಳಿದ ಕುರುಬರೆಲ್ಲರು ಒಟ್ಟಾಗಿ ಸೇರಿ ಸರವೂರಿಗೆ ಬಂದು ಶಾಂತಮುತ್ತಯ್ಯನಲ್ಲಿ ತಮ್ಮಲ್ಲಿರುವ ದುಃಖವನ್ನು ವ್ಯಕ್ತಪಡಿಸುವರು.

> "ಕುರುಬರಾದವರೆಲ್ಲ ಕುಲಕೆ ಹೊರಗುಯೆಂದು
> ಹೊರಡಿಸಿ ಹನ್ನೆರಡೊರುಷ
> ಹೊರಗೆ ಕಾಲವ ಕಳೆಯಲು ಒಬ್ಬ ಶರಣನು
> ಗುರುತ ಕೊಟ್ಟನು ನಿಮ್ಮ ಬಳಿಗೆ"[೨೧]

ನೀವು ನಮ್ಮ ಕುಲಕ್ಕೆ ಅಂಟಿದ ಕಳಂಕವನ್ನು ಕಳಚಿ ಉದ್ದಾರ ಮಾಡಬೇಕೆಂದು ಕೇಳಿಕೊಂಡರು. ನಿಮಗೆ ಬೇಕಾದುದನ್ನು ನೀಡುವೆವು. ದಯಮಾಡಿ ನಮ್ಮನ್ನು ಕಷ್ಟದಿಂದ ಪಾರುಮಾಡಿ ಎಂದು ಬೇಡುತ್ತಿರಲು

"ಶರಣ ಶಾಂತಯ್ಯಗೌಡರ ಕೂಡ ಮಾತಾಡು
ತಿರುವ ಸಮಯದೊಳಗಾಗ
ಕರುಣಿ ಬ್ರಹ್ಮಯ್ಯ ಬಿಟ್ಟ ಮೇಷ ಸತ್ತಿತುಯೆ
ಕುರಿಗಾಯ್ವ ಚಿಕ್ಕ ಹೇಳಿವನು"[೨]

ಶಾಂತಮುತ್ತಯ್ಯನು ಗುರು ರೇವಣಸಿದ್ದನು ಹೇಳಿದ ಪವಾಡ ಮಾಡುವ ಸಂದರ್ಭ ಈಗ ಒದಗಿದೆ ಎಂದು ಹೇಳಿ, ಸೋಮಗೌಡನನ್ನು ಕರೆದು, ಕಲ್ಯಾಣದಿಂದ ಹೊರಹಾಕಿದ ಕುರುಬರ ಸಮಸ್ಯೆಗೂ ಒಂದು ಪರಿಹಾರ ದೊರಕುತ್ತದೆ ಎಂದು ಶಾಂತಮುತ್ತಯ್ಯನು ಸತ್ತ ಶಂಭುವೆಂಬ ಟಗರಿಗೆ ನಾನಾ ಪುಷ್ಪಗಳಿಂದ ಸುಗಂಧ ದ್ರವ್ಯಗಳಿಂದ ಅಲಂಕಾರ ಮಾಡಿ, ಟಗರನ್ನು ಹೊತ್ತುಕೊಂಡು, ಕುರುಬರೆಲ್ಲರೂ, ಉಘೇ – ಉಘೇ ಎನ್ನುತ್ತಾ ರಾಜವೈಭವದಿಂದ, ಟಗರಿನ ಶವ ಯಾತ್ರೆಯನ್ನು ಮಾಡುತ್ತ ಶಾಂತಮುತ್ತಯ್ಯನು ಕಲ್ಯಾಣಕ್ಕೂ ಬರುವರು, ಆದರೆ ದಾರಿಯಲ್ಲಿಯೇ ಮಲ್ಲಶೆಟ್ಟಿಯೂ ಇವರ ಯಾತ್ರೆಯನ್ನು ತಡೆದರು. ಸತ್ತ ಟಗರನ್ನು (ಮೇಷ) ನೀವು ಕಲ್ಯಾಣಕ್ಕೆ ತಂದು ನಮಗೆಲ್ಲ ಅಪಕೀರ್ತಿಯನ್ನು ತಂದಿರುವಿರಿ ಎಂದಾಗ ಶಾಂತಮುತ್ತಯ್ಯನು ಇದರಿಂದ ಅಪಕೀರ್ತಿ ಎಲ್ಲಿಂದ ಬಂತು, ಎಂದು,

"ಬಸವ ಹುಟ್ಟಲು ತೀರ್ಥಪ್ರಸಾದವಾದವು
ಶಶಿಧರ ಕಲ್ಯಾಣಪುರದಿ
ಮೇಷ ಹುಟ್ಟ (ಸಿ) ಲೋಕಕೆ ತೋರುವೆನೆನುತಲಿ
ಈಶನ ಭಕ್ತನು ಪೇಳ್ದ"[೩]

ಸತ್ತಿರುವ ಟಗರನ್ನು ನಾನು ಬದುಕಿಸುವೆ ಎಂದು ಪ್ರತಿಜ್ಞೆ ಮಾಡುವನು. ಇವರ ಮಾತಿಗೆ ಬೆರಗಾಗಿ ಅಲ್ಲಿ ನೆರೆದಿದ್ದ ಜನರೆಲ್ಲ ಮುಖಾ–ಮುಖಿಯಾಗಿ ಮಾತನಾಡುತ್ತಿರಲು, ಉತ್ತಣ್ಣನೆಂಬ ವ್ಯಕ್ತಿಯೂ, ಬಿಜ್ಜಳನ ಆಸ್ಥಾನಕ್ಕೆ ತೆರಳಿ, ಶಾಂತಮುತ್ತಯ್ಯನ ವಿಷಯವನ್ನು ತಿಳಿಸಲು ಬಿಜ್ಜಳನು ಆಶ್ಚರ್ಯ ಚಕಿತನಾಗಿ, ಭಕ್ತಿಭಂಡಾರಿಯಾದ ಬಸವಣ್ಣನಿಗೆ ತಿಳಿಸಿದನು. ಬಸವಣ್ಣನು ವಿಷಯ ತಿಳಿದು, ನಾವೆಲ್ಲರು ಅಲ್ಲಿಗೆ ಹೋಗಿ, ಪವಾಡವನ್ನು ವೀಕ್ಷಿಸಬೇಕೆಂದು ಹೇಳಿ ಚೆನ್ನಬಸವರಾಜ, ಕಿನ್ನರಿಬ್ರಹ್ಮಯ್ಯ, ಸೊನ್ನಲಿಗೆಯ ಸಿದ್ದರಾಮ, ಚೆನ್ನಯ್ಯ ಹೊನ್ನಯ್ಯರೆಲ್ಲ ಶರಣರು ಬಸವನ ಜೊತೆ ಪವಾಡವನ್ನು ನೋಡಲು ಹೊರಟರು ಅಲಂಕಾರಿಕೃತವಾದ ಸತ್ತ ಟಗರನ್ನು ತ್ರಿಪುರಾಂತಕ ದೇವಾಲಯದ ಮುಂದೆ ಇರಿಸಲಾಗಿತ್ತು. ಬಿಜ್ಜಳ–ಬಸವಣ್ಣನ ಜೊತೆಗೆ ಶರಣರು–ಊರ ಜನರೆಲ್ಲರೂ ಸೇರಿ ಶಾಂತಮುತ್ತಯ್ಯನು ಮುಂದೆ ಏನು ಮಾಡುವನೆಂಬ ಕುತೂಹಲದಲ್ಲಿ ವೀಕ್ಷಿಸುತ್ತಿದ್ದರು. ಬಿಜ್ಜಳ ಮತ್ತು ಕೆಲ ಶರಣರು ಇವನಿಂದ ಪವಾಡ ಜರುಗುವುದು

ಅಸಾಧ್ಯವೆಂದು ಹೇಳುತ್ತಿರಲು ಬಸವಣ್ಣನು ಶಿವನ ದಯೆಯೊಂದು, ಭಕ್ತರ ಮೇಲೆ ಇದ್ದರೆ ಎಂತಹ ಪವಾಡವನ್ನು ಸಹ ಮಾಡುತ್ತೇವೆ ಶಿವನ ದಯೇ ನಿಮ್ಮ ಮೇಲೆ ಇರುವುದು ಪವಾಡವನ್ನು ಮಾಡೆ ಮಾಡುತ್ತೀರಿ ಎಂದು ಸಮಾಧಾನದ ಮಾತುಗಳನ್ನು ಆಡುತ್ತಾನೆ. ಶಾಂತಮುತ್ತಯ್ಯನು ರೇವಣಸಿದ್ದನನ್ನು ಭಕ್ತಿಯಿಂದ ಮನದಲ್ಲಿ ನೆನೆಯುತ್ತಾ.

"ರೇವಣಸಿದ್ದನ ನಿಜಭಕ್ತ ಶಾಂತಯ್ಯ
ದೇವನಂಘ್ರಿಯ ನೆನೆನೆನೆದು
ತೀವಿ ಪ್ರಸಾದ ತೀರ್ಥವ ಚೆಲ್ಲಲೆದ್ದಿತು
ಜೀವಕಳೆಯು ತುಂಬಿಕೊಂಡು"[೭೪]

ಶಾಂತ ಮುತ್ತಯ್ಯನ ಪವಾಡದಿಂದ ಶಂಭುವೆಂಬ ಟಗರು ಎದ್ದು ಮೈಗೊಡವಿಕೊಳ್ಳುತ್ತಾ, ಕಣ್ಣು ಬಿಡುತ್ತದೆ. ಇದನ್ನು ಕಂಡ ಬಿಜ್ಜಳ, ಜನರೆಲ್ಲ ಆಶ್ಚರ್ಯ ಚಕಿತರಾಗಿ ಶಾಂತಮುತ್ತಯ್ಯನಿಗೆ ಜಯಭೇರಿಯನ್ನು ಮಾಡುತ್ತಾರೆ. ಬಸವಣ್ಣನು ಇವನ ಪವಾಡಕ್ಕೆ ಮಾರುಹೋಗಿ ವರವನ್ನು ಕೊಡಲು, ನನಗೆ ಏನು ಬೇಡ ಸ್ವಾಮಿ, ಬಹಿಷ್ಕಾರಗೊಂಡ ಕುರುಬರನ್ನು ಕಲ್ಯಾಣದ ಒಳಗೆ ಪ್ರವೇಶ ನೀಡಿ ಎಂದು ಕೇಳುವರು. ಬಸವಣ್ಣನವರು ಒಪ್ಪಿ, ಅವರಿಗಾಗಿ "ಮೂರೇಣಿನ ಕಂಥೆ"ಯನ್ನು ನೀಡುವರು. ನೀಡುವುದಲ್ಲದೆ ಹಾಲುಮತದ ಒಡೆಯನನ್ನಾಗಿ ಮಾಡಿದರು.

೩೭. ಟಗರಿನ ಕೊಂಬುಗಳಲ್ಲಿ ಶಾಂತಮುತ್ತಯ್ಯ ಬೆರಳುಗಳ ಗುರುತು ಮೂಡುವ ಪವಾಡ ಕಥೆ: ಕಲ್ಯಾಣದಿಂದ ಬಹಿಷ್ಕಾರಗೊಂಡ ಕುರುಬರನ್ನು ಮರಳಿ ಊರಿಗೆ ಪ್ರವೇಶಕ್ಕಾಗಿ ಶಾಂತಮುತ್ತಯ್ಯನು ಸತ್ತ ಶಂಭುವೆಂಬ ಟಗರನ್ನು ತನ್ನ ಪವಾಡದಿಂದ ಬದುಕಿಸುತ್ತಾನೆ. ಪವಾಡ ಮಾಡಿದ ಈ ಸ್ಥಳ ಪ್ರಸಿದ್ಧವಾಗಲೆಂದು, ಕಲಕೇತ ಬ್ರಹ್ಮಯ್ಯ, ಟಗರನ್ನು

"ಪಿಡಿದು ಮೇಷನ ಕೋಡ ಕಲಕೇತ ಬ್ರಹ್ಮಯ್ಯ
ಮೃಡಹರ ಜಯಜಯನೆನುತ
ಪೊಡವಿಯೊಳಿಪ್ಪ ಪವಾಡ ಮೆರೆವೆನೆಂದು
ಒಡನೊಜ್ರಕಂಬವ ತೀರಿದ"[೭೫]

ವಜ್ರಕಂಬಕ್ಕೆ ತಿವಿದ ತಕ್ಷಣ, ಅಲ್ಲಿಂದ ಬಂಗಾರದ ಮಳೆ ಸುರಿಯುತ್ತದೆ ಆಗ ಶಾಂತಮುತ್ತಯ್ಯನು ತಗರಿನ ಕೊಂಬುಗಳನ್ನು ಗಟ್ಟಿಯಾಗಿ ಹಿಡಿದಾಗ, ಅವರ ಕೈ ಬೆರಳುಗಳ ಗುರುತುಗಳು ನಾಟಿರುವುದು ಕಾಣುತ್ತೇವೆ. ಈಗಲೂ ನಾವು ಗಮನಿಸಿದಾಗ, ಟಗರಿನ ಕೊಂಬುಗಳಲ್ಲಿ ಕೈ ಬೆರಳುಗಳು ಗುರುತಿರುವುದು ಕಾಣುತ್ತೇವೆ. ಈ ಗುರುತುಗಳು ಶಾಂತಮುತ್ತಯ್ಯನ ಪವಾಡದಿಂದಲೇ ಆಗಿರುವವು ಎಂದು ಈಗಲೂ ಹಾಲುಮತದವರು ನಂಬುತ್ತಾರೆ.

ಇತರೆ ಪವಾಡಗಳು

೧. ಸೊಸೆಯಂದಿರಿಗೆ ಮಹಾಲಿಂಗರಾಯನ ಮಹಿಮೆ ತಿಳಿದ ಪವಾಡ ಕಥೆ

೨. ಕೋಣನೂರಿನಲ್ಲಿ ನಡೆದ ಪವಾಡಗಳು

೩. ಡಂಕನಾಡ ದ್ಯೆಗೊಂಡನ ಶ್ರೀಮಂತಿಕೆ ಕಳೆದ ಮಾಳಿಂಗರಾಯನಿಂದ ಮರುಕಳಿಸಿದ ಕಥೆ

೪. ಮುದ್ದವ್ವ-ಮುದ್ದಾಯಿಯರ ಮದುವೆಯ ಕಥೆ:

೫. ಮುದ್ದುಗೊಂಡ ಮತ್ತು ಮುದ್ದವ್ವರ ಮಕ್ಕಳ ಉದ್ಯೋಗಗಳು ಮತ್ತು ಅವರ ವಂಶವೃದ್ಧಿಯ ಕಥೆ

೬. ದಾಕ್ಷಾಯಣಿಯ ಮದುವೆಯ ಕಥೆ

೭. ಸೃಷ್ಟಿಕರ್ತ ಬ್ರಹ್ಮನು, ಸಾಮಾನ್ಯ ಮಾನವ ಬ್ರಹ್ಮನಾಹಿ ಕಥೆ

೮. ಪದ್ಮಣ್ಣ ಮತ್ತು ಚುಮಲಾದೇವಿಯ ವಿವಾಹದ ಕಥೆ

೯. ಕುದಯ ರಕ್ಕಸಿಯು ಚುಂಚಲೆಯನ್ನು ತನ್ನ ಮಗಳಂತೆ ಸಾಕಿದ ಕಥೆ

೧೦. ತುಕ್ಕಪ್ಪರಾಯ ಅಮೃತಮತಿ ದಂಪತಿಗಳು ಸಂತಾನ ಪ್ರಾಪ್ತಿಗಾಗಿ ತಪಸ್ಸು ಮಾಡಿದ ಕಥೆ

೧೧. ಶ್ರೀ ಗುರು ಸೋವಾರಿಸಿದ್ದರ ಪವಾಡದಿಂದ ತಾಮಟಗೇರ ಮಗುವನ್ನು ಬದುಕಿಸಿದ ಕಥೆ

೧೨. ಶ್ರೀ ಗುರುಗೌಡ ಬಂಗಾಲ ಜೋಗಿವರ್ಯರು ಸತಿ ಕನಾಬಾಯಿ ಮತ್ತು ಪತಿ ಸೋಮರಾಯರ ಭಕ್ತಿಯನ್ನು ಪರೀಕ್ಷಿಸಿದ ಕಥೆ

೧೩. ಭೋಗ ಸಿದ್ದನಿಗೆ ವರ ನೀಡಿದ ಕಥೆ

೧೪. ಹಾಲುಮತ ಹುಟ್ಟಿನ ಹಿನ್ನೆಲೆಯ ಕಥೆ

೧೫. ಶಿವನು ಹಾಲುಮತಕ್ಕೆ ಭಂಡಾರವನ್ನು ಸೃಷ್ಟಿಸಿ ನೀಡಿದ ಕಥೆ

೧೬. ಹಾಲುಮತದ ಶ್ರೇಷ್ಠವಾದ ಡೊಳ್ಳು, ನೆಪೇರಿಯ ಸೃಷ್ಟಿಯ ಹಿನ್ನೆಲೆಯ ಕಥೆ

೧. ಸೊಸೆಯಂದಿರಿಗೆ ಮಹಾಲಿಂಗರಾಯನ ಮಹಿಮೆ ತಿಳಿದ ಪವಾಡ ಕಥೆ : ಮಹಾಲಿಂಗರಾಯನ ಸೊಸೆಯಂದಿರು ಒಂದು ದಿನ ನೀರಿಗಾಗಿ ಬಿಂದಿಗೆಗಳನ್ನು ತೆಗೆದುಕೊಂಡು, ಹೊಳೆಗೆ ಹೋಗಿದ್ದರು. ಅವರು ಅಲ್ಲಿಯೇ ಸ್ವಲ್ಪ ಹೊತ್ತು ಕಾಲ ಕಳೆಯಲು, ಆಕಾಶ ಮಾರ್ಗವಾಗಿ ಪದ್ಮಣ್ಣನು ಅಷ್ಟಮಹಾಸಿದ್ಧಿಗಳೊಂದಿಗೆ ಪಲ್ಲಕ್ಕಿಯಲ್ಲಿ ಆರೂಢರಾಗಿ ಗುರುಗಳ ಆಜ್ಞೆಯಂತೆ ಬರುತ್ತಿದ್ದರು. ಆಕಾಶದಲ್ಲಿ ಹೋಗುತ್ತಿರುವ ಪಲ್ಲಕ್ಕಿಯನ್ನು ಕಂಡು, ಆಶ್ಚರ್ಯದಿಂದ ತಮ್ಮಲ್ಲಿಯೆ ಇವರು

ಯಾರೋ ದೊಡ್ಡ ಭಕ್ತರಿರಬೇಕು. ಮಾವನಿಗಿಂತಲೂ ದೊಡ್ಡ ಭಕ್ತರು ಇವರು. ಈ ಮಾತುಗಳನ್ನು ಅಂತರ್‌ಯಾಮಿಯಾಗಿ ಅರಿತುಗೊಂಡ ಮಹಾಲಿಂಗರಾಯನು ಆಕಾಶಮಾರ್ಗದಲ್ಲಿನ ಪಲ್ಲಕ್ಕಿಯನ್ನು ಭಂಡಾರ ಎರಚಿ ನಿಲ್ಲಿಸಿದನು. ಎಲ್ಲರಿಗೂ ಏನಿದು ಹೀಗೆ ನಿಂತು ಹೋಗಿದೆ ಎಂದು ಯೋಚಿಸಲು, ಅಲ್ಲಿಗೆ ಮಹಾಲಿಂಗರಾಯನು ಬಂದನು ಇದನ್ನು ಕಂಡ ಸೊಸೆಯಂದಿರು ಗಾಬರಿಯಿಂದ ಭಯವಾಗಿ ಮೌನವಾಗಿ ನಿಂತು ಬಿಟ್ಟರು. ಮಹಾಲಿಂಗರಾಯ ಅವರಿಗೆ ನೀವು ಮುಂದೆ ಮುಂದೆ ಹೋಗಿ, ಬಿಂದಿಗೆಗಳು ನಿಮ್ಮ ಹಿಂದೆ ಬರುತ್ತವೆ ಎಂದು ಹೇಳಿದನು. ಹಾಗೆಯೇ ಅವರು ಮುಂದೆ-ಮುಂದೆ ಹೋಗಲು, ಬಿಂದಿಗೆಗಳು ಹಿಂದೆ-ಹಿಂದೆ ಹೋದವು ಇದನ್ನು ಕಂಡ ಸೊಸೆಯಂದಿರಿಗೆ ಮಹಾಲಿಂಗರಾಯನ ಮಹಿಮೆ ತಿಳಿಯಿತು.

೨. ಕೋಣನೂರಿನಲ್ಲಿ ನಡೆದ ಪವಾಡಗಳು : ಬೀರಪ್ಪ ಮತ್ತು ಮಾಳಿಂಗರಾಯರ ಗುರು-ಶಿಷ್ಯರ ಸಂಬಂಧ ಕಂಡು ಜಡೆಸಿದ್ದರು ಅಸೂಯೆಪಟ್ಟರು. ಅವರಿಗೆ ಬುದ್ಧಿಯ ಕಲಿಸಬೇಕೆಂದು ಬೀರಣ್ಣ ಕೋಣನೂರಿನ ಕರಿಸಿದ್ದೇಶ್ವರ ಜಾತ್ರೆಗೆ ಮಾಳಿಂಗರಾಯನನ್ನು ಕಳುಹಿಸಿದನು. ಆಗ ಇದೇ ಒಳ್ಳೆಯ ಸಮಯವೆಂದು ಭಾವಿಸಿ ಜಡೆಸಿದ್ದರು, ಅವನನ್ನು ಕೊಲ್ಲಲು ಸಂಚು ಮಾಡಿ, ದಾರಿಯಲ್ಲಿ ಹೋಗುವಾಗ, ಎಲ್ಲರು ಒಟ್ಟಿಗೆ ಸೇರಿ ಅವನನ್ನು ಕೊಲ್ಲಲು ಪ್ರಯತ್ನಿಸಿದರು. ಆದರೆ ಮಾಳಿಂಗರಾಯನು ಅವರಿಂದ ತಪ್ಪಿಸಿಕೊಂಡು ಕೋಣನೂರ ಜಾತ್ರೆಯ ಅಗ್ನಿಕುಂಡದಲ್ಲಿ ಜಿಗಿದನು. ಜಿಗಿದಾಗ ಅಗ್ನಿಯು ಆರಿತು, ಅಗ್ನಿ ಅರುವಾಗ ಜಡೆಸಿದ್ದರು ಹಾಗೂ ಜೊತೆಗೆ ಇರುವವರೆಲ್ಲರೂ ಅಂಧಕಾರರಾದರು. ಗುರುಗಳ ಬಳಿ ಮಾಳಿಂಗ ಬಂದು ನಡೆದ ಸಂಗತಿಯನ್ನು ತಿಳಿಸಿದನು. ಗುರು ನೀನು ಹೋಗಿ ಅಗ್ನಿಯನ್ನು ಹೊತ್ತಿಸಿ ಬಾ ಎಂದನು. ಅದರಂತೆ ಹೋಗಿ ಅಗ್ನಿ ಕುಂಡದಲ್ಲಿ ಕಾಲಿಟ್ಟರೇ ಅಗ್ನಿ ಉರಿಯಲಾರಂಭಿಸಿತು.

೩. ಡಂಕನಾಡ ದೈಗೊಂಡನ ಶ್ರೀಮಂತಿಕೆ ಕಳೆದ ಮಾಳಿಂಗರಾಯನಿಂದ ಮರುಕಳಿಸಿದ ಕಥೆ: ಡಂಕನಾಡ ದೈಗೊಂಡನು ಒಬ್ಬ ದೊಡ್ಡ ಶ್ರೀಮಂತನಾಗಿದ್ದನು. ಆದರೆ ಯಾವುದೇ ದಾನ-ಧರ್ಮಗಳನ್ನು ಮಾತ್ರ ಮಾಡುತ್ತಿರಲಿಲ್ಲ. ಇವನ ಈ ವರ್ತನೆಯಿಂದಾಗಿ ಕಲ್ಮಾಯಿ ಇವರ ಮನೆಯಲ್ಲಿ ನೆಲೆನಿಂತಳು. ಅಂದಿನಿಂದ ಇವರ ಸಂಪತ್ತೆಲ್ಲ ಕರಗಿ ಹೋಯಿತು. ನೀಲಲೋಚನಾಳು ಬೇರೆಯವರ ಮನೆಯಲ್ಲಿ ಕೆಲಸ ಮಾಡಿ ತಂದ ಊಟವನ್ನು ಮಾಡುವ ಪ್ರಸಂಗ ಬಂದಿತು. ಒಂದು ದಿನ ಊರ ಜನರೆಲ್ಲ ಗುಂಪು-ಗುಂಪಾಗಿ ಬುತ್ತಿ ಕಟ್ಟಿಕೊಂಡು ಹೋಗುವುದನ್ನು ಕಂಡು, ದೈಗೊಂಡನು ಎಲ್ಲಿಗೆ ಹೋಗುತ್ತಿರುವಿರಿ ಎಂದಾಗ ನಾವೆಲ್ಲರೂ ಬೀರಪ್ಪನ ಮಠಕ್ಕೆ ಹೋಗುತ್ತಿದ್ದೇವೆ. ಅವರು ಕೇಳಿದ ವರಗಳನ್ನು ನೀಡುವರೆಂದು ಹೇಳಿದರು. ಆಗ ನಾನು ನಿಮ್ಮ ಜೊತೆ ಬರುತ್ತೇನೆಂದು ಹೇಳಿ, ಅವರೊಂದಿಗೆ ಹೋದನು. ಮಠ ಸೇರಿ ಎಲ್ಲರೂ ಬೀರಪ್ಪನ

ದರ್ಶನ ಪಡೆದು, ಹೋದರು. ದೈಗೊಂಡನು ಒಂಟಿಕಾಲಿನಲ್ಲಿ ಬೀರಪ್ಪನನ್ನು ದ್ಯಾನಿಸುತ್ತಿದ್ದನು. ಇದನ್ನು ಕಂಡ ಮಾಳಿಂಗ, ಗುರು ಬೇಡವೆನ್ನದೇ ಶ್ರೀಮಂತಿಕೆ ಬರುವ ಹಾಗೆ ವರ ನೀಡಿದನು. ಆದರೆ ಮುಂದೆ ದೈಗೊಂಡನು ಬೀರಪ್ಪ ಮತ್ತು ಮಾಳಿಂಗರಾಯರನ್ನೇ ಮರೆತು ಹೋಗಿ ಕಷ್ಟಕ್ಕೆ ಈಡಾದನು.

೪. ಮುದ್ದವ್ವ-ಮುದ್ದಾಯಿಯರ ಮದುವೆಯ ಕಥೆ: ಶಿವ-ಪಾರ್ವತಿಯರು ಸೃಷ್ಟಿಸಿದ ಹಾಲುಮತದ ಶ್ರೇಷ್ಠರಾದ ಮುದ್ದುಗೊಂಡ ಮತ್ತು ಮುದ್ದವ್ವರು ದಿನ ಕಳೆದಂತೆ ಸುಂದರವಾಗಿ ಬೆಳೆಯ ತೊಡಗಿದರು. ಯಾವಾಗಲೂ ದೇವರ ಸೇವೆಯಲ್ಲಿ ತಲ್ಲೀನರಾಗಿರುತ್ತಿದ್ದರು. ೨೪ ವರ್ಷಗಳು ಕಳೆದವು. ಬಾಲ್ಯದಿಂದ ಯೌವನಕ್ಕೆ ಕಾಲಿಟ್ಟರು. ಶಿವ-ಪಾರ್ವತಿಯರು ಇವರಿಗೆ ವಿವಾಹ ಮಾಡಿಸಬೇಕೆಂದು ತೀರ್ಮಾನಿಸಿ ಬ್ರಹ್ಮ, ವಿಷ್ಣು, ಇಂದ್ರ, ರುದ್ರ ಜೊತೆ ಸಪ್ತರ್ಷಿಗಳಾದ "ವಶಿಷ್ಠ, ಮರೀಚಿ, ಅತ್ರಿ, ಅಂಗೀರ, ಪುಲಸ್ತಿ, ಋತು, ಭೃಗು ಹಾಗೂ ಅವರೆಲ್ಲರ ಪತ್ನಿಯರಾದ ಅರುಂಧತಿ, ಕಲಾ, ಅನುಸೂಯಾ, ಸೃದ್ಧಾ, ಹವಿ, ಪುಲಗಾಹತ, ಸ್ವಾತಿ ಹಾಗೂ ಇನ್ನಿತರ ಅನೇಕ ಋಷಿ, ಮುನಿಗಳನ್ನು ಹಾಗೂ ಯಕ್ಷ, ಕಿನ್ನರ, ಗರುಡ, ಗಂಧರ್ವಾದಿ ಎಲ್ಲರನ್ನು ಬರಮಾಡಿಕೊಂಡರಲ್ಲದೆ, ಮೂವತ್ತು ಮೂರು ಕೋಟಿ ದೇವ-ದೇವಿಯರನ್ನು ಎಂಬತ್ತೆಂಟು ಸಾವಿರ ಮುನಿಗಳನ್ನು ಬರಮಾಡಿಕೊಂಡರು. ಹಾಲುಮತಕ್ಕೆ ಸೋದರ ಮಾವನಾದ ಮಯನಾಯಕ ಮುನಿಯನ್ನು ಬರಮಾಡಿಕೊಂಡು ದೇವನು ಒಳ್ಳೆಯ ಶುಭ ಮುಹೂರ್ತವನ್ನು ನೋಡಿ ಸರ್ವರಿಗೂ ಒಂದೊಂದು ಶುಭ ಕಾಮನೆಗಳನ್ನು ಒಪ್ಪಿಸಿದರು."[೭೬] ಈ ರೀತಿ ವಿವಾಹಕ್ಕೆ ಸಿದ್ಧತೆ ನಡೆಸಿ, ಸಪ್ತ ಸಮುದ್ರಗಳಿಂದ ಜಲ ತಂದು ವಿವಾಹದ ಶುಭ ಕಾರ್ಯಗಳಿಗೆ ಬಳಸಲಾಯಿತು). (ಸಪ್ತ ಸಮುದ್ರ ಲವಣ ಸಮುದ್ರ, ಇಕ್ಷುರಸ, ದುಗ್ದಸಮುದ್ರ, ದರೀಸಮುದ್ರ, ಘೃತಸಮುದ್ರ, ಸುರಾಸಮುದ್ರ, ಕ್ಷೀರ ಸಮುದ್ರ) ದೇವಾನು ದೇವತೆಗಳು ಸೇರಿ ತೋರಣಗಳಿಂದ ಭೂಮಿಯನ್ನು ಅಲಂಕಾರಗೊಳಿಸಿ, ವಿಜೃಂಭಣೆಯಿಂದ ವಿವಾಹವನ್ನು ನೆರವೇರಿಸಲಾಯಿತು. ಮದುವೆಯ ಬಳಿಕ ಶಿವ ಇವರ ಬಳಿ ಬಂದು ಆಶೀರ್ವದಿಸುತ್ತಿರಲು, ಮಯನಾಯಕನು ಬಂದು, ಹಾಲಿನಂತಹ ಮನಸ್ಸಿರುವ ನಿಮ್ಮಿಂದ ಹಾಲುಮತ ಹುಟ್ಟು ಆಗಿ, ಸಮಾಜದಲ್ಲಿ ಒಂದು ಉತ್ತಮ ಕುಲವಾಗಿ ಬೆಳೆಯಬೇಕೆಂದು, ಆಶೀರ್ವದಿಸಿ ತಮ್ಮ ನೆಲೆಗೆ ಸಾಗುತ್ತಾರೆ. ಶಿವ-ಪಾರ್ವತಿಯರ ಕೃಪೆಯಿಂದ ಹುಟ್ಟಿ ಬೆಳೆದ ಮುದ್ದುಗೊಂಡ ಮತ್ತು ಮುದ್ದವ್ವರ ವಿವಾಹ ತುಂಬಾ ವಿಜೃಂಭಣೆಯಿಂದಲೇ ನೆರವೇರಿತು. ಶೀವ-ಪಾರ್ವತಿಯರು ಭೂಲೋಕದಲ್ಲಿ 'ಜಾಗ್ರತಪುರ' ಎಂಬ ಸ್ಥಳವನ್ನು ಇವರಿಗೆ ನೀಡಿ ಸುಖವಾಗಿ ಇರಿ ಎಂದು ಆಶೀರ್ವದಿಸಿ ಕೈಲಾಸಕ್ಕೆ ತೆರಳಿದರು.

೫. **ಮುದ್ದುಗೊಂಡ ಮತ್ತು ಮುದ್ದವ್ವರ ಮಕ್ಕಳ ಉದ್ಯೋಗಗಳು ಮತ್ತು ಅವರ ವಂಶವೃದ್ಧಿಯ ಕಥೆ:** ಆದಿಗೊಂಡನು ಶಿವನ ಸ್ಮರಣೆ ಮಾಡುತ್ತ ಮನೆಯ ಪ್ರತಿಯೊಂದು ಕಾರ್ಯವನ್ನು ಮಾಡುವ ಜವಾಬ್ದಾರಿ ಹೊಂದಿದ್ದ. ಈತನಿಗೆ ಆರು ಜನ ಪುತ್ರರಿದ್ದರು. ಚೊಚ್ಚಲಮಗ ಅಮರಗೊಂಡ, ಎರಡನೆಯವನು ತುಮರಗೊಂಡ, ಮೂರನೆಯವನು ವೀರಗೊಂಡ, ನಾಲ್ಕನೆಯವರು ಮಾರಾಯಗೊಂಡ, ಐದನೆಯವರು ಶಿವಗೊಂಡ, ಆರನೆಯವರು ಕಡೆ ಹುಟ್ಟು ಶಿವಪದ್ಮನಾಭ ಆದಿಗೊಂಡನು ಎಲೆಯ ಮೇಲೆ ನೋಡಿ ಶಾಸ್ತ್ರ ಹೇಳುವ ಕಾರ್ಯ ನಿರ್ವಹಿಸುತಿದ್ದನು. ಇದೇ ಮುಂದುವರೆದು ಇವರ ವಂಶಸ್ಥರಿಗೆ "ಶಾಸ್ತ್ರಗೊಲ್ಲ ಶಾಸ್ತ್ರಗೊಲ್ಲ"ರೆಂಬ ನಾಮವೇ ಇದೆ. ಇವರ ಮಕ್ಕಳು ಆಚಗೊಂಡ, ಮಾಚಗೊಂಡ, ಲಕ್ಕೊಂಡನು ಮನೆ-ಮನೆಗಳಿಗೆ, ಆಶ್ರಮಗಳಿಗೆ, ತೆರಳಿ ಚರಿತ್ರೆ ಹೊಗಳುವ ಕಾರ್ಯ ಮಾಡುತ್ತಿರುವರು. ಆದರೆ ಇವರ ಸಹೋದರರು ಇದಕ್ಕೆ ವಿರೋಧಿಸಿದರು. ಇವರ ಮಾತು ಕೇಳದೆ ಇದ್ದುದರಿಂದ, ಲಕ್ಕೊಂಡನ ಎರಡು ಕಾಲುಗಳನ್ನು ಕಡಿದರು. ತನ್ನ ಎರಡು ಕಾಲುಗಳು ಹೋದರೂ, ಲೆಕ್ಕಿಸದೆ, ಶಿವಧ್ಯಾನದಿಂದ ತನ್ನ ಕಾರ್ಯವನ್ನು ಮಾಡುತ್ತಿದ್ದನು. ಇವನ ಭಕ್ತಿಗೆ ಶಿವ ಮೆಚ್ಚಿ, ನಿನ್ನ ವಂಶದವರು 'ಹೆಳವರು' ಎಂದು ಪ್ರಸಿದ್ಧಿಯಾಗಲಿ ಎಂದು ಹೇಳಿ ಮಾಯವಾದನು. ಲಕ್ಕೊಂಡನಿಗೆ ಹೆಳವಯ್ಯ, ಜಂಗಮಯ್ಯನೆಂಬ ಇಬ್ಬರು ಮಕ್ಕಳಿದ್ದರು.

ಖ್ಯಾಮಗೊಂಡರು ದನ-ಕರುಗಳನ್ನು ಕಾಯುವ ಮತ್ತು ಒಕ್ಕುಲತನ ಮಾಡುವ ಕಾರ್ಯದಲ್ಲಿ ನಿರತನಾಗಿದನು. ಇವರ ಭಕ್ತಿಗೆ, ಕೃಷಿಗೆ ಮೆಚ್ಚಿ ಋಷಿಗಳು, ಸಿದ್ದಿಗಳು ನಿಮ್ಮ ವಂಶಜರು ಕುಡೊಕ್ಕಲಿಗ, ಲೋಕದಲ್ಲಿ ಪ್ರಸಿದ್ಧಿ ಪಡೆಯಲೆಂದು ಆಶೀರ್ವದಿಸಿದರು. ಇವರಿಗೆ ಐದು ಜನ ಮಕ್ಕಳು ಗುರುನಾಥ, ಆದಿನಾಥ, ಈಶ್ವರಪ್ಪ, ಯಮನವ್ವಾ, ಸತ್ಯವತಿ ಎಂಬುವರು ಇವರ ಮಕ್ಕಳು.

ದ್ಯಾಮಗೊಂಡನು ಶಿವಭಕ್ತಿಯಿಂದ ಸಿದ್ಧಿಪಡೆಯಬೇಕೆಂದು, ಹಠಯೋಗಿಯಾಗಿ ಕಠೋರ ತಪಸ್ಸನ್ನು ಮಾಡಿ, ಅನೇಕ ಪವಾಡಗಳನ್ನು ಮಾಡುವ ವ್ಯಕ್ತಿಯಾದನು. ಇವರ ವಂಶಜರನ್ನು 'ಸುಡಗಾಡಸಿದ್ದ'ರೆಂದು ಕರೆಯುತ್ತಾರೆ. ಇವರ ವಂಶಜರು ಹನ್ನೊಂದು ಜನ ಸಿದ್ದಯ್ಯ, ಚೋಗಯ್ಯ, ಅಂಡಿತಯ್ಯ, ಅಮೃತಯ್ಯ, ಅರ್ಥಯ್ಯ, ಕಾಮವ್ವ, ಸಿದ್ದಮ್ಮ, ಭೂತಯ್ಯ, ವೇತಾಳಸಿದ್ಧ, ಕಾಡಸಿದ್ದ, ಸಂಕಯ್ಯರು ದ್ಯಾಮಗೊಂಡನ ಮಕ್ಕಳು, ದ್ಯಾಮಗೊಂಡರ ಮಕ್ಕಳು ಸುಡುಗಾಡಸಿದ್ದರು ಮತ್ತು ಶಂಖದಯ್ಯ ಸ್ವಾಮಿಗಳೆಂದು ಪ್ರಸಿದ್ಧಿ ಪಡೆದಿದ್ದಾರೆ.

ನೇಮಗೊಂಡನು ತನ್ನ ಭಕ್ತಿಯಿಂದ ಶಿವನನ್ನು ಮೆಚ್ಚಿಸಿ ಶಿವನಿಂದ ನಿನ್ನ ಉದರದಿಂದ ಜನಿಸಿದವರಿಗೆ ಗೌಲತ್ತಿನವರು ಅಥವಾ ಬಸವಣ್ಣನಾಡಿಸುವವರು ಎಂಬ ಅಭಿದಾನ ಬಂದು

ನಿನ್ನ ಬಳ್ಳಿ ಜಗದಾದ್ಯಂತ ಹಂದರದಂತಾಗಲಿ ಎಂದು ಶುಭಾಶೀರ್ವಾದ ಮಾಡಿ, ಪರಶಿವನು ಅಲ್ಲಿಂದ ಮಾಯವಾದನು. ನೇಮಗೊಂಡನ ಮಕ್ಕಳು ಕಾಳಗೊಂಡ, ಭಯರಗೊಂಡ ಮತ್ತು ಪದ್ಮಾವತಿ ಎಂಬ ಮಕ್ಕಳಿದ್ದರು.

ಕೊನೆಯವನು ಪದ್ಮಗೊಂಡನು ಇವನು ಮಾತಾ-ಪಿತೃಗಳ ಮತ್ತು ಸಹೋದರರ ಒಲುಮೆಯಿಂದಾಗಿ ವಿವಾಹದ ನಂತರ ಜಾಗ್ರಪುರದಲ್ಲಿಯೇ ಅತಿ ಸಂತೋಷದಿಂದ ಕಾಲಹರಣ ಮಾಡುತ್ತಿದ್ದನು.

೬. **ದಾಕ್ಷಾಯಣಿಯ ಮದುವೆಯ ಕಥೆ :** ದಾಕ್ಷಾಯಣಿಯು ಶಿವನನ್ನು ಮದುವೆಯಾಗಬೇಕೆಂದು ಬಯಸಿ, ಶಿವನನ್ನು ಭಕ್ತಿಯಿಂದ ಪೂಜೆ ಮಾಡುತ್ತಿರಲು, ಒಂದು ದಿನ ಶಿವ ಪ್ರತ್ಯಕ್ಷನಾಗಿ, ದಾಕ್ಷಾಯಣಿಯೇ ಏನು ವರ ಬೇಕು ಕೇಳು ಎಂದಾಗ, ಅದಕ್ಕೆ ಪ್ರತಿಯಾಗಿ ದಾಕ್ಷಾಯಣಿಯೇ ಶಿವನೇ ನಾನು ನಿಮ್ಮನ್ನು ವರಿಸಬೇಕೆಂದು ಬಯಸುತ್ತಿದ್ದೇನೆ. ಶಿವನು ನೀನೆ ನನ್ನ ಅರ್ಧಾಂಗಿನಿಯಾಗು ಎಂದು ಹೇಳಿದನು. ಶಿವನು ಈ ವಿಷಯವನ್ನು ಬ್ರಹ್ಮನಿಗೆ ತಿಳಿಸಿ, ನೀವು ದಕ್ಷಬ್ರಹ್ಮನ ಬಳಿ ಹೋಗಿ ನಮ್ಮಿಬ್ಬರ ವಿವಾಹದ ಪ್ರಸ್ತಾಪವನ್ನು ಮಾಡಿಕೊಂಡು ಬನ್ನಿ ಎಂದು ಆಜ್ಞೆ ಮಾಡಿದನು. ಬ್ರಹ್ಮನು ದಕ್ಷಬ್ರಹ್ಮನ ಬಳಿ ಹೋಗಿ, ಅವನ ಅಭಿಪ್ರಾಯವನ್ನು ತಿಳಿದುಕೊಂಡನು. ಈ ವಿವಾಹಕ್ಕೆ ದಕ್ಷಬ್ರಹ್ಮನು ಒಪ್ಪಿದ ವಿಷಯವನ್ನು ತಿಳಿಸಿ, ಮದುವೆಯನ್ನು ಮಾಡಲು ಎಲ್ಲ ರೀತಿಯ ಸಿದ್ದತೆಯನ್ನು ಮಾಡಿಕೊಂಡರು. ಚೈತ್ರ ಶುದ್ಧ ತ್ರಯೋದಶಿ ರವಿವಾರ ಪಾಲ್ಗುಣ ನಕ್ಷತ್ರದಿನದಂದು ದಕ್ಷನ ಮನೆಯಲ್ಲಿ, ಯಾವುದೇ ದೋಷವಿಲ್ಲದ ಕಂಬಳಿಯ ಮೇಲೆ ಮಂಗಳ ವಾದ್ಯಗಳೊಂದಿಗೆ ಶಿವ-ದಾಕ್ಷಾಯಣಿಯರ ವಿವಾಹವಾಯಿತು.

೭. **ಸೃಷ್ಟಿಕರ್ತ ಬ್ರಹ್ಮನು, ಸಾಮಾನ್ಯ ಮಾನವ ಬ್ರಹ್ಮನಾಹಿ ಕಥೆ :** ಶಿವ-ದಾಕ್ಷಾಯಣಿಯರ ವಿವಾಹದ ಸಂದರ್ಭದಲ್ಲಿ ಶಿವ-ದಾಕ್ಷಾಯಣಿಯರು ಅಗ್ನಿ ಪ್ರದಕ್ಷಿಣೆ ಮಾಡುತ್ತಿರುವಾಗ, ಶಿವನ ಮಾಯೆಯೋ ಗೊತ್ತಿಲ್ಲ, ದಾಕ್ಷಾಯಣಿಯನ್ನು ಕಂಡ ನಾನು ಕಾಮಕ್ಕೆ ಒಳಗಾಗಿ ಅವಳ ಸುಂದರ ಮುಖವನ್ನು ಸಂಪೂರ್ಣವಾಗಿ ನೋಡಿದೆ. ಆಗ ಬರ್ಪದಂತೆ ಗಟ್ಟಿಯಾದ ನನ್ನ ವೀರ್ಯದ ನಾಲ್ಕು ಹನಿಗಳು ನೆಲಕ್ಕೆ ಬಿದ್ದವು. ಅದನ್ನೇ ಶಿವನು ತನ್ನ ದಿವ್ಯ ದೃಷ್ಟಿಯಿಂದ ನೋಡಿ, ಪರಸ್ತ್ರೀಯನ್ನು ಕಾಮದೃಷ್ಟಿಯಿಂದ ನೋಡಿದ ನನ್ನನ್ನು ಕೋಪದಿಂದ ನೋಡಿದನು. ಎಲ್ಲ ದೇವಾನುದೇವತೆಗಳ ಮುಂದೆ ಬ್ರಹ್ಮನಿಗೆ ಅವಮಾನವಾಯಿತು. ತಪ್ಪಿನಿಂದಾಗಿ ಮೌನವಾಗಿ ನಿಂತಿದ್ದನು. ಶಿವನಿಗೆ ಎಲ್ಲರೂ ಸಮಾಧಾನದ ಮಾತುಗಳನ್ನು ಆಡಿದರು. ಆಗ ಶಿವನು ಶಾಂತನಾಗಿ, ಬ್ರಹ್ಮನಿಗೆ ತಪ್ಪಿನ ಮುಕ್ತಿಗಾಗಿ, ಮುಂದೆ ನನ್ನ ಅಪ್ಪಣೆಯಿಂದ ದಿನಾಲು ಸತಿದೇವಿ ಮತ್ತು ಶಿವನ ಸೇವೆ ಮಾಡಬೇಕು, ದೋಷ ನಿವಾರಣಕ್ಕಾಗಿ ಸಪ್ತ ಸಮುದ್ರ ಜಂಬೂ ದ್ವೀಪದಲ್ಲಿ ಹೂ-ಸೀತಾಳ

ತಂದು ನನ್ನ ಪೂಜೆ ಮಾಡು. ಆವಾಗ ನೀನು ಮಾಡಿದ ದೋಷ ದೂರ ಮಾಡುತ್ತೇನೆ. ಎಂದು ಶಿವನು ಬ್ರಹ್ಮನಿಗೆ ಹೇಳಿದನು. ಹಾಗೆಯೇ ನೀನು ನನ್ನ ಪೂಜೆಯನ್ನು ಮಾಡು, ಮುಂದೆ ನಾನು ನಿನ್ನ ಉದರದಿಂದ ಹುಟ್ಟಿ, ನಿನ್ನ ಜನ್ಮವನ್ನು ಸಾರ್ಥಕ ಪಡಿಸುತ್ತೇನೆ. ನೀನು ಹನ್ನೆರಡು ವರ್ಷಗಳು ಮೌನವಾಗಿ ಜೀವಿಸಿ, ತದನಂತರ ನೀನು ಮತ್ತೆ ದೇವ ಬ್ರಹ್ಮನಾಗುವೆ ಎಂದು ತಿಳಿಸಿದರು. ನಿನ್ನ ವೀರ್ಯದಿಂದ ಬಿದ್ದ ನಾಲ್ಕು ಹನಿಗಳಿಂದ ಆಕಾಶದಲ್ಲಿ ಪ್ರಳಯ ತರಿಸುವ "ಸಂವರ್ತ, ಅವರ್ತಕ, ಪುಷ್ಕರ, ದ್ರೋಣ ಹೀಗೆ ಹೆಸರಿನಿಂದ ಮುಂದೆ ಋಷಿಸಿದ್ದರ ದೃಷ್ಟಿ ಬಿದ್ದ ಕೂಡಲೇ ಅವೆಲ್ಲ ಮೇಘಗಳಾಗಿ ಪರಿವರ್ತಿಸುವವು ಎಂದು ಶಿವ ಬ್ರಹ್ಮನಿಗೆ ತಿಳಿಸಿದನು.

೮. ಪದ್ಮಣ್ಣ ಮತ್ತು ಚುಮಲಾದೇವಿಯ ವಿವಾಹದ ಕಥೆ: ಶಿವಪದ್ಮನು (ಪೆದುಮಣ್ಣ) ಕುರಿ ಕಾಯುತ್ತಿರಬೇಕಾದರೆ, ಒಂದು ದಿನ ರೇವಣ್ಣಸಿದ್ದನು ಬಂದು 'ಕುಮಾರನೇ ನನಗೆ ಹಸಿವೆ ಬಹಳವಾಗಿದೆ, ನನ್ನ ಹಸಿವೆಯನ್ನು ನೀನೇ ಹಿಂಗಿಸಿಬೇಕೆಂದು' ಕೇಳಿಕೊಂಡರು ಈ ಪುರಾಣದಲ್ಲಿ ರೇವಣಸಿದ್ದನು ಆಗಮಿಸಿದರೆ, ಜನಪದ ಹಾಲುಮತ ಪುರಾಣದಲ್ಲಿ ಶಿವನೇ ಪದುಮಣ್ಣನ ಹತ್ತಿರ ಬರುತ್ತಾನೆ. ಬಂದು ಹಸಿವಾಗಿದೆ ಎಂದು ಗೋಗರೆಯುತ್ತಾನೆ. ಆಗ ಶಿವ

"ಹಸಿಯ ಹಾಲನಿದ್ದಾವೆ ಬಿಸಿಯ ಗಿಣ್ಣಮಾಡಾರೆ
ಬೆಂಕಿ ಬೇಕೇಳಂದಾನ ಖೊಬ್ಬರಿ ಬೇಕೇಳಂದಾನ
ಖೊಬ್ಬರಿ ಎಲ್ಲಿಂದ ತರಬೇಕ ಬೆಂಕಿ ಎಲ್ಲಿಂದ ತರಬೇಕ
ಪದುಮಾಗೊಂಡನಲ್ಲೇಳ ಮಾದೇವನ ಕೇಳುತಾತೇನ
ಮಾದೇವ ಹೇಳುತಿದ್ದನೆ ಪದುಮಗೊಂಡ ಕೇಳ್ಯಾನ"[೭೭]

ಆಗ ಶಿವ ಗುಡ್ಡದ ಮೇಲೆ ಹೋಗಬೇಕು. ಅಲ್ಲಿಂದ ನಿನಗೆ ಬೆಂಕಿಯ ಶೋಧ ತಿಳಿಯುತ್ತದೆ. ಚಿಂತಿಸದೇ ಬೆಟ್ಟದ ತುದಿಗೆ ಹೋಗಿ ಅಲ್ಲಿ ಒಂದು ಗುಹೆ ಉಂಟು, ಅಲ್ಲಿ ನಿನಗೆ ಬೆಂಕಿ ದೊರೆಯುತ್ತದೆ. ಕಿಚ್ಚು ತೆಗೆದುಕೊಂಡು ಬಂದು ಕಾಸಿದ ಹಾಲು ಕೊಡು ಎಂದರು.

ಪದುಮಣ್ಣನು ಗುರುಗಳು ಹೇಳಿದಂತೆ ಅವಸರವಾಗಿ ನೇರವಾಗಿ ಹೋಗಿ ಬೆಟ್ಟ ತಲುಪಿದರು. ಅಲ್ಲಿ ಹೊಗೆಯಾಡುವುದನ್ನು ಕಂಡನು. ಆನಂದಗೊಂಡು ಸುತ್ತಲೂ ನೋಡಿದರು, ಅಲ್ಲಿ ಯಾರೂ ಇಲ್ಲ, ಭಯದಿಂದ ಗುರುವನ್ನು ನೆನೆದು ಬೆಂಕಿ ತರಲು ಮುಂದೆ ಹೆಜ್ಜೆಯನ್ನು ಇಟ್ಟನು. ಇನ್ನೇನು ಬೆಂಕಿಯ ಕಿಚ್ಚನ್ನು ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ಒಬ್ಬ ಸುಂದರ ಹುಡುಗಿ ಪದುಮಣ್ಣನ ಕಣ್ಣ ಮುಂದೆ ಬರುವಳು.

"ನಿಲಯದೊಳಗಾರಿರುವಿರೆನ್ನಗಗನಿಯಂ ಕೊಟ್ಟು
ಕಳಿಸಬೇಕೆಂದು ಪೇರ್ದ್ವನಿಯಿಂದ ಕೂಗಲೆ
ಒಳಗಿರುವ ಚಲುವೆ ಚುಮಲಾದೇವಿ ಕೇಳಿ ಗಡಬಂದು ತೆಗೆದಳು ಕದವ
ತೊಳಗುವ ಕಳೇಬರವ ನಗೆಮೊಗದ ನುಣ್ಣಿಡಿದ
ತೆಲುಗಲ್ಲವಾ ಪದ್ಮನಂ ನೋಡಿ ತನ್ನ ಮನ
ದೊಳು ಚಿಂತಿಸಿದಾಳರಿವಂ ಮನುಜರಾದರಿಲ್ಲಿಗೆ ಬರ್ಪದೆರ್ಯ"[೭೮]

ಅವಳಿಗೆ ಆಶ್ಚರ್ಯ ಇಲ್ಲಿಗೆ ಒಬ್ಬ ಮನುಷ್ಯ ಬಂದಿರುವನು ಎಂದು ಗಾಬರಿಯಿಂದ

"ಯಾವ ದೇಶದ ಅರಸ ಎಲ್ಲಿಂದ ಬಂದಿದಿ ಅಂದಾಳ
ನಮ್ಮ ತಾಯಿ ಬಂದಾರ ನಿನಗ ನುಂಗ್ಯಾಳಂದಾಳ
ಹೊತ್ತನಾಗ್ಯಾವಂದಾಳೆ ಯಾಳ್ಯಾಳಂದಾಳ"[೭೯]

ನಮ್ಮ ತಾಯಿ ಬಂದು। ನಿನ್ನನು ತಿನ್ನುತ್ತಾಳೆ ಏನು ಬೇಕು ಬೇಗನೆ ಹೇಳು ಎಂದಾಗ, ನನಗೆ ಬೆಂಕಿ ಕೊಡಬೇಕ ಕೊಬ್ಬರಿ ಕೊಡಬೇಕಂದಾನ

ಬೆಂಕಿ ಕೊಬ್ಬರಿ ಕೊಟ್ಟರೇ ನಿನಗೂ ಪುಣ್ಯ ಬಂದಾಂತಾಗುವುದು ಎಂದು ಹೇಳಿದನು. ಅದಕ್ಕೆ ಅವಳು ಈ ಕಾಡಿನಲ್ಲಿ ಬೆಂಕಿಯನ್ನು ತೆಗೆದುಕೊಂಡು ಏನು ಮಾಡುವೆ, ನೀನು ಒಬ್ಬನೆ ಈ ಭಯಂಕರ ಕಾಡಿನಲ್ಲಿ ಧೈರ್ಯದಿಂದ ಇರುವೆ ಯಾರು ನೀನು, ನಿನ್ನ ಹೆಸರೇನು ಎಂದು

"ತಡಮಾಡದೆನಗೆ ಅಗ್ನಿಯನು ಕೊಟ್ಟುಕಳಿಸೆಂದು
ನುಡಿಯಲ್ಕೆ ಜಡಜಮುಖಿ ಕೇಳಿ ಸಂತೋಷದಿಂ
ಅಡಿಮುಂದಕಿಡುತೆಲವೊ ನೀನಾರು ನಿನ್ನ ಪೆಸರೇನೆನಗೆ ಪೇಳೆಂದಳು
ಪೊಡವಿಯೊಳೆನಗೆ ಶಿವ ಪದ್ಮನೆಂಬಭಿಧಾನ
ಒಡೆಯ ಶ್ರೀ ಗುರುಸಿದ್ದರೇವಣನ ಸುತನಾನು
ಮಡದಿಮಣಿ ತಿಳಿ ನಿನ್ನ ಪೆಸರಾವುದೆನಗೀಗ ಪುಸಿಯದು ಸುರವದೆಂದನು."[೮೦]

ಹೀಗೆ ಒಬ್ಬೊಬ್ಬರು ಮುಖಾಮುಖಿಯಾಗಿ ಮಾತನಾಡುತ್ತ, ಪದುಮಣ್ಣನು ಅವಳ ಸೌಂದರ್ಯಕ್ಕೆ ಮಾರು ಹೋಗಿ, ಹಾಗೆಯೇ ನೋಡುತ್ತ ನಿಲ್ಲುವನು. ಅವಳು ಸಹ ಮಾನವರನ್ನೇ ನೋಡದ ಹಾಗೆ ತೆರೆದ ಕಣ್ಣು, ತೆರೆದ ಹಾಗೆ ನೋಡುವಳು. ಕ್ಷಣಕಾಲ ನಂತರ ಎಚ್ಚೆತ್ತು, ಒಬ್ಬೊಬ್ಬರು ಸಲಿಗೆಯಿಂದಲೇ ಮಾತನಾಡಿದರು. ನಾಳೆ ಬರುತ್ತೇನೆಂದು ಬೆಂಕಿಯ ಕಿಚ್ಚನ್ನು ತೆಗೆದುಕೊಂಡು ಹೋಗಿ, ಹಾಲನ್ನು ಕಾಸಿ, ಗುರುವಿಗೆ ನೀಡಿದರು.

"ಬಾರೋ ಬಾರೋ ಏಯಪ್ಪ ನನಗ ಹಸುವನಿಲ್ಲಯ್ಯ
ಬಾರೋ ಬಾರೋ ಪದುಮಣ್ಣ ನನಗೆ ಹಸುವನಾಗಿಲ್ಲ
ಪದುಮಾಗೊಂಡನಲ್ಲಪ್ಪ ಏನುದಾಡು ತಾನೇನ
ನನಗೆ ಯಾಕಬೇಕಪ್ಪ ನನಗೆ ಹಸುವನಿಲ್ಲಯ್ಯ."[೮೧]

ನನಗೆ ಹಸಿವೆಯಿಲ್ಲ ಎಂದು ಶಿವ ಹೇಳಿ, ನೀನು ಊಟ ಮಾಡು ಎಂದು ಹೇಳಿದಾಗ ನೀವೆ ತಿನ್ನದ ಊಟ ಬೇಡವೆಂದನು. ಶಿವ ನಾವಿಬ್ಬರು ಸೇರಿ ಊಟ ಮಾಡೋಣವೆಂದು ಹೇಳಿ, ಇಬ್ಬರು ಊಟ ಮಾಡಿದರು. ನಾನು ಬಂದ ಕಾರ್ಯ ನೆರವೇರಿತು ಎಂದು ಆಶೀರ್ವದಿಸಿ ಹೋಗುವರು.

ಪದುಮಣ್ಣನಿಗೆ ನಿದ್ದೆಯಲ್ಲಿಯೂ, ಆ ಹುಡುಗಿಯ ನೆನಪಾಗುವುದು. ಅಲ್ಲಿ ಅವಳಿಗೂ ಸಹ ಹಾಗೆಯೇ ಹೀಗೆಯೇ ರಾತ್ರಿಯು ಕಳೆಯಿತು. ಮತ್ತೆ ಪದುಮಣ್ಣನು ಮತ್ತೆ ಹುಡುಗಿಯನ್ನು ಕಾಣಲು, ಅಲ್ಲಿಗೆ ಹೋದನು. ಇವನ ಬರುವಿಕೆಗಾಗಿ ಕಾಯುತ್ತಿದ್ದಳು. ಬರು–ಬರುತ್ತಾ ಇವರಿಬ್ಬರ ನಡುವೆ ಪ್ರೀತಿ ಅಂಕುರವಾಯಿತು.

೯. ಕುದಯ ರಕ್ಕಸಿಯು ಚುಂಚಲೆಯನ್ನು ತನ್ನ ಮಗಳಂತೆ ಸಾಕಿದ ಕಥೆ : ಒಂದು ದಿನ ಕುದಯ ರಕ್ಕಸಿಯು ಜಾಗೃತಪುರಕ್ಕೆ ಬಂದು ರಾಜ ಗಂಗಾಧರನ ಬಳಿ ನಿಂತು "ನನಗೆ ದಿನನಿತ್ಯದಲ್ಲಿ ಓರ್ವ ಸ್ತ್ರೀ ಕನ್ಯೆಯನ್ನು ಆಹಾರವಾಗಿ ನೀಡಿದರೆ ನಾನು ಇಲ್ಲಿಂದ ಹೋಗುವೆ"[೮೨] ಎಂದು ನುಡಿದಳು. ರಾಜ್ಯದ ಪುರಜನರು, ರಾಜ–ರಾಣಿಯರು ಇದಕ್ಕೆ ಒಪ್ಪಿ, ಪ್ರತಿನಿತ್ಯವು ಒಬ್ಬೊಬ್ಬರ ಮನೆಯಿಂದ ಒಬ್ಬೊಬ್ಬ ಸ್ತ್ರೀಯನ್ನು ರಕ್ಕಸಿಯ ಆಹಾರವಾಗಿ ಕಳುಹಿಸುತ್ತಿದ್ದರು. ಒಂದು ದಿನ ರಾಜರ ಸರದಿ ಬಂದಾಗ, ಆರು ವರ್ಷದ ಚಂಚಲೆಯು ನಾನು ಹೋಗುವೆ.

"ಕಳಸಲ್ಕೈತಂದವರ್ಗೆ ಚುಮಲಾದೇವಿ
ಕಳವಳದಿ ಕರಜೋಡಿಸುತ್ತ ಪೋಗುವೆನೆಂದು
ನಿಳಯ ಬಿಟ್ಟೈದಳಪ ಮರಣಕ್ಕೆ ಗುರಿಯಾದೆನೆಂದು ಮನದೊಳಗಳುಕದೆ
ಘಳಿಲನೇ ದನುಜೆ ಕೋಪ ತಾಳಿ ಪಲ್ಗರಿದುತಾ
ಸಳೆರಥಕೆ ಹಾರಿ ರೂಪವ ನೋಡಿ ಮರುಕದಿಂ
ನಳಿದೊಳ್ಗಳನ್ನು ಪಿಡಿದೊಯ್ದಳತಿ ತವಕದಿಂದೇನೆಂಬೆನದ್ಭುತವನು".[೮೩]

ಮಗಳ ದುಃಖದಲ್ಲಿಯೇ ರಾಜನು ಏನೂ ಮಾಡಲಾಗದೇ ತನ್ನ ಚಿಕ್ಕ ಮುದ್ದಾದ ಮಗಳನ್ನು, ರಕ್ಕಸಿಯ ಕೈಗೆ ಕೊಟ್ಟರು. ಅರಮನೆಯಲ್ಲಿ ದುಃಖದ ವಾತಾವರಣವೇ ತುಂಬಿತು. ರಕ್ಕಸಿಯ ಬಳಿ ಹೋದ ಚುಮಲೆಯನ್ನೆ ನೋಡಿ, ಅವಳ ರೂಪ ಲಾವಣ್ಯಕ್ಕೆ ಮಾರು ಹೋಗಿ,

"ಚುಮಲೆಯೆ ಕೇಳೀಗ ಎಮಗ ಮಾನಸದಿಂದ। ಸಮಲಾಯಿತು ಎನ್ನ ಮನಕೆ
ಭ್ರಮಣೆ ಬೇಡಿನ್ನು ನೀನೆನ್ನ ಕುವರಿಯಾಗಿ। ಕ್ರಮದಿಂದನವು ಸುಖವಿಹುದು
"ಯಾತಕ್ಕು ಕೇಡಿಲ್ಲಬೇತಕ್ಕು ಭಯವಿಲ್ಲ। ವೇತರ ಕಾಟವೇನಿಲ್ಲ॥
ಕೋತಿತನದಿ ಮನಸೋತು ನಿಲ್ಲದೆ ಮಾತ್ರ ಪ್ರೀತಿ ಬಂದುದನುಂಡು ಸುಖಿಸು"[೮೪]

ಎಂದು ರಕ್ಕಸಿಯು ಅವಳನ್ನು ಮಗಳಂತೆ ನೋಡಿಕೊಳ್ಳುತ್ತಿದ್ದಳು. ಅವಳು ಇದ್ದ ಗುಹೆಯ ಹೊರಗೆ ಕಾಗೆಯು, ಕಾಂಚಾಲ ಮರವು ಅವಳ ರಕ್ಷಣೆಗೆಂದು, ಯಾವಾಗಲು ಕಾಯುತ್ತಿದ್ದವು. ಈ ಚುಮಲೆಯು ಪ್ರಾಯಕ್ಕೆ ಬಂದು ನಿಂತಿದ್ದಾಳೆ. ಈಗಲೂ ಅವಳು ರಕ್ಕಸಿಯ ಆರೈಕೆಯಲ್ಲಿಯೇ ಕಾಲ ಕಳೆಯುತ್ತಿದ್ದಾಳೆ.

೧೦. ತುಕ್ಕಪ್ಪರಾಯ ಅಮೃತಮತಿ ದಂಪತಿಗಳು ಸಂತಾನ ಪ್ರಾಪ್ತಿಗಾಗಿ ತಪಸ್ಸು ಮಾಡಿದ ಕಥೆ: ಕುರುಬ ಕರಿಗೌಡರಿಗೆ ಇಬ್ಬರು ಗಂಡು ಮಕ್ಕಳು ತುಕ್ಕಪ್ಪರಾಯ ಮತ್ತು ಸೋಮರಾಯರೆಂಬವರು, ಇವರು ಬೆಳೆದು ಯೌವನಾವಸ್ಥೆಗೆ ಬಂದಾಗ ವಿವಾಹ ಮಾಡಬೇಕೆಂದು ನಿಶ್ಚಯಿಸಿ, ತುಕ್ಕಪ್ಪರಾಯನಿಗೆ ಅಮೃತಬಾಯಿಯನ್ನು ಮತ್ತು ಸೋಮರಾಯನಿಗೆ ಕಾನಬಾಯಿಯನ್ನು ಗುರು–ಹಿರಿಯರು ನೋಡಿ, ವಿವಾಹಮಾಡಿದರು. ಇವರು ವಿವಾಹ ಆದಾಗಿನಿಂದ ಆನಂದದಿಂದ ಕಾಲ ಕಳೆಯುತ್ತಿದ್ದರು. ಎಷ್ಟೇ ಸಂಪತ್ತು ಇದ್ದರೂ, ಅನುಭವಿಸುವ ಸಂತಾನವಾಗಲಿಲ್ಲ. ಈ ವಿಷಯವಾಗಿ ಶ್ರೀ ಗುರುರೇವಣ್ಣರ ಬಳಿ ಬಂದು, ತಮ್ಮ ಕಷ್ಟವನ್ನು ಹೇಳಿಕೊಂಡರು, ಆಗ ಗುರುಗಳು ನೀವು ದಂಪತಿಗಳಿಬ್ಬರು ಹನ್ನೆರಡು ವರ್ಷಗಳ ಕಾಲ ತಪ್ಪಸ್ಸನ್ನು ಆಚರಿಸಬೇಕು. ಮುಂದೆ ಸೋಮರಾಯ ನಿಗೂ ನಿನಗೂ ಕೀರ್ತಿ ತರುವ ಗಂಡು ಮಕ್ಕಳಾಗುತ್ತಾರೆ ಎಂದು ಹಾರೈಸಿ ಕಳುಹಿಸುವರು. ತುಕ್ಕಪ್ಪರಾಯನು ಗುರುಗಳು ಹೇಳಿದಂತೆ ಸೋಮರಾಯನಿಗೆ ರಾಜ್ಯವನ್ನು ಒಪ್ಪಿಸಿ, ದಂಪತಿಗಳಿಬ್ಬರು ತಪಸ್ಸು ಮಾಡಲು ಹೋದರು. ದಂಪತಿಗಳು ತಪಸ್ಸಿಗೆ ಕುಳಿತು ಎಷ್ಟೋ ವರ್ಷಗಳಾದವು. ನಾರದನು ಇವರ ತಪಸ್ಸಿನ ಕುರಿತು ಶಿವ–ಪಾರ್ವತಿಯರ ಮುಂದೆ ಹೇಳಲು ಶಿವ–ಪಾರ್ವತಿಯರು ಇವರ ಭಕ್ತಿಯನ್ನು ಪರೀಕ್ಷೆ ಮಾಡಬೇಕೆಂದು, ಭೂಲೋಕಕ್ಕೆ ಬಂದು ಘನಘೋರ ಬಿರುಗಾಳಿ, ಮಳೆ, ಗುಡುಗು–ಮಿಂಚಿನ ಆರ್ಭಟ ಬಂದು ಬೃಹತಾಕಾರದ ಗಿಡ–ಮರಗಳು ಬಿದ್ದರು, ಅವರ ಏಕಾಗ್ರತೆ ಮುರಿಯದೆ ಏಕಚಿತ್ತದಿಂದ ತಪಸ್ಸನ್ನು ಮಾಡುತ್ತಿದ್ದರು. ಇದನ್ನು ಕಂಡು ಶಿವ–ಪಾರ್ವತಿಯರು ಅವರ ಭಕ್ತಿಗೆ, ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷರಾಗಿ ಎಲೈ ದಂಪತಿಗಳೆ ನಿಮ್ಮ ಭಕ್ತಿಗೆ ಮೆಚ್ಚಿದ್ದೇವೆ, ಇನ್ನು ಕಣ್ಣು ತೆರೆಯಿರಿ ಎಂದು ಹೇಳಿದರು.

ತುಕ್ಕಪ್ಪರಾಯ ಮತ್ತು ಅಮೃತಬಾಯಿಯರ ಅರೆಕಣ್ಣಿನಿಂದ ಶಿವ–ಪಾರ್ವತಿಯನ್ನು ನೋಡಿ ಆನಂದದಿಂದ, ಅವರ ಪಾದಗಳಿಗೆ ನಮಸ್ಕಾರ ಮಾಡಿದರು. ಏನು ವರಬೇಕು ಕೇಳುವಂತವರಾಗಿ

ಎಂದಾಗ, ಅವರು ದೇವರೆ ನಮಗೆ ನೀವು ಎಲ್ಲವನ್ನು ನೀಡಿದ್ದೀರಿ. ಸಂತಾನವನ್ನು ಮಾತ್ರ ನೀಡಿಲ್ಲ. ದಯಮಾಡಿ ಸಂತಾನಪ್ರಾಪ್ತಿ ಮಾಡಿ ಎಂದು ಕೇಳಿದರು. ಶಿವ ಅದಕ್ಕೆ ತಥಾಸ್ತು ಎಂದು ಆಶೀರ್ವದಿಸಿ, ಪೂಜೆಗಾಗಿ ಲಿಂಗವನ್ನು ನೀಡಿ ಕೈಲಾಸಕ್ಕೆ ತೆರಳುವರು. ಕೆಲ ತಿಂಗಳುಗಳ ನಂತರ ಅಮೃತಬಾಯಿ ಕಾನಬಾಯಿಯರು ಗರ್ಭವತಿಯರಾಗಿ ಗಂಡು ಮಕ್ಕಳಿಗೆ ಜನ್ಮ ನೀಡುವರು. ಜಕ್ಕಪ್ಪ ಮತ್ತು ಮಾಳಿಂಗರಾಯನೆಂದು ನಾಮಕರಣ ಮಾಡಲಾಯಿತು.

೧೧. ಶ್ರೀ ಗುರು ಸೋವಾರಿಸಿದ್ದರ ಪವಾಡದಿಂದ ತಾಮಟಗೇರ ಮಗುವನ್ನು ಬದುಕಿಸಿದ ಕಥೆ : ತುಕ್ಕಪ್ಪರಾಯ ಮತ್ತು ಸೋಮರಾಯ ಸಂತೋಷದಿಂದ ರಾಜ್ಯಭಾರ ಮಾಡುತ್ತ ಇರಲು, ಸೋವಾರಿಸಿದ್ದರ ಮಾಯೆಯಿಂದಾಗಿ, ಇವರು ಸಾಕಿದ ಆಕಳು, ಎಮ್ಮೆ, ಕುರಿಗಳಿಗೆ ರೋಗ ಆವರಿಸಿ, ಹಾಲಿನ ಬದಲು ರಕ್ತ ಹಿಂಡುತ್ತಿದ್ದವು. ಇದರಿಂದ ಗಾಬರಿಯಾದ ಸೋಮರಾಯನು ಚಿಂತಾಕ್ರಾಂತನಾದನು. ಊರಿನ ಪಕ್ಕದಲ್ಲಿಯೇ ಇರುವ ಗೌಳಿಗರ ಹಸು-ಎಮ್ಮೆಗಳಿಗೂ ಹೀಗೆಯೇ ರೋಗ ಬಂದಾಗ, ದೇವಿಗೆ ನಾಲ್ಕು-ಐದು ವರ್ಷದ ಮಗುವನ್ನು ಬಲಿಕೊಟ್ಟಿದ್ದರಿಂದ ಅವರ ಹಸು-ಎಮ್ಮೆಗಳು ವಾಸಿಯಾದವು. ಅದನ್ನು ನೆನಪಿಸಿಕೊಂಡು ಸೋಮರಾಯನು ಹೀಗೆಯೇ ಮಾಡೋಣವೆಂದು ತಿಳಿದು, ಪೂಜೆಗೆಲ್ಲ ಅಣಿಮಾಡಿಕೊಂಡು, ಬಲಿ ಕೊಡಲು ಮಗು ಬೇಕಾಗಿತ್ತು. ಮಗುವಿಗಾಗಿ ಶೋಧ ಮಾಡುತ್ತಿರಲು, ಊರಿನಲ್ಲಿ ತಾಮಟಗೇರ ಹೆಣ್ಣು ಮಗಳು, ಮಗುವನ್ನು ಬಿಟ್ಟು ನೀರು ತರಲು ಹೋಗಿದ್ದಳು. ಇದೇ ಒಳ್ಳೆಯ ಸಮಯವೆಂದು ತಿಂಡಿಯ ಆಸೆಯನ್ನು ತೋರಿಸಿ, ಮಗುವನ್ನು ಕರೆದುಕೊಂಡು ಬಂದು, ದೇವಿಗೆ ಬಲಿ ಕೊಟ್ಟನು.

ನೀರಿಗೆ ಹೋಗಿದ್ದ ಹೆಂಗಸು ಬಂದು ಮಗುವನ್ನು ಎಲ್ಲೆಲ್ಲಿಯೋ ಹುಡುಕಾಡಿದಳು. ಆದರೆ ಎಲ್ಲಿಯೂ ಸಿಗಲಿಲ್ಲ. ಆಗ ಹೆಂಗಸು ದಾರಿಯಲ್ಲಿ ಗಟ್ಟಿಯಾಗಿ ಅಳುತ್ತಿರಲು ಒಬ್ಬ ಮುದುಕಿ ಅವಳ ದುಃಖ ನೋಡಿ, ಅವಳ ಬಳಿ ಬಂದು, ಮಗಳೇ ಇನ್ನು ಹುಡುಕಬೇಡ, ನಿನ್ನ ಮಗುವನ್ನು ಸಾಯಿಸಲಾಗಿದೆ. ಸೋಮರಾಯನ ಎತ್ತುಕೊಂಡು ಹೋಗಿದ್ದಾನೆ ಎಂದು ನೋಡಿದ ಸಂಗತಿಯನ್ನು ಹೇಳುವಳು. ಇದನ್ನು ಕೇಳಿದ ಹೆಂಗಸು ಊರ ಗೌಡರೊಂದಿಗೆ ಅರಮನೆಗೆ ಹೋಗಿ, ಗಲಾಟೆ ಮಾಡಲು, ತುಕ್ಕಪ್ಪರಾಯ ಏನೂ ತಿಳಿಯದೆ ಮೌನವಾಗಿದನು. ಸೋಮರಾಯ ಭಯದಿಂದ ಗಾಬರಿಯಾಗಿ ಕೋಣೆಯಲ್ಲಿ ಹೋಗಿ ಮಲಗಿದನು. ಆಗ ಸೋವಾರಿಸಿದ್ದರು ಕನಸಿನಲ್ಲಿ ಬಂದು ಭಯಪಡಬೇಡ ಭಕ್ತನೆ, ಇದೆಲ್ಲ ನನ್ನ ಮಾಯೆಯಾಗಿದೆ, ಭಂಡಾರವನ್ನು ಮಗುವಿನ ಮೇಲೆ ಎರಚಿ ಆಗ ಮಗು ಬದುಕುತ್ತದೆ ಎಂದು ಹೇಳಿದರು. ಎಚ್ಚೆತ್ತ ಸೋಮರಾಯ ಮಗುವಿನ ಮೇಲೆ ಭಂಡಾರವನ್ನು ಹಾಕಿ, ಹಾಸಿಗೆಯನ್ನು ಹೊದೆಸಿ ಹೋದನು. ಜನರೆಲ್ಲರು ಮಗುವನ್ನು ಅರಸುತ್ತ ಅರಮನೆಯಲ್ಲಿ ಹುಡುಕಾಡುತ್ತ ಬಂದರು.

ಇಲ್ಲಿ ಯಾರೋ ಹಾಸಿಗೆ ಹೊದೆಸಿದ್ದಾರೆ ಎಂದು ತೆಗೆದರೆ ಕೊಬ್ಬುಗಳುಳ್ಳ ಪ್ರಾಣಿ ಹಾರಿ ಹೋಯಿತು. ಮಗು ಇಲ್ಲವೆಂದು, ಬೇಸರದಿಂದ ಹೊರಗೆ ಬಂದರೆ, ಮಗು ಆಡುತ್ತಾ ಅಮ್ಮ ಎಂದು ಬಂದಿತು. ಇದರಿಂದ ತಾಯಿ ಮತ್ತು ಊರ ಜನರಿಗೆಲ್ಲ ಆನಂದವಾಯಿತು.

೧೨. ಶ್ರೀ ಗುರುಗೌಡ ಬಂಗಾಲ ಜೋಗಿವರ್ಯರು ಸತಿ ಕಾನಬಾಯಿ ಮತ್ತು ಪತಿ ಸೋಮರಾಯರ ಭಕ್ತಿಯನ್ನು ಪರೀಕ್ಷಿಸಿದ ಕಥೆ : ಒಂದು ದಿನ ಸೋಮರಾಯನು ನರಗಲ್ಲಿನ ಮೇಲೆ ಕುಳಿತು ಕುರಿ, ಆಕಳುಗಳನ್ನು (ಖಿಲ್ಲಾರಗಳ) ಮೇಯಿಸುತ್ತಾ ಕುಳಿತಿದ್ದನು. ಖಿಲ್ಲಾರಗಳು ಸಂತೋಷದಿಂದಲೇ ಮೇಯುತ್ತಿದ್ದವು. ಆದರೆ ಸೋಮರಾಯನು ನರಗಲ್ಲಿನ ಮೇಲೆ ಕುಳಿತು ತನ್ನ ಕುಟುಂಬದ ಬಗ್ಗೆ ಯೋಚಿಸುತ್ತ, ಮೂರ್ಛೆ ಹೋದನು. ಆಗ ಆಕಾಶ ಮಾರ್ಗವಾಗಿ ಶ್ರೀ ಗುರು ಗೌಡ ಬಂಗಾಲ ಜೋಗಿ(ಯೋಗಿ)ಯು ಮಾಯೆಯಿಂದಾಗಿ ೭೦೦ ಯೋಗಿಗಳನ್ನು ಸೃಷ್ಟಿಸಿ, ಸೋಮ ರಾಯನನ್ನು ಪರೀಕ್ಷಿಸಲು, ಅವನಲ್ಲಿಗೆ ಬಂದನು. ೭೦೦ ಜೋಗಿಗಳು, ಗುರುಗಳ ಹಿಂದೆಯೇ ಆಕಾಶ ಮಾರ್ಗವಾಗಿ ಬಂದರು. ಸೋಮರಾಯನ ಬಳಿ ಬಂದಾಗ ಎಲ್ಲರು ಗುರುಗಳ ಜಡೆಯಲ್ಲಿ ಹೋಗಿ ಮಾಯವಾದರು.

ಗುರುಗಳು ಮಗ ಸೋಮರಾಯ ಏಳು ಎಂದು ಎಚ್ಚರಿಸಿದನು. ಸೋಮರಾಯ ಎಚ್ಚೆದ್ದು, ಗುರುಗಳ ಪಾದಕ್ಕೆ ನಮಸ್ಕರಿಸಿ, ಗುರುವೇ ನಾನು ಇಂದು ಪುಣ್ಯವಂತ, ನಿಮ್ಮ ದರ್ಶನದಿಂದ ಪುಳಕಿತನಾದೆ ಎಂದು ಭಕ್ತಿಯಿಂದ ತಲೆಬಾಗಿದನು. ಗುರುವು ಅವನ ಭಕ್ತಿ ಪರೀಕ್ಷಿಸಲು, ನಿನ್ನ ಜನ್ನಿಗೆಗಳಲ್ಲಿ ಕರಿಕಪಲಿ(ಹುಟ್ಟು ಕುಮಾರಿ)ಆಕಳು ಇದೆ ಅಲ್ಲ, ಆ ಆಕಳಲ್ಲಿಂದ ಹಾಲು ಕರೆದು, ನನಗೆ ಪ್ರಸಾದ ನೀಡಬೇಕೆಂದು ಆಜ್ಞಾಪಿಸಿದನು. ಸೋಮರಾಯ ಎದೆಗುಂದದೆ ಗುರುವೇ ನಿಮ್ಮ ಕೃಪೆ ಒಂದಿದ್ದರೆ ಕೆಲಸಗಳೆಲ್ಲ ಸುಲಭವಾಗುತ್ತವೆ. ಸ್ವಲ್ಪ ಭಂಡಾರವನ್ನು ಕೊಡಿ ಎಂದು ಕೇಳಿ ಪಡೆದು. ಕರಿಕಪಲಿ ಲಕ್ಷಣವೆಂದರೆ ಸ್ವಲ್ಪ ಶಬ್ದವಾದರೂ, ದೂರ ಹೋಗುತ್ತದೆ. ಭಯದ ಸ್ವಭಾವ, ಅದಕ್ಕೆ ಏನಾದರೂ ಮಾಡಲು ಹೋದರೆ ಕೋಪದಿಂದ ಮೇಲೆಯೇ ಹಾರಲು ಬರುತ್ತದೆ. ಇಂತಹ ಕಲಿಕಪಲಿ ಹಾಲು ತರಲು ಸೋಮರಾಯ ಅದರ ಹತ್ತಿರ ಹೋದ, ಆದರೆ ಅದು ದೂರ-ದೂರ ಸರಿಯುತ್ತಿದ್ದ. ಆದರೂ ಬಿಡದೆ ಹೋದಾಗ ಅದು ದುರುಗುಟ್ಟಿ ನೋಡುತ್ತಾ ಮೇಲೆಯೇ ಹಾರಿ ಇರಿಯಲು ಬಂದಾಗ, ಗುರುಗಳು ಕೊಟ್ಟ ಭಂಡಾರವನ್ನು ಅದರ ಮೇಲೆ ಎರಚಿದಾಗ, ಅದು ಶಾಂತವಾಯಿತು. ಆಗ ಸೋಮರಾಯ ಕರಿಕಪಿಲೆಯೇ ಮಹಾ ಗುರುಗಳು ನಿನ್ನಯ ಹಾಲನ್ನು ಕೇಳಿರುವರು. ತಾಯೇ ದಯಮಾಡಿ ದಯಪಾಲಿಸು ಎಂದು ಪೂಜಿಸಲು, ಆಕಳು ಎರಡು ಮೊಲೆಗಳಿಂದ ಶೀತಾಳ, ಇನ್ನೆರಡನ್ನು ಮೊಲೆಗಳಿಂದ ಹಾಲನ್ನು ನೀಡಿತು. ಮೊದಲ ಶೀತಾಳವನ್ನು ನೀಡಿದರೆ, ಗುರುಗಳನ್ನು ಅದರಿಂದ

ಮುಖ ತೊಳೆದುಕೊಂಡರು, ಹಾಲನ್ನು ಪ್ರಸಾದವಾಗಿ ಸ್ವೀಕರಿಸಿದರು. ಆಗ ಗುರುಗಳು ತನ್ನ ಜಡೆಯಲ್ಲಿ ಅಡಗಿದ ೭೦೦ ಜೋಗಿಗಳು ಪ್ರತ್ಯಕ್ಷವಾಗಲು ಆಕಳು ಅವರನ್ನು ಪ್ರಸಾದದಿಂದ ತೃಪ್ತಿಗೊಳಿಸಿತು. ಭಕ್ತ ಸೋಮರಾಯ ಗುರುವಿನ ಪರೀಕ್ಷೆಯಲ್ಲಿ ಯಶಸ್ಸು ಕಂಡನು.

ಗುರುಗಳು ಮತ್ತೆ ಕಾನಬಾಯಿಯನ್ನು ಪರೀಕ್ಷಿಸಬೇಕೆಂದು, ನಿಮ್ಮ ಗೃಹಕ್ಕೆ ಹೋಗೋಣ ಬಾ ಎಂದು ಸೋಮರಾಯನನ್ನು ಕರೆಯಲು, ದೇವಾ ಇದು ಅರಣ್ಯ ಇಲ್ಲಿ ಸಾಧು ಪಶುಗಳಿಗೆ ರಕ್ಷಣೆ ಇಲ್ಲ, ನೀವು ಹೋಗಿ ನಾನು ಇವುಗಳನ್ನು ಹೊಡೆದುಕೊಂಡು ಬರುವೆ ಎಂದನು. ಆಗ ಗುರುಗಳು ಒಂದು ಆಕಳಿಗೂ ಏನಾದರೂ ಆದರೆ, ನಾನು ಬಂಗಾರದ ಕರ ಮಾಡಿಸುವೆನು ಎಂದನು. ಸೋಮರಾಯ ನಿಮ್ಮ ಇಚ್ಛೆಯೆಂದು ಇಬ್ಬರು ಸೇರಿ ಗೃಹದ ಕಡೆ ನಡೆದಿದ್ದರು. ಗೃಹದಲ್ಲಿ ಕಾನಬಾಯಿಯು ಮಲಗಿರಲು, ಗುರು ತಾಯಿಯಾದ ತುಕಾಬಾಯಿಗೆ ಅರಿವಾಗಿ ಕಾನಬಾಯಿಯ ಕನಸಿನಲ್ಲಿ ಬಂದು, ಮಗಳೆ ನಿನ್ನ ಪರೀಕ್ಷಿಸಲೆಂದು ಗುರುಗಳು ಗೃಹಕ್ಕೆ ಆಗಮಿಸುತ್ತಿದ್ದಾರೆ. ಎಂದು ಹೇಳಿದಳು. ಕಾನಬಾಯಿಯು ಎದ್ದು, ಗುರುಗಳು ಬರುವುದರೊಳಗಾಗಿ, ಎಲ್ಲ ಸಿದ್ಧತೆಯನ್ನು ಮಾಡಿಕೊಂಡಳು. ಗುರುಬಂದ ಮೇಲೆ ಅವರ ಪಾದಗಳು ತೊಳೆದು ಪೂಜೆಯನ್ನು ಮಾಡಿ, ಪ್ರಸಾದ ಸ್ವೀಕರಿಸಿ ಎಂದು ಸೋಮರಾಯನಿಗೂ, ಗುರುಗಳಿಗೂ ನೀಡಿದಳು. ಗುರುಗಳು ತೃಪ್ತರಾದರು. ಆದರೆ ಅವರ ಜಡೆಯಿಂದ ೭೦೦ ಜೋಗಿಗಳು ಹೊರ ಬಂದು, ಅವರು ಪ್ರಸಾದಕ್ಕೆಂದು ಕುಳಿತರು. ಇದರಿಂದ ಭಯಭೀತಳಾಗಿ ಕಾನಾಬಾಯಿಯು ತಾಯಿ ತುಕಾಬಾಯಿಯನ್ನು ಮನದಲ್ಲಿ ನೆನೆದಾಗ, ತುಕಾಬಾಯಿಯು ಚಿಂತಿಸಬೇಡ, ನೀನು ಪ್ರಸಾದ ನೀಡು ಕಡಿಮೆ ಬರುವುದಿಲ್ಲ ಎಂದಾಗ ಅವಳು ಎಲ್ಲರಿಗೂ ನೀಡುತ್ತಾ ಹೋದರು, ಪ್ರಸಾದ ಖಾಲಿ ಆಗಲೇ ಇಲ್ಲ. ಇದು ತುಕಾಬಾಯಿಯ ಮಹಿಮೆ, ಕಾರಣ ಕಾನಾಬಾಯಿ ಇಬ್ಬರಿಗೆ ಮಾತ್ರ ಪ್ರಸಾದ ತಯಾರು ಮಾಡಿದ್ದು. ಎಲ್ಲರು ಪ್ರಸಾದ ಸ್ವೀಕರಿಸಿ ತೃಪ್ತರಾಗಿ ಹಾರೈಸಿದರು. ಗುರುಗಳು ನಿಮ್ಮ ಭಕ್ತಿಗೆ ಮೆಚ್ಚಿದ್ದೇನೆ. ನನ್ನ ಎಲ್ಲ ವಿದ್ಯೆಯನ್ನು ನಿನಗೆ ನೀಡುತ್ತೇನೆಂದು ಹಾರೈಸಿದನು.

೧೩. ಭೋಗ ಸಿದ್ದನಿಗೆ ವರ ನೀಡಿದ ಕಥೆ : ಬೀರೇಶನು ತನ್ನ ಮಾವನಾದ ನಾರಾಯಣನು ಧೂತರನ್ನು ಕಳುಹಿಸಿ, ಅವನನ್ನು ಹಿಡಿದುಕೊಂಡು ಬನ್ನಿ ಎಂದು ಆಜ್ಞಾಪಿಸುವುದು. ಇದನ್ನು ತಿಳಿದ ಬೀರೇಶ್ವರನು ವಾಯು ವೇಗವಾಗಿ ಮಂದನಗಿರಿಯ ಕಡೆ ಬಂದು ಭೋಗಣ್ಣನು ಎಂಬುವನು ಅಲ್ಲಿ ಕುರಿಗಳನ್ನು ಕಾಯುತ್ತಿದ್ದನು. ಅಲ್ಲಿಗೆ ಬಂದ ಬೀರೇಶನು, ಕುರಿಗಳ ಮಧ್ಯೆ ಪ್ರವೇಶಿಸಿ, ಮಾಯವಾಗುವನು. ಧೂತರನ್ನು ಬಂದು ಭೋಗಣ್ಣನಿಗೆ ಇಲ್ಲಿ ಯಾರಾದರೂ ಬಂದಿದ್ದರ ಎಂದಾಗ, ಇಲ್ಲ ಸ್ವಾಮಿ, ನಾನು ಬಹಳ ವರ್ಷದಿಂದ ಇಲ್ಲಿಯೇ ಕುರಿ ಕಾಯುತ್ತಿದ್ದೇನೆ.

ಆದರೆ ಇಲ್ಲಿ ಯಾರೂ ಬಂದಿಲ್ಲ. ಎಂದಾಗ ಕೋಪ ಉಂಟಾಗಿ ಸುತ್ತಲೂ ಹುಡುಕಿ ಹೊರಟು ಹೋದರು. ಆಗ ಭೋಗಣ್ಣನು ಕುರಿಗಳ ಮಧ್ಯದಿಂದ ಬೀರೇಶ್ವರನು ಪ್ರತ್ಯಕ್ಷನಾಗಿ, ಭೋಗಣ್ಣನಿಗೆ ಮಗನೇ ಅವರು ಧೂತರು, ಅವರಿಗೆ ಹಸಿವಾಗಿದೆ, ನಿನ್ನಲ್ಲಿಯ ಕುರಿಗಳಲ್ಲಿನ ಒಂದು ಕುರಿಯನ್ನು ನೀಡು, ಅವರು ಮುಂದೆ ತೋಳರಾಗಿ ಬಾಳುತ್ತಾರೆ ಎಂದು ನಿನ್ನ ಕುರಿಗಳಿಗೆ ಮುಂದೆ ಅವರಿಂದ ತೊಂದರೆ ಇದ್ದರು, ಅವುಗಳಿಗೆ ರೋಗ-ರುಜಿಗಳು ಬಾರದಂತೆ ಅವುಗಳ ಸಂರಕ್ಷಣೆ ಆಗುತ್ತದೆ ಎಂದು ಹಾರೈಸಿ ಹೋಗುವರು.

೧೪. **ಹಾಲುಮತ ಹುಟ್ಟಿದ ಹಿನ್ನೆಲೆಯ ಕಥೆ:** ಹಿಮದಿಂದ ಕೂಡಿದ ಹಿಮಾಲಯದ ಪರ್ವತದಲ್ಲಿ ಶಿವ-ಪಾರ್ವತಿಯರು ಧ್ಯಾನದಲ್ಲಿ ಕುಳಿತಿದ್ದರು. ಅವರ ಸುತ್ತಲು ಋಷಿಗಳು, ಗಣಂಧರರು ಕುಳಿತು ಧ್ಯಾನಿಸುತ್ತಿದ್ದರು. ಸೊಗಸಾದ ವಾತಾವರಣದ ಕ್ಷಣಗಳನ್ನು ಅನುಭವಿಸುತ್ತ ಧ್ಯಾನದಲ್ಲಿರಬೇಕಾದರೆ, ಇದಕ್ಕಿದ್ದಂತೆ ಸೃಷ್ಟಿಯಲ್ಲಿ ಹಿಮವು ಅಧಿಕವಾಗಿ ಹಿಮದ ಮಳೆಯು ಬೀಳಲಾರಂಭಿಸಿತ್ತು. ಹಿಮದ ಮಳೆ ಅಧಿಕವಾಗುತ್ತಿದ್ದಂತೆ, ದೇವಾನು ದೇವತೆಗಳು, ಋಷಿಗಳು, ಗಣಂಧರರು ಚಳಿಗೆ ತಾಳಲಾರದೆ, ದಿಕ್ಕು ತೋಚದೆ ಶಿವನಲ್ಲಿಗೆ ಬಂದು ದೇವಾ ನಮಗೆ ಹಿಮ ಮಳೆಯಿಂದಾಗಿ, ಚಳಿಯನ್ನು ತಾಳಲಾಗುತ್ತಿಲ್ಲ. ದಯಮಾಡಿ ಪರಿಹಾರವನ್ನು ಒದಗಿಸಿ, ಕಷ್ಟದಿಂದ ಪಾರು ಮಾಡಿ ಎಂದು ಬೇಡಿಕೊಂಡರು. ಪ್ರತಿಯಾಗಿ ಶಿವನು ಆಲೋಚನೆಯನ್ನು ಮಾಡಿ, ಚಳಿಯಿಂದ ತಪ್ಪಿಸಿಕೊಳ್ಳಲು ಉದ್ದವಾದ, ದಪ್ಪವಾದ, ಮೃದುವಾದ ಕೂದಲುಗಳಿಂದ ವಸ್ತ್ರವನ್ನು ತಯಾರಿಸಿ ಹೊದಿಸಿಕೊಂಡರೆ ಚಳಿ ಕಡಿಮೆಯಾಗುತ್ತದೆ ಎಂದು ಯೋಚಿಸಿ, ಅಂತಹ ರೋಮಗಳಿಗೋಸ್ಕರ ಎಲ್ಲಾ ಕಡೆಯೂ ಹುಡುಕಿದರು ದೊರೆಯುವುದಿಲ್ಲ ಆಗ ಶಿವನು ಸೃಷ್ಟಿಕರ್ತನಾದ ಬ್ರಹ್ಮನನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡನು. ಬ್ರಹ್ಮನು ಪ್ರತ್ಯಕ್ಷನಾಗಿ ಏನೆಂದು ಕೇಳಲು, ಶಿವನು ಉದ್ದವಾದ, ದಪ್ಪವಾದ, ಮೃದುವಾದ ರೋಮಗಳಿರುವ ಪ್ರಾಣಿಯನ್ನು ಸೃಷ್ಟಿಸಬೇಕೆಂದು ಅಜ್ಞಾಪಿಸುವನು. ಇದಕ್ಕೆ ಪ್ರತಿಯಾಗಿ ಬ್ರಹ್ಮನು ಕಪ್ಪಗಿರುವ ಕುರಿ, ಟಗರುಗಳನ್ನು ಸೃಷ್ಟಿಸಿದನು. ಸೃಷ್ಟಿಸಿದ ಕುರಿ, ಟಗರುಗಳ ರೋಮಗಳಿಂದ ಶಿವನು ಕೌರಭ ಋಷಿಗಳಿಗೆ ಕಂಬಳಿಯನ್ನು ತಯಾರಿಸಲು ಆಜ್ಞಾಪಿಸಿದನು. ಶಿವನ ಮಾತಿನಂತೆ ಕೌರಭ ಋಷಿಗಳು ಕುರಿಗಳ ರೋಮಗಳಿಂದ ಅತಿ ನಯವಾದ-ಸುಂದರವಾದ ಕಂಬಳಿಯೊಂದನ್ನು ತಯಾರಿಸಿ, ಶಿವನಿಗೆ ಮೊದಲು ಕಂಬಳಿಯನ್ನು ಅರ್ಪಿಸಿದನು. ಇದರಿಂದ ಸಂತೋಷಗೊಂಡ ಶಿವನು ಇಂತಹ ಅನೇಕ ಕಂಬಳಿಗಳನ್ನು ತಯಾರಿಸಿ, ಎಲ್ಲರಿಗೂ ನೀಡುವಂತೆ ಆಜ್ಞಾಪಿಸಿದನು. ಕೌರಭ ಋಷಿಗಳು ಅವನಿಗೆ ದೇವಾ ಮೊದಲ ಕಂಬಳಿಯಿಂದ ನೀವು ಗದ್ದುಗೆ ಏರಬೇಕೆಂದನು. ಇದಕ್ಕೆ ಮಣಿದ ಶಿವನು ಭಕ್ತನ ಮಾತಿಗೆ ಬೆಲೆಕೊಟ್ಟು, ತಾನು ಕೂತ ಸ್ಥಳದ ಕೆಳಗೆ ಹಾಸಿ ಕೊಂಡು, ಕೂತನು ಇದರಿಂದ ಬೆಚ್ಚಗಿನ ಅನುಭವವಾಯಿತು.

ಈ ಕಂಬಳಿಯು ಹಾಸಿಕೊಳ್ಳಲು, ಹೊದ್ದುಕೊಳ್ಳಲು, ಚಳಿಯಿಂದ ರಕ್ಷಿಸಿಕೊಳ್ಳಲು ಅನುಕೂಲವಾಗುವುದಲ್ಲದೆ, ಭೂಮಿಯಲ್ಲಿ ಪ್ರತಿಯೊಬ್ಬ ಮನುಷ್ಯರು ಯಾವುದೇ ಶುಭಕಾರ್ಯಗಳಿಗೂ ಮುನ್ನ ಸೂಚನೆಯಂತೆ ಬಳಸಿದರೆ, ಕಾರ್ಯಗಳಲ್ಲೆಲ್ಲ ಶುಭಕರದಿಂದಾಗುವವು ಎಂದು ಹರಸಿದರು ಇಂತಹ ಕಂಬಳಿಯನ್ನು ಕೌರಭ ಋಷಿಯು ದೇವಾನು-ದೇವತೆಗಳಿಗೆಲ್ಲ ಮಾಡಿ ಕೊಟ್ಟಿದ್ದರಿಂದ, ಎಲ್ಲರು ಚಳಿಯಿಂದ, ಪಾರಾಗಿ ಬೆಚ್ಚಗಿನ ಅನುಭವವನ್ನು ಪಡೆದುಕೊಂಡು ಹರ್ಷಿತರಾದರು. ಇವರೆಲ್ಲರ ಹರ್ಷವನ್ನು ಕಂಡ ಶಿವನು ಕೌರಭ ಋಷಿಗೆ, ಕೈಲಾಸದಲ್ಲಿರುವ ವರೆಲ್ಲರೂ, ದೇವಾನು-ದೇವತೆಗಳಿಗೂ ಬೆಚ್ಚಗಿನ ಹೊದಿಕೆ ನೀಡಿರುವ ನಿಮಗೆ, ಯಾವ ವರ ಬೇಕಾದರೂ, ನೀಡುವೆ ಕೇಳಿ ಎಂದರು ಇದಕ್ಕೆ ಪ್ರತಿಯಾಗಿ ಕೌರಭ ಋಷಿಯು ಶಿವ ದೇವನೇ, ನಿಮ್ಮ ದಯೆಯಿಂದ ನನಗೆ ಯಾವುದೇ ಕೊರತೆಯಿಲ್ಲ. ಆದರೆ ತಮ್ಮಲ್ಲಿ ಒಂದು ವಿನಂತಿ, ಕಂಬಳಿಯ ತಯಾರಿಕೆಗಾಗಿ, ನೀವು ಕುರಿ, ಮೇಕೆ, ಟಗರುಗಳನ್ನು ಸೃಷ್ಟಿಸಿದಿರಿ, ಆದರೆ ಅವುಗಳು ಸಾದು ಪ್ರಾಣಿಗಳು, ಅವುಗಳ ರಕ್ಷಣೆಯಾಗಬೇಕು. ಕ್ರೂರ ಪ್ರಾಣಿಗಳಿಂದ ಜೀವ ಉಳಿಸಿಕೊಳ್ಳಬೇಕು. ಹಾಗಾಗಿ ಅವುಗಳಿಗೆ ರಕ್ಷಣೆ ಬೇಕು, ಕುರಿಗಳನ್ನು ಯಾರಾದರೂ ಕಾಯಬೇಕು ಎಂದನು. ಇದಕ್ಕೆ ಶಿವನು ಅಪ್ಪಣೆ ನೀಡಿ, ಇವುಗಳನ್ನು ಸೃಷ್ಟಿಸಿದ್ದು ಬ್ರಹ್ಮನೇ, ಅವುಗಳ ರಕ್ಷಣೆಯ ಹೊಣೆ ಅವನದೇ ಎಂದು, ಮನದಲ್ಲಿ ಬ್ರಹ್ಮನ್ನನು ನೆನೆದ ತಕ್ಷಣ, ಬ್ರಹ್ಮ ಪ್ರತ್ಯಕ್ಷವಾಗಿ ಏನು ಅಪ್ಪಣೆ ದೇವಾ ಸ್ಮರಿಸಿದು, ಆಗ ಶಿವ ನಡೆದ ಸಂಗತಿಯನ್ನು ತಿಳಿ ಹೇಳಲು, ಬ್ರಹ್ಮನು ಆಯಿತು ನಾನೇ ಅವುಗಳ ರಕ್ಷಣೆ ಮಾಡುವೆ, ಎಂದು ಕುರಿಗಳನ್ನು ಹೊಡೆದುಕೊಳ್ಳುತ್ತ ಭೂಮಿಗೆ ಬಂದು, ಕೆಲ ದಿನಗಳ ಕಾಲ ಬೇಸರವಿಲ್ಲದೇ ಕಾಯ್ದನು, ಆದರೆ ಅಡವಿಯಲ್ಲಿ ಯಾರ ಒಬ್ಬರ ಸಂಪರ್ಕವಿಲ್ಲದೆ, ಚಂಚಲ ಪ್ರಾಣಿಗಳ ಜೊತೆ ಇದ್ದು-ಇದ್ದು ಬೇಸರವಾಗಿ ಭೂಮಿಯಲ್ಲಿ ಸೃಷ್ಟಿಯ ಕೆಲಸ ನಿಂತು ಹೋಗಿದೆ, ಇವುಗಳಿಂದ ನನಗೆ ಬೇಸರವಾಗಿದೆ. ನನ್ನದು ಕೇವಲ ಹುಟ್ಟಿಸುವ ಕೆಲಸ, ಆ ಜೀವಿಯ ರಕ್ಷಣೆಯ ಜೀವನ ಸಾಗಿಸುವ ಹೊಣೆ ವಿಷ್ಣುವುದು ಎಂದು ಮನದಲ್ಲಿ ಯೋಚಿಸುತ್ತ, ವಿಷ್ಣುವನ್ನು ನೆನೆಯಲು, ವಿಷ್ಣುವು ಪ್ರತ್ಯಕ್ಷನಾಗಿ ಏನು ಅಪ್ಪಣೆ ಎನ್ನಲು, ಬ್ರಹ್ಮನು ಶಿವನ ಆಜ್ಞೆಯನ್ನು ಹೇಳಲು, ಬ್ರಹ್ಮ ಇನ್ನು ಮುಂದೆ ಇವುಗಳ ರಕ್ಷಣೆ ನಿನ್ನದು ಎಂದಾಗ ವಿಷ್ಣು ಓ! ಇಂತಹ ಸಾದು ಪ್ರಾಣಿಗಳ ರಕ್ಷಣೆ ಸುಲಭವೆಂದು, ಒಪ್ಪಿದನು, ಬ್ರಹ್ಮನು ಅಬ್ಬಾ! ಇಂತಹ ಚಂಚಲ ಪ್ರಾಣಿಗಳಿಂದ ನನಗೆ ಮುಕ್ತಿ ದೊರೆಯಿತು ಎಂದು ಹರುಷದಿಂದ ತನ್ನ ನಿಲಯಕ್ಕೆ ಬಂದು ಸೇರಿದನು. ವಿಷ್ಣುವು ತನ್ನ ಕೊಳಲನ್ನು ಊದುತ್ತಾ-ಊದುತ್ತಾ ಇರಲು ಕುರಿಗಳೆಲ್ಲ ಸುತ್ತಲೂ ಬ್ಯಾ-ಬ್ಯಾ ಎಂದು ಸುತ್ತುವರಿಯುತ್ತಾ, ಮೇಯುತ್ತಾ ಇದ್ದವು. ಹೀಗೆ ದಿನಗಳು- ಕಳೆಯಲು ವಿಷ್ಣುವಿಗೂ ಬೇಸರವಾಯಿತು. ಆದರೆ ಇದು ಶಿವನ-ಬ್ರಹ್ಮರ ಆಜ್ಞೆ ಬಿಡಬಾರದೆಂದು

ಹಾಗೆಯೇ ಕಾಲ ಕಳೆಯುತ್ತಿದ್ದನು. ವಿಷ್ಣುವನ್ನು ಕಾಣದೆ, ಲಕ್ಷ್ಮಿಯು ಅವನನ್ನು ಹುಡುಕುತ್ತಾ ಬರುತ್ತಿರಲು, ಕಾಡಿನಲ್ಲಿ ಕುರಿಗಳ ಮಧ್ಯದಲ್ಲಿ ವಿಷ್ಣುವು ಕೊಳಲು ಊದುತ್ತಾ ಕುಳಿತಿದ್ದನು. ಲಕ್ಷ್ಮಿಯು ಎಷ್ಟೇ ಕರೆದರು, ಕೇಳದೆ ಮೈ ಮನಗಳನ್ನು ಮರೆತು ಇರಲು, ಲಕ್ಷ್ಮಿಯು ಭಯಭೀತಳಾಗಿ, ಶಿವನ ಬಳಿ ಹೋಗಿ ವಿಷ್ಣುವಿನ ಸ್ಥಿತಿಯನ್ನು ಚಾಚೂ ತಪ್ಪದೆ ವಿವರಿಸಿದಳು. ವಿಷ್ಣುವು ಇಲ್ಲದೆ, ಅವರ ಕಾರ್ಯಗಳೆಲ್ಲ ನಿಂತು ಹೋಗಿವೆ, ಮಾನವರ ಜೀವನ ಕ್ರಮವೇ ತಪ್ಪಿದೆ. ನೀವು ಏನಾದರು ಒಂದು ಉಪಾಯ ಮಾಡಿ ವಿಷ್ಣುವನ್ನು ವೈಕುಂಠಕ್ಕೆ ಕಳಿಸಿ ಕೊಡಬೇಕು ಎಂದಳು.

ಶಿವನು ಲಕ್ಷ್ಮಿಯ ಮಾತನ್ನು ಕೇಳಿ, ಇದು ಸತ್ಯವೆಂದು ತಿಳಿದು, ಕುರಿಗಳ ಹುಟ್ಟಿಗೆ ಸ್ವತಃ ನಾನೇ ಕಾರಣ, ನಾನೇ ಅವುಗಳ ರಕ್ಷಣೆ ಮಾಡವೆ ಎಂದು ವಿಷ್ಣುವನ್ನು ಕಳುಹಿಸಿ ಅವತ್ತಿನಿಂದ ಕುರಿಗಳನ್ನು ಕಾಯುತ್ತ ಕಾಲ ಕಳೆಯುತ್ತಿದ್ದನು. ಆದರೆ ಕೈಲಾಸದಲ್ಲಿ ಪಾರ್ವತಿ, ಗಣಂಧರರು, ನಂದಿಯರು ಅವನನ್ನು ಕಾಣದೆ ಬೇಸರಗೊಂಡು, ಕೈಲಾಸ-ಕೈಲಾಸವೇ ದಿಕ್ಕು ತೋಚದೇ ಹಾಗೆ ಕುಳಿತಿರಲು, ನಂದಿಯು ಪಾರ್ವತಿಯ ಬಳಿ ಬಂದು, ದೇವಿಯೇ ನೀವೇ ಏನಾದರೊಂದು ಮಾಡಲೇಬೇಕು ಎಂದು ಬೇಡಿಕೊಳ್ಳಲು, ಪಾರ್ವತಿಯು ಯೋಚನೆ ಮಾಡಿ ಎಲ್ಲರೊಂದಿಗೆ ಭೂಮಿಗೆ ಬಂದು ಶಿವನಲ್ಲಿಗೆ ಬಂದು, ದೇವನೇ ಭೂ ಲೋಕದ ಸರ್ವ ಜೀವಿಗಳನ್ನು ರಕ್ಷಿಸುವ ನೀವು, ಕೇವಲ ಇಂತಹ ಪ್ರಾಣಿಗಳನ್ನು ಮಾತ್ರ ರಕ್ಷಿಸಿದರೆ ಹೇಗೆ ಎಂದು ವಿಚಾರಿಸಲು, ಶಿವನು ಪಾರ್ವತಿಯು ಹೇಳಿದ್ದು ಸತ್ಯವೆಂದು ತಿಳಿದು, ಪಾರ್ವತಿಗೆ ನೀನು ಭೂಲೋಕದ ತಾಯಿ ಈ ಸಮಸ್ಯೆಗೆ ನೀನೇ ಒಂದು ಪರಿಹಾರವನ್ನು ಸೂಚಿಸು ಎಂದನು ಶಿವ, ಆಗ ಪಾರ್ವತಿಯು ತಂದೆಯಿಲ್ಲದೆ, ತಾಯಿ ಇಲ್ಲ, ಅದಕ್ಕೆ ನೀವೇ ಪರಿಹಾರ ಸೂಚಿಸಿ ಎಂದು ದುಃಖದಲ್ಲಿ ಹೇಳುತ್ತಿರಲು, ಶಿವನು ಪಾರ್ವತಿ ನೀನು ಈ ಕ್ಷಣ ಕಣ್ಣನ್ನು ಮುಚ್ಚಿಕೊ ಎಂದು ಹೇಳಿ, ಅವಳ ಎರಡು ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು. ಆಗ ಪಾರ್ವತಿಯ ಎದೆ ತುಂಬಿ, ಹಾಲು ತನ್ನತಾನೆ ಭೂಮಿಗೆ ರಭಸವಾಗಿ ಚೆಲ್ಲುತ್ತಿದ್ದವು. ಕೆಲ ಕ್ಷಣಗಳ ನಂತರ ಶಿವ ಕೈಗಳನ್ನು ಬಿಟ್ಟಾಗ ಪಾರ್ವತಿಯ ಎದೆ ಹಾಲು ನಿಂತವು. ಪಾರ್ವತಿಯು ಕಣ್ಣನ್ನು ತೆರೆದು ನೋಡಿದರೆ, ಅವಳ ಮುಂದೆ ಮಣ್ಣಿನಲ್ಲಿ ಹಾಲು ಬೆರೆತು ಮೃದುವಾಗಿತ್ತು. ಇದನ್ನು ಗಮನಿಸಿದ ಪಾರ್ವತಿಯು ಆಲೋಚನೆ ಮಾಡಿ, ಶಿವನನ್ನು ಧ್ಯಾನಿಸುತ್ತ, ಭಕ್ತಿಯಿಂದ ಮಣ್ಣನ್ನು ಕೈಯಲ್ಲಿ ಹಿಡಿದು, ಒಂದು ಗಂಡು, ಒಂದು ಹೆಣ್ಣು ಗೊಂಬೆಯನ್ನು ಮಾಡಿದಳು. ಅವುಗಳಿಗೆ ಜೀವ ತುಂಬಿದರು. ಶಿವ-ಪಾರ್ವತಿಯರು ನೋಡಲು ಮುದ್ದು-ಮುದ್ದಾಗಿದ್ದ ಆ ಗೊಂಬೆಗಳಿಗೆ ಮುದ್ದುಗೊಂಡ-ಮುದ್ದಾಯಿ ಎಂದು ನಾಮಕರಣ ಮಾಡಿದರು. ಇದರಿಂದ ಕೈಲಾಸದ

ನಿವಾಸಿಗಳೆಲ್ಲರೂ ಹರುಷದಿಂದ ಜೈಕಾರವನ್ನು ಕೂಗುತ್ತಿದ್ದರು. ಶಿವ-ಪಾರ್ವತಿಯರು ಮುದ್ದುಗೊಂಡ-ಮುದ್ದಾಯಿಯರಿಗೆ ನೀವಿಬ್ಬರು ಇವತ್ತಿನಿಂದ ಗಂಡ ಹೆಂಡಿರಾಗಿ ಬಾಳಿರಿ ಎಂದು ಹರಸಿದರು. ನೀವು ಹಾಲಿನಿಂದ ಹುಟ್ಟಿದವರಾದರಿಂದ ನೀವು ಹಾಲುಮತದವರಾಗಿ ಬಾಳಿರಿ. ನಿಮ್ಮಿಂದ ಹುಟ್ಟಿದವರೆಲ್ಲರೂ ಹಾಲುಮತದವರೆಂದು ಪ್ರಸಿದ್ದಿಯಾಗಲೀ ನೀವು ಇಬ್ಬರೆ ಈ ಹಾಲುಮತದ ಮೂಲ ಪುರುಷದ ವ್ಯಕ್ತಿಗಳಾಗಿ ಹಾಲುಮತವನ್ನು ಉದ್ಧಾರ ಮಾಡಿ, ಬೆಳೆಸಬೇಕೆಂದು ಹರಸಿದರು. ಇದರೊಂದಿಗೆ ಈ ಕುರಿಗಳನ್ನು ಕಾಯುವ-ರಕ್ಷಿಸುವ ಹೊಣೆಯು ನಿಮ್ಮದು ಎಂದು ಹೇಳಿ ಹಾಲುಮತದ ಹುಟ್ಟಿನೊಂದಿಗೆ, ಅದರ ಮಹತ್ವವನ್ನು ತಿಳಿಸಿದರು.

೧೫. **ಶಿವನು ಹಾಲುಮತಕ್ಕೆ ಭಂಡಾರವನ್ನು ಸೃಷ್ಟಿಸಿ ನೀಡಿದ ಕಥೆ:** ಕುರಿಗಳ ರಕ್ಷಣೆಗೆಂದು ಶಿವ-ಪಾರ್ವತಿಯರು ಸೇರಿ ಮುದ್ದುಗೊಂಡ-ಮುದ್ದವ್ವರನನ್ನು ಸೃಷ್ಟಿಸಿ, ಅವರಿಗೆ ಹಾಲುಮತದ ಮಹತ್ವ ತಿಳಿಸಿ ಇಂದಿನಿಂದ ನೀವು ಹಾಲುಮತದ ಮೂಲ ಪುರುಷರು, ಧರ್ಮದ ಏಳ್ಗೆ ನಿಮ್ಮ ಕೈಯಲ್ಲಿರೊದು ಅದರ ಉಳಿವು, ಸಂತತಿಯ ಹುಟ್ಟು, ಧರ್ಮದ ಬೆಳವಣಿಗೆ, ಕುರಿಗಳ ರಕ್ಷಣೆ ಪ್ರತಿಯೊಂದು ನಿಮ್ಮ ಜವಾಬ್ದಾರಿಯಾಗಿದೆ. ಇಷ್ಟೆಲ್ಲ ನಿಮ್ಮ ಜವಾಬ್ದಾರಿಯಾದರೆ, ನಿಮ್ಮ ರಕ್ಷಣೆಯ ಗುರಿ ನಮ್ಮದು. ಅದಕ್ಕೆ ನಾನು ನಿಮಗೂ ಹಾಲುಮತಸ್ಥರಿಗೂ ಪವಿತ್ರವಾಗುವಂತಹ ದೈವ ಸ್ವರೂಪವಾಗಿರುವಂತಹ ವಸ್ತುವನ್ನು ನೀಡುವೆ ಎಂದು ಹೇಳಿ ಗಣಂಧರನನ್ನು ಕರೆದು ಕಾಡಿನಲ್ಲಿ ಬೆಳೆದ ಅರಿಶಿಣ ಗಿಡದ ಗಡ್ಡೆಗಳನ್ನು ತಂದು ಪುಡಿ ಮಾಡಿ ತೆಗೆದುಕೊಂಡು ಬಾ ಎಂದು ಆಜ್ಞೆ ಮಾಡಿದನು. ಗಣಂಧರನು ಹಾಗೆಯೇ ಮಾಡಿ ಪುಡಿಯನ್ನು ತಂದು ಶಿವನಿಗೆ ಕೊಟ್ಟನು. ಶಿವ ಅದಕ್ಕೆ ಭಂಡಾರವೆಂದು ಕರೆದು, ಮುದ್ದುಗೊಂಡ, ಮುದ್ದವ್ವರಿಗೆ ಹಚ್ಚಿ, ಇದು ನಿಮ್ಮ ಕುಲದ ಶ್ರೇಷ್ಠವಾದ ವಸ್ತು, ಇದರಿಂದ ಸರ್ವ ರೋಗಗಳು ಮಾಯವಾಗುವವು – ಹಾಲುಮತದವರು ಇದು ಇಲ್ಲದೆ ಯಾವ ಒಂದು ಶುಭ ಕಾರ್ಯವನ್ನು ಮಾಡದೇ ಇರುತ್ತಾರೆ. ಇದರಿಂದ ಭಕ್ತರ ಸರ್ವ ಕೋರಿಕೆಯು ಫಲ ಕೊಡುವವು ಎಂದು ಹರಿಸಿ, ಕುರಿ ಕಾಯಲು ಒಂದು ಬೆತ್ತ, ಚಳಿ-ಮಳೆ-ಗಾಳಿಯ ರಕ್ಷಣೆಗೋಸ್ಕರ, ಕೌರಭ ಋಷಿಗಳು ತಯಾರಿಸಿದ ಕಂಬಳಿಯನ್ನು ನೀಡುವನು. ಇದರಿಂದ ಹರ್ಷಿತನಾಗಿ ಸತಿ ಪತಿಗಳು ಶಿವ-ಪಾರ್ವತಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುವರು.

೧೬. **ಹಾಲುಮತದ ಶ್ರೇಷ್ಠವಾದ ಡೊಳ್ಳು, ನೆಪೇರಿಯ ಸೃಷ್ಟಿಯ ಹಿನ್ನೆಲೆಯ ಕಥೆ:** ಚಂದ್ರಧರನ ರಾಜನ ಮಗಳಾದ ಚುಮಲಾದೇವಿಯನ್ನು ರಾಕ್ಷಸಿಯು ಚಿಕ್ಕ ವಯಸ್ಸಿನಲ್ಲಿಯೇ ಎತ್ತಿಕೊಂಡು ಬಂದು ಅತಿ ಪ್ರೀತಿಯಿಂದ, ತಾಯಿಯ ವಾತ್ಸಲ್ಯದಿಂದ, ಬೆಳೆಸುತ್ತ ಬಂದಳು. ರಾಕ್ಷಸಿಯು ಆಹಾರಕ್ಕಾಗಿ ಪ್ರತಿನಿತ್ಯ ಗವಿಯಿಂದ ಬಹುದೂರದವರೆಗೆ ಹೋಗಿ ಬಂದು ಮಾಡುತ್ತಿದ್ದಳು. ಆಗ ಗವಿಯ ಮುಂದೆ ಇರುವ ಕಾಂಚಾಲ ಮರವೊಂದಿತ್ತು. ಅದರ ಮೇಲೆ ಬಹು

ವರ್ಷಗಳಿಂದ ಕಾಗೆಯೊಂದು ಜೀವಿಸುತ್ತಿತ್ತು. ರಾಕ್ಷಸಿಯ ಆಹಾರಕ್ಕಾಗಿ ಹೊರ ಹೋದಾಗ ಚುಮಲಾದೇವಿಯ ರಕ್ಷಣೆಗಾಗಿ, ಮರದ ಮೇಲೆ ಕುಳಿತು ವೈರಿಗಳೇನಾದರು ಬಂದರೆ ಕರ್ಕಸ ಧ್ವನಿಯಿಂದ ಕೂಗುತ್ತಿತ್ತು. ಆಗ ರಾಕ್ಷಸಿಯು ಬಂದು ಚುಮಲಾದೇವಿಯನ್ನು ರಕ್ಷಿಸುತ್ತಿತ್ತು. ಹೀಗೆ ರಾಕ್ಷಸಿಯ ಒಡನಾಟದಲ್ಲಿ ತುಂಬಾ ಆಪ್ತರಾಗಿ ಕಾಂಚಾಲ ಮರ, ಮತ್ತು ಕಾಗೆಗಳಿದ್ದವು. ಚುಮಾಲಾದೇವಿಯು, ರಾಕ್ಷಸಿಯು ಇಲ್ಲದ ಸಮಯದಲ್ಲಿ ಬೆಂಕಿಯ ಕಿಚ್ಚಿಗಾಗಿ ಬಂದ ಪದುಮಣ್ಣನ ಪರಿಚಯವಾಗಿ ಇವರಿಗೆ ಅಡ್ಡಿ ಬರುವ ಕಾಂಚಾಲ ಮರವನ್ನು ಕಡಿದು ಹಾಕಿ ಕಾಗೆಯ ರುಂಡವನ್ನು ಕತ್ತರಿಸಿ ಹಾಕಿ, ರಾಕ್ಷಸಿ ಬಂದು ನೋಡಿ, ಪದುಮಣ್ಣನ ಮೇಲೆ ಹಾರಿ ಹೋಗಿ, ಇಬ್ಬರ ನಡುವೆ ಭೀಕರ ಜಗಳ ಆಗಿ, ಕೊನೆಗೆ ರಾಕ್ಷಸಿಯು ಸೋಲನ್ನು ಒಪ್ಪಿಕೊಂಡು ಚುಮಲಾದೇವಿ– ಪದುಮಣ್ಣನ ಮದುವೆಯನ್ನು ಗುರು ರೇವಣಸಿದ್ದನ ಸಾನಿಧ್ಯದಲ್ಲಿ ಮಾಡಿದಳು. ರೇವಣಸಿದ್ದನು ಇವರ ವಿವಾಹದ ಸಂದರ್ಭವಾಗಿ ರಾಕ್ಷಸಿಗೆ ಏನಾದರು ವರವನ್ನು ಕೇಳು ನೀಡುವೆ ಎಂದನು. ಅದಕ್ಕೆ ರಾಕ್ಷಸಿಯು ನನ್ನ ಜೀವನದ ಆತ್ಮೀಯ ಗೆಳೆಯರಂತಿದ್ದ ಕಾಂಚಾಲ ಮರದಿಂದ ಡೊಳ್ಳು, ಕಾಗೆಯಿಂದ ನೆಪೇರಿಯನ್ನು ನನ್ನ ದೇಹದಿಂದ ದೇವರ ಪೂಜೆಯ ಸಾಮಾಗ್ರಿಗಳನ್ನು ಮಾಡಬೇಕೆಂದು ವಿಶ್ವಾಸನೀಯವಾಗಿ ಕೇಳಿದಳು. ಇದಕ್ಕೆ ಪ್ರತಿಯಾಗಿ ರೇವಣ್ಣನು ಅವಳಿಚ್ಛೆಯಂತೆ ಡೊಳ್ಳು, ನೆಪೇರಿಯನ್ನು ದೇವರ ಸಾಮಗ್ರಿಗಳನ್ನು ತಯಾರಿಸಿದರು. ಆ ವಸ್ತುಗಳು ಹಾಲುಮತರ ಪೂಜ್ಯನೀಯ ವಸ್ತುಗಳಾಗಿವೆ.

ಪವಾಡಗಳ ಆಶಯ

ಜನಸಾಮಾನ್ಯರಂತೆ ಮಹಾಪುರುಷರು ಭೂಮಿಯಲ್ಲಿ ಜನಿಸಿ, ಆತ್ಮಸ್ಥೈರ್ಯದಿಂದ ಬಾಳಿ ಬದುಕಿದವರು. ಇಂಥ ಮಹಾಪುರುಷರ ವ್ಯಕ್ತಿತ್ವಕ್ಕೆ ಮತ್ತು ಪವಾಡಗಳಿಗೆ ಮನಸೋತು ಅವರು ತಮ್ಮಂತೆ ಮಾನವರು ಎಂಬುದನ್ನು ಮರೆತು, ಅವರನ್ನು ದೈವಿಪುರುಷರು ಎಂದು ಹೇಳಿ ಪುರಾಣಗಳಲ್ಲಿ ಅವರ ಜೀವನಕ್ಕೆ ಒಂದು ಪವಾಡದ ರೂಪ ಕೊಟ್ಟರು. ಮಹಾಪುರುಷರ ಮರಣದ ನಂತರ ಅವರ ಲೀಲೆಗಳನ್ನು ಜನರು ಪವಾಡವೆಂಬಂತೆ ಬಿಂಬಿಸಿದರು. ಹಠಯೋಗವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಹಂತ–ಹಂತವಾಗಿ ಸಿದ್ಧಿಸಿಕೊಂಡ ಶಕ್ತಿಯಿಂದ ಪವಾಡಗಳನ್ನು ಮಾಡುವ ಮಟ್ಟಕ್ಕೆ ಹೋಗಿ ದೈವೀ ಪುರುಷರಾದವರು ಹಠಯೋಗಿಗಳು. ಮಹಾಪುರುಷರೆಲ್ಲರೂ ವಾಸ್ತವ ಬದುಕಿನಲ್ಲಿ ಹುಟ್ಟಿ, ಬಾಳಿದವರು. ಇವರು ಆತ್ಮಸ್ಥೈರ್ಯದಿಂದ ಬದುಕಿನಲ್ಲಿ ಶ್ರದ್ಧೆ, ಕಪಟವಿಲ್ಲದ ಮನಸಿನಿಂದ ನುಡಿಯುವುದು, ಜನಸಾಮಾನ್ಯರ ಬದುಕಿಗೊಂದು ಆಶ್ರಯ ನೀಡುವುದು, ಜೊತೆಗೆ ಅವರ ಏಳ್ಗೆಗೆ ಸಹಾಯ ಹಸ್ತ ನೀಡುವುದು, ಜನರ ಕಣ್ಣೀರಿಗೆ ಬೆಲೆಕೊಡುವುದು ಇನ್ನು ಮುಂತಾದ ಘಟನೆಗಳಿಗೆ ತಮ್ಮನ್ನು ಅಳವಡಿಸಿಕೊಂಡಿದ್ದರಿಂದ

ಮಹಾಪುರುಷರು ಸಮಾಜಕ್ಕೆ ಬಿನ್ನವಾಗಿ ಕಾಣುತ್ತಾರೆ. ಮಹಾಪುರುಷರು ಜನರ ಭಕ್ತಿಗೆ ಕೈಜೋಡಿಸಿ ಅವರೊಂದಿಗೆ ಪ್ರೀತಿ ಮಮಕಾರದಿಂದ ಬಾಳಿದವರು. ಇವರು ದೇವರ ಸಮಾನರು, ದೇವರ ಸ್ವರೂಪದವರು. ಪವಾಡ ಪುರುಷರೆಂದು ಜನರು ನಂಬಿದ್ದಾರೆ. ಮಹಾಪುರುಷರ ಚರಿತ್ರೆಯನ್ನು ಪೌರಾಣಿಕ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ.

ಧಾರ್ಮಿಕ ಮಹಾಪುರುಷರ ಜೀವನ ಜನಸಾಮಾನ್ಯರಿಗೆ ಆದರ್ಶಮಯವಾದದು. ಇವರ ಮೌಲ್ಯಗಳು, ಇವರ ಧೋರಣೆಗಳು, ಇವರ ಆಚಾರ–ವಿಚಾರಗಳು ಜನರ ಮನಸಿನ ಮೇಲೆ ದೈವಭಾವನೆಯನ್ನು ಹುಟ್ಟಿಸುತ್ತವೆ. ಸಾಮಾಜದಲ್ಲಿನ ಧರ್ಮಗಳಲ್ಲಿರುವ ಅಧರ್ಮ, ಅಜ್ಞಾನವನ್ನು ಹೋಗಲಾಡಿಸಲು ಪ್ರೇರಣೆಯಾಗಿದ್ದಾರೆ. ಸಮಾಜದಲ್ಲಿ ಮೇಲು–ಕೀಳು ಎಂಬ ಭಾವನೆ ಇಲ್ಲದೆ ಪ್ರತಿಯೊಬ್ಬರನ್ನು ಪ್ರೀತಿಯಿಂದ ಕಂಡವರು ಮಹಾಪುರುಷರು. ಸಮಾಜದ ಒಳಿತಿಗಾಗಿ ಜೀವಿಸಿದವರು ಇವರು.

"ಪವಾಡಗಳ ಮುಖೇನ ಶ್ರೀಸಾಮಾನ್ಯರ ಬದುಕನ್ನು ಹಸನುಗೊಳಿಸಲು ದುಃಖಿತರ, ಸಂಕಟಕ್ಕೆ ಒಳಗಾದವರ, ರೋಗರುಜಿನಗಳನ್ನು ವಾಸಿಮಾಡುವುದು, ಅನಿಷ್ಟ ಆಚರಣೆಗಳಿಂದ ಮುಕ್ತಗೊಳಿಸುವುದು, ಬರಗಾಲ, ಕ್ಷಾಮಗಳನ್ನು ದೂರ ಮಾಡುವುದು, ಕಣ್ಣಿಲ್ಲದವರಿಗೆ ಕಣ್ಣುಗಳನ್ನು, ಮಾತನಾಡಲಾಗದ ಮೂಗರಿಗೆ ಮಾತನಾಡುವ ಶಕ್ತಿಯನ್ನು ನೀಡಿದರು. ಅಂಗವಿಕಲರಿಗೆ ಕೈ–ಕಾಲುಗಳನ್ನು ಅನುಗ್ರಹಿಸಿ ಅಂಗವಿಕಲರ ಬಾಳನ್ನು ಹಸನುಗೊಳಿಸಿದರು. ಮಕ್ಕಳಿಲ್ಲದವರಿಗೆ ಮಕ್ಕಳ ಫಲವನ್ನು ನೀಡುವುದು, ರೋಗಿಗಳಿಗೆ ಮದ್ದನ್ನು ನೀಡುವುದು, ದುಷ್ಟರನ್ನು ನಿಗ್ರಹಿಸುವುದು, ಕೆರೆಕಟ್ಟೆಗಳನ್ನು ಕಟ್ಟಿಸುವುದು ಹೀಗೆ ಸಾಮಾಜಿಕ ಹಿತವನ್ನು ಕಾಯುವ ಸಲುವಾಗಿ ಮಾಡಿದ ಜನೋಪಯೋಗಿ ಕಾರ್ಯಗಳಿಂದ ಜನರ ಮನಸ್ಸಿನಲ್ಲಿ ಸ್ಮರಣೀಯವಾಗಿ ಉಳಿದರು. ಜನ ಇವರನ್ನು ದೈವತ್ವದ ಸ್ಥಾನಕ್ಕೆ ಏರಿಸಿ ಆರಾಧಿಸತೊಡಗಿದರು."[೬೫] ಬೀರೇಶ್ವರನು ಸತ್ತ ಮಗುವನ್ನು ಬದುಕಿಸಿದ್ದು, ಶಾಂತಮುತ್ತಯ್ಯ ಸತ್ತ ಟಗರನ್ನು ಬದುಕಿಸಿ ಹನ್ನೆರಡನೆ ಶತಮಾನದಲ್ಲಿ ಕುರುಬರನ್ನು ಕಲ್ಯಾಣಕ್ಕೆ ಪ್ರವೇಶಿಸುವಂತೆ ಮಾಡಿದು, ಮಹಾಲಿಂಗರಾಯ ಆರ್ಭಟಿಸುವಂತ ಮಳೆ ತರಿಸಿದ್ದು, ಕಂಬಳಿ ಬೀಸಿ ಬರಗಾಲದಲ್ಲಿ ಮಳೆ ಬರುವಂತೆ ಮಾಡಿದ್ದು, ಕಣ್ಣು ಕಾಣದ ಹುಲಿಮರಿಗಳಿಗೆ ಕಣ್ಣು ಕಾಣುವಂತೆ ಮಾಡಿದ್ದು ಹೀಗೆ ನಾನಾ ರೀತಿಯ ಪವಾಡಗಳು ಹಾಲುಮತದಲ್ಲಿ ಕಾಣುತ್ತೇವೆ.

"ಸಾಮಾನ್ಯ ಜನರಿಗೆ ಕ್ಷೇತ್ರ ಮಹಿಮೆಯನ್ನು ತಿಳಿಸಲು ಪುರಾಣಕಾರರು ಈ ಪವಾಡಗಳನ್ನು ವರ್ಣಿಸಿದುದು ಸ್ಪಷ್ಟ. ಇದೊಂದು ವಿಧದ ಅಗ್ನಿದಿವ್ಯ. ಅಂದು ಸಂಶಯ ಪಡುವವರನ್ನು

ನಂಬಿಸಲು ಶರಣರು ಇಂಥ ದಿವ್ಯಗಳನ್ನಾಗಲೀ, ಪವಾಡಗಳನ್ನಾಗಲೀ ಮಾಡಿದವರಲ್ಲವೆಂಬುದು ಸೂರ್ಯ ಪ್ರಕಾಶದಷ್ಟು ಸತ್ಯ. ಆದರೆ ಅವರು ಗತಿಸಿದ ಆನಂತರ ಪುರಾಣಕಾರರು ಅವರ ಚರಿತ್ರೆಯಲ್ಲಿ ಇಂಥ ಪವಾಡಗಳನ್ನು ಹೆಣೆದಿದ್ದಾರೆ. ಇಂಥವುಗಳಿಂದ ಪುರಾಣಕಾರರು, ಶರಣರನ್ನು ದೊಡ್ಡವರನ್ನಾಗಿ ಮಾಡ ಹೊರಟಿದ್ದಾರೆ. ನಿಜವಾಗಿ ನೋಡಿದರೆ, ಶರಣರು ಇಂಥ ಪವಾಡಗಳಿಂದೇನೂ ದೊಡ್ಡವರಾಗಿಲ್ಲ. ಅವರು ತಮ್ಮ ನಿಜವಾದ ನಡೆ-ನುಡಿಗಳಿಂದ ದೊಡ್ಡವರಾಗಿದ್ದಾರೆ."[೮] ಸಮಾಜದಲ್ಲಿ ಆಗುವ ಅನ್ಯಾಯದ ವಿರುದ್ಧ ದನಿ ಎತ್ತಿ, ಜನರ ಕಷ್ಟಗಳನ್ನು ನಿವಾರಿಸಿದವರು ಮಹಾಪುರುಷರು. ಸಮಾಜದಲ್ಲಿ ಅಧರ್ಮ, ಅನ್ಯಾಯ, ಅಸಮಾನತೆಯಿಂದಾಗಿ ಸಮಾಜ ದುಸ್ಥಿತಿಯಲ್ಲಿತ್ತು. ಇಂತಹ ಸಂದರ್ಭದಲ್ಲಿ ತಮ್ಮ ಪವಾಡಗಳ ಮೂಲಕ ಜನಸಾಮಾನ್ಯರ ಮನಸ್ಸಿನಲ್ಲಿ ಬೇರೂರಿದರು. ತಮ್ಮ-ತಮ್ಮ ಕಾಯಕದಿಂದಲೇ ಸಮಾಜವನ್ನು ಹಸನುಗೊಳಿಸಿದರು. ಕಷ್ಟ-ದುಃಖದಲ್ಲಿರುವವರಿಗೆ ಹಾಗೆಯೇ ಹಸಿದವರಿಗೆ ಕೈನೀಡಿ ಬಾಳು ಕೊಟ್ಟವರು ಇವರು.

ಧಾರ್ಮಿಕ ಮಹಾಪುರುಷರ ಜೀವನವೇ ಜನಸಾಮಾನ್ಯರ ಬಾಳಿಗೊಂದು ಬೆಳಕು. ಅದ್ದರಿಂದ ಇವರ ಬಾಳು ಜನರಿಗೆ ದಾರಿದೀಪವಾಯಿತು. ಆಯಾ ಧರ್ಮದ ಸಾಂಸ್ಕೃತಿಕ ಮಹಾಪುರುಷರಾಗಿ ಬದುಕಿ, ಧರ್ಮದ ಏಳ್ಗೆಗಾಗಿ ತಮ್ಮ ಜೀವನವನ್ನು ಮೂಡುಪಾಗಿಟ್ಟವರು. ಪವಾಡಗಳ ಮೂಲಕ ಜನರಲ್ಲಿ ಜ್ಞಾನವನ್ನು ಮೂಡಿಸಿದ ದೇವಮಹಾಪುರುಷರು ಎಂದರೆ ತಪ್ಪಾಗಲಾರದು.

ಕೊನೆಟಿಪ್ಪಣಿಗಳು

೧. ಸಿವಿಸಿ ೫೫೪೭

೨. ಬಿಎಚ್ ೬,೪೭

೩. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೧೨೧

೪. ಅದೇ, ಪು.೧೨೯

೫. ಅದೇ, ಪು.೧೩೦

೬. ಅದೇ, ಪು.೧೩೧

೭. ಅದೇ, ಪು.೧೩೧

೮. ಶ್ರೀ ಅಡಿವೆಪ್ಪ ಮಾಳಪ್ಪ ಸೋಮುತ್ತೆ, ಸುಕ್ಷೇತ್ರ ಹುಲಜಂತಿ ಶ್ರೀ ಮಾಹಿಮಾಂತಕ ಮಹಾಲಿಂಗರಾಯನ ಹಾಲುಮತ ಪುರಾಣ, ಪು.೩

೯. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೪

೧೦. ಅದೇ, ಪು.೪

೧೧. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೧೫

೧೨. ಅದೇ, ಪು.೧೫

೧೩. ಶ್ರೀ ಸದಾಶಿವ ಅಪ್ಪಣ್ಣ ಜುಮ್ಮಣ್ಣವರ, ಹಾಲುಮತಶ್ರೀ ವೀರಲಿಂಗೇಶ್ವರ ಮಹಾಪುರಾಣ, ಪು.೨೨

೧೪. ಅದೇ, ಪು.೨೩

೧೫. ಅದೇ, ಪು.೧೧

೧೬. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೨೩

೧೭. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೧೮

೧೮. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೨೪

೧೯. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೧೯

೨೦. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೨೪

೨೧. ಅದೇ, ಪು.೮

೨೨. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೨೪

೨೩. ಶ್ರೀ ಸದಾಶಿವ ಅಪ್ಪಣ್ಣ ಜುಮ್ಮಣ್ಣವರ, ಹಾಲುಮತಶ್ರೀ ವೀರಲಿಂಗೇಶ್ವರ ಮಹಾಪುರಾಣ, ಪು.೨೭

೨೪. ಅದೇ, ಪು.೩೨

೨೫. ಅದೇ, ಪು.೪೧

೨೬. ಅಂಬಾಸುತ ಮುದ್ದಲಿಂಗೇಶ್ವರ ಚರಿತೆ, ಪು.೨೭

೨೭. ಶ್ರೀ ಅಡಿವೆಪ್ಪ ಮಾಳಪ್ಪ ಸೋಮುತ್ತೆ, ಸುಕ್ಷೇತ್ರ ಹುಲಜಂತಿ ಶ್ರೀ ಮಾಹಿಮಾಂತಕ ಮಹಾಲಿಂಗರಾಯನ ಹಾಲುಮತ ಪುರಾಣ, ಪು.೧೬೭

೨೮. ಅದೇ, ಪು.೧೬೯

೨೯. ಅದೇ, ಪು.೧೫೭

೩೦. ಕಲಬುರ್ಗಿ ಎಂ.ಎಂ.(ಸಂ), ತಗರ ಪವಾಡ, ಪು.೩

೩೧. ಅದೇ, ಪು.೪

೩೨. ಅದೇ, ಪು.೫

೩೩. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೧೪

೩೪. ಅದೇ, ಪು.೧೪

೩೫. ಅದೇ, ಪು.೧೭

೩೬. ಅಂಬಾಸುತ ಮುದ್ದಲಿಂಗೇಶ್ವರ ಚರಿತೆ, ಪು.೯

೩೭. ಅದೇ, ಪು.೧೨

೩೮. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೧೮

೩೯. ಅದೇ, ಪು.೧೯

೪೦. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೧೨೯

೪೧. ಅದೇ, ಪು.೧೩೦

೪೨. ಬಸವಣೆಪ್ಪ ನೀಲಪ್ಪ ಹಳವಳ್ಳಿ, ಹಾಲುಮತ ಪುರಾಣ, ಪು.೫

೪೩. ಅದೇ, ಪು.೬

೪೪. ಅದೇ, ಪು.೭

೪೫. ಅದೇ, ಪು.೮

೪೬. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೩೯

೪೭. ಅಂಬಾಸುತ ಮುದ್ದಲಿಂಗೇಶ್ವರ ಚರಿತೆ, ಪು.೧೩

೪೮. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೫೫

೪೯. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೧೩೮

೫೦. ಅದೇ, ಪು.೧೩೯

೫೧. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೫೬

೫೨. ಅಂಬಾಸುತ ಮುದ್ದಲಿಂಗೇಶ್ವರ ಚರಿತೆ, ಪು.೨೧

೫೩. ಶ್ರೀ ಸದಾಶಿವ ಅಪ್ಪಣ್ಣ ಜುಮ್ಮಣ್ಣವರ, ಹಾಲುಮತಶ್ರೀ ವೀರಲಿಂಗೇಶ್ವರ ಮಹಾಪುರಾಣ, ಪು.೩೬

೫೪. ಅಂಬಾಸುತ ಮುದ್ದಲಿಂಗೇಶ್ವರ ಚರಿತೆ, ಪು.೬

೫೫. ಅದೇ, ಪು.೭

೫೬. ಅದೇ, ಪು.೧೦-೧೧

೫೭. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೫೦

೫೮. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೨೮

೫೯. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೫೧೬

೬೦. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೮೧

೬೧. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೫೨೭

೬೨. ಅದೇ, ಪು.೫೩೫

೬೩. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೮೧-೮೨

೬೪. ಅದೇ, ಪು.೮೩

೬೫. ಅದೇ, ಪು.೩೩

೬೬. ಅದೇ, ಪು.೮೩

೬೭. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೪೮೨

೬೮. ಅದೇ, ಪು.೬೯

೬೯. ಅದೇ, ಪು.೬೩೪

೭೦. ಅದೇ, ಪು.೬೩೫

೭೧. ಕಲಬುರ್ಗಿ ಎಂ.ಎಂ.(ಸಂ), ತಗರ ಪವಾಡ, ಪು.೭೨

೭೨. ಅದೇ, ಪು.೭೩

೭೩. ಅದೇ, ಪು.೮೨

೭೪. ಅದೇ, ಪು.೮೭

೭೫. ಶ್ರೀ ಅಡಿವೆಪ್ಪ ಮಾಳಪ್ಪ ಸೋಮುತ್ತೆ, ಸುಕ್ಷೇತ್ರ ಹುಲಜಂತಿ ಶ್ರೀ ಮಾಹಿಮಾಂತಕ ಮಹಾಲಿಂಗರಾಯನ ಹಾಲುಮತ ಪುರಾಣ, ಪು.೪

೭೬. ಅದೇ, ಪು.೧೭

೭೭. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೧೪೧

೭೮. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೫೨

೭೯. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೧೪೨

೮೦. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೫೪

೮೧. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೧೪

೮೨. ತೋಂಟಾಪುರ ಎಂ.ಬಿ., ತೇಜೋಮಯ ಹಾಲುಮತ ಪುರಾಣ, ಪು.೨೪

೮೩. ರಸ್ತಾಪುರ ಭೀಮಕವಿ ಹಾಲುಮತೋತ್ತೇಜಕ ಪುರಾಣ, ಪು.೫೩

೮೪. ಪಂಡಿತ ಚನ್ನಬಸವ ಕವಿಯ ಹಾಲುಮತ ಪುರಾಣ, ಪು.೬೩

೮೫. ರೇಖಾ ಎಸ್.ಟಿ., ಪಂಚಗಣಾಧೀಶ್ವರರ ಪವಾಡಗಳು, ಪು.೧೦೫

೮೬. ಪೂಜಾರ್ ವಿ.ಜಿ., ಕನ್ನಡ ಸಾಹಿತ್ಯ ಸಂಬಂಧ, ಪು.೧೬೧

ಅಧ್ಯಾಯ: ಏಳು

ಪವಾಡ ಕಥೆಗಳ ವಿವಿಧ ನೆಲೆಗಳು

೭.೧. ಜಾನಪದೀಯ ನೆಲೆ

೭.೨. ಧಾರ್ಮಿಕ ನೆಲೆ

೭.೩. ಸಾಮಾಜಿಕ ನೆಲೆ

೭.೪. ಚಾರಿತ್ರಿಕ ನೆಲೆ

ಅಧ್ಯಾಯ: ಏಳು

ಪವಾಡ ಕಥೆಗಳ ವಿವಿಧ ನೆಲೆಗಳು

ಪ್ರತಿಯೊಂದು ಧರ್ಮಗಳಲ್ಲಿ ಕಥೆ, ಪುರಾಣ, ಕಾವ್ಯ, ಮಹಾಕಾವ್ಯಗಳಿರುತ್ತವೆ. ಎಲ್ಲ ಧರ್ಮಗಳಲ್ಲೂ ಅನೇಕ ರೀತಿ-ನೀತಿಗಳಿವೆ. ಇಂತಹ ರೀತಿ-ನೀತಿಗಳನ್ನು ಎಲ್ಲ ಧರ್ಮದವರು ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದಿದ್ದಾರೆ. ಆಯಾ ಧರ್ಮಗಳಲ್ಲಿರುವ ಸಂಸ್ಕೃತಿ-ಸಂಪ್ರದಾಯಗಳನ್ನು ಜಗತ್ತಿಗೆ ತೋರಿಸಲು ಅವಕಾಶಗಳಿರುವುದಿಲ್ಲ. ಅವಕಾಶಕ್ಕಾಗಿ ಕಾಯುವ ಸಂದರ್ಭದಲ್ಲಿ ಸಾಂಸ್ಕೃತಿಕ ವೀರರ ಮೂಲಕ ತಕ್ಕ ಸಮಯದಲ್ಲಿ ಅವರ ಸಂಸ್ಕೃತಿಯನ್ನು ಜಗತ್ತಿಗೆ ತೋರಿಸಿದ್ದಾರೆ. ನಮ್ಮ ಭಾರತೀಯ ಧರ್ಮಗಳಲ್ಲಿ ಆನೇಕ ಸಾಂಸ್ಕೃತಿಕ ವೀರರು ಜನಿಸಿ ಹೋಗಿರುವ ಹಲವು ಸಂಗತಿಗಳು ತಿಳಿದಿವೆ. ಇವರು ಸಮಾಜಕ್ಕೆ ನೀಡಿದ ಕೊಡುಗೆ ಅತ್ಯಧಿಕ. ಇವರ ಜೀವನದ ಕಥೆಗಳು ಮೊದಲು ಲಿಖಿತ ರೂಪ ಪಡೆಯದೆ, ಮೌಖಿಕವಾಗಿ ಜನರ ಬಾಯಿಂದ-ಬಾಯಿಗೆ ಮಾತ್ರ ಯಾವಾಗಲೂ ಹರಿದಾಡುತ್ತಿದ್ದವು. ಹಾಲುಮತಕ್ಕೆ ಸಂಬಂಧಿಸಿದ ಪುರಾಣಗಳು ಈಗೀಗ ಬರವಣಿಗೆಯ ರೂಪ ಪಡೆದುಕೊಂಡಿವೆ.

ಪುರಾಣ ಕಥೆಗಳಲ್ಲಿ ಬರುವ ಸಾಂಸ್ಕೃತಿಕ ವೀರರ ಚರಿತ್ರೆಗಳು ಜನಪದರ ಮೇಲೆ, ಕಾವ್ಯಗಳ ಮೇಲೆ ಪ್ರಭಾವ ಬೀರಿವೆ. ಇದರಿಂದಾಗಿ ಕಾವ್ಯ ಕಥೆಗಳ ಸ್ವರೂಪ ಬದಲಾಗಿದೆ. ಬದಲಾವಣೆಯಿಂದಾಗಿ ಮಹಾಪುರುಷರ ಸುತ್ತ ಪುರಾಣಗಳು, ಪವಾಡ ಕಥೆಗಳು ಹುಟ್ಟಿಕೊಂಡಿವೆ. ಇವರ ಪವಾಡ ಕಥೆಗಳು ಮೊದಲು ಆಯಾ ಸಮುದಾಯಗಳಲ್ಲಿ ಮಾತ್ರ ಪ್ರಚಲಿತದಲ್ಲಿದ್ದವು. ಬರು-ಬರುತ್ತಾ ಅವುಗಳು ಸಮಾಜದ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದವು. ಇಂತಹ ವ್ಯಕ್ತಿಯನ್ನು ಭಾರತೀಯ ಸಂಸ್ಕೃತಿಯಲ್ಲಿ ಪೌರಾಣಿಕ ವ್ಯಕ್ತಿಯನ್ನು, ಚಾರಿತ್ರಿಕ ವ್ಯಕ್ತಿಯನ್ನಾಗಿ, ಸಾಂಸ್ಕೃತಿಕ ವ್ಯಕ್ತಿಯನ್ನಾಗಿ, ದೈವಿ ವ್ಯಕ್ತಿಯಾಗಿ ಪೂಜಿಸಿಕೊಳ್ಳುತ್ತಿದ್ದಾರೆ. ಸಾಂಸ್ಕೃತಿಕ ವೀರರ ಹೆಸರಿನಲ್ಲಿ ನಡೆಯುವ ಜಾತ್ರೆ-ಆಚರಣೆ, ಉತ್ಸವಗಳು ಸಮಾಜದಲ್ಲಿ ಜನರನ್ನು ಗುಂಪು

ಗೂಡಿಸುವ ಮೂಲಕ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಜನಪದೀಯವಾಗಿ ಬೆಳೆಸಬಹುದು ಎಂಬುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ.

೭.೧. ಜನಪದೀಯ ನೆಲೆ

ಅಜ್ಜಿಕಥೆ, ಅಡುಗೂಲಜ್ಜಿಕಥೆ, ಹಳ್ಳಿಯ ಕಥೆ, ಕಟ್ಟು ಕಥೆ ಎಂದು ನಿರ್ದೇಶನಗೊಳ್ಳುವ ಕಥೆಗಳೆಲ್ಲ ಜನಪದ ಕಥೆಗಳು. ಜನಪದ ಕಥೆಗಳು ಯಾವಾಗ, ಯಾರು ಸೃಷ್ಟಿ ಮಾಡಿದರು ಎಂಬುದು ಹೇಳುವುದು ಕಷ್ಟ. ಇಂತಹ ಕಥೆಗಳನ್ನು ಎಲ್ಲ ಧರ್ಮದವರು ಹೇಳುತ್ತಾರೆ. ಮನೆ, ಹೊಲ, ರಾತ್ರಿ, ಬೆಳಕು ಎನ್ನದೆ ಎಲ್ಲ ಕಾಲಕ್ಕೂ ಇಂತಹ ಕಥೆಗಳನ್ನು ಜನಪದರು ಹೇಳುತ್ತಾರೆ. ಕಥೆಗಳಲ್ಲಿ ರಾಜ, ರಾಣಿ, ದೇವತೆಗಳು, ರಾಕ್ಷಸರು, ಪ್ರಾಣಿ,ಪಕ್ಷಿಗಳು ಪಾತ್ರಧಾರಿಗಳಾಗಿ ಬರುತ್ತಾರೆ. ಜನಪದರ ಕಥೆಗಳಲ್ಲಿ ಸಾಮಾನ್ಯವಾಗಿ "ಮಧ್ಯೆ ರಾಜನಿಗೆ ಕಷ್ಟ ಬರಬಹುದು: ರಾಜಕುಮಾರಿ ಅಡವಿ ಪಾಲಾಗಬಹುದು, ಹುಟ್ಟಿದ ಮಕ್ಕಳನ್ನು ಅರಮನೆಯಲ್ಲೇ ಇರುವ ಮಲತಾಯಿ ಅಪಹರಿಸಬಹುದು. ಅತ್ತೆ ತನ್ನ ಮಗನನ್ನು ಒಪ್ಪಿಸಿ ಸದ್ಗುಣಿಯಾದ ಸೊಸೆಯನ್ನು ಉಪಾಯದಿಂದ ಸುಟ್ಟುಹಾಕಲು ಸಂಚು ನಡೆಸಿರಬಹುದು. ವೈಭವದಲ್ಲಿ ಮುಳುಗಿ ಏಳಬೇಕಾದವನು ಭಿಕಾರಿಯಾಗಿ ತಿರುಗಬಹುದು. ಸ್ಫುರದ್ರೂಪಿಯಾದ ಹೆಣ್ಣುಮಗಳು ವಿಧಿವಿಲಾಸದಿಂದ ಹಾವಿನೊಂದಿಗೆ ಗೃಹಿಣಿಯಾಗಿ ಬದುಕುತ್ತ ಭಯ, ನೋವು, ನಿರಾಶೆ, ಅವಮಾನಗಳಲ್ಲಿ ದಿನವೂ ಬೇಯುತ್ತಿರಬಹುದು. ಸದ್ಭಕ್ತಿಗಳು ಕಷ್ಟವನ್ನೂ ದುಷ್ಟರು ವಿಜಯವನ್ನು ಪಡೆದು ಸುಖವನ್ನು ಅನುಭವಿಸುತ್ತಾರೆ. ಇದೆಲ್ಲ ಕಥೆಯ ಮಧ್ಯ ಭಾಗದವರೆಗೆ ಅಥವಾ ಕೊನೆ ಮುಟ್ಟುವ ಹಿಂದಿನ ಹೆಜ್ಜೆಯವರೆಗೆ. ಆದರೆ ಭಾರತೀಯ ಮನಸ್ಸು ಒಂದು ಸಂಗತಿಯನ್ನು ಮಾತ್ರ ಮತ್ತೆ-ಮತ್ತೆ ಪುನರುಚ್ಚರಿಸುತ್ತ ಒಪ್ಪಿಕೊಂಡಿದೆ. ಅಂತ್ಯದಲ್ಲಿ ಒಳ್ಳೆಯವರು ತಮ್ಮ ಒಳ್ಳೆಯತನಕ್ಕೂ ದುಷ್ಟರು ತಮ್ಮ ದುಷ್ಟತನಕ್ಕು ಉಚಿತವಾದ ಪ್ರತಿಫಲವನ್ನು ಪಡೆಯಲೇಬೇಕು; ತಮ್ಮ ಕರ್ಮವನ್ನು ತಾವು ಉಣ್ಣಲೇಬೇಕು; ಕರ್ಮಫಲವನ್ನು ಅನುಭವಿಸಲೇಬೇಕು. ದುಷ್ಟ ತನ್ನ ಜಯದ ಫಲವನ್ನು ಅನುಭವಿಸುತ್ತ, ಒಳ್ಳೆಯ ವ್ಯಕ್ತಿ ಇನ್ನೇನು ನಾಶವಾಗಬೇಕೆನ್ನುವಷ್ಟರಲ್ಲಿ ಅನಿರೀಕ್ಷಿತ ತಿರುವು ಕಾಣಿಸಿಕೊಳ್ಳುತ್ತದೆ. ಕೆಟ್ಟವನ ಕೆಟ್ಟತನ ಬಯಲಾಗುತ್ತದೆ. ತನ್ನ ಕುತಂತ್ರಕ್ಕೆ ತಾನೇ ಬಲಿಯಾಗುತ್ತಾನೆ. ಅಥವಾ ದೇವತೆ ಪ್ರತ್ಯಕ್ಷಳಾಗಿ ಅವರವರಿಗೆ ಉಚಿತವಾದ ಸುಖ, ಕಷ್ಟ ಕೊಡುತ್ತಾಳೆ. ಒಳ್ಳೆಯವರು ಸತ್ತಿದ್ದರೆ ಬದುಕಿಸುತ್ತಾಳೆ. ಅಂತ್ಯದಲ್ಲಿ ಒಳ್ಳೆತನ ತನ್ನ ಧ್ವಜವನ್ನು ಹಾರಿಸುತ್ತದೆ. ಎಲ್ಲವೂ ತಾರ್ಕಿಕವಾಗಿ ಕೊನೆಯಾಗುತ್ತದೆ. ಒಳ್ಳೆಯವರು ಸುಖವನ್ನು ಕೆಟ್ಟವರು ಕಷ್ಟವನ್ನು ಪಡೆಯಲೇಬೇಕು. ನಮ್ಮ ಹಳ್ಳಿಯವರ ಸರಳ ಮನಸ್ಸಿನಂತೆಯೇ ಜನಪದ ಕತೆಗಳ ತರ್ಕವೂ ಸರಳವಾಗಿರುತ್ತದೆ."[೧]

ಹಾಲುಮತವು ಇತರ ಧರ್ಮಗಳಿಗಿಂತ ಹೆಚ್ಚು ಸಂಪ್ರದಾಯ, ಆಚರಣಾ ಪದ್ಧತಿಗಳನ್ನು ಹೊಂದಿದೆ. ಇದು ಜಾನಪದೀಯವಾಗಿಯೂ ಹೆಚ್ಚು ಮಹತ್ವವನ್ನು ಹೊಂದಿದೆ. ಜನಪದವು ಜನರ ಅನುಭವಗಳ ಜೀವನಾಡಿಯಾಗಿವೆ. ನಮ್ಮ ಸಾಹಿತ್ಯ ಪರಂಪರೆಯಲ್ಲಿ ಲಿಖಿತ ಸಾಹಿತ್ಯ ಮತ್ತು ಮೌಖಿಕ ಸಾಹಿತ್ಯಗಳೆಂಬೆರಡು ವಿಧಗಳಿವೆ. ಜನಪದರು ಮೌಖಿಕವಾಗಿ ತಮ್ಮ ಅನುಭವಕ್ಕೆ ಬಂದಂತಹ ಘಟನೆಗಳನ್ನು, ಸಂಗತಿಗಳನ್ನು ಹಾಡಿನ ಮೂಲಕ ವ್ಯಕ್ತಪಡಿಸುತ್ತಿದ್ದರು. ಹಾಗೆ ವ್ಯಕ್ತ ಪಡಿಸಿದ ಡೊಳ್ಳಿನ ಪದ, ಕೋಲಾಟದ ಪದ, ಮದುವೆಯ ಪದ, ಕಾವ್ಯ-ಪುರಾಣಗಳು, ಒಗಟು, ಗಾದೆಗಳು ಜನರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಇವುಗಳಲ್ಲದೆ ಪ್ರಾಚೀನ ಪರಂಪರೆ ಮತ್ತು ಸಂಸ್ಕೃತಿಯು ಅವರಲ್ಲಿತ್ತು. ಅವುಗಳನ್ನು ಮೌಖಿಕ ರೂಪದಲ್ಲಿ ಚಾರಿತ್ರಿವಾಗಿ ಮತ್ತು ಪೌರಾಣಿಕವಾಗಿ ತಮ್ಮದೇ ಆದ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಹಾಲುಮತದಲ್ಲೂ ಜನಪದರು ಸಾಕಷ್ಟು ಪುರಾಣಗಳನ್ನು ಮೌಖಿಕವಾಗಿಯೇ ಮೊದಲು ಹಾಡಿನ ಮೂಲಕ ವ್ಯಕ್ತಪಡಿಸಿದರು. ಹಾಲುಮತದಲ್ಲಿ ಬರುವ ಶಾಂತಮುತ್ತಯ್ಯ, ರೇವಣ್ಣಸಿದ್ಧ, ಬೀರೇಶ್ವರ, ಮಾಳಿಂಗರಾಯರಂಥವರ ಜೀವನ, ಅವರ ಪವಾಡಗಳು ಲೋಕದ ಜನರಿಗೆ ತಿಳಿಸಲು ಮೌಖಿಕವಾಗಿ ಡೊಳ್ಳಿನ ಪದಗಳೊಂದಿಗೆ, ಕಾವ್ಯ-ಪುರಾಣಗಳೊಂದಿಗೆ ಹಂಚಿಕೊಂಡಿದ್ದಾರೆ.

ಕುರುಬರು ಕುರಿಗಳನ್ನು ಕಾಯುತ್ತ ಬಯಲು ಸೀಮೆಯ ವಾತಾವರಣದಲ್ಲಿಯೇ ವಾಸಿಸುತ್ತಿದ್ದರು. ಇಲ್ಲಿಯ ಜನರು ಕುರಿಗಳನ್ನು ಕಾಯುತ್ತ, ಕಂಬಳಿ ನೇಯುತ್ತ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತ, ಜೀವನ ಸಾಗಿಸುತ್ತಿದ್ದರು. ಕುರುಬ ಜನಾಂಗದಲ್ಲಿ ಪ್ರಮುಖವಾಗಿ ಬೀರಲಿಂಗ, ಮೈಲಾರಲಿಂಗ, ರೇವಣ್ಣಸಿದ್ದರು ಸಾಂಸ್ಕೃತಿಕ ನಾಯಕರಾಗಿ ಕಂಡುಬರುತ್ತಾರೆ. ಹಾಲುಮತ ಸಂಸ್ಕೃತಿಯು ವಿಭೂತಿ ಮತ್ತು ಭಂಡಾರ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡಿದಾಗ ಸಾಂಸ್ಕೃತಿಕ ನಾಯಕರಾದ ಮೈಲಾರಲಿಂಗೇಶ್ವರ ಭಂಡಾರ ಸಂಸ್ಕೃತಿಯ, ರೇವಣ್ಣಸಿದ್ದ ವಿಭೂತಿ ಸಂಸ್ಕೃತಿಯಲ್ಲಿ ಬಂದವರು. ಕುರುಬರಲ್ಲಿ ವಿಭೂತಿಯ ಜೊತೆಗೆ ಭಂಡಾರದ ಸಂಸ್ಕೃತಿಯನ್ನು ಈಗಲೂ ಕಾಣುತ್ತೇವೆ. ಜನಪದರು ಬೀರಪ್ಪನನ್ನು ಕುಲದೈವವಾಗಿ ಪೂಜಿಸುತ್ತಾರೆ. ಬೀರಪ್ಪನನ್ನು ಪ್ರಧಾನವಾಗಿ ಸಾಂಸ್ಕೃತಿಕ ನಾಯಕನಾಗಿ ಕಾಣುವ ಜೊತೆಗೆ, ಕುರುಬರು ಹಲವು ಉಪದೇವರನ್ನು ಮನೆದೇವರನ್ನಾಗಿ ಪೂಜಿಸುತ್ತಾರೆ. ಹಲವು ದೇವರನ್ನು ಪೂಜಿಸಿದರು, ಹಾಲುಮತದ ಮೂಲದೇವರು ಬೀರಪ್ಪ, ಗುರು ರೇವಣ್ಣಸಿದ್ದರೆ ಪ್ರಸಿದ್ದರು.

ಕುರುಬರ ಆರಾದ್ಯ ದೈವನಾದ ಬೀರೇಶ್ವರನನ್ನು ಕರ್ನಾಟಕದಲ್ಲಿ ಬೀರೇಶನನ್ನು ಬೀರೇಶ, ಬೀರೇಶ್ವರ, ಬೀರಲಿಂಗ, ಬೀರಲಿಂಗೇಶ್ವರ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಜನರು ತಮ್ಮ ಇಷ್ಟ ದೇವರುಗಳೊಂದಿಗೆ ಆದ ಅನುಭವವನ್ನು, ತಮ್ಮದೇ ಆದ ರೀತಿಯಲ್ಲಿ

ವ್ಯಕ್ತಪಡಿಸಿದ್ದಾರೆ. ಮೌಖಿಕ ಪರಂಪರೆಯಿಂದ ಬಂದ ಜನಪದರ ಸ್ವಭಾವವು ಪುರಾಣಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಅವರ ಮುಗ್ಧ ಸ್ವಭಾವ ನಾಯಕನನ್ನು ಪವಾಡ ಪುರುಷರನ್ನಾಗಿ ಮಾಡಿ, ದೈವದಂತೆ ಪೂಜಿಸುವ ಅವರ ಮನಸ್ಸು ನಿರ್ಮಲವಾದದು.

ಬೀರಪ್ಪನನ್ನು ಕುರಿತು ಅನೇಕ ಪುರಾಣಗಳು ಕಾವ್ಯಗಳು ನಿರ್ಮಾಣವಾಗಿದೆ. ಕರ್ನಾಟಕದಲ್ಲಿ ಡೊಳ್ಳಿನ ಹಾಡುಗಳ ಮೂಲಕ ಬೀರಪ್ಪನನ್ನು ವೈವಿಧ್ಯಮಯವಾಗಿ ಚಿತ್ರಿಸಿದ್ದಾರೆ. ಇವರನ್ನು ಪ್ರಮುಖ ನಾಯಕನನ್ನಾಗಿ ಮಾಡಿಕೊಂಡು ಪುರಾಣಗಳ ರಚನೆಯನ್ನು ಮೌಖಿಕವಾಗಿಯೇ ಅರ್ಥೈಸಿದ್ದಾರೆ. ಮೌಖಿಕ ಸಾಹಿತ್ಯವು ಜನರ ಬಾಯಿಂದ-ಬಾಯಿಗೆ ಬೆಳೆದು ಬೃಹದಾಕಾರವಾಗಿ ಬೆಳೆದು ನಿಂತಿದೆ. ಹಾಲುಮತ ಪುರಾಣಗಳ ರಚನೆಗಳಲ್ಲಿ ಒಂದಾದ ಜನಪದ ಹಾಲುಮತ ಮಹಾಕಾವ್ಯ ಬೃಹತ್ ಮಹಾಕಾವ್ಯವಾಗಿ ಹೆಸರುವಾಸಿಯಾಗಿದೆ.

ಕುರುಬ ಸಮುದಾಯವು ತನ್ನದೇ ಆದ ಪ್ರಾಚೀನ ಇತಿಹಾಸದೊಂದಿಗೆ ಜನಪದ ಸಾಹಿತ್ಯವನ್ನು ಹೊಂದಿದೆ. ಜನಪದವು ಜನರ ಸಾಮಾನ್ಯ ಜೀವನ ಕ್ರಮವಾಗಿದೆ. ಪ್ರಾಚೀನ ಕಾಲದಿಂದಲೂ ಮೌಖಿಕ ಸಾಹಿತ್ಯವು ಜನರೊಂದಿಗೆ ಜೀವಿಸುತ್ತ ಬಂದಿದೆ. "ಪದನರಿದು ನುಡಿಯಲುಂ ನುಡಿದುದನರಿದಾರೆಯಲು ಮಾರ್ಪರ ನಾಡವರ್ಗಳ್ ನಿಜ ವಿಂಚದುದರ್ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್". ಎಂದು ಕವಿರಾಜಮಾರ್ಗ ಕೃತಿಯಲ್ಲಿ ಜನಪದರರ ಬಗ್ಗೆ ಹೇಳಿರುವುದನ್ನು ಕಾಣುತ್ತೇವೆ.

ಹಾಲುಮತದಲ್ಲೂ ಮೌಖಿಕ ಪರಂಪರೆಯ ಪುರಾಣಗಳು ಕುರುಬ ಸಮುದಾಯದ ಹುಟ್ಟು, ಇತಿಹಾಸ ಪರಂಪರೆ, ಸಾಂಸ್ಕೃತಿಕ ವೀರರ ಚರಿತ್ರೆ, ಆಚರಣೆಗಳು, ಸಂಪ್ರದಾಯಗಳ ಮಾಹಿತಿಗಳನ್ನೊಳಗೊಂಡಿವೆ. ಕುರುಬರಲ್ಲಿ ಮೌಖಿಕವಾಗಿ ಸಿಗುವ ಸಾಹಿತ್ಯ ಪರಂಪರೆಯು ಶ್ರೀಮಂತವಾಗಿದೆ. ಕನ್ನಡ ಭಾಷೆಯಲ್ಲಿ ಸಾಕಷ್ಟು ಮಟ್ಟಿಗೆ ದೊರೆಯುತ್ತದೆ. ಮೌಖಿಕವಾಗಿ ಅಥವಾ ಜನಪದೀಯವಾಗಿ ಕುರುಬ ಸಮುದಾಯದ ಹುಟ್ಟು, ಸಂಸ್ಕೃತಿ, ಪರಂಪರೆ, ದೈವಗಳಿಗೆ ಸಂಬಂಧಿಸಿದ ಅನೇಕ ಕಥೆಗಳು ಸಿಗುತ್ತವೆ. ಅವುಗಳಲ್ಲಿ ಬೀರಪ್ಪನ ಕಥೆಗಳು, ರೇವಣ್ಣಸಿದ್ದನ ಕಥೆಗಳು, ಮಾಳಿಂಗರಾಯನ ಕಥೆಗಳು ಮುಖ್ಯವಾಗಿವೆ. ಈ ಕಥೆಗಳು ಪುರಾಣಗಳಲ್ಲಿ ಧಾರ್ಮಿಕ ಆಚರಣೆಗಳಲ್ಲಿಯೇ ಚರ್ಚೆಗೆ ಒಳಗಾಗಿವೆ. ವಿಲ್‌ಹೆಲ್ಮ್ ಗ್ರೀಮ್ ಹೇಳುತ್ತಾನೆ. "ಎಲದಲ ಕಥೆಗಳು ಪುರಾಣಗಳಿಂದ ಒಡೆದ ಚೂರುಗಳು".[೨]

"ಬೀರೇಶನ ಹಿಂದಿನ ಜನ್ಮದ ಶಿವಪದ್ಮನು ಚುಮಲೆಯನ್ನು ಮದುವೆಯಾದ ಹಿನ್ನೆಲೆಯಲ್ಲಿ ಅಡಕವಾಗಿರುವ ಕುದಯ ರಕ್ಕಸಿಯ ಕಥೆ ಜನಪದ ಕಥೆಯಲ್ಲದೆ ಬೇರೆಯಲ್ಲ. ಕುದಯರಕ್ಕಸ ಜಾಗೃತಪುರದಲ್ಲಿ ಸರಧಿಯಂತೆ ಒಬ್ಬೊಬ್ಬರನ್ನೇ ತಿನ್ನುವುದು. ರಾಜಕುಮಾರಿ ಚುಮುಲೆಯ

ಸರಧಿ ಬಂದಾಗ ಅವಳನ್ನು ತೆಗೆದುಕೊಂಡು ಹೋಗಿ ತಿನ್ನದೇ ಸಾಕುವುದು, ಬೆಂಕಿ ತರಲು ಅರಣ್ಯಕ್ಕೆ ಬಂದ ಶಿವಪದ್ಮನು ಚುಮಲೆಯ ಬಂಧನದ ಹಿನ್ನೆಲೆಯನ್ನು ಅರಿಯುವುದು. ಕಾಂಚಾಲ ಮರದಲ್ಲಿರುವ ಕಾಗೆಯಲ್ಲಿ ತನ್ನ ಪ್ರಾಣವಿರುವ ಗುಟ್ಟನ್ನು ಚುಮಲೆಗೆ ಕುದಯರಕ್ಕಸಿ ಹೇಳುವುದನ್ನು ಶಿವಪದ್ಮನು ಹಲ್ಲಿಯಾಗಿದ್ದು ಕೇಳಿಸಿಕೊಳ್ಳುವುದು. ಅದರಂತೆ ರಾಕ್ಷಸಿಯ ಸಂಹಾರ ಮಾಡುವುದು, ಇವೆಲ್ಲ ಘಟನಾವಳಿಗಳು ಜನಪದ ಕಥೆಯೊಂದರ ಯಥಾವತ್ ರೂಪವೆನಿಸುತ್ತವೆ. ಹೀಗೆಯೇ ಬೀರೇಶ ಜನ್ಮತಾಳಿದಾಗ ಹರಿಯು ಜೋತಿಷಿಯ ವೇಷದಲ್ಲಿ ಬಂದು ಸುರಾವತಿಗೆ ಭವಿಷ್ಯ ಹೇಳುವುದು, ಬೀರೇಶನು ಹರಿಯು ಮಗಳು ಕನಿಕಾಮಾಲೆಗೆ ಒಮ್ಮೆ ವೃದ್ಧ ಬಳೆಗಾರನ ವೇಷದಲ್ಲಿ ಇನ್ನೊಮ್ಮೆ ಸಿಂಪಿಗನ ವೇಷದಲ್ಲಿ ಬೆಟ್ಟಿಯಾಗುವುದು. ಪಂಚವರ್ಣದ ಅಶ್ವದ ಮೇಲೆ ಕೂಡ್ರಿಸಿಕೊಂಡು ಅಂತರ ಮಾರ್ಗದಿಂದ ಕನ್ನಿಕಾಮಾಲೆಯನ್ನು ಒಯ್ಯುವುದು ಮುಂತಾದವುಗಳೆಲ್ಲ ಜನಪದ ಕಥೆಗಳ ತುಣುಕುಗಳೇ. ಜನಪದರು ಜನಪದ ಕಥೆಗಳಿಂದ ಪ್ರಭಾವಿತರಾದವರು. ಹೀಗಾಗಿ ಮೌಖಿಕ ಪರಂಪರೆಯ ಪುರಾಣ ಕಾವ್ಯಗಳಲ್ಲಿ ಹೀಗೆ ಜನಪದ ಕಥೆಯ ಭಾಗಗಳೋ ಹೇರಳವಾಗಿ ಪ್ರವೇಶ ಪಡೆಯುತ್ತದೆ. ಇಂಥ ಪ್ರವೇಶಗಳಿಂದ ಬೀರಪ್ಪನ ಪುರಾಣಗಳಿಗೆ ಲಾಭವಾಗಿಯೇ ಹಾನಿಯಾಗಿಯೇ ಹೇಳುವುದು ಕಷ್ಟ. ಸಂಗಡವೇ ಇದನ್ನು ತಡೆಯುವುದೂ ಕಷ್ಟವೆನ್ನಿಸುತ್ತದೆ."[೩]

ಜನಪದರಲ್ಲಿ ಮಾಳಿಂಗರಾಯನ ಬಗ್ಗೆಯೂ ದೈವೀಭಾವನೆ ಇರುವುದನ್ನು ಕಾಣುತ್ತೇವೆ. ಮಾಳಿಂಗ ಮತ್ತು ಜಕ್ಕಪ್ಪರು ದೈವಶಕ್ತಿಯಿಂದ ಜನಿಸಿದವರು ಬಸವಣ್ಣನ ಅವತಾರವೇ ಮಾಳಿಂಗನೆಂದು ನಂಬಿದರು, ಜನಪದರು ಮತ್ತು ಬುಡಕಟ್ಟಿನ ಜನರು ಮಾಳಿಂಗರಾಯನನ್ನು ಚಿಕ್ಕವಯಸ್ಸಿನಿಂದಲೇ ಪವಾಡ ಪುರುಷನಂತೆ ಕಂಡು ಕೊಂಡಿದ್ದಾರೆ. ಮೂರು ವರುಷವಿದ್ದಾಗಲೇ ಹಾವು ಕಡಿದು ಸತ್ತ ಮಗುವನ್ನು ಬದುಕಿಸಿ, ನಾಗರಹಾವನ್ನು, ನಾಗಬೆತ್ತವಾಗಿ ಮಾಡಿಕೊಂಡ ಮಹಾಪುರುಷ. ನಮ್ಮ ಜನರಲ್ಲಿ ನಾಗಬೆತ್ತವೆಂದರೆ ಸರ್ವಶ್ರೇಷ್ಠ. ಅಂತಹುದನ್ನು ಸದಾ ತನ್ನಲ್ಲಿ ಇಟ್ಟುಕೊಂಡವ ಅವರ ಶ್ರೇಷ್ಠ ದೈವನಾಗಿದ್ದಾನೆ. ಜನಪದರಲ್ಲಿ ಕಾಯಕವೇ ಸರ್ವಶ್ರೇಷ್ಠವಾಗಿತ್ತು. ಪಶುಗಳನ್ನು ಸಾಕಿ ಅದರಲ್ಲಿಯೇ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಆದರೆ ಏನೋ ಒಂದು ಕೆಟ್ಟ ಘಳಿಗೆಯಲ್ಲಿ ಸೋಮರಾಯ–ತುಕ್ಕಪ್ಪರಾಯರ ಆಕಳುಗಳು ಹಾಲಿನ ಬದಲು, ರಕ್ತ ಹಿಂಡಲು ಪ್ರಾರಂಭಿಸಿದವು. ಆಗ ಸೋಮರಾಯ ಗೌಳಿಗರು ಆರಾಧಿಸುತ್ತಿದ್ದ ದೇವತೆಯ ಭಸ್ಮವನ್ನು ಆಕಳುಗಳ ಮೇಲೆ ಹಾಕಿ, ಶುಕ್ರವಾರ ದೇವಿಗೆ ನರಬಲಿ ಕೊಡುತ್ತೇನೆಂದು, ಬೇಡಿಕೊಂಡು, ತಾಮಟಗೇರಿಯ ಹೆಣ್ಣಿನ ಮಗುವನ್ನು ಬಲಿ ನೀಡಿದರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪಶುಪಾಲನೆಗಾಗಿ, ಎಂತಹ ಕಾರ್ಯಕ್ಕೂ ಇವರು ಸಿದ್ದರು. ಜೊತೆಗೆ ದೇವಿಯು

ಕೋಪಿಸಿಕೊಂಡರೆ, ಅವಳಿಗೆ ನರಬಲಿ ನೀಡಿದರೆ ಅವಳು ಶಾಂತಳಾಗಿ, ನಮ್ಮ ಬದುಕನ್ನು ಹಸನುಮಾಡುತ್ತಾಳೆಂಬುದು ನಂಬಿಕೆಯ ವಿಷಯ. ಪ್ರಾಚೀನ ಕಾಲದಿಂದಲೂ, ಇಂದಿನವರೆಗೂ ಈ ಸಂಪ್ರದಾಯ, ಆಚರಣೆಯಿಂದ ತಲೆಮಾರುಗಳಿಂದ ನಡೆದುಕೊಂಡೆ ಬಂದಿದೆ. ಈಗಲೂ ದೇವಿಗೆ ಕುರಿಯ ಬಲಿ, ಕೋಳಿಯ ಬಲಿ, ಕೋಣದ ಬಲಿಗಳನ್ನು ಕೊಡುವುದನ್ನು ಕಂಡಿದ್ದೇವೆ. ಜನರಲ್ಲಿ ಇಂತಹ ನಂಬಿಕೆ ಮೊದಲಿಂದಲೂ ಹುಟ್ಟಿಕೊಂಡಿದೆ.

ಗುರುಗಳೆಂದರೆ ಬೀರಪ್ಪ, ಶಿಷ್ಯನೆಂದರೆ ಮಾಳಿಂಗರಾಯ ಎಂದು ಜನಪದರು ಹಾಡಿ ಹೊಗಳಿದ್ದಾರೆ. ಬೀರಪ್ಪನು ಶಿಷ್ಯನನ್ನು ಪರೀಕ್ಷಿಸಲು ಹುಲಿಯ ಗಿಣ್ಣಬೇಕೆಂಬ ಆಶೆ ವ್ಯಕ್ತಪಡಿಸಿದ್ದಾಗ.

"ಹುಲಿ ಗುಡ್ಡಕ್ಕೆ ಹೋಗಿದ್ದ ಮಾಳಣ್ಣಾ
ಹುಲಿಯಾಗ ಕೂಗ್ಯಾನ ಗುಡದಾಗೇನ
ಗುಡಗಿನ ಸಪ್ಪಳ ಕೇಳಿ ಹುಲಿ ಬಂತೇನ
ಹುಲಿ ಹಾಲ ಹಿಂಡಿ ಕೊಂಡಾನ
ಹುಲಿಗಿ ವರವಾ ತಾ ಕೊಟ್ಟಾನ
ತಂದ ಹುಲಿಗಿಣ್ಣಾ."[೪]

ಹೀಗೆ ಮಾಳಿಂಗ ಗುರುವಿಗಾಗಿ ಹುಲಿಯ ಬಳಿ ಹೋಗಿ, ಕ್ರೂರ ಪ್ರಾಣಿಯಿಂದಲೇ ಹಾಲನ್ನು ತಂದು ಕೊಟ್ಟಾನು. ಹುಲಿಯನ್ನು ತಂದು ಸಾಕಿದನು ಎನ್ನುವ ಪ್ರತೀತಿ ಕೂಡ ಇದೆ. ಅವತ್ತಿನಿಂದ ಅವನೊಬ್ಬ ಕರಿಹುಲಿ ಮಾಳಿಂಗರಾಯ, ವೀರ ಮಾಳಿಂಗರಾಯನಾಗಿ ಪ್ರಸಿದ್ದಿಯಾದ. ಜನರಲ್ಲಿ ಇನ್ನೊಂದು ಸಂಪ್ರದಾಯವಿದೆ. ಹುಲಿಯ ಉಗುರನ್ನು ಮಕ್ಕಳ ಕೊರಳಿಗೆ ಕಟ್ಟುವುದು, ಇದರಿಂದ ಮಕ್ಕಳಿಗೆ ಧೈರ್ಯ ಬರುತ್ತದೆ. ಹಾಗೆಯೇ ದೃಷ್ಟಿಯಾಗುವುದಿಲ್ಲವೆಂಬ ನಂಬಿಕೆ. ಹುಲಿಯನ್ನು ಕರೆದುಕೊಂಡು ಮಾಳಿಂಗ

"ನಾರಾಯಣಪುರಕ್ಕೆ ಬಂದು
ಹುಲಿ ಉಗುರ ತೆಗೆದು ಅಗಸಿ ಕಟ್ಟಿಸ್ಯಾನಾ
ಹುಲಿ ಮುಖದಾಗ ಶ್ರೀ ಹುಲಜಂತಿ ಅನಿಸಿ
ನೆಲಸಿದೊ ತಾ ಮಾಳಣ್ಣಾ".[೫]

ಕ್ರೂರ ಪ್ರಾಣಿಯಾಗಿದರ ಅದನ್ನು ಸೌಮ್ಯವಾಗಿ ಪರಿವರ್ತಿಸಿ, ಹುಲಿಯ ಉಗುರನ್ನು ತೆಗೆದು ನಾರಾಯಣಪುರದ ಬಾಗಿಲಿಗೆ ಕಟ್ಟಿ, ಹುಲಿಯಿಂದಲೇ ಶ್ರೀ ಹುಲಜಂತಿ ಎಂದು ಹೇಳಿಸಿದ, ಮಾಳಿಂಗರಾಯ ಎನ್ನುವ ಕಥೆ ಜನಪದರಲ್ಲಿ ಹಾಸುಹೊಕ್ಕಾಗಿದೆ.

"ಹಾಲುಮತದಲ್ಲಿ ಪುರುಷ ದೇವತೆಗಳನ್ನು ಆರಾಧಿಸುವ ಹಾಗೆ, ಸ್ತ್ರೀದೇವತೆಯನ್ನು ಹೆಚ್ಚಾಗಿ ಜನರು ಆರಾಧಿಸುತ್ತಾರೆ. ಶಿಲಾಯುಗದಿಂದಲೂ ನಾವು ಸ್ತ್ರೀ ದೇವತೆಯನ್ನು ಆರಾಧಿಸುತ್ತಾ ಬಂದಿದ್ದೇವೆ. ಪಶುಪಾಲನೆ ಪ್ರಾರಂಭವಾದಾಗಿನಿಂದ ಪುರುಷ ದೇವರುಗಳನ್ನು ಆರಾಧಿಸುತ್ತೀದ್ದೇವೆ. ಸ್ತ್ರೀಯರಲ್ಲಿ ಲೌಖಿಕ ಜ್ಞಾನದ ತಿಳುವಳಿಕೆ ಅಧಿಕವಿತ್ತು. ಜೊತೆಗೆ ಸ್ತ್ರೀಯರಲ್ಲಿ ಜೀವನಾನುಭವದಿಂದ ಸಂಸಾರದ ಭಾರ ಹೊತ್ತು ನಿಭಾಯಿಸುವ ಜವಾಬ್ದಾರಿಯನ್ನು ಹೊತ್ತಿದ್ದಳು. ಉದಾಹರಣೆಗೆ– ಬಾರಾಮತಿ ತೇರಾಮತಿ ಪಟ್ಟಣದ ಅರಸನಾದ ತುಕ್ಕಪ್ಪರಾಯ, ಸೋಮರಾಯ ಬರಗಾಲ ಬಿದ್ದಾಗ ಪಶುಗಳನ್ನು ರಕ್ಷಿಸುವ ಸಲುವಾಗಿ ಊರು ಬಿಟ್ಟು ಹೋಗುತ್ತಾರೆ. ತುಕ್ಕಪ್ಪರಾಯ ತನ್ನ ಎರಡು ಪಟ್ಟಣಗಳ ಆಡಳಿತ ಜವಾಬ್ದಾರಿಯನ್ನು ತನ್ನ ಹೆಂಡತಿ ಅಮೃತಬಾಯಿಗೆ ನಿರ್ವಹಿಸಲು ತಿಳಿಸುತ್ತಾನೆ".[೬] ಜನರಲ್ಲಿ ಸ್ತ್ರೀ ಒಬ್ಬಳು ಶಕ್ತಿಯುತವಾದವಳು, ಅವಳನ್ನು ಗ್ರಾಮದೇವತೆಯೆಂದು ಪ್ರತಿಯೊಂದು ಗ್ರಾಮದಲ್ಲಿ ಪೂಜಿಸುವುದನ್ನು ಕಾಣುತ್ತೇವೆ. ಹಾಲುಮತದಲ್ಲಿ ಬೀರಪ್ಪನ ಅಕ್ಕಳಾದ ಮಾಯವ್ವಳು, ಬೀರಪ್ಪನನ್ನು ಸಾಕುತ್ತ, ಒಬ್ಬಂಟಿ ಹೆಣ್ಣಾಗಿ ಸಮಾಜದಲ್ಲಿ ಜೀವಿಸಿದಳು. ಅಲೆಮಾರಿಯಾಗಿ ಕುರಿಗಳನ್ನು ಕಾಯುತ್ತ, ಕುರಿಗಳ ರಕ್ಷಣೆ ಮಾಡುತ್ತಾ, ಹುಲಿಯಾಗಲೀ, ಎಂತಹ ಕ್ರೂರ ಪ್ರಾಣಿಗಳೇ ಆಗಲಿ ಅವುಗಳನ್ನು ನಿಗ್ರಹಿಸುವ ಶಕ್ತಿ ಮಾಯವ್ವಳಿಗೆ ಇತ್ತು. ಹಾಲುಮತದಲ್ಲಿ ಮಾಯವ್ವಳು ತನ್ನ ಶಕ್ತಿ ಸಾಮರ್ಥ್ಯದಿಂದಾಗಿ, ದೈವಿ ಸಂಭೂತಳಾಗಿ ಪೂಜಿಸಲ್ಪಡುತ್ತಿದ್ದಾಳೆ. ಜನರು ಇವಳಿಗೆ ಕುರಿಯ ಬ್ಯಾಟೆಯನ್ನು ಕೊಟ್ಟು ತೃಪ್ತಿಪಡಿಸುತ್ತಾರೆ.

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭ್ರಾತ
ಅಭ್ಯುತ್ಯಾನಮಧರ್ಮಸ್ಯ ತದಾತ್ಮಾನಂ ಸೃಪಾಮ್ಯಹಂ
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಪ್ರತಮ್
ಧರ್ಮ ಸಂಸ್ಥಾಪನಾರ್ಥಯ ಸಂಭವಾಮಿ ಯುಗೆ ಯುಗೇ"[೭]

ಧರ್ಮಕ್ಕೆ ಗ್ಲಾನಿ ಬಂದು, ಅಧರ್ಮ ಹೆಚ್ಚಾದಾಗ, ಸಭ್ಯರ ರಕ್ಷಣೆ, ದುಷ್ಟರ ನಾಶನ ಧರ್ಮದ ಪುನರುತ್ಥಾನಗಳಿಗಾಗಿ ಯುಗ ಯುಗಗಳಲ್ಲಿಯೂ ನಾನು ಅವತರಿಸುತ್ತೇನೆ ಎಂಬುದು ಭಗವಂತನು ನೀಡಿದ ಅಭಯ ವಚನ ಎಂದು ನಮ್ಮ ಪರಂಪರೆಯ ಒಂದು ವಿಪರ್ಯಾಸ. ಅಧರ್ಮವನ್ನು ಹೋಗಲಾಡಿಸಲು ಪರಮಾತ್ಮನೇ ಭೂಮಿಗಿಳಿದು ಬರುತ್ತಾನೆಂದು ನಮ್ಮ ಭಾರತೀಯ ಸಂಸ್ಕೃತಿಯ ಎಲ್ಲರ ನಂಬಿಕೆಯಾಗಿದೆ. ಮನುಷ್ಯನ ಸರ್ವಾಂಗೀಣ ಉದ್ಧಾರಕ್ಕೆ ದೇವರೇ ಮೂಲಕಾರಣವೆಂದರೆ ಅವನ ಪ್ರಯತ್ನದಲ್ಲಿ ಯಾವುದೇ ಫಲವಿಲ್ಲವೆ? ಮಾನವರು ಆದಿಮಾನವನಿಂದ ಹಿಡಿದು ಆಧುನಿಕ ಯುಗದವರೆಗೂ ಸೃಜನತೆಯಿಂದ, ಬೌದ್ಧಿಕವಾಗಿ ವಿಕಾಸಗೊಳ್ಳುತ್ತಾ ಬಂದಿದ್ದಾನೆ.

"ಮನುಷ್ಯನಲ್ಲಿ ನಿಗೂಢವಾಗಿರುವ ಈಶ್ವರ ಚೈತನ್ಯವನ್ನು ಪೂರ್ಣವಾಗಿ ಪ್ರಕಾಶಗೊಳಿಸಿದರೆ, ಹೇಗಿರುವುದೆಂಬ ಆದರ್ಶವನ್ನು ಎತ್ತಿ ತೋರಿಸುವುದರಿಂದ, ಈಶ್ವರನ ಸ್ವರೂಪವನ್ನು ಮನುಷ್ಯನು ಅರಿತು ತಾನು ಆ ರೀತಿ ಬೆಳೆಯಬಹುದೆಂಬ ಭರವಸೆಯನ್ನು ಪಡೆಯುವುದಕ್ಕಾಗಿ ಅವತಾರವು ಸಂಭವಿಸುತ್ತದೆ."[೮]

ಈ ಕಾರಣದಿಂದಲೇ ಪವಾಡ ಪುರುಷರು, ಭೂಮಿಯ ಪ್ರತಿಯೊಂದು ಮೂಲೆಯಲ್ಲಿಯೂ, ಪ್ರತಿಯೊಂದು ಧರ್ಮದಲ್ಲೂ ಹುಟ್ಟಿದ್ದಾರೆ. ಭಾರತದಲ್ಲಿರುವ ಎಲ್ಲ ಧರ್ಮದಲ್ಲೂ ಪವಾಡ ಪುರುಷರನ್ನು ಕಾಣುತ್ತೇವೆ. ಯೇಸು, ಪೈಗಂಬರ್, ಬುದ್ಧ, ಮಹಾವೀರ, ಇನ್ನು ಮುಂತಾದವರನ್ನು ನಾವು ದೇವರ ಸ್ವರೂಪವೆಂದೇ ಭಾವಿಸಿ ಒಬ್ಬರನ್ನು ಶಿವನ ಅವತಾರವೆಂದು, ಇನ್ನೊಬ್ಬರನ್ನು ವಿಷ್ಣುವಿನ ಅವತಾರವೆಂದು ಹಾಗೆಯೇ ಹಾಲುಮತದಲ್ಲಿ ಬರುವ ರೇವಣಸಿದ್ಧನನ್ನು ಶಿವನ ಅವತಾರವೆಂದೆ, ಮಾಳಿಂಗರಾಯನನ್ನು ನಂದಿ ಅವತಾರಿಯಾಗಿ ಭೂಮಿಗೆ ಬಂದ ಬಸವಣ್ಣನ ಅವತಾರಿಯಾಗಿ, ವೀರಭದ್ರನ ಅವತಾರಿಯಾಗಿ ಬೀರೇಶ್ವರನು ಹುಟ್ಟಿ ಅವತರಿಸುವುದನ್ನು ಹಾಲುಮತ ಪುರಾಣಗಳಲ್ಲಿ ಕಾಣುತ್ತೇವೆ. ಇದರಂತೆ ಇವರು ಹಾಲುಮತದ ಅನುಯಾಯಿಗಳಾಗಿ, ಇವರನ್ನು ಭಕ್ತರು ಅವತಾರಿ, ಪವಾಡ ಪುರುಷರೆಂದೇ ಪರಿಗಣಿಸಿದ್ದಾರೆ.

ಧರ್ಮದ ಪವಾಡ ಪುರುಷರಂತಿರುವವರು ಸಮಾಜದಲ್ಲಿ ಸಾಮಾನ್ಯರಂತೆ ಹುಟ್ಟಿ, ಎಲ್ಲರೊಂದಿಗೆ ತಮ್ಮ ಬಾಲ್ಯವನ್ನು ಕಳೆದು ಕುಟುಂಬದ ಕಷ್ಟ-ಸುಖಗಳು ಅನುಭವಿಸಿದವರು. ಅವರು ಆದರೆ ನಮ್ಮಂತೆ ಧೈರ್ಯಗೆಡದೆ, ಧೈರ್ಯ ಆದರ್ಶಗಳಿಂದ ತಮ್ಮ ಬಾಳಿನಲ್ಲಿ ಬದುಕಿದವರು. ಇವರ ಧೈರ್ಯವನ್ನು ಚಿಂತನೆಗಳನ್ನು ಪ್ರತಿಯೊಬ್ಬರಲ್ಲೂ ಮೂಡಿಸಬೇಕೆಂಬುದು ಅವರ ಧ್ಯೇಯವಾಗಿತ್ತು. ಸಮಾಜದಲ್ಲಿ ಇವರ ಚಿಂತನೆಗಳಿಂದ ಜನರನ್ನು ತಮ್ಮತ್ತ ಆಕರ್ಷಿಸಿಕೊಂಡು, ಜನಸಾಮಾನ್ಯರಿಗೆ ತಮ್ಮ ಅನುಭವಗಳನ್ನು ಹಾಗೆಯೇ ಆಯಾ ಧರ್ಮದ ಮೌಲ್ಯತತ್ವಗಳನ್ನು, ಜೀವನದ ಮೌಲ್ಯಗಳನ್ನು ಅವರ ಮುಂದೆ ತಿಳಿಹೇಳಿ, ಸಮಾಜದಲ್ಲಿ ಎಲ್ಲರೊಂದಿಗೆ ಸಹಕಾರ, ಸಂಯಮ, ಧೈರ್ಯದಿಂದ ಬದುಕಬೇಕೆಂದು ಜನರನ್ನು ಮುನ್ನಡೆ ತರುವುದು ಅವರ ಮೂಲ ಉದ್ದೇಶವಾಗಿರುತ್ತದೆ. ಸಾಮಾನ್ಯ ಜನರು ಮಹಾಪುರುಷರ ಅನುಭವದ ಮಾತುಗಳನ್ನು ಕೇಳಿ, ಅವರ ಮನಸ್ಥಿತಿಗೆ, ವ್ಯಕ್ತಿತ್ವಕ್ಕೆ ಮಾರು ಹೋಗಿ, ಅವರು ನಮ್ಮೆಲ್ಲರ ಹಾಗೆ ಮಾನವರು ಎಂಬುದನ್ನು ಮರೆತು ಅವರನ್ನು ಸಮಾಜದಲ್ಲಿ ದೇವರೆಂದು ಭಾವಿಸಿ, ಇವರೊಬ್ಬರು ಮಹಾಪುರುಷರ, ದೈವ ಸಂಭೂತರು ಎಂದು ಭಾವಿಸಿ ಅವರ ಬಗ್ಗೆ ಹಾಡುಗಳನ್ನು ಕಟ್ಟಿ ಹಾಡುತ್ತಾ, ಕಥೆಗಳನ್ನು ಹೇಳುತ್ತಾ ಅವರ ಜೀವನಕ್ಕೊಂದು ವರ್ಣನೆಯನ್ನು ನೀಡಿ, ಅಲೌಕಿಕ ಶಕ್ತಿಗೆ ಅವರನ್ನು ಹೋಲಿಸುತ್ತಾರೆ. ಪುರಾಣಕಾರರು ಇವರ ಕಥೆಗಳಿಗೆ ನಾನಾ

ರೀತಿಯ ವರ್ಣನೆಯಗಳನ್ನು ನೀಡಿ ಪವಾಡ ಕಥೆಗಳು ಬರೆಯುತ್ತಾರೆ. ಕೊನೆಗೆ ಅವರು ಮಾನವರೆಂಬುದನ್ನು ಮರೆತು, ಅವರೇ ದೇವರೆಂದು ನಂಬಿ ಅವರಿಗೊಂದು ದೇವಾಲಯ ನಿರ್ಮಿಸಿ, ಮೂರ್ತಿಯನ್ನು ಮಾಡಿಸಿ ಪೂಜೆ ಮಾಡುತ್ತಾರೆ. ಇಂತಹವರನ್ನು ಎಲ್ಲ ಧರ್ಮ ಗಳಲ್ಲಿಯೂ ಕಾಣುತ್ತೇವೆ. ಇವರು ಜೀವಂತವಾಗಿರುವಾಗಲೇ ಇವರಿಗೊಂದು ಮಠ ನಿರ್ಮಿಸಿ ಅಲ್ಲಿಗೆ ಭಕ್ತರೆಲ್ಲರೂ ತಮ್ಮ ಕಷ್ಟಗಳನ್ನು ನಿವಾರಿಸಿಕೊಳ್ಳಲು ಬರುತ್ತಾರೆ. ಅವರಿಗೊಂದು ಒಳ್ಳೆಯ ಮಾತುಗಳಿಂದ, ಧೈರ್ಯ ಹೇಳಿ ಸಮಸ್ಯೆಗೊಂದು ಪರಿಹಾರ ಸೂಚಿಸುತ್ತಾರೆ. ಅದರಂತೆ ಭಕ್ತರು ಪಾಲಿಸಿ, ಜೀವನದಲ್ಲಿ ನೆಮ್ಮದಿ ಕಾಣುತ್ತಾರೆ.

ಮಹಾಪುರುಷರು ಮರಣ ಹೊಂದಿದಾಗ ದೈವ ಸಂಕಲ್ಪದಿಂದಲೇ ಅವರನ್ನು ಬೀಳ್ಕೊಡುತ್ತಾರೆ. ಹಾಗೆಯೇ ಮಠದಲ್ಲಿ ಅವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಇವರ ಬಗ್ಗೆ ಭಕ್ತರು ದೇಶ ವಿದೇಶಗಳಲ್ಲಿ ಪ್ರಚಾರ ಮಾಡುತ್ತಾರೆ. ಇವರು ಕಾಲವಾದ ನಂತರ ಇವರ ಮೇಲಿನ ಕಲ್ಪನೆಯೇ ಬದಲಾಗಿ, ಅವರ ಜೀವನದ ಶೈಲಿಯನ್ನೇ ಬದಲಾವಣೆ ಮಾಡಿ ಬಾಯಿಂದ ಬಾಯಿಗೆ, ಕೃತಿಯಿಂದ ಕೃತಿಗೆ ಬದಲಾಗಿ ದಂತಕಥೆ, ಪವಾಡ ಕಥೆಗಳು ಸೃಷ್ಟಿಯಾಗಿ ಚರಿತ್ರೆಯಾಗುತ್ತವೆ.

ಹಾಲುಮತ ಪುರಾಣಗಳಲ್ಲಿ ಪವಾಡ ಕಥೆಗಳನ್ನು ಕ್ರಮಬದ್ಧವಾಗಿ ರಚಿಸಿದರಿಂದ ಪುರಾಣಗಳು ಬೆಳೆದವು. ಈ ಪುರಾಣಗಳಿಂದ ಯಾವುದೇ ರೀತಿಯ ಹಾನಿಯಾಗಿಲ್ಲವೆಂದು ತಿಳಿಯುತ್ತೇವೆ. ಹಾಲುಮತ ಪುರಾಣಗಳ ರಚನೆ ಮೊದಲು ಮೌಖಿಕವಾಗಿ ಜನಪದರಲ್ಲಿ ರಚನೆಯಾಯಿತು. ಈ ಪುರಾಣಗಳಲ್ಲಿ ಹಾಲುಮತದವರ ಪವಾಡ ಪುರುಷರ ಜೀವನ ಚರಿತ್ರೆಗಳನ್ನು ತಿಳಿಸಲಾಗಿದೆ. ಅಘಟಿತ ವಿಷಯಗಳನ್ನು ದೈವೀ ಪುರುಷರನ್ನು ವರ್ಣಿಸುವಂತಹ ಪವಾಡ ಕಥೆಗಳ ರಚನೆಯಾಗಿದೆ. ಬಹುಪಾಲು ಇವರ ಮಾದರಿಯಲ್ಲೇ ವಿದ್ಯೆ ಕಲಿತ ಕವಿಗಳು (ಪುರಾಣಕಾರರು) ಪುರಾಣಗಳನ್ನು ರಚಿಸಿದ್ದಾರೆ.

ಹಾಲುಮತ ಪುರಾಣಗಳು ಬಹುಮಟ್ಟಿಗೆ ಪವಾಡ ಪುರುಷರ ಚರಿತ್ರೆಗೆ ಮುಡುಪಾಗಿದೆ. ಪುರಾಣಗಳಲ್ಲಿ ಸ್ವತಂತ್ರವಾಗಿ ರಚಿಸಿದ ಕಥೆಗಳು ಮತ್ತು ಉಪಕಥೆಗಳು ಬೆಳೆದು ನಿಂತಿವೆ. ಇದರಿಂದ ಪುರಾಣಕಾರರ ದೃಷ್ಟಿ ಪರಿಪೂರ್ಣವಾದುದೆಂದು ತಿಳಿದು, ಅವರು ಪವಾಡ ಪುರುಷರ ಪವಾಡಗಳನ್ನು, ಮಹಿಮೆಗಳನ್ನು ಮಾತ್ರ ಹೇಳಿ ಹಾಲುಮತದ ತತ್ವಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಅರ್ಥೈಸಲಾಗಿದೆ. ಹಿಂದಿನ ಸಂಪ್ರದಾಯ ಕಾಲದಲ್ಲಿ ಜನರು ಮಹಾಪುರುಷರ ಪುರಾಣಗಳಲ್ಲಿರುವ ಕಥೆಗಳನ್ನು ಕೇಳಲು ಕಾತುರರಾಗಿದ್ದರೇ ವಿನಃ ಅವರ ಉನ್ನತ ಕಾರ್ಯಗಳನ್ನು ಮಾಡಿದುದರ ಬಗ್ಗೆ ಗಮನವನ್ನು ಹರಿಸುತ್ತಿರಲಿಲ್ಲ. ನಮ್ಮ ಭಾರತೀಯ

ಸಂಸ್ಕೃತಿಯಲ್ಲಿ ಪುರಾಣಕ್ಕೆ ಪ್ರಧಾನ ಸ್ಥಾನವನ್ನು ನೀಡಿದ್ದಾರೆ. ಮಹಾಪುರುಷರ ಚರಿತ್ರೆಗೆ ಮಹತ್ವವನ್ನು ನೀಡಿದ್ದಾರೆ. ಪ್ರತಿಯೊಂದು ನಾಡಿನಲ್ಲಿಯೂ ಇದಕ್ಕೆ ಪ್ರಾಮುಖ್ಯತೆ ನೀಡಿರುವ ಹಾಗೆ, ನಮ್ಮ ಕನ್ನಡ ನಾಡಿನಲ್ಲಿ ಮಹಾಪುರುಷರ ಚರಿತ್ರೆಗೆ ಪ್ರಾಮುಖ್ಯತೆ ನೀಡಿದ್ದಾರೆ. ನಮ್ಮ ಪವಾಡ ಪುರುಷರ ಐತಿಹಾಸಿಕ ಕಥೆಗಳು ಭಾರತದಾದ್ಯಂತ ಪ್ರಸಿದ್ಧಿಯಾಗಿವೆ.

ಹಾಲುಮತ ಪುರಾಣಗಳು ಪವಾಡ ಪುರುಷರ ಅಲೌಕಿಕ ಶಕ್ತಿಯ ಬಗ್ಗೆ ಹೇಳುತ್ತಿವೆ ವಿನಃ ಅವರು ಅನುಭವಿಸಿದ ಕಷ್ಟಗಳನ್ನು ಆಗಿನ ಸಾಮಾಜಿಕ, ರಾಜಕೀಯ ಸ್ಥಿತಿಗಳನ್ನು ಪುರಾಣಗಳಲ್ಲಿ ಸಾಕಷ್ಟು ಮಟ್ಟಿಗೆ ವರ್ಣಿಸಿರುವುದನ್ನು ನಾವು ಕಾಣುವುದಿಲ್ಲ. ಆ ಕಾಲದಲ್ಲಿ ಧರ್ಮದ ಹೆಸರಿನಲ್ಲಿ ಆಗುತ್ತಿದ್ದ ಅಧರ್ಮಗಳು, ಅವಿಚಾರಗಳನ್ನು ಪ್ರತಿರೋಧಿಸಿ ಜನಸಾಮಾನ್ಯರ ಮೇಲೆ ಅನುಕಂಪವನ್ನು, ಅವರಲ್ಲಿ ಸಹನೆ, ಪ್ರೀತಿಯನ್ನು ಬೆಳೆಸಿಕೊಂಡು, ಅದರ ತಳಹದಿಯ ಮೇಲೆಯೇ ಸಾಮಾಜಿಕ ದುಸ್ಥಿತಿಯನ್ನು ಹೋಗಲಾಡಿಸಲು ಪುರಾಣಗಳು ಸಾಧ್ಯವಾದಷ್ಟು ಅಪ್ರೇರಕವೆನ್ನಬಹುದು.

ಹಾಲುಮತದ ರೇವಣಸಿದ್ಧನಾಗಲೀ, ಬೀರಲಿಂಗನಾಗಲೀ ಮಾಳಿಂಗರಾಯನಾಗಲಿ, ಮೂಢನಂಬಿಕೆಗಳನ್ನು, ಕಟ್ಟುಪಾಡು ಸಂಪ್ರದಾಯಗಳನ್ನು ಸಮಾಜದಲ್ಲಿ ಆಗುವ ಅನ್ಯಾಯಗಳನ್ನು ಹೋಗಲಾಡಿಸಲು ಹೋರಾಡಿದ ವೀರರಾಗಿದ್ದಾರೆ. ಪುರಾಣಕಾರರು ಪವಾಡ ಪುರುಷರ ದೃಢವಾದ ವ್ಯಕ್ತಿತ್ವ, ತತ್ವಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತಹ ರೀತಿಯಲ್ಲಿ ಹೇಳಬೇಕೆ ಹೊರತು, ಅವರ ದುಃಖಗಳ ಬಗ್ಗೆ, ಕಷ್ಟಗಳ ಬಗ್ಗೆ ಪುರಾಣಗಳಲ್ಲಿ ಉಲ್ಲೇಖಿಸದೇ ಇರುವುದು ಒಳಿತು. ಪುರಾಣಕಾರರು ಪವಾಡ ಪುರುಷರ ಜೀವನದ ಕೆಲವು ವಿಷಯಗಳನ್ನು ಕಟ್ಟು ಕಥೆಗಳಾಗಿ ಕಲ್ಪನಾ ಲೋಕದಲ್ಲಿ ತೇಲಿ, ಅತಿಯಾದ ವರ್ಣನೆಯಿಂದ ಕಥೆಗಳನ್ನು ಸೃಷ್ಟಿಸಿ, ಅವರ ಸುತ್ತ ಹರಡಿ, ಅವರ ನಿಜವಾದ ವ್ಯಕ್ತಿತ್ವವನ್ನು ಮಾಯವಾಗಿಸಿ, ಕೇವಲ ಅವರು ಚಮತ್ಕಾರ ವ್ಯಕ್ತಿಯೇ ಎಂದು ವರ್ಣಿಸಿದ್ದಾರೆ. ಜನಸಾಮಾನ್ಯರು ನಂಬಲು ಅವರ ಚರಿತ್ರೆ ಬಹು ಕಾಲದವರೆಗೂ ಉಳಿಯಬೇಕೆಂದರೆ ಅದು ಅನಿವಾರ್ಯವಾಗಿದೆ ಎಂದು ಹೇಳುತ್ತೇವೆ. ಕೆಲವು ಪುರಾಣಗಳು ಕೇವಲ ಚಾರಿತ್ರಿಕ ಪ್ರಜ್ಞೆಯ ಕೊರತೆಯಿಂದಾಗಿ, ಕೇವಲ ಪವಾಡ ಕಥೆಗಳಿಂದ ಆವೃತ್ತವಾಗಿರುವ ಪುರಾಣಗಳ ರಚನೆಗಳಲ್ಲಿ ಕೆಲವು ತಪ್ಪು ಅಭಿಪ್ರಾಯಗಳಿವೆ ಎಂಬುದಕ್ಕೆ ದಾರಿ ಮಾಡಿಕೊಟ್ಟಿದೆ. ಇಂತಹ ಪುರಾಣಗಳು ಭಕ್ತಿಗೆ ಅನಾನುಕೂಲವೇ ವಿನಃ ಪುರಾಣಗಳನ್ನು ಐತಿಹಾಸಿಕವಾಗಿ ನೋಡುವವರಿಗೆ ವಿಮರ್ಶಕರಿಗೆ ಅಲ್ಲ.

ಚಾರಿತ್ರಿಕವಲ್ಲದ ಪುರಾಣಗಳಿಂದ ಆಯಾ ಧರ್ಮದ ಮೇಲೆ ಆಕರ್ಷಣೀಯವಾದ ವಾತಾವರಣ ಬೆಳೆದು ಜನಸಾಮಾನ್ಯರಲ್ಲಿ ಮಹಾಪುರುಷರ ಮೇಲೆ ಭಕ್ತಿ ಶ್ರದ್ಧೆಗಳು ಬೆಳೆಯಲು

ಕಾರಣವಾಗುತ್ತವೆ. ಆದರೆ ಜನರ ಭಕ್ತಿ-ಶ್ರದ್ಧೆಗಳು ಅತಿಯಾದರೆ ಅವರ ವಿಚಾರ ಶಕ್ತಿ ಕುಂದಿ, ಅವರ ಜೀವನದ ತುಂಬಾ ಬರೀ ಸಂಪ್ರದಾಯಗಳನ್ನೇ ನಂಬಿ ಬಾಳಬೇಕಾಗುತ್ತದೆ.

ಪುರಾಣ ಕವಿಗಳು ಧರ್ಮದ ಒಳಿತಿಗಾಗಿ ಅಂಧಶ್ರದ್ಧೆಯಲ್ಲಿ ಮಹಾಪುರುಷರ ಭಕ್ತರಾಗಿ ಅವರ ಚರಿತ್ರೆಯನ್ನು ಭಕ್ತಿ ಪೂರ್ವಕವಾಗಿ, ವಿಶ್ವಾಸದಿಂದ ರಚಿಸಿರುತ್ತಾರೆ. ಹೀಗೆ ಬರೆದಿರುವ ಪುರಾಣಗಳು ಮಹಾಪುರುಷರ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡಿವೆ. ಪುರಾಣಗಳಲ್ಲಿ ಕೆಲವು ಸತ್ಯ ಕಥೆಗಳಿರುತ್ತವೆ. ಇನ್ನು ಕೆಲವು ಕಲ್ಪಿತ ಕಥೆಗಳಿರುತ್ತವೆ. ಇನ್ನು ಕೆಲವು ಕಟ್ಟು ಕಥೆಗಳಿರುತ್ತವೆ. ಇವುಗಳೆಲ್ಲ ಸೇರಿ ಸತ್ಯಾಂಶವನ್ನು ಮುಚ್ಚಿಡುವ ಸಾಧ್ಯತೆ ಇದೆ. ಇಂತಹ ಕಥೆಗಳಿಂದ ಚರಿತ್ರೆಯೇ ಮರೆಮಾಚಿ ಹೋಗುತ್ತದೆ. ಹಾಗೆಯೇ ಓದುಗರು ಕಲ್ಪನಾಲೋಕದಲ್ಲಿ ವಿಹರಿಸುವ ಸಾಧ್ಯತೆಗಳು ಅಧಿಕವಾಗಿರುತ್ತವೆ.

"ಪವಾಡ ಪುರುಷರ ಹುಟ್ಟಿನಿಂದ, ಬಾಲ್ಯ, ಯೌವ್ವನ, ಅವರ ಜೀವನದಲ್ಲಿ ಸಂಭವಿಸದ ಘಟನೆಗಳನ್ನು ಪುರಾಣಗಳಲ್ಲಿ ವರ್ಣಿಸುವಾಗ ಅವರು ಧಾರ್ಮಿಕವಾಗಿ ಧರ್ಮವನ್ನು ಎತ್ತಿ ಹಿಡಿಯುವ ಕಾರ್ಯವನ್ನು ಮಾಡಿದ್ದಾರೆ. ಜಗತ್ತಿನಲ್ಲಿ ಮಹಾಪುರುಷರೆಂದು ಎನಿಸಿಕೊಂಡಿರುವ ಮಹಾಪುರುಷರ ಜನನವು ಎಲ್ಲರಂತೆ ಅಲ್ಲದೆ ಅಲೌಕಿಕವಾಗಿ ಹೆಚ್ಚಿದ ಕಥೆಗಳನ್ನು ನಾವು ನೋಡಿದ್ದೇವೆ. ರೇವಣಸಿದ್ಧನ ಜನನವು ದೇವಾಲಯದ ಮಹಾಲಿಂಗವಾಯಿತು. ಸಿದ್ಧರಾಮನ ಜನನವಾದದು ಹೇಗೆ? ಆತನ ತಾಯಿಗೆ ಮುಪ್ಪು ಆವರಿಸಿ ಋತು ನಿಂತಾಗ, ರೇವಣಸಿದ್ಧನು ಆಕೆಯ ಉದರವನ್ನು ಸ್ಪರ್ಶಿಸಿದ ಮಾತ್ರಕ್ಕೆ ಆಕೆ ಗರ್ಭ ಧರಿಸಿ ಸಿದ್ಧರಾಮನಿಗೆ ಜನ್ಮವಿತ್ತಳು. ಚನ್ನಬಸವಣ್ಣ ಜನನವು ಆತನ ತಾಯಿ ಅಕ್ಕನಾಗಮ್ಮ ಜಂಗಮ ಪ್ರಸಾದ ಸ್ವೀಕರಿಸಿದ ಮಾತ್ರಕ್ಕೆ ಸಂಭವಿಸಿತು ಎಂದು ಲಕ್ಕಣ್ಣ ದಂಡೇಶನು ವರ್ಣಿಸಿದರೆ, ಈತನ ಜನನದ ಬಗ್ಗೆ ಮುಂಬರುವ ವೀರಶೈವ ಕವಿಗಳಲ್ಲಿ ಏಕಮಾತ್ರವಿಲ್ಲದುದದನ್ನು ಕಾಣುತ್ತೇವೆ. ಚಾಮರಸನು ಬಸವಣ್ಣನ ಪ್ರಸಾದ ಸೇವನೆಯಿಂದ ಅಕ್ಕನಾಗಮ್ಮನಿಗೆ ಗರ್ಭವಾಗಿ ಚೆನ್ನಬಸವನ್ನ ಜನಿಸಿದನೆಂದು ಹೇಳಿದರೆ ಅದೃಶ್ಯ ಕವಿ ಮತ್ತು ಸಿದ್ದ ನಜೇಶ ಇವರು ಶರಣ ಕಕ್ಕಯ್ಯಗಳ ಪ್ರಸಾದದಿಂದ ಚೆನ್ನಬಸವಣ್ಣನ ಜನನ ಸಂಭವಿಸಿತು ಎನ್ನುತ್ತಾರೆ. ವಿರೂಪಾಕ್ಷ ಪಂಡಿತನು ಆತನು ಜನನ ಶಿವನ ಪ್ರಸಾದದಿಂದ ಆಯಿತು ಎಂದು ವರ್ಣಿಸಿದ್ದಾನೆ. ಬಸವಣ್ಣ ಜನಿಸಿದುದು ಹೀಗೆ, ಆತನ ತಾಯಿ ಮಾದಲಾಂಬಿಕೆಯು ನಂದೀ ವ್ರತವಿಡಿದು ದೃಢ ಭಕ್ತಿಯಿಂದ ಆತನನ್ನು ಪೂಜಿಸಲು, ಒಂದು ದಿನ ನಂದಿಯು ಆಕೆಗೆ ಪ್ರಸಾದ ಕೊಡುವನು. ಅದನ್ನು ಸೇವಿಸಲು ಆಕೆಗೆ ಗರ್ಭವಾಗುವುದು. ಮುಂದೆ ಬಸವಣ್ಣನಿಗೆ ಜನ್ಮವೀಯುವಳು. ತೋಂಟದ ಸಿದ್ಧಲಿಂಗರ ಜನನವು ಸಾಮಾನ್ಯರಂತೆ ಸಹಜ ರೀತಿಯಲ್ಲಿ ಸಂಭವಿಸಿದ ಎಂಟು ವರ್ಷದ ಬಾಲಕನಾಗಿಯೇ ಭುವಿಗೆ ಅವತರಿಸಿದನೆಂದು

ಶ್ರೀ ಸಿದ್ಧೇಶ್ವರ ಪುರಾಣದಲ್ಲಿ ವರ್ಣಿಸಿದ ಚೆನ್ನಬಸವ ಪುರಾಣದಲ್ಲಿ ಆತನು ಪರಮಗೋಸಲ ಚೆನ್ನ ಬಸವೇಶ್ವರನ ಹಸ್ತದಿಂದ ನಿರಂಜನ ಗಗೇಶ್ವರ ರೂಪದಿಂದ ಭುವಿಗೆ ಅವತರಿಸಿ, ಸಿದ್ಧೇಶ್ವರನೆಂಬ ಹೆಸರಿನಿಂದ ಪ್ರಸಿದ್ಧಿ ಪಡೆದನೆಂದು ಬಣ್ಣಿಸಿದೆ."[5] ಹೀಗೆ ಹಾಲುಮತ ಸಾಂಸ್ಕೃತಿಕ ವೀರರ ಜನನವೂ ಅಲೌಕಿಕವಾದುದೆ ಆಗಿದೆ.

ಬೀರಣ್ಣನ ಜನನವು ಭರಮದೇವನನ್ನು ಕಾಳಿನಾರಾಯಣನು ಮಕ್ಕಳಿಲ್ಲದವರ ಪೂಜೆ ಶಿವನಿಗೆ ಸಲ್ಲದು ಎಂದು ಹೀಯ್ಯಾಳಿಸಿದಾಗ, ಭರಮದೇವ ಹೆಂಡತಿಯ ಬಳಿ ತಿಳಿಸಿದಾಗ ಸೂರಮ್ಮದೇವಿಯು ಶಿವನ ಬಳಿ ಹೋಗಿ ಭಕ್ತಿಯಿಂದ ಬೇಡಿಕೊಂಡಾಗ ಬೀರಣ್ಣನ ಜನನವಾಗುತ್ತದೆ. ಮಾಳಿಂಗರಾಯನ ಜನನವು ಅಲೌಕಿಕವಾದುದೇ ಆಗಿದೆ. ಹೀಗೆ ಎಲ್ಲ ಮಹಾಪುರುಷರ ಜನನವು ಅಲೌಕಿಕವೇ ಆಗಿ ಲೋಕಕ್ಕೊಂದು ಅಚ್ಚರಿಯನ್ನು ತಂದಿದೆ. ವೈಜ್ಞಾನಿಕಕ್ಕೆ ಬಂದು ಸವಾಲುವೆಂಬಂತೆ ಇವರ ಜನನವು ಸಂಭವಿಸಿರುತ್ತದೆ. ಇಂತಹ ಜನನವನ್ನು ಕೇವಲ ಸಂಪ್ರದಾಯ, ಮಹಾಪುರುಷರ ಮೇಲೆ ಭಕ್ತಿ ಮೌಢ್ಯತೆಯಿಂದ ಕೂಡಿದ ವ್ಯಕ್ತಿಗಳಿಗೆ ಮಾತ್ರ ಇಷ್ಟವಾಗುತ್ತವೆ. ವಿನಃ ಚರಿತ್ರೆಕಾರರಿಗೆ ಅಲ್ಲ. ಇಂತಹ ಜನನವು ಪುರಾಣಗಳಲ್ಲಿ ವ್ಯಕ್ತವಾಗುವುದರಿಂದ, ಅವರ ಜನನದ ಸತ್ಯಾಂಶವು ಮಾತ್ರ ಪ್ರಶ್ನೆಯಾಗಿಯೇ ಉಳಿಯುತ್ತದೆ. ಅಮೋಘಸಿದ್ಧನ ಗರ್ವಭಂಗ ಮಾಡುವುದಕ್ಕಾಗಿ ಮಾಳಿಂಗರಾಯರಿಬ್ಬರಲ್ಲಿ ಶಕ್ತಿ ಪ್ರದರ್ಶನಗೊಂಡಿದ್ದು, ಅಮೋಘಸಿದ್ಧ ಹೋಗುವ ಎತ್ತುಗಳನ್ನು ತಡೆದರೆ, ಕೈ ಮಾಡಿ ಹೋಗುವಂತೆ ಮಾಳಿಂಗರಾಯ ಮಾಡುವನು. ಮಳೆಯನ್ನು ಅಮೋಘಸಿದ್ಧ ತರಿಸಿದರೆ ಮಾಳಿಂಗರಾಯ ಕೈ ಸನ್ನೆ ಮಾಡಿ ಮಳೆಯನ್ನೇ ಹಿಂದಕ್ಕೆ ಹೋಗುವಂತೆ ಮಾಡುವ ಪವಾಡಗಳು. ಇಂತಹ ಪವಾಡಗಳು ವೈಜ್ಞಾನಿಕತೆಗೆ ಸವಾಲಾಗಿರುವಂತಹವುಗಳಾಗಿವೆ. ಜನಸಾಮಾನ್ಯರು ಇಂಥ ಅದ್ಭುತ, ಚಮತ್ಕಾರಿತ ಕಥೆಗಳನ್ನು ಕೇಳಿಸಿಕೊಂಡು ಮಹಾಪುರುಷರ ಅತಿಮಾನುಷ ಶಕ್ತಿಗಳನ್ನು ಹೊಗಳುವುದರಲ್ಲಿಯೇ ತೃಪ್ತಿ, ನೆಮ್ಮದಿಯನ್ನು ಪಡೆದುಕೊಳ್ಳುತ್ತಾರೆಯೇ ವಿನಃ ಆ ಕಥೆಗಳಲ್ಲಿ ಬರುವ ತಾತ್ವಿಕತೆಗಳನ್ನು ಅರಿಯಲು ಯಾರೂ ಮುಂದೆ ಬರುವುದಿಲ್ಲ. ಮಾಳಿಂಗರಾಯನು ಸತ್ತ ಮಗುವನ್ನು ಬದುಕಿಸಿದರೆ, ಕಂಬಳಿ ಬೀಸಿ ಮಳೆತರಿಸಿದರು. ಗಂಗಮ್ಮಳಿಗೆ ಹಣದ ಭಂಡಾರವನ್ನು ನೀಡಿದರು. ಕಪ್ಪೆ ಕಲಕದ ನೀರು ಹುಳು ಮುಟ್ಟದ ಹೂ ತರಬೇಕೆಂದು ಬೀರಪ್ಪ ಮಾಳಿಂಗರಾಯನಿಗೆ ಹೇಳಿದಾಗ, ಅವರು ತಂದು ಗುರುಗಳಿಗೆ ಪ್ರಸಾದ ನೀಡಿದರು. ರೇವಣಸಿದ್ಧನಿಗೆ ಬಿಜ್ಜಳನು ಅಂಬಲಿಯನ್ನು ಬೊಗಸೆಯಲ್ಲಿ ಹಾಕಿದಾಗ ರೇವಣಸಿದ್ದನು ಅರಮನೆಗೆ ಕಣ್ಣಿನಿಂದ ಬೆಂಕಿಯು ಉರಿಯುವಂತೆ ಮಾಡಿದನು. ಪದುಮಣ್ಣನು ರಕ್ಕಸಿಯ ಮದುವೆಯಾದದ್ದು, ಬೀರಣ್ಣನು ಹಾವಿನ ಹೆಡೆಯ ಮೇಲೆ ಕುಳಿತು ಊಟ ಮಾಡಿದ್ದು, ಶ್ರೀ ಕೇಜರಾಜನ ರೋಗವನ್ನು ನಿವಾರಿಸಿದ ಕಥೆ, ಸತ್ತ ಟಗರನ್ನು ಬದುಕಿಸಿದ ಮಹಿಮೆ, ಕುರಿಗಳನ್ನು ಕಾಯಲು

ದೇವಾನು ದೇವತೆಗಳೇ ಭೂಮಿಗೆ ಬಂದ ಅದ್ಭುತ ಕಥೆ. ಹೀಗೆ ಅನೇಕ ಅದ್ಭುತ, ಚಮತ್ಕಾರಿ ಕಥೆಗಳು ಪುರಾಣಗಳಲ್ಲಿ ವ್ಯಕ್ತಗೊಂಡಿವೆ. ನಾವು ಅವುಗಳ ಹೊರ ನೋಟವನ್ನೇ ಅಲ್ಲದೆ ಒಳಗನ್ನು ಅರಿತರೆ ಮಾತ್ರ ಅದರಲ್ಲಿರುವ ತತ್ವ ತಿಳಿಯಲು ಸಾಧ್ಯವಾಗುತ್ತದೆ.

ದೇವೇಂದ್ರರಾಯನು ತನ್ನ ಏಳು ಹೆಣ್ಣು ಮಕ್ಕಳಲ್ಲಿ ಕೊನೆಯವಳಾದ ಮಾಯವ್ವಳು ಜಾತಕ ಸರಿಯಿಲ್ಲವೆಂದು ಬಂಗಾರದ ಪೆಟ್ಟಿಗೆಯಲ್ಲಿ ಹಾಕಿ ನದಿಯ ತೆಪ್ಪದಲ್ಲಿ ಹಾಕಿದಾಗ, ಅದು ತೇಲಿ ಬಂದು ಋಷಿಯ ಮೂಲಕವಾಗಿ ದಿಬ್ಬರಾಯನಿಗೆ ಸಿಕ್ಕು ಅವಳೊಬ್ಬಳು ಮಹಿಮ ಸ್ತ್ರೀಯಾದ ರೋಚನ ಕಥೆ, ಹಾಗೆಯೇ ಬೀರಪ್ಪನು ಸಹ ತನ್ನ ಮಾವನ ಕುತಂತ್ರದಿಂದ ಹುಟ್ಟಿದ ೧೧ ದಿನಕ್ಕೆ ಕಾಡಿನ ಪಾಲಾದ ಒಬ್ಬ ನತದೃಷ್ಟ ಬಾಲಕನೆನ್ನಬಹುದು. ಈ ಬೀರಪ್ಪ ನದಿ ತೀರದಲ್ಲಿ ಅಳುತ್ತಿರಬೇಕಾದರೆ ಶಿವ–ಪಾರ್ವತಿಯರೇ ಬಂದು ಹಾಲು ನೀಡಿ, ಆಡಿಸಿದ ಅದ್ಭುತ ಕಥೆ. ಮುಂದೆ ಮಾಯವ್ವಳಿಗೆ ಎದೆಯಲ್ಲಿ ಹಾಲು ಉಕ್ಕಿ ಬೀರಪ್ಪನಿಗೆ ತಾಯಿಯಾದ ಕಥೆ. ಇಲ್ಲಿ ನೋಡುವುದಾದರೆ ಎಲ್ಲಿಂದ ಎಲ್ಲಿಗೆ ಸಂಬಂಧ ತಿಳಿಯದು. ಒಂದು ಹೆಣ್ಣು ಕರುಣಾಮಯಿ ಎಂದು ತೋರಿಸುವ ಕಥೆಯಾಗಿದೆ. ಯಾವುದೇ ಒಂದು ಮಗು ಅಗಾಧವಾಗಿ ಹಸಿವೆಯಿಂದ ನರಳುತ್ತಿದ್ದರೆ, ಅದರ ಆರೈಕೆಯಲ್ಲಿ ಬರುತ್ತಾಳೆ ಹೆಣ್ಣು ಎಂಬುದಕ್ಕೆ ಮಾಯವ್ವಳೇ ಸಾಕ್ಷಿಯಾಗಿದ್ದಾಳೆ.

ಕೈಲಾಸದಲ್ಲಿ ಒಂದು ದಿನ ಒಡ್ಡೋಲಗದಲ್ಲಿ ಸಭೆ ಸೇರಿದಾಗ, ಅಲ್ಲಿಗೆ ಕುರೂಪಿ ಋಷಿಯೊಬ್ಬರು, ಬಂದು ಶಿವನಿಗೆ ನಮಸ್ಕರಿಸುವುದನ್ನು, ಕಂಡ ಮೂವರು ಗಂಧರ್ವರು ಕುಚೇಷ್ಟೆ ಮಾಡುವರು. ಇದರಿಂದ ಕೋಪಗೊಂಡ ಋಷಿಯ ನೀ ಮೂವರು ಭೂಲೋಕದಲ್ಲಿ ಮಾನವರಾಗಿ ಹುಟ್ಟಿ ಎಂದು ಶಪಿಸುತ್ತಾರೆ. ಇಲ್ಲಿ ಋಷಿಯ ಕೋಪಕ್ಕೂ ಅರ್ಥವಿರುವುದು ಕಂಡು ಬರುತ್ತದೆ. ದೇಹದ ಆಕಾರವನ್ನು ನೋಡಿ, ನಕ್ಕಂತ ಗಂಧರ್ವರ ಗರ್ವ ಭಂಗ ಮಾಡುವುದಕ್ಕಾಗಿ, ಋಷಿ ತಕ್ಕ ಶಿಕ್ಷೆಯನ್ನು ನೀಡಿದ್ದಾರೆ. ಹಿರಿಯರನ್ನು ಕಂಡು ಚೇಷ್ಟೆ ಮಾಡಬಾರದೆಂದು ಉದಾಹರಿಸುತ್ತೇವೆ.

ಇದೇ ರೀತಿಯಾದ ಅನೇಕ ಕಥೆಗಳು ಪುರಾಣಗಳಲ್ಲಿ ವ್ಯಕ್ತಗೊಂಡಿವೆ. ಇಂತಹ ಪವಾಡ ಕಥೆಗಳಿಂದ ನಮ್ಮ ಬದುಕಿನಲ್ಲಿ ಬದಲಾವಣೆ ತಂದು ಕೊಳ್ಳಬೇಕೇ ವಿನಃ ಅವುಗಳನ್ನು ಅಂಧ ಶ್ರದ್ಧೆಯಿಂದ ನಂಬಬಾರದು. ಆ ಕಥೆಗಳಲ್ಲಿ ಇರುವ ತಾತ್ವಿಕತೆಯನ್ನು ಅರಿತಾಗ ಮಾತ್ರ ಅವು ನಮ್ಮ ಜೀವನಕ್ಕೆ ಒಂದು ಪರಿಹಾರವಾಗಿ ತೋರುತ್ತವೆ. ಪವಾಡ ಕಥೆಗಳಿಂದ ನಮ್ಮ ಸಂಸ್ಕೃತಿಗೊಂದು ಇತಿಹಾಸ ದೊರೆಯಿತು. ಮಹಾನ್ ವ್ಯಕ್ತಿಗಳ ದೇವಾಲಯಗಳಿಗೆ ಸಾಕ್ಷಿ ಇದೆಯೇ ವಿನಃ

ಅವರು ಮಾಡಿದ ಯಾವುದೇ ಪವಾಡಕ್ಕೂ ಸಾಕ್ಷಿ ನಮಗೆ ದೊರೆಯುವುದಿಲ್ಲ. ಕೇವಲ ಪುರಾಣಗಳಲ್ಲಿ ಮಾತ್ರ ಉಲ್ಲೇಖವಾಗಿರುವುದು ನಾವು ನೋಡುತ್ತೇವೆ.

ಭೂಮಿಯ ಮೇಲೆ ಮಾನವನ ಹುಟ್ಟಿನ ಕುರಿತು ಹಲವು ವೈವಿಧ್ಯಮಯವಾದ ಪುರಾಣ ಕಥೆಗಳು ಸೃಷ್ಟಿಯಾಗಿವೆ. ಭಾರತದಲ್ಲಿ ಎಲ್ಲ ಧರ್ಮಗಳು ತನ್ನದೇ ಆದ ಪುರಾಣಗಳನ್ನು ಹೊಂದಿವೆ. ಆಯಾ ಪುರಾಣಗಳಲ್ಲಿ ಮಾನವನ ಹುಟ್ಟಿಗೆ ಭಿನ್ನ ರೀತಿಯಲ್ಲಿ ಕಥೆಗಳು ಹುಟ್ಟಿಕೊಂಡಿವೆ. ಹಾಗೆಯೇ ಹಾಲುಮತವು ಪೌರಾಣಿಕ ಹಿನ್ನೆಲೆಯಲ್ಲಿಯೇ ತನ್ನ ಪರಂಪರೆಯನ್ನು ಗುರುತಿಸಿಕೊಂಡಿದೆ. ಇಂತಹ ಪರಂಪರೆಯನ್ನು ಒದಗಿಸಲು ಹಾಲುಮತ ಪುರಾಣಗಳು ಆಕರಗಳಾಗಿವೆ. ಪುರಾಣ ಮತ್ತು ಐತಿಹ್ಯಗಳ ಮೂಲಕ ತಿಳಿಯುವುದಾದರೆ ಸಮುದಾಯವು ಪಶುಪಾಲನ ಸಂಸ್ಕೃತಿಯ ಗುರುತು ಹಿಡಿಯಲು ಸಹಾಯಕವಾಗಿದೆ. ಹಾಲುಮತದ ಮೂಲಪುರುಷ ಶಿವಪದ್ಮ ಅಥವಾ ಉಂಡಾಡು ಪದುಮಣ್ಣನೆಂದು ಪುರಾಣಗಳಲ್ಲಿ ಹೇಳಲಾಗಿದೆ.

ಒಮ್ಮೆ ಸದಾಶಿವನು ಬ್ರಹ್ಮನಿಂದ ರಚಿತವಾದ ಈ ಬ್ರಹ್ಮಾಂಡವನ್ನು ನೋಡ ಬಯಸಿ, ಪಾರ್ವತಿ ಸಮೇತ ಭೂಲೋಕದಲ್ಲಿ ಸಂಚರಿಸುತ್ತಿರುವಾಗ ರಮಣೀಯವಾದ ವನದಲ್ಲಿ ಬಂದು ಜಗುಲಿಯನ್ನು ಕಂಡು. ಈ ಜಗುಲಿಯ ಮೇಲೆ ಕೂಡಲಾಗಿ, ಪಾರ್ವತಿಯು ಸದಾಶಿವನಿಗೆ ನಾಥನೇ ಒಬ್ಬ ಕರ್ತನನ್ನು ನೇಮಿಸಿ ಮೂವತ್ತು ಪ್ರಾಣಿಗಳ ಸಂರಕ್ಷಣೆ ಮಾಡಬೇಕೆಂದು ಬೇಡಿಕೊಂಡಳು. ಅದೇ ವೇಳೆಗೆ ಮುಂದೆ ಹಾಲುಮತದ ಉತ್ಪತ್ತಿಯಾಗಬೇಕೆಂಬ ಉದ್ದೇಶದಿಂದಲೇ ಪಾರ್ವತಿ ಸಂತತಿಯಾಗಬೇಕೆಂಬ ಆತುರದಿಂದಲೇ ಆಕೆಯ ಮೊಲೆಗಳು ಒಮ್ಮಿಂದೊಮ್ಮೆಲೆ ತೊರೆಯಡ ಹತ್ತಿದವು. ಆ ಮೊಲೆಯ ಹಾಲು ನೆಲಕ್ಕೆ ಬಿದ್ದು ಹೊಳೆಯಾಗಿ ಹರಿದು ವ್ಯರ್ಥವಾಗಬಾರದೆಂದು ಪಾರ್ವತಿಯು ಬಲಮೊಲೆಯ ಹಾಲನ್ನು ಕೈಯಲ್ಲಿ ಹಿಡಿದು ಮಣ್ಣಲ್ಲಿ ಬೆರೆಸಿ ಪುರುಷ ರೂಪವನ್ನು ಮಾಡಿ, ಎಡಮೊಲೆಯ ಹಾಲಿನಲ್ಲಿ ಮಣ್ಣನ್ನು ಬೆರೆಸಿ ಸ್ತ್ರೀರೂಪವನ್ನು ಮಾಡಿ ಸಾಕ್ಷಾತ್ ಸದಾಶಿವನ ಮುಂದೆ ಇಟ್ಟು ಇವರು ಈ ಪೃಥ್ವಿಯ ಆದಿಗೆ ಕರ್ತರಾಗಬೇಕೆಂದು ಬೇಡಿಕೊಂಡಳು. ಶಿವನು ಪಾರ್ವತಿಯ ಬೇಡಿಕೆಗೆ ಮುಗುಳ್ನಗೆ ಬೀರಿ ಸಮ್ಮಿತಿಸಿ, ಆ ಎರಡು ಮಣ್ಣಿನ ಬೊಂಬೆಗಳಿಗೆ ಜೀವ ಕಳೆಯನ್ನು ತುಂಬಿದನು. ಮಣ್ಣಿನ ಮುದ್ದೆಯಿಂದ ನಿರ್ಮಿತರಾಗಿದ್ದರಿಂದ ಪುರುಷ ಬೊಂಬೆಗೆ ಮುದ್ದಪ್ಪ, ಸ್ತ್ರೀ ಬೊಂಬೆಗೆ ಮುದ್ದವ್ವ ಎಂದು ಹೆಸರನ್ನಿಟ್ಟು ಅವರಿಗೆ ನೀವು ಈ ಭೂಮಿಯಲ್ಲಿನ ಸಕಲ ಪ್ರಾಣಿಗಳನ್ನು ಕಾಪಾಡಿರಿ ಎಂದು ಹೇಳಿ ಅವರನ್ನು ದಂಪತಿಗಳಾಗಿಸಿ ಕೈಲಾಸಕ್ಕೆ ಹಿಂತಿರುಗಿದರು. ಈ ದಂಪತಿಗಳಿಗೆ ಆದಿಗೊಂಡನೆಂಬ ಮಗನು ಜನಿಸಿದನು. ಆದಿಗೊಂಡನಿಗೆ ಅಮಗೊಂಡ, ಶಿವಗೊಂಡ, ಬೀರಗೊಂಡ, ಮಾರಗೊಂಡ, ಮುದ್ದುಕೊಂಡ, ಪದ್ಮಗೊಂಡ, ಹೀಗೆ ಮಂದಿ ಮಕ್ಕಳು.

ಶಿವನಾಜ್ಞೆಯಂತೆ ಕುರಿಕಾಯುವ ವೃತ್ತಿ ಕೈಗೊಂಡು ಕುರುಬ ಸಮುದಾಯದ ಹುಟ್ಟಿಗೆ ಕಾರಣನಾದ ಶಿವಪದ್ಮ (ಉಂಡಾಡಿ ಪದ್ದಣ್ಣ) ಇವರಿಂದ ಮುಂದೆ ಕಾಲಾಂತರದಲ್ಲಿ ಹಾಲುಮತದಲ್ಲಿ ಎರಡು ಬಣಗಳಾದವು. "ಮೊದಲನೆಯದು ಹತ್ತಿಕಂಕಣವೆಂದೂ, ಎರಡನೆಯದು ಉಣ್ಣೆಕಂಕಣ ವೆಂದು, ಇಬ್ಭಾಗವಾಗಿ, ಈಗಲೂ ತುಂಬಾ ಊರ್ಜಿತ ಸ್ಥಿತಿಯಲ್ಲಿರುವುದು."[೧೦] ಈ ಹಾಲುಮತದ ಮೂಲಕ್ಕೆ ಇನ್ನೊಂದು ಕಥೆ ಇದೆ. ಒಮ್ಮೆ ಶಿವನ ಒಡ್ಡೋಲಗದಲ್ಲಿ ಒಂದು ಕೈಯಿಂದ ಶಿವನಿಗೆ ನಮಸ್ಕರಿಸಿದ ಭೃಂಗಿಯನ್ನು ಪಾರ್ವತಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಭೃಂಗಿಗೆ ಮರಿ ಮಾಂಸ ಗಳಿಗೆ ತಾನು ಕಾರಣಳೆಂದು ಹೇಳಿ, ಅವನ ಮಾಂಸವನ್ನು ತಿರುಗಿ ಪಡೆದಾಗ ಜೋತಾಡುತ್ತಾನೆ. ಅದಕ್ಕೆ ಭೃಂಗಿಯು ಶಿವನ ಸ್ತುತಿಗೈದಾಗ ತನ್ನ ತ್ರಿಶೂಲವನ್ನು ನೀಡುವ ಭಕ್ತ ರಕ್ಷಕನೆಂಬ ಬಿರುದನ್ನು ಉಳಿಸಿಕೊಳ್ಳುತ್ತಾನೆ. ಇದರಿಂದ ಪಾರ್ವತಿಗೆ ಅಪಮಾನವಾಗಿ ನೆರೆದವರ ಹಾಸ್ಯಕ್ಕೆ ಗುರಿಯಾಗುತ್ತಾಳೆ. ಕೋಪಗೊಂಡ ಪಾರ್ವತಿಯು ಮುಂದೆ ನಕ್ಕವರು ಕುರಿಗಳಾಗಿ, ಹಿಂದೆ ನಕ್ಕವರು ಮೇಕೆಗಳಾಗಿ ಭೂಲೋಕದಲ್ಲಿ ಜನಿಸಿರೆಂದು ಶಾಪ ಕೊಡುತ್ತಾಳೆ. ಹೀಗೆ ಕುರಿ–ಮೇಕೆಗಳನ್ನು ಸರದಿಯಂತೆ ದೇವಾನುದೇವತೆಗಳು ತ್ರಿಮೂರ್ತಿಗಳು ಕೆಲಕಾಲ ಕಾಯುತ್ತಾರೆ. ಕೊನೆಗೆ ಪಾರ್ವತಿಯ ಸರದಿ ಬರುತ್ತದೆ. ಕೆಲ ಕಾಲ ಕಾಯ್ದು ಬೇಸತ್ತು ಬಂದು ಗವಿಯಲ್ಲಿ ಅವನನ್ನು ಕೂಡಿಟ್ಟು ಬಾಗಿಲು ಮುಚ್ಚಿ ಬಾಗಿಲು ಕೊಂಡಿಗೆ ಮೂಗುತಿಯನ್ನು ಸಿಕ್ಕಿಸಿ ಕೈಲಾಸಕ್ಕೆ ಹಿಂತಿರುಗುತ್ತಾಳೆ. ಕೆಲ ಕಾವ್ಯಗಳಲ್ಲಿ ಹುತ್ತದಲ್ಲಿ ಕುರಿಗಳನ್ನು ಹುದುಗಿಸಿ ಮೂಗುತಿಯನ್ನು ಸಿಕ್ಕಿಸಿದ ಪ್ರಸ್ತಾಪವನ್ನು ಕಾಣಬಹುದು. ಮೂಗುತಿ ಮುತ್ತಲ ಗಿಡವಾಗಿ ಬೆಳೆಯುತ್ತದೆ. "ಈ ಭೂಮಿಯು ಆದಿಗೊಂಡನಿಗೆ ಸೇರಿದ್ದಾಗಿತ್ತು. ಆತನಿಗೆ ಆರು ಜನ ಮಕ್ಕಳಿದ್ದರು. ಕೊನೆಯವನು ಉಂಡಾಡು ಪದ್ಮಣ್ಣ (ಶಿವಪದ್ಮ) ಸಹೋದರರ ಒತ್ತಾಯಕ್ಕೆ ಮಣಿದು ಹೊಲ ಹಸನು ಮಾಡುತ್ತಿರುವಾಗ, ಹೊಲದಲ್ಲಿದ್ದ ಮುತ್ತಲ ಗಿಡವನ್ನು ಕಡಿದಾಗ ಅದರಡಿಯಿದ್ದ ನೂರಾರು ಕುರಿಗಳು ಹೊರ ಬರುತ್ತವೆ. ಇಷ್ಟೊಂದು ಕರಿಮೈಯ್ಯ ವಿಚಿತ್ರ ಪ್ರಾಣಿಗಳನ್ನು ಕಂಡ ಪದ್ಮಣ್ಣ ಓಡುತ್ತಾನೆ. ಶಿವ ಪ್ರತ್ಯಕ್ಷನಾಗಿ ಪದ್ಮಣ್ಣನಿಗೆ ಕುರಿ ಕಾಯುವ ವೃತ್ತಿಯನ್ನು ಕೈಗೊಳ್ಳಬೇಕೆಂದು ಹೇಳುವುದಲ್ಲದೆ ಆತನ ರಕ್ಷಣೆಗೆ ಬೀರೇಶ್ವರನನ್ನು ಕಳುಹಿಸಿ ಕೊಡುತ್ತಾನೆ. ಹೀಗೆ ಪದ್ಮಣ್ಣ ಕುರುಬರ ಮೂಲ ಪುರುಷನಾದರೆ ಆತನ ಕುರಿಗಳ ರಕ್ಷಣೆಗಾಗಿ ಭೂಮಿಯಲ್ಲಿ ಅವತರಿಸಿದ ಬೀರೇಶ, ಬೀರದೇವರಾಗಿ ಕುರುಬರಿಂದ ಪೂಜಿಸಲ್ಪಡುತ್ತಿದ್ದಾನೆ."[೧೧]

ಹಾಲುಮತ ಮೂಲವೇ ಒಂದು ಪೌರಾಣಿಕ ಹಿನ್ನೆಲೆಯಲ್ಲಿಯೇ ಹುಟ್ಟಿದೆ. ಅದು ಅಲ್ಲದೆ ಹಾಲುಮತದಲ್ಲಿ ನಡೆದ ತಗರಿನ ಪವಾಡವು ಒಂದು ಚಾರಿತ್ರಿಕ ಪುರಾಣವಾಗಿದೆ. ಈ ಒಂದು ಕಥೆಯು ಕೊಲ್ಲಾಪುರ, ತೊಗರಸೆ, ಕಲಸೆನಾಡು, ಸರೂರು ಎಂಬ ಊರುಗಳಲ್ಲಿ

ನಡೆದಿರಬೇಕೆಂಬುದು ಕೆಲವರ ಅಭಿಪ್ರಾಯವಾಗಿದೆ. ರೇವಣಸಿದ್ಧರು ಕೊಲ್ಲಾಪುರ, ಮಾಯೆಯನ್ನು ಸೋಲಿಸಿದನೆಂಬ ಇಲ್ಲಿಯ ಘಟನೆ ವೀರಶೈವ ಬೇರೆ ಕಾವ್ಯಗಳಲ್ಲಿ ಮತ್ತೆ ಮತ್ತೆ ಬಂದಿದೆ. ಶಾಂತಯ್ಯನ ತಂದೆ ಪದುಮಣ್ಣ, ಅಜ್ಜ ಆದಿಗೊಂಡ ಇವರ ಊರು ತೊಗರೆಸೆಯೆಂದು ಈ ಕೃತಿ ಹೇಳುತ್ತದೆ. ಇದು ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಆಗಿರಬಹುದು. ರೇವಣಸಿದ್ಧ ಕುರಿಹಿಂಡನ್ನು ಕಾಯಲು ಅಷ್ಟ ದೇವತೆಗಳಿಗೆ ಒಪ್ಪಿಸಿ ಕಲಶವುಯೆಂಬೋ ದೇಶದೊಳತ್ತರಕಾಗಿ ನಡೆದನು" ಎಂದು ಹೇಳಲಾಗಿದೆ. "ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಇಂದಿನ ನಾಡಕಲಸಿ ಗ್ರಾಮವನ್ನು ರಾಜಧಾನಿ ಮಾಡಿಕೊಂಡ ಕಲಸೆ ನಾಡು ಹೆಸರಿನ ಸಣ್ಣ ರಾಜ್ಯವೊಂದು ಅಸ್ತಿತ್ವದಲ್ಲಿತ್ತೆಂದು ಶಾಸನಗಳು ತಿಳಿಸುತ್ತವೆ. ೧೩ನೆಯ ಶತಮಾನದಲ್ಲಿ ಹೊಯ್ಸಳರ ಮಾಂಡಳಿಕನಾಗಿ ಬೀರದೇವರನು ಇದನ್ನೇ ಆಳುತ್ತಲಿದ್ದ. ಈ ಹೆಸರು ಕುರುಬರ ದೈವತ್ವ ಬೀರಪ್ಪನನ್ನು ನೆನಪಿಸುತ್ತದೆ. ಇಲ್ಲಿ ಮಲ್ಲಿಕಾಜುನ ದೇವಾಲಯವಿದೆ. ಮುದ್ದೇಬಿಹಾಳ ನೆರೆಯ ಸರೂರಿನವರೂ ಮಲ್ಲಿಕಾರ್ಜುನ ದೇವಾಲಯವೆಂಬುದನ್ನು ಇಲ್ಲಿ ಸ್ಮರಿಸಬಹುದು." ತಂದೆ ಪದುಮಣ್ಣನಿಂದ ಬೇರೆಯಾಗಿ, ಹೆಂಡತಿಯೊಂದಿಗೆ ಕುರಿಹಿಂಡು, ಸಹಿತ ಹೊರಟ. ಶಾಂತಯ್ಯನಿಗೆ ಭಕ್ತಿ ಕಾಣಿಕೆಯಾಗಿ ಚಕೋರಿ ಹೊಳೆಯ ತೀರದಲ್ಲಿ ದೇವಾಲಯ ನಿರ್ಮಿಸಲಾಯಿತ್ತೆಂದೂ, ಇಲ್ಲಿ ಶಿವನಿಂದ ಶಾಂತಯ್ಯನಿಗೆ ದೀಕ್ಷೆ ಪ್ರಾಪ್ತವಾಯಿತೆಂದೂ, ಆಗ ದೇವಲೋಕದಿಂದ ಸುರಿದ ಕರಿಯ ಮಲ್ಲಿಗೆಯಿಂದಾಗಿ ಸರೂರು ಎಂಬ ಗ್ರಾಮ ನಿರ್ಮಾಣವಾಯಿತೆಂದೂ ಹೇಳಲಾಗಿದೆ. ಇದು ಇಂದಿನ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮವೆಂದು ಖಚಿತವಾಗಿದೆ. ಹೀಗೆ ಶಾಂತಯ್ಯನ ಗ್ರಾಮವಾಗಿರುವುದರಿಂದ ಕಾವ್ಯದ ತುಂಬ ಇದು ಮುಖ್ಯ ಪಾತ್ರವಹಿಸಿದೆ. ಈ ಗ್ರಾಮದ ಶಾಸನಗಳಲ್ಲಿ ಮುರ್ನಾಲ್ಕು ಕಡೆಗೆ ಮಂಕಯ್ಯ ಎಂಬ ಹೆಸರು ಕಾಣುವುದೇ ಹೊರತು, ಶಾಂತಮುತ್ತಯ್ಯನ ಹೆಸರು ಕಾಣುವುದಿಲ್ಲವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಇವನನ್ನು ಬಿಟ್ಟರೆ ಶಾಂತಯ್ಯನ ಅಜ್ಜ ಆದಿಗೊಂಡ, ಅಜ್ಜಿ ಮಲ್ಲಮ್ಮ, ತಂದೆ ಪದುಮಗೊಂಡ, ತಾಯಿ ಲಿಂಗಾಜಮ್ಮ, ಲಿಂಗಾಜಮ್ಮನ ತಂದೆ ಬಾದಾಮಿ ಬಪ್ಪನಿಗೌಡ ಹೆಂಡತಿ ಪರವಿಗೊಂಡನ ಮೊಮ್ಮಗಳು ದೇವಮ್ಮ ಇತ್ಯಾದಿ ಹೆಸರುಗಳು ಇಲ್ಲಿ ಎಡೆಪಡೆದಿವೆ. ಕಲ್ಯಾಣಕ್ಕೆ ಬಂದ ಸಿದ್ಧಶೆಟ್ಟಿ ಮಲ್ಲ ಶೆಟ್ಟಿಗಳು ತಾವು ಕಡೆವಾಡದವರೆಂದು ಹೇಳುತ್ತಾರೆ. ಇದು ಇಂದಿನ ಕಾಕವಾರವಾಗಿದೆ. ಇಲ್ಲಿ ಗಮನಿಸಬೇಕಾದ ಇತರ ಅಂಶಗಳೆಂದರೆ ಶಾಂತಯ್ಯನ ಹತ್ತಿರ ಬಂದ ಗೌಡರು ಮತ್ತು ಅವರು ಊರುಗಳು "ದಡ್ಡೋಡಿನ ಹೆಗ್ಗೊಂಡಗೌಡ, ಊದುಗಿರಿಯ ಕೇಶತಗೌಡ, ಚನ್ನವಾಡದ ಹೆಗ್ಗೊಂಡಗೌಡ, ಸೊನ್ನಲಿಗೆ ಕೆಂಪೆಗೌಡ, ಕಾಮನ ಹಳ್ಳಿಯ ಕರಿಯ ತಿಮ್ಮೇಗೌಡ, ಅಂಕವಳ್ಳಿಯ ಆದಿಗೊಂಡು ಬಂಕಾಪುರದ ಭದ್ರಗೌಡ , ಶಂಕರಪುರದ ರಾಮಣ್ಣ (೬-೩೮ ರಿಂದ ೪೨ ಇವುಗಳಲ್ಲಿ ಕೆಲವಾದರೂ ಐತಿಹಾಸಿಕ ಹೆಸರುಗಳಾಗಿರಬಹುದು)."

೭.೨. ಧಾರ್ಮಿಕ ನೆಲೆ

ಭಾರತೀಯರ ಬದುಕಿನಲ್ಲಿ ಧರ್ಮ. ಅವಿಭಾಜ್ಯ ಅಂಗವಾಗಿದೆ. ಒಂದು ಸಮುದಾಯದ ಧರ್ಮದ ವಿಚಾರಗಳನ್ನು ತಿಳಿಯುವುದೆಂದರೆ, ಆ ಸಮುದಾಯವನ್ನು ತಿಳಿಯಲು ಪ್ರಯತ್ನ ಪಡುವುದಾಗಿದೆ. ಭಾರತೀಯರಿಗೆ ಧರ್ಮವೇ ಪ್ರಧಾನವಾಗಿ ಕಂಡುಬರುತ್ತದೆ. ನಮ್ಮವರು ಧರ್ಮವನ್ನು ಅಚರಣೆಯ ಒಂದು ಭಾಗವಾಗಿ ಅದನ್ನು ಸ್ವೀಕರಿಸುವ ಬದಲು ಇಡೀ ಜೀವನದಲ್ಲಿಯೇ ಅದನ್ನು ಸ್ವೀಕರಿಸಿ ಬದುಕುತ್ತಾರೆ.

ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ಸಮುದಾಯದಲ್ಲಿ ಒಂದಾದ ಕುರುಬರು ಸಹ ಧರ್ಮ ಆಚರಣೆಗಳನ್ನು ತಮ್ಮ ಬದುಕಾಗಿಯೇ ಸ್ವೀಕರಿಸಿದ್ದಾರೆ. ಇಲ್ಲಿ ಕುರುಬರ ಧಾರ್ಮಿಕ ವಿಚಾರಗಳನ್ನು ತಿಳಿಯುವದೆಂದರೆ, ಅವರ ಬದುಕನ್ನೇ ಅರಿಯಬಹುದಾಗಿದೆ. ಧರ್ಮ ಎನ್ನುವುದು ಆಚಾರ-ವಿಚಾರ, ದೈವ-ಧರ್ಮ, ಪೂಜೆ-ಪುನಸ್ಕಾರ, ಸಂಪ್ರದಾಯ-ಪದ್ಧತಿ ಮುಂತಾದವುಗಳನ್ನೆಲ್ಲ ಒಳಗೊಂಡಿರುತ್ತದೆ. ಈ ಎಲ್ಲ ಅಂಶಗಳನ್ನು ಹಾಲುಮತ ಸಮುದಾಯವು ಒಳಗೊಂಡಿದೆ. ದೈವ ಆಚರಣೆಗಳನ್ನು ಮೂಲ ಸಂಸ್ಕೃತಿಯಾಗಿ ಬದುಕುತ್ತಿದ್ದಾರೆ. ಇವರು ದೇವರನ್ನು ಬಿಟ್ಟು ಬದುಕಲು ಆಗದೆ ಇರುವವರು. ತಮ್ಮ ದಿನನಿತ್ಯದ ಪ್ರತಿಯೊಂದು ಘಳಿಗೆಯಲ್ಲಿಯೂ ದೇವರನ್ನು ನೆನೆಯದೆ ಜೀವಿಸಲಾರರು.

ಹಾಲುಮತ ಸಮುದಾಯಗಳು ಬೆಟ್ಟ-ಗುಡ್ಡಗಳಲ್ಲಿ ಅಲೆಮಾರಿಯಾಗಿ ಪಶುಪಾಲನೆ, ಕುರಿಸಾಗಾಣಿಕೆ ಮಾಡುತ್ತ ತಮ್ಮ ಬದುಕನ್ನು ಕಟ್ಟಿಕೊಂಡಿದೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆಮಾರಿಯಾಗಿ ಜೀವಿಸುತ್ತಾ ಕುಲಗುರು ರೇವಣ್ಣಸಿದ್ಧನೊಂದಿಗೆ, ಕುಲ ದೈವವಾದ ಬೀರಪ್ಪನನ್ನು ಪೂಜಿಸುತ್ತ, ಶತಮಾನಗಳಿಂದಲೂ ತನ್ನದೇ ಆದ ಗುರುತುಗಳನ್ನು ಜನಪದೀಯವಾಗಿ, ಜಾಗತೀಕವಾಗಿ ತನ್ನ ಮೂಲತ್ವವನ್ನು, ಸಂಸ್ಕೃತಿಯನ್ನು ಬಿಡದೇ ಅನುಸರಿಸಿಕೊಂಡು, ತನ್ನ ಸಮುದಾಯದ ಆಚಾರ-ವಿಚಾರಗಳನ್ನು ಉನ್ನತ ಮಟ್ಟಕ್ಕೇರಿಸಿಕೊಂಡಿವೆ.

ಕುರುಬರ ಧಾರ್ಮಿಕ ವಿಚಾರಗಳು ಅವರ ನಂಬಿಕೆಯ ದೇವರುಗಳೊಂದಿಗೆ ವ್ಯಾಪಿಸಿ ಕೊಳ್ಳುತ್ತವೆ. ಹಾಲುಮತದ ದೈವಗಳೆಂದರೆ ಬೀರಪ್ಪ, ಮಾಳಿಂಗರಾಯ, ಕರಿಸಿದ್ದ, ರೇವಣಸಿದ್ಧ, ಮಾಯವ್ವ ಮೊದಲಾದವರು. ಇವರುಗಳ ಅನುಭವಾತ್ಮಕ ಕಥಗಳನ್ನು ಪುರಾಣಗಳಲ್ಲಿ ಕಾಣುತ್ತೇವೆ. ನಮ್ಮ ಪ್ರಾಚೀನರು ಪಂಚಭೂತಗಳನ್ನು ದೇವರೆಂದು ಪೂಜಿಸಿಕೊಂಡು ಬಂದಿದ್ದಾರೆ. ಮಾನವ ಎಷ್ಟೇ ಆಧುನಿಕರಣ ಜಗತ್ತಿನಲ್ಲಿ ಬದುಕಿದರು ಪ್ರಕೃತಿಯನ್ನು ಬಿಟ್ಟು ಬದುಕಲು ಅಸಾಧ್ಯ. ಹಾಗಾಗಿ ಪ್ರಕೃತಿ ಮತ್ತು ಮಾನವನ ಸಂಬಂಧ ನಿಕಟವಾದುದು. ಒಂದು ಬಿಟ್ಟು ಒಂದು

ಬದುಕಲು ಸಾಧ್ಯವಿಲ್ಲ. ಮಾನವ ತನ್ನ ಬದುಕನ್ನು ಸಾಧಾರಣವಾಗಿ ಅಲ್ಲದೆ ಮೌಲ್ಯಾಧಾರಿತವಾಗಿ ಸಾಗಿಸಿಕೊಂಡು ಬಂದಿದ್ದಾನೆ. ಪ್ರದೇಶದಿಂದ-ಪ್ರದೇಶಕ್ಕೆ, ಮತ-ಮತಕ್ಕೆ ಮೌಲ್ಯಗಳು ಬದಲಾಗುತ್ತವೆ. ಸಂಪ್ರದಾಯಗಳನುಸಾರವಾಗಿ ಒಂದೊಂದು ಧರ್ಮ, ಒಂದೊಂದು ರೀತಿಯ ಆಚರಣೆಯನ್ನು ಅನುಸರಿಸುತ್ತವೆ. ಕೆಲವರು ಸಲ್ಲೇಖನ ವ್ರತ, ಉಪವಾಸದ ವ್ರತ, ಉಪಾಸನೆ ಮೂಲಕ ದೇವರನ್ನು ಆರಾಧನೆ ಮಾಡುತ್ತಾರೆ. ಸಮಾಜದಲ್ಲಿ ವೃತ್ತಿಗನುಗುಣವಾಗಿಯೂ ಆರಾಧನೆ ಮಾಡುತ್ತಾರೆ. ಆರಾಧನೆಯಲ್ಲಿ ಬರುವ ವಿಧಿ-ವಿಧಾನಗಳು, ಬದಲಾಗುತ್ತಿರುತ್ತವೆ. ಶಿವನ ಆರಾಧನೆಯಲ್ಲಿ ಹಾಲುಮತದವರು ಪ್ರಮುಖರಾಗಿದ್ದಾರೆ. ವೀರಶೈವರಂತೆಯೇ ಇವರು ಇಷ್ಟಲಿಂಗಧಾರಿಗಳಾಗಿದ್ದಾರೆ. ಕುರುಬರು ಧಾರ್ಮಿಕವಾಗಿ ಕಂಬಳಿಯನ್ನು ದೈವ ಸ್ವರೂಪ ವಸ್ತುವಾಗಿ ಪೂಜಿಸುತ್ತಾರೆ. ಕುರುಬರು ಕುರಿಕಾಯುವ ಕಾಯಕದಲ್ಲಿಯೇ ದೇವರನ್ನು ಕಂಡು ತಮ್ಮ ಜೀವನದಲ್ಲಿ ಬೆಳಕನ್ನು ಕಾಣುತ್ತಾರೆ.

ಹಾಲುಮತ ಪುರಾಣಗಳಲ್ಲಿ ವ್ಯಕ್ತವಾಗುವ ಪವಾಡ ಕತೆಗಳು ಜನಮಾನಸದಲ್ಲಿ ಹಾಸು ಹೊಕ್ಕಾಗಿ ಅವರು ತಮ್ಮ ಬದುಕನ್ನು ಪ್ರೀತಿಸುವ, ಪ್ರಕೃತಿ ಜೊತೆಗೆ ಹೊಂದಿಕೊಳ್ಳುವ, ಜೀವನ ದಲ್ಲಿ ಬದಲಾವಣೆಯನ್ನು ತಂದುಕೊಳ್ಳುವ ಹಾದಿಯನ್ನು ಹುಡುಕುತ್ತಾರೆ. ಈ ಹಾದಿಯಲ್ಲಿ ಧಾರ್ಮಿಕ ನೆಲೆಯಾದ ಆಚಾರ-ವಿಚಾರ ಸಂಗತಿಗಳನ್ನು ಗೌರವಿಸುವ ಆರಾಧಿಸುವ ಜನರು ನಮ್ಮ ಮಧ್ಯದಲ್ಲಿ ಹುಟ್ಟಿಕೊಂಡರು. ಹೀಗೆ ಗೌರವಿಸುವ ಜನರೊಂದಿಗೆ ಕೆಲವು ಮೌಲ್ಯಗಳು ಧರ್ಮದಲ್ಲಿ ಬದಲಾವಣೆ ತಂದವು. ಹಾಗೆಯೇ ಹಾಲುಮತದಲ್ಲಿ ಧಾರ್ಮಿಕವಾಗಿ ಕೆಲವು ಮೌಲ್ಯಗಳು ಪ್ರಸಾರಗೊಂಡಿವೆ.

ಧಾರ್ಮಿಕ ನೆಲೆಗಳಲ್ಲಿ ಒಂದಾದ ಶಿವದೀಕ್ಷೆ ಹಾಲುಮತದವರಲ್ಲಿ ಇರುವಂತಹ ಒಂದು ಅತ್ಯುತ್ತಮವಾದಂತಹ ದೀಕ್ಷೆ ಎನ್ನಬಹುದು. ಸಾಮಾನ್ಯವಾಗಿ ಹಾಲುಮತದವರು ಶಿವನ ಕೃಪೆಯಿಂದ ಜನಿಸಿದವರು ಎಂಬ ಸಂಗತಿ ಇದೆ. ಇವರು ಹುಟ್ಟಿನೊಂದಿಗೆ ಶಿವದೀಕ್ಷೆಯನ್ನು ಪಡೆದುಕೊಂಡು ಬಂದಿರುವರು ಎಂದು ಹೇಳುತ್ತಾರೆ. ಆದರೆ ವೀರಶೈವರಲ್ಲಿ ಲಿಂಗ ದೀಕ್ಷೆಗೆ ಇರುವಷ್ಟು ಮಹತ್ವ ಹಾಲುಮತದಲ್ಲಿ ಇಲ್ಲವೆಂದೇ ಹೇಳುತ್ತೇವೆ. ಆದರೆ ಶಾಂತಮುತ್ತಯ್ಯನ ವಿಷಯಕ್ಕೆ ಬಂದಾಗ ರೇವಣಸಿದ್ಧನಿಂದ ಲಿಂಗ(ಶಿವದೀಕ್ಷೆ)ಯನ್ನು ಪಡೆಯುತ್ತಾನೆ. ಲಿಂಗದೀಕ್ಷೆಯನ್ನು ಪಡೆದ ಮೇಲೆಯೇ ಶಾಂತಮುತ್ತಯ್ಯ ತಗರಿನ ಪವಾಡವನ್ನು ಮಾಡಿದ್ದು, ಕಲ್ಯಾಣದಿಂದ ಬಹಿಷ್ಕಾರಗೊಂಡ ಹಾಲುಮತದವರನ್ನು ಮತ್ತೆ ಕಲ್ಯಾಣಕ್ಕೆ ಬರುವಂತೆ ಮಾಡಿದ್ದು. ಇಲ್ಲಿ ವೀರಶೈವರು ಲಿಂಗಾಧಾರಿಗಳೆಂದು ತಿಳಿದು ರೇವಣರು ಅವರಿಗೆ ಸರಿಸಮಾನವಾಗಲೆಂದು ಶಿವದೀಕ್ಷೆ ನೀಡಿರಬೇಕು.

ಭವಿತನದಿಂದ ಭಕ್ತಿತ್ವಕ್ಕೆ ಭರಿಸುವ ಒಂದು ಸಂಸ್ಕಾರ. ದೈಹಿಕ ದೋಷಗಳನ್ನು ಕಳೆದು ಶುದ್ಧವಿಸಿ ಅಂಗವನ್ನಾಗಿಸುವ ಕ್ರಿಯೆ. ಜೀವ-ಭಾವವನ್ನು ತೊಲಗಿಸಿ ಲಿಂಗವನ್ನಾಗಿಸುವ ವಿಧಾನ ಪ್ರಾಕೃತತೆಯಿಂದ ಅಪ್ರಾಕೃತತೆಗೆ ರೂಪಾಂತರಿಸುವ ಪ್ರಕ್ರಿಯೆ ಮಾಸಪಿಂಡವನ್ನು ಮಾರ್ಪಡಿಸಿ ಮಂತ್ರಪಿಂಡವನ್ನಾಗಿಸುವ ಮಾಂತ್ರಿಕ ಕ್ರಿಯೆ. ಪ್ರಾಣವಿಕಾರವನ್ನಳಿಸಿ ಪ್ರಾಣವಾಕಾರವನ್ನಾಗಿಸುವ ಪ್ರವಿಧಿ, ಭಾವವನ್ನು ಶುದ್ಧವಿಸಿ ಭ್ರಾಂತಿಯನ್ನು ಭಾವೋತ್ಕಟತೆಯನ್ನುಂಟು ಮಾಡಿ ಭಾವುಕರನ್ನಾಗಿಸುವ ಭೂಮಕ್ರಿಯೆ. ದೃಷ್ಟಿಗೆ ದೂರದರ್ಶಿತ್ವವನ್ನು ತರುವ ದೀಪ್ತಸಂಸ್ಕಾರ, ತ್ರಿವಿಧಾಂಗಗಳನ್ನು ಪರಿಷ್ಕರಿಸಿ ಅಂತಶ್ಚೇತನವನ್ನು ಅವಿಷ್ಕರಿಸುವ ಅಭಿಜಾತವ್ರತ. ಅನನ್ಯ ಪ್ರತಿಭೆ ಶಿವಾತ್ಮ ವಿದ್ಯಾಗುರುಜೀವನ ಚಿತ್ಕಳಾಕಾರುಣ್ಯ ಎಂಬ ಅರ್ಥಗಳೂ ಇದಕ್ಕು+ಂಟು. ವೀರಶೈವ ಪರಿಭಾಷೆಯಲ್ಲಿ ದೀಕ್ಷೆ ಎಂದರೆ ಗುರುಕಾರಣ್ಯವೆಂದರ್ಥ."[೧೨]

ಶಿವದೀಕ್ಷೆ ಎನ್ನುವುದು ಸಮಾಜದಲ್ಲಿ ತುಂಬಾ ಪವಿತ್ರವಾದ ಮಹತ್ವವನ್ನು ಪಡೆದುಕೊಂಡಿದೆ. ಹಾಲುಮತದಲ್ಲಿ ಶಾಂತ ಮುತ್ತಯ್ಯನಿಗೆ

"ಲಿಂಗದೀಕ್ಷೆಯನಿತ್ತು ಕ್ಷೀರ ಕುಲಕಧ್ಯಕ್ಷ
ನಂಗೊಳಿಸಿ ಗುರು ಕಂಕಣವಧರಿಸಿ ಕರಕೆ ಘನ
ಕಂಗೊಳಿಪ ತೆರದಿ ಪಟ್ಟವಗಟ್ಟಿ ಗುರುನಾಮಶಾಸನವಗೈದು ಮತ್ತಂ"[೧೩]

ಹಾಲುಮತದ ಉದ್ಧಾರಕ್ಕಾಗಿ ರೇವಣ್ಣಸಿದ್ಧರು ಶಾಂತಮುತ್ತಯ್ಯನಿಗೆ ಶಿವದೀಕ್ಷೆಯನ್ನು ನೀಡಿದರು. ಕುಲದ ಅಧ್ಯಕ್ಷರನ್ನು ಆಯ್ಕೆಮಾಡುತ್ತ, ಕುಲಕ್ಕೆ ಶ್ರೇಷ್ಠರಾದವರಿಗೆ ದೀಕ್ಷೆಯನ್ನು ನೀಡುತ್ತಾ ಕುಲದ ಉದ್ಧಾರ ಮಾಡಲಾಗುತ್ತದೆ. ಗುರುವಿನಿಂದ ಶಿಷ್ಯನಿಗೆ ದೀಕ್ಷೆಯನ್ನು ನೀಡುತ್ತಾ ಕುಲದ ಗುರುಗಳನ್ನು ವಯೋಮಿತಿಗಳಿಗನುಸಾರವಾಗಿ ವರ್ಗಯಿಸಲಾಗುತ್ತದೆ. ಹೀಗಾಗಿ ಹಾಲುಮತದವರಲ್ಲಿ ಲಿಂಗದೀಕ್ಷೆ ಪಡೆಯುವುದು ಕಡಿಮೆಯಾಗಿದೆ. ವೀರಶೈವರಲ್ಲಿ ಇರುವಂತೆ ದೀಕ್ಷೆ ಪಡೆದು ಲಿಂಗಪೂಜೆಯನ್ನು ಮಾಡುವುದು ಕಡಿಮೆಯಾಗುತ್ತಿದೆ. ಹಾಲುಮತದಲ್ಲಿಯೇ ಗುರುಗಳೆಂದು ಕೆಲವರು ಲಿಂಗಪೂಜೆಯನ್ನು ಮಾಡುವುದು ಮಾತ್ರ ಕೆಲವೆಡೆ ಕಾಣಸಿಗುತ್ತದೆ.

ಹಾಲುಮತದಲ್ಲಿ ತಗರು ಪವಾಡವನ್ನು ಧಾರ್ಮಿಕ ನೆಲೆಯಲ್ಲಿ ನೋಡಿದಾಗ ಕುರುಬರು ಕುರಿಯನ್ನು ದೇವರಸ್ವರೂಪದಂತೆ ಪೂಜಿಸುತ್ತಾರೆ. ಕುರಿ ಕುಲದ ಗುರುತಾಗಿಯೂ ಕಂಡುಬರುತ್ತದೆ. ಕುರುಬರು ತಾವು ಜೀವನವನ್ನು ಸಾಗಿಸಲು ಕುರಿಗಳನ್ನು ಸಾಕುತ್ತಾರೆ. ಶಾಂತಮುತ್ತಯ್ಯನು ಸತ್ತ ತಗರನ್ನು ಬದುಕಿಸಿ, ಕುರುಬರ ಧರ್ಮಕ್ಕೆ ಇನ್ನಷ್ಟು ಬಲಬರುವಂತೆ ಮಾಡಿದ್ದಾರೆ. ೧೨ನೇ ಶತಮಾನದಲ್ಲಿ ನಡೆದ ಈ ಪವಾಡದಿಂದಾಗಿ ಕುರುಬರಿಗೆ ಸಮಾಜದಲ್ಲಿ ಗುರುತಿನೊಂದಿಗೆ, ಅವರ ಸ್ಥಾನಮಾನ ಉನ್ನತಮಟ್ಟಕ್ಕೇರಿದೆ. ಹಾಲುಮತದವರು ಅವರ ಹಟ್ಟಿಯಲ್ಲಿರುವ ಕುರಿಗಳನ್ನು

ಒಂದುಗೂಡಿಸಿಕೊಂಡು, ಅವುಗಳು ಹಾಕಿದ ಹಿಕ್ಕೆಯನ್ನು ಸಂಗ್ರಹಿಸಿ, ಆ ಹಿಕ್ಕೆಗೆ ಬೆಂಕಿಯನ್ನು ಹಚ್ಚಿ, ಹಾಲು ಉಕ್ಕಿಸುತ್ತಾರೆ. ಹಾಲು ಯಾವ ಕಡೆ ಉಕ್ಕುತ್ತದೆಯೋ ಆ ಕಡೆ ಕುರಿಗಳಿಗೆ ಮೇವು ಸಿಗುತ್ತದೆ ಎಂದು ಭಾವಿಸಿ, ಆ ಕಡೆ ಪ್ರಯಾಣಕ್ಕೆ ಸಿದ್ಧರಾಗುತ್ತಾರೆ. ಹೀಗೆ ಕುರಿ ಮತ್ತು ತಗರನ್ನು ಧಾರ್ಮಿಕ ನೆಲೆಯಲ್ಲಿ ಸಾಂಸ್ಕೃತಿಕವಾಗಿ ಆರಾಧಿಸಲಾಗುತ್ತದೆ.

ಹಾಲುಮತದವರೂ ಕಾಡು ಬೀಡು ನಾಡಿಗೆ ಬಂದಾಗ ಅವರು ಸಮಾಜಕ್ಕೆ ಹೊಂದಿಕೊಳ್ಳುವುದಕ್ಕೆ ಧಾರ್ಮಿಕವಾಗಿ ಕೆಲವು ಸಂಗತಿಗಳನ್ನು ತಮ್ಮಲ್ಲಿ ಅಳವಡಿಸಿಕೊಂಡರು. ಮತ ಧರ್ಮಾಚರಣೆಗಳಲ್ಲಿ ಪರಿವರ್ತನೆಗಳನ್ನು ಮಾಡಿಕೊಂಡರು. ಕರ್ನಾಟಕದಲ್ಲಿ ಬೌದ್ಧ, ಜೈನ, ವೀರಶೈವ ಮತಗಳ ಪ್ರಚಾರದಿಂದಾಗಿ, ಸಾಕಷ್ಟು ಹಿಂದುಳಿದ ವರ್ಗಗಳಿಂದ ಅನೇಕ ಅನುಯಾಯಿಗಳು ದೊರೆತರು. ಅದರಲ್ಲಿ ಕುರುಬರೂ ಒಬ್ಬರಾಗಿದ್ದರು. ಕುರುಬರ ಮೇಲೆ ಅತ್ಯಂತ ಪ್ರಭಾವ ಬೀರಿದ ಧರ್ಮವೇ ವೀರಶೈವ ಧರ್ಮ. ಇಷ್ಟಲಿಂಗ ಪರಿಕಲ್ಪನೆ ಕುರುಬ ಮತದಿಂದಲೇ ಬಂದಿದೆ ಎನ್ನುವುದಕ್ಕೆ ಇಲ್ಲೊಂದು ಲೇಖನ ಗಮನಿಸಬಹುದು.

"Their(kurubas) earliest obejects of religious worship, however appear to have been rough rounded stones which some how inspired them with a belief as representing the great superhuman powers. The weird aspect of the imposing immovable stone hills which breved the strongest storms amidst torrents of rain and flashes of lightning impressed most probably these children of nature to such an extent that mountains rocks and even smaller pieces of stones appeared to them the most appropriate representation of the deity. it may be perhaps added that such king of material is most easily set up and does not requirs any art to adjust it. This stone worship has survived among the Kurubas to the present day"[೧೪]

ಪ್ರಕೃತಿಯಲ್ಲಿ ಆಗುವ ವಿಕೋಪಗಳನ್ನು ಲೆಕ್ಕಿಸದೆ ಅಲೆಮಾರಿಯಾಗಿ ಜೀವಿಸುತ್ತಿದ್ದ ಕುರುಬರು ಬಂಡೆಗಲ್ಲಿನ ತುಂಡುಗಳನ್ನು ದೈವವೆಂದು ಭಾವಿಸಿ, ಆರಾಧನೆಯನ್ನು ಮಾಡುತ್ತಿದ್ದರು ಎಂದು ಭಾವಿಸಬಹುದು. ಮಳೆ-ಚಳಿ-ಬಿಸಿಲು ಎನ್ನದೆ ಅಲೆಮಾರಿಯಾದ ಇವರು ತಮಗಾದ ದುಃಖವನ್ನು, ಕಷ್ಟವನ್ನು ಹೇಳಿಕೊಳ್ಳಲು ತಮ್ಮ ರಕ್ಷಣೆಗಾಗಿ ಒಂದು ಶಕ್ತಿ ಬೇಕಿತ್ತು. ಆ ಶಕ್ತಿಯನ್ನು ಕಲ್ಲಿನ ಸ್ವರೂಪವನ್ನು ಲಿಂಗವೆಂದು ಭಾವಿಸಿ ಅದರೊಂದಿಗೆ ಭಕ್ತಿಯ ಭಾವನೆಯೊಂದಿಗೆ ಅದನ್ನು ತಮ್ಮ ಕೊರಳಲ್ಲಿ ಕಟ್ಟಿಕೊಂಡು ಪೂಜಿಸುತ್ತಿದ್ದರು. ಈ ಆಚಾರವು ಬರು-ಬರುತ್ತಾ

ತಾತ್ವಿಕ ಕಲ್ಪನೆಯ ಮಟ್ಟಕ್ಕೆ ಹೋಗಿ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಈ ಕಲ್ಪನೆ ವೀರಶೈವ ಧರ್ಮದಲ್ಲಿ ಹೆಚ್ಚಾಗಿರುವುದನ್ನು ಗಮನಿಸುತ್ತೇವೆ.

ವೀರಶೈವ ಧರ್ಮವು ಕುರುಬರ ಜನಾಂಗದ ಮೇಲೆ ಪ್ರಭಾವ ಬೀರಿದೆ. ಮಠಗಳಲ್ಲಿ ರೇವಣಸೂತ್ರವೆಂಬ ಧರ್ಮದಲ್ಲಿ ಪ್ರಚಲಿತವಾಗಿತ್ತು. ಕುರುಬರು ಈ ಸೂತ್ರದಂತೆ ರೇವಣ್ಣಸಿದ್ಧನನ್ನು ಗುರುಗಳಾಗಿ ಪೂಜಿಸುತ್ತಿದ್ದರು. ಇವರ ಕಥೆಯನ್ನು ಪುರಾಣಗಳಲ್ಲಿ ಕಾಣುತ್ತೇವೆ. ಹಾಲುಮತದಲ್ಲಿ ವೀರಶೈವರ ಪ್ರಭಾವ ಅತ್ಯಧಿಕವಾಗಿತ್ತು ಎಂದು ತಿಳಿಯುತ್ತೇವೆ. ಎಂ.ಎಂ.ಕಲಬುರ್ಗಿ ಅವರು "ಪ್ರಾಚೀನ ಕರ್ನಾಟಕದಲ್ಲಿ ವೈದಿಕ, ಜೈನ, ಲಿಂಗಾಯತ ಈ ಮೂರು ಸಮಾಜಗಳು ತಮ್ಮದೇ ಆದ ಸಿದ್ಧಾಂತವನ್ನು ರೂಪಿಸಿಕೊಂಡು ಧರ್ಮಗಳೆನಿಸಿವೆ. ಉಳಿದವು ಒಕ್ಕಲಿಗ, ಕುರುಬ, ಬೇಡ ಮೊದಲಾದ ಹಿಂದುಳಿದ 'ಹೊಲೆಯ ಮಾದಿಗ ಇತ್ಯಾದಿ ಅಸ್ಪೃಶ್ಯ ಸಮಾಜಗಳು ಅಂತಹ ಯಾವುದೇ ಸಿದ್ಧಾಂತಗಳನ್ನು ರೂಪಿಸಿಕೊಳ್ಳದೇ, ಪ್ರಾದೇಶಿಕ ದೇಶಿ ದೈವಗಳ ಅನುಯಾಯಿಗಳಾಗಿದ್ದು, ಕೇವಲ ಸಂಪ್ರದಾಯಗಳೆನಿಸಿವೆ"[೧೫] ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಹಾಲುಮತ ಧರ್ಮವು ಸಂಪ್ರದಾಯವಾದುದು ಎಂದು ಅಭ್ಯಸಿಸಬೇಕು. ಇಲ್ಲಿ ಬರುವ ಆಚರಣೆಗಳು, ಆಚಾರ–ವಿಚಾರಗಳು, ಪದ್ಧತಿಗಳು, ದೈವಗಳನ್ನು ಗಮನಿಸಿದಾಗ ಈ ಧಾರ್ಮಿಕ ಪರಂಪರೆಯಲ್ಲಿ ಹಲವು ಪಂಗಡಗಳಾಗಿ, ಕಾಲಾನಂತರದಲ್ಲಿ ಹಲವು ಧರ್ಮಗಳ ಪ್ರಭಾವದೊಂದಿಗೆ ಲೀನವಾಗಿರುವುದು ಕಂಡುಬರುತ್ತದೆ. ಲೀನವಾದ ಧರ್ಮಗಳಲ್ಲಿ ಹಾಲುಮತವು ಒಂದಾಗಿದೆ.

ಕೆಲ ವಿದ್ವಾಂಸರ ಅಭಿಪ್ರಾಯದಂತೆ ಹಾಲುಮತದವರ ಮೊದಲ ದೈವ ಬ್ರಹ್ಮನೆಂದು ನಂಬಲಾಗಿದೆ. ಇವರು ಬೆಟ್ಟ–ಗುಡ್ಡಗಳಲ್ಲಿ ಜೀವಿಸುತ್ತಿದ್ದ ಕಾರಣ ಪರ್ವತಪ್ಪನನ್ನು ಪೂಜಿಸ ತೊಡಗಿದರು. ಪರ್ವತಪ್ಪ, ಕಾಡಪ್ಪ, ಗುಡ್ಡಪ್ಪ, ಗಿರಿಯಪ್ಪ, ಮಲ್ಲಪ್ಪ, ಬೆಟ್ಟಪ್ಪ, ಬನದಪ್ಪ ಮುಂತಾದ ಹೆಸರುಗಳಾದ ಪರ್ವತ ಆರಾಧನೆಯನ್ನು ಸಾಬೀತುಪಡಿಸುತ್ತವೆ. ಆರ್ಯರ ಆಗಮನದ ನಂತರದ ವಿದ್ಯಮಾನಗಳನ್ನು ಗಮನಿಸಿದರೆ ಇದಕ್ಕೆ ಅನೇಕ ಪುರಾವೆಗಳು ಸಿಗುತ್ತವೆ. ಆರ್ಯರ ಆರಾಧ್ಯ ದೈವ ಇಂದ್ರನಾಗಿದ್ದಾನೆ. ಯಜ್ಞಗಳಲ್ಲಿ ಮೊದಲಿಗೆ ಮತ್ತು ಅತಿ ಹೆಚ್ಚು ಸಲ ಅರ್ಜ್ಯವನ್ನು ಸ್ವೀಕರಿಸುವ ಮೊದಲ ಹಕ್ಕು ಇವನದಾಗಿದೆ. ಇಂದ್ರನ ವೈರಿ ಪರ್ವತ ರಾಜನಾಗಿದ್ದಾನೆ. ಇಂದ್ರನು ಪರ್ವತರಾಜನ ರೆಕ್ಕೆಗಳನ್ನು ಕತ್ತರಿಸಲು ವಜ್ರಾಯುಧ ಉಪಯೋಗಿಸುವುದು ದ್ರಾವಿಡ ಮತ್ತು ಆರ್ಯರ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘರ್ಷವನ್ನು ಸೂಚಿಸುತ್ತದೆ. ಕುರುಬರ ಧಾರ್ಮಿಕ ಪರಂಪರೆಯಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಅಳಿಯ ದೈವ ಪದ್ಧತಿಯೂ ಸಹ ಈ ವಾದವನ್ನು ಹೆಚ್ಚು ಪುರಸ್ಕರಿಸುತ್ತದೆ. ಸಾಂಸ್ಕೃತಿಕ ಇತಿಹಾಸಕಾರರಾದ ಡಾ.ಶಂಬಾಜೋಶಿ, ಡಾ.ರಾಮಚಂದ್ರ ಚಿಂತಾಮಣಿ ಢೇರೆ, ಡಾ.ಗಣೇಶ

ಖೆರೆ, ಡಾ.ಎಂ.ಎಂ.ಕಲಬುರ್ಗಿ ಈ ಮಹನೀಯರೆಲ್ಲ ಅಭಿಪ್ರಾಯಪಡುವಂತೆ "ಕುರುಬರದ್ದು ಅಳಿಯ ದೈವ ಪದ್ಧತಿ. ಅಂದರೆ ಅವರು ಸ್ಥಾಪಿಸಿದ ದಕ್ಷಿಣ ಭಾರತದ ಮೂಲದೈವಗಳಾದ ಮೈಲಾರ(ಕರ್ನಾಟಕ)ದ ಮೈಲಾರಲಿಂಗ, ಜೇವೂರಿ(ಮಹಾರಾಷ್ಟ್ರ)ಯ ಖಂಡೋಬ, ಶಿಖರ ಸಿಂಗಾಣಾಪುರ(ಮಹಾರಾಷ್ಟ್ರ)ದ ಶಂಭು ಮಹಾದೇವ, ಶ್ರೀಶೈಲ(ಆಂಧ್ರ ಪ್ರದೇಶ)ದ ಮಲ್ಲಿಕಾರ್ಜುನ, ಪಂಡರಾಪುರ(ಮಹಾರಾಷ್ಟ್ರ)ದ ಇಟ್ಟಲ ಇವರೆಲ್ಲ ಹಾಲುಮತಸ್ಥರು ತಮ್ಮ ಮನೆಯ ಹೆಣ್ಣುಮಕ್ಕಳನ್ನು ಧಾರೆ ಎರೆದುಕೊಟ್ಟಿದ್ದಾರೆ. ಅದೇ ರೀತಿ ಅವೈದಿಕ ದೈವರಾದ ರುದ್ರ-ಅವರ ಹೆಂಡತಿ ಪಾರ್ವತಿ ಪರ್ವತರಾಜನ ಮಗಳು. ಆದ್ದರಿಂದಲೇ ಪರ್ವತರಾಜ ಹಾಲುಮತಸ್ಥರ ಮೊದಲ ದೈವ ಆಗಿದ್ದಾನೆ."[೧೬]

ಪರ್ವತವನ್ನು ಆರಾಧಿಸುವ ಇವರು ಅಗ್ನಿಯನ್ನು ಕುಲದೈವವೆಂದು ಪೂಜಿಸುತ್ತಾರೆ. ಕುರುಬರಲ್ಲಿ ಇಂದಿಗೂ ಅಗ್ನಿಗೆ ಸಂಬಂಧಿಸಿದ ಗೋತ್ರವಿರುವುದನ್ನು ಕಾಣುತ್ತೇವೆ.(ಕೊಳ್ಳಿ) ಅಗ್ನಿಯ ವಾಹನ ಟಗರು. ಆದ್ದರಿಂದ ಟಗರನ್ನು ತಮ್ಮ ಕುಲದ ಶ್ರೇಷ್ಠ ಪ್ರಾಣಿಯೆಂದೇ ಪೂಜಿಸುತ್ತಾರೆ. ಹಾಲುಮತಸ್ಥರಲ್ಲಿ ಇಂದಿಗೂ ಅಗ್ನಿಯನ್ನು ಪೂಜಿಸುವುದನ್ನು ಕಾಣುತ್ತೇವೆ.

ಕುರುಬರಿಗೆ ಟಗರು-ಕುರಿ, ಕೇವಲ ಸಾಕು ಪ್ರಾಣಿಯಲ್ಲ. ಇದು ಅವರ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಮಹತ್ವದಾಗಿದೆ. ಕುರಿಗಳನ್ನು ಸಾಕುವುದು ತುಂಬಾ ಕಷ್ಟದ ಕೆಲಸ. ಅವು ನಿಂತಲ್ಲಿ ನಿಲ್ಲುವುದಿಲ್ಲ, ಚಂಚಲಸ್ವಭಾವ ಉಳ್ಳವು. ಹಾಗಾಗಿ ಇವುಗಳ ಸಾಗಾಣಿಕೆಯಲ್ಲಿ ತಾಳ್ಮೆಯು ಅಧಿಕವಿರಬೇಕೆಂದು ತಿಳಿಯುತ್ತದೆ. ಹಾಲುಮತದಲ್ಲಿ ಕುರಿಯ ಚರಿತ್ರೆಯನ್ನು ತಿಳಿಯುವ ಒಂದು ಪುರಾಣವಿದೆ. ಶಾಂತಮುತ್ತಯ್ಯ ಪವಾಡದೊಂದಿಗೆ ಟಗರ ಪವಾಡವೆಂದೆ ಕುರುಬರಲ್ಲಿ ಪ್ರಮುಖವಾಗಿ ಕಂಡು ಬಂದಿದೆ. ಕಲ್ಯಾಣದಿಂದ ಬಹಿಷ್ಕರಿಸಿದ ಕುರುಬರನ್ನು ಸತ್ತ ಟಗರನ್ನು ಬದುಕಿಸಿ, ಟಗರ ಪವಾಡವನ್ನು ಗೈದ ಶಾಂತಮುತ್ತಯ್ಯನಿಂದ ಟಗರಿನ ಮಹತ್ವ, ಸಮಾಜದಲ್ಲಿ ಅದಕ್ಕಿರುವ ಸ್ಥಾನ-ಮಾನಗಳನ್ನು ಪುರಾಣಗಳಲ್ಲಿ ಕಾಣುತ್ತೇವೆ.

"ಕುಲಕ್ಕೆ ದೊಡ್ಡವನಲ್ಲ ಕುಲಕೆ ಮೀರಿದೆನಲ್ಲ
ಕುಲಕ್ಕಿಂತ ಅಧಿಕ ನಾನಲ್ಲ
ಕುಲವೆಂಬುದು ತನ್ನ ಫಲ ಬಿರದೆನುತಲಿ
ಕುಲವನೆತ್ತಿದನು ಶಾಂತಯ್ಯ"

ಬಸವಣ್ಣನವರು ಶಾಂತಮುತ್ತಯ್ಯನನ್ನು ಕುಲದ ಗುರುವಾಗಲೆಂದು ಹೇಳಿ, ಗುರುವಿನ ಮಹತ್ವವನ್ನು ಹೇಳುತ್ತಾರೆ. ಹಾಗೆಯೇ ಟಗರ ಪವಾಡವನ್ನು ಗೈದ ಮುತ್ತಯ್ಯನಿಗೆ ಮೂರೇಣಿನ ಕಥೆಯನ್ನು ನೀಡುತ್ತಾರೆ. ಅದು ಟಗರಿನ ಪವಾಡದಲ್ಲಿ ಹೀಗಿದೆ.

"ಕ್ಷೀರ ಕುಲಕೆ ಎನ್ನ ಒಡೆಯನ ಮಾಡಿದೆ
ಕುರುಹು ಯಾವುದು ಎನ್ನ ಗುರುವೆ
ಮೂರು ಲೋಕಕೆ ಪ್ರಜ್ವಲಿತಹ ಕುಲವೆಂದು
ಮೂರೇಣಿನ ಕಂಥೆಯನಿತ್ತ"

ಹಾಲುಮತದಲ್ಲಿ ವಿಶಿಷ್ಟತೆಯನ್ನು ಪಡೆದುಕೊಂಡ ಮೂರಣಿಯ ಕಂತೆ ಎನ್ನುವ ಪದವು ಕಂಬಳಿ ಎಂದು ಬಳಕೆಯಾಗಿರುವ ಸಂದರ್ಭಗಳಿವೆ. ಕಂತೆ ಎನ್ನುವ ಪದಕ್ಕೆ ಶೈವ ಸನ್ಯಾಸಿಗಳು ಧರಿಸುವ ವಸ್ತ್ರ ಎಂಬರ್ಥಗಳಿವೆ. "ಕಂಬಳಿಯೆನ್ನುವ ಪದ ಮೂಲತಹ ಸಂಸ್ಕೃತದ 'ಕಂಬಲ್' ರೂಪದಿಂದ ಬಂದುದು. ಕಂಬಳೀಯೆನ್ನುವುದು ಕನ್ನಡಕ್ಕೆ ತದ್ಭವ ಪದ. ಕಂಬಲ್ ಎಂದರೆ ಶಾಲು, ಉಣ್ಣೆಯಿಂದ ತಯಾರಾದ ಬಟ್ಟೆ, ಹೊದೆಯುವ ವಸ್ತ್ರ ಎಂಬ ಅರ್ಥ. ಸಂಸ್ಕೃತ ನಿಘಂಟುವಿನಲ್ಲಿದೆ. ಅದರಲ್ಲಿಯೇ ಕಂಬಲಿಕಾ ಎಂದರೆ ಸಣ್ಣ ಕಂಬಳಿ. ಕಂಬಲಿನ್ ಎಂದರೆ ಕಂಬಳಿಯನ್ನು ಧರಿಸುವವ ಎಂಬರ್ಥಗಳಿವೆ"[೧೭] ಹಾಲುಮತ ಪುರಾಣಗಳಲ್ಲಿ ಕಂಬಳಿ(ಕಂತೆ)ಯ ಕುರಿತು ಚರಿತ್ರೆಯನ್ನು ಕಟ್ಟಿಕೊಂಡ ವಿಶಿಷ್ಟ ಪರಿಯನ್ನು ಗಮನಿಸುತ್ತೇವೆ. ಪುರಾಣಗಳಲ್ಲಿ ಹಾಲುಮತದ ಹುಟ್ಟು, ದೇವರು, ಆಚರಣೆಗಳೊಂದಿಗೆ ಅವರ ಬದುಕಿನಲ್ಲಿ ಒಂದಾದ ಕಂತೆಯ ರೀತಿ-ನೀತಿಗಳ ಬಗ್ಗೆಯು ಹೇಳುತ್ತವೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಕಂಬಳಿಯ ವಿಶಿಷ್ಟತೆಯನ್ನು ಎತ್ತಿ ಹಿಡಿಯಲಾಗಿದೆ. ಇಲ್ಲಿ ಹುಟ್ಟು ಗಂಬಳಿ ಎಂದೇ ಕರೆಯಲಾಗುತ್ತದೆ. ಪದುಮಗೊಂದ ಶಿವಲಿಂಗಮ್ಮ ದಂಪತಿಗಳು ಸೇರಿ ತಮ್ಮ ಮಗ ಮಡ್ಡಪ್ಪನಿಗಾಗಿ ಮೂರು ಮೊಳದ ಕಂಬಳಿ ತಯಾರಿಸಿದ್ದು ವಿಶೇಷ. ಕಂಬಳಿಯನ್ನು ಅವನಿಗೆ ಗದ್ದುಗೆ ಹಾಕಿ ಪೂಜಿಸುವ ವಿವರಣೆಯನ್ನು ಸಿದ್ಧಮಂಕ ಚರಿತೆಯಲ್ಲಿ ಕಾಣುತ್ತೇವೆ. ಇಲ್ಲಿ ಅದನ್ನು "ಗದ್ದುಗೆ ಕಂಬಳಿ" ಎಂದು ಉಲ್ಲೇಖಿತವಾಗಿದೆ.

"ಅಚ್ಚರಿಯ ಕಂಬಳಿಗಳ ನೆಯ್ದಾಗ
ಉಚ್ಚಹದಿಂ ಶಿವಗೆಂದು
ಮಚ್ಚಿ ಗದ್ದುಗೆಯಿಕ್ಕಿ ಅರ್ಚಿಸಿ ಪೂಜಿಸಿ
ನಿಶ್ಚಿಂತನೆ ಗತಿಯೆಂದ"[೧೮]

ಶಿವನಿಗೆ ಕಂಬಳಿಯನ್ನು ಹಾಕಿ ಪೂಜಿಸುವುದನ್ನು ಇಂದಿಗೂ ಪಾಲಿಸಿಕೊಂಡು ಬಂದಿರುವುದು ವಿಶೇಷ. ದೇವರ ಕಂಬಳಿಗಳೆಂದು ಹಾಲುಮತ ಸಂಸ್ಕೃತಿಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡು, ಜನರಲ್ಲಿ ಪೂಜ್ಯಭಾವನೆಯನ್ನು ಹೊಂದಿದೆ. ಇಂತಹ ನಂಬಿಕೆಯನ್ನು ಹಾಲುಮತದವರು ಶತಮಾನಗಳಿಂದ ಭಕ್ತಿ-ಭಾವದಿಂದ ಮುಂದುವರೆಸಿಕೊಂಡು ಬಂದಿದೆ.

ಹಾಲುಮತದವರ ಕುಲಗುರುವಾದ ರೇವಣಸಿದ್ಧನಿಗೆ ಕಂಥೆಸೇವೆ ಎಂದೇ ಕಂಬಳಿಯನ್ನು ಅರ್ಪಿಸುವ ಪವಿತ್ರವಾದ ಕಾರ್ಯವು ಹಾಲುಮತದಲ್ಲಿ ಇಂದಿಗೂ ಚಾಲ್ತಿಯಲ್ಲಿದೆ.

೭.೩. ಸಾಮಾಜಿಕ ನೆಲೆ

ಭಾರತೀಯ ಸಾಮಾಜಿಕ ವ್ಯವಸ್ಥೆಯೇ ಸಂಕೀರ್ಣವಾದದ್ದು. ಸಮಾಜದಲ್ಲಿ ಸಮುದಾಯಗಳು, ಪಂಗಡಗಳು, ಉಪಪಂಗಡಗಳು ಹಿಂದಿನಿಂದಲೂ ಅಸ್ತಿತ್ವಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಮೂಲನಿವಾಸಿಗಳಾದ ದ್ರಾವಿಡರು ಕಂಡುಬಂದರು. ಆರ್ಯರು ಮತ್ತು ಆರ್ಯೇತರ ಸಂಗಮದಿಂದಾಗಿ ಸಾಂಸ್ಕೃತಿಕ ಸಾಮರಸ್ಯಗಳು ಉಳಿದುಕೊಂಡು ಬಂದಿವೆ.

ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುವ ಕುರುಬ ಸಮುದಾಯವು ಒಂದಾಗಿದೆ. ಶ್ರಮ ಸಂಸ್ಕೃತಿಯ ಪ್ರತೀಕವಾಗಿರುವ ಕುರುಬರು ಅವರದೇ ಆದ ಸಂಸ್ಕೃತಿ ನಿರ್ಮಾಣಕ್ಕೆ ಕಾರಣರಾದರು. ಇವರು ಪಶುಪಾಲಕರಾದವರು. ಶಿವನ ಆರಾಧಕರಾಗಿದ್ದರು. ಸಮಾಜದಲ್ಲಿ ಅನೇಕ ಸಮುದಾಯಗಳಲ್ಲಿರುವಂತೆ ಕುರುಬ ಸಮುದಾಯವು ವಿಶಿಷ್ಟ ಶಕ್ತಿ ಮತ್ತು ಸಂಸ್ಕೃತಿಯೊಂದನ್ನು ಹೊಂದಿದೆ. ಇವರು ಪ್ರಾಚೀನ ಕಾಲದಿಂದಲೂ ಕುರಿಸಾಗಾಣಿಕೆ, ಕಂಬಳಿ ನೇಯ್ಗೆ, ಕೃಷಿಯನ್ನು ಕಸುಬನ್ನಾಗಿ ಮಾಡಿಕೊಂಡಿದ್ದಾರೆ.

ಭಾರತಕ್ಕೆ ಆರ್ಯರ ಆಗಮದಿಂದಾಗಿ ಭಾರತೀಯ ಸಂಸ್ಕೃತಿಯಲ್ಲಿ ಪರಿವರ್ತನೆಗಳಾಗುತ್ತಿದ್ದವು. ಇಂತಹ ಸಂದರ್ಭದಲ್ಲಿ ಕುರುಬರು ತಮ್ಮದೇ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದರು. ಪ್ರಕೃತಿ ಆರಾಧಕರಾದ ಇವರು ಬಹು ಜನಾಂಗಗಳಲ್ಲಿ ಒಂದಾಗಿದೆ. ಈ ಜನಾಂಗವು ಮೊದಲಲ್ಲಿ ಒಂದೇ ಆಗಿದ್ದರು. ಕಾಲನಂತರದಲ್ಲಿ ಉಪಪಂಗಡಗಳಾಗಿ ವಿಭಜನೆಕೊಂಡವು. ಕುರುಬರಲ್ಲಿ ಉಣ್ಣೆ ಕಂಕಣ್ಣ ಮತ್ತು ಹತ್ತಿಕಂಕಣ ಕುರುಬರೆಂದು ಎರಡು ಪಂಗಡಗಳಿವೆ. ಉಣ್ಣೆಕಂಕಣದವರು ಮದುವೆಯ ಸಂದರ್ಭದಲ್ಲಿ ವಧುವರರ ಕೈಗೆ ಉಣ್ಣೆಯ ನೂಲಿನಿಂದ ಕಂಕಣ ಕಟ್ಟಿದರೆ, ಹತ್ತಿಕಂಕಣದವರು. ಹತ್ತಿಯ ನೂಲಿನಿಂದ ಕಂಕಣ ಕಟ್ಟುತ್ತಾರೆ. ಈ ಭೇದಗಳಿಗೆ ಹಾಲುಮತ ಪುರಾಣಗಳಲ್ಲಿ ಕಥೆಗಳು ದೊರೆಯುತ್ತವೆ. ಉಂಡಾಡು ಪದುಮಣ್ಣನ ಇಬ್ಬರ ಹೆಂಡತಿಯರಲ್ಲಿ ಜನಿಸಿದ ಮಕ್ಕಳಿಂದಾಗಿ ಈ ಭೇದಗಳು ಉಂಟಾದವು. ಈ ಎರಡು ಪಂಗಡದವರು ಅಣ್ಣ ತಮ್ಮಂದಿರೆಂಬ ವಿಷಯ ಗೊತ್ತಾಗುತ್ತದೆ. ಪದ್ಮಗೊಂಡನ ಮಕ್ಕಳೇ ಎರಡು ಪಂಗಡಗಳಾದರು. ಕುರುಬರ ಮೂಲ ಪುರುಷನಾದ ಉಂಡಾಡು ಪದ್ಮಣ್ಣನಿಂದ ಶಾಸ್ತ್ರೋಕ್ತವಾಗಿ ಮದುವೆಯಾದ ಹೆಂಡತಿಯ ಮಕ್ಕಳೇ ಹತ್ತಿಕಂಕಣದವರು. ಇವರು ಕೃಷಿಯನ್ನು ಪ್ರಮುಖ ಉದ್ಯೋಗ ಮಾಡಿಕೊಂಡಿದ್ದಾರೆ.

ಅಲೆಮಾರಿಯಾಗಿ ಕುರಿಗಳನ್ನು ಕಾಯುತ್ತಿದ್ದ ಪದುಮಣ್ಣನು ಕಾಡಿನಲ್ಲಿ ರಾಕ್ಷಸ ಕುಟುಂಬಕ್ಕೆ ಸೇರಿದ ಮಹಿಳೆಯನ್ನು ಮದುವೆಯಾಗುತ್ತಾನೆ. ಇವರ ವಿವಾಹದಲ್ಲಿ ಉಣ್ಣೆಯನ್ನು ಬಳಸಿದ್ದರಿಂದ ರಾಕ್ಷಸಿಯ ಸಂತಾನ ಉಣ್ಣೆಕಂಕಣರಾದರು. ಹಿಂದೆ ಈ ಪಂಗಡಗಳಲ್ಲಿ ಶ್ರೇಷ್ಠ ಕನಿಷ್ಠವೆಂಬ ಭಾವನೆಯಿದ್ದರೂ, ಇತ್ತೀಚೆಗೆ ಈ ಭಾವನೆಯೂ ಕಡಿಮೆಯಾಗುತ್ತಿದೆ. ಸಮಾಜ ಸಂಕೀರ್ಣ, ಸಂಕುಚಿತತೆ, ಸ್ವಾರ್ಥಕತೆಯಿಂದ ತುಂಬಿಕೊಳ್ಳುತ್ತಿರುವಾಗ ಈ ಸಮುದಾಯವು ಸಾಮಾಜಿಕವಾಗಿ ಒಗ್ಗೂಡಿದೆ.

ಹಾಲುಮತದವರು ಪಶುಪಾಲನ ಸಂಸ್ಕೃತಿಯಿಂದ ಬೆಳೆದುಕೊಂಡು ಬಂದ ಸಮುದಾಯವಾಗಿದೆ. ಇವರು ಕುರಿಗಳನ್ನು, ಆಕಳುಗಳನ್ನು ಸಾಕುವುದರ ಜೊತೆ-ಜೊತೆಗೆ ವ್ಯವಸಾಯವನ್ನು ವೃತ್ತಿಯಾಗಿಸಿಕೊಂಡರು. ಕುರಿಗಳನ್ನು ಸಾಕುವುದು ಪ್ರಮುಖವಾದ್ದರಿಂದ ಕುರುಬ ಗೌಡರಾದರು. ಮಾಳಿಂಗರಾಯನ ಕುಟುಂಬ ವಿಷಯಕ್ಕೆ ಬರುವುದಾದರೆ ತುಕ್ಕಪ್ಪರಾಯರು ಪೇರಾಮತಿ ಮತ್ತು ಬಾರಾಮತಿ ಎಂಬ ಪ್ರದೇಶಗಳಲ್ಲಿ ಆಳ್ವಿಕೆ ಮಾಡುತ್ತಿದ್ದರು. ಗೋರಖನಾಥನ ಮೇರೆಗೆ ಇವರು ಕಿಲಾರಿಗಳನ್ನು ಕಾಯುವುದಕ್ಕೆ ಆರಂಭಿಸಿದರು. ಪಶುಪಾಲನೆಯೇ ನಮ್ಮ ಗುರುಸೇವೆ ಎಂದು ನಂಬಿ ಅಲೆಮಾರಿಗಳಾದರು.

“ಗುರುವಿನ ಅಲ್ಹಾರ ಈಗ ನಮ್ಮಂತೇಕ
ಮರುಗತಾವ ನೋಡ ತಮ್ಮಾ ಹೊಟ್ಟಾಗಿ ಇಲ್ಲದಕ
ಅಷ್ಟ ಐಶ್ವರಿ ಬೇಕೋ ಯಾತಕ
ಕಿಲ್ಲಾರ ಸಲುವಾಗಿ ನಾವು ಊರ ಬಿಡಬೇಕ
ತುಕ್ಕಪ್ಪ ಹೇಳ್ಯಾನ ಸೋಮರಾಯನ ಬಲ್ಲೇಕ
ನಿಷ್ಠುರಾಗಿ ಹೊಂಟಾರ ಕಿಲ್ಲಾರ ಮೇಸುದಕ”[೯೯]

ಇವಲ್ಲದೆ ಹಲವರು ತಮ್ಮ ಸಂಪತ್ತು, ಅರಸುತನವನ್ನು ಬಿಟ್ಟು ಪಶುಪಾಲನೆಯಲ್ಲಿ ತೊಡಗಿದವರು ಸಿಗುತ್ತಾರೆ. ಆ ಕಾಲಕ್ಕೆ ಪಶುಪಾಲನೆ ಶ್ರೇಷ್ಠವಾದುದಾಗಿತ್ತು. ರಾಜ ಎಷ್ಟು ಹಸುಗಳನ್ನು ಸಾಕಿದ್ದಾನೆ ಎನ್ನುವುದರ ಮೇಲೆ ಆತನ ಸಂಪತ್ತು, ಸ್ಥಾನಮಾನಗಳು ಸಮಾಜದಲ್ಲಿ ನಿರ್ಧಾರವಾಗುತ್ತಿದ್ದವು.

ತುಕ್ಕಪ್ಪರಾಯ ಮತ್ತು ಸ್ವಾಮಿರಾಯ ಇಬ್ಬರು ಸೇರಿ ಬೇಡ ಸಮುದಾಯದ ಜೊತೆ ಹೋರಾಡಿದರು. ಈ ಹೋರಾಟದಲ್ಲಿ ತುಕ್ಕಪ್ಪರಾಯನು ಬೇಡರಿಂದಲೇ ಹತನಾಗುತ್ತಾನೆ. ಇದರಿಂದ ಸ್ವಾಮಿರಾಯನ ಆತಂಕ ಹೆಚ್ಚಾಗುತ್ತದೆ. ಜಕ್ಕಪ್ಪ-ಮಾಳಿಂಗರಾಯನನ್ನು ಬ್ಯಾಡ ಸಮುದಾಯದವರ ವಿರುದ್ಧ ಹೋರಾಡಲು ಸಿದ್ಧತೆಯಾಗುವಂತೆ ಬೆಳೆಸುತ್ತಾರೆ. ಮಾಳಪ್ಪನು

ನಮ್ಮನ್ನು ಕಾಡುವ ಬೇಡರ ತಲೆಗಳನ್ನು ಕತ್ತರಿಸಿ ತರುತ್ತೇನೆ ಎಂದು ಭಾಷೆ ನೀಡುತ್ತಾನೆ. ಈ ರೀತಿ ಮಕ್ಕಳನ್ನು ಬೆಳೆಸುತ್ತಿರುವುದನ್ನು ಕಂಡರೆ ಬೇಡರ ಕಾಟದಿಂದ ಮುಕ್ತರಾಗುವುದು ಎಷ್ಟು ಮುಖ್ಯವೆಂಬುದು ತಿಳಿಯುತ್ತಿತ್ತು.

ಮಾಳಿಂಗರಾಯನು ಹಲವು ಧರ್ಮ(ಪಂಥಗಳ) ಜೊತೆ ಹೋರಾಟವನ್ನು ಮಾಡಿದ್ದಾನೆ. ಬೇಡ ಸಮುದಾಯ ಮತ್ತು ಸಿದ್ಧಪಂಥದ ಜೊತೆಗಿನ ಸಂಘರ್ಷಗಳು ಪ್ರಮುಖವಾದಂತವು. ಮಾಳಿಂಗರಾಯನಲ್ಲಿ ಬೀರಪ್ಪನು ಊಟಕ್ಕೆ ಹುಲಿಯ ಹಾಲು, ಆಟಕ್ಕೆ ಹುಲಿಮರಿ ಬೇಡುವುದು ಇಲ್ಲಿ ಮಾಳಿಂಗರಾಯನ ಶಕ್ತಿಯ ಸಂಕೇತವಾಗಿ ಹುಲಿಯ ಸಂಬಂಧದ ಬಳಕೆಯನ್ನು ಮಾಡಲಾಗಿದೆ. ಇದು ಕೇವಲ ಬೀರಪ್ಪನ ಆಸೆಯಾಗಿತ್ತು. ಬೇಡಿಕೆಯಾಗಿತ್ತು.

"ಗಾಂಜಿಕೋರ ನಮ್ಮದೇವರ ಗಾರುಡಗಿ ವಿದ್ಯಾ ಭೀರಣ್ಣ
ಕಾಡಬಾರದು ಕಾಡ್ಯಾನೆ ಬೇಡಬಾರದು ಬೇಡ್ಯಾನೆ
ಏ ನಮ್ಮ ಗುರುವ ಬೀರಣ್ಣ ಹುಲಿಯ ಗಿಣ್ಣ ಬೇಡ್ಯಾನ
ಊಟಕ ಹುಲಿಗಿಣ್ಣ ಬೇಡ್ಯಾನ ಆಟಕ ಹುಲಿಮರಿಯೇನ"[೨೦]

ಹಾಲು ಎನ್ನುವುದು ಹಾಲುಮತ ಸಂಸ್ಕೃತಿಯ ಪ್ರತೀಕವಾಗಿ ಬೀರಪ್ಪ ಹುಲಿಯ ಹಾಲನ್ನು ಬೇಡುತ್ತಾನೆ. ಬಿಳಿ ಶಾಂತಿಯ ಸಂಕೇತವೂ ಹೌದು. ಬೇಟೆ ಸಂಸ್ಕೃತಿಯ ಪ್ರತಿರೂಪವಾಗಿ ಹುಲಿಯ ಹಾಲನ್ನು ಬೇಡುತ್ತಾನೆ. ಇದು ಪಶುಗಳಿಗೆ ತೊಂದರೆ ನೀಡದಿರುವ ಮನೋಭಾವವನ್ನು ಸೂಚಿಸುತ್ತದೆ. ಇದು ಸಮುದಾಯಗಳ ಬೇಡಿಕೆಯೂ ಆಗಿರುತ್ತದೆ. ಈ ಒಂದು ಬೇಡಿಕೆ ತಂತ್ರಗಾರಿಕೆ, ಮಾನವೀಯತೆಯಿಂದ ಕೂಡಿರುವುದು. ಬೀರಪ್ಪ ಹುಲಿಯನ್ನು ಕೊಲ್ಲದೆ ಅದನ್ನು ಜೀವಂತವಾಗಿ ಹಿಡಿದುಕೊಂಡು ಬಾ, ಮರಿಗಳ ಜೊತೆ ಆಟವಾಡಬೇಕೆಂದು ಹೇಳುತ್ತಾನೆ. ಪ್ರಾಣಿಗಳನ್ನು ಮಾಳಿಂಗ ತನ್ನವರಂತೆ ಕಾಣುತ್ತಾನೆ. ಮಾನವೀಯ ಭಾವನೆ ಎಲ್ಲರಲ್ಲೂ ಮೂಡಬೇಕಾದುದು ಅಗತ್ಯವಾಗಿದೆ. ಬೀರಪ್ಪನು ಮಾಳಿಂಗನನ್ನು ಶಿಷ್ಯನಾಗಿ ಪಡೆದು ಅವನಲ್ಲಿರುವ ಕ್ರೂರತ್ವವನ್ನು ಕಳೆಯಲು ಅವನಿಗೆ ಜ್ಞಾನವನ್ನು, ಅಕ್ಷರವನ್ನು, ಜೀವನದ ಸಂಸ್ಕೃತಿಯನ್ನು ಕಲಿಸಲು ಮುಂದಾಗುತ್ತಾನೆ.

ಮಾಳಿಂಗರಾಯನು ಕೃಷಿಕ ಸಮುದಾಯದ ವೆಂಕಣ್ಣಗೌಡ ಮತ್ತು ಸಿಂದಗಿ ನಾಡಿನ ಗೌಡನ ಜೊತೆ ತಮ್ಮ ಕಿಲಾರಿಗಳ ಸಂರಕ್ಷಣೆಯ ಸಲುವಾಗಿ ಹೋರಾಟ ಮಾಡುತ್ತಾನೆ. ಸಂಘರ್ಷವಾದ ಮೇಲೆ ವೆಂಕಟಗೌಡನಿಗೆ ಹುಟ್ಟುವ ಮೊದಲ ಮಗನನ್ನೇ ಮಠಕ್ಕೆ ಸಾಕು ಮಗನಾಗಿ ಬಿಡಬೇಕೆಂದು ಹೇಳಿದಾಗ, ಗುರುವಿನ ಆಜ್ಞೆಯಂತೆ ಒಪ್ಪುತ್ತಾನೆ.

"ಸಿದ್ಧ ಮಾಳಪ್ಪ ಸುದ್ದಾಗಿ ಹೇಳತಾನಾ ವೆಂಕಣ್ಣಗೌಡಗ
ಜಳಾದಳಾ ಉಳ್ಳನೆಂಬ ಸಿದ್ಧಹುಟ್ಟಿ ಬರುತ್ತಾನೆ ನಿನ್ನೊಳ
ಮೊದಲ ಹುಟ್ಟುವ ಮಗನ ಮಠಕ್ಕೆ
ಬಿಡಬೇಕೆಂದು ಹೇಳಿಕೊಟ್ಟೊ ಫಲಗಳಾಗಿ"[೨೧]

ಮಾಳಿಂಗರಾಯನ ಸಂಪ್ರದಾಯದಲ್ಲಿ ಒಕ್ಕಲು(ಶಿಶುಮಕ್ಕಳ) ಪಡೆಯುವ ಪದ್ಧತಿ ಇತ್ತೆಂದು ತಿಳಿಯುತ್ತದೆ. ಮಾಳಿಂಗರಾಯನು ಇಷ್ಟಲಿಂಗ ಆರಾಧಕನಾದ ವೆಂಕಣ್ಣಗೌಡನ ಆರಾಧನೆಯನ್ನು ಹೊಡೆದು ಹಾಕಲು ಇಂತಹ ಒಂದು ತಂತ್ರವನ್ನು ಬಳಕೆ ಮಾಡಿರುತ್ತಾನೆ. ವೆಂಕಣ್ಣಗೌಡನನ್ನು ಸದೆಬಡಿಯುವ ಫಲವಾಗಿ ಅವನ ಬಳಗಳನ್ನು ಹಾಳು ಮಾಡುತ್ತಾನೆ. ಅವರನ್ನು ಭಂಡಾರದ ಆರಾಧಕರಾಗುವಂತೆ ಮಾಡುತ್ತಾನೆ. ಈ ಮೂಲಕ ಮಾಳಿಂಗರಾಯನು ತನ್ನ ಪ್ರಭುತ್ವವನ್ನು ಸಾಧಿಸಿಕೊಳ್ಳಲು ಯಜಮಾನಿಕೆಯಿಂದ ಗೆದ್ದು ತೋರಿಸಿರುವುದು ಕಾಣುತ್ತೇವೆ.

ಮಾಳಿಂಗರಾಯ ಇನ್ನೊಂದು ಸಂಘರ್ಷವೆಂದರೆ ಅಮೋಘಸಿದ್ದನ ಜೊತೆಗಿನ ಸಂಘರ್ಷ. ಬೀರಪ್ಪನು ಅಮೋಘಸಿದ್ಧನಲ್ಲಿರುವ 'ಅಜಾನು ವೃಕ್ಷದ' ಹೂ ಬೇಕೆಂದು ಮಾಳಿಂಗರಾಯನಲ್ಲಿ ಬೇಡಿಕೆ ಇಟ್ಟಾಗ, ನಡೆದ ಸಂಘರ್ಷವಿದು. ಈ ಸಂಘರ್ಷಗಳಲ್ಲಿ ಪವಾಡಗಳೇ ನಡೆದು ಹೋಗುತ್ತವೆ.

"ಎತ್ತು ತಿರುವಲ್ಲಿಬೇಕಯ್ಯ ಹಿಂದಕ್ಕೆ ಹೊಳ್ಳಲಿ ಬೇಕಯ್ಯ
ಬಾರೊ ಬಾರೋ ಎಯಪ್ಪ ನನ್ನ ಎತ್ತುನಲ್ಲೆಗಳ
ನಿನ್ನ ಎತ್ತುನಲ್ಲಪ್ಪ ನೀನೇ ತಿರುವಲಿಬೇಕಯ್ಯ
ಒಳ್ಳೆದು ಒಳ್ಳೆದು ಅಂದಾನ ಯೋಗಿ ಅಮ್ಮುಗಿಸಿದ್ಧನ
ಮುಂದಕ ಸರಿದು ನಿಂತಾನೆ ಎತ್ತಿನ ಕೈಮಾಡಿ ಕರದಾನ
ಎತ್ತಿನ ಕೈಮಾಡಿ ಕರೆದಿದ್ದ ಹಿಂದಕ್ಕ ಬರುವುತಾವೇನ."[೨೨]

ಹಾಲುಮತದ ನಾಯಕರಿಬ್ಬರೂ ಶಕ್ತಿ ಪ್ರದರ್ಶನಕ್ಕಾಗಿ ನಿಂತಿದ್ದಾರೆ. ಇವರು ಪಶುಪಾಲನ ವೃತ್ತಿಯನ್ನು ಮಾಡುತ್ತಿರುವವರು. ಹಾಗಾಗಿ ತಮ್ಮ ಶಕ್ತಿ ಪ್ರದರ್ಶನಕ್ಕೆ ಅವುಗಳನ್ನೇ ಬಳಕೆ ಮಾಡಿದ್ದಾರೆ. ಈ ಹೋರಾಟದಲ್ಲಿ ಮಾಳಿಂಗ ಗೆಲ್ಲುತ್ತಾನೆ. ಮಾಳಿಂಗನಿಗೆ ಪಶುಗಳು ತೀರಾ ಹತ್ತಿರವಾಗಿದ್ದವು. ಹಾಗಾಗಿ ಈ ವಿಜಯ ಅವನದು. ಮಾಳಿಂಗರಾಯ ವಿಜಯಿಯಾಗಿ ಅಮೋಘಸಿದ್ಧ ಬೇಡಿದ ಕುರಿಗಳನ್ನು ಬೇಡಿಕೆಗನುಸಾರವಾಗಿ ನೀಡುತ್ತಾನೆ.

ಸಮಾಜದ ಪ್ರತಿಯೊಂದು ವರ್ಗಕ್ಕೂ ಬೇಕಾದ ಕಂಬಳಿ ತಯಾರಿಕೆಯಲ್ಲಿ ಕಮ್ಮಾರ ಮತ್ತು ನೇಕಾರರ ಪಾತ್ರ ಇರುವುದು ಪುರಾಣಗಳಲ್ಲಿರುವುದು ಕಂಡುಬರುತ್ತದೆ. ಪಶುಸಂಗೋಪನ ಮೂಲದವರು ಕುರುಬರು. ಕೃಷಿ ಸಮಾಜದ ಅಭಿವೃದ್ಧಿಗೆ ಕಾರಣವಾಗಿದೆ.

"ಹಾಲುಬೋನವನುಂಡು ಸೊರಗಿದೆವೆನುತಲಿ
ಕೋಲನು ಊರಿ ನಿಂತುಕೊಂಡ
ಮೂಲೋಕದೊಡೆಯನ ಕಂಡು ಶಾಂತಯ್ಯನು
ಪಾದಕ್ಕೆ ಬಂದೆರಗಿದನು."

ಹಾಲುಮತದವರು ಅನ್ನದಾಸೋಹದ ಮೇಲೆ ಇಟ್ಟಿರುವ ಮಹತ್ವವನ್ನು ತಿಳಿಯುತ್ತೇವೆ. ವೀರಶೈವರ ಪ್ರಭಾವದಿಂದಾಗಿ ದಾಸೋಹ ಪರಿಕಲ್ಪನೆ, ಕಾಯಕ ಪರಿಕಲ್ಪನೆ ಹಾಲುಮತ ಸಮುದಾಯದಲ್ಲಿ ಕಂಡುಬರುತ್ತದೆ. ರೇವಣ್ಣಸಿದ್ಧನು ಶಾಂತಮುತ್ತಯ್ಯನ ಭಕ್ತಿ ಪರೀಕ್ಷೆಯನ್ನು ಮಾಡುವಾಗ ದಾಸೋಹದ ಮಹತ್ವ ತಿಳಿಯುತ್ತದೆ. ಶಾಂತಮುತ್ತಯ್ಯನು ದಾಸೋಹ ಮಾಡಿದಾಗ ಲಕ್ಷ-ಲಕ್ಷ ಜಂಗಮರಿಗೆ ಅಂಜದೆ ಊಟವನ್ನು ನೀಡುವರು. ಈತನ ಭಕ್ತಿಗೆ ಮೆಚ್ಚಿದ ರೇವಣ್ಣನು ಬಂದು ಕರಗ ಅಂಬಲಿಗೆ ಒಂಬತ್ತು ಲಕ್ಷ ಭಕ್ತರು ತಿನ್ನುವಷ್ಟು ಅನ್ನವಾಗುವ ಸಾಮರ್ಥ್ಯವನ್ನು ನೀಡುವರು. ದಾಸೋಹದ ಮಹತ್ವ ಸಾಮಾಜಿಕ ಮೌಲ್ಯವಾಗಿ ಕಂಡುಬರುತ್ತದೆ.

ಜನಾಂಗಗಳ ಹುಟ್ಟು ಮತ್ತು ಬೆಳವಣಿಗೆ ಸದಾ ಹರಿಯುವ ನದಿಯಿದ್ದಂತೆ. ಮೂಲದಲ್ಲಿ ಸಣ್ಣ ತೊರೆಯಾಗಿ ಹುಟ್ಟುವ ನದಿ, ಉಪನದಿಗಳು ಸೇರಿ ದೊಡ್ಡದಾದ ನದಿಯಾಗಿ ಬೆಳೆದು ಮುಂದೆ ಸಮುದ್ರ ಸೇರುವಂತೆ. ಜನಾಂಗಿಗಳು ಸಹ ಇಷ್ಟೇ, ಮೂಲದಲ್ಲಿ ಒಂದೆರಡು ಗುಂಪುಗಳಾಗಿ, ಕಾಲಾನಂತರದಲ್ಲಿ ಬಹುಸಂಖ್ಯಾವಾಗಿ ಬೆಳೆಯುತ್ತದೆ. ಇದರಲ್ಲಿಯೇ ಹಲವು ವೃತ್ತಿಗಳು ಹುಟ್ಟಿ, ಸ್ವತಂತ್ರ ಧರ್ಮಪರಂಪರೆ ಮತ್ತು ಗುರುಪರಂಪರೆ ಹೊಂದಿ ಹಲವು ಪಂಗಡಗಳು ಸಮಾಜದಲ್ಲಿ ಹೊರಹೊಮ್ಮುತ್ತವೆ. ಹೀಗೆ ಹೊರಹೊಮ್ಮಿದ ಪಂಗಡಗಳು ಧರ್ಮಗಳಾಗುತ್ತವೆ. ಹಾಲುಮತದ ವೀರ, ಸಾಂಸ್ಕೃತಿಕ ಪುರುಷನಾದ ಬೀರಪ್ಪನ ಚಾರಿತ್ರಿಕ ಕಥೆಗಳು ಕರ್ನಾಟಕದಲ್ಲಿ ಸಾಕಷ್ಟು ಸಿಗುತ್ತವೆ. ಬೀರಪ್ಪ, ಬೀರಲಿಂಗ, ಕರಿಸಿದ್ದ, ಕರಿಸಿದ್ದೇಶ್ವರ, ಭೈರವ, ಸಣ್ಣದೇವರು ಮುಂತಾದ ಹೆಸರುಗಳಿಂದ ಪ್ರಸಿದ್ಧರಾಗಿದ್ದಾರೆ. ಬೀರಪ್ಪನ ಚರಿತ್ರೆಗಳು ಹೀಗೆ ವ್ಯಕ್ತವಾಗಿವೆ. "೧. ಈಗಿನ ಜಮಖಂಡಿ ತಾಲೂಕು ಕೋಣಗನೂರು ಗ್ರಾಮದಲ್ಲಿ ಕೋಣಾಸುರನನ್ನು ಸಂಹಾರ ಮಾಡುವುದಕ್ಕೆ 'ಕರಿಸಿದ್ದ'ನ ಅವತಾರ ತಾಳಿದ, ೨. ಹಾಲುಮತ ಸಾಂಸ್ಕೃತಿಕ ವೀರನಾದ ಕಾಟಪ್ಪನಿಗೆ ಗುರುದರ್ಶನ ಕೊಡುವುದಕ್ಕೆ ಈಗಿನ ಅಥಣಿ ತಾಲೂಕು ಮುರುಗುಂಡಿ ಗ್ರಾಮದಲ್ಲಿ 'ಮುರಸಿದ್ದ' ಅವತಾರ ತಾಳಿದ. ೪. ಉದ್ದನೆಯ ಮೂಗನ್ನು

ಹೊಂದಿದ ಕಾರಣಕ್ಕೆ 'ಚುಂಚ'ಎನ್ನುವ ಹೆಸರನ್ನು ಪಡೆದುಕೊಂಡು. ೫. ಉಗ್ರ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ ಕಾರಣಕ್ಕೆ 'ಅವನಿದ್ದ'ನೆನಿಸಿಕೊಂಡ, ೫. ಬೀರಪ್ಪನ ಸಂಸ್ಕೃತ ರೂಪ 'ಭೈರವ'ಎನ್ನುವುದು ಶಂಬಾರವರ ವಾದ. ಹೀಗೆ ಬೀರಪ್ಪನ ಚರಿತ್ರೆಯ ಅಧ್ಯಯನವಾಗುತ್ತದೆ.[೨೩]

ಬೀರಪ್ಪನು ರಕ್ಕಸಿಯನ್ನು ಸಂಹರಿಸುವಾಗ, ರಕ್ಕಸಿಯು ತನ್ನ ಕೊನೆ ಗಳಿಗೆಯಲ್ಲಿ

"ರಕ್ಕಸಿ ಪ್ರಾಣವ ಬಿಡುವ ಸಮಯದೊಳು
ಒಕ್ಕಣಿಸಿದಳು ವಾಕ್ಯದಲಿ
ಗಕ್ಕನೆ ಕುರಿಯ ಹಿಂಡಿಗೆ ನಾನು ತೋಳಾಗಿ
ಶಿಕ್ಷೆ ಮಾಡದೆ ಬಿಡೆನೆನುತ
ಏಳು ಕೊಪ್ಪರಿಗೆ ಕೂಳು ತಿನ್ನುವವಳು
ತೋಳನಾಗಿ ಜನಿಸಿನಳು
ಏಳುತ ಬೀಳುತ ಕುರಿಗಳ ತಿನ್ನುತ
ಕಾಳ ರಕ್ಕಸಿಯ ಮೆರೆದಳು"[೨೪]

ತೋಳವು ಕುರಿಗಳನ್ನು ಬೇಟೆಯಾಡುವ ಸಂದರ್ಭವಾಗಿದೆ. ಹನ್ನೆರಡು ವರ್ಷಗಳಿಗೊಮ್ಮೆ ಹೊಳಲ್ಕೆರೆ, ಹೊಸದುರ್ಗ, ಕಡೂರು, ತರೀಕೆರೆ, ಚಿಕ್ಕಮಗಳೂರು, ಅರಸೀಕೆರೆ, ಚನ್ನರಾಯಪಟ್ಟಣ ಮುಂತಾದ ತಾಲೂಕುಗಳಲ್ಲಿ ಕುರುಬರು ಬೀರಪ್ಪನ ಜಾತ್ರೆಯನ್ನು ಮಾಡುತ್ತಾರೆ. ಅದೇ ತೋಪು ಜಾತ್ರೆ. ಈ ತೋಪು ಪಾತ್ರೆಯು ಹಾಲುಮತ ಸಮುದಾಯದ ಕುಲಮೂಲ ಚರಿತ್ರೆಯನ್ನು ಹೇಳುತ್ತದೆ.

ಹಾಲುಮತದಲ್ಲಿ ಹುಲಿ ಎಂದರೆ ಮಾಳಿಂಗರಾಯ, ಮಾಳಿಂಗರಾಯನೆಂದರೆ ಹುಲಿ ಎಂದು ಪ್ರಸಿದ್ಧಿಯಾಗಿದ್ದಾನೆ. ಗುರು ಬೀರಣ್ಣನ ಬೇಡಿಕೆಯಂತೆ ಮಾಳಿಂಗ ಹುಲಿಯ ಹಾಲನ್ನು ಮತ್ತು ಹುಲಿಯ ಮರಿಗಳನ್ನು ಆಡಲು ತಂದನು. ಇಲ್ಲಿ ಹುಲಿ ಎನ್ನುವುದು ಕೇವಲ ಸಾಂಕೇತಿಕವಾಗಿ ಬಳಕೆಯಾಗಿದೆ. ಬೇಟೆ ಸಂಸ್ಕೃತಿಯನ್ನು ಹೇಳುತ್ತದೆ.

ಹುಲಿಗೆ ವೇದಗಳನ್ನು ಓದಿಸಿದ ಎನ್ನುವುದು ಸಾಂಕೇತಿಕವಾಗಿದೆ. ಬೀರಪ್ಪ, ಮಾಳಿಂಗರು ಪಶುಪಾಲನೆಯ ವೃತ್ತಿಯಲ್ಲಿದ್ದುದರಿಂದ ಅದನ್ನು ಭದ್ರಪಡಿಸುವ ಸಲುವಾಗಿ ಬೇಡರನ್ನು ಬೇಟೆಯಾಡ ಬೇಕಾಗಿತ್ತು. ಮಾಳಿಂಗರಾಯನ ಕುಟುಂಬದವರಿಗೂ ತೊಂದರೆ ನೀಡಿದ ಅವರನ್ನು ಸಂಹರಿಸಿದ ವೀರಪುರುಷನಾಗಿ ಚರಿತ್ರೆಯಲ್ಲಿ ಒಬ್ಬನಾಗಿದ್ದಾನೆ ಮಾಳಿಂಗ. ಮಾಳಿಂಗರಾಯನ ಚಾರಿತ್ರಿಕ ಕಥೆಗಳನ್ನು ಗಮನಿಸಿದಾಗ ನಾಥಪಂಥದ ಪ್ರಭಾವಕ್ಕೆ ಒಳಗಾಗಿ ಕೊನೆಗೆ ಶೈವನಾಗುತ್ತಾನೆ.

ಈತನು ಭಂಡಾರ ಆರಾಧಕನು ಆಗಿದ್ದ. ಯಾರೇ ವೈರಿಗಳು ಬಂದರೂ ಭಂಡಾರವನ್ನು ಎರಚಿ ಹೋರಾಟಕ್ಕೆ ಹೋಗುತ್ತಿದ್ದನು. ಭಂಡಾರದ ಒಡೆಯನೆಂದೆ ಇವನನ್ನು ಕರೆಯುತ್ತಿದ್ದರು. ಬೇಟೆ ಹಾಗೂ ಕೃಷಿ ಸಂಸ್ಕೃತಿಗಳ ನಾಯಕನಾಗಿ ಮಾಳಿಂಗರಾಯ ಕಂಡುಬರುತ್ತಾನೆ.

ಹಾಲುಮತದಲ್ಲಿ ಬಂದ ಪವಾಡ ಪುರುಷರು ವಾಸ ಮಾಡಿದ ಸ್ಥಳಗಳು ಸಾಂಸ್ಕೃತಿಕ ನೆಲೆಗಳಾಗಿ ಚಾರಿತ್ರಿಕ ಮಹತ್ವವನ್ನು ಪಡೆದುಕೊಳ್ಳುತ್ತವೆ. ಕನ್ನಡ ಚಾರಿತ್ರಿಕ ಸಾಹಿತ್ಯ ವಿರಳವಾಗಿ ರಚನೆಯಾಗಿರುವುದಲ್ಲದೆ, ಸ್ತುತಿ, ಪವಾಡಗಳ ಉಲ್ಲೇಖಗಳಿಂದ ಕೂಡಿದೆ.

೭.೪. ಚಾರಿತ್ರಿಕ ನೆಲೆ

"ತುರು-ಕರುವು ಇರದೂರು ನರಕಭಾಜನವಕ್ಕು
ತುರುಕರು ಉಂಟಾದರೆ ಉಣಲುಂಟು, ಜಗಕ್ಕೆಲ್ಲ
ತುರು-ಕರುವೆ ದೈವ ಸರ್ವಜ್ಞ"

ಸರ್ವಜ್ಞನ ಈ ಮಾತು ಹಟ್ಟಿಕಾರರ ಸಂಸ್ಕೃತಿ ಕುರಿತು ಹೇಳಿದುದಾಗಿದೆ.

"Indeed the kurubas must be regarded as very old inhabitants of this land. who can contest with their Dravidian kinsmen the priority of occupation of the Indian soil[25] ಎಂದು ಗಸ್ಟವ್ ಆಪರ್ಟ್‌ರವರು ದಾಖಲಿಸಿದ್ದಾರೆ. ಗಂಗೆಯಿಂದ-ಕಾವೇರಿಯವರೆಗೆ ಹಾಲುಮತದವರು ಹಬ್ಬಿದರು ಎಂಬ ಸಂಗತಿ ಇದೆ.

ಪ್ರಾಚೀನ ಪೂರ್ವ ಹಾಲುಮತ ಜನಾಂಗವನ್ನು ಶಂ.ಬಾ.ಜೋಶಿ ಅವರು 'ಯದು-ತುರ್ವಸರು ಎಂಬ ಜನಾಂಗೀಯ ನಾಮದಿಂದ ಕರೆದಿರುವುದು ವಿಶೇಷವಾಗಿದೆ. ಈ ನಾಮಕರಣ ಈ ಜನಾಂಗದ ವೃತ್ತಿ ಧ್ಯೋತಕವಾಗಿ ಕುರಿ, ದನಕರು ಪ್ರಾಣಿಗಳ ಸಾಗಾಣಿಕೆಯನ್ನು ಎತ್ತಿ ತೋರಿಸುತ್ತದೆ.[೨೬]

ಹಾಲುಮತದ ಹುಟ್ಟನ್ನು ಕಾಲ್ಪನಿಕವಾಗಿ ಪೌರಾಣಿಕರಿಸಲಾಗಿದೆ. "ಬ್ರಹ್ಮಾಂಡ ಪುರಾಣ ರುದ್ರಭಾರತ ವಚನ ದೇವಿಂದ್ರನಿಗೆ ಶೂದ್ರಕ ಮತ್ತು ಶಕ್ರಶೂದ್ರರೆಂಬ ಇಬ್ಬರು ಮಕ್ಕಳು. ಅವರು ನೇಗಿಲಿನಿಂದ ಮೇಧಿನಿಯನ್ನು ಇಬ್ಬಗೆಯ ಮಾಡಿ ಹೊಡಿಯುವಾಗ ಅಗ್ನಿಪುರದ ಬಾಗಿಲು ತೆರೆದುದರಿಂದ ಅಗ್ನಿವಾಹನವಾದ ಕುರಿಯು ನಾಲಿಗೆ ತೆರೆದು ಭೀಕರಿಸಿದಾಗ ಅಲ್ಲಿ ಆರುವರ್ಣದ ಕುರಿಗಳು ಉದಯಿಸಿದವೆಂದು ಹೇಳಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಲ್ಲಿ ಉದಯಿಸಿದ ಕುರಿಗಳನ್ನು ಕಾಯಲು ಇಪ್ಪತ್ತು ಮೂರು ಕುಲದ ಕುರುಬರ ಜನ್ಮವಾಯಿತೆಂದೂ, ಅವರಲ್ಲಿ ಕುರುಬನೂ ಮತ್ತು ಕುಡಿಪಕ್ಕಲಿಂಗನು ಒಂದೇ ಕುಲದ ದಾಯಾದ್ಯ ಸಂಬಂಧ ಹೊಂದಿದ್ದಾರೆಂದು ಹೇಳಲಾಗಿದೆ.[೨೭]

ಹಾಲುಮತ ಹುಟ್ಟಿಗೂ ಕಥೆ ಇರುವುದು ಕಾಣುತ್ತೇವೆ. "ಒಮ್ಮೆ ಶಿವ-ಪಾರ್ವತಿಯರು ಭೂಲೋಕ ಸಂಚಾರ ಮಾಡುತ್ತ ರಮ್ಯವನದಲ್ಲಿ ವಿಶ್ರಮಿಸುವಾಗ ಪಾರ್ವತಿಯ ಮೊಲೆಗಳಿಂದ ಹಾಲು ಉಕ್ಕುತ್ತದೆ. ಉಕ್ಕುತ್ತಿರುವ ಹಾಲನ್ನು ಅಂಗೈಗಳಲ್ಲಿ ಹಿಡಿದುಕೊಂಡು ಮಣ್ಣಿನಲ್ಲಿ ಬೆರೆಸಿ ಗಂಡು-ಹೆಣ್ಣು ಗೊಂಬೆಗಳನ್ನು ಮಾಡಿ, ಪೃಥ್ವಿಯ ಆದಿಗೆ ಕರ್ತೃವಾಗುವ ಸಲುವಾಗಿ ಅವುಗಳಿಗೆ ಜೀವಕಳೆ ತುಂಬಬೇಕೆಂದು ಪಾರ್ವತಿ ಪರಶಿವನಲ್ಲಿ ಪ್ರಾರ್ಥಿಸುತ್ತಾಳೆ. ಪಾರ್ವತಿಯ ಕೋರಿಕೆಯಂತೆ ಗೊಂಬೆಗಳಿಗೆ ಜೀವಕಳೆ ತುಂಬಿ ಮುದ್ದಪ್ಪ-ಮುದ್ದವ್ವರೆಂದು ನಾಮಕರಣ ಮಾಡಿ ಭೂಮಿಯಲ್ಲಿ ಬೀಜ ಬಿತ್ತಿ ಬೆಳೆದು ಸಕಲ ಪ್ರಾಣಿಗಳನ್ನು ರಕ್ಷಿಸಿರೆಂದು ಆದೇಶಿಸುತ್ತ ಅವರೀರ್ವರ ವಿವಾಹ ಜರುಗಿಸಿ ಪಾರ್ವತಿಯೊಂದಿಗೆ ಪರಶಿವ ಕೈಲಾಸಕ್ಕೆ ಹಿಂದಿರುಗುತ್ತಾನೆ. ಹೀಗೆ ಮುದ್ದಪ್ಪ-ಮುದ್ದವ್ವ ದಂಪತಿಗಳು ಪಾರ್ವತಿಯ ಹಾಲಿನಿಂದ ಹುಟ್ಟಿದರಾದ ಕಾರಣ ಇವರ ವಂಶಜರಿಗೆ ಹಾಲುಮತದವರೆಂದು ಹೆಸರು ಪ್ರಾಪ್ತವಾಗುತ್ತದೆ. ಶಿವನ ಕರುಣೆಯಿಂದ ಜೀವಕಳೆ ಪಡೆದ ಮುದ್ದಪ್ಪ ಮುದ್ದವ್ವ ದಂಪತಿಗಳ ವಂಶಜರು ಹುಟ್ಟು ಸಿದ್ಧಪಂಥದ ಶೈವರಾದುದು ಸಹಜವಾದದ್ದು. ನಂತರ ಸಮಾಜ ಸುಧಾರಕರಾಗಿ ಈ ಜನಾಂಗದಲ್ಲಿ ಜನಿಸಿದ ರೇವಣಸಿದ್ಧ ಸಿದ್ಧರಾಮ ಹಾಗೂ ಅಮೋಘಸಿದ್ಧರೆಂಬ ದಾರ್ಶನಿಕ ಪ್ರಭಾವದಿಂದ ಶೈವಸಿದ್ಧ ಪಂಥದತ್ತ ಹೊರಳಿದ್ದುದು ತಿಳಿದುಬರುತ್ತದೆ(ವೀರದೇವರು-೧೨). ಹಾಲುಮತ ಹುಟ್ಟಿಗೆ ಅಥವಾ ಹಾಲುಮತಸ್ಥರು ಎಂದು ಹೇಳುವ ಒಂದು ಪೌರಾಣಿಕ ಕಥೆಯಾಗಿದೆ.

ಹಾಲುಮತವು ಪ್ರಾಚೀನ ಜನಾಂಗವಾದುದು. ಜನಾಂಗದ ಪ್ರಾಚೀನತೆಯನ್ನು ಶಂ.ಬಾ. ಜೋಶಿರವರು. ಈ ರೀತಿಯಾಗಿ ದಾಖಲಿಸಿದ್ದಾರೆ. "ಅಖಿಲ ಭಾರತ ಮೂಲ ಜನಾಂಗವೆನ್ನಿಸಿದ ಹಟ್ಟಿಕಾರರು>ಪತ್ತಿಕಾರರು>ಪಶುಪಾಲಕರು>ಧನಗರ ಕುರುಬರು ಆರ್ಯಪೂರ್ವ ಜನಾಂಗವಾಗಿದೆ. ಇವರು ಈಜಿಪ್ತ ಮತ್ತು ಬೆಬಿಲೋಣಿಯಾ ಸಂಸ್ಕೃತಿಗಳ ಸಮಾಕಾಲೀನರು ಅಂದರೆ ಇಂದಿಗೆ ಸುಮಾರು ೮೦೦೦-೫೦೦೦ ವರ್ಷಗಳ ಪುರಾತನರು.[೨೮]

The Kurubas one of the most important elements in the early population of South India. they appears as kuerubas in kanarese. and correspond to the Dhangars of the marathas and Northen India[೨೯]

The kurubas formed an important fighting element in the armies of Haider Ali and the Ankusahgiri paligars and several fiets of military stell remain in the possession of Inamdars of Ande caste. Their favourite caste title is Nayak.[೩೦]

ಜನಾಂಗಿಯ ಬಗ್ಗೆ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಎಷ್ಟೊಂದು ಪ್ರಾಚೀನವಾದುದು ಎಂದು.

ಹಾಲುಮತ ಪುರಾಣಗಳಲ್ಲಿ ಕುರುಬರ ಚರಿತ್ರೆಯನ್ನು ತಿಳಿಯಬೇಕಾದರೆ. ತಗರ ಪವಾಡ ಕೃತಿಯು ಆಧಾರವಾಗಿದೆ. ಕೊಲ್ಲಾಪುರ, ತೊಗರಸ, ಕಲಸೆನಾಡು, ಸರೂರು, ಕಲ್ಯಾಣ ಪ್ರದೇಶಗಳಲ್ಲಿ ಕಥೆಗಳು ನಡೆದವು. ಶಾಂತಮುತ್ತಯ್ಯನ ಹಿರಿಕರು ತೊಗಸೆ ಎಂಬಲ್ಲಿ ಜೀವಿಸುತ್ತಿದ್ದರು. ಅದು ಈಗಿನ ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಆಗಿರಬಹುದು. ಕಲಸೆನಾಡಿನ ತನಕ ರೇವಣಸಿದ್ಧ ಬಂದನೆಂಬ ಮಾಹಿತಿಯನ್ನು ಗಮನಿಸಬಹುದು. ಕಲಸೆದಾರರನ್ನು ೧೩ ನೇ ಶತಮಾನದಲ್ಲಿ ಹೊಯ್ಸಳರ ಮಾಂಡಳಿಕನಾದ ಬೀರದೇವರಸನು ಆಳುತ್ತಿದ್ದರು.

ಪದ್ಮಣ್ಣನ ಎರಡನೇ ಮದುವೆಯಿಂದಾಗಿ ಬೇರೆಯಾದ ಶಾಂತಮುತ್ತಯ್ಯರು ಶಿವನ ಕೃಪೆಯಿಂದ ಕರಿಮಲ್ಲಿಗೆಯನ್ನು ಸೂಸಿ ಸರೂರು ಎಂಬ ಊರು ನಿರ್ಮಾಣವಾಯಿತು. ಈಗಿನ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮ.

ಸರೂರುನಲ್ಲಿಯೇ ೧೨ನೇ ಶತಮಾನದಲ್ಲಿ ತಗರಪವಾಡವೊಂದು ಜರುಗಿತು. ಈ ಪವಾಡವನ್ನು ವೀಕ್ಷಿಸಲು ಬಂದವರಲ್ಲಿ ಪ್ರಮುಖರು ಬಸವ. ಬಿಜ್ಜಳ, ಕಿನ್ನರಿ ಬ್ರಹ್ಮಯ್ಯನವರಾಗಿದ್ದಾರೆ. ಬಸವಣ್ಣನ ಪಾತ್ರ ಪ್ರಮುಖವಾಗಿ ಬಿಂಬಿತವಾಗಿದೆ. ಶಾಂತಮುತ್ತಯ್ಯನು ಪವಾಡಕ್ಕೆ ನೈತಿಕ ಬಲದೊಂದಿಗೆ, ಆತ್ಮಸ್ಥೈರ್ಯ ನೀಡಿದ ವ್ಯಕ್ತಿಯಾಗಿ ಕಂಡುಬರುತ್ತಾರೆ ಬಸವಣ್ಣನವರು. ಬಸವಣ್ಣ ನವರು ಶಾಂತಮುತ್ತಯ್ಯನಿಗೆ ವಿಭೂತಿಯನ್ನು ಹಚ್ಚಿ, ಉದಯಿಯಾಗು ಎಂದು ಹಾರೈಸುತ್ತಾನೆ. ಪವಾಡದಲ್ಲಿ ಗೆದ್ದ ಶಾಂತಮುತ್ತಯ್ಯನ ಮೇರೆಗೆ ಕಲ್ಯಾಣದಿಂದ ಬಹಿಷ್ಕಾರಗೊಂಡ ಕುರುಬರನ್ನು ಕಲ್ಯಾಣಕ್ಕೆ ಪ್ರವೇಶವಾಗುವಂತೆ ಮಾಡುತ್ತಾರೆ. ಶಾಂತಮುತ್ತಯ್ಯನ ಗೆಲುವಿಗೆ ಬಸವಣ್ಣನು 'ಮೂರೇಣಿನ ಕತೆ'ಯನ್ನು ನೀಡುತ್ತಾರೆ. ಇಲ್ಲಿ ಬಸವನಲ್ಲಿ ಮಾನವೀಯತೆಯ ಗುಣವು ಕಾಣುತ್ತದೆ. ಈ ಒಂದು ಪವಾಡದಿಂದಾಗಿ ಹಾಲುಮತದ ಚರಿತ್ರೆಯೂ ಜನಮನದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ.

ವದಂತಿ, ಐತಿಹ್ಯ, ದಂತಕಥೆಗಳಿಂದ ಕೂಡಿದ್ದಾರೆ. ಉದಾಹರಣೆಗೆ ರಾಘವಾಕಂನು ಹರಿಶ್ಚಂದ್ರ ಕಾವ್ಯ ಬರೆದು ನರಸುತ್ತಿ ನಿಂದೆಗೆ ಕಾರಣವಾಗಿ ಹರಹರನಿಂದ ದಂತ ಭಗ್ನ ಹರಸ್ತುತಿ ಕಾವ್ಯಗಳ ಸೃಷ್ಟಿ ಹರಹರನಿಗೆ ಸಂಬಂಧಿಸಿದಂತೆ ಹಂಪೆಯ ವಿರೂಪಾಕ್ಷ ದೇವಸ್ಥಾನದ ತೆರೆಗೆ ಬೆಂಕಿಹತ್ತಿದ ಪ್ರಸಂಗ ಹಾಗೂ ಹರಿಹರ ಕ್ಷೇತ್ರದಿಂದ ಬ್ರಹ್ಮಪಿಶಾಚಿಗಳನ್ನು ಓಡಿಸಿದ್ದು, ಕುಮಾರವ್ಯಾಸನ ಒದ್ದೆ ಬಟ್ಟೆಯ ಕಾವ್ಯ ರಚನಾ ಸ್ಫೂರ್ತಿ ಚಾಮರಸ,ಕುಮಾರವ್ಯಾಸರ ಭಾರತದ ಕಥಾಸ್ಪರ್ಧೆ, ನೇಮಿನಾಥನ ಲೀಲಾವತಿ ಪ್ರಬಂಧವನ್ನು ಆನೆಯ ಮೇಲಿರಿಸಿ ಮೆರವಣಿಗೆ

ಮಾಡಿದ ಪ್ರಸಂಗ ಆ ನಿಮಿತ್ತ ಷಡಕ್ಷರಿ ಕವಿಯ ರಾಜಶೇಖರ ವಿಳಾಸ ಸೃಷ್ಟಿಯಾದುದು. ಇಂಥ ಆನೇಕ ವದಂತಿ ಪವಾಡ, ಐತಿಹ್ಯಗಳು, ಧರ್ಮ ವ್ಯಕ್ತಿಯ ಅಭಿಮಾನಗಳ ಉದ್ದೇಶಗಳಿಗಾಗಿ ಸಾಹಿತ್ಯ ಸೃಷ್ಟಿಯಲ್ಲಿ ಸ್ಥಾನ ಪಡೆಯುತ್ತವೆ".[೨೧] ಹೀಗೆ ಚಾರಿತ್ರಿಕ ಮಹತ್ವವನ್ನು ಕೆಲವು ಸ್ಥಳಗಳು ಹಾಲುಮತದಲ್ಲೂ ಪಡೆದುಕೊಂಡಿವೆ.

೧. ಸರೂರು–ವಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರು ರೇವಣ್ಣಸಿದ್ದರ ಸಂಪ್ರದಾಯದವರೆಗೂ ಪ್ರಮುಖವಾದದು.ಹಾಲುಮತ ಸಂಸ್ಥಾಪಕ ಶ್ರೀ ರೇವಣ್ಣಸಿದ್ದೇಶ್ವರ ಮೂಲ ಪೀಠವು ಇಲ್ಲಿಯೇ ಇರುವುದು. ರೇವಣ್ಣಸಿದ್ದರು ಭಕ್ತನಾದ ಶಾಂತಮುತ್ತಯ್ಯನಿಗೆ ದೀಕ್ಷೆ ನೀಡಿದು ಇಲ್ಲಿಯೇ ಹಾಗೂ ಕುರುಬ ಕುಲದ ಅಧ್ಯಕ್ಷನನ್ನಾಗಿ ಮಾಡಿದು ಸರೂರಿನಲ್ಲಿಯೇ. ಇವರಿಗೆ ರೇವಣ್ಣಸಿದ್ದರು ದೀಕ್ಷೆಕೊಡುವ ಸಂದರ್ಭದಲ್ಲಿ ಕೈಲಾಸದಲ್ಲಿ ಕರಿಮಲ್ಲಿಗೆಯ ಸರ ಸುರಿದಿರುವುದರಿಂದ ಸರೂರು ಎಂದು ಹೆಸರು ಬರಲು ಕಾರಣವಾಯಿತು. ಸೊಲ್ಲಾಪುರ ರೇವಣ್ಣಸಿದ್ದನ ಮಠಗಳಲ್ಲಿ ಈ ಕಥನವಿರುವುದು ಕಾಣುತ್ತೇವೆ. ಸರೂರುವಿನ ಹೊರವಲಯದಲ್ಲಿ ರೇವಣ್ಣಸಿದ್ದನ ದೇವಾಲಯವು ಇದೆ. ಇದರ ಪಕ್ಕದಲ್ಲಿಯೇ ಬೃಹತ್ ವೃತ್ತಾಕಾರವಾದ ಬಂಡೆಯ ಮೇಲೆ ಶಾಂತಮುತ್ಯಯ್ಯನ ಗದ್ದುಗೆಯು ಇದೆ. ಸರೂರುನಲ್ಲಿ ಮಲ್ಲಿಕಾರ್ಜುನನ ದೇವಾಲಯವೂ ಇದೆ. ಇದರ ಆವರಣದಲ್ಲಿ "ಕ್ರಿ.ಶ.೧೨೦೮ ಮತ್ತು ೧೨೧೦ನೇ ಕಾಲದ ಎರಡು ಶಾಸನಗಳು ಇವೆ. ಅವುಗಳಲ್ಲಿ 'ಒಂದನೆಯ ಶಾಸನದಲ್ಲಿರುವ ಮಂಕಯಂಗಳಿಗೆ ಮಲ್ಲಿನಾಥರಾಮವೆಂಬವನು ಸಂನಿದಾನದಲು' ಎಂಬ ವಾಕ್ಯ ಎರಡನೆಯ ಶಾಸನದಲ್ಲಿರುವ 'ಅರಸನಹಳ್ಳಿಯ ವೀರನಗೌಡರ ಕೈಯಲು ಮಂಕೆಯನು ಹೊಂನಕೊಟ್ಟು ಆ ಹೊಲದಲು ಮತ್ತು ಹೊನಗುಂದದ ಬೀಚಗುರು ತಂನಮಗೆ ಮಂಕೆಯನ ಕಾಲದ ಗುರುವಿಗೆ ಮಂಕಯ್ಯನು ಮಲ್ಲಿನಾಥ ದೇವರ ಸ್ಥಾನದ ದಾರಾಪೂರ್ವಕ ಮಾಡಿಕೊಟ್ಟರು ಎಂಬ ವಾಕ್ಯಗಳು ಕಾವೋಕ್ತ ಮಂಕಯ್ಯನೇ ಎಂಬುದನ್ನು ಮಲಪಡಿಸುತ್ತವೆ."[೨೨] ಹಾಗೆಯೇ ಇಲ್ಲಿ ಶಾಂತ್ಯಮುತ್ತಯ್ಯನ ಗದ್ದುಗೆಯ ಪೂಜೆಮಾಡುವರು. ಒಟ್ಟಿನಲ್ಲಿ ಸರೂರು ಹಾಲುಮತದವರಿಗೆ ಪುಣ್ಯಸ್ಥಳವಾಗಿ ಕಂಡುಬರುತ್ತದೆ.

೨. ಹುಲಿಜಂತಿ–ಹುಲಿಜಂತಿ ಇದು ಮಹಾರಾಷ್ಟ ರಾಜ್ಯದ ಸೋಲಾಪೂರ ಜಿಲ್ಲೆಯ ಮಂಗಳವೇಡ ತಾಲೂಕಿನ ಗ್ರಾಮವಾಗಿದೆ. ಹುಲಿಜಂತಿ ಗ್ರಾಮಕ್ಕೆ ಮೊದಲು ಜಾಗ್ರತಪುರ ಎಂದು ಹೆಸರಿತ್ತು. ನೋತರ ಜತ್ತಿ ನಾರಾಯಣಪೂರ, ಜತ್ತಿಗಿ, ಹುಲಿಜಂತಿ ಎಂದು ಹೆಸರುಗಳು ಬಂದವು. ಬೀರಪ್ರನು ಮಾಳಿಂಗರಾಯನಿಗೆ ಹುಲಿಯ ಹಾಲು ಮತ್ತು ಆಡಲು ಹುಲಿಯ ಮರಿಗಳು ಬೇಕೆನ್ನುವರು. ಆಗ ಮಾಳಿಂಗ ಬೀರಪ್ಪನ ಕೃಪೆಯಿಂದ ಹುಲಿಯ ಹಾಲನ್ನು ಮತ್ತು

ಮರಿಗಳನ್ನು ತಂದು ನಿಲ್ಲಿಸುವನು. ಆಗ ಬೀರಪ್ಪನು ಮೆಚ್ಚುಗೆಗೊಂಡು ಹುಲಿಯ ಹಬ್ಬವನ್ನು ಮಾಡುವರು. ಆಗಿನಿಂದ ಹುಲಿಜಂತಿ ಎಂದು ಹೆಸರುವಾಸಿಯಾಯಿತು.

ಹುಲಿಜಂತಿ ಗ್ರಾಮದಿಂದ ಒಂದು ಕಿಲೋಮೀಟರ್ ದೂರದಲ್ಲಿ ಮಾಳಿಂಗರಾಯನ ಸಮಾಧಿ ಇರುವ ದೇವಾಲಯವಿದೆ. ಇಲ್ಲಿಯೇ ಇವರ ವಂಶಸ್ಥರಾದ ಕರಿಜಕ್ಕಪ್ಪ, ಮಾಳಮುತ್ಯಾ, ರೆಬ್ಬರಾಯ, ಬೀರಮುತ್ಯಾ, ಕಣ್ಮುತ್ಯಾ, ಸ್ವಾಮರಾಯ, ಮಾಳಿಂಗರಾಯನ ಎರಡನೇ ಹೆಂಡತಿ ಈರವ್ವ ಮುಂತಾದವರ ಸಮಾಧಿ ಸಿಗುತ್ತವೆ. ಹಾಲುಮತದವರ ಪ್ರಮುಖವಾದ ಸ್ಥಳವಾಗಿ ಪ್ರಸಿದ್ಧಿ ಪಡೆದಿದೆ.

೩. ಸಿಡಿಯಾಣ–ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಒಂದು ಪ್ರಮುಖ ಗ್ರಾಮ. ಇದು ಕರ್ನಾಟಕ ಮತ್ತು ಮಹಾರಾಷ್ಟ ರಾಜ್ಯಗಳ ಗಡಿಭಾಗಬಾಗಿದ್ದು, ಬಿಜಾಪುರ ಮತ್ತು ಫಂಡರಪುರ ಮಾರ್ಗದಲ್ಲಿ ಬರುವಂತಹದ್ದು. ಸಿರಾಡೋಣ, ಸಿಡಿಯಾಣ ಎಂದು ಈ ಗ್ರಾಮವನ್ನು ಕರೆಯುವುದು ವಾಡಿಕೆ.

ಮಾಳಿಂಗರಾಯನ ಪ್ರಮುಖ ಸ್ಥಳ ಹುಲಿಜಂತಿ. ಹಾಗೆಯೇ ಬೀರಪ್ಪನ ಪ್ರಮುಖ ಸ್ಥಳ ಸಿರಾಡೋಣ. ಇಲ್ಲಿ ಬೀರಪ್ಪನ ಗದ್ದುಗೆ ಇರುವ ದೇವಾಲಯವಿದೆ.ಈ ದೇವಾಲಯದ ಪಕ್ಕದಲ್ಲಿ ಶಿಷ್ಯ ಮಾಳಿಂರಾಯನ ದೇವಾಲಯವಿದೆ.

"ದಂಡಿಗ ಮುಂದ ಮಾಡಿದ್ದ ಲಿಂಗ ಬೀರಣ್ಣ ದೇವರ
ಲಿಂಗ ಬೀರಣ್ಣ ದೇವರ ಮಾಳಿಂಗಯಾಯನಿದ್ದಾನೆ
ಬಾರಾ ಬಾರಾ ಏ ಗುರುವ ಎಲ್ಲಿಗೆ ಬರುಬೇಕಂದಾನ
ಸೂರ್ಯ ಚಂದರ ಇರುವರಿಗೆ ನೆಲವಂದು ಗಂಗಿ ಹರಿವರಿಗ
ನೆಲವಂದು ಗಂಗಿ ಹರಿವರಿಗೆ ಕಟ್ಟಿಸುವೇನ ಗುಡಿಯೊಂದ
ನಿನ್ನ ಗುಡಿಯಲ್ಲಪ್ಪ ಕೋಳಿ ಕೂಗ ಹಳ್ಳಿಗ
ಒಳ್ಳೆದ ಒಳ್ಳೆದಂದಾನೆ ಲಿಂಗ ಬೀರಣ್ಣ ದೇವರ
ಜಾಗಯಾವಲ್ಲಿ ಅಂದಿದ್ದ ಇರುವದುಯಾವಲಿ ಅಂದಿದ್ದ
ಗುಡಿಯಯಾವಲಿ ಅಂದಿದ್ದ ಗದ್ದಾಗಿಯಾವಲಿ ಅಂದಿದ್ದ
ಗ್ರಾಮ ಸಿಡಿಯಾಣ ಮಾಡೇನ ನೇಮ ಸಿರಡೋಣ ಮಾಡೇನ
ಗ್ರಾಮನೆ ಹುಲಜಂತೇನ ಸಿರಡೋಣ ಮಾಡೇನ".[೩೩]

ಗುರು ಬೀರಪ್ಪ ತೋರಿಸಿದ ಜಾಗದಲ್ಲಿಯೇ ಮಾಳಿಂಗ ದೇವಾಲಯ ನಿರ್ಮಿಸಿ ಗುರುವಿನ ಸೇವೆ ಮಾಡುತ್ತಾನೆ.

೪. ಗೀಜನಹಳ್ಳಿ–ಗೀಜಗನ ಹಳ್ಳಿ ಈಗಿನ ಬಿಜಾಪುರ ಜಿಲ್ಲೆಯಲ್ಲಿದೆ. ಮಾಳಿಮಗರಾಯನು ಗುರುವಾದ ಬೀರಪ್ಪದೇವರ ಪೂಜೆಗಾಗಿ ಹೂ–ಕಾಯಿ, ಸೀತಾಳ ಒಯ್ಯುವ ನಾಗರಬಾವಿ, ಖಾಸ್ಬಾಗ ಇರುವ ಊರು. ಬಿಜಾಪುರ ಕನ್ನಡ ನಾಡಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ತಾಣ ವಿಶ್ವ ಪ್ರಸಿದ್ಧ ಗೋಳಗುಮ್ಮಟ ಇರುವ ತಾಣ, ಬಾರಾಕಮಾನ್ ಮುಂತಾದ ಐತಿಹಾಸಿಕ ಸ್ಥಳಗಳನ್ನು ಕಾಣುತ್ತೇವೆ. ಹಾಲುಮತದಲ್ಲಿಯೂ ಈ ಊರಿನ ಪ್ರಸ್ತಾಪ ಬಂದಿದೆ. ಬೀರಪ್ಪನು ಮಾಳಿಂಗರಾಯನಿಗೆ ನನ್ನ ಪೂಜೆಗಾಗಿ ಹುಳಾಮುಟ್ಟದ ಹೂ ಮತ್ತು ಕಪ್ಪೆ ಕಲಕದ ನೀರು(ಸೀತಾಳ) ತಂದು ನನಗೆ ಪೂಜೆ ಮಾಡಬೇಕೆಂದು ಹೇಳಿದಾಗ ಮಾಳಿಂಗನು ಗುರುವಿನ ಮಾತಿನಂತೆ ಸೀತಾಳ ಮತ್ತು ಹೂವನ್ನು ಹರಸುತ್ತಾ ಗೀಜಗನಹಳ್ಳಿಗೆ ಬಂದು ಕಪ್ಪೆಕಲಕದ ಹೂ ಮತ್ತು ಹುಳ ಮುಟ್ಟದ ಹೂ ತಂದು ಗುರುವಿಗೆ ಪೂಜೆ ಮಾಡಿರುತ್ತಾನೆ. ಇನ್ನು ಮುಂತಾದ ಸ್ಥಳಗಳು ಚಾರಿತ್ರಿಕವಾಗಿ ಮಹತ್ವವನ್ನು ಪಡೆದುಕೊಂಡಿವೆ.

ಕೊನೆಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., ಜನ–ಜನಪದ–ಜಾನಪದ, ಪು.೬೪

೨. ಅಂಬಳಿಕೆ ಹಿರಿಯಣ್ಣ, ಉದ್ಧೃತ ಜಾನಪದ ಸಿದ್ಧಾಂತಗಳು ಮತ್ತು ವಿಧಾನಗಳು, ಪು.೨೬

೩. ಶ್ರೀರಾಮ ಇಟ್ಟಣ್ಣವರ, ಹಾಲಹರವಿ, ಪು.೨೦

೪. ಗಂಗಾಧರ ದೈವಜ್ಞ, ಮಾಳಿಂಗರಾಯನ ಕಾವ್ಯ, ಪು.೨೦

೫. ಗೀತಾರ್ಥ ದರ್ಶನ ಭಾಗ ೧, ಪು.೧೯೩

೬. ಅದೇ, ಪು.೧೯೪

೭. ಪೂಜಾರ ವಿ.ಜ್ಞಿ., ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಪು.೧೯೪

೮. ಯಲ್ಲನಗೌಡ ಫ.ಅತ್ತಿಕೊಳ(ಸಂ), ಹಾಲುಮತದ ಚರಿತ್ರೆ, ಪು.೩

೯. ಶಿವಾನಂದ ಗುಬ್ಬಣ್ಣನವರ, ಕರ್ನಾಟಕದ ಕುರುಬರು, ಪು.೧೨

೧೦. ಕಲಬುರ್ಗಿ ಎಂ.ಎಂ., ಮಾರ್ಗ ೫, ಪು.೪೭೮

೧೧. ಅದೇ, ಪು.೪೭೮

೧೨. ಎಫ್.ಟಿ.ಹಳ್ಳಿಕೇರಿ, ಕೆರೆ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಪು.೧೩೫

೧೩. ರಸ್ತಾಪುರ ಭೀಮಕವಿ, ಹಾಲುಮತೋತ್ತೇಜಕ ಪುರಾಣ, ಸಂ.೨, ಪು.೧೩೭

೧೪. Originatl Inhabitants of Bharathavarsha or India, pp.235, gus tav povent

೧೫. ಎಂ.ಎಂ.ಕಲಬುರ್ಗಿ, ಮಾರ್ಗ ೪, ಪು.೩೭೩

೧೬. ಲಿಂಗದಹಳ್ಳಿ ಹಾಲಪ್ಪ, ಬೀರದೇವರು–ಹಾಲುಮತ ಧಾರ್ಮಿಕ ಸಾಮ್ರಾಜ್ಯದ ಚಕ್ರವರ್ತಿ, ಕುಲದೈವ, ಪು.೪.

೧೭. ಜಿ.ಎನ್.ಚಕ್ರವರ್ತಿ, ಸಂಸ್ಕೃತ–ಕನ್ನಡ ನಿಘಂಟು

೧೮. ಎಂ.ಎಂ.ಕಲಬುರ್ಗಿ(ಸಂ), ಸಿದ್ಧಮಂಕ ಚರಿತೆ, ಪು.೩೨–೩೪

೧೯. ಗಂಗಾಧರ ದೈವಜ್ಞ(ಸಂ), ಮಾಳಿಂಗರಾಯನ ಕಾವ್ಯ, ಪು.೨

೨೦. ವೀರದಂಡೆ (ಸಂ), ಜನಪದ ಹಾಲುಮತ ಮಹಾಕಾವ್ಯ, ಪು.೪೧೦

೨೧. ಹಾಡಿದವರು ಸೋಮಲಿಂಗ ಬಾಜರಗಿ: ಬಿಜ್ಜರಗಿ ಗ್ರಾಮ, ಬಿಜಾಪುರ ಜಿಲ್ಲೆ

೨೨. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ಪು.೪೨೨

೨೩. ಎಂ.ಎಂ.ಕಲಬುರ್ಗಿ, ಸಂಸ್ಕೃತಿ–ವಿಕೃತಿ, ಪು.೪

೨೪. ಬಸವಣ್ಣಪ್ಪ ನೀಲಪ್ಪ ಹಳವಳ್ಳಿ, ಹಾಲುಮತ ಪುರಾಣವು, ಪು.೩೯

೨೫. Gustove oppert-The original inhabitants of India, p.126

೨೬. ಲಿಂಗದಹಳ್ಳಿ ಹಾಲಪ್ಪ, ಬೀರದೇವರು ಹಾಲುಮತ ಧಾರ್ಮಿಕ ಸಾಮ್ರಾಜ್ಯದ ಚಕ್ರವರ್ತಿ, ಕುಲದೈವ, ಪು.೩

೨೭. ಶ್ರೀ ರುದ್ರಭಾರತವೆಂಬ ಬ್ರಹ್ಮಾಂಡ ಪುರಾಣ, ಪು.೨೬

೨೮. ಶಂ.ಬಾ.ಜೋಶಿ, ಕರ್ನಾಟಕದ ವೀರಕ್ಷತ್ರಿಯರು, ಪು.೨೯೩

೨೯. Sir w.Elliets, ಎ.ಸಿ.ಲಲಿತ, ಕಾಡುಕುರುಬರು ಮತ್ತು ಜೇನು ಕುರುಬರು, ಪು.೯

೩೦. Deexithar studies in Tamil Literature and History, P.178-179

೩೧. ಕನ್ನಡ ದಾಖಲು ಸಾಹಿತ್ಯ ಡಾ. ಕೆ.ರವೀಂದ್ರನಾಥ ಪು–೧೫೨)

೩೨. ಎಫ್.ಟಿ.ಹಳ್ಳಿಕೇರಿ, ಕಂಠಪತ್ರ, ಪು.೧೮೫

೩೩. ವೀರಣ್ಣದಂಡೆ, ಜನಪದ ಹಾಲುಮತ ಪುರಾಣ, ಪು.೪೦೮.

ಅಧ್ಯಾಯ: ಎಂಟು

ಅಧ್ಯಯನದ ಫಲಿತಗಳು

ಅಧ್ಯಾಯ: ಎಂಟು

ಅಧ್ಯಯನದ ಫಲಿತಗಳು

ಭಾರತವು ಸಾಂಸ್ಕೃತಿಕವಾಗಿ ಹಲವು ರೂಪಗಳಿಂದ ಕೂಡಿದ ನಾಡಾಗಿದೆ. ಕರ್ನಾಟಕವು ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನ ಗಡಿಯನ್ನು ವಿಸ್ತರಿಸಿಕೊಂಡು ಹೋಗಿದೆ. ಕಾಲದಿಂದ ಕಾಲಕ್ಕೆ ಬದಲಾಗುವ ಘಟನೆಗಳನ್ನು ಮೈಗೂಡಿಸಿಕೊಂಡು ತನ್ನದೇ ಆದ ಚಾರಿತ್ರಿಕ ವಿಶೇಷತೆಯನ್ನು ಪಡೆದುಕೊಂಡಿದೆ. ಹೀಗಾಗಿ ಕರ್ನಾಟಕವು ಸಾಂಸ್ಕೃತಿಕವಾದ ಹಿನ್ನೆಲೆಯಲ್ಲಿ ತನ್ನ ಛಾಪನ್ನು ಬೆಳೆಸಿಕೊಂಡು ಬಂದಿದೆ. ಸುಮಾರು ಹತ್ತನೆ ಶತಮಾನದಿಂದ ಹಿಡಿದು ಇಂದಿನವರೆಗೂ, ನಮ್ಮ ನಾಡು ಒಂದಲ್ಲ ಒಂದು ಸಾಂಸ್ಕೃತಿಕ ಅನನ್ಯತೆಯನ್ನು ಮೈಗೂಡಿಸಿಕೊಂಡಿದೆ.

ಸಮಾಜದಲ್ಲಿ ಹಿಂದಿನ ಕಾಲದಿಂದಲೂ ಧರ್ಮ–ಪಂಥಗಳಲ್ಲಿ ಸಾಕಷ್ಟು ದುರ್ಘಟನೆಗಳು ಸಂಭವಿಸುತ್ತ ಬಂದಿವೆ. ಇವುಗಳಿಂದಾಗಿ ಜನಸಾಮಾನ್ಯರ ಮೇಲೆ ಸಾಕಷ್ಟು ಪ್ರಭಾವ ಬೀರಿದೆ, ಅವರ ಮನಸ್ಸು ಗೊಂದಲಕ್ಕೆ ಒಳಗಾಗಿದೆ, ಜೊತೆಗೆ ಅವರ ಬದುಕು ದುಃಸ್ಥಿತಿಗೆ ಒಳಗಾಗಿದೆ. ಇವರ ಬದುಕು ಹಸನು ಮಾಡಲು, ಎಲ್ಲ ಧರ್ಮದಲ್ಲೂ ಪವಾಡ ಪುರುಷರು ಹುಟ್ಟಿ, ತಮ್ಮದೇ ಆದ ರೀತಿಯಲ್ಲಿ, ಸಮಾಜದಲ್ಲಿ ತುಂಬಿ ತುಳುಕುತ್ತಿರುವ ಅಂಧಕಾರ, ಅಧರ್ಮ, ಭೇದ–ಭಾವಗಳನ್ನು ಹೋಗಲಾಡಿಸಲು ತಮ್ಮ ಜೀವನವನ್ನೇ ಮೂಡುಪಾಗಿಟ್ಟರು. ಹಾಗೆಯೇ ಜನಸಾಮಾನ್ಯರಲ್ಲಿ ನೈತಿಕ ಬುದ್ಧಿಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಪಟ್ಟಿದ್ದಾರೆ.

ಪವಾಡ ಪುರುಷರು ಜಾತಿ–ಭೇದ–ಭಾವವೆನ್ನದೆ ಸಮಾಜದ ಶ್ರಮಿಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಅವರು ದೇವರನ್ನು ಕಲ್ಲು–ದೇವಾಲಯಗಳಲ್ಲಿ ಹುಡುಕದೆ ದೇಹವೇ ದೇಗುಲವೆಂಬಂತೆ ತಮ್ಮನ್ನು ತಾವು ಅರಿತು, ದೈವಿ ಪುರುಷರಾಗಿ ಬೆಳೆದಿದ್ದಾರೆ. ಇವರೆಲ್ಲರೂ ಸಾಕಷ್ಟು ಸಂಪ್ರದಾಯಗಳಿಂದ ದೂರ ಉಳಿದು ಕಾಯಕದಲ್ಲಿ ಕೈಲಾಸ ಕಂಡ ಮಹಾಪುರುಷರು.

ಆಸೆ-ಆಕಾಂಕ್ಷೆಗಳಿಲ್ಲದೆ ಸರಳತೆಯಲ್ಲಿ ಜೀವಿಸಿದ ವ್ಯಕ್ತಿಗಳು. ಇವರು ಮನುಷ್ಯನಲ್ಲಿರುವ ಕೆಟ್ಟ ಭಾವನೆಗಳನ್ನು ಹೋಗಲಾಡಿಸಿ, ಒಳ್ಳೆತನವನ್ನು ಮೂಡಿಸಲು ಶ್ರಮವಹಿಸಿದವರು. ನಂಬಿ ಬಂದವರನ್ನು ಕೈ ಬಿಡದೆ ಅವರಲ್ಲಿ ಜ್ಞಾನವನ್ನು, ಧೈರ್ಯವನ್ನು, ಉತ್ಸಾಹವನ್ನು ತುಂಬಿ ಸಾಧನೆಯತ್ತ ಕರೆದೊಯ್ಯುತ್ತಾರೆ. ಬಡವ-ಶ್ರೀಮಂತ, ಮೇಲು-ಕೀಳು ಎನ್ನದೆ ಸಮಾಜದಲ್ಲಿ ನೆಲೆಸಿರುವ ಪ್ರತಿಯೊಬ್ಬರು ಸಮಾನರೆಂದು ಭಾವಿಸಿ, ಅವರ ಜೀವನಗಳಲ್ಲಿ ಬಂದ ಕಷ್ಟಗಳನ್ನು ನಿವಾರಿಸಲು ಬೇಕಾದ ಎಲ್ಲ ಸಂಗತಿಗಳನ್ನು ತಮ್ಮ ಜ್ಞಾನದಿಂದ ತಿಳಿದು ಅವರಿಗೆ ನಿಸ್ವಾರ್ಥದಿಂದ ಪರಿಹಾರ ಒದಗಿಸಿ ಕೊಡುತ್ತಾರೆ.

ಪವಾಡ ಪುರುಷರ ಬಗ್ಗೆ ಜನಸಾಮಾನ್ಯರ ಮನದಲ್ಲಿರುವ ವಿಷಯಗಳೆಂದರೆ ಜನಸಾಮಾನ್ಯರಗೋಸ್ಕರ ಮಾಡಿದ ಪವಾಡಗಳಿಂದಾಗಿ ಜನರು ಅವರ ಮೇಲೆ ನಂಬಿಕೆಯನ್ನು ಇಟ್ಟಿದ್ದಾರೆ. ನಂಬಿಕೆಗಳನ್ನು ಒಳಗೊಂಡ ಪವಾಡ ಕಥೆಗಳು ಮೌಖಿಕದಿಂದ, ಲಿಖಿತ ರೂಪ ಪಡೆದುಕೊಂಡಿವೆ. ಲಿಖಿತ ರೂಪ ಪಡೆದ ಪುರಾಣಗಳು ಪವಾಡ ಪುರುಷರ ಜೀವನ ಚರಿತ್ರೆಯನ್ನು, ಅವರ ಸಾಧನೆಗಳನ್ನು ಪವಾಡಗಳನ್ನು ಅರಿಯಲು ಅನುಕೂಲವಾಗುತ್ತವೆ. ಇವುಗಳ ಜೊತೆಗೆ ಸಮಾಜದಲ್ಲಿ ಇವರ ಸೃಜನಾತ್ಮಕವಾದಂತಹ ಕಾರ್ಯಗಳನ್ನು ಕಥೆಗಳ ರೂಪದಲ್ಲಿ ವ್ಯಕ್ತಪಡಿಸಿ, ಅವರ ಜೀವನ ಚರಿತ್ರೆ, ಜೀವನದ ಮೌಲ್ಯಗಳನ್ನು ಜನಸಾಮಾನ್ಯರ ಮನದಲ್ಲಿ ಭಿತ್ತಿ ಧರ್ಮದ ಮೌಢ್ಯತೆಯನ್ನು, ಜಾತಿ-ಭೇದ-ಭಾವಗಳನ್ನು ಹೋಗಲಾಡಿಸುವ ಕಾರ್ಯಗಳನ್ನು ಪುರಾಣಗಳು ಮಾಡುತ್ತವೆ.

ಇಂತಹ ಪುರಾಣಗಳು ಸಾಹಿತ್ಯಿಕ ಹಾಗೂ ಧಾರ್ಮಿಕವಾಗಿ ಹರಡಲು ಹನ್ನೆರಡನೆ ಶತಮಾನವು ಮಹತ್ವವಾದ ಹಂತವಾಗಿ ಬೆಳೆದುಕೊಂಡು ಹೋಗಿದೆ. ಈ ಕಾಲದಲ್ಲಿ ಸಾಹಿತ್ಯವಾಗಿ ಅಲ್ಲದೆ ಸಾಮಾಜಿಕವಾಗಿಯೂ ಹಲವು ಸಂಗತಿಗಳು ರಚನೆಯಾಗಿವೆ. ಆಯಾ ಧರ್ಮದಲ್ಲೂ ಸಾಮಾಜಿಕವಾಗಿ, ಜನಸಾಮಾನ್ಯರ ಮನಸಿನಲ್ಲಿ ರಚನೆಯಾಗಿರುವ ಸಂಗತಿಗಳನ್ನು ಪುರಾಣಗಳಲ್ಲಿ ರಚಿಸಿದ್ದಾರೆ. ಕನ್ನಡದಲ್ಲಿ ಹಾಲುಮತ ಪುರಾಣಗಳು ಎಂಬ ಹೆಸರಿನ ಪ್ರತ್ಯೇಕ ಅಧ್ಯಯನಕ್ಕೆ ಇಂಬು ದೊರೆಯುವಷ್ಟು ವ್ಯಾಪ್ತಿ, ಈ ಪುರಾಣ ಸಾಹಿತ್ಯಕ್ಕೆ ಇರುವುದನ್ನು ಗಮನಿಸಬಹುದು. ಪುರಾಣಗಳ ಮುಖ್ಯ ಗುರಿ ಕಥೆ, ಉಪಕಥೆಗಳೊಂದಿಗೆ ಅಲ್ಲಿ ನಡೆದ ಘಟನೆಗಳಿಗೆ ಪವಾಡಗಳನ್ನು ಆರೋಪಿಸಲಾಗಿದೆ. ಪವಾಡಗಳ ಕಥೆಗಳು ಇಲ್ಲದೆ ಪುರಾಣಗಳು ರಚನೆ ಮಾಡಲು ಸಾಧ್ಯವಿಲ್ಲ. ನಮ್ಮ ಪೌರಾಣಿಕ ಸಾಹಿತ್ಯದಲ್ಲಿ ಪುರಾಣಗಳಿಗೆ ಅಗ್ರಸ್ಥಾನವಿದೆ. ಪುರಾಣಗಳಲ್ಲಿ ಬರುವ ಪವಾಡಕಥೆಗಳು ಜನಸಾಮಾನ್ಯರಿಗೆ ಸಂಬಂಧಿಸಿದ, ಮಹಾಪುರುಷರ ಸ್ಥಳೀಯ ಇತಿಹಾಸವನ್ನು ಒಳಗೊಂಡಿರುತ್ತದೆ. ಹೀಗಾಗಿ ಪುರಾಣಗಳು ಜನಸಾಮಾನ್ಯರ ಮನಸ್ಸನ್ನು ನಿರಂತರವಾಗಿ

ಆಳುತ್ತ ಬಂದಿವೆ. ಇಂತಹ ಪವಾಡಕಥೆಗಳಿಂದ ಧಾರ್ಮಿಕ ಪುರುಷರು ಕನ್ನಡ ಸಾಹಿತ್ಯದಲ್ಲಿ ತಮ್ಮವೇ ಆದ ರೀತಿಯಲ್ಲಿ ಬೆಳೆದುಕೊಂಡು ಬಂದಿದ್ದಾರೆ. ಇಂತಹ ಪುರಾಣ ಕಥೆಗಳಿಂದ ನಮ್ಮ ಧರ್ಮಗಳು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಂಡು ಬಂದಿವೆ. ಭಾರತೀಯ ಹಲವು ಧರ್ಮಗಳಲ್ಲಿ ಹಾಲುಮತವು ಅನೇಕ ಪುರಾಣಗಳನ್ನು ಒಳಗೊಂಡಿದೆ. "ಹಾಲುಮತ ಪುರಾಣಗಳಲ್ಲಿ ಪವಾಡಕಥೆಗಳು" ಎಂಬ ಪ್ರಸ್ತುತ ಅಧ್ಯಯನವು ಹಾಲುಮತ ಪುರಾಣಗಳಲ್ಲಿ ಬರುವ ಪವಾಡಕಥೆಗಳನ್ನು ಗುರುತಿಸಿ, ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರ್ನಾಟಕ ಹಾಲುಮತ ಧರ್ಮವು ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಭಾರತೀಯ ಹಿಂದೂಧರ್ಮಗಳೆಲ್ಲ ಒಂದೇ ಎಂದರು, ಕಾಲಾಂತರದಲ್ಲಿ ಹಾಲುಮತ ಧರ್ಮವು ಕೆಲವು ಕಾರಣಗಳಿಂದ ಒಡೆದು ಹೋಯಿತು. ಹಾಲುಮತ ಧರ್ಮದ ಆಚಾರ-ವಿಚಾರಗಳಿಂದ ಕೂಡಿದ ಪುರಾಣಗಳ ಪವಾಡಕಥೆಗಳನ್ನು ಕುರಿತು ಸಮಗ್ರ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಫಲಿತಗಳು

೧. ಹಾಲುಮತ ಪುರಾಣಗಳಲ್ಲಿ ಬರುವ ಕಥಾನಾಯಕರು ಹಾಲುಮತದ ದೈವಪುರುಷರಾಗಿ ನೆಲೆ ನಿಂತಿದ್ದಾರೆ. ಇವರು ಪವಾಡಗಳ ಜೊತೆಗೆ ಸಮಾಜದಲ್ಲಿ ಆದ ದುರ್ಘಟನೆಗಳನ್ನು ತಿದ್ದುವಂತಹ ಕೆಲಸ ಮಾಡಿದವರು. ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಇವರು ಜನಗಳ ಮಧ್ಯೆ ಬದುಕಿ ಉನ್ನತ ಸ್ಥಾನಕ್ಕೆ ಹೋದವರು. ಜನರ ಒಳಿತಿಗಾಗಿ ಪವಾಡಗಳನ್ನು ಮಾಡಿ, ಜನಸಾಮಾನ್ಯರಿಗೆ ಅಚ್ಚರಿಯನ್ನುಂಟು ಮಾಡಿದರು. ಹಾಲುಮತದ ಮಹಾಪುರುಷರು ಪವಾಡಗಳನ್ನು ಮಾಡಲು ಅದರ ಹಿಂದಿರುವ ಉದ್ದೇಶವೇನು? ಅವುಗಳ ತಾತ್ವಿಕ ಅಂಶಗಳನ್ನು ವಿಶ್ಲೇಷಿಸಲಾಗಿದೆ.

೨. ಹಾಲುಮತ ಧರ್ಮಗಳಲ್ಲಿರುವ ನೀತಿ-ರೀತಿಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಪುರಾಣಗಳಲ್ಲಿ ಹೇಗೆ ನಿರೂಪಿಸಲಾಗಿದೆ ಎಂಬುದನ್ನು ಹೇಳುವುದರೊಂದಿಗೆ, ಮಹಾಪುರುಷರು ಬದುಕಿದ ರೀತಿಯನ್ನು ಒಂದು ಪರಂಪರೆಯೆಂಬಂತೆ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೩. ಹಾಲುಮತ ಪುರಾಣಗಳಲ್ಲಿ ಬರುವ ಕಥಾನಾಯಕರ ಹುಟ್ಟು ಕೈಲಾಸದಲ್ಲಿಯ ಶಿವನ ಅಪ್ಪಣೆ ಮೇರೆಗೆ ಅವತರಿಸಿದವರು ಎಂಬ ಕಥೆಗಳಿವೆ. ಆದರೆ ಇವರೆಲ್ಲ ಜನತೆಯ ನಡುವೆಯೇ ಹುಟ್ಟಿ, ಬಾಳಿ ಬದುಕಿದವರು. ಮಹಾಮರುಷರ ಜನನದ ಬಗ್ಗೆ ನಾನಾ ರೀತಿಯ ಗೊಂದಲವಿರುವುದನ್ನು ಕಾಣಬಹುದು.

೪. ಮಹಾಪುರುಷರ ಪವಾಡಗಳ ಹಿಂದಿರುವ ಉದ್ದೇಶ ಒಂದೇ ಸಮಾಜದಲ್ಲಿರುವ ಅನ್ಯಾಯವನ್ನು ತಿದ್ದಿ, ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದಾಗಿದೆ. ಪುರಾಣಗಳ ಮೂಲಕ ಜನಸಾಮಾನ್ಯರಲ್ಲಿ ಮಹಾಪುರುಷರ ಜೀವನದ ಆದರ್ಶ ತತ್ವಗಳನ್ನು ಅಳವಡಿಸಿಕೊಳ್ಳುವಂತೆ ಕಥೆಯ ಮೂಲಕ ಹೇಳಲಾಗಿದೆ. ಜನರಲ್ಲಿ ಪವಾಡಗಳ ಮೂಲಕ ಅನ್ಯಾಯವನ್ನು ಬಿಟ್ಟು, ಧರ್ಮದ ಹಾದಿಯಲ್ಲಿ ಹೋಗುವುದಕ್ಕೆ ಸಹಕಾರಿಯಾಗಿವೆ. ಪವಾಡಗಳ ಮೂಲಕ ಜನರಲ್ಲಿ ದೈವಾಂಶವನ್ನು ಆರೋಪಿಸಿ ಅವರನ್ನು ಮಹಾಪುರುಷರನ್ನಾಗಿ ರೂಪಿಸಿ ಸಮಾಜವನ್ನು ಉನ್ನತ ಮಟ್ಟಕ್ಕೆ ತರುವುದು, ಧರ್ಮದ ಏಳ್ಗೆಗೆ ಶ್ರಮಿಸುವುದು ಕಂಡುಬರುತ್ತದೆ. ಜೊತೆಗೆ ಜನಪದರು ಪುರಾಣಗಳಲ್ಲಿ ಬರುವ ಪವಾಡ ಕಥೆಗಳನ್ನು ಹೇಳಿರುವುದನ್ನು ಕಂಡಿದ್ದೇವೆ.

೫. ಹಾಲುಮತದ ಮಹಾಪುರುಷರು ಮಾಡಿದಂತಹ ಪವಾಡಗಳು ಜನಸಾಮಾನ್ಯರಲ್ಲಿರುವ ಮೂಢನಂಬಿಕೆಗಳನ್ನು, ಅಂಧಕಾರವನ್ನು ಅಳಿಸಿಹಾಕಲು ಯಶಸ್ವಿಯಾಗಿವೆ. ಆಧುನಿಕ ಪವಾಡ ಪುರುಷರಿಗಿಂತ, ಪ್ರಾಚೀನ ಹಾಲುಮತದ ಮಹಾಪುರುಷರು ಯಾವುದೇ ಲಾಭಕ್ಕಾಗಲಿ, ಲೋಭಕ್ಕಾಗಲಿ ವ್ಯಾಮೋಹಕ್ಕಾಗಲಿ ಒಳಗಾದವರಲ್ಲ. ಇವರು ಕೇವಲ ಜನರನ್ನು ಉದ್ಧರಿಸುವುದಕ್ಕಾಗಿ, ಅವರ ಕಷ್ಟಗಳನ್ನು ನಿವಾರಿಸುವುದಕ್ಕಾಗಿ ಪವಾಡಗಳನ್ನು ಮಾಡಿದ್ದಾರೆ. ಉತ್ತಮ ಸಮಾಜ ನಿರ್ಮಾಣಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ.

೬. ವಿದ್ವಾಂಸರು ಪವಾಡಗಳ ಅರ್ಥ, ಸ್ವರೂಪ, ವಿಭಾಗಗಳನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಮಹಾಪುರುಷರ ಜೀವನದಲ್ಲಿ ನಡೆದ ಪವಾಡಗಳು ಮಹಾಪುರುಷರ ವೃತ್ತಿಗಳ ಹಿನ್ನೆಲೆಯಲ್ಲಿಯೇ, ಪಶು-ಪ್ರಾಣಿಗಳ ಹಿನ್ನೆಲೆಯಿಂದಲೇ, ಅವರು ನೆಲೆಗೊಂಡ ಸ್ಥಳಗಳ ಹಿನ್ನಲೆಯಿಂದ ಪವಾಡಗಳನ್ನು ವರ್ಗೀಕರಿಸಿರುವುದನ್ನು ಕಾಣುತ್ತೇವೆ.

೭. ಹಾಲುಮತದಲ್ಲಿ ಬರುವ ಪುರಾಣಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಸಮುದಾಯದ ಸಾಂಸ್ಕೃತಿಕ ವೀರರ ಹಾಗು ಗುರು-ಶಿಷ್ಯರ ಸಂಬಂಧ ಸಂಪ್ರದಾಯಗಳನ್ನು ಕಥೆಗಳ ರೂಪದಲ್ಲಿ ವ್ಯಕ್ತಪಡಿಸಲಾಗಿದೆ.

೮. ಪವಾಡ ಪುರುಷರನ್ನು ಗೌರವದಿಂದ, ಭಕ್ತಿಯಿಂದ ಜನಪದರು ಪೂಜಿಸುತ್ತಾರೆ. ಅದೇ ನಿಟ್ಟಿನಲ್ಲಿ ಪವಾಡ ಕಥೆಗಳು ಬೆಳೆದುಕೊಂಡು ಬಂದಿವೆ. ಇಂತಹ ಕಥೆಗಳಿಂದ

ಜನಸಾಮಾನ್ಯರ ಶಕ್ತಿಗೆ ಸ್ಫೂರ್ತಿ ಬಂದಂತಾಗುತ್ತದೆ. ಅವರ ಬದುಕಿನಲ್ಲಿ ಆತ್ಮಶಕ್ತಿಯನ್ನು ಗಳಿಸಿ, ಮುಂದಿನ ಹೆಜ್ಜೆಯನ್ನು ಇಡಬೇಕೆಂಬುದೇ ಕಥೆಗಳ ಆಶಯ.

೯. ಪವಾಡ ಕಥೆಗಳು ತಲೆಮಾರಿನಿಂದ, ತಲೆಮಾರಿಗೆ ಧಾರ್ಮಿಕವಾಗಿ ಬೆಳೆದುಕೊಂಡು ಬಂದಿದೆ. ಬೀರಪ್ಪನು ಬಡವಿ ಗಂಗಮ್ಮಳ ಕಷ್ಟ ನೋಡಿ ನಿಧಿ ನೀಡಿದ್ದು, ಸತ್ತವರನ್ನು ಬದುಕಿಸಿದ್ದು, ರೋಗ ನಿವಾರಿಸಿದ್ದು, ಕೆಲವರ ಗರ್ವಭಂಗ ಮಾಡಿದ ಹಲವು ಕಥೆಗಳಿವೆ. ಪವಾಡ ಪುರುಷರು ಭಕ್ತರ ಭಕ್ತಿಗೆ ಮೆಚ್ಚಿ ಅವರ ಕಷ್ಟಗಳನ್ನು ನಿವಾರಿಸಿದ ಹಲವು ಕಥೆಗಳಿವೆ. ಇಂತಹ ಕಥೆಗಳಿಂದ ಪವಾಡ ಪುರುಷರ ಮೇಲೆ ಭಕ್ತಿ, ಗೌರವ ಹುಟ್ಟಿ ಬರಲು ಅನುವು ಮಾಡಿವೆ. ಮಹಾಪುರುಷರು ನಂಬಿದವರಿಗೆ ಎಂದಿಗೂ ಕೈಬಿಡುವುದಿಲ್ಲ ಎಂಬ ಸಂಗತಿಯನ್ನು ಕಥೆಗಳ ಮೂಲಕವೇ ಜನಸಾಮಾನ್ಯರಿಗೆ ತಿಳಿಹೇಳಲಾಗಿದೆ.

೧೦. ಹಾಲುಮತದ ಮೂಲವು ಶಿವ–ಪಾರ್ವತಿಯರಿಂದ ಆರಂಭವಾಯಿತಾದರೂ, ಕಾಲ ಕಳೆದಂತೆ ಈ ಧರ್ಮದಲ್ಲಿ ಪವಾಡ ಪುರುಷರು ಸೇರ್ಪಡೆಯಾಗಿ ಹಾಲುಮತದ ದೇವರುಗಳಾಗಿ ಮಾರ್ಪಟ್ಟಿದ್ದಾರೆ.

೧೧. ಐತಿಹಾಸಿಕವಾಗಿ, ಧಾರ್ಮಿಕವಾಗಿ ಸಮಾಜದಲ್ಲಿ ಹಾಲುಮತವು ಬೆಳೆದು ನಿಂತಿದೆ. ಈ ಧರ್ಮದಲ್ಲಿರುವ ದೇವರುಗಳ ಮೂಲದಲ್ಲಿನ ಅಭಿಪ್ರಾಯಗಳು ಭಿನ್ನವಾಗಿದ್ದರೂ, ಅವರುಗಳ ಆಚರಣೆಗಳಲ್ಲಿ–ನಂಬಿಕೆಗಳಲ್ಲಿ ನಾವು ಬಿನ್ನತೆಯನ್ನು ಕಾಣುವುದಿಲ್ಲವೆಂಬ ಸಂಗತಿಯನ್ನು ಕಾಣುತ್ತೇವೆ.

೧೨. ಪವಾಡ ಪುರುಷರು ಮಾಡಿದ ಕೆಲವು ಪವಾಡಗಳು ಅಂಧಶ್ರದ್ಧೆಯಿಂದ ಕೂಡಿವೆ ಎಂದರೂ, ಅವುಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಕಂಡಾಗ ಕೆಲವು ಪವಾಡಗಳು ಸತ್ಯವೆಂದು ಕಂಡುಬರುತ್ತವೆ.

ಮುಂದಿನ ಅಧ್ಯಯನದ ಸಾಧ್ಯತೆಗಳು

ಈ ಮಹಾಪ್ರಬಂಧದಲ್ಲಿ ಕೆಲವು ವಿಚಾರಗಳನ್ನು ನಿರೂಪಿಸಲು ಸಾಧ್ಯವಾಗಿಲ್ಲ ಅಂತಹ ವಿಷಯಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ಮುಂದಿನ ಅಧ್ಯಯನಕ್ಕೆ ಸಂಶೋಧನ ವಿದ್ಯಾರ್ಥಿಗಳಿಗೆ ಅಥವಾ ಓದುಗರಿಗೆ ಸಲಹೆಗಳ ಮೂಲಕ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದೇನೆ.

- ಹಾಲುಮತ ಪುರಾಣಗಳು ಮೌಖಿಕವಾಗಿ ಬೆಳೆದುಕೊಂಡು ಬಂದ ಹಾದಿಯ ಪರಿಪೂರ್ಣ ನೋಟವನ್ನು ವಿಶ್ಲೇಷಿಸಬೇಕಾಗಿದೆ.

- ಸಮಾಜದ ಇತರ ಧರ್ಮಗಳ ಪುರಾಣ ಕಥೆಗಳೊಂದಿಗೆ, ಈ ಧರ್ಮದ ಪವಾಡ ಕಥೆಗಳ ಸಾಮ್ಯತೆಯನ್ನು ತಿಳಿದು, ಅವುಗಳ ತಾತ್ವಿಕ ಅಧ್ಯಯನ ಮಾಡಬೇಕು.
- ವೈಜ್ಞಾನಿಕತೆಗೆ ಹತ್ತಿರವಾಗಿರುವ ಪವಾಡ ಕಥೆಗಳ ಸಂಗ್ರಹವಾಗಬೇಕಾಗಿದೆ.
- ಮೌಖಿಕವಾದ ಪುರಾಣಗಳು, ಲಿಖಿತ ಪುರಾಣಗಳು ಜನಪದರ ಮೇಲೆ ಎಂತಹ ಪರಿಣಾಮವನ್ನು ಬೀರಿವೆ ಎಂಬುದರ ಬಗ್ಗೆ ಮಾಹಿತಿ ಸಂಗ್ರಹವಾಗಬೇಕಾಗಿದೆ.
- ವಿವಿಧ ಧರ್ಮಗಳಲ್ಲಿನ ಪವಾಡ ಪುರುಷರ ಸಾಮ್ಯತೆಯನ್ನು ತೌಲನಿಕವಾಗಿ ಚರ್ಚಿಸಬಹುದಾಗಿದೆ.

ಹಾಲುಮತದಲ್ಲಿ ಹೆಸರು ಮಾಡಿದ ಮಹಾಪುರುಷರು ಸಾಂಸ್ಕೃತಿಕ ವ್ಯಕ್ತಿಗಳಾಗಿ ಜನಸಾಮಾನ್ಯರಲ್ಲಿ ಚರಿತ್ರೆಯನ್ನು ಹುಟ್ಟುಹಾಕಿದ್ದಾರೆ. ಅವರ ಕುರಿತು ಬರುವ ಆಚರಣೆಗಳು, ಪೂಜೆ ಸಂಪ್ರದಾಯಗಳು, ಜಾತ್ರೆ ಹಬ್ಬ-ಹರಿದಿನಗಳು ಅವರ ಹೆಸರಿನೊಂದಿಗೆ ಆಚರಿಸುವುದನ್ನು ನಾವು ಇಂದಿಗೂ ಕಾಣುತ್ತೇವೆ. ಜಾತ್ರೆಗಳಿಗೂ ಪವಾಡಗಳು ಹುಟ್ಟಿರುವುದು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿಯೇ ಅವರ ಚರಿತ್ರೆ ಹುಟ್ಟಿರುವುದು. ಈ ಚರಿತ್ರೆಗಳೇ ಪುರಾಣಗಳಾಗಿ ಬೆಳೆದಿವೆ. ಈ ಪುರಾಣಗಳಲ್ಲಿರುವ ಪವಾಡ ಕಥೆಗಳ ಅಧ್ಯಯನವನ್ನು ಕೈಗೊಂಡಿರುವುದು ಫಲಿತಗಳಲ್ಲಿ ಒಂದು. ಪವಾಡಗಳನ್ನು ಪ್ರಸ್ತುತ ಕಾಲದಲ್ಲಿ ಸ್ವೀಕರಿಸುವ ರೀತಿಯಾಗಿರಬಹುದು, ಅವುಗಳನ್ನು ಅರ್ಥಮಾಡಿಕೊಳ್ಳುವ ರೀತಿಯಾಗಿರಬಹುದು, ಇವುಗಳನ್ನು ಯೋಚಿಸಿ ಗುರುತಿಸುವ ಜವಾಬ್ದಾರಿ ನಮ್ಮ ಮೇಲೆ ಇದೆ. ಇಂತಹ ವಿಷಯಗಳು ಪುರಾಣಗಳಲ್ಲಿ ಯಾವ ರೀತಿಯಾಗಿ ಮೂಡಿಬಂದಿವೆ ಎಂಬುದರ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಜೊತೆಗೆ ಮಹಾಪುರುಷರ ಕುರಿತು ಬಂದಿರುವ ಪುರಾಣಗಳನ್ನು ಸಾಧನವಾಗಿಟ್ಟುಕೊಂಡು, ಅವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಒಟ್ಟಿನಲ್ಲಿ ಹಾಲುಮತದ ಸಾಂಸ್ಕೃತಿಕ ಮಹಾಪುರುಷರ ಪವಾಡಗಳನ್ನು ಪುರಾಣಗಳಲ್ಲಿ ಯಾವ ರೀತಿಯಾಗಿ ಬಿಂಬಿಸಿದ್ದಾರೆ ಎಂಬುದನ್ನು, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪ್ರತಿಬಿಂಬಿಸುವ ಮಹಾಪ್ರಬಂಧ ಇದಾಗಿದೆ.

ಪರಾಮರ್ಶನ ಗ್ರಂಥಗಳು

೧. ಅನ್ನಪೂರ್ಣ ಜಾಲವಾದಿ, **ಶಂಕರ ದಾಸಿಮಯ್ಯ ಪುರಾಣ: ಒಂದು ಅಧ್ಯಯನ,** ಎಂ. ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೯.

೨. ಅಣ್ಣಪ್ಪ ವಾಸುದೇವರಾಯ ಮುತ್ತೂರ, **ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣ,** ವಿದ್ಯಾನಿಧಿ ಪ್ರಕಾಶನ ಗದಗ, ೨೦೦೪.

೩. **ಇತಿಹಾಸ ದರ್ಶನ,** ಸಂ-೪, ಕರ್ನಾಟಕ ಇತಿಹಾಸ ಅಕಾಡೆಮಿ,(ರಿ), ಬೆಂಗಳೂರು-೧೯೮೯.

೪. ಒಡೆಯರ ಡಿ. ಹೆಗ್ಗಡೆ, **ಹಾಲುಮತ ಕುರುಬ ಜನಾಂಗದ ಇತಿಹಾಸ,** ಅಖಿಲಾ ಏಜೆನ್ಸೀಸ್, ಆಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು, ೨೦೦೫.

೫. ಒಡೆಯರ್ ಡಿ. ಹೆಗ್ಗಡೆ, **ಕುರುಬ ಜನಾಂಗದ ರಾಜಕೀಯ ನಾಯಕರು,** ಮೈಸೂರು, ೨೦೦೫.

೬. ಕಪಟರಾಳ ಕೃಷ್ಣರಾಯ, **ಕರ್ನಾಟಕ ಸಂಸ್ಕೃತಿ ಸಂಶೋಧನೆ,** ಹನುಮಂತರಾವ್ ಕುರುಡಿ, ಸಹಕಾರ ಸಂಘ, ಮೈಸೂರು, ೧೯೭೦.

೭. ಕಪಟರಾಳ ಕೃಷ್ಣರಾಯರು, **ನಾಡು-ನುಡಿ ಮತ್ತು ಲಾಕುಳ ಶೈವ ಇತಿಹಾಸ,** ಪುಸ್ತಕ ಶಕ್ತಿ ಪ್ರಕಾಶನ, ೨೦೦೬.

೮. ಕರಿಯಪ್ಪ ಎಂ.(ಸಂ), **ಮೇಷ ಸಮೀಕ್ಷೆ,** ನಂ-೧೪೪೮, ೫ನೇ ಅಡ್ಡರಸ್ತೆ, ೬ನೇ ಬ್ಲಾಕ್, ಬನಶಂಕರಿ, ೩ನೇ ಹಂತ, ಬೆಂಗಳೂರು.

೯. ಕರಿಯಪ್ಪ ಎಂ., **ಮೇಷ ವಿಜಯ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೧೦. ಕರಿಯಪ್ಪ ಎಂ.(ಸಂ), **ಹಾಲತೊರೆ,** ಸಂಸ್ಮರಣ ಗ್ರಂಥ, ನಗರ ಕುರುಬರ ಸಂಘ(ರಿ), ಹದಡಿ ರಸ್ತೆ, ದಾವಣಗೆರೆ, ೨೦೦೩.

೧೧. ಕಲಬುರ್ಗಿ ಎಂ. ಎಂ.(ಸಂ), **ತಗರ ಪವಾಡ,** ವಿದ್ಯಾನಿಧಿ ಪ್ರಕಾಶನ ಗದಗ, ೨೦೦೪.

೧೨. ಕಲಬುರ್ಗಿ ಎಂ. ಎಂ., **ಮಾರ್ಗ(ಸಂ-೪),** ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೪.

೧೩. ಕಲಬುರ್ಗಿ ಎಂ. ಎಂ.(ಸಂ), **ಸಿದ್ಧಮಂಕ ಚರಿತೆ,** ಲಿಂಗಾಯಿತ ಅಧ್ಯಯನ ಸಂಸ್ಥೆ, ಶ್ರೀ. ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೨೦೦೪.

೧೪. ಕಲಬುರ್ಗಿ ಎಂ. ಎಂ., **ಸಂಸ್ಕೃತಿ ವಿಕೃತಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೧೫. ಕಲಬುರ್ಗಿ ಎಂ. ಎಂ., **ಶಾಸನ ವ್ಯಾಸಂಗ (ಸಂ-೨),** ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೧೬. ಕಲಬುರ್ಗಿ ಎಂ. ಎಂ., **ಶಾಸನಗಳಲ್ಲಿ ಶಿವಶರಣರು,** ಸಿರಿಗನ್ನಡ ಪ್ರಕಾಶನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.

೧೭. ಗಂಗಾಧರ ದೈವಜ್ಞ(ಸಂ), **ಮಾಳಿಂಗರಾಯನ ಕಾವ್ಯ,** ಪ್ರಸಾರಾಂಗ, ಕನ್ನಡ ವಿದ್ಯಾವಿದ್ಯಾಲಯ, ಹಂಪಿ ವಿದ್ಯಾರಣ, ೧೯೯೯.

೧೮. ಗೋಪಾಲಕೃಷ್ಣಯ್ಯ ಕೆ.ಎಲ್., **ಪುರಾಣ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೮.

೧೯. ಚಂದ್ರಕಾಂತ ಬಿಜ್ಜರಗಿ, **ಕುರುಬರ ಹೆಜ್ಜೆಗಳು: ಒಂದು ಅಧ್ಯಯನ,** ಶೈಲಚಂದ್ರ ಪ್ರಕಾಶನ, ದರ್ಗಾ, ಬಿಜಾಪುರ, ೨೦೦೬.

೨೦. ಚಂದ್ರಕಾಂತ ಪ್ರಭುರಾವ್, **ಶ್ರೀ ಅಮೋಘಸಿದ್ಧೇಶ್ವರ ಚರಿತ್ರೆ,** ಬಿರಾದಾರ್ ಮಾಡ್ಯಾಳ, ಆಳಂದ, ಕಲಬುರ್ಗಿ, ೧೯೮೨.

೨೧. ಚಂದ್ರಶೇಖರ ಎಂ.(ಸಂ), **ಗೊಲ್ಲಾಳಯ್ಯನ ಪುರಾಣ,** ಪ್ರಸಾದ ಪ್ರಕಾಶನ, ಮನುವನ ಬೆಂಗಳೂರು, ೧೯೭೨.

೨೨. ಚಕ್ಕರೆ ಶಿವಶಂಕರ್, **ಗೊರವರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೨೩. ಚಿದಾನಂದಮೂರ್ತಿ ಎಂ., **ಗ್ರಾಮೀಣ,** ಬಾಪ್ಕೋ ಪ್ರಕಾಶನ, ಬೆಂಗಳೂರು, ೧೯೭೭.

೨೪. ಚಿದಾನಂದಮೂರ್ತಿ ಎಂ., **ಜನ-ಜನಪದ-ಜಾನಪದ,** ಸಪ್ನಬುಕ್ ಹೌಸ್, ಬೆಂಗಳೂರು, ೨೦೦೨.

೨೫. ಚಿದಾನಂದಮೂರ್ತಿ ಎಂ., **ಪಗರಣ ಮತ್ತು ಇತರ ಸಂಪ್ರಬಂಧಗಳು,** ಪುಸ್ತಕ ಚಿಲುಮೆ-೧೯೮೪.

೨೬. ಚಿದಾನಂದಮೂರ್ತಿ ಎಂ., **ಶಾಸನಗಳ ಸಾಂಸ್ಕೃತಿಕ ಅಧ್ಯಯನ(ಕ್ರಿ.ಶ. ೪೫೦-೧೧೫೦),** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೯.

೨೭. ಚೆನ್ನಪ್ಪ ಕಟ್ಟಿ, ವಾಡೇದ ಆರ್. ಎಸ್.(ಸಂ), **ಕುರುಬ ಜನಪದ,** ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ಬಿಜಾಪುರ, ೧೯೯೭.

೨೮. ಜಕಬಾಳ ಎಸ್.ಎಫ್., **ಕುರುಬರ ರಟ್ಟಮತ ಶಾಸ್ತ್ರ,** ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೨೯. ಜೈಕುಮಾರ್ ಎಂ., **ನಡೆ-ನುಡಿ,** ಶೃತಿ ಪ್ರಕಾಶನ, ಜೀವನ ಭೀಮಾನಗರ, ಬೆಂಗಳೂರು, ೧೯೮೦.

೩೦. ತಪಸ್ವೀಕುಮಾರ್ ನಂ., **ಸಂಸ್ಕೃತಿ ವಿಕಾಸ,** ಭಾರತೀ ಪ್ರಕಾಶನ, ಮೈಸೂರು, ೧೯೯೫.

೩೧. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಿ.ವಿ.ಕೆ. ಮೂರ್ತಿ, ಕೃಷ್ಣರಾಜಪುರಂ, ಮೈಸೂರು, ೧೯೯೨.

೩೨. ದೊಡ್ಡಣ್ಣ ಗದ್ದನಕೇರಿ, **ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು,** ಕಮಲ ಪ್ರಕಾಶನ, ಚಿತ್ತವಾಡಗಿ, ಹುನಗುಂದ, ಬಾಗಲಕೋಟೆ, ೨೦೦೩.

೩೩. ನಿಂಗಪ್ಪ ಮುದೇನೂರು, **ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು,** ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೩೪. ನಂದಿಮಠ ಎಸ್.ಸಿ., **ಕರ್ನಾಟಕ ಧರ್ಮಗಳು, ಭಾಗ ೧,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೭.

೩೫. ನರಸಿಂಹಾಚಾರ್ಯ ಎಲ್.(ಸಂ), **ರಾಘವಾಂಕ ವಿರಚಿತ ಸಿದ್ಧರಾಮ ಚಾರಿತ್ರೆ ಸಂಗ್ರಹ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩.

೩೬. ನಾಗರಾಜ್ ಡಿ. ಆರ್., **ಸಾಹಿತ್ಯ ಕಥನ(ವಿಮರ್ಶಾ ಲೇಖನಗಳ ಸಂಕಲನ),** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೬.

೩೭. ನಾಯಕ ಡಿ. ಬಿ., **ದೇಶಿ ಸಂಸ್ಕೃತಿ,** ಬಂಜಾರ ಪ್ರಕಾಶನ, ಗುಲಬರ್ಗಾ, ೨೦೦೨.

೩೮. ನಾಯ್ಕರ ಬ. ಪಿ., **ಹಾಲುಮತಸ್ಥರು**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩.

೩೯. ನಿಂಗಣ್ಣ ಸಣ್ಣಕ್ಕಿ, **ಕಾಯಕಯೋಗಿ(ದಿ. ಮೈಲಾರಪ್ಪ ಮ. ಮೇಣಸಗಿಯವರ ಸಂಸ್ಮರಣ ಗ್ರಂಥ) (ಪ್ರಸಂ)**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೨.

೪೦. ನೇಗಿನಹಾಳ ಎಂ. ಬಿ., **ಮೈಲಾರಲಿಂಗ–ಖಂಡೋಬಾ: ಒಂದು ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨.

೪೧. ಪಂಡಿತ ಶ್ರೀ ಚನ್ನಬಸವ ಕವಿ, **ಹಾಲುಮತದ ಪುರಾಣವು**, ದಾವಣಗೆರೆ ತಾಲ್ಲೂಕು ಚಿಕ್ಕಬೂದಿಹಾಳು ಗ್ರಾಮ ಶ್ರೀಮದಭಿನವ ರೇಣುಕ ಗುರು ಕುಲಶ್ರಮದ ಸದ್ಭಕ್ತರು, ೧೯೩೯.

೪೨. ಪಡಶೆಟ್ಟಿ, ಎಂ.ಎಂ.(ಸಂ), **ಹೇಳಕೆ ಮಾಡ್ಯಾರ ಒಡೆಯರು**, ನೆಲೆ ಪ್ರಕಾಶನ, ಸಿಂದಗಿ, ೧೯೯೩.

೪೩. ಪೂಜಾರ ವಿ. ಜಿ., **ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು**, ಪುಸ್ತಕ ಅಕಾಡೆಮಿ, ಕಲಬುರ್ಗಿ, ೧೯೯೧.

೪೪. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, **ಹಾಲುಮತದ ಪುರಾಣವು**, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯.

೪೫. ಭದ್ರಾಪುರ, ಎಸ್. ಎನ್., **ದೇವರ ಗುಡ್ಡ**, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫.

೪೬. ಬಿರಾದಾರ ಬಿ. ಜಿ., **ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ**(ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮.

೪೭. ಬೋನಾ ಬಸವರಾಜ, **ಹಾಲುಮತದ ಹುಟ್ಟು**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦.

೪೮. ಬೋರಲಿಂಗಯ್ಯ ಹಿ.ಚಿ., **ವಿಸ್ಮೃತಿ ಮತ್ತು ಸಂಸ್ಕೃತಿ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೪೯. ಮಲ್ಲೇಪುರಂ ಜಿ. ವೆಂಕಟೇಶ, **ಅರಿವಿನ ಕಥನ**, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೫೦. ಮಲ್ಲಾಪುರ ಬಿ. ವ್ಹಿ., **ಸುಧಾರ್ಣವ**, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ೧೯೯೮.

೫೧. ಮಾಡ್ರಾ ವಿಲ್ಯಂ, **ಜನಪದ ಭಾಷಾ ವಿಜ್ಞಾನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭.

೫೨. ಮಾಣಿಕ್ಯ ಶೆಟ್ರು ಟಿ.ಎ.(ಸಂ), **ರೇವಣ ಸಾಂಗತ್ಯ**, ಕರ್ನಾಟಕ ಬುಕ್ ಡಿಪೋ ಏಜೆಂಟ್, ಬಳ್ಳಾರಿ, ೧೯೧೦.

೫೩. ಮುತ್ತಯ್ಯ ಎಸ್. ಎಂ., **ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೦೮.

೫೪. ಮೈತ್ರಿ ಕೆ.ಎಂ., **ಬುಡಕಟ್ಟು ಕುಲಕಸುಬುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.

೫೫. ಯಳನಾಡು ಅಂಜಪ್ಪ, **ಧರ್ಮ ಮತ್ತು ಮುಕ್ತ ವಿಚಾರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮.

೫೬. ರವಿ ಬಿ.ಕೆ.(ಸಂ), **ಪಾವನ(ಸಂಸ್ಮರಣ ಸಂಚಿಕೆ)**, ಶ್ರೀ ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ, ೧೯೯೨.

೫೭. ರವಿ ಬಿ.ಕೆ.(ಸಂ), **ಭಾರತದ ಕುರುಬರು(ರಾಜಪರಂಪರೆಯ ಬುಡಕಟ್ಟು-ಸಮಾಜೋ ಸಾಂಸ್ಕೃತಿಕ ಅಧ್ಯಯನ)**, ಅಂಕಿತ ಪುಸ್ತಕ, ಬೆಂಗಳೂರು-೨೦೦೫.

೫೮. ರವೀಂದ್ರನಾಥ ಕೆ. **ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ**, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸಂಡೂರು, ೨೦೦೭.

೫೯. ರಹಮತ್ ತರೀಕೆರೆ, **ಕರ್ನಾಟಕದ ನಾಥ ಪಂಥ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೬.

೬೦. ರಹಮತ್ ತರಿಕೇರೆ, **ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

೬೧. ಲಕ್ಕಪ್ಪಗೌಡ ಎಚ್.ಜೆ., **ಜಾನಪದ ಕೈಪಿಡಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭.

೬೨. ಲಲಿತ ಎ. ಸಿ., **ಕಾಡುಕುರುಬರು ಮತ್ತು ಜೇನು ಕುರುಬರು**, ಸಂಸ್ಕೃತಿ ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೬೩. ವಾಯ್ ಕೆ. ಗುಂಡಕರ್ಜಗೆ(ಸಂ), **ಹಾಲುಮತದ ಚರಿತ್ರೆ** ವಿಜೇತ ಪ್ರಕಾಶನ, ಗದಗ, ೨೦೦೫.

೬೪. ವಿದ್ಯಾಶಂಕರ್ ಎಸ್., **ವೀರಶೈವ ಪುರಾಣಗಳು: ಒಂದು ಅಧ್ಯಯನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

೬೫. ವಿಠ್ಠಲರಾವ್ ಗಾಯಕ್ವಾಡ್(ಅನು), **ಮಲ್ಲಿಕಾರ್ಜುನ ಮತ್ತು ಮಹಾರಾಷ್ಟ್ರ** ಪ್ರಭುದೇವ ಜನಕಲ್ಯಾಣ ಸಂಸ್ಥೆ, ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸಂಡೂರು, ೨೦೦೬.

೬೬. ವೀರಣ್ಣ ದಂಡೆ(ಸಂ), **ಜನಪದ ಹಾಲುಮತ ಮಹಾಕಾವ್ಯ,** ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೦.

೬೭. ವೀರಣ್ಣ ದಂಡೆ, **ದೇಶಿ ಸಂಪುಟ-೧ ಮತ್ತು ೨,** ಭಾಗ್ಯಶ್ರೀ ಎಂಟರ್ ಪ್ರೈಸಸ್, ಬೆಂಗಳೂರು, ೨೦೦೩.

೬೮. ವೆಂಕಟಾಚಲಶಾಸ್ತ್ರಿ ಟಿ.ವಿ.(ಪ್ರ.ಸಂ), **ಮಧುರ ಸ್ಮೃತಿ, (ಪ್ರೊ. ಬಿ. ರಾಮಸ್ವಾಮಿ ಸಂಸ್ಮರಣಾ ಸಂಪುಟ),** ಬಿ.ಎಂ.ಶ್ರೀ. ಕಲಾಭವನ, ಬೆಂಗಳೂರು, ೨೦೦೩.

೬೯ ಶಂಕರ ಶಿವಲಿಂಗ ಕುಂಬಾರ(ಸಂ), **ಹಾಲುಮತ ಪುರಾಣಗಳ ಭಿನ್ನಾಭಿಪ್ರಾಯಗಳು,** ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೭.

೭೦. ಶಂಕರನಂದಪ್ಪ ಎನ್., **ಹಾಲುಮತ ಪುರಾಣ ಅಥವಾ ಮುದ್ದಲಿಂಗೇಶ್ವರ ಚರಿತ್ರೆ,** ವಿದ್ಯಾನಿಧಿ ಪ್ರಕಾಶನ, ಗದಗ.

೭೧. ಶಂಕರನಾರಾಯಣ ತೀ.ನಂ., **ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨.

೭೨. ಶಂಬಾ ಜೋಶಿ, **ಹಾಲುಮತ ದರ್ಶನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೧೯೯೯.

೭೩. ಶಕುಂತಲಾ ಗೋಪಶೆಟ್ಟಿ, **ರೇವಣಸಿದ್ಧರು: ಒಂದು ಅಧ್ಯಯನ,** ಅಪೂರ್ವ ಪ್ರಕಾಶನ, ರಾಯಚೂರು, ೨೦೦೬.

೭೪. ಶಿವಕುಮಾರ ಸ್ವಾಮಿ ಸಿ. ಎಸ್., **ಕರ್ನಾಟಕ ಜಾತ್ರೆಗಳು,** ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮.

೭೫. ಶಿವಾನಂದ ಗುಬ್ಬಣ್ಣನವರ, **ಕರ್ನಾಟಕದ ಕುರುಬರು**, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩.

೭೬. ಶ್ರೀನಿವಾಸ ರಿತ್ತಿ, **ಮೈಲಾರ ದೇವರು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.

೭೭. ಶ್ರೀ ಅಡಿವೆಪ್ಪ, ಮಾಳಪ್ಪ, ಸೋಮುತ್ತೆ(ಒಡೆಯರ), **ಶ್ರೀ ಸುಕ್ಷೇತ್ರ ಹುಲಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ**, ಪ್ರಕಾಶಕರು, ಶ್ರೀ. ಸದ್ಭಕ್ತ ಮಂಡಳಿ ಮತ್ತು ಶ್ರೀ ರಾಮ ಹಣಮಂತರಾವ ಶೆಂಡಗೆ (ಪಾಟೀಲ) ಸಾ। ಸೋಲಾಪುರ, ೧೯೯೨–೯೩.

೭೮. ಶ್ರೀರಾಮ ಇಟ್ಟಣ್ಣವರ(ಸಂ), **ಹಾಲಕೆನೆ**, ಶ್ರೀ ಕಾಳಿದಾಸ ಬೆಳ್ಳಿಹಬ್ಬ ಶಿಕ್ಷಣ ಸಂಸ್ಥೆ, ಬಿಜಾಪುರ, ೨೦೦೨.

೭೯. ಷಣ್ಮುಕ್ಕಯ್ಯ ಅಕ್ಕೊರಮಠ, **ಸೂಫಿ ಮತ್ತು ಶರಣರ ಅನುಭವ ಪಂಥ**, ಮೂರುಸಾವಿರ ಮಠ, ಹುಬ್ಬಳ್ಳಿ, ೧೯೮೨.

೮೦. ಸೂರ್ಯನಾಥ ಕಾಮತ್(ಸಂ), **ಇತಿಹಾಸ ದರ್ಶನ, ಸಂ.೫**, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೦.

೮೧. ಸೋಮಶೇಖರ ಇಮ್ರಾಪುರ(ಸಂ), **ಜಾನಪದ ಸಾಹಿತ್ಯ ದರ್ಶನ, ಭಾಗ ೧೮**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩.

೮೨. ಹನುಮಾಕ್ಷಿ ಗೋಗಿ, **ಕಲಬುರ್ಗಿ ಜಿಲ್ಲೆಯ ಶಾಸನಗಳು**, ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ, ೧೯೯೬.

೮೩. ಹನುಮಂತಯ್ಯ ವಿ. ಆರ್., ಕುರುಬರ ಚರಿತ್ರೆ, ಪ್ರತಿಭಾ ಎಚ್.ಐ.ಜಿ.ಪ್ರಕಾಶನ, ಮೈಸೂರು, ೧೯೯೬.

೮೪. ಹರಿಲಾಲ್ ಕೆ. ಪವಾರ್, **ಹೆಳವರ ಸಂಸ್ಕೃತಿ(ಉಪ ಸಂಸ್ಕೃತಿ ಅಧ್ಯಯನ ಮಾಲೆ)**, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩.

೮೫. ಹಳ್ಳಿಕೇರಿ ಎಫ್. ಟಿ.(ಸಂ), **ಕುರುಬರ ಗುರು ಒಡೆಯರು**, ವಿಕಾಸ ಪ್ರಕಾಶನ ಶೋಧನ, ಎಂ.ಪಿ.ಪ್ರಕಾಶನಗರ, ಹೊಸಪೇಟೆ, ೨೦೦೭.

೮೬. ಹಳ್ಳಿಕೇರಿ ಎಫ್.ಟಿ., **ಕೆರೆಯ ಪದ್ಮರಸ ಮತ್ತು ಆತನ ವಂಶಜರು: ಒಂದು ಅಧ್ಯಯನ**, ವಿಕಾಸ ಪ್ರಕಾಶನ ಕಮಲಾಪುರ, ಹೊಸಪೇಟೆ ತಾಲೂಕು, ೧೯೯೬.

೮೭. ಹಳ್ಳಿಕೇರಿ ಎಫ್.ಟಿ., **ಕಂಠಪುತ್ರ-೨**, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪.


೮೮. ಹಳ್ಳಿಕೇರಿ ಎಫ್. ಟಿ.(ಸಂ), **ಹಾಲುಮತೋತ್ತೇಜಕ ಪುರಾಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೮.

೮೯. ಹಿರೇಮಠ ಎಸ್.ಎಸ್., **ಜನಪದ ಸಮಾಜ ಸಂಸ್ಕೃತಿ**, ಸೂರ್ಯ ಪ್ರಕಾಶನ, ಮಲ್ಲಾಡಿ ಹಳ್ಳಿ, ಚಿತ್ರದುರ್ಗ, ೨೦೦೫.

೯೦. ಹಿರೇಮಠ ಆರ್.ಸಿ.(ಸಂ), **ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ**, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೪.

೯೧. ಹೀರೇಮಠ ಆರ್.ಸಿ., **ವೀರಶೈವಾಮೃತ ಪುರಾಣ, ಭಾಗ ೧-೨**, ಎನ್.ಎಸ್.ಎಸ್. ಕಲ್ಯಾಣ ಕೇಂದ್ರ, ಬೆಂಗಳೂರು, ೧೯೯೦.

೯೨. ಹಿರೇಮಠ ಎಸ್.ಎಸ್., **ಸಮಾಜ ಸಂಸ್ಕೃತಿ ಸಂಘರ್ಷ(ಸಂ-೧)**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ